

ಕುಲದೀಪ

ಚಿ.ವಿ.ಶ್ರೀನಾಥಶಾಸ್ತ್ರಿ ಹಾಗೂ ಡಾ। ಸಿ.ವಿ. ಗಿರಿಧರಶಾಸ್ತ್ರಿ

ಅಭಿನಂದನ ಗ್ರಂಥ



ಪ್ರಕಾಶಕರು

ಶ್ರೀಮತಿ ಮಹಾಲಕ್ಷ್ಮಿ,
ಸೋದರಿಯರು ಮತ್ತು ಮಕ್ಕಳು

ಸಂಪಾದಕರು

ವಿದ್ಯಾವಾರಿಧಿ ಡಾ. ವಾಗೀಶ್ವರೀ ಶಿವರಾಮ

ಕುಲದೀಪ

ಚಿ.ವಿ. ಶ್ರೀನಾಥಶಾಸ್ತ್ರೀ ಹಾಗೂ

ಡಾ| ಸಿ.ವಿ. ಗಿರಿಧರಶಾಸ್ತ್ರೀ ಅಭಿನಂದನ ಗ್ರಂಥ

ಸಂಪಾದಕರು

ವಿದ್ಯಾವಾರಿಧಿ ಡಾ. ವಾಗೀಶ್ವರೀ ಶಿವರಾಮ ಪಿ.ಎಚ್‌ಡಿ

ಅಧ್ಯಕ್ಷರು, ವಾಗೀಶ್ವರೀ ಪ್ರಕಾಶನ, ಮಂಗಳೂರು

ಪ್ರಕಾಶಕರು

ಶ್ರೀಮತಿ ಮಹಾಲಕ್ಷ್ಮಿ

ಸೋದರಿಯರು ಮತ್ತು ಮಕ್ಕಳು, ಬೆಂಗಳೂರು

ಕುಲದೀಪ : ಚಿ.ವಿ. ಶ್ರೀನಾಥಶಾಸ್ತ್ರೀ ಹಾಗೂ ಡಾ। ಸಿ.ವಿ. ಗಿರಿಧರಶಾಸ್ತ್ರೀ ಅಭಿನಂದನ ಗ್ರಂಥ (ಅಭಿನಂದಿತರನ್ನು ಕುರಿತ ಹಾಗೂ ಭಾಷೆ, ಸಂಸ್ಕೃತಿ, ಶಿಕ್ಷಣಗಳನ್ನು ಕುರಿತ ಮೌಲಿಕ ಲೇಖನಗಳ ಸಂಗ್ರಹ)

ಪ್ರಕಾಶಕರು : ಶ್ರೀಮತಿ ಮಹಾಲಕ್ಷ್ಮಿ, ಸೋದರಿಯರು ಮತ್ತು ಮಕ್ಕಳು, ಬೆಂಗಳೂರು. ೨೯೩, ೯ನೇ ಮುಖ್ಯರಸ್ತೆ, ಡಾ॥ ಜಿ.ಪಿ.ರಾಜರತ್ನಂ ರಸ್ತೆ, ಹನುಮಂತನಗರ, ಬೆಂಗಳೂರು – ೫೬೦೦೧೯ ದೂರವಾಣಿ: ೯೩೪೨೬೬೭೪೬೪.

ವಿ–ಅಂಚೆ: srimathishekhara@gmail.com, kshama.kan@gmail.com

ಸಂಪಾದಕರು : ವಿದ್ಯಾವಾರಿಧಿ ಡಾ। ವಾಗೀಶ್ವರೀ ಶಿವರಾಮ ಅಧ್ಯಕ್ಷರು, ವಾಗೀಶ್ವರೀ ಪ್ರಕಾಶನ, ಮಂಗಳೂರು.

Kuladeepa: Chi Vi Srinatha Sastry ad Dr| C.V. Giridhara Sastry feliciation volume. (Compodium of articles on the felicitated personalites and valuable thoughts on Language, culture and Education) Published by Smt Mahalakshmi, her sisters and children, Bengaluru. No 293, 9th Main Road, Dr. G.P. Rajaratnam Road, Hanumanthanagar, Bengaluru - 56019.
Pone: 9342667464, 9008866511

ಪ್ರಥಮ ಮುದ್ರಣ ಜುಲೈ ೨೦೧೪
೫೦೦ ಪ್ರತಿಗಳು
ಬೆಲೆ ರೂ ೧೫೦.
ಕಾಗದ ೭೫ ಜಿಎಸ್‌ಎಂ ಮ್ಯಾಪ್‌ಲಿಥೋ

ಮುಖಪುಟ ವಿನ್ಯಾಸ : **ರಘುಪತಿ ಶೃಂಗೇರಿ**
ಪುಟಗಳು : XVIII + ೩೫೦

First Published July 2014
Copies : 500

Price: Rs 150/-
Paper: 75 GSM Maplitho
Pages : XVIII + 350
Requested citation: Kuladeepa: Chi Vi Srinatha Sastry ad Dr| C.V. Giridhara Sastry feliciation volume, 2014.

ಮುದ್ರಣ:
ಕರ್ನಾಟಕ ಆಫ್‌ಸೆಟ್ ಪ್ರಿಂಟರ್ಸ್
ನಂ. ೩೦/೨, ೪ನೇ ಮುಖ್ಯರಸ್ತೆ, ೩ನೇ ಅಡ್ಡರಸ್ತೆ,
ಚಾಮರಾಜಪೇಟೆ, ಬೆಂಗಳೂರು

ವಿಷಯಾನುಕ್ರಮ

श्रीश्री जगद्गुरु शङ्कराचार्य महासंस्थानम् दक्षिणाम्नाय श्रीशारदापीठम् शृङ्गेरी

Sri Sri Jagadguru Shankaracharya Mahasamsthanam

Dakshinamnaya Sri Sharada Peetham, Sringeri - 577 139, Karantaka. INDIA.



V.R. Gowri Shankar BE, DIISc, MIMA.,
CEO & Administrator
Sri Sringeri Math and its Properties

Phone Off : 08265 - 250123 Resi : 08265 - 250192 Fax : 08265 - 250792
Website : www.sringerisharadapeetham.org (or) www.sringeri.net
E.mail : info@sringerisharadapeetham.org

Ref S-18/ Camp : ಶೃಂಗೇರಿ Date : 27-1-2014

ಗೆ,

ಶ್ರೀಮತಿ ಸಿ. ವಿ. ಶ್ರೀಮತಿ
ಶ್ರೀವಾಗ್ದೇವಿ ಗಮಕಕಲಾ ಪ್ರತಿಷ್ಠಾನ
16/2, ಅದಮ್ಯ, ಪಶ್ಚಿಮ ಆಂಜನೇಯಸ್ವಾಮಿ ಗುಡಿ ರಸ್ತೆ
ಬಸವನಗುಡಿ, ಬೆಂಗಳೂರು – 560 004
ದೂರವಾಣಿ: 26609429 / 9342667464

ಶ್ರೀಮತಿ ಸಿ. ವಿ. ಶ್ರೀಮತಿಯವರಿಗೆ,

ನೀವು ದಿನಾಂಕ 3-1-2014ರಂದು ಬರೆದ ಪತ್ರ ಆಡಕದೊಂದಿಗೆ ತಲುಪಿದೆ. ಶ್ರೀ ಶ್ರೀ ಜಗದ್ಗುರು ಮಹಾಸ್ವಾಮಿಗಳವರ ಪಾದಕಮಲಗಳಲ್ಲಿ ಸಾಷ್ಟಾಂಗ ಪ್ರಣಾಮ ಪೂರ್ವಕ ಸಮರ್ಪಿಸಲಾಯಿತು.

ಶ್ರೀ ಬಿ. ವಿ. ಶ್ರೀನಾಥ ಶಾಸ್ತ್ರೀ ಮತ್ತು ಶ್ರೀ ಸಿ. ವಿ. ಗಿರಿಧರ ಶಾಸ್ತ್ರೀಗಳವರು ಶ್ರೀ ಶಾರದಾ ಪೀಠದ 35ನೇ ಯತಿ ಶ್ರೇಷ್ಠರಾದ ಶ್ರೀ ಜಗದ್ಗುರು ಅಭಿನವ ವಿದ್ಯಾತೀರ್ಥ ಮಹಾಸ್ವಾಮಿಗಳವರ ಅಪ್ಪಣೆಯಂತೆ ಶ್ರೀಮಠದಲ್ಲಿ ನಿಸ್ವಾರ್ಥವಾಗಿ ಸೇವೆ ಸಲ್ಲಿಸಿ, ಅವರ ಸಂಪೂರ್ಣ ಆಶೀರ್ವಾದಕ್ಕೆ ಪಾತ್ರರಾಗಿದ್ದವರು ಹಾಗೂ ಜಗದ್ಗುರು ಶ್ರೀ ಶ್ರೀ ಭಾರತೀತೀರ್ಥ ಮಹಾಸ್ವಾಮಿಗಳವರ ವಿಶೇಷ ಕೃಪೆಗೂ ಪಾತ್ರರಾಗಿದ್ದವರು. ಶ್ರೀ ಶ್ರೀನಾಥ ಶಾಸ್ತ್ರೀಗಳವರು ಬೆಂಗಳೂರಿನ ಎನ್.ಎ.ಎಲ್. ನಲ್ಲಿ 30 ವರ್ಷಗಳ ಕಾಲ ವೃತ್ತಿಜೀವನ ನಡೆಸಿದ್ದು, ಅದರೊಂದಿಗೆ ಬೆಂಗಳೂರು ಶ್ರೀ ಶೃಂಗೇರಿ ಶಂಕರಮಠದಲ್ಲಿ 6 ವರ್ಷಗಳ ಕಾಲ ವ್ಯವಸ್ಥಾಪಕರಾಗಿಯೂ ಸೇವೆ ಸಲ್ಲಿಸಿರುವುದು ಹಾಗೂ ಇನ್ನಿತರ ಹಲವಾರು ಸಮಾಜಮುಖೀ ಕಾರ್ಯಗಳಲ್ಲಿ ತಮ್ಮನ್ನು ತೊಡಗಿಸಿಕೊಂಡಿದ್ದು ಹೆಮ್ಮೆಯ ವಿಷಯವಾಗಿದೆ.

ಶ್ರೀ ಸಿ. ವಿ. ಗಿರಿಧರ ಶಾಸ್ತ್ರೀಗಳವರು ಸುಮಾರು 16 ವರ್ಷಗಳ ಕಾಲ ಶೃಂಗೇರಿಯಲ್ಲಿ ಶ್ರೀಮಠದಲ್ಲಿ ಸೇವೆ ಸಲ್ಲಿಸಿದ್ದು, ಪ್ರಸ್ತುತ ಶೃಂಗೇರಿಯ ಶ್ರೀ ಜಗದ್ಗುರು ಚಂದ್ರಶೇಖರ ಭಾರತೀ ಪದವಿಪೂರ್ವ ಕಾಲೇಜಿನಲ್ಲಿ ಪ್ರಾಂಶುಪಾಲರಾಗಿ ಕರ್ತವ್ಯ ನಿರ್ವಹಿಸುತ್ತಿದ್ದಾರೆ. ಇವರೀರ್ವರೂ ಅಪರೂಪದಲ್ಲಿ ಅಪರೂಪದ ಸಹೋದರರೆಂದರೆ ಅತಿಶಯೋಕ್ತಿಯ ಮಾತು ಎಂದು ಎಣಿಸದು. ಪ್ರಸ್ತುತ ಇವರಿಗೆ ಕ್ರಮವಾಗಿ 70ನೇ ಮತ್ತು 60ನೇ ವರ್ಷಗಳ ಹುಟ್ಟುಹಬ್ಬದ ಸಂಭ್ರಮ.

ಶ್ರೀ ಶಾರದಾ ಚಂದ್ರಮೌಳೀಶ್ವರರ ಕೃಪೆಯಿಂದ ಇವರೀರ್ವರ 70ನೇ ಮತ್ತು 60ನೇ ಹುಟ್ಟುಹಬ್ಬ ಕಾರ್ಯಕ್ರಮಗಳು ವಿವಿಧ ಧಾರ್ಮಿಕ, ಸಾಂಸ್ಕೃತಿಕ, ಸಾಮಾಜಿಕ ಕಾರ್ಯಕ್ರಮಗಳೊಂದಿಗೆ ಯಶಸ್ವಿಯಾಗಿ ಪೂರ್ತಿಗೊಳ್ಳಲಿ, ಇದೇ ಸಂದರ್ಭದಲ್ಲಿ ನೀವು ಹೊರತರಬೇಕೆಂದಿರುವ "ಅಭಿನಂದನಾ ಗ್ರಂಥ"ವು ವಿದ್ವನ್ಮಣಿಗಳ ವಿದ್ವತ್ಪೂರ್ಣ ಲೇಖನಗಳಿಂದೊಡಗೂಡಿ ಸಂಗ್ರಹ ಯೋಗ್ಯ ಗ್ರಂಥವಾಗಿ ಮೂಡಿಬರಲಿ ಎಂದು ಶ್ರೀ ಶ್ರೀಗಳವರು ಆಶೀರ್ವದಿಸಿ ಅನುಗ್ರಹಿಸಿರುವ ಆಶೀರ್ಮಂತ್ರಾಕ್ಷತೆ ಮತ್ತು ಶ್ರೀ ಶಾರದಾ ಅರ್ಚನಾ ಪ್ರಸಾದವನ್ನು ಇದರೊಂದಿಗೆ ಕಳುಹಿಸಿರುತ್ತೇನೆ.

ವಂದನೆಗಳೊಂದಿಗೆ,
(ವಿ.ಆರ್.ಗೌರೀಶಂಕರ್).

ಆಡಕ: ಅರ್ಚನಾ ಪ್ರಸಾದ – ಆಶೀರ್ಮಂತ್ರಾಕ್ಷತೆ.



। ಶ್ರೀ ಚತುರ್ಭುಜ ಲಕ್ಷ್ಮೀನಾರಾಯಣೋ ವಿಜಯತೇ ।

ಯಡತೊರೆ ಶ್ರೀ ಯೋಗಾನಂದೇಶ್ವರ ಸರಸ್ವತೀ ಮಠ

ಚಂದ್ರಮೌಳಿ ರಸ್ತೆ, ಕೃಷ್ಣರಾಜನಗರ - 571 602 ಮೈಸೂರು ಜಿಲ್ಲೆ.
☎ : 08223-262471, 264371. ಇಮೇಲ್ : ysysmath@yahoo.com
ಶಾಖಾಮಠ : ಕೋಟೆ, ಹೊಳೆನರಸೀಪುರ-573 211, ಹಾಸನ ಜಿಲ್ಲೆ, ☎ : 08175-273464



ಯ.ಶ್ರೀ.ಯೋ.ಸ.ಮ/ಕೃ.ರಾ.ನ/14-(5)

ಕೃಷ್ಣರಾಜನಗರ
23-5-2014

ಶ್ರೀವಾಗ್ದೇವಿ ಗಮಕಕಲಾ ಪ್ರತಿಷ್ಠಾನ
ಬಸವನಗುಡಿ,
ಬೆಂಗಳೂರು - 560004

ಮಾನ್ಯರೇ,

ತಾವು ಕಳುಹಿಸಿದ, ಶ್ರೀ ಟಿ.ವಿ.ಶ್ರೀನಾಥಶಾಸ್ತ್ರಿಗಳ ಮತ್ತು ಶ್ರೀ ಸಿ.ವಿ.ಗಿರಿಧರಶಾಸ್ತ್ರಿಗಳ ಬಗ್ಗೆ ಅಭಿನಂದನಾ ಗ್ರಂಥದ ಪತ್ರವನ್ನು ಪರಮ ಪೂಜ್ಯ ಶ್ರೀ ಶ್ರೀ ಶಂಕರಭಾರತೀ ಸ್ವಾಮಿಗಳವರ ಸನ್ನಿಧಾನಕ್ಕೆ ತಮ್ಮ ಪರವಾಗಿ ಭಕ್ತಿಪೂರ್ವಕ ಸಾಷ್ಟಾಂಗ ಪ್ರಣಾಮಗಳೊಂದಿಗೆ ಸಮರ್ಪಿಸಿದೆ.

ತಾವು ಕಳುಹಿಸಿದ ಪತ್ರವನ್ನು ಪರಮ ಪೂಜ್ಯ ಶ್ರೀಶ್ರೀಗಳವರು ಅವಲೋಕಿಸಿ ಶ್ರೀ ಟಿ. ವಿ. ಶ್ರೀನಾಥಶಾಸ್ತ್ರಿಗಳ ಮತ್ತು ಶ್ರೀ ಸಿ.ವಿ.ಗಿರಿಧರಶಾಸ್ತ್ರಿ70 ಮತ್ತು 60 ರ ಹುಟ್ಟುಹಬ್ಬದ ನಿಮಿತ್ತ ಒಂದು ಅಭಿನಂದನಾ ಗ್ರಂಥ ಪ್ರಕಾಶನ ಹಾಗೂ ತತ್ಸಂಬಂಧಿ ಸಮಾರಂಭವನ್ನು ಹಮ್ಮಿಕೊಂಡಿರುವುದನ್ನು ತಿಳಿದು ಅತೀವ ಸಂತೋಷವಾಯಿತು. ಶ್ರೀಯುತ ಶ್ರೀನಾಥಶಾಸ್ತ್ರೀಗಳು ವೃತ್ತಿ ಜೀವನದೊಂದಿಗೆ ಗುರುಸೇವೆ ಹಾಗೂ ಹತ್ತು ಹಲವು ಸಾಮಾಜಿಕ ಕಾರ್ಯಗಳನ್ನು ಮಾಡಿಕೊಂಡು ಬಂದವರು. ಶ್ರೀಮಾನ್ ಗಿರಿಧರ 'ಶಾಸ್ತ್ರೀಗಳು 16 ವರ್ಷಗಳ ಕಾಲ ಜಗದ್ಗುರುಗಳ ಪದತಲದಲ್ಲಿ ಸೇವೆಯನ್ನು ಮಾಡಿ ಈಗ ವೃತ್ತಿ ಜೀವನ ವನ್ನು ನಡೆಸುತ್ತಿದ್ದರೂ ಹಲವಾರು ಸಾಮಾಜಿಕ ಕಾರ್ಯಗಳನ್ನು ಮಾಡುತ್ತಲೇ ಉತ್ತಮ ವಿದ್ಯಾರ್ಥಿಗಳನ್ನು ತಯಾರುಮಾಡುತ್ತಿರುವವರು. ಮಾತ್ರವಲ್ಲ ಸಮಾಜದಲ್ಲಿ ತನ್ನದೇ ಆದ ಛಾಪನ್ನು ಮೂಡಿಸಿದ್ದಾರೆ.

ಇಂತಹ ಸಹೋದರರಿಬ್ಬರ ಕುರಿತಾದ ಅಭಿನಂದನಾ ಗ್ರಂಥವು ಮುಂದಿನ ಪೀಳಿಗೆಗೆ ಸ್ಫೂರ್ತಿಯನ್ನು ನೀಡಲಿ ಮತ್ತು ನೀವು ಹಮ್ಮಿಕೊಂಡ ಎಲ್ಲಾ ಕಾರ್ಯಗಳೂ ನಿರ್ವಿಘ್ನವಾಗಿ ನೆರವೇರಲಿ ಎಂಬುದಾಗಿ ಹಾರೈಸುತ್ತೇವೆ. ಈ ಇಬ್ಬರು ಸಹೋದರರಿಗೂ ನಮ್ಮ ಆರಾಧ್ಯಮೂರ್ತಿ ಪರಿಪೂರ್ಣವಾದ ಶ್ರೇಯಸ್ಸನ್ನು ಕರುಣಿಸಲಿ ಎಂಬುದಾಗಿ ಪ್ರಾರ್ಥಿಸುತ್ತೇವೆ. ಔಚಿತ್ಯಪೂರ್ಣವಾದ ಈ ಕಾರ್ಯಕ್ರಮವನ್ನು ಹಮ್ಮಿಕೊಂಡ ಎಲ್ಲರಿಗೂ ಒಳ್ಳೆಯದಾಗಲಿ ಎಂಬುದಾಗಿ ಆಶೀರ್ವದಿಸಿರುತ್ತಾರೆ.

ಇತಿ ವಂದನೆಗಳೊಂದಿಗೆ,

ತಮ್ಮ ವಿಶ್ವಾಸಿ

(ಜಿ. ಅನಂತಪದ್ಮನಾಭ)
ಮುಖ್ಯ ಆಡಳಿತಾಧಿಕಾರಿ

ಆಶೀರ್ವಚನ

ತಂದೆ ತಾಯಿ ಮಕ್ಕಳು ಮೊಮ್ಮಕ್ಕಳು – ಹೀಗೆ ಮೂರು ಪೀಳಿಗೆಗಳು ಒಂದೇ ಸೂರಿನಲ್ಲಿ ಬಾಳಿ ಬೆಳೆಯುವುದು ಆತ್ಮೋನ್ನತಿಗೂ – ಅಷ್ಟೇ ಏಕೆ? ಪ್ರಾಪಂಚಿಕ ಪ್ರಗತಿಗೂ ಬಹಳ ಅಗತ್ಯ. ಇಂತಹ ಬಾಳು, ಜೀವನದಲ್ಲಿ ಸಮತೋಲನವನ್ನು ಕಾಪಾಡುತ್ತದೆ. ಒಬ್ಬರ ಏಳ್ಗೆಯಿಂದ ಇತರರಿಗೆ ಸಂತೋಷವಾಗಬೇಕು; ಒಬ್ಬರ ತೃಪ್ತಿಯಿಂದ ಇತರರಲ್ಲಿ ಅನುಕಂಪವುಂಟಾಗಿ ಅವರನ್ನು ಮೇಲೆತ್ತುವ ಪ್ರಯತ್ನ ನಡೆಯಬೇಕು. ಒಂದು ಮನೆ ಇತರರಿಗೆ ಆದರ್ಶವಾಗುವುದು ಈ ಲಕ್ಷಣದಿಂದಲೇ. ರಾಮಾಯಣ, ಮಹಾಭಾರತಗಳು ತೋರಿಸಿಕೊಟ್ಟಿರುವ ಈ ಮೇಲ್ಪಂಕ್ತಿಯಲ್ಲಿ ಜೀವನವನ್ನು ನಡೆಸುತ್ತಿರುವ ಎಷ್ಟೋ ಮನೆಗಳು ನಮ್ಮ ಭಾರತದಲ್ಲಿ ಇಂದೂ ಇವೆ.

ಅಂಥದ್ದೊಂದು ಮನೆ ನಮ್ಮ ಶ್ರೀ ಶ್ರೀನಾಥಶಾಸ್ತ್ರಿ ಮತ್ತು ಶ್ರೀ ಗಿರಿಧರಶಾಸ್ತ್ರಿಗಳದು. ಇವರು ಅಣ್ಣತಮ್ಮಂದಿರು; ಇವರಿಗೆ ನಾಲ್ಕು ಜನ ಅಕ್ಕ-ತಂಗಿಯರು, ಎಲ್ಲರೂ ಮೇಧಾವಿಗಳು-ಸಹೃದಯರು. ಅಣ್ಣತಮ್ಮಂದಿರು ಯೌವನಸ್ಥರಾಗುತ್ತಿದ್ದಂತೆಯೇ ತಂದೆಯನ್ನು ಕಳೆದುಕೊಂಡರು. ತಂಗಿಯರ ಸಂಪೂರ್ಣ ಜವಾಬ್ದಾರಿ ಇವರ ಹೆಗಲ ಮೇಲೆ ಬಿತ್ತು. ಈಗ ಎಲ್ಲರೂ ಏಳ್ಗೆಯಲ್ಲಿರುವುದೇ ಶಾಸ್ತ್ರಿಗಳಿಬ್ಬರೂ ತಮ್ಮ ಜವಾಬ್ದಾರಿಯನ್ನು ಯೋಗ್ಯವಾಗಿ ನಿರ್ವಹಿಸಿರುವುದಕ್ಕೆ ಪ್ರಮಾಣ.

ಇವರದು ಅಪ್ಪಟ ಕನ್ನಡ ಕುಟುಂಬ. ಇವರ ಪೂರ್ವಜರ ಕನ್ನಡ ಸಾಹಿತ್ಯ ಪ್ರೇಮ ಇವರೆಲ್ಲರಲ್ಲೂ ಹರಿದು ಬಂದಿದೆ. ಶ್ರೀನಾಥಶಾಸ್ತ್ರಿಗಳು ಗಣಿತಶಾಸ್ತ್ರಜ್ಞರು, ಕಂಪ್ಯೂಟರ್ ತಜ್ಞರು. ಎರಡು ಜ್ಞಾನಗಳನ್ನೂ ಸೇರಿಸಿಕೊಂಡು ಕನ್ನಡ ಸಾಹಿತ್ಯಕ್ಕೆ ಅಮೋಘ ಸೇವೆಯನ್ನು ಮಾಡಿದ್ದಾರೆ. ಇನ್ನು ಗಿರಿಧರಶಾಸ್ತ್ರಿಗಳು ಸಂಸ್ಕೃತವನ್ನು ಬಲ್ಲರು, ವೇದಾಂತದಲ್ಲೂ ಪರಿಶ್ರಮವಿದೆ. ಸಂಸ್ಕೃತದಲ್ಲೇ ಪಾಠಪ್ರವಚನಗಳನ್ನು ಮಾಡುತ್ತಿರುವ ಇವರು ಶೃಂಗೇರಿಯ ಶ್ರೀ ಜೆ.ಸಿ.ಬಿ.ಎಂ ಪದವಿಪೂರ್ವ ಕಾಲೇಜಿನ ಪ್ರಾಚಾರ್ಯರು.

ಇವರಿಬ್ಬರಿಗೂ, ಇವರ ಸಹೋದರಿಯರಿಗೂ, ಇವರ ಪರಿವಾರಗಳಿಗೂ ಭಗವಂತನು ಎಲ್ಲಾ ರೀತಿಯಲ್ಲೂ ಸರ್ವಪ್ರಕಾರಗಳಲ್ಲೂ ಶ್ರೇಯಸ್ಸನ್ನು ಉಂಟುಮಾಡಲೆಂದು ಭಗವಂತನಲ್ಲಿ ಪ್ರಾರ್ಥಿಸುತ್ತೇನೆ.

– **ಸ್ವಾಮಿ ಶ್ರೀ ಶ್ರೀ ಪರಮಾನಂದ ಭಾರತೀ**

ಶುಭಹಾರೈಕೆ

ಮಾನ್ಯರಾದ ಶ್ರೀನಾಥಶಾಸ್ತ್ರಿಗಳನ್ನು ನಾನು ಬಹುಕಾಲದಿಂದ ಬಲ್ಲೆ. ಇವರ ತಂದೆಯವರಾದ ದಿ.ವಿಶ್ವನಾಥಶಾಸ್ತ್ರಿಗಳು ನನ್ನ ಸ್ನೇಹಿತರು. ನಾನು ಶೃಂಗೇರಿಗೆ ಹೋದಾಗ ಪೂಜ್ಯ ವಿಶ್ವನಾಥ ಶಾಸ್ತ್ರಿಗಳವರ ಮನೆಯಲ್ಲಿ ಇಳಿದುಕೊಳ್ಳುತ್ತಿದ್ದೆ. ಗಿರಿಧರಶಾಸ್ತ್ರಿಗಳು ಪರಮಪೂಜ್ಯ ಜಗದ್ಗುರುಗಳ ಅನುಗ್ರಹಕ್ಕೆ ಪಾತ್ರರಾದವರು. ಅಲ್ಲಿಯೇ ನನಗೆ ಶ್ರೀಯುತ ಶ್ರೀನಾಥ ಶಾಸ್ತ್ರಿಗಳ ಪರಿಚಯವಾಯಿತು. ಇವರು ಉತ್ತಮ ವಿದ್ಯಾವಂತರು, ಸದ್ಗುಣಶೀಲರೂ ಆಗಿ, ಬಹುಜನರ ಪ್ರೀತಿ ಗೌರವಗಳಿಗೆ ಚಿಕ್ಕ ವಯಸ್ಸಿನಲ್ಲೇ ಪಾತ್ರರಾಗಿದ್ದವರು. ಇವರ ವಿದ್ಯೆ, ಶುದ್ಧವಾದ ಆಚಾರ ಸಂಪತ್ತು, ಪರೋಪಕಾರ ಬುದ್ಧಿ, ಇವು ಒಬ್ಬ ವ್ಯಕ್ತಿಯಲ್ಲಿ ದುರ್ಲಭವಾದ ಗುಣಸಂಪತ್ತುಗಳು. ಈ ಗುಣಸಂಪತ್ತುಗಳನ್ನು ಪಡೆದ ಮಾನ್ಯ ಶ್ರೀನಾಥಶಾಸ್ತ್ರಿಗಳವರು ಸಮಾಜದಲ್ಲಿ ದುರ್ಲಭವೇ ಸರಿ. ಇವರಿಗೆ ಈಗ ೭೦ ವರ್ಷಗಳಾಗುತ್ತಿವೆ ಎಂಬುದನ್ನು ಕೇಳಿ ನನಗೆ ಅಚ್ಚರಿಯಾಯಿತು. ಏಕೆಂದರೆ, ಶ್ರೀನಾಥ ಶಾಸ್ತ್ರಿಗಳವರ ಕ್ರಿಯಾಶೀಲತೆ, ಉತ್ಸಾಹ, ಇತ್ಯಾದಿ ಶ್ರೇಷ್ಠ ಗುಣಗಳು ಈ ವಯಸ್ಸಿನಲ್ಲಿಯೂ ಒಂದೇ ರೀತಿ ಈಗಲೂ ಬೆಳೆಯುತ್ತಿವೆ. ಈ ಪುಣ್ಯಾತ್ಮರನ್ನು ಕುರಿತಾದ ಅಭಿನಂದನ ಗ್ರಂಥವನ್ನು ಪ್ರಕಟಿಸಲು ಉತ್ಸಾಹದಿಂದ ತೊಡಗಿಕೊಂಡಿರುವುದು ಪ್ರಶಂಸನೀಯವಾದ ಪ್ರಯತ್ನ. ಎಲ್ಲರ ಮೆಚ್ಚುಗೆಯ ಸಂಕೇತವಾಗಿ ಹೊರತರುತ್ತಿರುವ ಅಭಿನಂದನ ಗ್ರಂಥ ನಿಜವಾಗಿಯೂ ಒಂದು ಉತ್ತಮವಾದ ಕಾಣಿಕೆ. ಇಂತಹ ಕಾಣಿಕೆಗೆ ಪಾತ್ರರಾದ ಮಾನ್ಯ ಶ್ರೀನಾಥ ಶಾಸ್ತ್ರಿಗಳು ತಮ್ಮ ವಯಸ್ಸಿನ ಶತಮಾನೋತ್ಸವದ ಕಾಣಿಕೆಯನ್ನೂ ಪಡೆಯುವಂತಾಗಲಿ ಎಂದು ಆಶಿಸುತ್ತೇನೆ. ಇವರುಗಳಿಗೆ ಅರ್ಪಿಸಿದ ಈ ಗ್ರಂಥವನ್ನು ಸ್ವಾಗತಿಸುತ್ತಲೇ, "ಶುಭಂ ಭೂಯಾತ್" ಎಂದು ಹರಸುತ್ತೇನೆ.

– ಮಹಾಮಹೋಪಾಧ್ಯಾಯ ದಿ.ಡಾ॥ ಎನ್.ರಂಗನಾಥಶರ್ಮಾ,

ಬೆಂಗಳೂರು

ಟಿ.ವಿ.ಶ್ರೀನಾಥಶಾಸ್ತ್ರೀ ಅವರಿಗೆ ಶುಭಹಾರೈಕೆ

ನಾನು ಅತ್ಯಂತ ಪ್ರೀತಿಯಿಂದ ನೆನೆಯುವ ಒಂದು ಜೀವ. ಅವರ ಹತ್ತಿರದ ಒಡನಾಟ ನನಗೆ ಸಿಕ್ಕಿದ್ದು. ನಾನು ಕನ್ನಡ ಅಭಿವೃದ್ಧಿ ಪ್ರಾಧಿಕಾರಕ್ಕೆ ಅಧ್ಯಕ್ಷನಾಗಿ ರಾಜಧಾನಿ ಬೆಂಗಳೂರಿಗೆ ಬಂದ ಮೇಲೆ ೧೯೯೬-೯೯ ರ ಆ ಅವಧಿ, ಕನ್ನಡಕ್ಕಾಗಿ ನಾನು ಗೋಕಾಕ ಚಳುವಳಿ ಕಾಲದಿಂದಲೂ ಕಟ್ಟಿಕೊಂಡು ಬಂದಿದ್ದ ಅನೇಕ ಕನಸುಗಳ, ಯೋಜನೆಗಳ ಅನುಷ್ಠಾನಕ್ಕಾಗಿ ಸಿಕ್ಕ ಅವಕಾಶವಾಗಿತ್ತು. ಆಧುನಿಕ ತಂತ್ರಜ್ಞಾನಕ್ಕೆ ನಮ್ಮ ನುಡಿಯನ್ನು ಅಳವಡಿಸಿಕೊಳ್ಳುವುದೂ ಕನ್ನಡದ ಕಾಯಕವೇ. ಈ ನಿಟ್ಟಿನಲ್ಲಿ ಆಗಲೇ ಸಾಕಷ್ಟು ಕೆಲಸ ಮಾಡುತ್ತಿದ್ದವರು ಕನ್ನಡ ಗಣಕ ಪರಿಷತ್ತಿನ ಶ್ರೀನಾಥಶಾಸ್ತ್ರೀ ಮತ್ತು ಅವರ ಬಳಗ. ಎನ್.ಎ.ಎಲ್‌ದಲ್ಲಿ ಅವರು ಮುನ್ನಡೆಸಿಕೊಂಡು ಬಂದ **'ಕಣಾದ'** ವಿಜ್ಞಾನ ಪತ್ರಿಕೆ ಅವರ ಕಾಯಕನಿಷ್ಠೆಗೆ ಸಾಕ್ಷಿ. ಅಭಿವೃದ್ಧಿ ಪ್ರಾಧಿಕಾರದ ಶಿಕ್ಷಣ ಸಮಿತಿಯ ಸದಸ್ಯರಾಗಿ, ಕಂಪ್ಯೂಟರಿನಲ್ಲಿ ಕನ್ನಡ ಬಳಕೆಗಾಗಿ ಪ್ರಾಧಿಕಾರ ಹಮ್ಮಿಕೊಂಡ ಯೋಜನೆಗಳ ಅನುಷ್ಠಾನದಲ್ಲಿ ಅವರಿತ್ತ ಸಹಕಾರ ನಾನು ಮರೆಯಲಾರೆ. ಕನ್ನಡ ಗಣಕ ಪರಿಷತ್ತು ಸಹಯೋಗದಲ್ಲಿ ಕನ್ನಡ ಅಭಿವೃದ್ಧಿ ಪ್ರಾಧಿಕಾರದ ವತಿಯಿಂದ "ಪ್ರಥಮ ಕನ್ನಡ ಗಣಕ ಸಮ್ಮೇಳನ" ಹಮ್ಮಿಕೊಳ್ಳುವ ಸದವಕಾಶವೂ ನನಗೆ ಒದಗಿತ್ತು. ಯಲಚೇನಹಳ್ಳಿಯ ಜ್ಯೋತಿ ಲೇಔಟಿನಲ್ಲಿ ಅವರ ಮನೆ, ನನ್ನ ಮನೆಯೂ ಮಗ್ಗುಲಿಗೇ ಇದ್ದಿತು. 'ಪಕ್ಕದ ಮನೆ'ಯವರಾಗಿ ಶಾಸ್ತ್ರಿಗಳೊಂದಿಗೆ ನಂಟು ಇನ್ನೂ ಗಟ್ಟಿಯಾಯಿತು. ಎಪ್ಪತ್ತರ ಗಡಿಯಲ್ಲಿರುವ ಈ ಆತ್ಮೀಯ ಗೆಳೆಯರಿಗೆ ನನ್ನ ಹಾರ್ದಿಕ ಶುಭಾಶಯಗಳು.

– ಪ್ರೊ. ಚಂದ್ರಶೇಖರ ಪಾಟೀಲ

ಬೆಂಗಳೂರು

ವಂಶವೃಕ್ಷ

ಲಲಿತಮ್ಮ ಚಿ.ನಾ ವಿಶ್ವನಾಥಶಾಸ್ತ್ರೀ

ಸಿ.ವಿ.ಮಹಾಲಕ್ಷ್ಮೀ | ಚಿ.ವಿ.ಶ್ರೀನಾಥಶಾಸ್ತ್ರೀ | ಸಿ.ವಿ.ಉಷಾದೇವಿ | ಸಿ.ವಿ. ಗಿರಿಧರಶಾಸ್ತ್ರಿ | ಸಿ.ವಿ.ಶ್ರೀಮತಿ | ಸಿ.ವಿ.ರಮಾ

೧. ಮಹಾಲಕ್ಷ್ಮೀ – ವಿ॥ ಮು.ನಾ ಲಕ್ಷ್ಮೀನರಸಿಂಹಭಟ್ಟ

- ಎಂ.ಎಲ್.ಪಂಕಜಾ, ಪತಿ ಡಾ. ಪದ್ಮನಾಭನ್ → ಪ್ರಶಾಂತ್-ಸಂಗೀತ, ವೈಷ್ಣವಿ
- ಎಂ.ಎಲ್.ಮಾಲತಿ, ಪತಿ ಲಕ್ಷ್ಮೀನರಸಿಂಹಮೂರ್ತಿ → ಶೃತಿ-ನರಸಿಂಹಮೂರ್ತಿ-ಅಭಿಜ್ಞಾ, ಶ್ರೇಯಸ್-ಸ್ವಾತಿ
- ಎಂ.ಎಲ್.ಸುಶೀಲಾ, ಪತಿ ಪರಮೇಶ್ ಅವಧಾನಿ → ಸುಭಾಷಿಣಿ
- ಎಂ.ಎಲ್.ಹರಿನಾರಾಯಣ, ಪತ್ನಿ ವೀಣಾ

೨. ಚಿ.ವಿ.ಶ್ರೀನಾಥಶಾಸ್ತ್ರಿ – ವಿ.ಸರಸ್ವತೀ

- ಎಸ್.ಕ್ಷಮಾ – ದತ್ತಾತ್ರಿ → ಸಂವೇದ್ಯಾ
- ಎಸ್.ವಿಶ್ವನಾಥಶಾಸ್ತ್ರಿ-ವಿದ್ಯಾ

೩. ಸಿ.ವಿ. ಉಷಾ – ಎಂ.ಆರ್. ಶ್ರೀನಿವಾಸಮೂರ್ತಿ

- ಎಸ್.ಚಂದ್ರಶೇಖರಮೂರ್ತಿ – ಅಂಜು → ಯಾಮಿನೀ ಚಂದ್ರಶೇಖರಮೂರ್ತಿ
- ಡಾ॥ ಸುಮನಾ – ಶಿವರಾಂ

೪. ಡಾ॥ ಸಿ.ವಿ.ಗಿರಿಧರಶಾಸ್ತ್ರೀ

೫. ಸಿ.ವಿ.ಶ್ರೀಮತಿ – ಬಿ.ಎಸ್.ಚಂದ್ರಶೇಖರ್

- ಬಿ.ಸಿ.ಚಿತ್ಕಲಾ – ಸಿ.ಎನ್.ವೆಂಕಟಾಚಲ → ಶಾರ್ವರಿ, ಶಾರಿಣಿ
- ಬಿ.ಸಿ.ಚಿತ್ರಭಾ – ಸಿ.ಆರ್.ಸುಬ್ರಹ್ಮಣ್ಯ → ಓಜಸ್ವಿ ಎಸ್. ಕಶ್ಯಪ್
- ಬಿ.ಸಿ.ವಿಶಾಖಾ – ಜಗದೀಶ್ ಕುರ್ತಕೋಟಿ

೬. ಸಿ.ವಿ.ರಮಾ – ಎನ್.ಉದಯಶಂಕರ್

- ಯು.ಸುದರ್ಶನ್-ಮಹಿಮಾ
- ಯು.ಶ್ರೀಕಾಂತ್

ಪ್ರಧಾನ ಸಂಪಾದಕರ ಅಂತರಂಗದ ನುಡಿ



ಮಂಗಳೂರಿನ ಕೆನರಾ ವಿದ್ಯಾಸಂಸ್ಥೆಗಳಲ್ಲಿ ೩೭ ವರ್ಷಗಳ ಸೇವೆ ಸಲ್ಲಿಸಿ, ಅಧ್ಯಾಪನ ವೃತ್ತಿಯಿಂದ ನಿವೃತ್ತಿಯಾಗಿ ಕೆಲವು ತಿಂಗಳುಗಳು ಕಳೆದಿದ್ದವು. ಒಂದು ದಿನ ಬೆಂಗಳೂರಿನಿಂದ ಶಾಸ್ತ್ರಿದ್ವಯರ ಸಹೋದರಿಯಾದ ಶ್ರೀಮತಿಯವರಿಂದ ದೂರವಾಣಿ ಕರೆ ಬಂತು – "ನಾನು ನನ್ನ ಸಹೋದರರಾದ ಶ್ರೀನಾಥಶಾಸ್ತ್ರಿ, ಗಿರಿಧರಶಾಸ್ತ್ರಿಗಳಿಂದ ತುಂಬಾ ಉಪಕೃತಳಾಗಿದ್ದೇನೆ. ಅವರಿಗೆ ೭೦ ವರ್ಷ, ೬೦ ವರ್ಷಗಳು ತುಂಬುವ ಕಾಲಘಟ್ಟದಲ್ಲಿ, ಒಂದು ಅಭಿನಂದನ ಸ್ಮರಣ ಕೃತಿಯನ್ನು ಹೊರತರಲು ಆಲೋಚಿಸುತ್ತಿದ್ದೇನೆ. ನೀವು ಪ್ರಧಾನ ಸಂಪಾದಕರಾಗಿ ಕಾರ್ಯನಿರ್ವಹಿಸಬಹುದಾ?" ಎಂದು ಕೇಳಿದರು. ಶೃಂಗೇರಿಯಲ್ಲೇ ಹುಟ್ಟಿ – ಬೆಳೆದು, ಶಾಸ್ತ್ರಿಗಳ ಕುಟುಂಬವನ್ನು ಹತ್ತಿರದಿಂದಲೇ ನೋಡುತ್ತಾ, ಒಡನಾಡಿಯೂ ಆಗಿದ್ದರಿಂದಲೂ, ನಾನು ತುಂಬಾ ಸಂತೋಷದಿಂದಲೇ ಕೂಡಲೇ ಸಮ್ಮತಿಸಿದೆ.

ನಾನು ಶೃಂಗೇರಿಯಲ್ಲಿ ದಿ.ವಿಶ್ವನಾಥಶಾಸ್ತ್ರಿಗಳಿಂದ ಕೆಲವು ದಿನ "ಅಭಿಜ್ಞಾನ ಶಾಕುಂತಲಮ್" ಪಾಠವನ್ನು ಹೇಳಿಸಿಕೊಂಡಿದ್ದೆ. ಅವರ ಪತ್ನಿ ಶ್ರೀಮತಿ ಲಲಿತಮ್ಮನವರು ನೀಡಿದ್ದ ಕಾಫಿ–ತಿಂಡಿಗಳನ್ನು ಸವಿದಿದ್ದೆ. ಶ್ರೀನಾಥಶಾಸ್ತ್ರಿಗಳು ಶೃಂಗೇರಿಯ ಜೆ.ಸಿ.ಬಿ.ಎಮ್. ಕಾಲೇಜಿನಲ್ಲಿ ಪಿ.ಯು.ಸಿಯಲ್ಲಿ ಗಣಿತ ಕಲಿಸಿದ ಗುರುಗಳು. ಗಿರಿಧರಶಾಸ್ತ್ರಿಗಳು ನನ್ನ ಸಹಪಾಠಿ ಮಿತ್ರರು. ದಿ.ವಿಶ್ವನಾಥಶಾಸ್ತ್ರಿಗಳು ಸಂಯೋಜಿಸುತ್ತಿದ್ದ 'ಸಹೃದಯ ಗೋಷ್ಠಿ'ಗಳಲ್ಲೂ ಪಾಲ್ಗೊಂಡವ. ಶ್ರೀನಾಥಶಾಸ್ತ್ರಿ – ಸರಸ್ವತಿಯವರ ವಿವಾಹದ ಬೀಗರ ಔತಣದಲ್ಲೂ ಭಾಗವಹಿಸಿದವ. ನಮ್ಮ ಮನೆಯ ಪಕ್ಕದವರಾದ ದಿ. ಗಣಪತಿ ಅವಧಾನಿಗಳ ಪಕ್ಕದ ಮನೆಯಲ್ಲಿ ಶಾಸ್ತ್ರಿಗಳು ಬಾಡಿಗೆಗೆ ಇದ್ದಾಗ, ಇಬ್ಬರೂ ಸಹೋದರರ ನಿಕಟ ಒಡನಾಟ ಹೊಂದಿದ್ದವ. ಗಿರಿಧರಶಾಸ್ತ್ರಿಗಳು ಮಠದ ಅಧಿಕಾರಿಗಳಾಗಿ ಶಾರದಾಂಬೆಯ ಕ್ಷೇತ್ರ ಶೃಂಗೇರಿಯಲ್ಲೇ ಉಳಿದುಕೊಂಡರೆ, ನಾನು ಸಂಸ್ಕೃತ ಅಧ್ಯಾಪಕನಾಗಿ ಮಂಗಳಾದೇವಿಯ ಕ್ಷೇತ್ರವಾದ ಮಂಗಳೂರಿಗೆ ತೆರಳಿದ್ದೆ. ಈ ಎಲ್ಲವನ್ನೂ ತಿಳಿದಿದ್ದರಿಂದಲೂ ನನ್ನ ಸಾಹಿತ್ಯಕ ಕೃತಿಗಳ (ಸುಮಾರು ೨೬) ಪರಿಚಯವೂ ಇದ್ದುದರಿಂದಲೂ ಡಾಕ್ಟರೇಟ್ ಪದವೀಧರನಾಗಿದ್ದರಿಂದಲೂ, ಜಗದ್ಗುರು ಶ್ರೀಮದಭಿನವವಿದ್ಯಾತೀರ್ಥ ಹಾಗೂ ಶ್ರೀಶ್ರೀಶ್ರೀ

ಭಾರತೀತೀರ್ಥ ಮಹಾಸ್ವಾಮಿಗಳ ಶಿಷ್ಯನಾಗಿದ್ದರಿಂದಲೂ; ಶ್ರೀಮತಿಯವರು ತಮ್ಮ ಸಹೋದರರ ಕುರಿತಾದ ಸ್ಮರಣ ಸಂಚಿಕೆಯ ಪ್ರಧಾನ ಸಂಪಾದಕನಾಗಿ ನನ್ನನ್ನೇ ಆಯ್ಕೆ ಮಾಡಿಕೊಂಡಿದ್ದಾರೆಂದು ಭಾವಿಸುತ್ತೇನೆ.

ಸಂಸಾರದ ಕಾರ್ಯಭಾರಗಳನ್ನು ನಿರ್ವಹಿಸುತ್ತ, ಗಮಕ ಕಲೆಯನ್ನು ಪ್ರಚುರಗೊಳಿಸುತ್ತ, ಸಹೋದರರ ಬಗ್ಗೆ ಕೃತಜ್ಞತೆಯ ಕುರುಹಾಗಿ ಸ್ಮರಣ ಸಂಚಿಕೆಯನ್ನು ಸಮರ್ಪಿಸಬೇಕೆಂಬ ಶ್ರೀಮತಿಯವರ ದೃಢಸಂಕಲ್ಪ ನನಗೆ ತುಂಬಾ ಮೆಚ್ಚಿಕೆಯಾಯಿತು. ಶ್ರೀಮತಿಯವರೇ, ತಮ್ಮ ಸಹೋದರರ ಅಭಿಮಾನಿಗಳನ್ನು ಗುರುತಿಸಿ, ಅಭಿನಂದನಾ ಸ್ಮರಣ ಸಂಚಿಕೆಗೆ ಲೇಖನಗಳನ್ನು ಕಳುಹಿಸಿಕೊಡಬೇಕೆಂದು ಪತ್ರ ಬರೆದು ಲೇಖನಗಳನ್ನು ಕಲೆಹಾಕಿದ್ದಾರೆ. ಶೃಂಗೇರಿ ಪರಿಸರದಲ್ಲಿ ಶಾಸ್ತ್ರಿದ್ವಯರೊಡನೆ ಒಡನಾಡಿ, ಅವರ ಆತ್ಮೀಯತೆಯ ಪ್ರಭಾವಲಯದಿಂದ ಆಕರ್ಷಿತರಾದ ಹಲವು ಮಹನೀಯರು ಹಾಗೂ ನಾಡಿನಾದ್ಯಂತ ಶಾಸ್ತ್ರಿಗಳ ಕುಟುಂಬವನ್ನು, ವ್ಯಕ್ತಿತ್ವವನ್ನೂ ಹತ್ತಿರದಿಂದ ತಿಳಿದು ಅವರ ದಗ್ಧ – ವಿದಗ್ಧ – ಸ್ನಿಗ್ಧ ಸ್ವಭಾವಗಳ ಪರಿಚಯವುಳ್ಳ ಹಲವು ಅಭಿಮಾನಿಗಳೂ ಅತ್ಯಂತ ಪ್ರೀತಿಯಿಂದ ಲೇಖನಗಳನ್ನು ಕಳುಹಿಸಿ ಕೊಟ್ಟಿದ್ದಾರೆ.


ನಾಡಿನ ಹಲವು ಪ್ರತಿಷ್ಠಿತ ವ್ಯಕ್ತಿಗಳೂ, ವಿದ್ವಾಂಸರೂ, ಸಾಂಸ್ಕೃತಿಕ, ಆಧ್ಯಾತ್ಮಿಕ, ಶೈಕ್ಷಣಿಕ, ಸಾಹಿತ್ಯಕ ಇತ್ಯಾದಿ ಕ್ಷೇತ್ರಗಳಿಗೆ ಸಂಬಂಧಿಸಿದ ವಿದ್ಯಾಕ್ಷೇತ್ರದಲ್ಲಿ ಖ್ಯಾತನಾಮರೂ ಅತ್ಯಂತ ಉಪಯುಕ್ತವಾದ ಪ್ರೌಢವಾದ ಲೇಖನಗಳಿಂದ ಈ ಅಭಿನಂದನ ಗ್ರಂಥದ ಮಹತ್ವವನ್ನು ಹೆಚ್ಚಿಸಿದ್ದಾರೆ. ಎಲ್ಲಾ ಒಟ್ಟಿಗೆ ಎಪ್ಪತ್ತಕ್ಕಿಂತಲೂ ಅಧಿಕವಿರುವ ಲೇಖನಗಳು, ೬೦, ೭೦ ಸಂವತ್ಸರಗಳನ್ನು ಪೂರ್ಣಗೊಳಿಸುತ್ತಿರುವ ಶಾಸ್ತ್ರಿ ಸಹೋದರರಿಗೆ ಅರ್ಪಿಸುತ್ತಿರುವ ಅತ್ಯಂತ ಪ್ರಿಯವಾದ ಕೊಡುಗೆ ಎಂದೇ ಭಾವಿಸುತ್ತೇನೆ.

ಹೆಚ್ಚು – ಕಡಿಮೆ, ಈ ಲೇಖನಗಳ ಎಲ್ಲಾ ಲೇಖಕರೂ ನನಗೆ ಪರಿಚಿತರೇ. ಕೆಲವರನ್ನು ಬಿಟ್ಟರೆ ಅವರೊಡನೆ ನಾನೂ ಸಂಭಾಷಣೆ ನಡೆಸಿದವನೇ. **"ಹತ್ತು ಕಟ್ಟುವಲ್ಲಿ ಮುತ್ತು ಕಟ್ಟು"** ಎನ್ನುವ ಮಾತಿನಂತೆ, ಎಲ್ಲಾ ಲೇಖನಗಳ ಹೃದಯಭಾಗಕ್ಕೆ ಅನ್ವಯವಾಗುವ ಶೀರ್ಷಿಕೆಗಳನ್ನು ಕೊಟ್ಟು, ಎಲ್ಲಾ ಸಹೃದಯರು ಓದಿ ಆಸ್ವಾದಿಸಲು ಅನುಕೂಲವಾಗುವಂತೆ, ಪ್ರೇರಣಾದಾಯಕವಾದ ವಿಚಾರಗಳಿಗೆ ಪ್ರಾಧಾನ್ಯತೆಯನ್ನು ನೀಡಿ, ಸುದೀರ್ಘವಾಗಿದ್ದ ಹಲವಾರು ಲೇಖನಗಳ ಪುಟಗಳನ್ನು ಮಿತಗೊಳಿಸಿದ್ದೇನೆ. **"ಸುಪುತ್ರೋ ಕುಲದೀಪಕಃ"** ಎನ್ನುವ ಸುಭಾಷಿತದ ನುಡಿಯನ್ನು ಸ್ಮರಣೆಗೆ ತಂದುಕೊಂಡು, ಕುಲವನ್ನೂ, ನಾಡನ್ನೂ


ಬೆಳಗಿರುವ ಸಹೋದರದ್ವಯರ ಅಭಿನಂದನ ಕೃತಿಗೆ "**ಕುಲದೀಪ**" ಎಂಬ ನಾಮಕರಣ ಮಾಡಿದ್ದೇನೆ. ಈ ಕೃತಿಗೆ ಶೃಂಗೇರಿ ಪರಿಸರದ ಹಾಗೂ ನಾಡಿನ ಹಲವು ಸಹೃದಯರು ಜ್ಞಾನ - ದೀಪದ ಹಣತೆಯನ್ನೂ ಬೆಳಗಿ, "ಕುಲದೀಪ" ಶೀರ್ಷಿಕೆಯನ್ನು ಸಾರ್ಥಕಗೊಳಿಸಿದ್ದಾರೆ.

ಎಲ್ಲಾ ಲೇಖಕರ ಮಾನಸಿಕ ಸಂಪರ್ಕವನ್ನು ಕಲ್ಪಿಸಿಕೊಟ್ಟು, ಸಾಹಿತ್ಯರಸದ ಆನಂದಾನುಭವಕ್ಕೆ ಕಾರಣೀಭೂತರಾದ; ಶ್ರೀಮತಿಯವರನ್ನೂ, ಅವರ ಕುಟುಂಬವನ್ನೂ, ಎಲ್ಲಾ ಬಂಧು-ವರ್ಗದವರನ್ನೂ ಅಭಿನಂದಿಸುತ್ತೇನೆ. ನನ್ನ ಆತ್ಮೀಯರೂ, ನಿಕಟವರ್ತಿಗಳೂ ಆಗಿರುವ ಎಪ್ಪತ್ತು ಸಂವತ್ಸರಗಳನ್ನು ಪೂರ್ಣಗೊಳಿಸುತ್ತಿರುವ **ಶ್ರೀನಾಥಶಾಸ್ತ್ರಿಗಳು, ಅರವತ್ತು ಸಂವತ್ಸರಗಳನ್ನು** ಪೂರ್ಣಗೊಳಿಸುತ್ತಿರುವ ಗಿರಿಧರಶಾಸ್ತ್ರಿಗಳೂ ಆರೋಗ್ಯವಂತರಾಗಿ, ಅಭಿಮಾನಿಗಳ ಸಂಖ್ಯೆಗಳನ್ನು ಅಭಿವೃದ್ಧಿಗೊಳಿಸುತ್ತ, ಅವರ ಬದುಕು ರಾಷ್ಟ್ರೋನ್ನತಿಗೆ ಕಾರಣೀಭೂತವಾಗಲಿ ಎಂದು ಭಗವಂತನಲ್ಲಿ ಪ್ರಾರ್ಥಿಸುತ್ತೇನೆ.

-ಡಾ। ವಾಗೀಶ್ವರೀ ಶಿವರಾಮ ಪಿ.ಎಚ್‌ಡಿ (ವಿದ್ಯಾವಾರಿಧಿ)
ಎಂ.ಎ (ಸಂಸ್ಕೃತ), ಎಂ.ಎ (ಕನ್ನಡ), ಬಿಎಸ್ಸಿ, ಬಿಎಡ್, ಆರ್.ಬಿ.ವಿ
ಅಧ್ಯಕ್ಷರು, ವಾಗೀಶ್ವರೀ ಪ್ರಕಾಶನ, ಮಂಗಳೂರು



ತಾಯಿ ಲಲಿತಮ್ಮ ಮತ್ತು ತಂದೆ ಪಂಡಿತ ಚಿ,ನಾ.ವಿಶ್ವನಾಥಶಾಸ್ತ್ರೀ



ಚಿ.ವಿ. ಶ್ರೀನಾಥಶಾಸ್ತ್ರೀ



ಡಾ॥ ಸಿ.ವಿ. ಗಿರಿಧರಶಾಸ್ತ್ರೀ



ಲಲಿತಮ್ಮ ಮತ್ತು ವಿಶ್ವನಾಥಶಾಸ್ತ್ರೀ ಅವರ ಮಕ್ಕಳು –
ಮಹಾಲಕ್ಷ್ಮಿ, ಶ್ರೀನಾಥ, ಉಷಾ, ಗಿರಿಧರ, ಶ್ರೀಮತಿ, ರಮಾ



ಜಗದ್ಗುರು ಶ್ರೀ ಶ್ರೀ ಶ್ರೀ ಅಭಿನವ ವಿದ್ಯಾತೀರ್ಥ ಮಹಾಸ್ವಾಮಿಗಳವರು ಹಾಗೂ ಶ್ರೀ ಶ್ರೀ ಪರಮಾನಂದ ಭಾರತೀ ಸ್ವಾಮಿಗಳವರೊಂದಿಗೆ ಚಿವಿಶ್ರೀ



ಜಗದ್ಗುರು ಶ್ರೀ ಶ್ರೀ ಶ್ರೀ ಅಭಿನವವಿದ್ಯಾತೀರ್ಥ ಮಹಾಸ್ವಾಮಿಗಳವರೊಂದಿಗೆ ಸಿವಿಜಿ





ನವರಾತ್ರಿಯ ದರ್ಬಾರ್ ಸಂದರ್ಭದಲ್ಲಿ ಜಗದ್ಗುರು
ಶ್ರೀ ಶ್ರೀ ಶ್ರೀ ಭಾರತೀತೀರ್ಥ ಮಹಾಸ್ವಾಮಿಗಳವರೊಂದಿಗೆ, ಸಿ.ವಿ.ಜಿ.



ಆರ್ಷ ವಿದ್ಯಾ ಗುರುಕುಲದ ಶ್ರೀ ದಯಾನಂದ ಸರಸ್ವತೀ ಸ್ವಾಮೀಜಿ ಅವರಿಂದ
ಸಿವಿಜಿ ಅವರಿಗೆ ಸನ್ಮಾನ



ಯಡತೊರೆ ಶ್ರೀ ಶ್ರೀ ಶಂಕರಭಾರತೀ ಸ್ವಾಮಿಗಳು
ಶ್ರೀ ಶ್ರೀ ಸತ್ಯಜ್ಞಾನಾನಂದಸರಸ್ವತಿ ಸ್ವಾಮಿಗಳವರೊಂದಿಗೆ ಸಿವಿಜಿ



ಶ್ರೀ ಶೃಂಗೇರಿ ಶಂಕರಮಠದಲ್ಲಿ ಗಿರಿಧರಶಾಸ್ತ್ರೀ ಅವರು ಆಡಳಿತಾಧಿಕಾರಿ ಹಾಗೂ
ಬೆಂಗಳೂರು ಶಂಕರಮಠದಲ್ಲಿ ಶ್ರೀನಾಥಶಾಸ್ತ್ರೀ ಅವರು ಮ್ಯಾನೇಜರರಾಗಿದ್ದಾಗ



ತಾಯಿ – ತಂದೆಯರೊಡನೆ ಚಿವಿಶ್ರೀ

ಪದ್ದು – ಸ್ತ್ರೀ ಪಾತ್ರದಲ್ಲಿ
ಚಿವಿಶ್ರೀ





ಚಿ.ವಿ. ಶ್ರೀನಾಥಶಾಸ್ತ್ರೀ ಹಾಗೂ ಅವರ ಪತ್ನಿ ಸರಸ್ವತಿ



ಚಿ ವಿ ಶ್ರೀ ಹಾಗೂ ಸರಸ್ವತಿ ಅವರ ಮಗ ವಿಶ್ವನಾಥ–ಸೊಸೆ
ವಿದ್ಯಾ (ಮದುವೆ ದಂಪತಿಗಳು) ಮತ್ತು ಮಗಳು ಕ್ಷಮಾ–ಅಳಿಯ ದತ್ತಾತ್ರಿ



ಮೊಮ್ಮಗಳು ಸಂವೇದ್ಯಾಳೊಂದಿಗೆ ಚಿ.ವಿ. ಶ್ರೀನಾಥಶಾಸ್ತ್ರೀ



ಮುಖ್ಯಮಂತ್ರಿ ಶ್ರೀ ಎಸ್.ಎಮ್. ಕೃಷ್ಣಾರೊಂದಿಗೆ ನುಡಿ
ತಂತ್ರಾಂಶದ ಸಂಭಾಷಣೆ



ಶ್ರೀ ಸುಧಾಕರ ಚತುರ್ವೇದಿಯೊಂದಿಗೆ ಚಿ.ವಿ.ಶ್ರೀನಾಥಶಾಸ್ತ್ರೀ
ಹಾಗೂ ಡಾ॥ ಪಂಡಿತಾರಾಧ್ಯ



2002ರಲ್ಲಿ ಮಹಾನಗರ ಪಾಲಿಕೆ ಕೆಂಪೇಗೌಡ ಪ್ರಶಸ್ತಿ ಪಡೆಯುತ್ತಿರುವ ಚಿವಿಶ್ರೀ



2004ರಲ್ಲಿ ನಿವೃತ್ತರಾಗುವಾಗ ರಾವೈಪ್ರ ಸ್ನೇಹಿತರಿಂದ ಬೀಳ್ಕೊಡುಗೆ



ಡಾ॥ ಹೆಚ್. ನರಸಿಂಹಯ್ಯ ಅವರೊಂದಿಗೆ ಚಿವಿಶ್ರೀ



ಚಿತ್ರದುರ್ಗ ಜಿಲ್ಲೆಯ ಚಳ್ಳಕೆರೆಯಲ್ಲಿ ಕರ್ನಾಟಕ ವಿಜ್ಞಾನ ಮತ್ತು ತಂತ್ರಜ್ಞಾನ ಅಕಾಡೆಮಿಯ ಪುನಃಶ್ಚೇತನಾ ಕಾರ್ಯಕ್ರಮ ನಡೆಸಿಕೊಟ್ಟದ್ದಕ್ಕೆ ಬೆಳಗೆರೆ ಕೃಷ್ಣಶಾಸ್ತ್ರಿಗಳಿಂದ ಸನ್ಮಾನ



ಶಿವಮೊಗ್ಗ ಆರ್ಯವೈಶ್ಯ ಶ್ರೀರಾಮ ಕೋ. ಆಪ್. ಸೊಸೈಟಿಯಲ್ಲಿ ಶ್ರೀ ಡಿ. ಹೆಚ್. ಶಂಕರಮೂರ್ತಿಗಳಿಂದ ಸನ್ಮಾನ



2013ರಲ್ಲಿ ಚಿವಿಶ್ರೀ ಅವರಿಗೆ ಬಸವನಗುಡಿಯ ಕಹಳೆ ಬಂಡೆ
ಉದ್ಯಾನವನದಲ್ಲಿ ಸನ್ಮಾನ



ಅಂತರ ಪ್ರೌಢಶಾಲಾ ಚರ್ಚಾಸ್ಪರ್ಧೆಯಲ್ಲಿ ಸಚಿವ ಬಸವಣ್ಣಪ್ಪ
ಅವರಿಂದ ಬಹುಮಾನ ಸ್ವೀಕಾರ



1981ರಲ್ಲಿ ಶೃಂಗೇರಿ ಶಂಕರಮಠದಲ್ಲಿ ಸಿ.ವಿ. ಗಿರಿಧರಶಾಸ್ತ್ರೀ ಅವರು
ಆಡಳಿತಾಧಿಕಾರಿಯಾಗಿದ್ದಾಗ



ದೆಹಲಿಯಲ್ಲಿದ್ದಾಗ ಚಿ.ವಿ.ಗಿರಿಧರಶಾಸ್ತ್ರೀ ಅವರು ಹಾಗೂ ಟಿ.ಎನ್.ಚತುರ್ವೇದಿ ಅವರು
ಶಂಕರದಯಾಳ್ ಶರ್ಮಾ ಅವರನ್ನು ಭೇಟಿಮಾಡಿದ ಸಂದರ್ಭ



ರಾಜೀವಗಾಂಧಿ ರಾಷ್ಟ್ರೀಯ ಸಂಸ್ಕೃತ ಸಂಸ್ಥಾನದ ಪ್ರಾಂಶುಪಾಲರಾದ ರಾಮಾನುಜ
ದೇವನಾಥನ್ ಹಾಗೂ ಎ.ಪಿ. ಸಚ್ಚಿದಾನಂದ ಅವರು ಸಿವಿಜಿ ಅವರನ್ನು ಗೌರವಿಸುತ್ತಿರುವುದು



ಶೃಂಗೇರಿಯ ಶ್ರೀ ಜಗದ್ಗುರು ಚಂದ್ರಶೇಖರ ಭಾರತೀ ಮೆಮೋರಿಯಲ್ ಕಾಲೇಜಿಗೆ
ಡಾ॥ ಅಬ್ದುಲ್ ಕಲಾಂ ಅವರು ಭೇಟಿಯಿತ್ತಾಗ





2014 – ಶೃಂಗೇರಿ ತಾಲ್ಲೂಕು ಕನ್ನಡ ಸಾಹಿತ್ಯ ಸಮ್ಮೇಳನಾಧ್ಯಕ್ಷರಾಗಿ ಸಿವಿಜಿ



ಶೃಂಗೇರಿಯ ಆರ್ಷ ವಿದ್ಯಾ ಕೇಂದ್ರದ ಆರಂಭೋತ್ಸವ ಸಮಾರಂಭದಲ್ಲಿ
ವಿವಿಧ ಆರ್ಷ ವಿದ್ಯಾ ಕೇಂದ್ರಗಳ ಸ್ವಾಮೀಜಿಗಳೊಂದಿಗೆ ಸಿವಿಜಿ



ಶೃಂಗೇರಿ ಕಾಲೇಜಿನ ಅಧ್ಯಾಪಕರು ನಟಿಸಿದ ಶುದ್ಧ ಶುಂಠಿ ನಾಟಕದ
ಪಾತ್ರಧಾರಿಗಳು – ಪದ್ದು ಪಾತ್ರಧಾರಿಗಳು ಚಿವಿಶ್ರೀ

ಪ್ರಕಾಶಕರ ಮಾತು

ನಮ್ಮ ತಂದೆ ದಿ. ಪಂಡಿತ **ಚಿ.ನಾ ವಿಶ್ವನಾಥಶಾಸ್ತ್ರಿಗಳು** ಕನ್ನಡ ಮತ್ತು ಸಂಸ್ಕೃತ ಭಾಷೆಗಳಲ್ಲಿ ಅಪಾರ ವಿದ್ವತ್ತನ್ನು ಗಳಿಸಿ, ಪ್ರೌಢಶಾಲೆಯ ಅಧ್ಯಾಪಕರಾಗಿದ್ದರು. ಜೊತೆಜೊತೆಗೆ ತಾವಿದ್ದ ಊರುಗಳಲ್ಲೆಲ್ಲಾ ಕರ್ನಾಟಕ ಸಂಘ ಸ್ಥಾಪಿಸಿ, ತನ್ಮೂಲಕ ಕನ್ನಡ ನಾಟಕಗಳು, ಭಾಷಣಗಳು, ಗಮಕ ಸಂಗೀತವೇ ಮೊದಲಾದ ಅನೇಕ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ನಡೆಸಿ, ಪ್ರಾತಃಸ್ಮರಣೀಯರಾಗಿದ್ದಾರೆ. ನಮ್ಮ ತಾಯಿ **ಲಲಿತಮ್ಮ** ಸದಾ ಅತಿಥಿ ಸತ್ಕಾರ ಮಾಡುತ್ತ, ತನ್ನ ಪರಿಸರದಲ್ಲಿ ಕಷ್ಟದಲ್ಲಿರುವವರಿಗೆ ಸಹಾಯ ಮಾಡುತ್ತ ವಂದನೀಯರಾಗಿದ್ದಾರೆ. ಇವರು ತಮ್ಮ ಆರು ಜನ ಮಕ್ಕಳಿಗೂ ಉತ್ತಮವಾದ ಸಂಸ್ಕಾರನೀಡಿ, ಸತ್ಪ್ರಜೆಗಳನ್ನಾಗಿ ರೂಪಿಸಿದ್ದಾರೆ.

ಆರು ಜನರಲ್ಲಿ **ಶ್ರೀ ಚಿ.ವಿ. ಶ್ರೀನಾಥಶಾಸ್ತ್ರೀ** ಮತ್ತು **ಡಾ। ಸಿ.ವಿ.ಗಿರಿಧರ ಶಾಸ್ತ್ರಿಗಳು** ಈಗ ೭೦ ಹಾಗೂ ೬೦ನೇ ವರ್ಷಗಳ ಸಾರ್ಥಕ ಜೀವನವನ್ನು ನಡೆಸುತ್ತಿದ್ದಾರೆ. ನಾವು ಈ ಸುಸಂದರ್ಭದಲ್ಲಿ ಚಿಕ್ಕದೊಂದು ಉಡುಗೊರೆಯ ರೂಪದಲ್ಲಿ, ನಮ್ಮ ಕುಲದೀಪಕರಾದ ಅವರಿಗೆ ಈ "**ಕುಲದೀಪ**" ಎಂಬ ಅಭಿನಂದನ ಗ್ರಂಥವನ್ನು ಸಮರ್ಪಿಸುತ್ತಿದ್ದೇವೆ. ಈ ಯೋಜನೆಗೆ ನನ್ನಿಬ್ಬರು ಅಕ್ಕಂದಿರು,ತಂಗಿ ಮತ್ತು ನಮ್ಮೆಲ್ಲರಮಕ್ಕಳು ನನ್ನ ಬೀಗರಾದ ಶ್ರೀಮತಿನಾಗಲಕ್ಷ್ಮೀ ಸಂಭ್ರಮದಿಂದ ಕೈಜೋಡಿಸಿದ್ದಾರೆ.

ನಮ್ಮ ಸತ್ಸಂಕಲ್ಪಕ್ಕೆ ಪರಮಪೂಜ್ಯರಾದ, ಶೃಂಗೇರಿ ದಕ್ಷಿಣಾಮ್ನಾಯ ಪೀಠಾಧೀಶ್ವರರಾದ ಜಗದ್ಗುರು **ಶ್ರೀಶ್ರೀಶ್ರೀ ಭಾರತೀತೀರ್ಥ ಮಹಾಸ್ವಾಮಿಗಳವರು**, ಯತಿವರ್ಯರಾದ **ಶ್ರೀಶ್ರೀ ಶಂಕರಭಾರತೀ ಸ್ವಾಮಿಗಳವರು, ಶ್ರೀಶ್ರೀ ಪರಮಾನಂದಭಾರತೀ ಸ್ವಾಮಿಗಳವರು** ಮತ್ತು ದಿ. ಮಹಾಮಹೋಪಾಧ್ಯಾಯ, ವಿದ್ಯಾವಾರಿಧಿ, **ಡಾ॥ ಎನ್. ರಂಗನಾಥಶರ್ಮಾ** ಅವರು ಆಶೀರ್ವಚನ ನೀಡಿರುವುದು ನಮ್ಮೆಲ್ಲರ ಸೌಭಾಗ್ಯವೇ ಸರಿ.

ಇಂಥಹ ಮಹಾನ್ ಕಾರ್ಯಕ್ಕೆ ಕನ್ನಡ ಗಣಕ ಪರಿಷತ್ತಿನ ಕಾರ್ಯದರ್ಶಿ **ಶ್ರೀ ಜಿ.ಎನ್. ನರಸಿಂಹಮೂರ್ತಿಗಳು**, ಶ್ರೀ ವಾಗ್ದೇವಿ ಗಮಕ ಕಲಾಪ್ರತಿಷ್ಠಾನದ ಅಧ್ಯಕ್ಷರಾದ **ಶ್ರೀ ಕೆ.ವಿ.ರವೀಂದ್ರನಾಥ ಠ್ಯಾಗೂರ್**, ಶೃಂಗೇರಿಯ ಶ್ರೀ ಜೆ.ಸಿ.ಬಿ.ಎಂ. ಕಾಲೇಜ್‌ನ ಪ್ರಾಚಾರ್ಯರಾದ **ಶ್ರೀ ಹೆಚ್**..ಸಿ. ವೀರಪ್ಪಗೌಡರು ನನಗೆ ಬೆಂಬಲವಾಗಿದ್ದು, ಉತ್ತಮ ಸಲಹೆ ಸೂಚನೆಗಳನ್ನು ನೀಡಿ, ತಾವೂ ಸಂತೋಷದಿಂದ ಈ ಕಾರ್ಯದಲ್ಲಿ ಪಾಲ್ಗೊಂಡಿದ್ದಾರೆ. ಅನೇಕ ಮಂದಿ ವಿದ್ವಜ್ಜನರು, ಆಪ್ತೇಷ್ಟರು ನಮ್ಮ ಕೋರಿಕೆಯನ್ನು ಮನ್ನಿಸಿ, ಸಕಾಲಕ್ಕೆ ಅತ್ಯುತ್ತಮವಾದ ಲೇಖನಗಳನ್ನು ಕಳುಹಿಸಿಕೊಟ್ಟು ಉಪಕರಿಸಿದ್ದಾರೆ.

"ಕುಲದೀಪ" ಅಭಿನಂದನ ಗ್ರಂಥದ ಸಂಪಾದನೆಗೆ ಸಮರ್ಥರೂ, ಆಪ್ತರೂ, ಸಹೃದಯರೂ ಆದ **ಡಾ। ವಾಗೀಶ್ವರೀ ಶಿವರಾಮ**, ಮಂಗಳೂರು (ಮೂಲತಃ ಶೃಂಗೇರಿಯವರು) ಅವರನ್ನು ಕೇಳಿಕೊಂಡಾಗ; ಅಭಿಮಾನದಿಂದ ಈ ಕಾರ್ಯವನ್ನು ಹೃತ್ಪೂರ್ವಕವಾಗಿ ನಿರ್ವಹಿಸಿದ್ದಾರೆ. ಇವರೆಲ್ಲರ ಆದರಾಭಿಮಾನಗಳಿಗೆ ನಾವು ಚಿರಋಣಿಗಳು.

ಲೇಖನಗಳನ್ನು ಗಣಕದಲ್ಲಿ ಬೆರಳಚ್ಚುಮಾಡಿ, ಕರಡು ಪ್ರತಿಗಾಗಿ ಸರಿಯಾಗಿ ಜೋಡಿಸಿ, ತಿದ್ದಿ ಸಿದ್ಧಗೊಳಿಸಿರುವ **ಕುಮಾರಿ ಗೀತಾ.ಎನ್** ಅವರಿಗೆ, ಕನ್ನಡ ಗಣಕ ಪರಿಷತ್ತಿನ **ನವೀನ್, ಶ್ರೀಧರ್, ಸುಬ್ರಹ್ಮಣ್ಯ** ಮೊದಲಾದವರಿಗೆ, **ಪರಿಮಳ.ಟ** ಅವರಿಗೆ; ನಮ್ಮಮ್ಮನ ಪ್ರೀತಿಯ ಮೊಮ್ಮಗ ಶೃಂಗೇರಿಯ ರಂಗನಾಥ, ಎಲ್ಲಕ್ಕಿಂತ ಮಿಗಿಲಾಗಿ ನನ್ನ ಮಕ್ಕಳಾದ **ಚಿತ್ಕಲಾ, ಚಿತ್ಪ್ರಭಾ, ವಿಶಾಖಾ**, ಅಣ್ಣನ ಮಗಳು **ಕ್ಷಮಾ**, ಮಗ **ವಿಶ್ವನಾಥ**, ಇವರೆಲ್ಲರಿಗೂ ಆಭಾರಿಯಾಗಿದ್ದೇನೆ. ಪುಸ್ತಕವನ್ನು ಅಂದವಾಗಿ ಮುದ್ರಿಸಿಕೊಟ್ಟಿರುವ ಕರ್ನಾಟಕ ಆಫ್‌ಸೆಟ್ ಪ್ರಿಂಟರ್ಸ್ ಮಾಲೀಕರಾದ ಶ್ರೀ ಬಿ.ವಿ. ಗಜೇಂದ್ರಕುಮಾರ್ ಅವರಿಗೆ ಮತ್ತು ಅವರ ಸಿಬ್ಬಂದಿವರ್ಗದವರಿಗೂ ಅನಂತ ವಂದನೆಗಳು.

ಈ ಕಾರ್ಯಕ್ಕೆ ಪ್ರೇರಕರಾದ ನನ್ನ ಅಣ್ಣಂದಿರಿಗೂ, ಪ್ರತ್ಯಕ್ಷ, ಪರೋಕ್ಷವಾಗಿ ಸಹಕರಿಸಿದ ಎಲ್ಲರಿಗೂ ಅನಂತ ಪ್ರಣಾಮಗಳು.

– **ಶ್ರೀಮತಿ ಸಿ.ವಿ. ಶ್ರೀಮತಿ, ಕಾರ್ಯದರ್ಶಿ**
ಶ್ರೀ ವಾಗ್ದೇವಿ ಗಮಕಕಲಾ ಪ್ರತಿಷ್ಠಾನ, ಬೆಂಗಳೂರು

ಅಭಿನವವಿದ್ಯಾತೀರ್ಥಮಹಂ ಭಜೇ

– ಟಿ.ವಿ. ಶಿವಕುಮಾರ ಶರ್ಮಾ
ವಿದ್ವಾಂಸರು, ಶ್ರೀಶಾರದಾಪೀಠಂ, ಶಂಗೇರಿ
೯೯೦೦೭೩೭೮೩೩

ಜಗದ್ಗುರು ಶ್ರೀಮಚ್ಛಂಕರಭಗವತ್ಪಾದಾಚಾರ್ಯರಿಂದ ಪ್ರತಿಷ್ಠಾಪಿಸಲ್ಪಟ್ಟ ಚತುರಾಮ್ನಾಯ ಪೀಠಗಳಲ್ಲಿ ದಕ್ಷಿಣಾಮ್ನಾಯ ಶೃಂಗೇರೀ ಶಾರದಾಪೀಠವು ಪ್ರಥಮವೂ, ಪ್ರಧಾನವೂ ಆಗಿದೆ. ಶ್ರೀಭಗವತ್ಪಾದರು ಈ ಪೀಠಕ್ಕೆ ಮೊದಲನೆಯ ಅಧಿಪತಿಗಳನ್ನಾಗಿ ತಮ್ಮ ನಾಲ್ವರು ಶಿಷ್ಯರಲ್ಲಿ ಒಬ್ಬರಾದ ಶ್ರೀಸುರೇಶ್ವರಾಚಾರ್ಯರನ್ನು ನಿಯಮಿಸಿದರು. ಅಂದಿನಿಂದ ಈ ಪೀಠದ ಗುರು ಪರಂಪರೆಯು ಅವಿಚ್ಛಿನ್ನವಾಗಿ ನಡೆದುಬಂದಿದೆ. ಮಹಾತಪಸ್ವಿಗಳೂ, ವಿದ್ಯಾತಪೋಮೂರ್ತಿಗಳೂ, ಮಹಾಮಹಿಮಾಶಾಲಿಗಳೂ, ವೇದ-ಶಾಸ್ತ್ರನಿಷ್ಣಾತರೂ ಆದ ಯತಿಶ್ರೇಷ್ಠರಿಂದ ಈ ಪೀಠವು ಅಧಿಷ್ಠಿತವಾಗಿದೆ.

ಈ ಪರಂಪರೆಯಲ್ಲಿ ೩೫ ನೆಯ ಅಧಿಪತಿಗಳಾಗಿ ಪೀಠವನ್ನಲಂಕರಿಸಿದವರು ಜಗದ್ಗುರು ಶ್ರೀಮದಭಿನವವಿದ್ಯಾತೀರ್ಥ ಮಹಾಸ್ವಾಮಿಗಳವರು. ಇವರ ಪೂರ್ವಾಶ್ರಮದ ನಾಮಧೇಯ ಶ್ರೀನಿವಾಸ ಎಂದು. ಇವರು ಬೆಂಗಳೂರಿನ ಕೈಪು ರಾಮ ಶಾಸ್ತ್ರಿಗಳು - ಶ್ರೀಮತಿ ವೆಂಕಟಲಕ್ಷ್ಮಮ್ಮ ಎಂಬ ಪುಣ್ಯ ದಂಪತಿಗಳ ಪುತ್ರರಾಗಿ ಪಿಂಗಳ ಸಂ॥ದ ಆಶ್ವಯುಜ ಕೃಷ್ಣ ಚತುರ್ದಶಿಯಂದು (೧೩-೧೧-೧೯೧೭) ಜನಿಸಿದರು. ಇವರು ಬಾಲ್ಯದಿಂದಲೇ ಭಗವದ್ಭಕ್ತಿ, ಗುರುಹಿರಿಯರಲ್ಲಿ ಶ್ರದ್ಧೆ ಮೊದಲಾದ ಸದ್ಗುಣಗಳಿಂದ ಶೋಭಿತರಾಗಿದ್ದರು. ಸಾಂಸಾರಿಕ ವಿಚಾರಗಳಲ್ಲಿ ಅನಾಸಕ್ತಿಯನ್ನು ಹೊಂದಿದ್ದ ಇವರು ಇತರ ಬಾಲಕರಂತೆ ಅಲ್ಲದೆ ಚಿಕ್ಕವಯಸ್ಸಿನಲ್ಲೇ ವೈರಾಗ್ಯಭಾವವನ್ನು ಹೊಂದಿದ್ದರು. ಇವರ ಉಪನಯನ ಸಂಸ್ಕಾರವು ೧೯೩೦ರಲ್ಲಿ ಶೃಂಗೇರಿಯಲ್ಲಿ ನಡೆಯಿತು. ಆಗ ಶೃಂಗೇರಿ ಶಾರದಾಪೀಠವನ್ನಲಂಕರಿಸಿದ್ದ ಜೀವನ್ಮುಕ್ತ ಯತಿವರೇಣ್ಯ ಶ್ರೀ ಶ್ರೀ ಜಗದ್ಗುರು ಶ್ರೀಚಂದ್ರಶೇಖರಭಾರತೀ ಮಹಾಸ್ವಾಮಿಗಳವರ ಕರುಣಾಕಟಾಕ್ಷಕ್ಕೆ ಇವರು ಪಾತ್ರರಾದರು. ಗುರುಗಳವರು ಇವರ ಭಗವದ್ಭಕ್ತಿ, ವೈರಾಗ್ಯಾದಿ ಸದ್ಗುಣಗಳನ್ನು ಕಂಡು ಸಂತುಷ್ಟರಾಗಿ ೨೨-೫-೧೯೩೧ ರಂದು ಇವರಿಗೆ ಸನ್ಯಾಸಾಶ್ರಮವನ್ನು ಅನುಗ್ರಹಿಸಿ, 'ಅಭಿನವ ವಿದ್ಯಾತೀರ್ಥ' ಎಂಬ ಯೋಗಪಟ್ಟವನ್ನು ನೀಡಿ ತಮ್ಮ ಉತ್ತರಾಧಿಕಾರಿ ಶಿಷ್ಯರನ್ನಾಗಿ ಸ್ವೀಕರಿಸಿದರು. ಇವರು ಗುರುಗಳ ಸನ್ನಿಧಿಯಲ್ಲಿದ್ದು ಸನ್ಯಾಸಾಶ್ರಮ ಧರ್ಮಗಳನ್ನೂ, ಪೀಠದ ಸಂಪ್ರದಾಯಗಳನ್ನೂ ಅರಿತುಕೊಂಡರು. ಕೆಲವೇ ವರ್ಷಗಳಲ್ಲಿ ತರ್ಕ-ವೇದಾಂತಾದಿ ಶಾಸ್ತ್ರಗಳಲ್ಲಿ ಅದ್ವಿತೀಯವಾದ ಪಾಂಡಿತ್ಯವನ್ನುಗಳಿಸಿ ತಮ್ಮ ಗುರುಗಳಿಗೆ ಬಹಳ ಆನಂದವನ್ನುಂಟುಮಾಡಿದರು. ಯೋಗಶಾಸ್ತ್ರದಲ್ಲೂ ಪರಿಣತಿಯನ್ನು ಸಾಧಿಸಿದರು. ಜಗದ್ಗುರುಶ್ರೀಚಂದ್ರಶೇಖರ ಭಾರತೀ ಮಹಾಸ್ವಾಮಿಗಳವರು ೧೯೫೪ರಲ್ಲಿ ಮುಕ್ತರಾದರು.

ಗುರುಗಳ ಅಪ್ಪಣೆಯಂತೆ ಶಾರದಾಪೀಠದ ಹೊಣೆಯನ್ನು ಸ್ವೀಕರಿಸಿದ ಜಗದ್ಗುರು ಶ್ರೀ ಶ್ರೀಅಭಿನವವಿದ್ಯಾತೀರ್ಥ ಶ್ರೀಮಹಾಸ್ವಾಮಿಗಳವರು ೧೬-೧೦-೧೯೫೪ರ ರಂದು ೩೫ನೆಯ ಅಧಿಪತಿಗಳಾಗಿ ಪಟ್ಟಾಭಿಷಿಕ್ತರಾದರು.

ಮಹಾಸ್ವಾಮಿಗಳು ಕೈಗೊಂಡ ಮಹತ್ಕಾರ್ಯಗಳು; ಪಟ್ಟಾಭಿಷಿಕ್ತರಾದ ನಂತರ ಶ್ರೀಶ್ರೀಗಳವರು ಶ್ರೀಮಠವನ್ನು ಬಹಳ ಅಭಿವೃದ್ಧಿಗೊಳಿಸಿದರು. ಸಂಸ್ಕೃತ, ಹಿಂದಿ, ಕನ್ನಡ, ತೆಲುಗು, ತಮಿಳು ಮೊದಲಾದ ಭಾಷೆಗಳಲ್ಲಿ ನಿರರ್ಗಳವಾಗಿ ಸಂಭಾಷಿಸುವ ಕೌಶಲ್ಯವನ್ನು ಹೊಂದಿದ್ದ ಇವರು ಜನರಲ್ಲಿ ಧರ್ಮಜಾಗೃತಿಯನ್ನುಂಟು ಮಾಡುವುದಕ್ಕಾಗಿ ಭಾರತದಾದ್ಯಂತ ಯಾತ್ರೆಯನ್ನು ಕೈಗೊಂಡು ಧರ್ಮಪ್ರಚಾರವನ್ನು ಮಾಡಿದರು. ಆಯಾ ಪ್ರಾಂತ್ಯದ ಜನರಿಗೆ ಅನುಕೂಲವಾಗುವಂತೆ ಅನೇಕ ಸ್ಥಳಗಳಲ್ಲಿ ಶೃಂಗೇರಿಯ ಶಾಖಾಮಠಗಳನ್ನು ಏರ್ಪಡಿಸಿದರು. ಪಂಡಿತ-ಪಾಮರ ಎಂಬ ಭೇದವಿಲ್ಲದೆ ಎಲ್ಲರಲ್ಲೂ ಸಮಾನವಾದ ಪ್ರೀತಿಯನ್ನಿಟ್ಟು ಸರ್ವಜನರ ಕ್ಷೇಮವನ್ನು ಬಯಸುತ್ತಿದ್ದರು. ಸರ್ವರಿಗೂ ಸನ್ಮಾರ್ಗವನ್ನು ತೋರುತ್ತಾ ಸರ್ವಜನವಂದ್ಯರಾಗಿ ಜಗದ್ಗುರುಗಳಾದರು. ಲೋಕಕಲ್ಯಾಣಾರ್ಥವಾಗಿ ಅನೇಕಕಡೆ ಅತಿರುದ್ರ, ಸಹಸ್ರಚಂಡೀಯಾಗ ಮೊದಲಾದ ಧಾರ್ಮಿಕಕಾರ್ಯಗಳನ್ನು ನಡೆಸಿ ಜನರನ್ನು ಧರ್ಮಾನುಯಾಯಿಗಳನ್ನಾಗಿಸಿದರು. ವೇದಶಾಸ್ತ್ರಗಳ ಸಂರಕ್ಷಣೆಗಾಗಿ ಶ್ರೀಶ್ರೀಗಳವರು ಅನೇಕ ಯೋಜನೆಗಳನ್ನು ಕೈಗೊಂಡಿದ್ದರು. ವೇದ-ಶಾಸ್ತ್ರಸಭೆಗಳನ್ನು ಏರ್ಪಡಿಸಿ ಪಂಡಿತರನ್ನು ವಿಶೇಷವಾಗಿ ಸನ್ಮಾನಿಸುತ್ತಿದ್ದರು. ಅನೇಕ ಕಡೆ ವೇದಪಾಠಶಾಲೆಗಳನ್ನು ಸ್ಥಾಪಿಸಿದರು. **'ವೇದಪೋಷಕ ಸಭಾ'** ಎಂಬ ಸಂಸ್ಥೆಯನ್ನು ಸ್ಥಾಪಿಸಿ ಅದರ ಮೂಲಕ ವೇದಪ್ರಚಾರ ಕಾರ್ಯವು ವಿಶೇಷವಾಗಿ ನಡೆಯುವಂತೆ ವ್ಯವಸ್ಥೆ ಮಾಡಿದರು. ಅನೇಕ ದೇವಾಲಯಗಳ ಜೀರ್ಣೋದ್ಧಾರವನ್ನು ಮಾಡಿ ತಮ್ಮ ಅಮೃತಹಸ್ತಗಳಿಂದ ಕುಂಭಾಭಿಷೇಕವನ್ನು ನೆರವೇರಿಸಿದರು. ಕಾಶೀ, ರಾಮೇಶ್ವರ, ಮಧುರೈ, ಕನ್ಯಾಕುಮಾರಿ, ಶ್ರೀಶೈಲ, ಗೋಕರ್ಣ, ಪಳನಿ, ತಿರುಚೆಂದೂರ್ ಮೊದಲಾದ ಪ್ರಸಿದ್ಧ ಕ್ಷೇತ್ರಗಳಲ್ಲಿ ಸ್ವತಃ ತಮ್ಮ ಕರಕಮಲಗಳಿಂದ ದೇವರನ್ನು ಪೂಜಿಸಿ ಸರ್ವಜನರ ಕ್ಷೇಮವನ್ನು ಪ್ರಾರ್ಥಿಸುತ್ತಿದ್ದರು. ಸಾಮಾನ್ಯಜನರೂ ಸಂಸ್ಕೃತವನ್ನು ಕಲಿಯಬೇಕೆಂಬ ಉದ್ದೇಶದಿಂದ **'ಸುರಸರಸ್ವತೀ ಸಭಾ'** ಎಂಬ ಸಂಸ್ಥೆಯನ್ನು ಸ್ಥಾಪಿಸಿದರು. ಶ್ರೀಶ್ರೀಗಳವರು ಅತ್ಯಂತ ಕರುಣಾಶಾಲಿಗಳಾಗಿದ್ದರು. ಶೃಂಗೇರಿಯ ಸುತ್ತಮುತ್ತಲಿನ ಜನ ಸಾಮಾನ್ಯರ ಉಪಯೋಗಕ್ಕಾಗಿ ಶೃಂಗೇರಿಯಲ್ಲಿ **'ಶಾರದಾ ಧನ್ವಂತರಿ'** ಎಂಬ ಹೆಸರಿನಿಂದ ಒಂದು ಆಸ್ಪತ್ರೆಯನ್ನು ಸ್ಥಾಪಿಸಿದರು. ದೇಶ -ವಿದೇಶಗಳಿಂದ ಅನೇಕ ಜನರು ಶ್ರೀಶ್ರೀಗಳವರ ಮಾರ್ಗದರ್ಶನವನ್ನು, ಆಶೀರ್ವಾದವನ್ನು ಪಡೆಯುವುದಕ್ಕೋಸ್ಕರ ಶೃಂಗೇರಿಗೆ ಆಗಮಿಸುತ್ತಿದ್ದರು. ಅವರ ದರ್ಶನಮಾತ್ರದಿಂದಲೇ ಸಂತೃಪ್ತರಾಗಿ ಧನ್ಯತಾಭಾವವನ್ನು ಹೊಂದುತ್ತಿದ್ದರು. ಸಂಕಷ್ಟದಲ್ಲಿದ್ದವರಿಗೆ ಶ್ರೀಶ್ರೀಗಳವರ ದರ್ಶನ, ಸಾಂತ್ವನದ ನುಡಿಗಳೇ ಕಷ್ಟಪರಿಹಾರಕವಾಗಿದ್ದವು. ರಾಷ್ಟ್ರಪತಿ, ಪ್ರಧಾನಮಂತ್ರಿ ಮೊದಲಾದ ಗಣ್ಯವ್ಯಕ್ತಿಗಳೂ ಶ್ರೀಶ್ರೀಗಳವರ ದರ್ಶನಕ್ಕಾಗಿ, ಅನುಗ್ರಹಕ್ಕಾಗಿ ಶೃಂಗೇರಿಗೆ ಆಗಮಿಸುತ್ತಿದ್ದರು.

ಶ್ರೀಜಗದ್ಗುರು ಮಹಾಸ್ವಾಮಿಗಳವರು ತಮ್ಮ ಸನ್ನಿಧಿಯಲ್ಲಿ ಶಾಸ್ತ್ರಾಧ್ಯಯನವನ್ನು ಮಾಡಬೇಕೆಂಬ ಸಂಕಲ್ಪದಿಂದ ಆಗಮಿಸಿದ ಆಂಧ್ರಪ್ರದೇಶದ ತಂಗಿರಾಲ ಸೀತಾರಾಮಾಂಜನೇಯ ಶರ್ಮಾ ಎಂಬ ಬ್ರಹ್ಮಚಾರಿಗೆ ೧೧-೧೧-೧೯೭೪ ರಂದು ಸನ್ಯಾಸಾಶ್ರಮವನ್ನು ನೀಡಿ, 'ಭಾರತೀತೀರ್ಥ' ಎಂಬ ಯೋಗಪಟ್ಟವನ್ನು ಅನುಗ್ರಹಿಸಿ ತಮ್ಮ ಉತ್ತರಾಧಿಕಾರಿ ಶಿಷ್ಯರನ್ನಾಗಿ ಸ್ವೀಕರಿಸಿದರು.

ವಿವೇಕಿಗಳೂ, ಮಹಾಪ್ರಜ್ಞಾಶಾಲಿಗಳೂ, ಕರುಣಾಮೂರ್ತಿಗಳೂ ಆದ ಜಗದ್ಗುರು ಶ್ರೀಶ್ರೀಶ್ರೀಅಭಿನವ ವಿದ್ಯಾತೀರ್ಥ ಮಹಾಸ್ವಾಮಿಗಳವರು ಶುಕ್ಲ ಸಂ॥ದ ಭಾದ್ರಪದ ಕೃಷ್ಣ ಸಪ್ತಮಿ (೨೧-೯-೧೯೮೯)ಯಂದು ತಮ್ಮ ಪಾರ್ಥಿವ ಶರೀರವನ್ನು ತ್ಯಜಿಸಿ ಬ್ರಹ್ಮೈಕ್ಯರಾದರು.

ಶೃಂಗೇರಿಯ ಪೀಠಾಧಿಪತಿ ಜಗದ್ಗುರು ಶ್ರೀಶ್ರೀಶ್ರೀ ಭಾರತೀತೀರ್ಥಮಹಾಸ್ವಾಮಿಗಳು

ಭಾರತೀ ಕರುಣಾಪಾತ್ರಂ ಭಾರತೀಪದ ಭೂಷಣಮ್ ।
ಭಾರತೀಪದಮಾರೂಢಂ ಭಾರತೀತೀರ್ಥಮಾಶ್ರಯೇ ॥

ಮಹಿಮಾನ್ವಿತವಾದ ಈ ದಕ್ಷಿಣಾಮ್ನಾಯ ಶಾರದಾಪೀಠದಲ್ಲಿ ೩೬ನೇ ಅಧಿಪತಿಗಳಾಗಿ ಇಂದು ಪೀಠವನ್ನಲಂಕರಿಸಿರುವವರು ಜಗದ್ಗುರು **ಶ್ರೀಶ್ರೀಶ್ರೀ ಭಾರತೀತೀರ್ಥ** ಮಹಾಸ್ವಾಮಿಗಳವರು. ತೀವ್ರವಾದ ತಪೋನುಷ್ಠಾನ, ಅಸಾಮಾನ್ಯ ಪ್ರಜ್ಞೆ, ಅದ್ವಿತೀಯ ಶಾಸ್ತ್ರಪಾಂಡಿತ್ಯ, ಬಹುಭಾಷಾ ವೈದುಷ್ಯ, ಅಮೋಘ ವಾಗ್ಮಿತ್ವ, ಶಿಷ್ಯಜನ ವಾತ್ಸಲ್ಯ ಮೊದಲಾದ ಸದ್ಗುಣಗಳಿಂದ ಶೋಭಿತರಾದ ಶ್ರೀಶ್ರೀಮಹಾಸ್ವಾಮಿಗಳವರು ಯತಿಧರ್ಮವನ್ನು, ಜಗದ್ಗುರು ಪೀಠದ ಸಂಪ್ರದಾಯಗಳನ್ನು ಕಟ್ಟೆಚ್ಚರಿಕೆಯಿಂದ ಪಾಲಿಸುತ್ತಾ ಶಿಷ್ಯಸಮೂಹವನ್ನನುಗ್ರಹಿಸುತ್ತಾ ವಿರಾಜಮಾನರಾಗಿದ್ದಾರೆ.

ಶ್ರೀಶ್ರೀಗಳವರು ಆಂಧ್ರಪ್ರದೇಶದ ಗುಂಟೂರು ಜಿಲ್ಲೆಯ ನರಸರಾವುಪೇಟೆ ಎಂಬ ಪಟ್ಟಣದಲ್ಲಿ ವಾಸವಾಗಿದ್ದ ಸನಾತನ ವೈದಿಕಸಂಪ್ರದಾಯದಲ್ಲಿ ಶ್ರದ್ಧೆಯುಳ್ಳ, ವೈದಿಕಕುಟುಂಬದ ವೇ॥ಬ್ರ॥ಶ್ರೀ ತಂಗಿರಾಲ ವೆಂಕಟೇಶ್ವರ ಅವಧಾನಿಗಳು, ಶ್ರೀಮತಿ ಅನಂತಲಕ್ಷ್ಮಮ್ಮ ಎಂಬ ಪುಣ್ಯ ದಂಪತಿಗಳ ಪುತ್ರರಾಗಿ ಖರ ಸಂವತ್ಸರ ಚೈತ್ರ ಶುದ್ಧ ಷಷ್ಠಿ ಬುಧವಾರದಂದು (೧೯೫೧ ಏಪ್ರಿಲ್ ೧೧) ಜನಿಸಿದರು. ಇವರ ಪೂರ್ವಾಶ್ರಮದ ಹೆಸರು ಸೀತಾರಾಮಾಂಜನೇಯಲು ಎಂದು. ಗರ್ಭಾಷ್ಟಮ ವಯಸ್ಸಿನಲ್ಲಿ ಉಪನಯನ ಸಂಸ್ಕಾರವಾದ ನಂತರ ಇವರು ತಮ್ಮ ತಂದೆಯವರ ಬಳಿ ಸ್ವಶಾಖೆಯಾದ ಕೃಷ್ಣಯಜುರ್ವೇದ ಮತ್ತು ಸ್ಮಾರ್ತಗಳನ್ನಭ್ಯಸಿಸುತ್ತಾ, ಶಾಲೆಯಲ್ಲಿ ಆಂಗ್ಲ ವಿದ್ಯೆಯನ್ನು ಕಲಿಯುತ್ತಿದ್ದರು. ಶಾಲೆಯಿಂದ ಬಂದ ನಂತರ ಬಿಡುವು ದೊರೆತಾಗಲೆಲ್ಲಾ ಸಂಸ್ಕೃತದ ಅಧ್ಯಯನದಲ್ಲಿ ತೊಡಗಿಸಿಕೊಳ್ಳುತ್ತಿದ್ದರು. ಹೀಗಾಗಿ ಕೇವಲ ತಮ್ಮ ಎಂಟನೇ ವಯಸ್ಸಿಗೇ

ಸಂಸ್ಕೃತದಲ್ಲಿ ನಿರರ್ಗಳವಾಗಿ ಮಾತನಾಡುವಂತಹ ಸಾಮರ್ಥ್ಯವನ್ನು ಸಂಪಾದಿಸಿದ್ದರು. ಬಾಲ್ಯದಿಂದಲೇ ಭಗವಂತನಲ್ಲಿ ಭಕ್ತಿ, ವಿಷಯಗಳಲ್ಲಿ ವಿರಕ್ತಿ, ಸತ್ಪುರುಷರಲ್ಲಿ ಆಸಕ್ತಿಯುಳ್ಳವರಾಗಿದ್ದ ಇವರು ಪ್ರತಿನಿತ್ಯವೂ ಶಾಸ್ತ್ರೋಕ್ತವಾದ ರೀತಿಯಲ್ಲಿ ಸಕಾಲದಲ್ಲಿ ಸಂಧ್ಯಾವಂದನಾದಿ ನಿತ್ಯ ಕರ್ಮಗಳನ್ನನುಷ್ಠಿಸುತ್ತಿದ್ದರು.

ಶೃಂಗೇರಿ ಶಾರದಾಪೀಠದಲ್ಲಿ ಆಗ ವಿರಾಜಮಾನರಾಗಿದ್ದ ಜಗದ್ಗುರು ಶ್ರೀಶ್ರೀಶ್ರೀ ಅಭಿನವವಿದ್ಯಾತೀರ್ಥ ಮಹಾಸ್ವಾಮಿಗಳವರು ಸನಾತನ ಧರ್ಮ ಪ್ರಚಾರಾರ್ಥವಾಗಿ ವಿಜಯಯಾತ್ರೆಯನ್ನು ಕೈಗೊಂಡು ೧೯೬೧ರಲ್ಲಿ ನರಸರಾವುಪೇಟೆಗೆ ದಯಮಾಡಿಸಿದ್ದರು. ಆ ಸಂದರ್ಭದಲ್ಲಿ ಜಗದ್ಗುರುಗಳ ದರ್ಶನವನ್ನು ಮಾಡುವ ಭಾಗ್ಯ ಸೀತಾರಾಮಾಂಜನೇಯಶರ್ಮರಿಗೆ ಒದಗಿಬಂತು. ಹತ್ತುವರ್ಷ ವಯಸ್ಸಿನ ಆ ಬಾಲಬ್ರಹ್ಮಚಾರಿಯು ಶ್ರೀ ಶ್ರೀಜಗದ್ಗುರುಗಳೊಂದಿಗೆ ಸಂಸ್ಕೃತದಲ್ಲಿ ಮಾತನಾಡಿದರು. ಬಾಲಕನ ವಿಧೇಯತೆ, ಸ್ಪಷ್ಟವಾದ ಉಚ್ಚಾರಣೆ, ಗುರುಭಕ್ತಿ ಇತ್ಯಾದಿಗಳನ್ನು ಕಂಡು ಶ್ರೀಶ್ರೀಗಳವರು ತುಂಬ ಸಂತುಷ್ಟರಾಗಿ ಬಾಲಕನಿಗೆ ಫಲವನ್ನನುಗ್ರಹಿಸಿ ಹೃತ್ಪೂರ್ವಕವಾಗಿ ಅನುಗ್ರಹಿಸಿದರು. ಶ್ರೀಗುರುದರ್ಶನವು ಆ ಬ್ರಹ್ಮಚಾರಿಯ ವಿಷಯದಲ್ಲಿ ಅಗಾಧವಾದ ಪ್ರಭಾವವನ್ನು ಬೀರಿತು. ಶ್ರೀಗುರುಗಳ ದಿವ್ಯ ಮೂರ್ತಿಯು ಆ ಬ್ರಹ್ಮಚಾರಿಯ ಹೃದಯದಲ್ಲಿ ಸ್ಥಿರವಾಗಿ ನಿಂತಿತು. ಅಂದಿನಿಂದ ಆ ಬ್ರಹ್ಮಚಾರಿಯು ಶ್ರೀಗುರುಗಳವರನ್ನೇ ನಿರಂತರವಾಗಿ ಸ್ಮರಿಸುತ್ತಿದ್ದರು.

ಬ್ರಹ್ಮಚಾರಿ ಸೀತಾರಾಮಾಂಜನೇಯಶರ್ಮರಿಗೆ ಬಾಲ್ಯದಿಂದಲೇ ಇದ್ದ ವೈರಾಗ್ಯವು ೧೯೬೬ರಲ್ಲಿ ಪಕ್ವಗೊಂಡಿತು. ಸ್ವಲ್ಪಕಾಲದನಂತರ ಅದು ತೀವ್ರವಾಗುತ್ತಾ ಬಂದು ತಮ್ಮ ಜೀವನದ ಗುರಿ ಆಧ್ಯಾತ್ಮವೇ ಹೊರತು ಪ್ರಾಪಂಚಿಕ ಸುಖ-ಭೋಗಗಳಲ್ಲವೆಂದೂ, ತಮಗೆ ಮಾರ್ಗದರ್ಶನ ನೀಡುವ ಏಕೈಕ ಗುರುಗಳು ಶ್ರೀಶ್ರೀಶ್ರೀ ಅಭಿನವವಿದ್ಯಾತೀರ್ಥರೇ ಎಂದೂ, ಅವರ ಪಾದಸೇವೆಯನ್ನು ಮಾಡುತ್ತಾ ಅವರ ಬಳಿಯೇ ಇದ್ದು ತಮ್ಮ ಜೀವನವನ್ನು ಧನ್ಯವಾಗಿಸಿಕೊಳ್ಳಬೇಕೆಂದೂ ಅವರು ನಿರ್ಧರಿಸಿದರು. ತೀವ್ರವಾದ ಈ ಇಚ್ಛೆಯಿಂದ ಕೂಡಿದ ಶ್ರೀಶರ್ಮರು ಕೂಡಲೇ ಮನೆಯನ್ನು ಬಿಟ್ಟು ಗುರುಗಳ ಸನ್ನಿಧಿಗೆ ತೆರಳಿದರು.

ಧರ್ಮಯಾತ್ರೆಯನ್ನು ಕೈಗೊಂಡಿದ್ದ ಜಗದ್ಗುರು ಶ್ರೀಶ್ರೀಶ್ರೀ ಅಭಿನವವಿದ್ಯಾತೀರ್ಥ ಮಹಾಸನ್ನಿಧಾನಂಗಳವರು ೧೯೬೬ರಲ್ಲಿ ಉಜ್ಜಯಿನಿಯಲ್ಲಿ ಚಾತುರ್ಮಾಸ್ಯ ದೀಕ್ಷೆಯನ್ನು ನೆರವೇರಿಸುತ್ತಿದ್ದರು. ಶ್ರೀಶರ್ಮರು ಉಜ್ಜಯಿನಿಗೆ ಬಂದು ಶ್ರೀಶ್ರೀಜಗದ್ಗುರು ಮಹಾಸ್ವಾಮಿಗಳವರ ಚರಣಸನ್ನಿಧಿಯಲ್ಲಿ ನಮಸ್ಕರಿಸಿ, ತಮ್ಮನ್ನು ಶಿಷ್ಯನನ್ನಾಗಿ ಸ್ವೀಕರಿಸಿ ತಮಗೆ ಶಾಸ್ತ್ರಭಿಕ್ಷೆಯನ್ನು ನೀಡಬೇಕೆಂದು ಪ್ರಾರ್ಥಿಸಿದಾಗ, ಕರುಣಾಸಮುದ್ರರಾದ ಶ್ರೀಜಗದ್ಗುರುಗಳವರು ಆ ಬ್ರಹ್ಮಚಾರಿಗೆ ಅಭಯವನ್ನು ನೀಡಿ ಮರುದಿನದಿಂದಲೇ ಶಾಸ್ತ್ರಪಾಠವನ್ನು ಪ್ರಾರಂಭಿಸಿದರು. ತೀಕ್ಷ್ಣವಾದ ಬುದ್ಧಿಮತ್ತೆ, ಏಕಾಗ್ರತೆ, ಗುರುವಾಕ್ಯದಲ್ಲಿ ಅಚಲನಿಷ್ಠೆ, ಸತತಪರಿಶ್ರಮ, ಗುರುವಿನಲ್ಲಿ ಪೂರ್ಣ ಶರಣಾಗತಿ ಇವು ಆ ಬ್ರಹ್ಮಚಾರಿಯಲ್ಲಿ

ಸಹಜವಾಗಿದ್ದವು. ಶ್ರೀ ಶ್ರೀಜಗದ್ಗುರುಗಳವರ ಪರಿಪೂರ್ಣಾನುಗ್ರಹದಿಂದ ಶ್ರೀಶರ್ಮರು ಎಂಟೇ ವರ್ಷಗಳಲ್ಲಿ ನ್ಯಾಯ, ವೇದಾಂತ, ಮೀಮಾಂಸಾ ಮೊದಲಾದ ಸಕಲ ಶಾಸ್ತ್ರಗಳಲ್ಲೂ ನಿಷ್ಣಾತರಾದರು.

ತಮ್ಮ ನೆಚ್ಚಿನ ಶಿಷ್ಯನ ಅಸಾಧಾರಣ ಪಾಂಡಿತ್ಯ, ಕುಶಾಗ್ರಬುದ್ಧಿ, ನಿಷ್ಕಳಂಕವಾದ ಚರಿತ್ರೆ ಮತ್ತು ಎಲ್ಲಕ್ಕಿಂತಲೂ ಮಿಗಿಲಾದ ತೀವ್ರವೈರಾಗ್ಯವನ್ನು ಕಂಡು ಶ್ರೀಶಾರದಾದೇವಿಯ ಪ್ರೇರಣೆಯಂತೆ ಜಗದ್ಗುರು ಶ್ರೀಶ್ರೀಶ್ರೀಅಭಿನವ ವಿದ್ಯಾತೀರ್ಥ ಮಹಾಸ್ವಾಮಿಗಳವರು ಆನಂದ ಸಂವತ್ಸರದ ಆಶ್ವಯುಜ ಬಹುಳ ದ್ವಾದಶಿಯಂದು (೧೯೭೪ ನವಂಬರ್ ೧೧) ಬ್ರಹ್ಮಚಾರಿ ಸೀತಾರಾಮಾಂಜನೇಯ ಶರ್ಮರಿಗೆ ಸನ್ಯಾಸಾಶ್ರಮವನ್ನು ಅನುಗ್ರಹಿಸಿ **'ಭಾರತೀತೀರ್ಥ'** ಎಂಬ ಯೋಗಪಟ್ಟವನ್ನು ನೀಡಿ ಅವರನ್ನೇ ತಮ್ಮ ಉತ್ತರಾಧಿಕಾರಿ ಶಿಷ್ಯರನ್ನಾಗಿ ಘೋಷಿಸಿದರು.

ಶ್ರೀ ಶ್ರೀ ಶ್ರೀ ಅಭಿನವವಿದ್ಯಾತೀರ್ಥರು ತಮ್ಮ ಶಿಷ್ಯರಾದ ಶ್ರೀ ಶ್ರೀ ಶ್ರೀ ಶ್ರೀಭಾರತೀತೀರ್ಥರ ಬಗ್ಗೆ ಅಪಾರವಾದ ಕರುಣೆಯನ್ನು ಹೊಂದಿದ್ದರು. ಶ್ರೀಮಠದ ಸಂಪ್ರದಾಯಗಳನ್ನು, ಆಶ್ರಮ ನಿಯಮಗಳನ್ನು ಅವರಿಗೆ ಚೆನ್ನಾಗಿ ಬೋಧಿಸಿ ತಮ್ಮೊಡನೆ ಭಾರತದಾದ್ಯಂತ ಧರ್ಮಯಾತ್ರೆ ಮಾಡಿಸಿ, ಸ್ವಲ್ಪಕಾಲದ ನಂತರ ಸ್ವತಂತ್ರವಾಗಿ ಯಾತ್ರೆ ಕೈಗೊಳ್ಳುವಂತೆ ಅನುಗ್ರಹಿಸಿದರು. ಶಿಷ್ಯ ಸ್ವಾಮಿಗಳೂ ಸಹ ಯಾವಾಗಲೂ ಗುರುಗಳ ಛಾಯಾನುವರ್ತಿಗಳಾಗಿದ್ದು ಅವರ ಮಾತನ್ನು ಸ್ವಲ್ಪವೂ ತಪ್ಪದೇ ಅನುಸರಿಸಿ ಗುರುಗಳಿಗೆ ಸಂತೋಷವನ್ನುಂಟುಮಾಡುತ್ತಿದ್ದರು.

೧೯೮೯ರಲ್ಲಿ ಜಗದ್ಗುರು ಶ್ರೀ ಶ್ರೀ ಶ್ರೀಅಭಿನವವಿದ್ಯಾತೀರ್ಥಮಹಾಸ್ವಾಮಿಗಳು ಮುಕ್ತರಾದಾಗ ಅವರ ಅಪ್ಪಣೆಯಂತೆ ಶ್ರೀಶ್ರೀಗಳವರು ದಕ್ಷಿಣಾಮ್ನಾಯ ಶ್ರೀಶಾರದಾಪೀಠದಲ್ಲಿ ಮೂವತ್ತಾರನೇ ಅಧಿಪತಿಗಳಾಗಿ ಪಟ್ಟಾಭಿಷಿಕ್ತರಾದರು. ಪಟ್ಟಾಭಿಷೇಕ ಸಮಾರಂಭವು ಶುಕ್ಲ ಸಂವತ್ಸರದ ಆಶ್ವಯುಜ ಕೃಷ್ಣ ಪಂಚಮಿಯಂದು (೧೯೮೯ ಅಕ್ಟೋಬರ್ ೧೯) ಬಹಳ ವಿಜೃಂಭಣೆಯಿಂದ ನೆರವೇರಿತು. ಶ್ರೀ ಶ್ರೀಮಹಾಸ್ವಾಮಿಗಳವರು ಪಟ್ಟಾಭಿಷಿಕ್ತರಾದ ನಂತರ ಶ್ರೀಮಠವನ್ನು ಸರ್ವತೋಮುಖವಾಗಿ ಅಭಿವೃದ್ಧಿ ಪಡಿಸುತ್ತಿದ್ದಾರೆ.

ಜಗದ್ಗುರು ಶ್ರೀಶ್ರೀಶ್ರೀ ಭಾರತೀತೀರ್ಥರು ಕೈಗೊಂಡಿರುವ ಧಾರ್ಮಿಕ, ಸಾಮಾಜಿಕ, ಶೈಕ್ಷಣಿಕ, ಮಹತ್ಕಾರ್ಯಗಳು ಸಾವಿರಾರು. ಶ್ರೀ ಶ್ರೀಗಳವರು ತಮ್ಮ ಗುರುವರ್ಯರು ಆರಂಭಿಸಿದ್ದ ಎಲ್ಲ ಯೋಜನೆಗಳನ್ನೂ ಯಶಸ್ವಿಯಾಗಿ ಪೂರ್ಣಗೊಳಿಸಿದರು. ಶಾರದಾ ದೇವಾಲಯವಿರುವ ಶ್ರೀಮಠಕ್ಕೂ ತುಂಗಾನದಿಯ ಆಚೆಯಲ್ಲಿರುವ ನರಸಿಂಹವನಕ್ಕೂ ಸಂಪರ್ಕವನ್ನು ಕಲ್ಪಿಸುವ ಸೇತುವೆಯನ್ನು ನಿರ್ಮಿಸುವ ಒಂದು ದೊಡ್ಡ ಯೋಜನೆಯನ್ನು ಶ್ರೀಮಹಾಸನ್ನಿಧಾನದವರು ಸಂಕಲ್ಪಿಸಿ ೧೯೮೭ರಲ್ಲಿ ಅದರ ಕಾರ್ಯವನ್ನು ಆರಂಭಿಸಿದ್ದರು. ಶ್ರೀಶ್ರೀಗಳವರು ಅದನ್ನು ಯಶಸ್ವಿಯಾಗಿ ಪೂರೈಸಿ ಆ ಸೇತುವೆಯನ್ನು ೧೯೯೧ರಲ್ಲಿ

ಉದ್ಘಾಟಿಸಿ ಅದಕ್ಕೆ ತಮ್ಮ ಗುರುಗಳ ಸ್ಮರಣಾರ್ಥವಾಗಿ **'ವಿದ್ಯಾತೀರ್ಥ ಸೇತು'** ಎಂದು ನಾಮಕರಣ ಮಾಡಿದರು. ಸಾಮಾನ್ಯ ಜನರೂ ಸಂಸ್ಕೃತವನ್ನು ಕಲಿಯಬೇಕೆಂಬ ಮಹೋದ್ದೇಶದಿಂದ ತಮ್ಮ ಗುರುಗಳಿಂದ ಸ್ಥಾಪಿತವಾದ **"ಶ್ರೀಸುರಸರಸ್ವತೀ ಸಭಾ"** ಎಂಬ ಸಂಸ್ಥೆಯನ್ನು ಅಭಿವೃದ್ಧಿಪಡಿಸಿದರು. ಇದರಿಂದ ದೇಶದಾದ್ಯಂತ ಸಂಸ್ಕೃತದ ಪ್ರಚಾರವಾಗುತ್ತಿದೆ. ಜನ ಸಾಮಾನ್ಯರ ಉಪಯೋಗಕ್ಕಾಗಿ ಶ್ರೀಮಹಾಸನ್ನಿಧಾನದವರು ಶೃಂಗೇರಿಯಲ್ಲಿ ಸ್ಥಾಪಿಸಿದ "ಶ್ರೀಶಾರದಾ ಧನ್ವಂತರಿ" ಆಸ್ಪತ್ರೆಯನ್ನು ಶ್ರೀಶ್ರೀಗಳವರು ತುಂಬಾ ಅಭಿವೃದ್ಧಿ ಪಡಿಸಿದರು.

ಇಂದಿನ ಶಿಕ್ಷಣಪದ್ಧತಿಯ ಅಡಿಪಾಯದ ಮೇಲೆ ಕಿರಿಯ ಪೀಳಿಗೆಯಲ್ಲಿ ಸನಾತನ ಧರ್ಮದ ಜಾಗೃತಿ ಮೂಡಿಸಲು ಶ್ರೀ ಶ್ರೀ ಜಗದ್ಗುರು ಮಹಾಸ್ವಾಮಿಗಳವರ ಆದೇಶ ಹಾಗೂ ಮಾರ್ಗದರ್ಶನದಂತೆ ಶ್ರೀ ಶ್ರೀ ಜಗದ್ಗುರು ಮಹಾಸಂಸ್ಥಾನದ ಆಶ್ರಯದಲ್ಲಿ ಮುನ್ನಡೆಯುತ್ತಿರುವ ಶೃಂಗೇರಿಯಲ್ಲಿನ ಶ್ರೀ **ಅಭಿನವ ವಿದ್ಯಾತೀರ್ಥ ಪ್ರೌಢಶಾಲೆ, ಬೆಂಗಳೂರಿನ ಜ್ಞಾನೋದಯ ಶಾಲೆ, ನವದೆಹಲಿಯ ಶಾರದಾ ಇನ್‌ಸ್ಟಿಟ್ಯೂಟ್ ಆಫ್ ಮೇನೇಜ್ ಮೆಂಟ್, ಕಾಲಟಿಯ ಶ್ರೀ ಆದಿಶಂಕರ ಇಂಜನೀರಿಂಗ್ ಕಾಲೇಜ್, ಆಯುರ್ವೇದ ಕಾಲೇಜ್ ಮೊದಲಾದವುಗಳು** ಆಯಾ ಪ್ರದೇಶದ ಸುತ್ತ ಮುತ್ತಲಿನ ವಿದ್ಯಾರ್ಥಿವೃಂದಕ್ಕೆ ಹಾಗೂ ಪೋಷಕರಿಗೆ ಅಚ್ಚುಮೆಚ್ಚಾಗಿದ್ದು ಮಾದರಿ ಕೇಂದ್ರಗಳಾಗಿ ಪ್ರಸಿದ್ಧಿ ಪಡೆದಿವೆ.

ಶೃಂಗೇರಿ ಹಾಗೂ ಸುತ್ತಮುತ್ತಲಿನ ತಾಲೂಕುಗಳ ಗ್ರಾಮೀಣ ಪ್ರದೇಶದ ಸುಮಾರು ಮೂವತ್ತು ಸಾವಿರಕ್ಕೂ ಹೆಚ್ಚಿನ ಶಾಲಾ ವಿದ್ಯಾರ್ಥಿಗಳಿಗೆ ಮಧ್ಯಾಹ್ನ ಶ್ರೀ ಶಾರದಾ ಪ್ರಸಾದ ರೂಪವಾಗಿ ಉಚಿತ ಭೋಜನ ವ್ಯವಸ್ಥೆ, ಭೂಕಂಪ, ಚಂಡಮಾರುತ ಮೊದಲಾದ ಪ್ರಾಕೃತಿಕ ವಿಕೋಪಗಳ ಸಂದರ್ಭದಲ್ಲಿ ಪರಿಹಾರ ನಿಧಿಗೆ ಲಕ್ಷಾಂತರ ರೂ.ಗಳ ಸಹಾಯ, ದತ್ತಿಗ್ರಾಮಯೋಜನೆ, ಸ್ವಚ್ಛಗ್ರಾಮಯೋಜನೆ, ಅಶಕ್ತ ಶಿಶುಸಂರಕ್ಷಣಾ ಯೋಜನೆ, ಬುದ್ಧಿಮಾಂದ್ಯ ಮಕ್ಕಳಿಗಾಗಿ ಬೆಂಗಳೂರು, ನೋಯ್ಡ ಮೊದಲಾದ ಕಡೆಗಳಲ್ಲಿ ವಿಶೇಷಶಾಲಾ ಸ್ಥಾಪನೆ, ಅನಾಥಾಲಯ ಸ್ಥಾಪನೆ, ಪ್ರಶಾಂತವಾದ ಜೀವನವನ್ನು ನಡೆಸಬಯಸುವವರಿಗಾಗಿ ವೃದ್ಧಾಶ್ರಮ ನಿರ್ಮಾಣ ಹೀಗೆ ಶ್ರೀಶ್ರೀಜಗದ್ಗುರುಗಳವರ ಆದೇಶಾನುಸಾರವಾಗಿ ಶ್ರೀಮಠದಿಂದ ನೆರವೇರುತ್ತಿರುವ ಸಾಮಾಜಿಕ ಕಾರ್ಯಗಳು ಹಲವಾರು.

ಶೃಂಗೇರಿಯಲ್ಲಿ ಶ್ರೀಶಂಕರಭಗವತ್ಪಾದಾಚಾರ್ಯರಿಗೆ **ಭವ್ಯವಾದ ದೇವಾಲಯದ ನಿರ್ಮಾಣ,** ಶ್ರೀಕ್ಷೇತ್ರಕ್ಕೆ ಆಗಮಿಸುವ ಭಕ್ತಾದಿಗಳ ಸೌಕರ್ಯಕ್ಕಾಗಿ ಅನೇಕ ವಸತಿ ಗೃಹಗಳ ಹಾಗೂ ಏಕಕಾಲದಲ್ಲಿ ಮೂರುಸಾವಿರ ಜನ ಕುಳಿತು ಭೋಜನ ಪ್ರಸಾದವನ್ನು ಸ್ವೀಕರಿಸಬಹುದಾದ ಬೃಹತ್ತಾದ **ಭೋಜನಶಾಲೆಯ ನಿರ್ಮಾಣ,** ಶ್ರೀಮಠದಲ್ಲಿ ಸುಮಾರು ಆರುನೂರು ವರ್ಷಗಳ ಕಾಲದಿಂದ ರಕ್ಷಿಸಿಕೊಂಡು ಬರುತ್ತಿರುವ **ತಾಳಪತ್ರ ಗ್ರಂಥ**

(ಓಲೆಗರಿ)ಗಳನ್ನು ಮೈಕ್ರೋಫಿಲ್ಮ್ ರೂಪದಲ್ಲಿ ಸಂಗ್ರಹಿಸುವ ಸಲುವಾಗಿ ಮತ್ತು ಅಪೂರ್ವವಾದ ಗ್ರಂಥಗಳ ಪ್ರಕಾಶನಕ್ಕಾಗಿ ಶೃಂಗೇರಿಯ ನರಸಿಂಹವನದಲ್ಲಿ '**ಶ್ರೀಶಾಂಕರ ಅದ್ವೈತ ಶೋಧ ಕೇಂದ್ರ**'ದ ಸ್ಥಾಪನೆ, ಪ್ರತಿವರ್ಷವೂ ಒಬ್ಬ ಶ್ರೇಷ್ಠವಿದ್ವಾಂಸನಿಗೆ ಒಂದು ಲಕ್ಷರೂ.ಗಳ ಶ್ರೀಶಾರದಾಪೀಠ ಪ್ರಶಸ್ತಿ ಪ್ರದಾನ, ಶಂಕರ ಜಯಂತಿಯ ಸಮಯದಲ್ಲಿ ವೇದ ವಿದ್ವಾಂಸರ ಸಮ್ಮೇಳನ, ವಿನಾಯಕ ಚತುರ್ಥಿಯ ಸಂದರ್ಭದಲ್ಲಿ ಹತ್ತು ದಿನಗಳ ಕಾಲ ಶಾಸ್ತ್ರಸಭೆ, ವೇದ-ಶಾಸ್ತ್ರ ಪಂಡಿತರಿಗೆ ಸಮ್ಮಾನ, ಪ್ರತಿತಿಂಗಳೂ ಒಂದು ಸಾವಿರಕ್ಕೂ ಹೆಚ್ಚು ವೃದ್ಧವೇದ ಪಂಡಿತರಿಗೆ ಗೌರವ ಸಂಭಾವನೆಯ ನೀಡಿಕೆ, ಭಗವದ್ಗೀತೆಯ ಪ್ರಚಾರದ ಸಲುವಾಗಿ ಗೀತಾಜ್ಞಾನಯಜ್ಞ ಎಂಬ ಬೃಹದ್ಯೋಜನೆ, ಜನಸಾಮಾನ್ಯರಲ್ಲಿ ಭಗವದ್ಭಕ್ತಿಯನ್ನು ಮೂಡಿಸುವುದಕ್ಕಾಗಿ ಭಗವನ್ನಾಮಯಜ್ಞ ಮೊದಲಾದ ಯೋಜನೆಗಳು, ಎಲ್ಲೆಡೆ ಶ್ರೀಶಂಕರಭಗವತ್ಪಾದಾಚಾರ್ಯರ ಉಪದೇಶಗಳ ಪ್ರಸಾರಕ್ಕಾಗಿ ಉಪನ್ಯಾಸಕರಿಗೆ ತರಬೇತಿಯನ್ನು ನೀಡುವ ಶಾಂಕರತತ್ತ್ವಪ್ರಸಾರ ಅಭಿಯಾನ, ಶೃಂಗೇರಿ, ಬೆಂಗಳೂರು, ಮೈಸೂರು, ಹೈದರಾಬಾದ್, ಕಾಲಟಿ ಮೊದಲಾದ ಶಾಖಾಮಠಗಳಲ್ಲಿ ವೇದ ಪಾಠಶಾಲೆಗಳ ನಿರ್ವಹಣೆ, ಸನಾತನಧರ್ಮ ಪ್ರಚಾರಾರ್ಥವಾಗಿ ಅನೇಕ ಭಾಷೆಗಳಲ್ಲಿ ಪತ್ರಿಕೆಗಳ ಪ್ರಕಟಣೆ, ಶೃಂಗೇರಿ, ಬೆಂಗಳೂರು, ಬೆಳವಾಡಿ, ಕಾಲಟಿ, ದೆಹಲಿ ಮೊದಲಾದಕಡೆ ಇರುವ ಆಧುನಿಕ ವಿದ್ಯಾಲಯಗಳ ಆಡಳಿತ ವ್ಯವಸ್ಥೆ, ಹೀಗೆ ಶ್ರೀಮಹಾಸ್ವಾಮಿಗಳವರ ಸಂಕಲ್ಪಾನುಸಾರವಾಗಿ ಅನೇಕ ಕಾರ್ಯಗಳು ಶ್ರೀಮಠದಿಂದ ನೆರವೇರುತ್ತಿವೆ.

ದೇಶದ ಎಲ್ಲೆಡೆ ವ್ಯಾಪಿಸಿರುವ ಇನ್ನೂರಕ್ಕೂ ಹೆಚ್ಚು ಶಾಖಾ ಮಠಗಳು, ದೇವಾಲಯಗಳು, ಧರ್ಮಛತ್ರಗಳು ಇವೆಲ್ಲವುಗಳ ನಿರ್ವಹಣೆಯಲ್ಲಿ ಶ್ರೀಶ್ರೀಗಳವರು ತೋರುತ್ತಿರುವ ಕಾಳಜಿ ಅನನ್ಯ ಸಾಧಾರಣವಾದದು. ಶ್ರೀಶ್ರೀಗಳವರ ವಿಶೇಷ ಮುತುವರ್ಜಿಯಿಂದಲೇ ಆಚಾರ್ಯ ಶಂಕರರ ಜನ್ಮಭೂಮಿಯಾದ ಕಾಲಟಿ ಕ್ಷೇತ್ರದಲ್ಲಿ "**ಶ್ರೀಶಂಕರಾಚಾರ್ಯ ಸಂಸ್ಕೃತ ವಿಶ್ವವಿದ್ಯಾಲಯ**" ಮತ್ತು ಶೃಂಗೇರಿಯಲ್ಲಿ "**ಕೇಂದ್ರೀಯ ಸಂಸ್ಕೃತ ವಿದ್ಯಾ ಪೀಠ**"ವು ಸ್ಥಾಪನೆಗೊಂಡು ಮುನ್ನಡೆಯುತ್ತಿದೆ. ಶ್ರೀಶ್ರೀಗಳವರ ಆದೇಶದಂತೆ ಶ್ರೀಮಠದಲ್ಲಿ ಲೋಕಕ್ಷೇಮಾರ್ಥವಾಗಿ **ಸಹಸ್ರಚಂಡೀಯಾಗ, ಅತಿರುದ್ರಯಾಗ, ಕೋಟಿಕುಂಕುಮಾರ್ಚನೆ** ಮೊದಲಾದ ಅನೇಕ ಧಾರ್ಮಿಕ ಕಾರ್ಯಕ್ರಮಗಳು ಆಗಾಗ ನಡೆಯುತ್ತಿರುತ್ತವೆ.

ಧಾರ್ಮಿಕವಾಗಿ, ಸಾಮಾಜಿಕವಾಗಿ, ಶೈಕ್ಷಣಿಕವಾಗಿ, ಸರ್ವತೋಮುಖವಾಗಿ ಭಕ್ತಕೋಟಿಯನ್ನನುಗ್ರಹಿಸುತ್ತಿರುವ ಶ್ರೀಶ್ರೀಶ್ರೀ **ಭಾರತೀತೀರ್ಥ** ಮಹಾಸ್ವಾಮಿಗಳವರು ಜಗದ್ವಂದ್ಯರಾಗಿದ್ದಾರೆ.

◆

ವಿಜ್ಞಾನಿ ಸನ್ಯಾಸಿ ಶ್ರೀ ಶ್ರೀ ಪರಮಾನಂದಭಾರತೀ ಸ್ವಾಮಿಗಳು

– ಟಿ.ವಿ. ಶ್ರೀನಾಥಶಾಸ್ತ್ರಿ, ಬೆಂಗಳೂರು
ಪ್ರಧಾನ ಕಾರ್ಯದರ್ಶಿ,ಕನ್ನಡ ಗಣಕ ಪರಿಷತ್ತು,
೮೭೬೨೨೬೫೦೬೨
srinatha_sastry@yahoo.com

ಆಚಾರ್ಯ ಶಂಕರರ ಪರಂಪರೆಯಲ್ಲಿನ ಅಧ್ವರ್ಯುವಾಗಿ ನೈಜಸುಖವನ್ನು ಅರಸುವ ಭಕ್ತರೆಲ್ಲರಿಗೂ ಸನ್ಮಾರ್ಗವನ್ನು ಶ್ರೀ ಶ್ರೀ ಪರಮಾನಂದಭಾರತೀ ಸ್ವಾಮಿಗಳವರು ತೋರುತ್ತಾ ಎಲ್ಲರ ಪರಮ ಆನಂದಕ್ಕೆ ಕಾರಣರಾಗಿರುವವರು. ಅವರ ದಿವ್ಯದರ್ಶನ ಹಾಗೂ ಅವರ ಉಪದೇಶಾಮೃತಗಳ ಆಲಿಕೆ ನಮ್ಮ ಸೌಭಾಗ್ಯವಾಗಿದೆ. ಸತ್ಸಂಪ್ರದಾಯದ ಕುಟುಂಬದಲ್ಲಿ ಬೆಳೆದುಬಂದ ಶ್ರೀಶ್ರೀಗಳವರು ತಮ್ಮ ಪೂರ್ವಾಶ್ರಮದಲ್ಲಿ ಬೆಂಗಳೂರಿನ ರಾಷ್ಟ್ರೀಯ ವೈಮಾಂತರಿಕ್ಷ ಪ್ರಯೋಗಶಾಲೆಗಳಲ್ಲಿ ಕೆಲವು ವರ್ಷಗಳ ಕಾಲ ವಿಜ್ಞಾನಿಯಾಗಿ, ನಂತರ ಮದರಾಸಿನ ಐಐಟಿಯಲ್ಲಿ (ವಿಜ್ಞಾನ ಮತ್ತು ತಂತ್ರಜ್ಞಾನ ಶಿಕ್ಷಣ ಸಂಸ್ಥೆ) ೧೯೮೪ರವರೆಗೆ ಪ್ರಾಧ್ಯಾಪಕರಾಗಿ ಬಹುವಿಧದ ಕಾರ್ಯಗಳನ್ನು ನಿರ್ವಹಿಸಿದ್ದಾರೆ. ಅಲ್ಲಿ ಸುಮಾರು ೧೨ ವರ್ಷಗಳ ಕಾಲ ಅಧ್ಯಯನ, ಅಧ್ಯಾಪನಗಳಲ್ಲಿ ತೊಡಗಿಕೊಂಡು ನೂರಾರು ವಿದ್ಯಾರ್ಥಿಗಳಿಗೆ ಆತ್ಮೀಯ ಗುರುಗಳಾಗಿ ಪ್ರಸಿದ್ಧರಾಗಿದ್ದರು. ಈ ಲೌಕಿಕ ಜೀವನದ ಕರ್ತವ್ಯಗಳನ್ನು ಪರಿಪೂರ್ಣವಾಗಿ ನಿರ್ವಹಿಸುವುದರಲ್ಲಿ ಅತ್ಯಂತ ಯಶಸ್ವಿಯಾಗಿದ್ದ ಶ್ರೀಯುತರು ತಾವು ಗಳಿಸಿದ ಜ್ಞಾನದೈಸಿರಿಯನ್ನು ಆಧ್ಯಾತ್ಮಿಕ ಜೀವನಕ್ಕೆ ಸೋಪಾನಗಳನ್ನಾಗಿಸಿಕೊಂಡದ್ದು ಮಹತ್ವದ ಸಂಗತಿ. ತಮ್ಮ ಅಂತರ್ಯದಲ್ಲಿ ತುಡಿಯುತ್ತಿದ್ದ ವೇದ–ವೇದಾಂತಗಳ ಸಂದೇಶಗಳಿಂದ ಹಾಗೂ ಅವುಗಳ ವೈಜ್ಞಾನಿಕ ವಿಶ್ಲೇಷಣೆಗಳಿಂದ ತುಂಬಿದವರಾಗಿ ಆದಿ ಶಂಕರಾಚಾರ್ಯರ ವೇದಾಂತ ತತ್ವಗಳಿಂದ ಪ್ರಭಾವಿತರಾಗಿ ಸ್ವ ಇಚ್ಛೆಯಿಂದ ಪ್ರಾಧ್ಯಾಪಕ ಪದವಿಯನ್ನು ಬಿಟ್ಟು ೧೯೮೪ರಲ್ಲಿ ಶೃಂಗೇರಿಯಲ್ಲಿ ಶ್ರೀ ಶ್ರೀ ಶ್ರೀ ಅಭಿನವ ವಿದ್ಯಾತೀರ್ಥ ಮಹಾಸ್ವಾಮಿಗಳು ಮತ್ತು ಶ್ರೀ ಶ್ರೀ ಶ್ರೀ ಭಾರತೀತೀರ್ಥ ಮಹಾಸ್ವಾಮಿಗಳವರ ಆಶೀರ್ವಾದಗಳನ್ನು ಪಡೆದು ಅವರ ದಿವ್ಯ ಸಮ್ಮುಖದಲ್ಲಿ ಸನ್ಯಾಸವನ್ನು ಸ್ವೀಕರಿಸಿದರು. ಸನ್ಯಾಸ ದೀಕ್ಷೆಯನ್ನು ಪಡೆದ ನಂತರ ಶ್ರೀಶ್ರೀಗಳವರ ಸಾಧನೆಗಳು ಅಪಾರವಾಗಿವೆ.

ವಿಜ್ಞಾನದ ಹಲವಾರು ಕ್ಷೇತ್ರಗಳಲ್ಲಿ ಒದಗುವ ಸಮಸ್ಯೆಗಳನ್ನು ಭಾರತೀಯ ದರ್ಶನಶಾಸ್ತ್ರಗಳ ಆಳವಾದ ಅಧ್ಯಯನಗಳಿಂದ ಪರಿಹರಿಸಬಹುದು ಎಂದು ತೀವ್ರವಾಗಿ ಆಲೋಚಿಸಿದ ಪ್ರಥಮ ವ್ಯಕ್ತಿ ಶ್ರೀ ಶ್ರೀ ಪರಮಾನಂದಭಾರತೀ ಸ್ವಾಮಿಗಳು. ನಮ್ಮ ಜೀವನದಲ್ಲಿನ ಭೌತಿಕ ಕ್ರಿಯೆಗಳ ನಡೆನುಡಿಗಳ ಹಾಗೂ ಎಲ್ಲ ವ್ಯವಹಾರಗಳ ಮೂಲಗಳು, ಪರಸ್ಪರ ಅವಲಂಬನೆಗಳು ಮುಂತಾದವನ್ನು ಅರ್ಥ ಮಾಡಿಕೊಂಡು ಲೌಕಿಕ ಜೀವನದ ಅಗತ್ಯಗಳನ್ನು ಪೂರೈಸುವತ್ತ ಗಮನವನ್ನು ಕೇಂದ್ರೀಕರಿಸುವುದೇ ವಿಜ್ಞಾನಿಗಳ ಚಟುವಟಿಕೆ, ಅವರ ಸಾಧನೆಗಳಿಂದಾಗಿ ಭೌತಶಾಸ್ತ್ರ, ರಸಾಯನಶಾಸ್ತ್ರ, ಜೀವಶಾಸ್ತ್ರ, ಗಣಿತ ಶಾಸ್ತ್ರ, ಇತ್ತೀಚೆಗೆ ಗಣಕಶಾಸ್ತ್ರ ಮುಂತಾಗಿ ಅನೇಕ ವಿಜ್ಞಾನ ವಿಭಾಗಗಳು ರೂಪುಗೊಂಡಿವೆ. ಈ ವಿಭಾಗಗಳ ತಾರ್ಕಿಕ ದೃಢತೆಗೆ ಕಾರಣವಾಗಿರುವ ತಳಹದಿರೂಪವೆನಿಸಿದ ಅಂಶಗಳೇ ಇವುಗಳ ಅಗಾಧ ಬೆಳವಣಿಗೆಗಳಿಗೆ ಕಾರಣವಾಗಿವೆ. ಅಣು, ಪರಮಾಣು, ಎಲೆಕ್ಟ್ರಾನ್, ಪ್ರೋಟಾನ್, ನ್ಯೂಟನ್‌ನ ನಿಯಮಗಳು ಇತ್ಯಾದಿ ಅಂಶಗಳನ್ನು ಇಲ್ಲಿ ಹೆಸರಿಸಬಹುದು. ಆದರೂ ಬಹುಮಟ್ಟಿಗೆ ಪಾಶ್ಚಾತ್ಯ ವಿಚಾರವಂತರ ಆಲೋಚನಾ ಫಲಿತಗಳೆನ್ನಲಾಗಿರುವ ಈ ಮೂಲಾಂಶಗಳಲ್ಲಿ ಆಗಾಗ್ಗೆ ಅನೇಕ ಬದಲಾವಣೆಗಳೂ ಸುಧಾರಣೆಗಳೂ ನಡೆಯುತ್ತಲೇ ಇವೆ. ಈ ವಿಚಾರಗಳನ್ನು ಅಮೂಲ್ಯವಾದ ಭಾರತೀಯ ಚಿಂತನೆಯ ಹಿನ್ನೆಲೆಯಲ್ಲಿ ಮಥಿಸಿ ಸರಿಯಾಗಿ ನಿರೂಪಿಸಿದರೆ ಅನೇಕ ಅದ್ಭುತ, ಅಮೂಲ್ಯ, ಸಾರ್ವಕಾಲಿಕ ಹಾಗೂ ಸರ್ವೋಪಯೋಗಿ ಅಂಶಗಳು ಸಿದ್ಧಿಸುತ್ತವೆ. ಈ ರೀತಿಯ ಗುಣಾತ್ಮಕವಾದ ಪ್ರಯೋಗಗಳು ಆಗಬೇಕೆಂಬುದನ್ನು ಗುರುತಿಸಿದ ಶ್ರೀ ಶ್ರೀ ಪರಮಾನಂದಭಾರತೀ ಸ್ವಾಮಿಗಳವರು ಇಂತಹ ಹಲವು ಸುವ್ಯಸ್ಥಿತ ಚಟುವಟಿಕೆಗಳನ್ನು ಆರಂಭಿಸಿದ ಕೀರ್ತಿಗೆ ಭಾಜನರಾಗಿದ್ದಾರೆ. ಈ ಕುರಿತು ಅವರ ಮಾರ್ಗದರ್ಶನದಲ್ಲಿ ಮುಂದಿನ ವರ್ಷಗಳಲ್ಲಿ ನಡೆದ ಅನೇಕ ಮೌಲಿಕ ಹಾಗೂ ಅರ್ಥವತ್ತಾದ ಚಟುವಟಿಕೆಗಳು ಈ ವಿಚಾರಗಳಿಗೆ ಸಾಕ್ಷಿಯಾಗಿವೆ.

ತಪಶ್ಚರ್ಯೆ, ವೇದಾಂತಾಧ್ಯಯನ ಮುಂತಾದ ಸನ್ಯಾಸ ಜೀವನದ ವಿಧಿವಿಧಾನಗಳನ್ನು ತದೇಕಚಿತ್ತರಾಗಿ ನಿಷ್ಠೆಯಿಂದ ಪಾಲಿಸಿಕೊಂಡು ಬರುತ್ತಿರುವಾಗಲೇ ಮೇಲ್ಕಂಡ ವಿಚಾರಗಳನ್ನೂ ಚಿಂತಿಸುತ್ತಾ ಆಸಕ್ತರಿಗೆ ಸರಿಯಾದ ಮಾರ್ಗದರ್ಶನ ಮಾಡಲಾರಂಭಿಸಿದ್ದು ಶ್ರೀ ಶ್ರೀಗಳವರ ಅಮೂಲ್ಯ ಸಾಧನೆ. ಹೀಗೆ ವಿವಿಧ ವಿಚಾರಗಳನ್ನು ಮಥಿಸುವಾಗಲೇ ಅವರಿಗೆ ನಮ್ಮ ದೇಹದ ಪಂಚೇಂದ್ರಿಯಗಳ ವಿಷಯಗ್ರಹಣದ ವಿಚಾರ ಎದುರಾಯಿತು. ಉದಾಹರಣೆಗೆ ಅಲೆಗಳ ರೂಪದಲ್ಲಿರುವ ಶಬ್ದ ಹಾಗೂ ಬೆಳಕಿನ ಅಂಶಗಳು ಶ್ರವಣ ಹಾಗೂ ದೃಕ್ ಇಂದ್ರಿಯಗಳಾದ ಕಿವಿ ಹಾಗೂ ಕಣ್ಣುಗಳ ಮೂಲಕ ಒಳಸೇರುತ್ತವೆ. ಇವೇ ನಾವು ಕೇಳುವ ಮತ್ತು ನಾವು ನೋಡುವ (ಶಬ್ದಭಾವದ ಮತ್ತು ದೃಶ್ಯಭಾವದ) ವಿವಿಧ ವಿಷಯಗಳನ್ನು ಮನಸ್ಸಿನಲ್ಲಿ ಮೂಡಿಸುತ್ತವೆ. ಇವುಗಳೇ ವಿಜ್ಞಾನದಲ್ಲಿನ ಮೂಲ ತಾರ್ಕಿಕಾಂಶಗಳು. ಆದರೆ ಈ ಅಲೆಗಳ ಸಂವೇದನೆಯಿಂದ ಮಾತ್ರ

ನಮ್ಮಲ್ಲಿ ಶಬ್ದ ಮತ್ತು ದೃಶ್ಯದ ವಿಷಯಗ್ರಹಣ ಪರಿಪೂರ್ಣವಾಗುವುದಿಲ್ಲ ಎಂಬುದನ್ನು ನಾವು ಮುಖ್ಯವಾಗಿ ಗಮನಿಸಬೇಕು. ಏಕೆಂದರೆ, ನಾವು ಯಾವುದೋ ಒಂದು ವಿಷಯದಲ್ಲಿ ಪೂರ್ಣ ಮನಸ್ಕರಾಗಿರುವಾಗ ಕೆಲವು ವೇಳೆ ನಮ್ಮ ಮುಂದೆ ಯಾರಾದರೂ ಹೋದರೂ ಅವರು ನಮಗೆ ಕಂಡಿರುವುದಿಲ್ಲ, ಯಾರಾದರೂ ಮಾತನಾಡಿದ ಶಬ್ದ ನಮಗೆ ಕೇಳಿರುವುದಿಲ್ಲ. ಅಂದರೆ ಬೆಳಕು ಅಥವಾ ಶಬ್ದದ ತರಂಗಗಳು ಕಣ್ಣು ಅಥವಾ ಕಿವಿ ಇಂದ್ರಿಯಗಳನ್ನು ಪ್ರವೇಶಿಸಿದರೂ ಇವುಗಳಲ್ಲಿ ಬೇಕಾದವುಗಳನ್ನು ಮಾತ್ರ ಅರ್ಥವತ್ತಾಗಿ ಗ್ರಹಿಸಿ ಮಿಕ್ಕದ್ದನ್ನು ತಿರಸ್ಕರಿಸುವ ಬೇರೊಂದು ಕ್ರಿಯೆಯೇ ದೇಹದಲ್ಲಿರುತ್ತದೆ.

ಆಧುನಿಕ ವಿಜ್ಞಾನವು ಗಮನಹರಿಸದಿರುವ ಈ ವಿಚಾರಗಳು ಬಂದಾಗ ಸ್ವಾಮಿಗಳವರು ಅನೇಕ ಆಧ್ಯಾತ್ಮ ಚಿಂತಕರು ಮತ್ತು ವಿಜ್ಞಾನ ಚಿಂತಕರನ್ನು ಕರೆದು ಭಾರತೀಯ ಶಾಸ್ತ್ರಗಳಲ್ಲಿ ಪ್ರತಿಪಾದಿತವಾಗಿರುವ ಈ ವಿಚಾರಗಳನ್ನು ಹೊರತರಬಲ್ಲ ವೈಚಾರಿಕ ಚರ್ಚೆಗಳನ್ನು ಆರಂಭಿಸಿದರು. ಈ ಚಿಂತನೆಗಳು ನಡೆಯುತ್ತಾ ಹೋದಂತೆ, ನಮ್ಮ ಶಾಸ್ತ್ರಗಳನ್ನು ರಚಿಸಿದವರ ಗಾಢವೂ ಪರಿಪೂರ್ಣವೂ ಆದ ಚಿಂತನೆಗಳು ಪ್ರಚಲಿತವಾದ ಆಧುನಿಕ ವಿಜ್ಞಾನದ ಅಳವಿಗೆ ಮೀರಿದ ಮೂಲಭೂತ ಅಂಶಗಳನ್ನು ಒಳಗೊಂಡಿವೆ ಎಂಬ ಸಂಗತಿಗಳು ಹೊರಬಂದವು.

ಗಂಭೀರವಾದ ಈ ವಿಚಾರವಿಮರ್ಶೆಗಳ ಕಾಲದಲ್ಲಿ ಸ್ವಾಮಿಗಳವರು ಅನೇಕ ಶಾಸ್ತ್ರಪರಿಣತರೊಡನೆ ಚರ್ಚೆಗಳನ್ನು ನಡೆಸುತ್ತಾ ಅವರ ವಿಚಾರಧಾರೆಯು ಪ್ರಸಕ್ತ ವಿಷಯಗಳತ್ತ ಹೊರಳುವಂತೆ ಅವರನ್ನು ಮಾನಸಿಕವಾಗಿ ಸಿದ್ಧಗೊಳಿಸಿದರು. ಅಲ್ಲದೆ ಸಂದರ್ಭಕ್ಕೆ ಅಗತ್ಯವಾದ ವಿಜ್ಞಾನ ವಿಷಯಗಳನ್ನು ಸೂಕ್ತವಾಗಿ ಅರ್ಥವಾಗುವಂತೆ ಅವರುಗಳಿಗೆ ತಿಳಿಸಿಕೊಟ್ಟರು. ಭಾರತೀಯ ಶಾಸ್ತ್ರವಿಚಾರಗಳಲ್ಲಿ ಆಧುನಿಕ ವಿಜ್ಞಾನ ವಿಚಾರಗಳಿಗೆ ಪೂರಕವೂ, ಮಾರ್ಗ ದರ್ಶಕವೂ, ಅವುಗಳಲ್ಲಿನ ಸಮಸ್ಯೆಗಳಿಗೆ ಇನ್ನೂ ಸೂಕ್ತವಾದ ಪರಿಹಾರಗಳನ್ನು ಕಂಡುಕೊಳ್ಳುವ ಮಾರ್ಗವನ್ನೂ ತಿಳಿಸುತ್ತಾ ಹೋದರು. ಇದರಿಂದಾಗಿಯೇ ಶಾಸ್ತ್ರಪರಿಣತರು ಭಾರತೀಯ ಶಾಸ್ತ್ರಗ್ರಂಥಗಳಲ್ಲಿನ ಇಂತಹ ಮಹೋತ್ತಮ ಅಂಶಗಳತ್ತಲೂ ಗಮನವನ್ನು ಹರಿಸಿ ಇವುಗಳನ್ನು ತಿಳಿಸುವ ಭಾಗಗಳನ್ನು ಗುರುತಿಸುವ ಮತ್ತು ಆ ರೀತಿ ತಾರ್ಕಿಕವಾಗಿ ಅರ್ಥೈಸುವ ದಾರಿ ಕಂಡುಕೊಂಡರು.

ಈ ಹಿನ್ನೆಲೆಯಲ್ಲಿ, ಶ್ರೀ ಶ್ರೀ ಪರಮಾನಂದಭಾರತೀ ಸ್ವಾಮಿಗಳವರ ಮಾರ್ಗದರ್ಶನದಲ್ಲಿ ೧೯೮೮ರ ಆಗಸ್ಟ್ ತಿಂಗಳಲ್ಲಿ ಪಂಚೇಂದ್ರಿಯಗಳ ಪರಿಪೂರ್ಣ ವಿಷಯಗ್ರಹಣ ಕುರಿತ **'ವಿಜ್ಞಾನ ಮತ್ತು ದರ್ಶನಶಾಸ್ತ್ರಗಳಲ್ಲಿ ವಿಷಯಪ್ರತ್ಯಕ್ಷಮ್'** ಎಂಬ ಒಂದು ರಾಷ್ಟ್ರೀಯ ಸಮ್ಮೇಳನವನ್ನು ನಡೆಸಲಾಯಿತು. ರಾಷ್ಟ್ರದ ಅನೇಕ ವಿಜ್ಞಾನಿಗಳು ಮತ್ತು ಶಾಸ್ತ್ರವಿದ್ವಾಂಸರು ಭಾಗವಹಿಸಿದ್ದ ಈ ಸಮ್ಮೇಳನದಲ್ಲಿ ವಿಜ್ಞಾನಕ್ಕೂ ಮೀರಿದ ಅನೇಕ ಶುದ್ಧ

ತಾರ್ಕಿಕ ಸಂವೇದನೆಗಳು ನಮ್ಮ ಶಾಸ್ತ್ರಗಳಲ್ಲಿ ಇರುವುದನ್ನು ತೋರಿಸಿಕೊಡಲಾಯಿತು. ಲೌಕಿಕ ಅಗತ್ಯಗಳಿಗೂ ಪೂರಕವಾದ ಶಾಸ್ತ್ರವಿಚಾರಗಳನ್ನು ತರ್ಕಬದ್ಧವಾಗಿಯೂ, ಸೂಕ್ತವಾಗಿಯೂ ಅರ್ಥೈಸುವಂತಹ ವಿಧಾನಗಳನ್ನು ಈ ಸಮ್ಮೇಳನದಲ್ಲಿ ಪ್ರತಿಪಾದಿಸಲಾಯಿತು. ಅತ್ಯಂತ ಯಶಸ್ವಿಯಾಗಿಯೂ, ಇದರಲ್ಲಿ ಪಾಲ್ಗೊಂಡ ಮೂವತ್ತಕ್ಕೂ ಹೆಚ್ಚಿನ ಪಂಡಿತರು, ವಿಜ್ಞಾನಿಗಳು ಮತ್ತು ಅಪಾರ ಸಂಖ್ಯೆಯಲ್ಲಿ ಭಾಗವಹಿಸಿದವರ ಮನತಣಿಯುವಂತಹ ವಿಚಾರಗಳು ಅರ್ಥಪೂರ್ಣವಾಗಿ ಮಂಡಿಸಲ್ಪಟ್ಟವು. ಈ ಸಮ್ಮೇಲನದ ಉಪಯುಕ್ತತೆಯನ್ನು ಮನಗಂಡ ವಿಜ್ಞಾನಿಗಳು ಹಾಗೂ ಶಾಸ್ತ್ರಜ್ಞರು ಶ್ರೀ ಪರಮಾನಂದಭಾರತೀ ಸ್ವಾಮಿಗಳ ಅಸಾಧಾರಣ ಪ್ರತಿಭೆ ಹಾಗೂ ಚತುರತೆಗೆ ಬೆರಗಾದರು. ದೇಶ ವಿದೇಶಗಳ ಸುದ್ದಿ ಮಾಧ್ಯಮಗಳಲ್ಲಿ ಈ ಬಗ್ಗೆ ಅತ್ಯುತ್ಸಾಹದ ವ್ಯಾಪಕ ಪ್ರಚಾರ ದೊರೆಯಿತು. ಇಲ್ಲಿ ಮಂಡಿಸಲು ವಿದ್ವಾಂಸರು ಸಿದ್ಧಪಡಿಸಿದ್ದ ಲೇಖನಗಳನ್ನು ಮುದ್ರಿಸಿ **'Perception in Science and Shastras'** ಎಂಬ ಗ್ರಂಥವನ್ನಾಗಿ ಪ್ರಕಟಿಸಲಾಗಿದೆ.

ಗಣಕಗಳಲ್ಲಿ ಸಂಸ್ಕೃತವನ್ನು ಕುರಿತಂತೆ ಕ್ರಾಂತಿಕಾರಕ ಬದಲಾವಣೆಯನ್ನುಂಟು ಮಾಡಬಹುದಾದ ಒಂದು ಕ್ರಿಯಾತ್ಮಕ ಯೋಜನೆಯು ಸ್ವಾಮಿಗಳವರ ಯೋಚನಾ ಮೂಸೆಯಲ್ಲಿ ಮೂಡಿ ಪ್ರಜ್ವಲಿಸಿದ್ದು ಮತ್ತೊಂದು ಮಹತ್ವದ ಸಂಗತಿಯಾಗಿದೆ.

ಈ ಶತಮಾನದ ಜನಜೀವನದ ಎಲ್ಲಬಗೆಯ ವ್ಯವಹಾರಗಳಲ್ಲಿ ಗಣಕ ಯಂತ್ರಗಳು ಅಗಾಧ ಪ್ರಭಾವವನ್ನು ಬೀರುತ್ತಿವೆ. ಆರಂಭದಲ್ಲಿ ಗಣಿತೀಯ ಲೆಕ್ಕಾಚಾರಗಳಿಗಾಗಿ ಅಭಿವೃದ್ಧಿಪಡಿಸಿದ ಗಣಕಯಂತ್ರಗಳು ಇಂದಿನ ಜನಜೀವನದ ಎಲ್ಲ ಸ್ತರಗಳಲ್ಲಿನ ಎಲ್ಲ ರೀತಿಯ ಚಟುವಟಿಕೆಗಳಲ್ಲಿ ಉಪಯುಕ್ತ ಹಾಗೂ ಅನಿವಾರ್ಯ ಎಂಬಂತಾಗಿವೆ. ಬಹುಮುಖ್ಯವಾಗಿ ಗಣಕಯಂತ್ರಗಳ ಮೂಲಕ ನಡೆಸುತ್ತಿರುವ ಮೂಲಭೂತ ಕ್ರಿಯೆಗಳೆಂದರೆ:

೧. ಅಗತ್ಯವೆನಿಸುವ ಎಲ್ಲ ಬಗೆಯ ಮಾಹಿತಿಗಳನ್ನೂ ಗಣಕದ ಆಂತರ್ಯದಲ್ಲಿ ನಿರೂಪಿಸುವುದು ಮತ್ತು

೨. ವಿವಿಧ ಬಗೆಯ ತರ್ಕ, ಪ್ರಶ್ನೆ ಮುಂತಾದವುಗಳ ಮೂಲಕ ಅವುಗಳ ಪೈಕಿ ಅಗತ್ಯವಾದ ಮಾಹಿತಿಗಳನ್ನು ಹೆಕ್ಕಿಕೊಂಡು ಅವುಗಳನ್ನು ಮಥಿಸಿ ನಮಗೆ ಬೇಕಾದ ಉತ್ತರಗಳನ್ನೂ, ಮಾಹಿತಿಗಳನ್ನೂ ಪಡೆದುಕೊಳ್ಳುವುದು.

ಈ ಕಾರ್ಯನಿರ್ವಹಣೆಗಳನ್ನು ಪೂರ್ಣವಾಗಿ ಯಂತ್ರಗಳಾದ ಗಣಕಗಳ ಮೂಲಕವೇ ನಿರ್ವಹಿಸಬೇಕಾದ್ದರಿಂದ ಆ ಯಂತ್ರಗಳಿಗೆ ಅತ್ಯಂತ ವೈಜ್ಞಾನಿಕ, ಅಸಂದಿಗ್ಧ ಹಾಗೂ

ಸುಸಂಬದ್ಧ ಭಾಷೆಗಳ ಮೂಲಕವೇ ಸೂಕ್ತ ಸೂಚನೆ, ಸಂದೇಶಗಳನ್ನು ನೀಡಬೇಕು. ಆದರೆ ಇಂಗ್ಲಿಷ್ ಭಾಷೆಯು ಅವೈಜ್ಞಾನಿಕ, ಸಂದಿಗ್ಧಮಯ, ಅಸಂಬದ್ಧ ರಚನೆಯ ಹಾಗೂ ಧ್ವನ್ಯಾತ್ಮಕವಲ್ಲದ ಭಾಷೆಯಾದ್ದರಿಂದ ಕಾಲಕ್ರಮದಲ್ಲಿ ಈ ಕಾರ್ಯಗಳಿಗೆ ಈಗ ಎಲ್ಲೆಲ್ಲೂ ಕಂಡುಬರುವ ಸಿ, ಸಿ++ ಮುಂತಾದ ಹಲವಾರು ವೈಜ್ಞಾನಿಕ, ಅಸಂದಿಗ್ಧ ಹಾಗೂ ಸುಸಂಬದ್ಧ ಭಾಷೆಗಳನ್ನು ಸಿದ್ಧಗೊಳಿಸಲಾಯಿತು.

ಹೀಗೆ ಗಣಕದ ಭಾಷೆಯ ಅಗತ್ಯತೆ, ಸೂಕ್ಷ್ಮತೆ ಮುಂತಾದವುಗಳನ್ನು ಕುರಿತು ವಿಷಯಾಧಾರಿತವಾಗಿಯೂ ಆಳವಾಗಿಯೂ ಚಿಂತಿಸಿ ಹಾಗೂ ವಿಶ್ಲೇಷಿಸಿ ಸಂಸ್ಕೃತವು ವೈಜ್ಞಾನಿಕ, ಅಸಂದಿಗ್ಧ, ಸುಸಂಬದ್ಧ ಹಾಗೂ ಧ್ವನ್ಯಾತ್ಮಕವಾದ ಭಾಷೆಯಾದ್ದರಿಂದ ಸಹಜವಾಗಿಯೇ ಸಂಸ್ಕೃತ ಗಣಕಕ್ಕೆ ಅತ್ಯಂತ ಸೂಕ್ತವಾದ ಭಾಷೆ, ಅದು ಗಣಕದ ಭಾಷೆ ಎಂದು ಅಮೆರಿಕಾದ 'ನಾಸಾ' ಎಂದು ಪ್ರಸಿದ್ಧವಾಗಿರುವ ವೈಮಾಂತರಿಕ್ಷ ಸಂಶೋಧನಾ ಸಂಸ್ಥೆಯಲ್ಲಿನ ಸುಪ್ರಸಿದ್ಧ ವಿಜ್ಞಾನಿ ಪ್ರೊ. ರಿಕ್ ಬ್ರಿಗ್ಸ್ ಅವರು ಪ್ರತಿಪಾದಿಸಲಾರಂಭಿಸಿದರು. ಈ ವಿಷಯವನ್ನು ಕುರಿತು ಅವರು ಬರೆದ **'Knowledge Representation in Sanskrit and Artificial Intelligence'** ಎಂಬ ಒಂದು ಸಂಶೋಧನಾ ಲೇಖನವು 'ಆರ್ಟಿಫಿಷಿಯಲ್ ಇಂಟೆಲಿಜೆನ್ಸ್' ಎಂಬ ಒಂದು ಅಂತಾರಾಷ್ಟ್ರೀಯ ಮಾನ್ಯತೆ ಗಳಿಸಿರುವ ಅಮೆರಿಕಾದಲ್ಲಿರುವ ಅಂತಾರಾಷ್ಟ್ರೀಯ ವೈಜ್ಞಾನಿಕ ಪತ್ರಿಕೆಯ ೧೯೮೫ರ ಮಾರ್ಚ್ ತಿಂಗಳ ಸಂಚಿಕೆಯಲ್ಲಿ ಪ್ರಕಟವಾಗಿದ್ದಿತು.

ಈ ಹಿನ್ನೆಲೆಯಲ್ಲಿ ಗಣಕದಲ್ಲಿ ಸಂಸ್ಕೃತ ಎಂಬ ವಿಷಯವನ್ನು ಪರಿಗಣಿಸಿದಾಗ, ವಿಶ್ವದಲ್ಲೇ ಅತ್ಯಂತ ವೈಜ್ಞಾನಿಕ ಭಾಷೆಯಾದ ಸಂಸ್ಕೃತದ ಸಹಜಭಾಷಾ ಸಂಸ್ಕರಣೆಯನ್ನು ಗಣಕದಲ್ಲಿ ಸಾಧ್ಯವಾಗಿಸಿದರೆ ವಿಶ್ವಾದ್ಯಂತ ಗಣಕದ ಎಲ್ಲ ಆಂತರಿಕ ಕ್ರಿಯೆಗಳೂ ಸಂಸ್ಕೃತವನ್ನೇ ಆಧರಿಸುವಂತಹ ಕ್ರಾಂತಿಕಾರಿ ಸಾಧನೆಯನ್ನು ಮಾಡಬಹುದು.

ಇದರಿಂದಾಗಿ ಗಣಕಕ್ಕೆ ಸಂಸ್ಕೃತವು ಅನಿವಾರ್ಯವಾಗಿ ಮಾಹಿತಿ ತಂತ್ರಜ್ಞಾನ ಕ್ಷೇತ್ರದಲ್ಲಿ ಸಂಸ್ಕೃತ ಭಾಷೆ ಸಹಜವಾಗಿಯೇ ವಿಜೃಂಭಿಸುತ್ತದೆ. ಅಲ್ಲದೆ ಭಾರತದಲ್ಲಿ ಅತಿ ಪ್ರಾಚೀನ ಕಾಲದಿಂದಲೂ ಸಂಸ್ಕೃತ ವಾಙ್ಮಯದಲ್ಲೇ ಬೆಳೆದು ಬಂದಿರುವ ಮಹತ್ತಮವೂ ಅಗಾಧವೂ ಆಗಿರುವ ತರ್ಕಬದ್ಧ ವಿಚಾರಗಳು ಗಣಕಗಳ ಮೂಲಕ ಪ್ರಸ್ತುತವೂ ಲೋಕೋಪಕಾರಿಯೂ ಆಗಬಹುದಾದ ವಿಚಾರಗಳು ಬಹುಮುಖ್ಯವಾಗುತ್ತವೆ.

ಈ ವಿಚಾರಗಳನ್ನು ತಿಳಿದುಕೊಂಡು ಗಂಭೀರ ಚಿಂತನೆಗಳನ್ನು ನಡೆಸಿದ ಶ್ರೀ ಶ್ರೀ ಪರಮಾನಂದಭಾರತೀ ಸ್ವಾಮಿಗಳು ಬೆಂಗಳೂರಿನಲ್ಲಿ ೧೯೮೬ ಡಿಸೆಂಬರ್ ೨೦, ೨೧, ೨೨ ನೇ ದಿನಾಂಕಗಳಲ್ಲಿ ಆಯೋಜಿಸಲಾಗಿದ್ದ 'ಕಂಪ್ಯೂಟರ್ ಮತ್ತು ಸಂಸ್ಕೃತ' ವಿಚಾರವನ್ನು

ಕುರಿತ 'ಸಂಸ್ಕೃತದಲ್ಲಿ ಜ್ಞಾನ ಪ್ರತಿನಿರೂಪಣೆ ಮತ್ತು ಅನುಮಾನ (Knowledge Representation and Inference in Samskrutha) ಎಂಬ ಪ್ರಥಮ ಅಂತಾರಾಷ್ಟ್ರೀಯ ಸಮ್ಮೇಳನಕ್ಕೆ ಕಾರಣವಾದರು. ಅವರ ಅಪೂರ್ವ ಮಾರ್ಗದರ್ಶನಗಳಿಂದಲೇ ನಡೆದ ಈ ಸಮ್ಮೇಳನದಲ್ಲಿ ಗಣಕಯಂತ್ರದ ಕೃತಕ ಬುದ್ಧಿಮತ್ತೆಗೆ ಸಂಸ್ಕೃತವೇ ಅತ್ಯಂತ ಸೂಕ್ತವಾದ ಭಾಷೆ ಎಂಬುದನ್ನು ಅತ್ಯಂತ ವೈಜ್ಞಾನಿಕವೂ ತಾರ್ಕಿಕವೂ ಆದ ಮಾಹಿತಿಗಳ ಮೂಲಕ ತೆರೆದು ತೋರಿಸಿಕೊಡಲಾಯಿತು. ಆಗ ಕೇಂದ್ರ ಸರ್ಕಾರದ ಎಲೆಕ್ಟ್ರಾನಿಕ್ಸ್ ಇಲಾಖೆಯ ಕಾರ್ಯದರ್ಶಿಗಳಾಗಿದ್ದ ಪದ್ಮಭೂಷಣ ಡಾ॥ ಎನ್ ಶೇಷಗಿರಿ ಅವರು ಈ ಸಮ್ಮೇಳನವನ್ನು ಉದ್ಘಾಟಿಸಿದರು ಮತ್ತು ಖ್ಯಾತ ವಿಜ್ಞಾನಿಗಳಾದ ಪ್ರೊ॥ ಇ.ಸಿ.ಜಿ ಸುದರ್ಶನ್ ಸಮಾರೋಪ ಭಾಷಣ ಮಾಡಿದರು. ಪ್ರೊ॥ ಎಚ್ ಎನ್ ಮಹಾಬಲ, ಪ್ರೊ॥ ಡಿ.ಕೆ ಸುಬ್ರಹ್ಮಣ್ಯ, ಪ್ರೊ॥ ರೊದ್ದಂ ನರಸಿಂಹ ಮುಂತಾದ ವಿಜ್ಞಾನಿಗಳೇ ಅಲ್ಲದೆ ರಾಷ್ಟ್ರದ ಅನೇಕ ಸಂಸ್ಕೃತ ವಿದ್ವಾಂಸರು ಹಾಗೂ ಅನೇಕ ಪ್ರಮುಖ ಗಣಕ ವಿಜ್ಞಾನಿಗಳು ಮತ್ತು ಜರ್ಮನಿ, ಫ್ರಾನ್ಸ್, ಇಂಗ್ಲೆಂಡ್, ಜಪಾನ್ ಮುಂತಾದ ಹಲವಾರು ದೇಶಗಳಿಂದ ಆಗಮಿಸಿದ್ದ ಗಣಕ ವಿಜ್ಞಾನಿಗಳು ಭಾಗವಹಿಸಿದ್ದರು. ವಿಶೇಷವಾಗಿ ಸಮ್ಮೇಳನಕ್ಕೆ ಆಗಮಿಸಿದ್ದ ಪ್ರೊ. ರಿಕ್‌ಬ್ರಿಗ್ಸ್ ಅವರು ಶ್ರೀ ಶ್ರೀ ಪರಮಾನಂದ ಭಾರತೀ ಅವರ ವ್ಯಕ್ತಿತ್ವಕ್ಕೆ ಮಾರುಹೋಗಿ ಅವರನ್ನು ಮುಕ್ತಕಂಠದಿಂದ ಹೊಗಳಿದ್ದಲ್ಲದೆ 'ಮುಂದಿನ ಜನ್ಮ ಎಂದಿದ್ದರೆ, ಆ ಜನ್ಮದಲ್ಲಿ ನಾನು ಭಾರತೀಯನೇ ಆಗಿ ಹುಟ್ಟಬೇಕು. ನನ್ನ ಮಾತೃಭಾಷೆಯು ಭಾರತೀಯ ಭಾಷೆಗಳಲ್ಲಿ ಒಂದಾಗಿರಬೇಕು. ಇದೇ ನನ್ನ ಆಸೆ' ಎಂದು ನಮಗೆ ತಿಳಿಸಿದ್ದರು. ಈ ಸಮ್ಮೇಳನಕ್ಕೆ ಪೂರ್ವಭಾವಿಯಾಗಿ ಸಂಸ್ಕೃತ ವಿದ್ವಾಂಸರಿಗಾಗಿ ನಡೆಸಿದ ಗಣಕ-ಸಂಸ್ಕೃತ ವಿಷಯಗಳ ಪರಿಚಯಾತ್ಮಕ ಸಭೆಗಳಲ್ಲಿ ಶ್ರೀ ಶ್ರೀ ಪರಮಾನಂದಭಾರತೀ ಸ್ವಾಮಿಗಳು ತಾಂತ್ರಿಕ ವಿಷಯಗಳನ್ನು ಪಂಡಿತರಿಗೆ ಮನಮುಟ್ಟುವಂತೆ ತಿಳಿಸುತ್ತಿದ್ದ ಸಂವಹನಾ ಕುಶಲತೆ, ಉಪಯುಕ್ತತೆಗಳು ಅಮೋಘವಾಗಿದ್ದವು.

ಈ ಎರಡೂ ಐತಿಹಾಸಿಕ ಕಾರ್ಯಕ್ರಮಗಳು ಮುಂದಿನ ಹಲವಾರು ಚಟುವಟಿಕೆಗಳಿಗೆ ಬುನಾದಿಯಾದವು. ಸದಾ ಚಟುವಟಿಕೆಯ ಬುಗ್ಗೆಯಾಗಿ, ಅಧ್ಯಯನಶೀಲರಾಗಿ, ಶ್ರೇಷ್ಠ ಚಿಂತಕರಾಗಿ ಸ್ವಾಮಿಗಳವರು ಶಂಕರಾಚಾರ್ಯರ ಪ್ರಸ್ಥಾನತ್ರಯ ಭಾಷ್ಯಗಳನ್ನು ಸರಳವಾಗಿ, ವೈಜ್ಞಾನಿಕ ದೃಷ್ಟಿಕೋನದಿಂದ ವ್ಯಾವಹಾರಿಕವಾಗಿ ಜನತೆಗೆ ತಿಳಿಸುವ ಕಾರ್ಯಕ್ರಮಗಳನ್ನು ಕೈಗೊಂಡರು. ಶ್ರೀ ಭಗವದ್ಗಿತಾಭಾಷ್ಯದ ಅವರ ಇಂತಹ ಪ್ರವಚನಗಳು ಸಹಸ್ರಾರು ಶ್ರೋತೃಗಳನ್ನು ಆಕರ್ಷಿಸಿ ಅವರ ಮನಸ್ಸುಗಳನ್ನು ತಣಿಸಿದವು. ಅಮೇರಿಕಾದ ಹಲವಾರು ಆಸಕ್ತ ಮಹನೀಯರ ಪ್ರಾರ್ಥನೆಯಂತೆ ಅಲ್ಲಿ ಪ್ರವಾಸ ಮಾಡಿದ ಶ್ರೀ ಶ್ರೀಗಳವರು ಅಲ್ಲಿ ಭಾರತೀಯರೇ ಅಲ್ಲದೆ ಇತರರಲ್ಲೂ ಭಾರತೀಯ ಚಿಂತನೆಗಳು,

ಆಧ್ಯಾತ್ಮ, ಅದ್ವೈತ, ವಿಚಾರಗಳು ಹಾಗೂ ಋಜುಜೀವನ ವಿಧಾನಗಳ ಬಗ್ಗೆ ಆಳವಾದ ಪರಿಣಾಮವನ್ನು ಉಂಟುಮಾಡುವ ವಿಚಾರ ಪ್ರಚೋದಕ ಉಪನ್ಯಾಸಗಳನ್ನು ಮಾಡಿದರು.

ಸ್ವದೇಶಕ್ಕೆ ಆಗಮಿಸಿದ ನಂತರ ಈ ಹಿಂದೆ ನಡೆದಿದ್ದ ಪ್ರಮುಖವಾದ ಸಮ್ಮೇಳನಗಳ ಯಶಸ್ಸಿನಿಂದ ಉತ್ತೇಜಿತರಾಗಿದ್ದ ಅನೇಕ ಸದ್ವ್ಯಕ್ತಿಗಳ ಆಸಕ್ತಿ ಮತ್ತು ಉತ್ಸಾಹಗಳ ಕಾರಣದಿಂದ ಶ್ರೀ ಶ್ರೀ ಪರಮಾನಂದಭಾರತೀ ಸ್ವಾಮಿಗಳು ೧೯೯೦ರಲ್ಲಿ ವೇದಗಣಿತವನ್ನು ಕುರಿತ ಒಂದು ರಾಷ್ಟ್ರೀಯ ಸಮ್ಮೇಳನವನ್ನು ಆಯೋಜಿಸಿದರು. 'ವೇದಗಣಿತ'ದ ಬಗ್ಗೆ ಅಂಧಶ್ರದ್ಧೆ ಮತ್ತು 'ವೇದಗಣಿತ'ದ ಬಗ್ಗೆ ಆಧುನಿಕ ಗಣಿತಶಾಸ್ತ್ರಜ್ಞರ ಅನಾದರ ಇವೆರಡನ್ನೂ ಹೋಗಲಾಡಿಸಿ ಈ ಎರಡರ ನಡುವೆ ಸಮನ್ವಯವನ್ನು ಸಾಧಿಸಿದ ಅದ್ಭುತ ಕಾರ್ಯಕ್ರಮವಾಗಿ ಪರಿಣಮಿಸಿದ ಈ ಸಮ್ಮೇಳನವು ಮತ್ತೊಮ್ಮೆ ದೇಶ ವಿದೇಶಗಳ ಚಿಂತಕರನ್ನು ಆಕರ್ಷಿಸಿತು.

ಶೂನ್ಯದ ಕಲ್ಪನೆಯು ಭಾರತೀಯ ಎಂಬುದೇ ಅಲ್ಲದೆ ಗಣಿತಶಾಸ್ತ್ರದ ಅನೇಕ ವಿಚಾರಗಳು ಇಂದಿಗೆ ೧೦ ಶತಮಾನಗಳಿಗೂ ಹಿಂದೆಯೇ ಪ್ರತಿಪಾದಿತವಾಗಿದ್ದವು. ಅಂದಿನಿಂದ ಬೆಳೆದುಬಂದಿದ್ದ ವೇದಗಣಿತದಲ್ಲಿನ ಅತ್ಯಂತ ತಾರ್ಕಿಕವಾದ ಹಾಗೂ ಉಪಯುಕ್ತವಾದ ವಿಚಾರಗಳು ಇಂದು ಪ್ರಚಲಿತವಾಗಿರುವ ಗಣಿತ ವಿಚಾರಗಳಿಗೆ ಪೂರಕವೇ, ಬಳಕೆಯಲ್ಲಿ ಅವುಗಳಿಗಿಂತ ಹೆಚ್ಚು ಉಪಯುಕ್ತವೇ ಎಂಬ ಜಿಜ್ಞಾಸೆ, ಚರ್ಚೆಗಳು ನಡೆಯುತ್ತಲೇ ಇವೆ. ವೇದಗಣಿತದ ವಿಚಾರಗಳನ್ನು ಆಧುನಿಕ ಗಣಿತ ಭಾಷೆಯಲ್ಲೇ ಪ್ರತಿಪಾದಿಸಿ, ಆಧುನಿಕ ಗಣಿತ ವಿಚಾರಗಳಿಗೆ ಪೂರಕವೂ, ಹೆಚ್ಚು ತಾರ್ಕಿಕವಾಗಿಯೂ, ಉಪಯುಕ್ತವೂ ಆಗಿರುವಂತಹ ವಿಚಾರಗಳನ್ನು ತೋರಿಸಿಕೊಡುವುದು ಸಕಾರಾತ್ಮಕ ಕಾರ್ಯವಾಗಿರುತ್ತದೆ ಮತ್ತು ಬಳಕೆಗೆ ತಕ್ಷಣ ದೊರೆಯುತ್ತವೆ ಎಂಬುದೇ ಸಮ್ಮೇಳನದ ಪ್ರಮುಖ ಧ್ಯೇಯೋದ್ದೇಶಗಳಾಗಿದ್ದವು. ಅಂತೆಯೇ ಪ್ರೊ. ಟಿ ಎಸ್ ಭಾನುಮೂರ್ತಿ ಅವರು ವೇದಗಣಿತದ ಅನೇಕ ಪ್ರಮೇಯಗಳನ್ನು ಎಲ್ಲರೂ ಒಪ್ಪಬಹುದಾದ ತಾರ್ಕಿಕ ಭಾಷೆಯಲ್ಲಿ ಸಿದ್ಧಪಡಿಸಿ ಅವುಗಳನ್ನು ಆಧುನಿಕ ಗಣಿತ ಭಾಷೆಯಲ್ಲಿ ಸಾಧಿಸಿ ತೋರಿಸಿದರು. ಇವುಗಳಿಗೆ ಪೂರಕವಾಗಿ ಅನೇಕ ವಿದ್ವಾಂಸರು ತಮ್ಮ ವಿಚಾರಗಳನ್ನು ಮಂಡಿಸಿ ಸಮ್ಮೇಳನದ ಯಶಸ್ಸಿಗೆ ಕಾರಣರಾದರು. ಆರ್ಯಭಟ, ಭಾಸ್ಕರ, ವರಾಹಮಿಹಿರ ಮುಂತಾದ ಭಾರತೀಯ ಗಣಿತಶಾಸ್ತ್ರಜ್ಞರ ವಿಚಾರಗಳನ್ನು ಆಧುನಿಕ ಗಣಿತಶಾಸ್ತ್ರದ ಪರಿಭಾಷೆಯಲ್ಲಿ ಪ್ರತಿಪಾದಿಸುವಲ್ಲಿ ಈ ಸಮ್ಮೇಳನವು ಯಶಸ್ವಿಯಾಯಿತು. ಇದರಿಂದ, ಸುಮಾರು ಒಂದು ಸಾವಿರಕ್ಕೂ ಹಿಂದೆ ಭಾರತೀಯ ಗಣಿತಶಸ್ತ್ರಜ್ಞರು ಪ್ರತಿಪಾದಿಸಿದ್ದ ಗಣಿತ ತತ್ವಗಳು ಇಂದಿಗೂ ಉಪಯುಕ್ತ, ಅವು ಮುಂದಿನ ಅಧ್ಯಯನ, ಸಂಶೋಧನೆಗಳು ಹಾಗೂ ಗಣಿತಶಾಸ್ತ್ರದ ಉತ್ತಮ ಬೆಳವಣಿಗೆಗಳಿಗೆ ದಾರಿ ಮಾಡಿಕೊಡುತ್ತವೆ ಎಂಬುದು ಈ ಸಮ್ಮೇಳನದಲ್ಲಿ ಚೆನ್ನಾಗಿ ಮನದಟ್ಟಾಯಿತು. ಈ

ದಿಸೆಯಲ್ಲಿ ಮುಂದುವರೆದರೆ ಗಣಿತಶಾಸ್ತ್ರಕ್ಕೆ ಅನೇಕ ಕೊಡುಗೆಗಳು ಸಾಧ್ಯ ಎಂಬುದನ್ನು ತೋರಿಸಿಕೊಡಲಾಯಿತು. ಈ ಸಮ್ಮೇಳನದಲ್ಲೂ ಸ್ವಾಮಿಗಳವರ ಮಾರ್ಗದರ್ಶನಗಳು ಅಪೂರ್ವವಾಗಿದ್ದವು.

ಈ ಮೂರು ಐತಿಹಾಸಿಕ ಮತ್ತು ಶ್ರೇಷ್ಠತಮ ಸಮ್ಮೇಳನಗಳ ಯಶಸ್ಸಿನಿಂದ ಉತ್ತೇಜಿತರಾದ ಶ್ರೀ ಸ್ವಾಮಿಗಳು ಮ್ಯಾನೇಜ್‌ಮೆಂಟ್ ವಿಜ್ಞಾನದತ್ತ ಗಮನವನ್ನು ಹರಿಸಿ ಭಾರತೀಯ ಚಿಂತನೆಗಳಲ್ಲಿ ಈ ಬಗ್ಗೆ ಮಹತ್ವದ ವಿಚಾರಗಳಿರುವುದನ್ನು ಬೆಳಕಿಗೆ ತಂದರು. ವ್ಯಾವಹಾರಿಕ ಜಗತ್ತಿನ ಆಡಳಿತ ವ್ಯವಹಾರದ ಸಮಸ್ಯೆಗಳಿಗೆ ಶಾಸ್ತ್ರಗಳು, ಪುರಾಣ, ಭಗವದ್ಗೀತೆ ಮುಂತಾದವುಗಳಲ್ಲಿ ಹೇಗೆ ಪರಿಹಾರೋಪಾಯಗಳಿವೆ ಎಂಬುದನ್ನು ಮನಗಾಣಿಸಿದರು. ಮಾಲಿಕ–ನೌಕರರ ಸಂಬಂಧ, ವ್ಯವಹಾರಿಕ ಸಂಸ್ಥೆಗಳಲ್ಲಿ ನಡೆಯುವ ಚಟುವಟಿಕೆಗಳಲ್ಲಿ ಉತ್ಸಾಹದ ವಾತಾವರಣದ ಏರ್ಪಾಡುಗಳು ಮುಂತಾದ ವೈವಿಧ್ಯಮಯ ಸಮಸ್ಯೆಗಳಿಗೆ ಪರಿಣಾಮಕಾರಿ ಹಾಗೂ ಸಮಂಜಸವಾದ ಪರಿಹಾರೋಪಾಯಗಳನ್ನು, ಉತ್ತರಗಳನ್ನು ಉದಾಹರಣೆಗಳನ್ನು ಶಾಸ್ತ್ರಗಳಲ್ಲಿ ತೋರಿಸಿಕೊಟ್ಟ ಚತುರರು ಸ್ವಾಮಿಗಳು. ಅವರ ಇಂತಹ ವಿನೂತನ ಚಿಂತನೆಗಳ ಪರಿಣಾಮವಾಗಿ ದೆಹಲಿ, ಅಲಹಾಬಾದ್, ಮದರಾಸು, ಬೆಂಗಳೂರು ಮುಂತಾದ ಕಡೆಗಳಲ್ಲಿ **'ಮ್ಯಾನೇಜ್‌ಮೆಂಟ್ ಮತ್ತು ಭಾರತೀಯ ದರ್ಶನಶಾಸ್ತ್ರಗಳು'** ಕುರಿತಾದ ಹಲವಾರು ಮಹತ್ವಪೂರ್ಣ ಸಮ್ಮೇಳನಗಳು ನಡೆದವು. ಇವುಗಳಲ್ಲಿ ಹೊಸ ವಿಚಾರಧಾರೆಗಳು ಮೂಡಿಬಂದು ಕೆಲವು ಈಗಾಗಲೇ ಬಳಕೆಯ ಹಾದಿಯಲ್ಲಿವೆ.

ಶ್ರೀ ಶ್ರೀ ಪರಮಾನಂದಭಾರತೀ ಸ್ವಾಮಿಗಳು ನಿರಂತರವಾಗಿ ಧರ್ಮ, ಅದ್ವೈತವೇದಾಂತ ಮುಂತಾದ ಅಮೂಲ್ಯ ವಿಚಾರಗಳ ಪ್ರಸಾರ, ಪ್ರವಚನಗಳಲ್ಲಿ ತೊಡಗಿಕೊಂಡಿದ್ದಾರೆ. ಇವರು ಅದ್ವೈತ ವೇದಾಂತವನ್ನು ಆಧುನಿಕ ಪದ್ಧತಿಯ ಶಿಕ್ಷಣ ರೂಪದಲ್ಲಿ ನಿರೂಪಿಸಿದ ಪ್ರಥಮರಾದರು. ಈ ಕುರಿತ ಪಠ್ಯಕ್ರಮಗಳು ಮತ್ತು ಪಠ್ಯರೂಪದ ಪುಸ್ತಕಗಳನ್ನು ಸಿದ್ಧಪಡಿಸಿದ್ದಾರೆ. ಇವುಗಳ ಅಧ್ಯಾಪನಕ್ಕಾಗಿ ಹಲವರನ್ನು ತಯಾರುಮಾಡಿದ ಕೀರ್ತಿ ಇವರದು. ಹಲವಾರು ವರ್ಷಗಳಿಂದ ಈ ರೀತಿ ಅಧ್ಯಯನ ಮಾಡಿ ಅದ್ವೈತ ಸಿದ್ಧಾಂತವನ್ನು ವ್ಯವಸಿತವಾಗಿ ತಿಳಿದುಕೊಂಡ ಅನೇಕರನ್ನು ನಾವು ಕಾಣುತ್ತಿದ್ದೇವೆ. ವಿನೂತನವಾದ ಈ ಕಾರ್ಯಕ್ರಮವು ಶ್ರೀ ಶ್ರಿ ಪರಮಾನಂದಭಾರತೀ ಸ್ವಾಮಿಗಳವರ ಶ್ರೇಷ್ಠ ಚಿಂತನೆಯ ಫಲವೇ ಆಗಿದೆ.

ಶ್ರೀ ಶ್ರೀ ಪರಮಾನಂದಭಾರತೀ ಸ್ವಾಮಿಗಳವರು ಸಂಘಟನಾ ಚತುರರೂ ಹೌದು. ಸಹಸ್ರಾರು ಸಂಖ್ಯೆಯಲ್ಲಿ ಮಹಿಳೆಯರು, ಪುರುಷರು ಒಂದೆಡೆಯಲ್ಲಿ ಸೇರಿ ಲಲಿತಾ ಸಹಸ್ರನಾಮ, ಗಾಯತ್ರೀ ಜಪ ಮುಂತಾದ ವೇದೋಕ್ತ, ಶಾಸ್ತ್ರೋಕ್ತ ಪೂಜಾ ವಿಧಿಗಳನ್ನು

ಆಚರಿಸುವ ಕ್ರಿಯೆಗಳಿಗೆ ಹೊಸ ದಾರಿಯನ್ನು ಹಾಕಿಕೊಟ್ಟಿದ್ದಾರೆ. ೧೯೯೬ ಡಿಸೆಂಬರ್‌ನಲ್ಲಿ ಬೆಂಗಳೂರಿನ ಶ್ರೀ ಶಂಕರಮಠದಲ್ಲಿ ನಡೆದ ಶತಕೋಟಿ ಗಾಯತ್ರೀ ಜಪಯಜ್ಞ ಮಹಾಯಾಗವು ಅದ್ಭುತ ಯಶಸ್ಸನ್ನು ಗಳಿಸಿತು. ಸುಮಾರು ೬೦೦೦ ಜನರು ಒಂದಾಗಿ ಕುಳಿತು ಮಾಡಿದ ಈ ಯಜ್ಞವು ಅವರಲ್ಲೂ, ಅಲ್ಲಿ ನೆರೆದಿದ್ದ ೨೦,೦೦೦ ಸಾರ್ವಜನಿಕರಲ್ಲೂ ಉಂಟುಮಾಡಿದ ಪರಿಣಾಮ ಅದ್ಭುತವಾದುದು. ಮಹಿಳೆಯರು ಒಂದು ವರ್ಷಗಳ ಕಾಲ ದೀಕ್ಷೆಯಲ್ಲಿದ್ದು ಎರಡೂವರೆ ಲಕ್ಷ ಲಲಿತಾಸಹಸ್ರನಾಮ ಜಪಮಾಡಿ ಶ್ರದ್ಧೆಯಿಂದ ಯಾಗದಲ್ಲಿ ಭಾಗವಹಿಸಿದ್ದುದು ಒಂದು ವಿಶೇಷ. ಈ ದೀಕ್ಷೆಯು ಮಹಿಳೆಯರ ಜೀವನ, ಆಲೋಚನೆಗಳಲ್ಲಿ ಹೊಸ ಚೈತನ್ಯವನ್ನೂ, ಅವರಲ್ಲಿ ಧರ್ಮ ಶ್ರದ್ಧೆಯನ್ನೂ ಉಂಟುಮಾಡುವುದರಲ್ಲಿ ಯಶಸ್ವಿಯಾಯಿತು. ಇಷ್ಟೊಂದು ಅಗಾಧ ಪ್ರಮಾಣದ ಕಾರ್ಯಕ್ರಮವು ಅತ್ಯಂತ ವ್ಯವಸ್ಥಿತವಾಗಿ ಕೇವಲ ಸ್ವಯಂಸೇವಕರ ಶ್ರಮದಿಂದ ನಡೆದದ್ದು ಐತಿಹಾಸಿಕ ಸಂಗತಿ. ಹೀಗೆ ಆರಂಭವಾದ ಸಾಮೂಹಿಕ ಜಪಯಜ್ಞಗಳು ದೆಹಲಿ, ಅಹಮದಾಬಾದ್, ಮದರಾಸು, ವಿಶೇಷವಾಗಿ ಅಮೇರಿಕಾ ಮುಂತಾಗಿ ದೇಶ ವಿದೇಶಗಳಲ್ಲಿ ಶ್ರೀ ಶ್ರೀ ಪರಮಾನಂದಭಾರತೀ ಸ್ವಾಮಿಗಳವರ ನೇತೃತ್ವದಲ್ಲಿ ನಡೆದುಬಂದಿವೆ. ಇವೆಲ್ಲವೂ ಜನತೆಯಲ್ಲಿ ಧಾರ್ಮಿಕ ಪುನರುತ್ಥಾನ, ಉತ್ತಮ ಮಾನಸಿಕ ಪರಿಣಾಮಗಳನ್ನು ಉಂಟುಮಾಡಿವೆ. ತಮ್ಮ ಎಲ್ಲ ಕೆಲಸ ಕಾರ್ಯಗಳಲ್ಲಿ ಶ್ರದ್ಧೆ, ಆಸಕ್ತಿ ಇವುಗಳನ್ನು ಇಟ್ಟುಕೊಂಡು ಋಜುಜೀವನ, ಉತ್ತಮ ಸಮಾಜಜೀವನಗಳನ್ನು ನಡೆಸಲು ಸಹಾಯಕವಾಗಿವೆ.

ಬೆಂಗಳೂರಿನ ಶಂಕರಮಠದಲ್ಲಿ ಶಾರದಾ ರಥೋತ್ಸವವನ್ನು ೧೯೬೬ ರಲ್ಲಿ ಆರಂಭಿಸಿದ ವಿಷಯದಲ್ಲೂ ಸ್ವಾಮಿಗಳ ಯೋಗದಾನವಿದೆ.

ಶ್ರೀ ಶ್ರೀ ಪರಮಾನಂದಭಾರತೀ ಸ್ವಾಮಿಗಳವರು 'ವಸುಧೈವ ಕುಟುಂಬಕಮ್' ಎಂಬ ಆರ್ಷೇಯ ಮಾತಿಗೆ ಅನುಗುಣವಾಗಿ ದೇಶ, ವಿದೇಶಗಳಲ್ಲಿ ಸತತವಾಗಿ ಪ್ರವಾಸ ಮಾಡುತ್ತಾ, ಸನ್ಯಾಸ ಧರ್ಮಕ್ಕೆ ಅನುಗುಣವಾಗಿ ಪರಿವ್ರಾಜಕರಾಗಿ ಸರ್ವಸ್ವವನ್ನೂ ತೊರೆದು ಉದಾತ್ತತತ್ವಗಳನ್ನು ಪ್ರಸಾರಮಾಡುತ್ತಾ ಜನತೆಗೆ ಮಹೋಪಕಾರಿಯಾಗಿದ್ದಾರೆ. ಅವರ ಉಪದೇಶಗಳನ್ನು ಆಲಿಸಿದವರಿಗೆ, ಅವರೊಡನೆ ಸಂವಾದಗಳನ್ನು ನಡೆಸಿದವರಿಗೆ ಆಗಿರುವ ಅನುಭವಗಳು, ಚಿರಸ್ಮರಣೀಯವಾಗಿವೆ. ಆಧ್ಯಾತ್ಮಿಕ ಮತ್ತು ಪಾರಮಾರ್ಥಿಕ ವಿಚಾರಗಳಲ್ಲೂ ಅಪೂರ್ವ ಸಾಧನೆಗೈಯುತ್ತಿರುವ ಶ್ರೀ ಶ್ರೀ ಪರಮಾನಂದಭಾರತೀ ಸ್ವಾಮಿಗಳವರು ತಮ್ಮ ಸಂಪರ್ಕಕ್ಕೆ ಬರುವ ಎಲ್ಲ ಜನತೆಯ ಅಪಾರ ಭಕ್ತಿ ಗೌರವಗಳಿಗೆ ಪಾತ್ರರಾಗಿದ್ದಾರೆ.

◆

ಆದರಣೀಯ ಸೋದರರು

– ಸಿ.ವಿ.ಶ್ರೀಮತಿ, ಬೆಂಗಳೂರು

ಮೇಧಾವಿಗಳೂ, ಸಹೃದಯರೂ, ಪರೋಪಕಾರಿಗಳೂ, ಸರಳತೆ ಹಾಗೂ ಸದ್ಗುಣಗಳಿಂದ ಜನಮನ್ನಣೆ ಗಳಿಸಿರುವ ಶಾಸ್ತ್ರಿದ್ವಯರು ನಮ್ಮ ಸಹೋದರರಾಗಿರುವುದು ನಮಗಂತೂ ತುಂಬಾ ಹೆಮ್ಮೆ. ಪ್ರಾತಃ ಸ್ಮರಣೀಯರಾದ ನಮ್ಮ ಪೂಜ್ಯ ತಾಯ್ತಂದೆಯರಾದ ದಿ॥ ಶ್ರೀಮತಿ ಲಲಿತಮ್ಮ, ಪಂಡಿತ ಚಿ.ನಾ ವಿಶ್ವನಾಥಶಾಸ್ತ್ರಿಗಳ ಮಾರ್ಗದರ್ಶನದಲ್ಲಿ ಸಮಾಜಕ್ಕೆ ಉತ್ತಮ ಕೊಡುಗೆಯನ್ನು ನೀಡಿದ್ದಾರಲ್ಲದೆ, ನಮಗೂ ಈ ದಿಸೆಯಲ್ಲಿ ಮಾರ್ಗದಶಕರಾಗಿದ್ದಾರೆ.

ಇಬ್ಬರೂ ಸ್ನಾತಕೋತ್ತರ ಪದವೀಧರರಾಗಿ, ಉನ್ನತ ಹುದ್ದೆಗಳಲ್ಲಿ ಕಾರ್ಯನಿರ್ವಹಿಸುತ್ತಾ ದಕ್ಷರೆನಿಸಿಕೊಂಡು, ನಿರಾಡಂಬರ ಸರಳ ಜೀವನ ಶೈಲಿಯಿಂದ ಸಂತೃಪ್ತರಾಗಿದ್ದಾರೆ. ಸದಾ ಹಸನ್ಮುಖಿಗಳೂ, ಸ್ನೇಹಪರರೂ ಆಗಿ, ಸಾರ್ವಜನಿಕವಾಗಿ ಅನೇಕ ಉಪಯುಕ್ತವಾದ ಕೆಲಸಗಳಲ್ಲಿ ತಮ್ಮನ್ನು ತೊಡಗಿಸಿಕೊಂಡಿದ್ದಾರೆ. ವಿದ್ಯಾರ್ಥಿ ದೆಸೆಯಲ್ಲಿ ಆರ್ಥಿಕ ಬೆಂಬಲ ಹೇಳುವಷ್ಟೇನಿಲ್ಲದಿದ್ದರೂ ಅದನ್ನು ಗಣಿಸದೆ ಸ್ವಂತಪರಿಶ್ರಮದಿಂದ ಉನ್ನತಶ್ರೇಣಿಯಲ್ಲಿ ಪದವಿ ಪಡೆದಿದ್ದಾರೆ. ಇಬ್ಬರೂ ತಂದೆಯಂತೆ ಉತ್ತಮ ಅಧ್ಯಾಪಕರಾಗಿದ್ದಾರೆ. ಅಧ್ಯಾಪಕ ವೃತ್ತಿಯನ್ನು ತುಂಬಾ ಪ್ರೀತಿಸುತ್ತಾರಾದರೂ, ಹತ್ತು ಹಲವು ಕಾರ್ಯಕ್ಷೇತ್ರಗಳಲ್ಲಿ ಮನಸಾರೆ ದುಡಿಯುತ್ತಿದ್ದಾರೆ. ಅದರಲ್ಲಿ ಗುರುಸೇವೆ ಹಿರಿದು.

ಮೈಸೂರಿನಲ್ಲಿ ಪ್ರೊ॥ ತೀ.ನಂ.ಶ್ರೀಕಂಠಯ್ಯನವರ ಮನೆಯಲ್ಲಿ ಓದುತ್ತಿದ್ದ ಶ್ರೀನಾಥಣ್ಣಯ್ಯ ರಜೆಯಲ್ಲಿ ಮನೆಗೆ ಬರುವುದನ್ನೇ ಕಾತರದಿಂದ ಕಾಯುತ್ತಿದ್ದೆವು. ಅವನು ಬಂದರೆ ಸಾಕು. ನಮಗೆ ಹಿಗ್ಗೋ ಹಿಗ್ಗು. ಕೆ.ಜಿ.ಎಫ್‌ನಲ್ಲಿ ಮನೆಯ ಮುಂದಿದ್ದ ತೆಂಗಿನ ಮರಗಳ ಕೆಳಗೆ ಕುಳಿತು, ರಾತ್ರಿ ಊಟವಾದ ಮೇಲೆ; ಪುಣ್ಯಕೋಟಿ, ತುಪ್ಪಹೋಳಿಗೆ, ನೊಣ, ಕಾಗೆ, ಗುಬ್ಬಚ್ಚಿ, ರಾಜನ್‌ಕಿವಿ ಕತ್ತೆಕಿವಿ ಮುಂತಾದ ಕಥೆಗಳನ್ನು ರಸವತ್ತಾಗಿ ಹೇಳುತ್ತಿದ್ದರೆ, ನಾನು ತಂಗಿ ರಮಾ ಮೈಯೆಲ್ಲಾ ಕಿವಿಯಾಗಿ ಕೇಳುತ್ತಿದ್ದೆವು. ಅಮ್ಮನ ಜೊತೆ ಬಿಸಿಬೇಳೆಬಾತ್, ಸಜ್ಜಿಗೆ, ಹಾಲುಬಾಯಿ, ಗಸಗಸೆಪಾಯ್ಸ, ರವೆಉಂಡೆ, ಕೋಡುಬಳೆ ಮುಂತಾದ ತಿಂಡಿಗಳನ್ನು ಮಾಡುವುದು ಅವನ ಅಚ್ಚುಮೆಚ್ಚಿನ ಕೆಲಸ. ಮೈಸೂರುಪಾಕ್, ಕೊಬ್ಬರಿಮಿಠಾಯಿ ಮಾಡಿದಾಗೆಲ್ಲ ಬಾಣಲೆ ಕೆರೆಯುವುದು ಅವನೇ. ಅದನ್ನು ಯಾರಿಗೂ ಬಿಟ್ಟುಕೊಡುತ್ತಿರಲಿಲ್ಲ.

೭೦ರ ದಶಕದ ಮೊದಲಲ್ಲಿ ಶೃಂಗೇರಿ ಕಾಲೇಜಿನಲ್ಲಿ ಉಪನ್ಯಾಸಕನಾಗಿ ಕೆಲಸ ಆರಂಭಿಸಿದ ನಂತರ ನಮ್ಮ ವಾಸ್ತವ್ಯ ಕೆ.ಜಿ.ಎಫ್‌ನಿಂದ ಶೃಂಗೇರಿಗೆ ವರ್ಗಾಯಿಸಲ್ಪಟ್ಟಿತು.

ನಾನು ಅಲ್ಲಿನ ಪ್ರೌಢಶಾಲೆಗೆ ಸೇರಿದಾಗ ಅವನು ಮದ್ರಾಸಿನಿಂದ ಒಂದು ಹಸಿರು ಪ್ಲಾಸ್ಟಿಕ್ ಪೆಟ್ಟಿಗೆ ತಂದು ಕೊಟ್ಟಿದ್ದು, ಅದು ನನ್ನ ಬಳಿ ಇನ್ನೂ ಜೋಪಾನವಾಗಿದೆ. ಮಳೆಗಾಲದಲ್ಲಿ ಛತ್ರಿ ಹಿಡಿದು, ಗುಡ್ಡಹತ್ತಿ ಹೋಗುವಾಗ ಪುಸ್ತಕ ಕೊಂಡೊಯ್ಯಲು ತಂದ ಪೆಟ್ಟಿಗೆ (ಚಿಕ್ಕ ಸೂಟ್‌ಕೇಸ್)ಯನ್ನು ನಾನಂತೂ ಒಂದು ದಿನವೂ ಉಪಯೋಗಿಸಲಿಲ್ಲ. ಅಷ್ಟು ದೊಡ್ಡ ಪೆಟ್ಟಿಗೆಯಾಗಿತ್ತದು. ಅದಕ್ಕೂ ಮೊದಲು ಒಂದೆರಡು ವರ್ಷ ನಾವು ಶೃಂಗೇರಿಗೆ ಹೋದಾಗಲೆಲ್ಲ, ನಮ್ಮನ್ನು ಪರಿಚಿತರ ಮನೆಗೆ ಕರೆದುಕೊಂಡು ಹೋಗಿ, ಅವರ ಮುಂದೆ ನಮ್ಮಿಂದ ಸಂಗೀತ ಹೇಳಿಸುತ್ತಿದ್ದುದು ತುಂಬಾ ಮಜವಾಗಿತ್ತು. ಸರಳೆವರಸೆಯಿಂದ ಶುರುಮಾಡಿ ವರ್ಣಗಳವರೆಗೆ ಹೇಳಿ ಮುಗಿಸುತ್ತಿದ್ದೆವು. ಚಿಕ್ಕ ತಂಗಿಯರ ಕಛೇರಿ ಕೇಳಿ ಅವನಿಗೆ ಖುಷಿಯೋ ಖುಷಿ. ರಜಾ ದಿನಗಳಲ್ಲಿ ಸುತ್ತಮುತ್ತಲಲ್ಲಿದ್ದ ಮೂಲಂಗಿ ಗುಡ್ಡ, ಕಾಗೆ ಬಂಗಾರದ ಗುಡ್ಡ ಅಂತ ಎಲ್ಲ ಗುಡ್ಡಗಳಿಗೂ ಕರೆದುಕೊಂಡು ಹೋಗುತ್ತಿದ್ದ. ಆಗೆಲ್ಲಾ ನಾವು ಕಲ್ಲಾಟಕ್ಕೆ ಗುಂಡಗಿರುವ ಕಲ್ಲುಗಳು ಕಾಗೆ ಬಂಗಾರಗಳನ್ನೆಲ್ಲಾ ಲಂಗದಲ್ಲಿ ತುಂಬಿಕೊಂಡು ಬರುತ್ತಿದ್ದೆವು. ಕೆ.ಜಿ.ಎಫ್‌ನಲ್ಲಿ ಸಣ್ಣ ಕೆರೆಯನ್ನು ನೋಡಿರದಿದ್ದ ನಮಗೆ ಸಿಹಿಯಾದ, ಶುಭ್ರವಾದ ತುಂಗಾ ನದಿಯನ್ನು ಕಂಡು ಎಲ್ಲಿಲ್ಲದ ಸಂಭ್ರಮ. ಮಳೆಗಾಲ ಬಿಟ್ಟುಳಿದಂತೆ, ಪ್ರತಿದಿನ ತುಂಗಾ ಸ್ನಾನ. ಶ್ರೀನಾಥಣ್ಣಯ್ಯ ಬೆಳಗ್ಗೆ ೬ ಗಂಟೆಗೆ ಹೊಳೆಸ್ನಾನ, ಹೊಳೆಸ್ನಾನ ಅಂತ ಕೂಗಿದ ಕೂಡಲೇ ಎದ್ದು ಓಡುತ್ತಿದ್ದೆವು. ರಾತ್ರಿಯೇ ಬಟ್ಟೆಯೆಲ್ಲ ಜೋಡಿಸಿಕೊಂಡು ಬೆಳಗಾಗುವುದನ್ನೇ ಕಾಯುತ್ತಿದ್ದೆವು. ನದಿಯಲ್ಲಿ ನಮಗೆ ಈಜುವುದನ್ನೂ ಕಲಿಸುತ್ತಿದ್ದ.

ಆ ದಿನಗಳ ಶೃಂಗೇರಿಯ ಚಿತ್ರಣವೇ ಬೇರೆ. ಶ್ರೀಶಾರದೆಯ ಜಗದ್ಗುರುಗಳ ಸನ್ನಿಧಿ; ರಥೋತ್ಸವಗಳು, ಕಾರ್ತಿಕ ಮಾಸದ ದೀಪೋತ್ಸವಗಳು, ನವರಾತ್ರಿ ಉತ್ಸವಗಳ ವೈಭವವನ್ನು ನೋಡಿ ಆನಂದಿಸಿದ್ದೇವೆ. ೬ ತಿಂಗಳ ಮುಸಲಧಾರೆ, ಛಳಿಗಾಲದ ಹಿಮರಾಶಿ, ಬೇಸಿಗೆಯ ತಂಪು, ಸದಾ ಹಸಿರಿನಿಂದ ಕಂಗೊಳಿಸುವ ಪ್ರಕೃತಿಯನ್ನು ವರ್ಣಿಸಲಸದಳ.

ನಂತರ ಶ್ರೀನಾಥಣ್ಣಯ್ಯ ಬೆಂಗಳೂರಿನ ಎನ್.ಎ.ಎಲ್‌ನಲ್ಲಿ ಕೆಲಸ ಆರಂಭಿಸಿದ ಮೇಲೆ ನಾನಂತೂ ವರ್ಷದಲ್ಲಿ ಒಂದೆರಡು ತಿಂಗಳು ಅಣ್ಣನ ಮನೆಯಲ್ಲೇ ಇರುತ್ತಿದ್ದೆ. ಮಗಳು ಕ್ಷಮಾ ಹುಟ್ಟಿದಾಗಂತೂ ಮಗುವಿಗೆ ಹೆಸರಿಡುವ ಆಯ್ಕೆಯನ್ನು ನಮಗೇ ಬಿಟ್ಟುಕೊಟ್ಟಿದ್ದ. ನಮ್ಮ ತಂದೆಯಿಂದ ಬಳುವಳಿಯಾಗಿ ಬಂದ ಕನ್ನಡ ಭಾಷಾಭಿಮಾನ ಮತ್ತು ಸಾಂಸ್ಕೃತಿಕ ವಲಯದ ನಂಟು ನಮ್ಮಣ್ಣನಿಗೆ ದಿನೇ ದಿನೇ ಹೆಚ್ಚುತ್ತಾ ಹೋಗಿದೆ. ಅದರ ಫಲವಾಗಿ ಎನ್.ಎ.ಎಲ್‌ನ ಕನ್ನಡ ಸಾಂಸ್ಕೃತಿಕ ಸಂಘ, ಅದರ ಮೂಲಕ ಕನ್ನಡದಲ್ಲಿ 'ಕಣಾದ' ವಾರ್ಷಿಕ ವಿಜ್ಞಾನ ಪತ್ರಿಕೆಯ ಪ್ರಕಟಣೆ ಮುಖ್ಯವಾದದ್ದು. ಕನ್ನಡ ರಾಜ್ಯೋತ್ಸವದಂದು 'ಕಣಾದ' ಬಿಡುಗಡೆಯ ದಿನ ನಮ್ಮನ್ನು NALಗೆ ಕರೆದುಕೊಂಡು ಹೋಗಿ, ಎಲ್ಲರಿಗೂ ನಮ್ಮ ಪರಿಚಯ ಮಾಡಿಸುತ್ತಿದ್ದ. ಕರ್ನಾಟಕ ಗಮಕಕಲಾ ಪರಿಷತ್ತಿನ ಆರಂಭದಲ್ಲಿ ಕಾರ್ಯದರ್ಶಿಯಾಗಿದ್ದು, ಪರಿಷತ್ತಿನ ದಶಮಾನೋತ್ಸವವನ್ನು ಅದ್ದೂರಿಯಾಗಿ ಮಾಡಿಸಿದ ಕೀರ್ತಿವಂತ. ತಾತನ ಮನೆಯಲ್ಲಿದ್ದಾಗಿನಿಂದ ಪು.ತಿ.ನ.

ಎಲ್.ಎಸ್. ಶೇಷಗಿರಿರಾವ್, ದಿ.ವಿದ್ವಾನ್ ರಂಗನಾಥ ಶರ್ಮಾ ಮೊದಲಾ ಹಿರಿ-ಕಿರಿಯ ಸಾಹಿತಿಗಳ ಒಡನಾಟ ಈಗಲೂ ಮುಂದುವರಿದಿದೆ. ದಿವಂಗತರಾದ ವಿದ್ವಾನ್ ಎನ್.ರಂಗನಾಥಶರ್ಮಾ, ಗಮಕಿ ಎಂ. ರಾಘವೇಂದ್ರರಾವ್, ವಿದ್ವಾನ್ ಕೃಷ್ಣಜೋಯಿಸರೇ ಮೊದಲಾದ ಹಿರಿಯ ಚೇತನರ ಸಾರ್ವಜನಿಕ ಸನ್ಮಾನದ ರೂವಾರಿ. ಶ್ರೀ ಶಂಕರ ಮಠದಲ್ಲಿ ಮ್ಯಾನೇಜರ್ ಆಗಿದ್ದಾಗ; ಶ್ರೀ ಶಾರದಾ ರಥೋತ್ಸವ, ವಟುಗಳಿಗೆ ಬೇಸಿಗೆ ಶಿಬಿರ, ಸಂಗೀತ, ಗಮಕ, ಭಾಷಣಗಳೇ ಮುಂತಾದ ಅನೇಕ ಕಾರ್ಯಕ್ರಮಗಳನ್ನು ನಡೆಸಿ, ಜನಮನ್ನಣೆ ಪಡೆದಾತ. ಕನ್ನಡ ಗಣಕ ಪರಿಷತ್ತನ್ನು ಸ್ಥಾಪಿಸಿ, ನುಡಿ ತಂತ್ರಾಂಶವನ್ನು ನಾಡಿನೆಲ್ಲೆಡೆ ಉಚಿತವಾಗಿ ನೀಡಿರುವುದಲ್ಲದೆ, ಕನ್ನಡ ವಿಶ್ವಕೋಶ, ಕನ್ನಡ-ಕನ್ನಡ ನಿಘಂಟು, ಪಂಪಕಾವ್ಯ, ಗದುಗಿನ ಭಾರತದ ವಿಮರ್ಶಾತ್ಮಕ, ಪಠ್ಯಸಮೇತವಾದ ವಿಶೇಷ ಸಿಡಿ. ಹೊರತಂದಿರುವುದು ಶ್ಲಾಘನೀಯ ಕಾರ್ಯ.

ನಗರ ಸಾರಿಗೆಯಲ್ಲಿ, ಮದುವೆ ಮುಂತಾದ ಸಮಾರಂಭಗಳಲ್ಲಿ, ರಸ್ತೆಗಳಲ್ಲಿ ಓಡಾಡುವಾಗ ಚಿಕ್ಕ ಮಕ್ಕಳನ್ನು ಕಂಡರೆ; ಅವರನ್ನು ಮಾತಾಡಿಸಿ, ಜೋಳಿಗೆಯಿಂದ ಕಥೆ ಅಥವಾ ಶಿಶುಗೀತೆಯ ಪ್ರತಿಯೊಂದನ್ನು ಅವರಿಗೆ ಕೊಡುವ ಪರಿಪಾಠ ಮುಂದುವರಿಯುತ್ತಲೇ.... ಇದೆ. ಆ ಜೋಳಿಗೆ ಮಾತ್ರ ಅದ್ಭುತವಾದದ್ದು. ಕಥೆ, ಶಿಶುಗೀತೆ, ವಿಳಾಸ, ಮಾತೃಭಾಷಾ ಶಿಕ್ಷಣ, ವಿಜ್ಞಾನ-ತಂತ್ರಜ್ಞಾನ, ಕಣಾದ, ಗಣಕ-ನುಡಿ ತಂತ್ರಾಂಶಗಳ ಜೊತೆಗೆ ಗಮಕ ಮುಂತಾದ ಅನೇಕ ವಿಷಯಗಳ ಮಾಹಿತಿಗಳನ್ನು ಅದು ತುಂಬಿಕೊಂಡಿದೆ. ನಮ್ಮಣ್ಣನಿಗೂ ಆ ಜೋಳಿಗೆಗೂ ಅವಿನಾಭಾವ ಸಂಬಂಧ. ಹಾಗೆಯೇ ವಿದ್ಯುಚ್ಛಕ್ತಿ, ನೀರು, ದೂರವಾಣಿ ಬಿಲ್ಲನ್ನು ಕಟ್ಟಲು ಹೋದರೆ; ಯಾವುದೇ ಕಛೇರಿ, ಶಾಲಾ ಕಾಲೇಜುಗಳಿಗೆ ಹೋದರೆ, ಅಲ್ಲಿನ ಗಣಕ ಯಂತ್ರದಲ್ಲಿ ನುಡಿ ತಂತ್ರಾಂಶವಿದೆಯೇ ಎಂದು ಕೇಳಿ, ಇಲ್ಲವಾದಲ್ಲಿ ಅಲ್ಲೇ ನುಡಿ ತಂತ್ರಾಂಶವನ್ನು ಹಾಕಿ, ಅದರ ಪ್ರಾತ್ಯಕ್ಷಿಕೆಯನ್ನು ಮಾಡಿ ತೋರಿಸುವುದು ಅವನ ಮೊದಲ ಆದ್ಯತೆಯಾಗಿದೆ. ಇತ್ತೀಚೆಗಂತೂ ಚಿಕ್ಕ ಮಕ್ಕಳಿಗೆ ಆಂಗ್ಲ ಭಾಷೆಯ 'ಸ್ಪೆಲ್ಲಿಂಗ್'ನಿಂದಾಗುವ ತೊಂದರೆ ತಾಪತ್ರಯಗಳನ್ನು ವಿವರಿಸಿ, ಮಾತೃಭಾಷಾ ಶಿಕ್ಷಣದ ಮಹತ್ವವನ್ನು ತಿಳಿಸಿ ಹೇಳುವ ಪರಿ ಅನನ್ಯ.

ನಾನು ಈಗ್ಗೆ ೪ ವರ್ಷಗಳ ಹಿಂದೆ ಗಮಕ ಪರವಾದ ಸಂಸ್ಥೆಯೊಂದನ್ನು ಆರಂಭಿಸುವ ವಿಚಾರ ಅವನ ಮುಂದಿಟ್ಟಾಗ, ಖಂಡಾಪಟ್ಟೆ ಸಂತೋಷಗೊಂಡು ಈ ದಿನ 'ಶ್ರೀ ವಾಗ್ದೇವಿ ಗಮಕಕಲಾ ಪ್ರತಿಷ್ಠಾನ'ದ ಏಳ್ಗೆಗೆ ನಮಗಿಂತ ಹೆಚ್ಚು ಉತ್ಸಾಹದಿಂದ ದುಡಿಯುತ್ತಿರುವುದನ್ನು ಹೇಗೆ ವರ್ಣಿಸಲಿ?

ಮೋಹಕ ರೂಪದ ಗಿರಿಯನ್ನು ಅಮ್ಮ ತುಂಬಾ ಜೋಪಾನ ಮಾಡ್ತಾ ಇದ್ಲು. ಅಕ್ಕ ಉಷಾ ಆಕರ್ಷಕವಾದ ಅಂಗಿ ಹೊಲಿದು ಹಾಕುತ್ತಿದ್ದಳು. ಚೂಟಿಯಾಗಿ, ಮುದ್ದು ಮುದ್ದಾಗಿದ್ದ ಇವನನ್ನು ಸರ್ಕಸ್‌ನವರು ಎತ್ತಿಕೊಂಡು ಹೋಗುತ್ತಾರೆಂಬ ಭಯದಿಂದ ಅಮ್ಮ ಅವನನ್ನು ಒಂಟಿಯಾಗಿ ಎಲ್ಲಿಗೂ ಕಳಿಸುತ್ತಿರಲಿಲ್ಲ. ಪ್ರೌಢಶಾಲೆಗೆ ಹೋಗುವಾಗಲೂ

ಸ್ಟ್ರೈಕ್ ಶುರುವಾದರೆ ಸಾಕು, ಹಿಂದಿನ ದಾರಿಯಿಂದ ಮನೆಗೆ ಕರೆತರುತ್ತಿದ್ದಳು. ಅಮ್ಮ ಒಮ್ಮೆ ೭೫ನೇ ವಯಸ್ಸಿನಲ್ಲಿ ಮಳೆಗಾಲದಲ್ಲಿ ಜಾರಿಬಿದ್ದು. ಬಲ ಮುಂಗೈ ಮೂಳೆ ಮುರಿದು ಕೈ ಸೊಟ್ಟಗಾಗಿತ್ತು. ಅಂಥಾದ್ದರಲ್ಲೂ ಮಗನ ಮೇಲಿನ ಮಮತೆಯಿಂದ ಹಬ್ಬದಲ್ಲಿ ಒಬ್ಬಟ್ಟು, ಸಂಕ್ರಾಂತಿ ಎಳ್ಳು, ಸಜ್ಜಿಗೆ ಮುಂತಾದ ಸಿಹಿ ತಿಂಡಿ ಮಾಡಿಕೊಡುತ್ತಿದ್ದಳು. ಅಮ್ಮನಿಗೆ ತನ್ನ ಜೀವವೇ ಗಿರಿಯಾಗಿದ್ದ. ಬದುಕಿರುವವರೆಗೂ ಅಮ್ಮ ಅವನೊಂದಿಗೇಇದ್ದಳು. ಅಣ್ಣನಿಗಂತೂ ಹೆಮ್ಮೆಯ ಪುತ್ರ, ಅಕ್ಕ, ಶ್ರೀನಾಥಣ್ಣಯ್ಯನಿಗೆ ಮಮತೆಯ ತಮ್ಮ. ಉಷಾ ಮತ್ತು ಭಾವಂಗೆ ತಮ್ಮ ಮಕ್ಕಳಿಗಿಂತಲೂ ಮಿಗಿಲಾದ ಮಮತೆ. ನಮಗೆ ಪ್ರೀತಿಯ ಅಣ್ಣ ಚಿಕ್ಕವರಿಗೆಲ್ಲಾ ಗಿರಿ ಮಾವ, ಗಿರಿ ತಾತ. ಪರಿಚಿತರಿಗೆ ಗಿರಿಧರ ಶಾಸ್ತ್ರಿಯಾಗಿ ಎಲ್ಲರ ಮನಸೆಳೆವಾತನೀತ.

ನಾನು ಗಿರಿ ಚಿಕ್ಕ ವಯಸ್ಸಿನಲ್ಲಿ ಚೆನ್ನಾಗಿ ಜಗಳವಾಡುತ್ತಿದ್ದೆವು. ಅವನು ತಿಂಡಿಪೋತ. ಅಮ್ಮ ಸದಾ ಏನಾದರೊಂದು ವಿಶೇಷ ತಿಂಡಿ ಮಾಡುತ್ತಿದ್ದಳು. ಏನೇ ತಿಂಡಿ ಮಾಡಿದರೂ ಅವನಿಗೆ ಅರ್ಧ–ಉಳಿದರ್ಧ ನಾನು ತಂಗಿ ರಮಾ ಮುಂತಾದವರಿಗೆ, ಅಮ್ಮನ ತಿಂಡಿಯಲ್ಲೂ ಅವನಿಗೆ ಒಂದು ಪಾಲು. ಇಷ್ಟಲ್ಲದೆ ಉಪಾಯ ಮಾಡಿ ರಮಾಳಿಂದಲೂ ಗಿಟ್ಟಿಸುತ್ತಿದ್ದ. ನಾನು ಮಾತ್ರ ಕೊಡುತ್ತಿರಲಿಲ್ಲ. ಆಗ ಕೀಟಲೆ ಮಾಡಿ ಅಳಿಸಿ ಜಗಳ ತೆಗೀತಿದ್ದ. ಅಣ್ಣ ಇದ್ದಾಗ ನಾನು ರಂಪ ಮಾಡಿ ಹೊಡೆದಾಡಿದಾಗ ಅಣ್ಣನಿಂದ ಅವನಿಗೆ ಏಟು; ಅಣ್ಣ ಹೊರಗೆ ಹೋದಾಗ ಅವನು ಜಗಳತೆಗೆದು ಹೊಡೆದಾಡಿದಾಗ, ಅಮ್ಮನಿಂದ ನನಗೆ ಏಟು ಬೀಳುತ್ತಿತ್ತು. ದೊಡ್ಡವರಾದ ಮೇಲೂ ಒಮ್ಮೊಮ್ಮೆ ಜಗಳ, ಹೊಡೆದಾಟವಾದಾಗ "ನಿನ್ನ ಮದುವೆಗೆ ಕಬ್ಬಿಣದ ಕೋಲನ್ನು ಉಡುಗೊರೆಯಾಗಿ ಕೊಡ್ತೀನಿ, ಜಗಳಗಂಟಿ" ಎನ್ನುತ್ತಿದ್ದ. ಕಾಕತಾಳೀಯುವೆಂಬಂತೆ ಭದ್ರಾವತಿ ಕಬ್ಬಿಣ ಕಾರ್ಖಾನೆಯುಲ್ಲಿ ಕೆಲಸ ಮಾಡುವವರೊಂದಿಗೇ ನನ್ನ ವಿವಾಹವಾಯ್ತು.

ಅವನ ಉಪನಯನ ಶೃಂಗೇರಿಯಲ್ಲಿ ಶಂಕರಾಚಾರ್ಯರ ದೇವಾಲಯದ ಆವರಣದಲ್ಲಿ ನಾಲ್ಕು ದಿನ ನಡೆಯಿತು. ಅಷ್ಟು ದಿನಗಳೂ ಅವನು ಅಲ್ಲೇ ಇರಬೇಕಾಗಿತ್ತು. ಮನೆಯಲ್ಲಿ ಚಕ್ಕುಲಿ, ಉಂಡೆ ಮುಂತಾದ ಬಗೆ ಬಗೆಯ ತಿಂಡಿಗಳು. ಅವನಿಗೆ ತಿಂಡಿಗಳ ಮೇಲೇ ಚಿತ್ತ. ನಾನು, ರಮಾ ಅಕ್ಕನ ಮಕ್ಕಳಾದ ಪಂಕಜ, ಮಾಲತಿ, ಸುಶೀಲ ಅವನ ಪಕ್ಕದಲ್ಲೇ ಇರ್ತಾ ಇದ್ವಿ, ಅರ್ಧ ಗಂಟೆಗೊಮ್ಮೆ 'ತಿಂಡಿ ತಂದುಕೊಡ್ರೇ' ಅಂತಿದ್ದ. ನಾವು ಗಿರಿಗೆ ಅಂತ ಕೇಳಿ ಅಮ್ಮನಿಂದ ತಿಂಡಿ ತೊಗೊಂಡು ಹೋಗಿ ಕೊಡ್ತಾ ಇದ್ವಿ, ಪಾಪ ಹೋಗ್ಲಿ ಅಂತ ನಮಗೂ ಚೂರು ಪಾರು ಕೊಟ್ಟು ಆರಾಮಾಗಿ ತಿನ್ತಾ ಇದ್ದ. ಅವನ ಸಂಧ್ಯಾವಂದನೆ, ಅಗ್ನಿಕಾರ್ಯಕ್ಕೆ ಅಣಿ ಮಾಡಿಕೊಟ್ಟು ಅವನ ಹಿಂದೆ ಮುಂದೇ ಸುತ್ತುತ್ತಾ ಇದ್ವಿ, ಶೃಂಗೇರಿಗೆ ಬಂದ ಮೇಲೆ ಒಮ್ಮೆ ಶರಪಂಜರ ಸಿನಿಮಾಕ್ಕೆ ಟೆಂಟ್‌ಗೆ ಕರೆದುಕೊಂಡು ಹೋಗಿದ್ದ, ಬ್ರಾಹ್ಮಣರಿಗೆ ಹೋಟೆಲ್, ಸಿನಿಮಾ ನಿಷಿದ್ಧವೆಂಬ ತತ್ತ್ವ ನಮ್ಮನೇಲಿ. ಸಿನಿಮಾದಿಂದ ಬಂದ ಮೇಲೆ ಅಣ್ಣ ಅವನಿಗೆ ಸಿಕ್ಕಾಪಟ್ಟೆ ಬಯ್ದು, ಮುಂದೆ ಸಿನಿಮಾ ಗಿನಿಮಾ ಎಲ್ಲಾ ಬಂದ್

ಆಯ್ತು. ಧನುರ್ಮಾಸದಲ್ಲಿ ಬೆಳಗಿನ ಜಾವ ಎದ್ದು ದೇವರ ಸ್ತೋತ್ರಗಳನ್ನು ಹೇಳಿ, ಹೊಳೆ ಆಚೆ ಪೂಜೆಗೆ ಹೋಗಿ ಬರ್ತಿದ್ವಿ, ಮನೆಯಲ್ಲಿ ಸಂಗೀತ, ಸಂಸ್ಕೃತ, ಸ್ತೂತ್ರ ಪಾಠಗಳು ನಡೆಯುತ್ತಿದ್ದದ್ದರಿಂದ ಉತ್ತಮ ಸಂಸ್ಕಾರ ದೊರೆಯಿತು.

ವಿದ್ಯಾರ್ಥಿಯಾಗಿದ್ದಾಗ ಚರ್ಚಾಸ್ಪರ್ಧೆ, ಭಾಷಣ ಸ್ಪರ್ಧೆಗಳಲ್ಲಿ ಭಾಗವಹಿಸಿ, ಅನೇಕ ಬಹುಮಾನಗಳನ್ನು ಪಡೆದಿದ್ದಾನೆ. ನಾಟಕಗಳಲ್ಲೂ ಪಾತ್ರವಹಿಸಿದ್ದಿದೆ. ತೇಜಸ್ವಿಯಾದ ಗಿರಿ ಉತ್ತಮವಾಗ್ಮಿ, ಮಿತಮೃದುಭಾಷಿ. ಯಾವುದೇ ವಿಷಯದ ಬಗ್ಗೆಯಾದರೂ ನಿರರ್ಗಳವಾಗಿ ಉಪನ್ಯಾಸಮಾಡುವ ಸಾಮರ್ಥ್ಯ ಇವನಿಗಿದೆ. ವೇದಾಧ್ಯಯನ ಅಧ್ಯಾಪನಗಳಲ್ಲಿ ನಿರತನಾಗಿದ್ದಾನೆ.

ಅಪ್ಪಟ ಬ್ರಹ್ಮಚಾರಿಯಾದ ಗಿರಿಯ ಮುಂದಾಳತ್ವದಲ್ಲಿ ನಡೆದಿರುವ ಮದುವೆಗಳಿಗೆ ಲೆಕ್ಕವಿಲ್ಲ. ನಮ್ಮ ಮತ್ತು ನಮ್ಮ ಮನೆಯ ಮಕ್ಕಳೆಲ್ಲರ ಮದುವೆ ಮಾತುಕತೆಗೆ ಅವನಿರಲೇಬೇಕು. ಊರಿನಲ್ಲೂ ಈ ಯಜಮಾನಿಕೆ ಅನೂಚಾನವಾಗಿ ನಡೆದಿದೆ. ಕೌಟುಂಬಿಕವಾಗಿ, ಧಾರ್ಮಿಕವಾಗಿ ಯಾವುದೇ ಸಂದೇಹಗಳಿದ್ದರೂ ಕೇಳಿದಕೂಡಲೇ ಸೂಕ್ತ ಸಲಹೆ, ಮಾರ್ಗದರ್ಶನ ಅವನಿಂದ ಲಭ್ಯ. ಯಾರಿಗಾದರೂ ತೊಂದರೆಯಾದರೆ,ಅಮ್ಮನಂತೆ ಅವನದೂ ಮುನ್ನುಗ್ಗಿ ಸಹಾಯ ಮಾಡುವ ಸ್ವಭಾವ. ಇಂಥ ಸುಗುಣಿಯಾದ ಇವನು ವಿಶ್ವಕುಟುಂಬಿ. ಬಂಧುಗಳು–ಅನ್ಯರು, ಹೊಸಬರು–ಹಳಬರೆನ್ನದೆ ಯಾರು,ಯಾವಾಗ, ಎಷ್ಟುದಿನ ಬೇಕಾದರೂ ಅವನಿರುವ ಆಶ್ರಮದಲ್ಲಿರಬಹುದು. ಎಲ್ಲರಿಗೂ ಸಮಾನಸ್ಥಾನ. ಆಶ್ರಮದಲ್ಲಿ ೧೪–೧೫ವರ್ಷಗಳಿಂದ ೮–೧೦ ಜನ ವಿದ್ಯಾರ್ಥಿನಿಯರಿದ್ದು ವಿದ್ಯಾಭ್ಯಾಸಮಾಡುತ್ತಿದ್ದಾರೆ. ಅವರನ್ನೆಲ್ಲಾ ತಮ್ಮಮನೆಯ ಮಕ್ಕಳಂತೆಯೇ ಮಮತೆಯಿಂದ ನೋಡಿಕೊಳ್ಳುತ್ತಿದ್ದಾನೆ.

ಗಿರಿಯ "ಏಕಾದಶಿ ಮೌನ" ಕಾಲದ ಪ್ರಯಾಣದಲ್ಲಂತೂ, ಮೂಕನೆಂದು ತಿಳಿದ ಎಷ್ಟು ಜನರ ಕನಿಕರಕ್ಕೊಳಗಾಗಿದ್ದಾನೋ ಗೊತ್ತಿಲ್ಲ. ಅಪ್ಪ ಮೃತರಾದಾಗ ದೀಕ್ಷೆಯೆಂದು ಉದ್ದುದ್ದ ಗಡ್ಡ ಬಿಟ್ಟುಕೊಂಡು, ಬಿಳಿಪಂಚೆ ಜುಬ್ಬಾ ತಲೆಗೊಂದು ಕ್ರೋಷದಲ್ಲಿ ಹೆಣೆದ ಟೋಪಿ ಧರಿಸಿ ಪ್ರಯಾಣಿಸಿದಾಗ ಬಸ್ಸಿನ ಚಾಲಕ (ಮುಸಲ್ಮಾನ) ತಮ್ಮವನೆಂದೇ ತಿಳಿದುಕೊಂಡಿದ್ದು; ಸ್ವಲ್ಪ ಹೊತ್ತಿನಲ್ಲೇ ಶ್ರೀ ಮಠದ ಮುಂದೆ ಭಸ್ಮ ಕುಂಕುಮಗಳಿಂದ ಶೋಭಿಸುತ್ತಿದ್ದ ಇವನನ್ನು ಕಂಡು ದಂಗಾಗಿ ಹೋಗಿದ್ದ. ಈಗಲೂ ಖಾದಿ ಪಂಚೆ ಜುಬ್ಬಾಗಳೇ ಅವನ ಪ್ರಿಯವಾದ ಉಡುಪುಗಳು. ಜುಬ್ಬಾ, ಬನಿಯನ್‌ಗಳನ್ನು ಅಕ್ಕ ಉಷಾಳೇ ಪ್ರೀತಿಯಿಂದ ಹೊಲಿದುಕೊಡುತ್ತಾಳೆ. ದೀಕ್ಷೆ ಬಿಟ್ಟ ಕಾಲದಲ್ಲೇ ಒಮ್ಮೆ ಗುರುಗಳೊಬ್ಬರಿಗಾಗಿ, ದಂಡ, ಕಮಂಡಲುಗಳನ್ನು ಶ್ರೀ ಮಠದಿಂದ ತೆಗೆದುಕೊಂಡು ಹೋಗುವ ಸಂದರ್ಭವೊದಗಿತ್ತು. ಗುರುಗಳು ಕೊಟ್ಟಿದ್ದ ಕಾವಿಬಣ್ಣದಶಾಲು ಹೊದ್ದುಕೊಂಡು, ಕೈಯಲ್ಲಿ ದಂಡಕಮಂಡಲಗಳನ್ನು ಹಿಡಿದುಕೊಂಡಿದ್ದನ್ನುನೋಡಿ ವಿಮಾನನಿಲ್ದಾಣದ ಅಧಿಕಾರಿಗಳು, ಇವನೇ ಸ್ವಾಮೀಜಿಯೆಂಬ ಭ್ರಮೆಗೊಳಗಾಗಿದ್ದನ್ನು

ಕಂಡು ಇವನಿಗೆ ಒಳಗೊಳಗೇನಗು.ಇವನ ಇಂತಹ ವೇಷಭೂಷಣಗಳಿಂದ ಎಷ್ಟುಜನ ಮರುಳಾಗಿದ್ದಾರೋ ಕಾಣೆ.

ಹೋಮಿಯೋಪಥಿ ವೈದ್ಯನಾಗಿರುವ ಅವನು ಸಾಮಾನ್ಯ ಜ್ವರ, ನೆಗಡಿ ಮುಂತಾದವುಗಳೊಡನೆ ಮೈಗ್ರೇನ್, ಕಿಡ್ನಿ ಸ್ಟೋನ್, ಅಲ್ಸರ್, ಗರ್ಭಕೋಶಕ್ಕೆ ಸಂಬಂಧಿಸಿದ ರೋಗಗಳು, ಸ್ಲಿಪ್ ಡಿಸ್ಕ್, ಚರ್ಮರೋಗಗಳು, ಆಸ್ತಮಾ ಹಾಗೂ ಮಧುಮೇಹದಿಂದಾಗುವ ಇತರೆ ಖಾಯಿಲೆಗಳಿಗೂ ಸೂಕ್ತ ಔಷಧಗಳನ್ನು ನೀಡುತ್ತಿದ್ದಾನೆ. ಇದರ ನಡುವೆ ಅವನಿಗೂ ತಲೆನೋವಿಗೂ ಅನ್ಯೋನ್ಯರಾಗ. ಅದಿನ್ನೂ ಅವನನ್ನು ಬಿಟ್ಟುಹೋಗುತ್ತಿಲ್ಲ. ಹಿರಿಯಣ್ಣಂದಿರಾದ ಅವರು ವಯೋವೃದ್ದರಾದ ತಾಯ್ತಂದೆಗಳಿಗೆ ಬೆನ್ನೆಲುಬಾಗಿದ್ದು, ನಮ್ಮಿಬ್ಬರ ಮದುವೆ ಮುಂತಾದ ಜವಾಬ್ದಾರಿಗಳನ್ನು ಸಂತೋಷದಿಂದಲೇ ನಿರ್ವಹಿಸಿ, ಈಗಲೂ ನಮಗೆ ಬೆಂಬಲವಾಗಿರುವುದು ನಮ್ಮ ಅದೃಷ್ಟ. ಈ ವಿಷಯದಲ್ಲಿ ನಮ್ಮತ್ತಿಗೆ ಮಾ॥ ಸೌ॥ ಸರಸ್ವತಿ ಕೂಡ ಇಂದಿಗೂ ನಮ್ಮನ್ನು ಪ್ರೀತಿಯಿಂದಲೇ ಆದರಿಸುತ್ತಿದ್ದಾರೆ. ನಾವು ಒಡಹುಟ್ಟಿದ ನಾಲ್ಕು ಜನ ಅಕ್ಕ ತಂಗಿಯರು ಹಾಗೂ ನಮ್ಮ ಮಕ್ಕಳ ವಿದ್ಯಾಭ್ಯಾಸ, ಮದುವೆ, ಮುಂಜಿ ಮತ್ತು ಅನಾರೋಗ್ಯದ ಸಂದರ್ಭಗಳಲ್ಲಂತೂ ತಮ್ಮೆಲ್ಲ ಕೆಲಸಗಳನ್ನು ಬಿಟ್ಟು, ಪ್ರೀತಿಯಿಂದ ಔಷಧೋಪಚಾರ ಮಾಡಿ, ನಮ್ಮೊಂದಿಗಿದ್ದು ಧೈರ್ಯ ನೀಡುವ ಸಂದರ್ಭಗಳನ್ನು ನಾವು ಆಜೀವ ಕೃತಜ್ಞತೆಯಿಂದ ಸ್ಮರಿಸುತ್ತೇವೆ.

ಯಾರು ತೆಗಳಲಿ, ಹೊಗಳಲಿ ಎಲ್ಲವನ್ನೂ ಸಮದೃಷ್ಟಿಯಿಂದ ಸ್ವೀಕರಿಸುವ ಅಣ್ಣಂದಿರು ಸದಾ ಸುಖಿಗಳು. ಅಪಾರ ಬಂಧುವರ್ಗದವರನ್ನೂ, ಸ್ನೇಹಿತರನ್ನೂ ಸದಾ ಸಂಪರ್ಕದಲ್ಲಿಟ್ಟುಕೊಂಡು, ಯಾರಿಗೆ ಯಾವ ಸಂದರ್ಭದಲ್ಲಾದರೂ ತಮ್ಮ ಶಕ್ತಿ ಮೀರಿ ಉಪಕಾರ ಮಾಡುವ ಬುದ್ಧಿ ಅವರದು.

'ತನಗೆಂಬುದ ಬಿಟ್ಟು ಪರರಿಗೆನುತ್ತಿರೆ।
ಧನದಗಳಿಕೆ ದಾನವಗೈಯ್ಯುವುದಕಾಗಿರೆ
ಜನುಮದ ಹಂಗಿಗೆ ಜೋತು ಬೀಳದೆ
ಮನವ ರಾಘವನ ಮನೆಯನು ಮಾಡಿರೆ'

ಎಂಬ ಕವಿವಾಣಿಯಂತೆ ನಿಃಸ್ವಾರ್ಥತೆಯಿಂದ ಕೂಡಿದ ಅವರ ಬದುಕು ಸಾರ್ಥಕವಾಗಲಿ. ಅವರ ಮನೋಭೀಷ್ಟಗಳು ನೆರವೇರಲಿ. ಅವರ ಬಾಳಿನಲ್ಲಿ ಪ್ರಜ್ವಲಿಸುತ್ತಿರುವ ಜ್ಞಾನವೆಂಬ ನಂದಾದೀಪ ಇತರರಿಗೆ ದಾರಿದೀಪವಾಗಲಿ. ಶ್ರೀ ಗುರುದೇವತಾನುಗ್ರಹವು ಸದಾ ಅವರ ಮೇಲಿರಲಿ ಎಂದು ಪರಮಾತ್ಮನಲ್ಲಿ ಪ್ರಾರ್ಥಿಸುತ್ತೇವೆ.

◆

ಪತಿ, ಮೈದುನರು – ನಾ ಕಂಡಂತೆ

– ಎ.ಸರಸ್ವತಿ, ಬೆಂಗಳೂರು

ನನ್ನ ಮದುವೆ ೧೯೭೨, ಮೇ ೨೪ರಂದು ಶ್ರೀನಾಥಶಾಸ್ತ್ರಿಗಳೊಡನೆ ನಡೆಯಿತು. ಅಕ್ಕ-ಭಾವಂದಿರಿಂದ ಗೊತ್ತಾದ ಮದುವೆಯಾದರೂ, ಆನೇಕಲ್‌ನಲ್ಲಿ ನನ್ನ ತಂದೆ-ತಾಯಿಯರಿಗೆ ನನ್ನ ಅತ್ತೆಮಾವನವರ ಪರಿಚಯ ಮದುವೆ ಮೊದಲೇ ಇತ್ತು. ನಾನು ಮದುವೆಯಾಗಿ ಶೃಂಗೇರಿಗೆ ಬಂದಾಗ, ಮಲೆನಾಡಿನ ಹೊಸ ಪರಿಸರವನ್ನು ಹೊಕ್ಕಿದ್ದೆ. ಶೃಂಗೇರಿಯ ಶಾರದಮ್ಮನವರು, ಗುರುಗಳವರನ್ನು ನಿತ್ಯವೂ ದರ್ಶಿಸುತ್ತಾ, ಶ್ರೀ ಗುರುಗಳ ಆಶೀರ್ವಚನಗಳನ್ನು ಕೇಳುತ್ತಾ ಪುಳಕಿತಳಾಗಿದ್ದೆ. ಸಂಸ್ಕೃತ ಹಾಗೂ ಕನ್ನಡ ಪಂಡಿತರಾಗಿದ್ದ ನನ್ನ ಮಾವನವರಿಂದಾಗಿ, ಮನೆಯಲ್ಲಿ ಸಾಹಿತ್ಯಿಕ ವಾತಾವರಣ ಇತ್ತು. ಇಂತಹ ಸಾಹಿತ್ಯಿಕ ವಾತಾವರಣ ಹಾಗೂ ಮೈಸೂರಿನಲ್ಲಿ ನನ್ನ ಅತ್ತೆಯವರ ಚಿಕ್ಕಪ್ಪನವರಾದ ತೀನಂಶ್ರೀ ಅವರ ಮನೆಯಲ್ಲಿದ್ದುದರ ಪ್ರಭಾವದಿಂದ ನನ್ನ ಯಜಮಾನರಿಗೂ ಸಾಹಿತ್ಯದಲ್ಲಿ ಅಭಿರುಚಿ ಬೆಳೆಯಿತು. ಇದರ ಪರಿಣಾಮವಾಗಿ ಹಲವಾರು ಸಾಹಿತ್ಯ ಸಮ್ಮೇಳನಗಳಲ್ಲಿ ಉತ್ತಮ ಉಪನ್ಯಾಸಗಳನ್ನು ಕೇಳುವ ಹಾಗೂ ಪ್ರಸಿದ್ಧ ಸಾಹಿತಿಗಳನ್ನು ನೋಡುವ ಅವಕಾಶ ನನಗೆ ಸುಲಭವಾಗಿ ಒದಗಿಬಂತು. ನನ್ನ ಅತ್ತೆಯವರಿಗೂ ಸಾಹಿತ್ಯ-ಸಂಗೀತದಲ್ಲಿ ಒಲವಿದ್ದು, ಸಂಪ್ರದಾಯ ಗೀತೆಗಳು, ದೇವರನಾಮಗಳನ್ನು ಹಾಡುತ್ತಿದ್ದರು. ಮನೆಯ ವಾತಾವರಣ, ಅತ್ತೆ, ಮಾವ, ಯಜಮಾನರ ಆಸಕ್ತಿ – ಅಭಿರುಚಿಗಳಿಂದಾಗಿ, ಮದುವೆಯಾಗುವ ಮೊದಲೇ ಸಂಗೀತ, ಸಾಹಿತ್ಯಕ್ಕೆ ಪ್ರವೇಶ ಪಡೆದಿದ್ದ ನನಗೆ ಇವುಗಳಲ್ಲಿ ಮುಂದುವರೆಯುವ ಅವಕಾಶ ಲಭಿಸಿತು.

೧೯೭೩ರಲ್ಲಿ ನನ್ನ ಯಜಮಾನರಿಗೆ ರಾಷ್ಟ್ರೀಯ ವೈಮಾನಿಕೀಯ ಪ್ರಯೋಗಾಲಯದಲ್ಲಿ ವಿಜ್ಞಾನಿಯಾಗಿ ಕೆಲಸ ಸಿಕ್ಕಿದ್ದರಿಂದ, ನಾವು ಶೃಂಗೇರಿ ಬಿಟ್ಟು ಬೆಂಗಳೂರಿಗೆ ಪ್ರಯಾಣ ಬೆಳೆಸಬೇಕಾಯಿತು. ವಿಜ್ಞಾನಿಯಾಗಿದ್ದರೂ, ಪ್ರಯೋಗಾಲಯದ ಕನ್ನಡ ಸಂಘದ ವಿವಿಧ ಚಟುವಟಿಕೆಗಳಲ್ಲಿ ಸಕ್ರಿಯವಾಗಿ ಪಾಲ್ಗೊಂಡು, **'ಕಣಾದ'** ಎಂಬ ವಾರ್ಷಿಕ ಕನ್ನಡ ವಿಜ್ಞಾನ ಪತ್ರಿಕೆಯನ್ನು ಅವರ ಸ್ನೇಹಿತರೊಂದಿಗೆ ಆರಂಭಿಸಿದರು. ಕಣಾದ ಪ್ರಕಟಣೆ ಕಾರ್ಯದ ಸಲುವಾಗಿ ನನ್ನ ಯಜಮಾನರ ಸ್ನೇಹಿತರು ಹಲವು ಬಾರಿ ನಮ್ಮ ಮನೆಗೆ ಬರುತ್ತಿದ್ದರು. ಸಹೃದಯರಾದ ಇವರೆಲ್ಲರ ಒಡನಾಟ ಹಾಗೂ ನನ್ನ ಯಜಮಾನರ ಸಹಕಾರದಿಂದ, ಸೀನಿಯರ್ ಸಂಗೀತ ಕಲಿಯುತ್ತಿದ್ದ ನನಗೆ ಅವರೊಂದಿಗೆ ಕನ್ನಡ ಸಂಘದ ಕಾರ್ಯಕ್ರಮಗಳಲ್ಲಿ ಸುಮಧುರ ಹಾಡುಗಳನ್ನು ಹಾಡುವ ಅವಕಾಶ ದೊರಕಿತು. ಇದು ಹೀಗೆಯೇ ಮುಂದುವರಿದು, ನಾನು ಗಮಕ ಹಾಗೂ ಸತ್ಸಂಗಗಳಿಗೆ ಹೋಗಿ ಭಜನೆ,

ಸೌಂದರ್ಯಲಹರೀ ಮುಂತಾದವುಗಳನ್ನು ಕಲಿತು ಹಲವಾರು ಜನಕ್ಕೆ ಹೇಳಿಕೊಡಲು ಪ್ರಾರಂಭಿಸಿದೆ. ಇದಕ್ಕೆ ನನ್ನ ಯಜಮಾನರ ಸಂಪೂರ್ಣ ಸಮ್ಮತಿಯಿತ್ತು. ಮನೆಯ ಕೆಲಸ-ಕಾರ್ಯಗಳಲ್ಲಿ ಅವರ ಸಹಾಯ ಹೆಚ್ಚಿಲ್ಲದಿದ್ದರೂ, ನನ್ನ ಕೆಲಸಗಳಲ್ಲಿ ಅವರು ಅಡಚಣೆ ಉಂಟುಮಾಡುತ್ತಿರಲಿಲ್ಲ. ಅವರ ಅಭಿರುಚಿಗೆ ನನ್ನ ಸಹಕಾರವೂ, ನನ್ನ ಅಭಿರುಚಿಗೆ ಅವರ ಸಹಕಾರವೂ ಇರುತ್ತಿತ್ತು.

೧೯೮೩ರಲ್ಲಿ ವಿಜ್ಞಾನಿ ಕೆಲಸದೊಂದಿಗೆ, ನನ್ನ ಯಜಮಾನರು ಬೆಂಗಳೂರಿನ ಶಂಕರಮಠದಲ್ಲಿ ಮ್ಯಾನೇಜರ್ ಆಗಿ ಕೆಲಸಮಾಡಲು ಆರಂಭಿಸಿದ್ದು, ನನಗೆ ಹಾಗೂ ಮಕ್ಕಳಿಗೆ ಬಹಳ ಅನುಕೂಲವಾಯಿತು. ಮಕ್ಕಳ ವಿದ್ಯಾಭ್ಯಾಸಕ್ಕೆ ಒಳ್ಳೆಯ ಶಾಲೆ ಮತ್ತು ಬುದ್ಧಿವಿಕಾಸಕ್ಕೆ ಶಂಕರಮಠದ ಒಳ್ಳೆಯ ಪರಿಸರ ದೊರಕಿತ್ತು. ನನಗೂ ಹಾಡುಗಳನ್ನು ಹೇಳುವ ಹಾಗೂ ಹೇಳಿಕೊಡುವ ಅವಕಾಶಗಳು ಒದಗಿಬಂದವು. ನನ್ನ ಯಜಮಾನರು ಶ್ರೀ ಶಂಕರಮಠದಲ್ಲಿ ಆರಂಭಿಸಿದ ಶಾರದಾಂಬಾ ಉತ್ಸವದಲ್ಲಿ ಹಾಡುಗಳನ್ನು ಹಾಡುವ ಮತ್ತು ಪ್ರತಿವರ್ಷ ನಡೆಯುತ್ತಿದ್ದ ವೇದಶಿಬಿರದಲ್ಲಿ ಹುಡುಗರಿಗೆ ಸ್ತೋತ್ರಗಳನ್ನು ಹೇಳಿಕೊಡುವ ಕಾರ್ಯಗಳನ್ನು ನಾನು ಯಶಸ್ವಿಯಾಗಿ ಮಾಡಿದೆ. ಸ್ವಾಭಾವಿಕವಾಗಿಯೇ ಈ ಎಲ್ಲಕ್ಕೂ ನನ್ನ ಯಜಮಾನರ ಸಹಕಾರವಿತ್ತು. ಜೊತೆಜೊತೆಗೇ ಶ್ರೀಮತಿ ಸಾವಿತ್ರೀ ರಂಗನಾಥನ್ ಅವರಲ್ಲಿ ಸತ್ಸಂಗವನ್ನು ಮುಂದುವರೆಸುತ್ತಾ, ಅವರಲ್ಲಿ ಕಲಿತದ್ದನ್ನು ನಾನು ಹಲವಾರು ಮಹಿಳೆಯರಿಗೆ ಹೇಳಿಕೊಡುವ ಕಾಯಕವನ್ನೂ ಮಾಡಲಾರಂಭಿಸಿದೆ. ನಾವು ಶಂಕರಪುರದಲ್ಲಿ ಇದ್ದುದರಿಂದ, ಹತ್ತಿರದಲ್ಲಿದ್ದ ಕನ್ನಡ ಸಾಹಿತ್ಯ ಪರಿಷತ್ತಿನ ಸಾಹಿತ್ಯಕ ಚಟುವಟಿಕೆಗಳು ಹಾಗೂ ಗಾಯನ ಸಮಾಜ, ಶಂಕರಮಠ, ಕೋಟೆ ಹೈಸ್ಕೂಲುಗಳಲ್ಲಿ ನಡೆಯುತ್ತಿದ್ದ ರಾಮನವಮಿ ಹಾಗೂ ಇತರೆ ಸಂಗೀತ ಕಚೇರಿಗಳಲ್ಲಿ ಸಕ್ರಿಯವಾಗಿ ಪಾಲ್ಗೊಂಡು, ಒಳ್ಳೆಯ ಕಾರ್ಯಕ್ರಮಗಳನ್ನು ಆಲಿಸಲು ಸಾಧ್ಯವಾಯಿತು. ಒಟ್ಟಿನಲ್ಲಿ ನನ್ನ ಯಜಮಾನರ ಸಲುವಾಗಿ, ನನ್ನ ಸಂಗೀತ-ಸಾಹಿತ್ಯಕ ಚಟುವಟಿಕೆಗಳಿಗೆ ಒಳ್ಳೆಯ ಪರಿಸರ ಸಿಕ್ಕಹಾಗೆ ಆಯಿತು. ಸನ್ಯಾಸತ್ವ ಸ್ವೀಕರಿಸಿದ ತಕ್ಷಣ ನಮ್ಮ ಮನೆಯಲ್ಲೇ ಒಚಿದು ವರ್ಷ ಕಾಲ ತಂಗಿದ್ದ ಪೂಜ್ಯ ಶ್ರೀ ಶ್ರೀ ಪರಮಾನಂದಭಾರತೀ ಸ್ವಾಮಿಗಳ ಅನುಗ್ರಹವೂ ಉಂಟಾಯಿತು.

ನನ್ನ ಮೈದುನ ಗಿರಿಧರಶಾಸ್ತ್ರೀ ಅವರು ನನಗಿಂತ ೨ ವರ್ಷ ಚಿಕ್ಕವರು. ಅವರು ಸಂಸ್ಕೃತ ಎಂ.ಎ ಮುಗಿಸಿ ೧೯೭೫ನೇ ಇಸವಿಯಿಂದ ಶೃಂಗೇರಿ ಶಂಕರಮಠದಲ್ಲಿ ಶ್ರೀ ಶ್ರೀ ಅಭಿನವ ವಿದ್ಯಾತೀರ್ಥ ಗುರುಗಳಿಗೆ ಆಪ್ತಕಾರ್ಯದರ್ಶಿಯಾಗಿ, ನಂತರ ಮಠದ ಆಡಳಿತಾಧಿಕಾರಿಯಾಗಿ ಸುಮಾರು ೧೫ ವರ್ಷಗಳ ಕಾಲ ಕಾರ್ಯನಿರ್ವಹಿಸಿದರು. ಚಿಕ್ಕಂದಿನಿಂದಲೂ ವೇದ-ಶಾಸ್ತ್ರಾಧ್ಯಯನ, ಹಲವಾರು ಕನ್ನಡ, ಸಂಸ್ಕೃತ, ಇಂಗ್ಲೀಷ್ ಪುಸ್ತಕಗಳ ಅಧ್ಯಯನದಲ್ಲಿ ತೊಡಗಿಕೊಂಡಿದ್ದ ಇವರನ್ನು ನಾನು ನೋಡಿದ್ದು ನನ್ನ

ಮದುವೆಯಾದ ನಂತರದಲ್ಲಿ. ಆಗಲೂ ನಿರಂತರವಾಗಿ ಅಧ್ಯಯನದಲ್ಲಿ ತೊಡಗಿಕೊಂಡು, ಗುರುಗಳೊಂದಿಗೆ ನಿಕಟ ಸಂಪರ್ಕವನ್ನು ಹೊಂದಿದ್ದ ಅವರ ಬಗ್ಗೆ ಅತೀವ ಗೌರವ ಉಂಟಾಗಿತ್ತು. ಇಂದಿಗೂ ನನ್ನಲ್ಲಿ ಅದೇ ಭಾವನೆ ಇದೆ. ಸಾಕಷ್ಟು ವಿಚಾರಗಳನ್ನು ಖಚಿತವಾಗಿ ತಿಳಿದುಕೊಂಡಿರುವುದರಿಂದ, ನಮ್ಮ ಮನೆಯ ಪ್ರತಿಯೊಂದು ವಿಚಾರದಲ್ಲಿಯೂ (ಧಾರ್ಮಿಕ ಹಾಗೂ ಸಾಮಾಜಿಕ) ಇವರ ಸಲಹೆ, ಸೂಚನೆಗಳನ್ನು ತೆಗೆದುಕೊಳ್ಳುತ್ತಿರುತ್ತೇವೆ. ನಮ್ಮ ಮಕ್ಕಳಿಗೂ ಇವರು ಅಚ್ಚುಮೆಚ್ಚಿನ 'ಗಿರಿ' ಚಿಕ್ಕಪ್ಪ. ಅವರು ಶೃಂಗೇರಿ ಮಠದಲ್ಲಿ ಕೆಲಸ ಮಾಡುತ್ತಿದ್ದುದರಿಂದ, ಈ ೪೦ ವರ್ಷಗಳಲ್ಲಿ ನಮಗೆ ಹಲವಾರು ಬಾರಿ ಶಾರದಮ್ಮನವರ ದರ್ಶನ ಮತ್ತು ಶ್ರೀ ಗುರುಗಳವರ ದರ್ಶನ ಭಾಗ್ಯ ಲಭಿಸಿದ್ದು ನಮ್ಮ ಸುಕೃತವೇ ಸರಿ.

೭೦ ಹಾಗೂ ೬೦ ವರ್ಷಗಳನ್ನು ದಾಟುತ್ತಿರುವ ಇವರಿಬ್ಬರೂ ಅಣ್ಣ-ತಮ್ಮಂದಿರಿಗೆ ಜೀವನದಲ್ಲಿ ಶ್ರೇಯಸ್ಸು ಉಂಟಾಗಲೆಂದು ಶಾರದಾಂಬಾ ಹಾಗೂ ಶ್ರೀ ಗುರುಗಳವರಲ್ಲಿ ಪ್ರಾರ್ಥಿಸುತ್ತೇನೆ.

◆

ಪ್ರೀತಿಯ ಅಣ್ಣ

– ಎಸ್.ಕ್ಷಮಾ, ಬೆಂಗಳೂರು

'ಪ್ರತಿಯೊಬ್ಬರಲ್ಲೂ ಧನಾತ್ಮಕ ಹಾಗೂ ಋಣಾತ್ಮಕ ಅಂಶಗಳೆರಡೂ ಇರುತ್ತವೆ. ನಾವು ಅವರ ಧನಾತ್ಮಕ ಅಂಶವನ್ನು ಮಾತ್ರ ಪರಿಗಣಿಸಬೇಕು' ಎಂದು ಪದೇ ಪದೇ ಹೇಳುತ್ತಿದ್ದ ನಮ್ಮ ತಂದೆಯ ಮಾತುಗಳು ಈಗಲೂ ನನ್ನ ಕಿವಿಯಲ್ಲಿ ಗುನುಗುನಿಸುತ್ತಲೇ ಇರುತ್ತದೆ. ಈ ಅಂಶವನ್ನು ರೂಢಿಸಿಕೊಂಡು ತಮ್ಮ ಜೀವನವನ್ನು ಅತ್ಯಂತ ಯಶಸ್ವಿಯಾಗಿ ನಡೆಸುತ್ತಾ ಬಂದಿರುವ ನನ್ನ ಪೂಜ್ಯ ತಂದೆಯವರೇ ಶ್ರೀ ಚಿ.ವಿ.ಶ್ರೀನಾಥಶಾಸ್ತ್ರೀ ಅವರು. ಅವರು ಹೇಳುತ್ತಿದ್ದಾಗ ಇದರ ಅರ್ಥ ನನಗೆ ಆಗದಿದ್ದರೂ, ಈಗ ಅವರ ಮಾತಿನಂತಿದ್ದರೆ ನೆಮ್ಮದಿಯ ಜೀವನ ನಡೆಸಬಹುದು ಎಂಬುದು ಮನವರಿಕೆಯಾಗಿದೆ.

ನನ್ನ ತಂದೆಯವರು ೧೯೭೩ರಲ್ಲಿ ರಾಷ್ಟ್ರೀಯ ವೈಮಾನಿಕ ಪ್ರಯೋಗಶಾಲೆಗೆ (ರಾವೈಪ್ರ) ಸೇರಿದಾಗಿನಿಂದ ಅವರು ಅಪಾರ ಸಂಖ್ಯೆಯ ಸ್ನೇಹಿತರನ್ನು ದೊರಕಿಸಿಕೊಂಡರು. ಅನೇಕರನ್ನು ತಾವೇ ಪರಿಚಯಿಸಿಕೊಂಡು, ಅವರನ್ನು ಅತ್ಯಂತ ಗೌರವದಿಂದ, ವಿಶ್ವಾಸದಿಂದ, ವಿನಯಪೂರ್ವಕವಾಗಿ ಮಾತನಾಡಿಸುತ್ತಿದ್ದರು. ಈಗಲೂ ಮಾತನಾಡಿಸುತ್ತಾರೆ. ಇಲ್ಲಿ 'ಯಾರನ್ನೇ' ಅನ್ನುವುದು ಕಸ ಗುಡಿಸುವ ಕೆಲಸದವರಾಗಿರಬಹುದು; ಗೇಟ್‌ನಲ್ಲಿರುವ ರಕ್ಷಣಾ ಸಿಬ್ಬಂದಿಯಾಗಿರಬಹುದು; ಗುತ್ತಿಗೆಯಲ್ಲಿ ೧–೨ ವರ್ಷ ಕೆಲಸ ಮಾಡುವ ಯುವಕ ಯುವತಿಯರಾಗಿರಬಹುದು ಅಥವಾ ವಿಜ್ಞಾನಿಗಳಾಗಿರಬಹುದು ಅಥವಾ ಪ್ರಯೋಗಶಾಲೆಯ ಮುಖ್ಯಸ್ಥರಾದ ನಿರ್ದೇಶಕರೂ ಆಗಿರಬಹುದು. ಇವರೆಲ್ಲರೂ ಎಲ್ಲೇ ಕಂಡರೂ, ತಾವಾಗಿಯೇ ಬಂದು ನನ್ನ ತಂದೆಯವರನ್ನು ಮಾತನಾಡಿಸುವುದೇ ಇದಕ್ಕೆ ಸಾಕ್ಷಿ. ಇದು ರಾವೈಪ್ರಗೆ ಮಾತ್ರ ಸೀಮಿತವಲ್ಲ, ನನ್ನ ತಂದೆಯವರು ಎಲ್ಲೆಲ್ಲಿ ಕಾರ್ಯನಿರ್ವಹಿಸಿದರೋ ಅಲ್ಲೆಲ್ಲಾ ಇದು ನಿಜವೇ ಆಗಿದೆ.

ಜೊತೆಗೆ ಇಂದು ನಾನು ಕನ್ನಡದಲ್ಲಿ ವಿಜ್ಞಾನ ಬರವಣಿಗೆಯನ್ನು ಮಾಡುತ್ತಿದ್ದೇನೆಂದರೆ, ಅದಕ್ಕೆ ನನ್ನ ತಾಯಿ–ತಂದೆಯರೇ ಕಾರಣ. ಚಿಕ್ಕಂದಿನಿಂದಲೂ ಕನ್ನಡ ಪದ್ಯ, ಕಥೆಗಳನ್ನು ಹೇಳುವುದರೊಂದಿಗೆ **'ಅಶೋಕ ಶಿಶು ವಿಹಾರ'** ಕನ್ನಡ ಮಾಧ್ಯಮ ಶಾಲೆಯಲ್ಲಿ ಓದಿಸಿ, ನನ್ನಲ್ಲಿ ಕನ್ನಡದ ಬಗ್ಗೆ ಒಲವು ಉಂಟುಮಾಡಿದರು. ಹಾಗೆಯೇ ನನ್ನ ತಂದೆಯವರು ರಾಷ್ಟ್ರೀಯ ವೈಮಾನಿಕ ಪ್ರಯೋಗಶಾಲೆಯಲ್ಲಿ (ರಾವೈಪ್ರ) ವಿಜ್ಞಾನಿಯಾದುದಲ್ಲದೆ, ಕನ್ನಡದಲ್ಲಿ ವಿಜ್ಞಾನ ಲೇಖನಗಳನ್ನು ಬರೆಯುತ್ತಾ ಕಣಾದ ಪತ್ರಿಕೆಯ ಸಂಪಾದಕರಾಗಿ ಸೇವೆ ಸಲ್ಲಿಸುತ್ತಿದ್ದುದೂ ನನ್ನ ಮೇಲೆ ಪ್ರಭಾವ ಬೀರಿತು. ಈ

ಕಾರಣಗಳಿಂದಾಗಿ ನಾನು ಕನ್ನಡದಲ್ಲಿ ವಿಜ್ಞಾನ ಲೇಖನ ಬರವಣಿಗೆ ಆರಂಭಿಸಿದೆ. ಮೊದಲು ನನ್ನ ತಂದೆಯವರ ಒತ್ತಾಸೆಯಿಂದ ಕಣಾದಕ್ಕೆ ಕೆಲವು ಲೇಖನಗಳನ್ನು ಬರೆದೆ. 'ಕಣಾದ' ಎಂದಾಗ ನಾನು ಕಂಡಂತೆ ನನ್ನ ತಂದೆಯವರ ವಿಶಿಷ್ಟ ಗುಣವೊಂದನ್ನು ನೆನೆಯಲೇಬೇಕು. ಅವರು ಬರಹಗಾರರಾದುದಕ್ಕಿಂತ, ಯಶಸ್ವೀ ಸಂಪಾದಕರಾಗಿದ್ದರೆಂದರೆ ತಪ್ಪಾಗಲಾರದು. ರಾವೈಪ್ರದಲ್ಲಿ ಅನೇಕರನ್ನು ತಾವೇ ಪರಿಚಯಿಸಿಕೊಂಡು, ಅವರಿಗೆ ಕಣಾದದ ಬಗ್ಗೆ ವಿವರಿಸಿ, ಪ್ರೋತ್ಸಾಹಿಸಿ, ಅವರಲ್ಲಿ ಬರವಣಿಗೆ ಇಚ್ಛೆ ಮೂಡಿಸಿ, ಕನ್ನಡದಲ್ಲಿ ಲೇಖನ ಬರೆಸಿ, ಕಣಾದದಲ್ಲಿ ಪ್ರಕಟಿಸುತ್ತಿದ್ದರು. ರಾವೈಪ್ರದಲ್ಲಿ ಮಾತ್ರವಲ್ಲದೆ, ಪ್ರೌಢಶಾಲೆ, ಕಾಲೇಜು ಹಾಗೂ ಸಾರ್ವಜನಿಕರಲ್ಲಿ ಕನ್ನಡ ವಿಜ್ಞಾನ ಬರವಣಿಗೆಯ ಬಗ್ಗೆ ಆಸಕ್ತಿ ಮೂಡಿಸುವ ಸಲುವಾಗಿ ಸ್ಪರ್ಧೆಯನ್ನೇರ್ಪಡಿಸಿ, ಬಹುಮಾನ ಪಡೆದ ಲೇಖನಗಳನ್ನು ಕಣಾದದಲ್ಲಿ ಪ್ರಕಟಿಸುವ ಕಾಯಕವನ್ನೂ ಕೈಗೊಂಡರು. ಹೀಗೆ ಪ್ರೋತ್ಸಾಹಗೊಂಡು ಕಣಾದದಲ್ಲಿ ಬರೆಯಲಾರಂಭಿಸಿ ಇಂದು ಪ್ರಸಿದ್ಧ ಲೇಖಕರಾದವರು ಹಲವರು. ಹೆಸರಿಸುವುದಾದರೆ, **ಡಾ॥ ನಾ.ಸೋಮೇಶ್ವರ, ಡಾ॥ ವಿ.ಎಸ್.ಕಿರಣ್, ಪ್ರೊ ರಾಧಾಕೃಷ್ಣ** ಇತ್ಯಾದಿ.

೧೯೭೭ರಲ್ಲಿ ಕಣಾದ ವಿಜ್ಞಾನ ಪತ್ರಿಕೆಯನ್ನು ಆರಂಭಿಸಿದಾಗ, ಅದರ ಪ್ರಕಟಣಾ ಕಾರ್ಯ ಅಷ್ಟು ಸುಲಭದ್ದಾಗಿರಲಿಲ್ಲ. ಆಗಿನ್ನೂ ಗಣಕಗಳು ಬಂದ ಹೊಸತು. ಹೀಗಾಗಿ ಮೊಳೆಗಳನ್ನು ಜೋಡಿಸುವುದರ ಮೂಲಕ ಹಾಳೆಗಳ ಮೇಲೆ ಅಕ್ಷರಗಳನ್ನು ಮುದ್ರಿಸುತ್ತಿದ್ದರು. ಈ ರೀತಿ ಮುದ್ರಿಸುವುದು ಮತ್ತು ಹೀಗೆ ಮುದ್ರಿಸಿದಾಗ ತಪ್ಪುಗಳನ್ನು ಸರಿಪಡಿಸುವುದು ಕಷ್ಟವಾಗುತ್ತಿತ್ತು. ಕೆಲವು ವರ್ಷಗಳ ನಂತರ ಗಣಕದಲ್ಲಿ ಕನ್ನಡ ಅಕ್ಷರ ಮೂಡಿಸುವ ಪ್ರಯತ್ನಗಳಾಗಿ ಕೆಲವು ಲಿಪಿ ತಂತ್ರಾಂಶಗಳು ಅಭಿವೃದ್ಧಿಗೊಂಡವು. ಇದನ್ನು ಕಣಾದದಲ್ಲಿ ಬಳಸಲಾಯಿತು. ಇದಾದ ನಂತರ ಗಣಕದಲ್ಲಿ ಕನ್ನಡ ಮೂಡಿಸುವ ಆಕೃತಿ, ಸುರಭಿ, ಕೈರಳಿ, ವಿನ್‌ಕೀ, ಶ್ರೀಲಿಪಿ ಇತ್ಯಾದಿ ಅನೇಕ ಲಿಪಿ ತಂತ್ರಾಂಶಗಳು ಅಭಿವೃದ್ಧಿಗೊಂಡು ಮಾರಾಟಕ್ಕೆ ಲಭ್ಯವಿದ್ದವು. ಆದರೆ ಈ ತಂತ್ರಾಂಶಗಳ ಮಧ್ಯೆ ಏಕರೂಪತೆ ಇಲ್ಲದೆ, ಅನೇಕ ಗೊಂದಲಗಳಿದ್ದವು. ಅಲ್ಲದೆ, ಹಣ ನೀಡಿ ಕನ್ನಡ ಲಿಪಿಗಳನ್ನು ಕೊಂಡು ಬಳಸುವುದು ಜನಸಾಮಾನ್ಯರಿಗೆ ಸಾಧ್ಯವಾಗದೆ, ಗಣಕದಲ್ಲಿ ಕನ್ನಡದ ಬಳಕೆ ಅತ್ಯಂತ ಕಡಿಮೆ ಪ್ರಮಾಣದಲ್ಲಿತ್ತು. ೧೯೭೦ನೇ ಇಸವಿಯಲ್ಲಿ ಈ ಗೊಂದಲಗಳನ್ನು ನಿವಾರಿಸಿ, ಗಣಕಗಳಲ್ಲಿ ಕನ್ನಡವನ್ನು ಸರಾಗವಾಗಿ ಬಳಸುವುದನ್ನು ಸಾಧ್ಯವಾಗಿಸುವ ಉದ್ದೇಶದಿಂದ ನನ್ನ ತಂದೆಯವರು, ಜಿ.ಎನ್.ನರಸಿಂಹಮೂರ್ತಿ ಹಾಗೂ ಇತರರು ಒಟ್ಟುಗೂಡಿ **'ಕನ್ನಡ ಗಣಕ ಪರಿಷತ್ತು'** ಎಂಬ ಸ್ವಯಂಸೇವಾ ಸಂಸ್ಥೆಯನ್ನು ಹುಟ್ಟುಹಾಕಿದರು. ಸರ್ಕಾರದ ಇಚ್ಛೆಯಂತೆ ಪರಿಷತ್ತು **'ನುಡಿ'** ಎಂಬ ಶಿಷ್ಟ ಲಿಪಿ ತಂತ್ರಾಂಶ ಹಾಗೂ ಬೆರಳಚ್ಚಿಸಲು ಶಿಷ್ಟ ಕೀಲಿಮಣೆಗಳನ್ನು ಅಭಿವೃದ್ಧಿಪಡಿಸಿತು. ನಂತರ ಸರ್ಕಾರ ಇದನ್ನು ಸಾರ್ವಜನಿಕರಿಗೆ ಉಚಿತವಾಗಿ ನೀಡಿ, ಗಣಕಗಳಲ್ಲಿ ಕನ್ನಡ ಬಳಕೆಯನ್ನು

ಜನಪ್ರಿಯಗೊಳಿಸಿತು. ನುಡಿ ಅಭಿವೃದ್ಧಿಯೊಂದಿಗೆ ಕಗಪ, ಗಣಕಗಳಲ್ಲಿ ಕನ್ನಡ ಬಳಕೆಯ ಅನೇಕ ಕಾರ್ಯಗಳನ್ನು ಮಾಡುತ್ತಾ ಬಂದಿದೆ. ಇದೆಲ್ಲಾ ಸಾಧ್ಯವಾದದ್ದು ನನ್ನ ತಂದೆಯವರು ಗಣಕ ಕ್ಷೇತ್ರದಲ್ಲಿ ಕೆಲಸ ಮಾಡುತ್ತಿರುವ ಯುವಕರಿಗೆ ನೀಡಿದ ಪ್ರೋತ್ಸಾಹದಿಂದ. ಪ್ರಸಿದ್ಧ ತಂತ್ರಾಂಶ ಕಂಪೆನಿಗಳಲ್ಲಿ ಕೆಲಸ ಮಾಡುತ್ತಿದ್ದ ಅನೇಕ ಹುಡುಗರು ಕಗಪ ಸಂಪರ್ಕದಿಂದ ಗಣಕಗಳಲ್ಲಿ ಕನ್ನಡದ ಕಂಪನ್ನು ಹರಡಿದರು. ಇಂದು ನುಡಿ ತಂತ್ರಾಂಶವು ಜನಸಾಮಾನ್ಯರ ಮನೆ–ಕಚೇರಿಗಳಲ್ಲಿ ರಾರಾಜಿಸುತ್ತಿದ್ದು, ಗಣಕಗಳಲ್ಲಿ ಕನ್ನಡ ಬಳಕೆಯನ್ನು ಯಾರು ಬೇಕಾದರೂ ಮಾಡಬಹುದಾದ ಸಾಧ್ಯತೆಯನ್ನು ನೈಜವಾಗಿಸಿದೆ. ನಮ್ಮನ್ನು ಬೆಳೆಸಿ ಪೋಷಿಸುತ್ತಿರುವ ಈ ಸಮಾಜಕ್ಕೆ ಇಷ್ಟು ದೊಡ್ಡ ಕೊಡುಗೆಯನ್ನು ಹಿಂದಿರುಗಿಸಿರುವ ನನ್ನ ತಂದೆ ಹಾಗೂ ಅವರ ಮಿತ್ರರೇ ಧನ್ಯರು.

ನನ್ನ ತಂದೆಯವರಲ್ಲಿ ನಾನು ಕಂಡ ಮತ್ತೊಂದು ವಿಶೇಷ ಗುಣವೆಂದರೆ– ಅವರು ಸಮರ್ಥ ವ್ಯವಸ್ಥಾಪಕರಾಗಿದ್ದುದು.' ಶ್ರೀ ಶ್ರೀಶ್ರೀ ಅಭಿನವವಿದ್ಯಾತೀರ್ಥ ಸ್ವಾಮಿಗಳವರ ಅವಧಿಯಲ್ಲಿ, ೧೯೮೩ರಿಂದ ೧೯೮೯ರವರೆಗೆ ನನ್ನ ತಂದೆಯವರಿಗೆ ಬೆಂಗಳೂರಿನ ಶಂಕರಮಠದಲ್ಲಿ ಮ್ಯಾನೇಜರ್ ಆಗಿ ಕಾರ್ಯನಿರ್ವಹಿಸುವ ಅವಕಾಶ ದೊರಕಿತು. ಆಗ ಶಂಕರಮಠದ ಎಲ್ಲ ಆಳುಕಾಳುಗಳು, ಅವರನ್ನು ನೋಡಿಕೊಳ್ಳುವ ಅಧಿಕಾರಿಗಳು ಇವರೆಲ್ಲರನ್ನೂ ಅತ್ಯಂತ ಗೌರವದಿಂದ ಮಾತನಾಡಿಸಿ, ಪ್ರತಿಯೊಬ್ಬರನ್ನೂ ವಿಶ್ವಾಸಕ್ಕೆ ತೆಗೆದುಕೊಂಡು, ಪ್ರತಿಯೊಬ್ಬರಿಗೂ ಅವರದ್ದೇ ಜವಾಬ್ದಾರಿಯನ್ನು ನೀಡಿ, ಯಾವುದೇ ಭಿನ್ನಾಭಿಪ್ರಾಯಕ್ಕೆ ಅವಕಾಶ ಕೊಡದೆ, ಕಾರ್ಯನಿರ್ವಹಿಸಿದರು. ಹೀಗಾಗಿಯೇ ಅವರು ಸಂಜೆಯ ಸಮಯದಲ್ಲಿ ಮಾತ್ರ ಶಂಕರಮಠವನ್ನು ನೋಡಿಕೊಂಡರೂ, ಶಂಕರಮಠದಲ್ಲಿ ಯಾವುದೇ ಗೊಂದಲವಿಲ್ಲದೆ, ಎಲ್ಲ ಕೆಲಸ ಕಾರ್ಯಗಳೂ ಸುಸೂತ್ರವಾಗಿ ನಡೆಯುತ್ತಿತ್ತು.

ಚಿವಿಶ್ರೀ ಅವರು ಮ್ಯಾನೇಜರರಾಗಿದ್ದಾಗ, ಬ್ರಹ್ಮೀಭೂತ ಜಗದ್ಗುರು ಶ್ರೀ ಶ್ರೀಶ್ರೀ ಅಭಿನವವಿದ್ಯಾತೀರ್ಥ ಮಹಾಸ್ವಾಮಿಗಳು ಜಗದ್ಗುರು ಶ್ರೀ ಶ್ರೀಶ್ರೀ ಭಾರತೀತೀರ್ಥ ಮಹಾಸ್ವಾಮಿಗಳವರ ಸೂಕ್ತ ಮಾರ್ಗದರ್ಶನ ಮತ್ತು ಶ್ರೀ ಶ್ರೀ ಪರಮಾನಂದಭಾರತೀ ಸ್ವಾಮಿಗಳವರ ಅಮೂಲ್ಯ ಸಲಹೆಗಳೊಂದಿಗೆ ಶಾರದಮ್ಮನವರ ಪ್ರತಿಷ್ಠಾಪನಾ ದಿನ ಅಂದರೆ ಚೈತ್ರಶುದ್ಧ ದಶಮಿಯಂದು ಶ್ರೀ ಶಾರದಾ ರಥೋತ್ಸವ ಚಾಲನೆಗೊಂಡಿತು. ರಥೋತ್ಸವವನ್ನು ಅತ್ಯಂತ ಉತ್ಸಾಹದಿಂದ, ಶ್ರದ್ಧಾ–ಭಕ್ತಿಗಳಿಂದ, ಶ್ರೀ ಬಿ.ಎನ್.ವಿ.ಸುಬ್ರಹ್ಮಣ್ಯ ಅವರ ಅಧ್ಯಕ್ಷತೆಯಲ್ಲಿ ನನ್ನ ತಂದೆಯವರು ಅನೇಕ ಸಾರ್ವಜನಿಕರನ್ನು ಕೂಡಿಸಿಕೊಂಡು, ಅವರೆಲ್ಲರ ಸಹಾಯ–ಸಹಕಾರಗಳೊಡನೆ ಯಶಸ್ವಿಯಾಗಿ ನಡೆಸುತ್ತಿದ್ದುದು ನನಗೆ ಇನ್ನೂ ನೆನಪಿನಲ್ಲಿದೆ. ಇದಲ್ಲದೆ ಅದೇ ಅವಧಿಯಲ್ಲಿ ಉಪನಯನ ಆಗಿರುವ ಹುಡುಗರಿಗಾಗಿಯೇ **'ವೇದ ಶಿಬಿರ'**ವನ್ನು ಆರಂಭಿಸಲಾಯಿತು. ಶಿಬಿರದಲ್ಲಿ ಸಂಧ್ಯಾವಂದನೆ ಮಂತ್ರಗಳು, ವೇದ ಪಾರಾಯಣ, ಪೂಜೆ ಮಂತ್ರಗಳು, ನಿತ್ಯ ಪ್ರಾರ್ಥನಾ ಗೀತೆಗಳು, ಸಂಸ್ಕೃತ, ಯೋಗ, ಪ್ರಸಿದ್ಧ

ವ್ಯಕ್ತಿಗಳಿಂದ ಉಪನ್ಯಾಸ ಇತ್ಯಾದಿಗಳನ್ನು ಹೇಳಿಕೊಡುತ್ತಿದ್ದರು. ಮಠದ ನಿತ್ಯ ಕಾರ್ಯದೊಂದಿಗೆ, ಶಿಬಿರಾರ್ಥಿಗಳ ವಸತಿ, ಊಟ ವ್ಯವಸ್ಥೆ, ಅವರ ಕಲಿಕಾ ತರಗತಿಗಳು ಹೀಗೆ ಇಡೀ ಶಿಬಿರದ ಮೇಲ್ವಿಚಾರಣೆಯನ್ನು ವಹಿಸಿಕೊಂಡು, ಶಿಬಿರ ಅತ್ಯಂತ ವ್ಯವಸ್ಥಿತವಾಗಿ ನಡೆಯುವಂತೆ ನನ್ನ ತಂದೆಯವರು ನೋಡಿಕೊಳ್ಳುತ್ತಿದ್ದರು; ನನ್ನ ತಾಯಿಯವರು ಶಿಬಿರದ ಹುಡುಗರಿಗೆ ನಿತ್ಯ ಪ್ರಾರ್ಥನಾ ಶ್ಲೋಕಗಳನ್ನು ಬೋಧಿಸುತ್ತಿದ್ದರು. ಪ್ರತಿವರ್ಷ ಶಿಬಿರ ಅತ್ಯಂತ ಯಶಸ್ವಿಯಾಗಿ ನಡೆದು, ಶಿಬಿರಾರ್ಥಿಗಳಂತೂ ಶಿಬಿರದ ಕಡೆಯ ದಿನ ಮನಸ್ಸಿಲ್ಲದ ಮನಸ್ಸಿನಿಂದ ಮನೆಗೆ ತೆರಳುತ್ತಿದ್ದರು. ಅಲ್ಲದೆ ಇಂದು ಆ ಚಿಕ್ಕ ಮಕ್ಕಳು ಬೆಳೆದು ದೊಡ್ಡವರಾಗಿ, ಎಲ್ಲಡೆ ನನ್ನ ತಂದೆ, ತಾಯಿಯರನ್ನು ಕಂಡರೆ ಅತ್ಯಂತ ವಿಶ್ವಾಸದಿಂದ ಮಾತನಾಡಿಸಿ, ಶಿಬಿರದ ದಿನಗಳನ್ನು ಜ್ಞಾಪಿಸಿಕೊಳ್ಳುತ್ತಾರೆ. ಶಂಕರಮಠದಲ್ಲಿದ್ದ ೬ ವರ್ಷಗಳಲ್ಲಿ ಜನಸಾಮಾನ್ಯರಲ್ಲಿ ಆಧ್ಯಾತ್ಮಿಕ ಮನೋಭಾವನೆ ಹೆಚ್ಚಿಸುವ ಶಾರದಾ ರಥೋತ್ಸವ, ವೇದಶಿಬಿರಗಳಂತಹ ಕಾರ್ಯಕ್ರಮಗಳನ್ನು ಆಯೋಜಿಸಿ, ಜನಸಾಮಾನ್ಯರನ್ನು ಮಠದೆಡೆಗೆ ಕರೆತಂದು, ಅವರ ಮನಸ್ಸನ್ನು ಆಧ್ಯಾತ್ಮಿಕದೆಡೆಗೆ ಕೊಂಡೊಯ್ದ ನನ್ನ ತಂದೆಯವರ ಕಾರ್ಯ ಶ್ಲಾಘನೀಯವಾದುದು ಹಾಗೂ ಸ್ಮರಣೀಯವಾದುದು.

ರಾವೈಪ್ರದಲ್ಲಿ ಕಣಾದದ ಕೆಲಸವಾಯಿತು, ಶಂಕರಮಠದಲ್ಲಿ ಧಾರ್ಮಿಕ ಕಾರ್ಯವಾಯಿತು, ಕನ್ನಡ ಗಣಕ ಪರಿಷತ್ತಿನಲ್ಲಿ ನುಡಿ ಅಭಿವೃದ್ಧಿಯಾಯಿತು, ಇಷ್ಟೊತ್ತಿಗೆ ನನ್ನ ತಂದೆಯವರು ನಿವೃತ್ತಿ ಜೀವನಕ್ಕೆ ಕಾಲಿಟ್ಟಿದ್ದರು. ಅವರು ರಾವೈಪ್ರದಿಂದ ನಿವೃತ್ತರಾದರೂ, ಕನ್ನಡ ಭಾಷೆ ಮತ್ತು ವಿಜ್ಞಾನ ಕ್ಷೇತ್ರಗಳಲ್ಲಿ ಕಾರ್ಯಪ್ರವೃತ್ತರಾಗಿಯೇ ಇದ್ದಾರೆ. ಕರ್ನಾಟಕ ವಿಜ್ಞಾನ ಮತ್ತು ತಂತ್ರಜ್ಞಾನ ಅಕಾಡೆಮಿಯ ಸದಸ್ಯರಾಗಿ, ಕರ್ನಾಟಕದ ಅನೇಕ ಜಿಲ್ಲೆಗಳು-ತಾಲ್ಲೂಕುಗಳಲ್ಲಿನ ಶಿಕ್ಷಕರಿಗೆ ತರಬೇತಿ ಶಿಬಿರಗಳನ್ನು ಆಯೋಜಿಸುತ್ತಾ, ಬೆಂಗಳೂರಿನಿಂದ ನುರಿತ ಉಪನ್ಯಾಸಕಾರರನ್ನು ಆ ಶಿಬಿರಗಳಿಗೆ ಕರೆದುಕೊಂಡು ಹೋಗಿ, ತರಬೇತಿಯನ್ನು ಯಶಸ್ವಿಗೊಳಿಸಿದರು. ಇದಕ್ಕೆ ಮುಖ್ಯವಾದ ಕಾರಣವೊಂದಿದೆ. ನನ್ನ ತಂದೆಯವರು ಮೈಸೂರಿನಲ್ಲಿ ಗಣಿತ ವಿಷಯದಲ್ಲಿ ಎಂಎಸ್‌ಸ್ಸಿ ಮುಗಿಸಿ, ಮೊಟ್ಟಮೊದಲಿಗೆ ಶೃಂಗೇರಿ ಕಾಲೇಜಿನಲ್ಲಿ ಗಣಿತ ಉಪನ್ಯಾಸಕಾರರಾಗಿ ಸೇರಿ, ೬ ವರ್ಷಗಳ ಕಾಲ ಗಣಿತದ ಪಾಠ ಮಾಡುತ್ತಿದ್ದರು. ಮೈಸೂರಿನಲ್ಲಿ ಪ್ರೊ. ನಂಜುಂಡಯ್ಯ, ಪ್ರೊ. ರುದ್ರಯ್ಯ, ಪ್ರೊ. ವೆಂಕಟಾಚಲರಾಯರು, ಪ್ರೊ. ಭಾರ್ಗವ ಇತ್ಯಾದಿ ಪ್ರಸಿದ್ಧ ಮೇಷ್ಟರ ಕೈಕೆಳಗೆ ಪಳಗಿದ್ದರಿಂದ, ಮಕ್ಕಳಿಗೆ ಗಣಿತದ ಮೂಲ ತತ್ವಗಳನ್ನು, ದಿನನಿತ್ಯ ಜೀವನದ ಉದಾಹರಣೆಗಳು ಹಾಗೂ ಗಣಿತದ ಬಗ್ಗೆ ಪ್ರೀತಿಯನ್ನು ಉಂಟುಮಾಡುವುದರ ಮೂಲಕ ಕಲಿಸಬೇಕು ಎಂಬುದು ನನ್ನ ತಂದೆಯವರ ವಾದ. ಹೀಗಾಗಿ ಈ ಉದ್ದೇಶವನ್ನೇ ಇಟ್ಟುಕೊಂಡು, ಅಕಾಡೆಮಿಯ ಕಾರ್ಯಾಗಾರಗಳನ್ನು ನಡೆಸಿದರು. ಇದು ವಿಜ್ಞಾನದ

ಕೆಲಸವಾಯಿತು. ಇನ್ನು ಕನ್ನಡ ಉಳಿಸಿ-ಬೆಳೆಸುವ ಕಾರ್ಯವನ್ನೂ ಅವರು ಸದ್ದಿಲ್ಲದೆ ಮಾಡುತ್ತಿದ್ದಾರೆ. ಯಾರೇ ಸಿಗಲಿ, ತಮ್ಮ ಜೋಳಿಗೆಯಲ್ಲಿರುವ ಹಾಳೆಯೊಂದನ್ನು ಕೊಟ್ಟು ತಮ್ಮ ವಿಚಾರಧಾರೆಯನ್ನು ಅವರಿಗೆ ತಿಳಿಸುವುದು ಅವರ ಸಾಮಾನ್ಯ ಅಭ್ಯಾಸ. ಆ ಹಾಳೆಯಲ್ಲಿರುವುದು ಶಿಕ್ಷಣ ಮಾಧ್ಯಮದ ವಿಷಯ. ಅದರಲ್ಲೂ ಕನ್ನಡ ಮಾಧ್ಯಮ ಕನ್ನಡಿಗರಿಗೆ ಎಷ್ಟು ಅಗತ್ಯ? ಕನ್ನಡದ ಹುಡುಗರಿಗೆ ನಮ್ಮ ಕರ್ನಾಟಕದಲ್ಲೇ ಶಿಕ್ಷಣಕ್ಕೆ ಅವಕಾಶ ದೊರೆಯದಿರುವುದು, ಕನ್ನಡಿಗರಿಗೆ ಸಿಗದ ಉದ್ಯೋಗಾವಕಾಶಗಳು, ಶಿಕ್ಷಣ ಮಾಧ್ಯಮವಾಗಿ ಭಾರತೀಯ ಭಾಷೆಗಳು ಇತ್ಯಾದಿ ವಿಚಾರಗಳನ್ನು ಅತ್ಯಂತ ವೈಜ್ಞಾನಿಕವಾಗಿ, ಉದಾಹರಣೆ ಸಮೇತ ಅವರು ಮಂಡಿಸಿದ್ದಾರೆ.

ಇನ್ನು ನನ್ನ ತಂದೆಯವರಿಗೆ ಮಕ್ಕಳೆಂದರೆ ಬಹಳ ಪ್ರೀತಿ. ಯಾವ ವಯಸ್ಸಿನ ಮಕ್ಕಳಾದರೂ ಸರಿ, ಅವರೊಟ್ಟಿಗೆ ತಾವೂ ಮಕ್ಕಳಾಗಿ ನಲಿಯುತ್ತಾರೆ. ಚಿಕ್ಕ ವಯಸ್ಸಿನಲ್ಲಿ ನನಗೆ ಪುಣ್ಯಕೋಟಿಯ ಕಥೆ ಹೇಳಿದಾಗ, ನಾನು ಅತ್ತೇ ಬಿಡುತ್ತಿದ್ದೆ ಎಂದು ಈಗಲೂ ನನ್ನ ತಾಯಿಯವರು ನೆನಪಿಸುತ್ತಾರೆ. ಮಕ್ಕಳಿಗೆ ಪದ್ಯ, ಕಥೆ ಹೇಳುವುದೆಂದರೆ ನನ್ನ ತಂದೆಯವರಿಗೆ ಅಚ್ಚುಮೆಚ್ಚು. ೨೦೦೪ರಲ್ಲಿ ತೇಜಸ್ವಿನಿ ಅನಂತಕುಮಾರ್ ಅವರ ಶಾಲೆಗಳಿಗೆ ಹೋಗಿ ಅಲ್ಲಿನ ಮಕ್ಕಳಿಗೆ ಕಥೆ ಹೇಳಿ ಬಂದಿದ್ದರು. ಒಮ್ಮೆ ಕೊಳಗೇರಿ ಮಕ್ಕಳಿಗೆ ಕಥೆ ಹೇಳಿ ಬಂದಿದ್ದರು. ಸಂಬಂಧಿಕರ ಅಥವಾ ಸ್ನೇಹಿತರ ಮದುವೆ ಅಥವಾ ಉಪನಯನ ಇತ್ಯಾದಿ ಕಾರ್ಯಕ್ರಮಗಳಲ್ಲಿ ನನ್ನ ತಂದೆಯವರು ಮಕ್ಕಳೊಡನೆ ಸುತ್ತುವರಿದು, ಅವರಿಗೆ ಕಥೆ ಹೇಳುತ್ತಿರುವುದನ್ನು ಕಾಣಬಹುದು. ಇಂದಿಗೂ ಅನೇಕ ಮಕ್ಕಳು, ತಂದೆ-ತಾಯಂದಿರು ನನ್ನ ತಂದೆ ಎಂದಾಗ ಅವರು ಹಿಂದೆ ಎಂದೋ ಹೇಳಿದ್ದ ಕಥೆಯೊಂದಿಗೆ ಅವರನ್ನು ನೆನೆಯುತ್ತಾರೆ. ಒಂದು ವರ್ಷದ ನನ್ನ ಮಗಳಿಗಂತೂ ತಾತಾ ಎಂದರೆ ಬಲು ಇಷ್ಟ. ಅವರು ಬಂದರೆ ಸಾಕು, ಅವರೊಂದಿಗೆ ಓಡುತ್ತಾಳೆ ಅವಳು.

ನನ್ನ ತಂದೆಯವರ ಇಷ್ಟೆಲ್ಲಾ ಸಮಾಜಮುಖಿ ಸಾಧನೆಗಳ ಹಿಂದೆ ನಿಂತವರು ನನ್ನ ತಾಯಿಯವರು. ಮನೆ ಹಾಗೂ ಮಕ್ಕಳ ಪೂರ್ಣ ಜವಾಬ್ದಾರಿಯನ್ನು ತೆಗೆದುಕೊಂಡು, ಕಿಂಚಿತ್ತೂ ನಮಗೆ ಹಾಗೂ ನನ್ನ ತಂದೆಯವರಿಗೆ ತೊಂದರೆ ಉಂಟಾಗದಂತೆ ನಮ್ಮನ್ನು ಪೋಷಿಸಿದ್ದಾರೆ. ನಮ್ಮನ್ನು ಯಾವ ಶಾಲೆಗೆ ಸೇರಿಸಬೇಕು? ನಾನು ಯಾರ ಬಳಿ ಸಂಗೀತ ಕಲಿಯಬೇಕು? ನನ್ನ ತಮ್ಮ ಯಾವ ಕಾಲೇಜಿಗೆ ಸೇರಿ, ಯಾವ ವಿಷಯ ಆಯ್ಕೆ ಮಾಡಬೇಕು? ಇತ್ಯಾದಿ ಎಲ್ಲದರ ಬಗ್ಗೆ ಹಲವರ ಜೊತೆ ಚರ್ಚಿಸಿ, ತಿಳಿದುಕೊಂಡು, ನಮ್ಮನ್ನು ಸರಿಯಾದ ಮಾರ್ಗದಲ್ಲಿ ಮುನ್ನಡೆಸಿದ್ದಾರೆ ಮತ್ತು ದೇಶದ ಸತ್ಪ್ರಜೆಗಳನ್ನಾಗಿಸಿದ್ದಾರೆ. ಇದಕ್ಕಾಗಿ ಅವರಿಗೂ ಈ ಸಂದರ್ಭದಲ್ಲಿ ಅಭಿನಂದನೆಗಳನ್ನು ಸಲ್ಲಿಸಲು ಇಚ್ಛಿಸುತ್ತೇನೆ.

ನನ್ನ ಪೂಜ್ಯ ತಂದೆಯವರಿಗೀಗ ವಯಸ್ಸು ೭೦. ಆದರೆ ಆಕಾರದಲ್ಲಿ, ಕೆಲಸದಲ್ಲೀಗಲೂ ಅವರು ಇಪ್ಪತ್ತು. ಕನ್ನಡದ ಕಂಪನ್ನು ಹರಡುವ ತಮ್ಮ ಲೇಖನಗಳನ್ನು ತುಂಬಿಸಿಟ್ಟುಕೊಂಡಿರುವ ಜೋಳಿಗೆ ಹಾಗೂ ಸವೆದಿರುವ ಚಪ್ಪಲಿಗಳೊಂದಿಗೆ ನಡೆಯುತ್ತಾ, ದಾರಿಯಲ್ಲಿ ಸಿಗುವ ಮಕ್ಕಳು, ದೊಡ್ಡವರನ್ನು ಸಂಕೋಚವೆಲ್ಲದೆ, ನಿರಾತಂಕವಾಗಿ ಮಾತನಾಡಿಸಿ, ಅವರಿಗೆ ಕನ್ನಡದ ಹಾಗೂ ಶಿಕ್ಷಣ ಮಾಧ್ಯಮದ ಬಗ್ಗೆ ಹೇಳುವ ಮಗನನ್ನು ಪಡೆದಿರುವ ಆ ಕನ್ನಡ ಭುವನೇಶ್ವರಿ ಧನ್ಯಳು. ದೇಹಕ್ಕೆ ಎಷ್ಟೇ ಶ್ರಮವಾಗಿದ್ದರೂ ಅದನ್ನು ತೋರ್ಪಡಿಸಿಕೊಳ್ಳದೆ, ಲೆಕ್ಕಿಸದೆ ಸದಾಕಾಲ ಕನ್ನಡ ಗಣಕ ಪರಿಷತ್ತಿನ ಆವರಣದಲ್ಲಿದ್ದು, ಯಾರು ಏನೇ ಬಂದು ಕೇಳಿದರೂ ಅವರೆಲ್ಲರಿಗೂ ಸಹಾಯ ಮಾಡುತ್ತಾ, ಜೀವನ ಸವೆಸುತ್ತಿರುವ ನನ್ನ ತಂದೆಯವರಿಗೆ ನಾನು ಮನಃಪೂರ್ವಕವಾಗಿ ಹುಟ್ಟುಹಬ್ಬದ ಶುಭಾಶಯಗಳನ್ನು ಕೋರುತ್ತೇನೆ. ಅವರು ಹೀಗೆ ಸದಾಕಾಲ ಸಮಾಜದ ಹಾಗೂ ಕನ್ನಡ ಸೇವೆಯನ್ನು ಸಲ್ಲಿಸುತ್ತಾ ನೆಮ್ಮದಿಯ ಜೀವನವನ್ನು ನಡೆಸಲೆಂದು ಆಶಿಸುತ್ತೇನೆ.

ಅಚ್ಚುಮೆಚ್ಚಿನ 'ಚಿಕ್ಕಪ್ಪ'

ನಾನು ಎಮ್‌ಎಸ್‌ಸ್ಸಿ ಮುಗಿಸಿದ ದಿನಗಳು. ನನ್ನ ಸ್ನೇಹಿತೆಯರೆಲ್ಲಾ ಸೇರಿ ಒಂದು ಪ್ರವಾಸ ಕೈಗೊಳ್ಳಬೇಕೆಂಬ ತೀರ್ಮಾನವಾಯಿತು. ಆಗ ತಟ್ಟನೆ ನಾನು ಹೇಳಿದ್ದೆ 'ನಮ್ಮ ಅಜ್ಜಿ, ಚಿಕ್ಕಪ್ಪನವರ ಊರು ಶೃಂಗೇರಿಗೆ ಬನ್ನಿ ಹೋಗೋಣ' ಎಂದು. ತಕ್ಷಣವೇ ಅವರೆಲ್ಲಾ 'ನಾವೈದು ಜನರ ಊಟ-ವಸತಿಗಳನ್ನು ನಿಮ್ಮ ಅಜ್ಜಿ ನೋಡಿಕೊಳ್ಳಲು ಸಾಧ್ಯವೇನೇ?' 'ಅಲ್ಲದೆ, ನಿಮ್ಮ ಚಿಕ್ಕಪ್ಪನವರಿಗೆ ನಾವಿಷ್ಟೊಂದು ಜನ ಹೋದರೆ, ತೊಂದರೆಯಾಗೋದಿಲ್ವಾ?' ಎಂದು ಉದ್ಗಾರಗಳನ್ನು ತೆಗೆದರು. ನಾನು ಯಾವ ಯೋಚನೆಯೂ ಇಲ್ಲದೆ, ನಿರ್ಭಯವಾಗಿ 'ಇಷ್ಟೆಲ್ಲಾ ಯೋಚನೆ ಮಾಡ್ಬೇಡಿ. ನನ್ನ ಅಜ್ಜಿ, ಚಿಕ್ಕಪ್ಪ ನಮ್ಮನ್ನ ನೋಡಿಕೊಳ್ತಾರೆ' ಎಂದು ಹೇಳಿದೆ. ನಮ್ಮ ಪ್ರೀತಿಯ ಅಜ್ಜಿ, ಅಚ್ಚುಮೆಚ್ಚಿನ ಚಿಕ್ಕಪ್ಪನವರ ಬಗ್ಗೆ ನಮಗೆ ವಿಶ್ವಾಸವಿರುವುದು ಈ ರೀತಿಯದ್ದು. ನನ್ನ ಅಜ್ಜಿಯವರಂತೂ ಮನೆಗೆ ಬರುವ ಯಾರಿಗಾದರೂ ಊಟ-ತಿಂಡಿ-ಕಾಫಿ-ಕಷಾಯಗಳನ್ನು ಕ್ಷಣಾರ್ಧದಲ್ಲಿ ಮಾಡಿಬಿಡುತ್ತಿದ್ದು. ಇನ್ನು ನಮ್ಮ ಚಿಕ್ಕಪ್ಪ ಯಾರಿಗಾದರೂ ಯಾವ ರೀತಿಯ ಸಹಾಯ ಮಾಡಲೂ ಸೈ. ಈಗಲೂ ನಾನು ಶೃಂಗೇರಿಗೆ ಹೋದಾಗ ನೋಡುವುದು ಅದನ್ನೇ. ಒಬ್ಬರು ಇಂಗ್ಲಿಷ್ ಪಾಠ ಹೇಳಿಸಿಕೊಳ್ಳಲು ಬಂದರೆ, ಮತ್ತೊಬ್ಬರು ಸಂಸ್ಕೃತ ಪಾಠ ಕಲಿಯಲು ಬರುತ್ತಾರೆ ಚಿಕ್ಕಪ್ಪನವರ ಬಳಿ. ಮಗದೊಬ್ಬರು ಹೋಮಿಯೋಪತಿ ಔಷಧಿ ಬೇಡಿ ಬರುತ್ತಾರೆ. ಯಾರನ್ನೂ ಬೇಸರಿಸದೆ, ಎಲ್ಲರಿಗೂ ಪ್ರಾಮಾಣಿಕವಾಗಿ ಸಹಾಯ ಮಾಡಿ ಕಳುಹಿಸುತ್ತಾರೆ. ಅಲ್ಲದೆ, ದೂರದೂರುಗಳಿಂದ ಬರುವ ಬಂಧು-ಮಿತ್ರರಿಗೆ ತಾವಿರುವಲ್ಲಿ ವಸತಿ ಸೌಕರ್ಯವನ್ನೂ ಒದಗಿಸುತ್ತಾರೆ.

ಹೀಗೆ ಬಳಿಗೆ ಬಂದವರಿಗೆ ಸಹಾಯಹಸ್ತ ಚಾಚುವ ಚಿಕ್ಕಪ್ಪ, ಶೃಂಗೇರಿಯನ್ನು ಪ್ರವೇಶಿಸಿದ್ದು ಅವರ ಕಾಲೇಜಿನ ದಿನಗಳಲ್ಲಿ. ಅಣ್ಣ ಶ್ರೀನಾಥಶಾಸ್ತ್ರೀ ಅವರಿಗೆ ಶೃಂಗೇರಿ ಕಾಲೇಜಿನಲ್ಲಿ ಕೆಲಸ ದೊರೆತಾಗ, ಇಡೀ ಕುಟುಂಬ ಶೃಂಗೇರಿಯಲ್ಲಿ ನೆಲೆಯೂರಿತು. ಹೀಗಾಗಿ ಚಿಕ್ಕಪ್ಪನವರ ವಿದ್ಯಾಭ್ಯಾಸವೆಲ್ಲಾ ಶೃಂಗೇರಿಯಲ್ಲೇ ನಡೆಯಿತು. ಸಂಸ್ಕೃತ ಎಂ.ಎ ಪದವಿ ಗಳಿಸಿ, ಕೆಲಸ ಹುಡುಕುತ್ತಿದ್ದಾಗ, ಶೃಂಗೇರಿ ಜಗದ್ಗುರು ಶ್ರೀ ಶ್ರೀ ಶ್ರೀ ಅಭಿನವವಿದ್ಯಾತೀರ್ಥ ಮಹಾಸ್ವಾಮಿಗಳವರ ಕೃಪೆಗೆ ಪಾತ್ರರಾದ ಅವರು ೧೬ ವರ್ಷಗಳ ಕಾಲ ಶ್ರೀ ಮಠದಲ್ಲಿ ಸೇವೆ ಸಲ್ಲಿಸಿದರು. ಸದ್ಯ ಇವರು ಶೃಂಗೇರಿಯ ಜೆಸಿಬಿಎಂ ಕಾಲೇಜಿನಲ್ಲಿ ಪಿಯುಸಿ ವಿಭಾಗದ ಪ್ರಾಂಶುಪಾಲರಾಗಿದ್ದಾರೆ. ನಮ್ಮ ಮನೆತನದ ಮಕ್ಕಳು-ಮೊಮ್ಮಕ್ಕಳೆಲ್ಲರೂ ಅಗತ್ಯ ಬಿದ್ದಾಗ ಮಾರ್ಗದರ್ಶನ ಪಡೆದಿರುವುದು, ಪಡೆಯುತ್ತಿರುವುದು ಇವರಿಂದಲೇ. ನನಗಂತೂ ಸಮಾಧಾನಚಿತ್ತರು, ಅಧ್ಯಯನಶೀಲರು, ಉತ್ತಮ ಉಪನ್ಯಾಸಗಾರರು ಆಗಿರುವ ಇವರ ಜೀವನ ಆದರ್ಶಮಯವಾಗಿದ್ದು, ಅವರನ್ನು ನೋಡಿದಾಗಲೆಲ್ಲಾ 'ಇಂತಹ ಚಿಕ್ಕಪ್ಪನವರನ್ನು ಹೊಂದಿರುವ ನಾನೇ ಧನ್ಯಳು' ಎಂದು ಪದೇ ಪದೇ ಅನಿಸುತ್ತಲೇ ಇರುತ್ತದೆ.

ನನಗೆ ಚಿಕ್ಕಂದಿನಿಂದಲೂ ಶೃಂಗೇರಿಗೆ ಹೋಗುವುದೆಂದರೆ ಬಲು ಇಷ್ಟ. ಅಲ್ಲಿನ ಬೆಟ್ಟ-ಗುಡ್ಡಗಳು, ಸೂರ್ಯೋದಯ-ಸೂರ್ಯಾಸ್ತಗಳು, ೩-೪ ತಿಂಗಳು ಎಡೆಬಿಡದೆ ಸುರಿಯುವ ಮಳೆ ಎಲ್ಲವೂ ನನ್ನನ್ನು ಬಹುವಾಗಿ ಆಕರ್ಷಿಸಿದ್ದವು. ಹೀಗಾಗಿ ಆಗಾಗ್ಗೆ ಶೃಂಗೇರಿಗೆ ಹೋಗುವುದು ನನ್ನ ಹವ್ಯಾಸವಾಗಿಬಿಟ್ಟಿತ್ತು. ಹೋದಾಗಲೆಲ್ಲಾ ಚಿಕ್ಕಪ್ಪನವರ ಬೆನ್ನುಹತ್ತಿ, ಅವರೊಂದಿಗೆ ಎಲ್ಲೆಡೆ ತಿರುಗುತ್ತಿದ್ದೆ. ಒಮ್ಮೆ ಅವರ ತರಗತಿಯಲ್ಲಿ ಕುಳಿತು ಷೇಕ್ಸ್‌ಪಿಯರ್ ನಾಟಕದ ಪಾಠವನ್ನು ಕೇಳಿದ್ದೆ. ಮತ್ತೊಮ್ಮೆ ಕಾಲೇಜಿನ ಗ್ರಂಥಾಲಯದಲ್ಲಿ ಕುಳಿತು ಅಧ್ಯಯನ ನಡೆಸಿದ್ದೆ. ಅನೇಕ ಬಾರಿ ಮಠದಲ್ಲಿನ ಗುರುಗಳ ಪೂಜೆ, ಶಾರದಮ್ಮನವರ ದರ್ಶನಕ್ಕೆ ಅವರೊಂದಿಗೆ ತೆರಳಿದ್ದುಂಟು. ಹಲವಾರು ಬಾರಿ ಪ್ರಕೃತಿಯ ಸೌಂದರ್ಯವನ್ನು ಅವರೊಂದಿಗೆ ಆಸ್ವಾದಿಸಿದ್ದೇನೆ. ಹೀಗೆ ಹೋದಾಗಲೆಲ್ಲಾ ಅವರು 'ನಿಮ್ಮಿಚ್ಛೆಯಂತೆ ನೀವು ಸಂತೋಷಪಡಿ' ಎನ್ನುವಂತೆ ತಮ್ಮ ಅಭಿಪ್ರಾಯವನ್ನು ನನ್ನ ಮೇಲೆ ಎಂದೂ ಹೇರಿಲ್ಲ. ಇಲ್ಲಿ ನಾನು ಮಾತ್ರವಲ್ಲ, ಎಲ್ಲರ ಜೊತೆಗೂ ಅವರು ಹೀಗೆಯೆ ಇರುತ್ತಾರೆ. ಇದು ಅವರದೊಂದು ವಿಶಿಷ್ಟ ಗುಣ. ಹೀಗಾಗಿಯೇ ಇಂದಿಗೂ ನಾನು ಬಯಸಿದಾಗಲೆಲ್ಲಾ ಶೃಂಗೇರಿಗೆ ತೆರಳಲು ಸಿದ್ಧಳಿರುತ್ತೇನೆ.

ವಿಶಿಷ್ಟ ಗುಣಗಳೊಂದಿಗೆ, ಚಿಕ್ಕಪ್ಪನವರು ಧರಿಸುವ ವಸ್ತ್ರವೂ ವಿಶಿಷ್ಟದ್ದೇ. ಹಣೆಗೆ ವಿಭೂತಿ-ಕುಂಕುಮ, ಜುಬ್ಬ-ಬಿಳಿಯ ಪಂಚೆ ಇವರ ಸಮವಸ್ತ್ರ. ಪ್ರತಿದಿನವೂ ಬೆಳಗ್ಗೆ ದೇವರ ಪೂಜೆ, ಸಂಜೆ ಸಂಧ್ಯಾವಂದನೆಗಳನ್ನು ತಪ್ಪಿಸುವುದಿಲ್ಲ. ಮಿಕ್ಕ ಸಮಯದಲ್ಲಿ

ಏನಾದರೂ ಅಧ್ಯಯನ ನಡೆಸುತ್ತಲೇ ಇರುತ್ತಾರೆ. ಮಲಗಬೇಕೆನ್ನುವಾಗಲೂ ಇಂಗ್ಲಿಷ್ ಕಾದಂಬರಿ ಅವರ ಕೈಲಿ ಇದ್ದೇ ಇರುತ್ತದೆ. ಪ್ರತೀ ಭಾನುವಾರದಂದು ಉಚಿತ ಹೋಮಿಯೋಪತಿ ಕ್ಲಿನಿಕ್ ನಡೆಸುವುದು ಇವರ ಹವ್ಯಾಸ. ಜೊತೆಗೆ ಆರ್ಷವಿದ್ಯಾಕೇಂದ್ರದಲ್ಲಿ ವಾಸವಾಗಿರುವ ಚಿಕ್ಕಪ್ಪನವರು ನಿಯತವಾಗಿ ತಾವೇ ಉಪನ್ಯಾಸಗಳನ್ನು ನೀಡುವುದರೊಂದಿಗೆ, ಯೋಗ, ಸತ್ಸಂಗ ತರಗತಿಗಳು ನಡೆಯುವಂತೆ ನೋಡಿಕೊಳ್ಳುತ್ತಿದ್ದಾರೆ. ಅಲ್ಲಿಗೆ ಹೋದಾಗ ಸರಳವಾಗಿರುವ, ಮನಸ್ಸಿಗೆ ಆಪ್ಯಾಯಮಾನವಾಗಿರುವ ಇವರ ಉಪನ್ಯಾಸಗಳನ್ನು ಕೇಳುವುದೇ ಆನಂದ.

ಹಿಂದೂಸ್ತಾನೀ ಸಂಗೀತ ಕೇಳುತ್ತಾ, ಹುಡುಗರಿಗೆ ಸಂಸ್ಕೃತ, ಇಂಗ್ಲಿಷ್ ಪಾಠ ಮಾಡುತ್ತಾ, ನಮ್ಮ ಅಜ್ಜಿಯವರನ್ನು ಕೊನೆಯವರೆಗೂ ಸುರಕ್ಷಿತವಾಗಿ ಕಾಯ್ದುಕೊಂಡು, ಶೃಂಗೇರಿ ಶಾರದಮ್ಮನವರ ಮಡಿಲಲ್ಲಿ ಹಾಗೂ ಗುರುಗಳ ಸಾನ್ನಿಧ್ಯದಲ್ಲಿ ತಮ್ಮ ಜೀವನವನ್ನು ಸವೆಸುತ್ತಾ ೬೦ ಸಂವತ್ಸರಗಳನ್ನು ಕಳೆದಿರುವ ನನ್ನ ಚಿಕ್ಕಪ್ಪನವರ ಬಗ್ಗೆ ಮನಸ್ಸು ತುಂಬಿ ಬರುತ್ತಿದೆ. ಅವರಿಗೆ ೬೦ ವರ್ಷದ ಹುಟ್ಟುಹಬ್ಬದ ಶುಭಾಶಯಗಳು. ಅವರು ಸದಾಕಾಲ ಹೀಗೆಯೇ ಸಮಾಜಮುಖಿಯಾಗಿದ್ದು, ನೆಮ್ಮದಿಯಿಂದ ಜೀವನ ನಡೆಸಲೆಂದು ಆಶಿಸುತ್ತೇನೆ.

◆

ನಂದಿ–ಭೃಂಗಿ

– ಎಸ್.ವಿಶ್ವನಾಥ, ಬೆಂಗಳೂರು

ಈ ಶುಭ ಸಂದರ್ಭದಲ್ಲಿ ನನ್ನ ತಂದೆ ಮತ್ತು ಚಿಕ್ಕಪ್ಪನವರ ಬಗ್ಗೆ ಒಂದೆರಡು ಮಾತುಗಳನ್ನು ಉಲ್ಲೇಖಿಸಲು ಹೊರಟಾಗ ಥಟ್ಟನೆ ನೆನಪಾದ ಘಟನೆಯಿದು. ಈಗ್ಗೆ ಸುಮಾರು ೧೮ ವರ್ಷಗಳ ಹಿಂದಿನ ಮಾತು. ಬೇಸಿಗೆ ರಜೆಗೆಂದು ನನ್ನ ಚಿಕ್ಕಮ್ಮನ್ನ ಮಗಳು ಶಾರದೆಯು ನಮ್ಮಲ್ಲಿಗೆ ಬಂದಿದ್ದಳು. ಶೃಂಗೇರಿಯಿಂದ ನಮ್ಮ ಚಿಕ್ಕಪ್ಪನವರು ಕಾರ್ಯನಿಮಿತ್ತ ಬೆಂಗಳೂರಿಗೆ ಬಂದಿದ್ದರು. ಬಹು ದಿನಗಳ ನಂತರ ನಮ್ಮ ಚಿಕ್ಕಪ್ಪನವರನ್ನು ಕಂಡಿದ್ದರಿಂದ ಅವರ ಪರಿಚಯ ಅವಳಿಗೆ ಹೊಸತು. ಆಗ ದೂರದರ್ಶನದಲ್ಲಿ ಪೌರಾಣಿಕ ಧಾರಾವಾಹಿಗಳು ಕೆಲವು ಪ್ರಸಾರವಾಗುತ್ತಿತ್ತು. ಅವುಗಳನ್ನು ವೀಕ್ಷಿಸಿದ ಪ್ರಭಾವವೋ ಏನೋ, ನಮ್ಮ ತಂದೆ, ಚಿಕ್ಕಪ್ಪನವರು ಸೋದರರರೆಂದು ತಿಳಿದ ತಕ್ಷಣ ನೀವಿಬ್ಬರು "ನಂದಿ – ಭೃಂಗಿ" ತರಹ ಇದ್ದೀರೆಂದು ಪ್ರೀತಿಯ ಉದ್ಗಾರ ತೆಗೆದಿದ್ದಳು. ಆಗ ಅವಳಿಗಿನ್ನೂ ಏಳು–ಎಂಟು ವರ್ಷ ವಯಸ್ಸು. ಇಂದು ನಮ್ಮ ತಂದೆ, ಚಿಕ್ಕಪ್ಪನವರ ಜೀವನಕ್ರಮ, ನಿಸ್ವಾರ್ಥ ಸೇವೆ ಮತ್ತು ಪರಸ್ಪರ ಅವರಿಗಿರುವ ಪ್ರೀತಿ, ಗೌರವಾದರಗಳನ್ನು ನೆನೆದರೆ ಈ ಮಾತು ನಿಜವೆಂದು ಭಾಸವಾಗುತ್ತದೆ.

ನನ್ನ ತಂದೆಯವರು (ನಾವೆಲ್ಲರೂ ಪ್ರೀತಿಯಿಂದ ಅಣ್ಣ ಎಂದೇ ಕರೆಯುವುದು ರೂಢಿ)

'ಮನೆಯೇ ಮೊದಲ ಪಾಠಶಾಲೆ, ಜನನಿ ತಾನೆ ಮೊದಲ ಗುರು' ಎಂಬ ನಾಣ್ನುಡಿಯಿದೆ. ನಮ್ಮ ತಂದೆ ತಾಯಿಗಳು ಇದನ್ನು ಅಕ್ಷರಶಃ ಪಾಲಿಸಿದ್ದು ನಿಜ. ಅವರುಗಳು ಹಾಕಿಕೊಟ್ಟ ಮೇಲ್ಪಂಕ್ತಿಯನ್ನು ನೆನೆಯಲು ಇದು ಅತ್ಯಂತ ಉಚಿತ ಸಂದರ್ಭವಾಗಿದೆ.

ಸಜ್ಜನರ ಸಹವಾಸ ಹೆಜ್ಜೇನು ಸವಿದಂತೆ

ನಮ್ಮ ತಂದೆಯವರು ಗಳಿಸಿದ ಪ್ರೀತಿಯ ಸ್ನೇಹಿತರು ಅಸಂಖ್ಯ. ಯಾವುದೇ ಸಮಾರಂಭ, ರೈಲು, ಬಸ್ಸು ಪ್ರಯಾಣ ಅಥವಾ ಪ್ರತಿನಿತ್ಯದ ಓಡಾಟದಲ್ಲೂ ಸಣ್ಣ ಮಕ್ಕಳಿಂದ ಹಿಡಿದು ಹಿರಿಯರ ಜೊತೆಗೆ ಅವರು ನಡೆಸುವ ಸಂವಾದ ಜನಜನಿತ. ದಿನನಿತ್ಯವೂ ಹೊಸ ಹೊಸ ಸ್ನೇಹಿತರನ್ನು ಪರಿಚಯಿಸಿಕೊಂಡು ಅವರಲ್ಲಿ ಕನ್ನಡದ ಬಗೆಗೆ ಅಭಿಮಾನ, ತಂತ್ರಜ್ಞಾನದ ಬಗ್ಗೆ ಆಸಕ್ತಿ ಮೂಡಿಸಲು ನಡೆಸುವ ಪ್ರಯತ್ನ ಅನುಕರಣೀಯ. ಈ ಮೂಲಕ ಅವರು ರಾಜ್ಯದ ಅನೇಕ ವಿಖ್ಯಾತರ ಒಡನಾಟ ಹೊಂದಿದ್ದು ಬಹು ಅಪರೂಪದ ಅನೇಕ ಕಾರ್ಯಕ್ರಮಗಳಲ್ಲಿ ಭಾಗಿಯಾಗಿದ್ದಾರೆ.

ಶರೀರಮಾದ್ಯಂ ಖಲು ಧರ್ಮಸಾಧನಂ

ನಮ್ಮ ತಂದೆಯವರು ತಮ್ಮ ಅವಿರತ ಕೆಲಸ ಕಾರ್ಯಗಳ ಮಧ್ಯೆ ವ್ಯಾಯಾಮಕ್ಕೆ ಮೀಸಲಿಟ್ಟ ಸಮಯ ಬಲು ಕಡಿಮೆ. ಆದರೆ ತಮ್ಮ ಕೆಲಸಕಾರ್ಯಗಳ ನಿಮಿತ್ತ ಕಾಲ್ನಡಿಗೆಯಲ್ಲಿ ಕ್ರಮಿಸಿದ ದೂರ ಬಹು ದೊಡ್ಡದು. ನಾಲ್ಕಾರು ಕಿಮೀ ನಡಿಗೆ ಇಲ್ಲದ ದಿನವೇ ಇಲ್ಲ. ಶಂಕರಮಠದ ಬಳಿ ಇದ್ದಷ್ಟೂ ಸಮಯ ನಾನು ಮತ್ತು ನನ್ನ ತಂದೆಯವರು ಲಾಲ್‌ಬಾಗ್‌ವರೆಗೆ ಜಾಗಿಂಗ್ ಮಾಡಿದ್ದುಂಟು. ಸ್ನೇಹಿತರೊಡಗೂಡಿ ಅನೇಕ ಚಾರಣಗಳಲ್ಲಿ ಭಾಗವಹಿಸಿದ್ದು ರಾಜ್ಯದ ಅನೇಕ ಅಪೂರ್ವ ಸ್ಥಳಗಳಿಗೆ ಭೇಟಿ ನೀಡಲು ಅವಕಾಶವಾದಂತಾಗಿದೆ.

ಸಿರಿಗನ್ನಡಂ ಗೆಲ್ಗೆ ಸಿರಿಗನ್ನಡಂ ಬಾಳ್ಗೆ

ನಮ್ಮ ತಂದೆಯವರ ಕನ್ನಡದ ಬಗೆಗಿನ ಅಭಿಮಾನ, ಆಸಕ್ತಿ ಚಿರಪರಿಚಿತ. ಹಿರಿಯರೇ ಅಲ್ಲದೆ, ಸಣ್ಣಸಣ್ಣ ಪುಟಾಣಿಗಳಲ್ಲಿ ಅವರು ಮೂಡಿಸುವ ಕನ್ನಡಾಭಿಮಾನವನ್ನು ಎಲ್ಲರೂ ಪ್ರಸ್ತಾಪಿಸುತ್ತಾರೆ. ಕನ್ನಡ ಮಾಧ್ಯಮ ಶಾಲೆಗಳು ನಶಿಸುತ್ತಿರುವ ಈ ದಿನಗಳಲ್ಲಿ ಕನ್ನಡದ ಪತ್ರಿಕೆ, ಪುಸ್ತಕಗಳ ಓದು, ಬಳಕೆಯನ್ನು ಮನೆಮನೆಗಳಲ್ಲಿ ಪ್ರೋತ್ಸಾಹಿಸುವ ಜವಾಬ್ದಾರಿ ನಮ್ಮಗಳ ಮೇಲಿದೆ.

ಋಷಿವಾಕ್ಯದೊಡನೆ ವಿಜ್ಞಾನಕಲೆಮೇಳವಿಸೆ ಜಸವು ಜೀವನಕೆ ಮಂಕುತಿಮ್ಮ

ನಮ್ಮ ತಂದೆಯವರು ತಮ್ಮ ವೃತ್ತಿ ಜೀವನದ ಆರಂಭದಲ್ಲಿ ೧೯೭೩ ರಲ್ಲಿ (೬ ವರ್ಷಗಳ ಅಧ್ಯಾಪಕ ವೃತ್ತಿಯ ಬಳಿಕ) ರಾಷ್ಟ್ರೀಯ ವೈಮಾನಿಕ ಪ್ರಯೋಗಶಾಲೆಯನ್ನು ಸೇರಿದರು. ಅಲ್ಲಿ ಅವರಿಗೆ ಗಣಕಯಂತ್ರಗಳ ಪರಿಚಯವಾಗಿ ಅಂದಿನಿಂದ ತಂತ್ರಜ್ಞಾನದ ಬಗ್ಗೆ ವಿಶೇಷ ಒಲವನ್ನು ಹಾಗೂ ಅದನ್ನು ಸಮಾಜಮುಖಿಯಾಗಿಸಬೇಕೆಂಬ ಹಂಬಲವನ್ನು ಬೆಳೆಸಿಕೊಂಡು ಬಂದರು. ಈ ದಿಸೆಯಲ್ಲಿ ಅವರ ನೆಚ್ಚಿನ ಕೂಸಾದ 'ಕಣಾದ' ಪತ್ರಿಕೆಯನ್ನು ಬಹು ಆರಂಭದಿಂದಲೂ ಗಣಕೀಕರಣಗೊಳಿಸಿದ್ದರು. ೧೯೯೨ರ ಆಸುಪಾಸಿನಲ್ಲಿ (ಭಾರತದಲ್ಲಿ ವೈಯಕ್ತಿಕ ಗಣಕಯಂತ್ರಗಳು ಪರಿಚಯವಾದ ಹೊಸತು ಹಾಗೂ ಆ ಕಾರಣದಿಂದ ಬೆಲೆಯು ಸುಮಾರು ಒಂದು ಲಕ್ಷ ರೂಪಾಯಿಗಳಾಗಿದ್ದು ದುಬಾರಿ ಎನಿಸಿತ್ತು.) ಗಣಕಯಂತ್ರವೊಂದನ್ನು ಖರೀದಿಸಿ ತಮ್ಮ ಪುಸ್ತಕದ ಲೇಖನಗಳನ್ನು ಅನೇಕ ಮಿತ್ರರ ಸಹಾಯದಿಂದ ಸಿದ್ಧಗೊಳಿಸಿದ್ದರು. ಆ ಮೂಲಕ ಕಣಾದ ಪತ್ರಿಕೆಯ ಮುದ್ರಣವನ್ನು ಸುಲಭಗೊಳಿಸಲು ಪ್ರಯತ್ನಿಸಿದ್ದರು. ಅಲ್ಲಿಯವರೆಗೆ ಕನ್ನಡ ಪುಸ್ತಕಗಳ ಪ್ರಕಟಣೆ ಎಂದರೆ – ಲೇಖನಗಳನ್ನು ಕೈಬರಹದಲ್ಲಿ ಅಂತಿಮಗೊಳಿಸಿದ ಬಳಿಕ, ಮುದ್ರಣಾಲಯದಲ್ಲಿ ಅಚ್ಚು ಮೊಳೆಗಳ ಮೂಲಕ ಒಂದೆರಡು ಪ್ರತಿಗಳು ಸಿದ್ಧಗೊಳ್ಳುತ್ತಿದ್ದವು.

ಇಂತಹ ಪ್ರತಿಗಳಲ್ಲಿ ಲೇಖಕರು, ಅಚ್ಚು ಮೊಳೆ ಜೋಡಣೆಯಲ್ಲಿ ತಲೆದೋರಿದ ಅನೇಕ ತಪ್ಪುಗಳನ್ನು ಸರಿಪಡಿಸಲು ಪ್ರೂಫ್ ರೀಡಿಂಗ್ ಮಾಡಬೇಕಾಗಿತ್ತು. ಈ ಕಾರ್ಯವು ಅನೇಕಾವೃತ್ತಿ (ಅಚ್ಚು ಮೊಳೆಗಳ ಜೋಡಣೆ - ಪ್ರೂಫ್ ರೀಡಿಂಗ್) ನಡೆದು ಅದೇ ಕಾರಣದಿಂದ ಪುಸ್ತಕಗಳ ಪ್ರಕಟಣೆ ಬಹು ದೀರ್ಘ, ತ್ರಾಸದಾಯಕವೆನಿಸಿತ್ತು. ಕಣಾದ ಪತ್ರಿಕೆಯ ಲೇಖನಗಳು ಗಣಕಯಂತ್ರದಲ್ಲಿ ಸಿದ್ಧಗೊಳ್ಳುತ್ತಿದ್ದರಿಂದ ಮೊಳೆ ಜೋಡಣೆಯು ತಪ್ಪಿ ಪುಸ್ತಕ ಪ್ರಕಟಣೆಯು ಶೀಘ್ರ, ಸುಲಭದಾಯಕವಾಯಿತು.

೧೯೯೭/೯೮ ರ ಸಮಯದಲ್ಲಿ ವಿಂಡೋಸ್ ೯೫/೯೮ ಆವೃತ್ತಿ ಜನಪ್ರಿಯವೆನಿಸತೊಡಗಿದ್ದ ಸಮಯದಲ್ಲಿ ನಮ್ಮಗಳ ಬಳಕೆಗೆಂದು ಮತ್ತೊಂದು ಗಣಕಯಂತ್ರವನ್ನು ಖರೀದಿಸಿ ಲೇಖನಗಳನ್ನು ಸಿದ್ಧಪಡಿಸುತ್ತಿದ್ದರು. ಅಷ್ಟರ ಹೊತ್ತಿಗಾಗಲೇ ಅಂದು ಬಳಕೆಯಲ್ಲಿದ್ದ ಕನ್ನಡ ಲಿಪಿ ತಂತ್ರಾಂಶಗಳು ಮತ್ತು ಅದರ ಸಂಬಂಧೀ ತಂತ್ರಜ್ಞಾನದಲ್ಲಿದ್ದ ಕೊರತೆಗಳು ಅವರನ್ನು ಕಾಡಲಾರಂಭಿಸಿದ್ದವರು. ಅವುಗಳನ್ನು ನಿವಾರಿಸಲು ಸಮಾನ ಮನಸ್ಕರೊಡಗೂಡಿ ಕನ್ನಡ ಗಣಕ ಪರಿಷತ್ತನ್ನು ಸ್ಥಾಪಿಸಿದರು. ಕನ್ನಡ ತಂತ್ರಾಂಶಗಳಲ್ಲಿ ಶಿಷ್ಟತೆಯನ್ನು ಅಳವಡಿಸಲು ಅನೇಕ ತಂತ್ರಜ್ಞರ ಪಡೆಯನ್ನು ಕಟ್ಟಿದರು. ಸರ್ಕಾರದ ವಿವಿಧ ಇಲಾಖೆಗಳಿಗೆ ಅಸಂಖ್ಯ ಬಾರಿ ಭೇಟಿಯಿತ್ತು, ತಂತ್ರಜ್ಞಾನದ ಪರಿಚಯ, ಅವುಗಳಲ್ಲಿನ ಕೊರತೆ, ನಿವಾರಣೆಗೆ ಅನುಸರಿಸಬೇಕಾದ ಮಾರ್ಗಗಳ ಮನವರಿಕೆ ಮಾಡಿಕೊಟ್ಟರು. ಇವೆಲ್ಲವುಗಳ ಫಲರೂಪವಾಗಿ ಇಂದಿಗೆ ಸುಮಾರು ಒಂದು ದಶಕದ ಹಿಂದೆ, ಗಣಕ ಪರಿಷತ್ತಿನ ಉತ್ಸಾಹಿ ಸ್ನೇಹಿತರ ಮೂಲಕ ನುಡಿ ತಂತ್ರಾಂಶವನ್ನು ಸಿದ್ಧಪಡಿಸಿದರು. ದಿನದಿನಕ್ಕೂ ಬದಲಾಗುತ್ತಿರುವ ಹೊಸ ತಂತ್ರಜ್ಞಾನಕ್ಕೆ ನುಡಿ ತಂತ್ರಾಂಶದ ಅಳವಡಿಕೆಯ ಬಗೆಗೆ ಇಂದಿಗೂ ಚರ್ಚೆ ನಡೆಸುತ್ತಿರುತ್ತಾರೆ.

ಪ್ರೀತಿಯ ಚಿಕ್ಕಪ್ಪ

ವಿದ್ಯಾ ನಾಮ ನರಸ್ಯ ರೂಪಮಧಿಕಂ ಪ್ರಚ್ಛನ್ನ ಗುಪ್ತಂ ಧನಂ।
ವಿದ್ಯಾ ಭೋಗಕರೀ ಯಶಃ ಸುಖಕರೀ ವಿದ್ಯಾ ಗುರೂಣಾಂ ಗುರುಃ॥

ವಿದ್ಯೆಯ ಮಹತ್ವವನ್ನು ಸಾರುವ ಈ ಸುಭಾಷಿತವನ್ನು ಅಕ್ಷರಶಃ ಪಾಲಿಸಿದವರು ಮತ್ತು ಅಸಂಖ್ಯ ವಿದ್ಯಾರ್ಥಿವೃಂದವನ್ನು ಕಟ್ಟಿದವರು ನನ್ನ ಚಿಕ್ಕಪ್ಪನವರು. ಅವರದು ಸ್ಫುರದ್ರೂಪ, ಎತ್ತರದ ನಿಲುವು. ಅವರ ವ್ಯಕ್ತಿತ್ವವನ್ನು ಕಂಡು ಆಕರ್ಷಿತರಾಗದವರೇ ಇಲ್ಲ. ಅವರದು ಬಹುಮುಖ ಪ್ರತಿಭೆ.

ಸಂಸ್ಕೃತ, ಕನ್ನಡ, ಇಂಗ್ಲೀಷ್ ಅಧ್ಯಾಪಕರಾಗಿ, ಸದ್ಯ ಪ್ರಾಂಶುಪಾಲರಾಗಿ ಸೇವೆ ಸಲ್ಲಿಸುತ್ತಿರುವ ಅವರು ನಿರಂತರ ಅಧ್ಯಯನ, ಅಧ್ಯಾಪನದಲ್ಲಿ ನಿರತರಾದವರು. ವೈದ್ಯಕೀಯ ಕ್ಷೇತ್ರದಲ್ಲಿಯೂ ಅವರ ಆಸಕ್ತಿ ಅಪಾರ. ಹೋಮಿಯೋಪತಿ ವೈದ್ಯ ಪದ್ಧತಿಯಲ್ಲಿ ಪರಿಣಿತಿ ಸಾಧಿಸಿ ಶೃಂಗೇರಿ ಮತ್ತು ಸುತ್ತಮುತ್ತಲಿನ ಜನರಿಗೆ ನೀಡುತ್ತಿರುವ ಉಚಿತ ಸೇವೆ ಎಲ್ಲರ ಪ್ರಶಂಸೆಗೊಳಪಟ್ಟಿದೆ. ನಮ್ಮ ಕುಟುಂಬದ ಎಲ್ಲರಿಗೂ ಅವರೇ ಮೊದಲ ವೈದ್ಯರು. ಇವುಗಳಲ್ಲದೇ ಶಂಕರಮಠದ ಬಹು ಹತ್ತಿರದ ಸಂಪರ್ಕ ಹೊಂದಿದ್ದ ಅವರು ಶೃಂಗೇರಿ ಜಗದ್ಗುರುಗಳ ಆಪ್ತ ಕಾರ್ಯದರ್ಶಿಯಾಗಿಯೂ, ಆಡಳಿತಾಧಿಕಾರಿಯಾಗಿಯೂ ಮಹತ್ತರ ಜವಾಬ್ದಾರಿಗಳನ್ನು ಅತ್ಯಂತ ಸಮರ್ಥವಾಗಿ ನಿಭಾಯಿಸಿದ್ದರು.

ಹೆಚ್ಚಿನವರಿಗೆ ಅರಿವಿರದ ಅವರ ಮತ್ತೊಂದು ಆಸಕ್ತಿಯ ಕಾಯಕ – ಕಾರು ಚಾಲನೆ. ಶೃಂಗೇರಿ ಜಗದ್ಗುರುಗಳು ದೇಶಾದ್ಯಂತ ನಡೆಸಿದ ಅನೇಕ ಯಾತ್ರೆಗಳಲ್ಲಿ ಜಗದ್ಗುರುಗಳ ಕಾರನ್ನು ಅನೇಕ ಬಾರಿ ಚಾಲನೆ ಮಾಡಿದ ಹೆಗ್ಗಳಿಕೆ ಅವರದ್ದು. ಇಂದಿಗೂ ಸಂದರ್ಭ ದೊರೆತಾಗಲೆಲ್ಲಾ ಮಿತ್ರರು, ವಿದ್ಯಾರ್ಥಿಗಳೊಡಗೂಡಿ ರಾಜ್ಯಾದ್ಯಂತ ಅನೇಕ ಪ್ರವಾಸಗಳನ್ನು ಮಾಡುತ್ತಿದ್ದಾರೆ. ಶೃಂಗೇರಿ ಬಳಿಯ ರಸ್ತೆಗಳಲ್ಲಿ ಕಡಿದಾದ ತಿರುವುಗಳಿದ್ದು ಬಹುಪಾಲು ನುರಿತ ಚಾಲಕರೇ ಚಾಲನೆ ಮಾಡುವುದು ಇಲ್ಲಿ ಉಲ್ಲೇಖಿಸಬೇಕಾದ ವಿಷಯ.

◆

ನಮ್ಮ ಮನೆಯ ಹಿರಿಯರು

– ಚಿತ್ಕಲಾ ಮತ್ತು ಶಾರ್ವರೀ

ನಮ್ಮ ಮನೆಯ ಹಿರಿಯರು
ಹಿರಿಯರೆಂಬ ಕಿರಿಯರು
ಹಿರಿಯರೊಡನೆ ಕಿರಿಯರಾಗಿ
ಕಿರಿಯರೊಡನೆ ಹಿರಿಯರಾಗಿ
ಹಿರಿಯತನವ ಮೆರೆದರು
ಕಿರಿಯರಂತೆ ನಲಿವರು

ಕಲಿತು ಕಲಿತು ಕಲಿತು ಕಲಿತು
ಕಲಿವರೊಡನೆ ಕಲೆತು ಕಲೆತು
ಕಲಿವ ಕಲೆಯ ಕಲಿಸಿ ಕಲಿಸಿ
ಕಲಿವ ಕಲಿಗಳಾದರು
ಕಲಿಸೊ ಕರ್ಮದಲ್ಲಿ ತಮ್ಮ
ತಾವೆ ಕಳೆದುಕೊಂಡರು

ಬದುಕು ಹೀಗೆ ಬದುಕು ಹಾಗೆ
ಎಂದು ಎಂದೂ ಅನ್ನದೆ
ಬದುಕಿ ಬದುಕ ಮಾರ್ಗತೋರಿ
ಬದುಕು ಕಲಿಸಿಕೊಟ್ಟರು
ಬದುಕಿನಲ್ಲಿ ಬೆಳೆದರು
ಬೆಳೆವರನ್ನು ಪೊರೆವರು

ಕೊಡುವ ಕೈಯಿ ಮಿಡಿವ ಹೃದಯ
ಸನ್ನಡತೆಯ ಸಾಹಚರ್ಯ
ಜೀವನದಲಿ ಅಚಲ ಧ್ಯೇಯ
ಲೌಕಿಕದಲಿ ವೈರಾಗ್ಯ
ಅಮಿತ ಆಸ್ತಿವಂತರು
ಹೃದಯ ಶ್ರೀಮಂತರು

ಮೈಯ್ಯಮೇಲೆ ಸರಳತೊಡುಗೆ
ಮಂದಹಾಸ ದಿಟ್ಟ ನಡಿಗೆ
ಮಕ್ಕಳಲ್ಲಿ ಪ್ರೀತಿ ಸಲುಗೆ
ಬಂಧುಬಳಗವೆಲ್ಲರೊಳಗೆ
ಪ್ರೇಮ ಅಭಯವೆಸೆದರು
ಸೌಹಾರ್ದದಿ ಬೆಸೆವರು

ನಮ್ಮ ಮನೆಯ ಹಿರಿಯರು
ಹಿರಿಯರೆಂಬ ಕಿರಿಯರು
ಕಿರಿಯರೆಲ್ಲ ನಾಚುವಂಥ
ಉತ್ಸಾಹೀ ಪಟುಗಳು
ನಮ್ಮನೆಲ್ಲ ಹಿತದಿ ಹರಸಿ
ಹುರುಪು ತುಂಬೊ ಗುರುಗಳು

ಏನ್ ಬರೀಲಿ ನಿಮ್ಮಿಬ್ರ ಬಗ್ಗೆ

– ವಿಶಾಖಾ ಜಗದೀಶ್

ಎಲ್ರೂ ತಮ್ಗನ್ನಿಸಿದ್ ಬರೆದ್ರು ಮಾವಂದ್ರು ಬಗ್ಗೆ
ಆದ್ರೂ ನಮ್ಮಮ್ಮ ಬಿಡೋಲ್ಲ ನಾ ಬರೀದಿದ್ರೆ
ಹೇಗಪ್ಪಾ ಬರೆಯೋದಂತ್ ತಲೆಬಿಸಿಯಾಗಿದ್ರೆ
ಥಟ್ಟಂತ ಹೊಳೀತು ಪದಗಳ್ ಅವ್ರಿಬ್ರು ಬಗ್ಗೆ

ನಾನಾದ್ರೋ ಚಿಕ್ ಸೊಸೆ ನಮ್ಮಿಬ್ರು ಮಾವಂದ್ರಿಗೆ
ಚಿಕ್ಕಂದ್ನಿಂದ್ ಬರ್ಲಿಲ್ಲ ಲೆಕ್ಕ ಇದುವರೆಗೆ
ನನ್ ಲೆಕ್ಕ ನೋಡಿದ್ರೆ ಮಜಾ ಗಿರಿಮಾವಂಗೆ
ನಾ ಗಮ್ಕ ಹಾಡಿದ್ರೆ ಖುಷಿಪಡ್ತಾರ್ ಮಕ್ಕಳ್ಥಾಂಗೆ

ಏನ್ ಹೇಳ್ಲಿ ಗಿರಿಮಾವನ್ ಪಾಠದ್ ಬಗ್ಗೆ
ಕೂತಿರ್ತೀವ್ ಬಾಯ್ಬಿಟ್ಕೊಂಡ್ ಮೈಮರ್ತು ಹಾಗೆ
ಹಿಂದೂಸ್ತಾನಿ ಸಂಗೀತದ್ ಹುಚ್ಚಿಡ್ಸಿ ನಂಗೆ
ಕಲಾವಿದ ಹುಡುಗನ್ ಹುಡ್ಕಿ ಸುಸ್ತು ಹೆತ್ತೋರ್ಗೆ

ಶ್ರೀನಾಥ ಮಾವನ ಕಥೆ ಹೇಳೋ ಕಲೆಗೆ
ಕಳೆದೇ ಹೋಗ್ತಿದ್ದೆ ಗುಬ್ಬಚ್ಚಿ ಕಥೆಗೆ
ತಿನ್ಬೇಕು ಸಜ್ಜೆ ಮಾತಾಡ್ಬೇಕು ಕನ್ನಡ್ದಾಗೆ
ಕಲ್ತು ಸಾಧಿಸ್ಬೇಕಂತಾರೆ ಜೀವನ್ದಾಗೆ

ಬೆನ್ತಟ್ಟಿ ಹಾರೈಸಿ ನಡೆಮುಂದೆ ಹೀಗೆ
ಹೇಳ್ತಾರೆ ಬಂದಿದ್ಬರ್ಲಿ ನಾನಿದ್ದೇನ್ನಿನ್ಗೆ
ಅದೇನ್ ಉತ್ಸಾಹ ಎಪ್ಪತ್ತು ಅವರ್ಗೆ!
ನೋಡೀನೇ ದಂಗಾದೆ ಇಪ್ಪತ್ತು ನನ್ಗೆ!

ಜನ್ಮದಿನದ್ ಶುಭಾಶಯ ಕೋರಿ ನಿಮ್ಮಿಬ್ರಿಗೆ
ಗೀಚ್ದೆ ಹೇಗೋ ನಾಕ್ಸಾಲ್ ಮನ್ಸಿಗ್ ಬಂದ್ಹಾಗೆ
ದೇವ್ರನ್ ಕೋರ್ತೀನಿ ನಿಮ್ಮಿಬ್ರ ಆಯಸ್ಗೆ
ಹರ್ಸೋಹಾಗಾಗ್ಲಿ ನನ್ ಮಕ್ಳು ಮೊಮ್ಮಕ್ಳಿಗೆ

ಸನ್ಯಾಸಿಯಲ್ಲದ ಮಹಾಜ್ಞಾನಿ – ಗಿರಿಧರಶಾಸ್ತ್ರಿ

– ಎಂ.ಎಂ.ಪ್ರಭಾಕರ ಕಾರಂತ, ಹೊಸಕೊಪ್ಪ
ಕೃಷಿಕರು, ಪತ್ರಕರ್ತರು, ೦೮೨೬೫-೨೫೫೦೪೨
prabkaranth@gmail.com

ಶೃಂಗೇರಿ ಸನಿಹದಲ್ಲಿ ಕಿಕ್ರೆ ಎಂಬ ಹಳ್ಳಿ ಇದೆ. ದೂರದ ಚನ್ನೈನಿಂದ ಎಂ.ಎಂ. ಸುಬ್ರಹ್ಮಣ್ಯಂ ಎಂಬ ಉದ್ಯಮಿ ಶೃಂಗೇರಿಯ ಮೇಲಿನ ಪ್ರೀತಿಯಿಂದ ಇಲ್ಲಿ ಬಂದು ನೆಲೆಸಿದ್ದರು. ಈ ವಯೋವೃದ್ಧರು ಕಡೆಗೆ ಆರ್ಷವಿದ್ಯಾಕೇಂದ್ರದ ಶ್ರೀ ದಯಾನಂದ ಸರಸ್ವತಿಯವರಿಂದ ಸನ್ಯಾಸ ಸ್ವೀಕರಿಸಿದರು. ಆಗಲೇ ಶೃಂಗೇರಿಯಲ್ಲಿ ಆರ್ಷವಿದ್ಯಾಕೇಂದ್ರ ಕಟ್ಟಿಸಿ ಅದನ್ನು ಸ್ವಾಮೀಜಿಯವರಿಗೆ ಸಮರ್ಪಿಸಿದರು. ಶ್ರೀ ಶ್ರೀ ಸತ್ಯಜ್ಞಾನಾನಂದಸರಸ್ವತಿ ಸ್ವಾಮೀಜಿ ಎಂಬ ಹೊಸ ನಾಮದಲ್ಲಿ ಅವರು ಸಾಮಾಜಿಕ ಚಟುವಟಿಕೆ ನಡೆಸತೊಡಗಿದರು. ತಮ್ಮ ಕಾಲಾನಂತರವೂ ಈ ಚಟುವಟಿಕೆ ಮುಂದುವರಿಸಲು ಅವರು ಶೃಂಗೇರಿಯ ಮೆಣಸೆಯಲ್ಲಿ ಒಂದು ನಿವೇಶನ ಖರೀದಿಸಿ ಅದಕ್ಕೆ ಸ್ವಲ್ಪ ದತ್ತಿನಿಧಿ ಇಡಲು ನಿರ್ಧರಿಸಿದರು. ಈ ಹಣ ಮತ್ತು ನಿವೇಶನವನ್ನವರು ಶೃಂಗೇರಿಯ ಸಿ.ವಿ. ಗಿರಿಧರಶಾಸ್ತ್ರಿಗಳ ಹೆಸರಿಗೆ ಮಾಡಲು ನಿರ್ಧರಿಸಿದರು. ಆದರೆ ತನ್ನ ಹೆಸರಿನಲ್ಲಿ ಹಣ ಆಸ್ತಿ ಇರುವುದಕ್ಕೆ ಶಾಸ್ತ್ರಿಗಳು ಸಮ್ಮತಿ ನೀಡಲಿಲ್ಲ. ಹಾಗೆಂದೇ ಶಾಸ್ತ್ರಿಗಳ ಸಲಹೆಯಂತೆ ಒಂದು ಟ್ರಸ್ಟ್ ಮಾಡಿ ಅದರ ಹೆಸರಲ್ಲಿ ಹಣ ಹಾಗೂ ನಿವೇಶನವನ್ನು ಸ್ವಾಮೀಜಿ ಇಡುವಂತಾಯಿತು. ಅನಾಯಾಸವಾಗಿ ಹಣ, ನಿವೇಶನ ದೊರೆಯುವಾಗ ಅವನ್ನು ತಿರಸ್ಕರಿಸಿದ ವ್ಯಕ್ತಿ ಶಾಸ್ತ್ರಿಗಳು ಎಂಬುದು ಲೋಕದ ಅಚ್ಚರಿಯಾಗಿ ಕಾಣಿಸಬಹುದು.

ಶಾಸ್ತ್ರಿಗಳು ಓರ್ವ ಸನ್ಯಾಸಿಯಲ್ಲದ ಸನ್ಯಾಸಿ. ಅವರು ನಿರ್ಲಿಪ್ತರು ನಿರ್ಮೋಹಿಗಳು. ಮುಂದಿನ ಬದುಕಿಗಾಗಿ ಸಂಗ್ರಹಿಸಿಡುವುದನ್ನು ಶಾಸ್ತ್ರ ನಿಷೇಧಿಸುತ್ತದೆ. ಶಾಸ್ತ್ರಿಗಳು ಅಂಥ ಶಾಸ್ತ್ರ ಪಾಲಿಸುವವರು. ಅವರಿಗೆ ಕಾಲೇಜು ನೀಡುವ ಸಂಬಳದಲ್ಲಿ ತಮ್ಮ ಖರ್ಚು ಹೋಗುತ್ತಾ ಉಳಿದದ್ದೆಲ್ಲಾ ಅವಶ್ಯವಿರುವವರಿಗೆ ಮೀಸಲು. ಆರ್ಷವಿದ್ಯಾ ಕೇಂದ್ರದ ಅವರ ನಿವಾಸದಲ್ಲಿ ಹಲವು ಮಕ್ಕಳು ಆಶ್ರಯ ಪಡೆದಿದ್ದಾರೆ.

ಕಾಲೇಜು, ಪಾಠ ಇತ್ಯಾದಿ ಎಲ್ಲವೂ ಇನ್ನು ಸಾಕು ಎಂದು ಶಾಸ್ತ್ರಿಗಳಿಗೆ ಒಮ್ಮೆ ಅನಿಸಿದ್ದಿದೆ. ಅದಕ್ಕಾಗಿ ಕಾಲೇಜಿಗೊಮ್ಮೆ ಅವರು ರಾಜೀನಾಮೆ ಸಲ್ಲಿಸಿದ್ದರು. ಆಗ ಪ್ರಾಂಶುಪಾಲರಾದ ಶ್ರೀ ವೀರಪ್ಪಗೌಡರು ನಮ್ಮಲ್ಲಿಗೆ ಬಂದಿದ್ದರು. ಶಾಸ್ತ್ರಿಗಳ ಮನ ಒಲಿಸಲು ನಮ್ಮ ಸಹಕಾರ ಕೋರಿದ್ದರು. ಆಗ ಪ್ರಾಂಶುಪಾಲರು ಹೇಳಿದ ಮಾತು ಇನ್ನೂ ನನ್ನ ಜ್ಞಾಪಕದಲ್ಲಿದೆ. ಶೃಂಗೇರಿ ಜೆ. ಸಿ. ಬಿ. ಎಂ. ಕಾಲೇಜಿನ ಎಲ್ಲಾ ಯಶಸ್ಸು, ಎಲ್ಲಾ ಚಟುವಟಿಕೆಗಳ ಹಿಂದಿನ ಶಕ್ತಿ ಶಾಸ್ತ್ರಿಗಳೆಂಬುದು. ಅವರಿಲ್ಲದ ಕಾಲೇಜು ಊಹಿಸಲೂ

ಆಗದು ಎಂದು ವೀರಪ್ಪಗೌಡರು ಪ್ರಾಮಾಣಿಕವಾಗಿ ಹೇಳಿದ್ದರು. ಅಂತೂ ಒತ್ತಡಕ್ಕೆ ಕರಗಿ ಶಾಸ್ತ್ರಿಗಳು ಕಾಲೇಜಿನಲ್ಲಿ ಮುಂದುವರಿಯಲು ಒಪ್ಪಿದ್ದಾರೆ. ಅದು ವಿದ್ಯಾರ್ಥಿಗಳ ಪುಣ್ಯ, ಕಾಲೇಜಿನ ಅದೃಷ್ಟ.

ಗಿರಿಧರಶಾಸ್ರಿಗಳು ಶೃಂಗೇರಿ ಶಾರದಾ ಪೀಠದ ಆಡಳಿತಾಧಿಕಾರಿಗಳಾಗಿದ್ದವರು. ಅಲ್ಲಿಂದ ನಿರ್ಗಮಿಸಿದ ನಂತರ ಅವರು ದೆಹಲಿಯಲ್ಲಿ ಉತ್ತಮ ಹುದ್ದೆಯಲ್ಲಿ ಕೆಲಕಾಲ ಇದ್ದರು. ಆದರೆ ಶೃಂಗೇರಿ ಅವರನ್ನು ಬಿಡಲಿಲ್ಲ. ಇಲ್ಲಿನ ಸೆಳೆತ ಅವರನ್ನು ಶೃಂಗೇರಿಗೇ ಎಳೆದು ತಂದಿತು. ಶೃಂಗೇರಿ ಜಗದ್ಗುರುಗಳ ಕುರಿತು, ಮಠದ ಕುರಿತು ಅವರದ್ದು ಅನನ್ಯ ನಿಷ್ಠೆ. ತಾವಿದ್ದ ಹುದ್ದೆಯಲ್ಲಿ ಬೇರೊಬ್ಬರು ಕುಳಿತಿದ್ದಾರೆ. ಏನಾದರಾಗಲಿ ಎಂದು ಒಂದು ಕ್ಷಣವೂ ಅವರಿಗೆ ಅನಿಸಿರಲು ಸಾಧ್ಯವೇ ಇಲ್ಲ. ರಾಗದ್ವೇಷರಹಿತ ಮನಸ್ಸು ಅವರದ್ದು. ಈವತ್ತಿಗೂ ಮಠದ ಕೆಲಸಗಾರರು ಬಹುತೇಕ ಶಾಸ್ತ್ರಿಗಳನ್ನು ಅತೀವ ಪ್ರೀತಿಯಿಂದ ಕಾಣುತ್ತಾರೆ. ನರಸಿಂಹವನದ ಭವನಕ್ಕೆ ಹೋಗಿ ಗುರುದರ್ಶನ ಮಾಡಬೇಕಾದರೆ ಅವರಿಗೆ ನಿರ್ಬಂಧವಿಲ್ಲ. ಸ್ವತಃ ಜಗದ್ಗುರುಗಳೂ ಅವರನ್ನು ವಿಶೇಷ ಕಾರುಣ್ಯದಿಂದ ಕಾಣುತ್ತಾರೆ. ಆದರೆ ಶಾಸ್ತ್ರಿಗಳು ಯಾವತ್ತೂ ಸರದಿಸಾಲಿನಲ್ಲಿ ನಿಂತೇ ಗುರುದರ್ಶನ ಮಾಡುತ್ತಾರೆ. ವಿಶೇಷ ಗೌರವ, ಸೌಲಭ್ಯ ಅವರೆಂದೂ ನಿರೀಕ್ಷಿಸರು.

ತ.ಸು. ಶಾಮರಾಯರ ಮಗ ಟಿ. ಎಸ್. ವೆಂಕಣ್ಣಯ್ಯ ಶೃಂಗೇರಿಯಲ್ಲಿ ಜೆ. ಸಿ. ಬಿ. ಎಂ. ಕಾಲೇಜಿನಲ್ಲಿ ಸಂಸ್ಕೃತ ಉಪನ್ಯಾಸಕರಾಗಿದ್ದರು. ಆಗ ಶಾಸ್ತ್ರಿಗಳು ಅವರ ಶಿಷ್ಯರು. ತರಗತಿಯಲ್ಲಿ ವ್ಯಾಕರಣ ಪಾಠ ಮಾಡಿದ ವೆಂಕಣ್ಣಯ್ಯ– ಗಿರೀ ನಾನು ಸರಿಯಾಗಿ ಹೇಳ್ತಿದೀನಾ ಎಂದು ಪ್ರಶ್ನಿಸುತ್ತಿದ್ದರಂತೆ! ವೆಂಕಣ್ಣಯ್ಯ ಬದುಕಿದ್ದಷ್ಟು ದಿನವೂ ತಮ್ಮ ಶಿಷ್ಯ ಗಿರಿಯನ್ನು ಹೀಗೇ ಕಂಡವರು. ನಿವೃತ್ತಿ ನಂತರ ವೆಂಕಣ್ಣಯ್ಯ ತಮ್ಮನ್ನು ನಿರಂತರ ಬರಹದಲ್ಲಿ ತೊಡಗಿಸಿಕೊಂಡಿದ್ದರು. ಬೆಳಿಗ್ಗೆ ಗಿರಿ ಬಳಿ ಹೋಗಿ ತಾವು ಬರೆದಿದ್ದನ್ನು ಗಟ್ಟಿಯಾಗಿ ಓದಿ "ಸರಿ ಇದೆಯೇನಪ್ಪಾ" ಎಂದು ವಿಚಾರಿಸದಿದ್ದರೆ ವೆಂಕಣ್ಣಯ್ಯನಿಗೆ ತೃಪ್ತಿ ಇರುತ್ತಿರಲಿಲ್ಲ. ಸ್ವಲ್ಪ ಕಾಲ ಗಿರಿಧರಶಾಸ್ರಿಗಳು ಕಿಕ್ರೆಯಲ್ಲೇ ನೆಲೆಸಿಬಿಟ್ಟರು. ಆಗ ದಿನವೂ ಕಳವಳ ತಳಮಳಪಟ್ಟವರಲ್ಲಿ ವೆಂಕಣ್ಣಯ್ಯ ಮೊದಲಿಗರು.

ಬೆಂಗಳೂರಿನ ಬಳಿ ಶ್ರೀ ವಿರಾಜೇಶ್ವರ ಸ್ವಾಮೀಜಿ ಎಂಬುವವರಿದ್ದಾರೆ. ಅವರು ಅಮೇರಿಕೆಯಲ್ಲಿ ದೊಡ್ಡ ವಿಜ್ಞಾನಿಯಾಗಿದ್ದವರು. ವೈರಾಗ್ಯ ಬಂದು ಸನ್ಯಾಸಿಯಾದರು. ಹರಿದ್ವಾರದ ಅವರ ಗುರುಗಳ ಗುರುಗಳು ಶೃಂಗೇರಿಯ ಜಗದ್ಗುರು ಶ್ರೀ ಚಂದ್ರಶೇಖರಭಾರತಿ ಸ್ವಾಮೀಜಿಯವರ ಶಿಷ್ಯರು. ಹಾಗೆಂದೇ ಶ್ರೀ ವಿರಾಜೇಶ್ವರರು ಶೃಂಗೇರಿಗೂ ಬಂದು ಕೆಲ ಕಾಲ ಮಠದಲ್ಲಿ ತಂಗಿದ್ದರು. ಮಠದಲ್ಲಿರುವ ಕೆಲವರ ವರ್ತನೆ ಕುರಿತು ಸ್ವಾಮೀಜಿಯವರಿಗೆ ಅಚ್ಚರಿಯಾಯಿತು. ಆಧ್ಯಾತ್ಮದ ಮೇರು ಹಂತ ತಲುಪಿದ ಸ್ವಾಮೀಜಿ ಸಾನ್ನಿಧ್ಯದಲ್ಲಿ, ಆಧ್ಯಾತ್ಮಿಕ ಶಕ್ತಿಕೇಂದ್ರದಲ್ಲಿ ಇಂಥವರು ಇರಲು ಹೇಗೆ ಸಾಧ್ಯ. ಆ ಶಕ್ತಿ ಇವರನ್ನೆಲ್ಲಾ ಏಕೆ ಸರಿಪಡಿಸಲಿಲ್ಲ ಎಂದು ಸ್ವಾಮೀಜಿಯವರಿಗೆ ಆಗಾಗ ಪ್ರಶ್ನೆ

ಕಾಡುತ್ತಿತ್ತು. ಒಮ್ಮೆ ಧೈರ್ಯ ಮಾಡಿ ಜಗದ್ಗುರು ಶ್ರೀ ಭಾರತೀತೀರ್ಥರಲ್ಲಿ ತಮ್ಮ ಪ್ರಶ್ನೆ ಮುಂದಿಟ್ಟೇ ಬಿಟ್ಟರು. ಆಗ ಜಗದ್ಗುರುಗಳು ಜಗನ್ಮಾತೆ ಶಾರದಾಂಬೆಗೆ "ಯಾರನ್ನು ಎಲ್ಲಿಡಬೇಕು ಎಂದು ತಿಳಿದಿದೆ" ಎಂಬ ಉತ್ತರ ನೀಡಿದರಂತೆ. ಅದು ತಮಗೆ ಸಮ್ಮತವಾಯಿತು ಎಂದು ಶ್ರೀ ವಿರಾಜೇಶ್ವರರು ಬರೆದಿದ್ದಾರೆ. ಈ ಘಟನೆ ಓದಿದಾಗ ನನಗೆ ತಕ್ಷಣಕ್ಕೆ ನೆನಪಿಗೆಬಂದಿದ್ದು ಚಿ.ವಿ. ಗಿರಿಧರಶಾಸ್ತ್ರಿಗಳು. ಶೃಂಗೇರಿಯ ಆಧ್ಯಾತ್ಮಿಕ ಶಕ್ತಿಯ ಪೂರ್ಣ ಪ್ರಭಾವದಿಂದ ಚಿ.ವಿ. ಗಿರಿಧರಶಾಸ್ತ್ರಿಗಳು ರೂಪಗೊಂಡಿದ್ದಾರೆ. ಕಳಂಕ ಹುಡುಕಲು ಸಾಧ್ಯವಾಗದ ಪರಿಪೂರ್ಣ ವ್ಯಕ್ತಿಯನ್ನು ಜಗನ್ಮಾತೆ ರೂಪಿಸಿದ್ದಾಳೆ.

ತರಂಗ ವಾರಪತ್ರಿಕೆ ಶೃಂಗೇರಿ ದಸರಾ ಕುರಿತ ವಿಶೇಷ ಲೇಖನ ಮಾಡಲು ನನಗೆ ಸೂಚಿಸಿತು. ಪುಟ ಮಿತಿ ಇಲ್ಲದೆ ಎಷ್ಟು ಬೇಕಾದರೂ ಕಳಿಸಿ ಎಂಬ ಔದಾರ್ಯದ ಕೋರಿಕೆ ಅದು. ನಾನಾಗ ಜಗದ್ಗುರುಗಳ ಸಂದರ್ಶನ ಸಹ ಮಾಡಬೇಕಿತ್ತು. ಅವರಾಗ ಚಾತುರ್ಮಾಸ ವ್ರತದಲ್ಲಿ ಮುಂಬೈನಲ್ಲಿದ್ದರು. ಶೃಂಗೇರಿಯ ಒಂದಿಷ್ಟು ಜನ ಒಟ್ಟಾಗಿ ಸ್ವಾಮೀಜಿ ದರ್ಶನಕ್ಕೆ ಹೊರಟೆವು. ನನ್ನ ಪುಣ್ಯ ಗಿರಿಧರಶಾಸ್ತ್ರಿಗಳೂ ಜೊತೆಗಿದ್ದರು. ಉಡುಪಿಯಿಂದ ಮುಂಬೈ ತಲುಪುವ ತನಕವೂ ಶಾಸ್ತ್ರಿಗಳನ್ನು ನಾನು ಬಿಡಲಿಲ್ಲ. ದಸರಾದ ಸಣ್ಣ ಸೂಕ್ಷ್ಮ ವಿವರಗಳೂ ಅವರ ಜ್ಞಾಪಕದಲ್ಲಿತ್ತು. ಅದರ ಜೊತೆ ಗುರುಗಳ ಅನೇಕ ವಿಸ್ಮಯಕಾರಿ ಕುತೂಹಲ ಘಟನೆಗಳನ್ನು ಅವರು ತಿಳಿಸಿದರು. ನನ್ನ ಲೇಖನ ಭಾರೀ ಪ್ರಶಂಸೆಗೆ ಪಾತ್ರವಾಯಿತು. ಅದಕ್ಕೆ ಕಾರಣವಂತೂ ಶಾಸ್ತ್ರಿಗಳೇ ಆಗಿದ್ದರು.

ಮುಂದೆ ಬೇಕೆನಿಸಿದಾಗಲೆಲ್ಲಾ ನಾನು ಶಾಸ್ತ್ರಿಗಳನ್ನು ಬಳಸಿದ್ದೇನೆ. ಒಮ್ಮೆ ಶಿವರಾತ್ರಿ ಸಂದರ್ಭ. ರುದ್ರನ ಕುರಿತು ವಿಶೇಷ ಲೇಖನ ಮಾಡಲು ತರಂಗ ಸೂಚಿಸಿತು. ನಾನು ಶಾಸ್ತ್ರಿಗಳ ಬಳಿ ತೆರಳಿದೆ. ತಮ್ಮ ಬೃಹತ್ ಗ್ರಂಥಾಲಯದಿಂದ ನನಗೆ ಅನುಕೂಲಕ್ಕೆ ಬರುವ ಹತ್ತು ಪುಸ್ತಕ ತೆಗೆದು ಶಾಸ್ತ್ರಿಗಳು ಕೊಟ್ಟರು. ಅದನ್ನೆಲ್ಲಾ ಬಳಸಿ ನಾನು ಲೇಖನ ಸಿದ್ಧಪಡಿಸಿದೆ. ಅನುಮಾನ ಬಂದಲ್ಲಿ ಮತ್ತವರ ಮಾರ್ಗದರ್ಶನ ಪಡೆದೆ. ಅಂತೂ ಲೇಖನ ಮತ್ತೆ ಎಲ್ಲರ ಮೆಚ್ಚುಗೆಗೆ ಪಾತ್ರವಾಯಿತು. ನನ್ನ ಅಗಾಧ ಜ್ಞಾನ ಮತ್ತು ಅಧ್ಯಯನವನ್ನು ಎಲ್ಲರೂ ಹೊಗಳುವವರೇ. ನಾನು ಶಾಸ್ತ್ರಿಗಳಿಗೆ ಈ ಸಂಗತಿ ಹೇಳಿ ನಾನು ಎಲ್ಲೆಲ್ಲಿಂದ ಕದ್ದಿರುವೆ ಎನ್ನುವುದು ನಿಮಗೊಬ್ಬರಿಗೆ ಗೊತ್ತು ಎಂದೆ. "ಅರೆ ಹಾಗೇಕೆ ಹೇಳುತ್ತೀರಿ? ಒಂದು ಗ್ರಂಥದಿಂದ ಎತ್ತಿದರೆ ಅದು ಕೃತಿ ಚೌರ್ಯ. ಹಲವು ಗ್ರಂಥದಿಂದ ಆರಿಸಿಕೊಂಡರೆ ಅದು ಅಧ್ಯಯನ" ಎಂದು ಶಾಸ್ತ್ರಿಗಳು ಸಾಂತ್ವನ ಹೇಳಿದರು.

ಮತ್ತೊಮ್ಮೆ ಶೃಂಗೇರಿಗೆ ವಾಖ್ಯಾರ್ಥ ಸಭೆ ಕುರಿತು ನಾನು ಲೇಖನ ಮಾಡಬೇಕಿತ್ತು. ನೋಡಿಯೇ ಬಿಡುವ ಎಂದು ಅಂತಹ ಸಭೆಗೆ ಹೋಗಿ ಕುಳಿತೆ. ಅಲ್ಲೇನು ನಡೆಯತ್ತಿದೆ ಎಂದು ನನಗೆ ಕಿಂಚಿತ್ತೂ ಅರ್ಥವಾಗಲಿಲ್ಲ. ಮತ್ತೆ ನಾನು ಶಾಸ್ತ್ರಿಗಳ ಬಳಿ ಹೋಗಿ ನನ್ನ ಅವಸ್ಥೆ ಹೇಳಿದೆ. "ಛೇ ಸಂಸ್ಕೃತ ಡಾಕ್ಟರೇಟ್ ಮಾಡಿದವರಿಗೂ ಅಲ್ಲಿನ ಚರ್ಚೆ ಗೊತ್ತಾಗುವುದಿಲ್ಲ. ನೀವು ಬೇಸರಿಸಬೇಡಿ" ಎಂದು ಸಂತೈಸಿದ ಶಾಸ್ತ್ರಿಗಳು ನನಗೆ ಬೇಕಾದ ಪೂರ್ತಿ ಮಾಹಿತಿ ಒದಗಿಸಿದರು. ಮತ್ತೆ ಆ ಲೇಖನ ನನಗೆ ಹೆಸರು ತಂದಿತು.

ಶಾಸ್ತ್ರಿಗಳನ್ನು ಹಲವು ಬಾರಿ ನಾನು ಹೀಗೇ ಬಳಸಿದ್ದೇನೆ. ಇದೊಂದು ಡ್ರಾಫ್ಟ್ ಇಂಗ್ಲೀಷ್‌ನಲ್ಲಿ ಬೇಕು, ನೋಡಿ ರಾಜ್ಯಪಾಲರಿಗೆ ಒಂದು ಮನವಿ ಸಿದ್ಧವಾಗಬೇಕು, ಇಂತದೊಂದು ಲೇಖನಕ್ಕೆ ಮಾಹಿತಿ ಬೇಕು, ಹೀಗೆ ಕೇಳಿದಾಗಲೆಲ್ಲಾ ನಾನು ಕೇಳಿದ್ದೇ ಉಪಕಾರ ಎಂಬಂತೆ ಶಾಸ್ತ್ರಿಗಳು ನನ್ನ ಕೆಲಸ ಮಾಡಿ ಕೊಟ್ಟಿದ್ದಾರೆ. ಅವರನ್ನು ದುಡಿಸಿಕೊಳ್ಳುವವ ನಾನು ಮಾತ್ರವಲ್ಲ! ನನ್ನಂತವರಿಂದಾಗಿ ಅವರಿಗೆ ಸ್ವಂತದ ಕೆಲಸಕ್ಕೂ ಬಿಡುವಿರದ ಸ್ಥಿತಿ ಇದೆ. ಶಾಸ್ತ್ರಿಗಳ ಬಳಿ ನಾಲ್ಕು ಮಾತನಾಡಿ ಬರುವ ಎಂದು ಹೋದರೆ ಅದಕ್ಕೆ ಸಮಯ ಸಿಗುವುದೇ ಕಷ್ಟ. ಇಲ್ಲಿ ಯಾರಾದ್ರೂ ಬಂದಿರ್ತಾರೆ, ಇಲ್ಲ ಯಾರದ್ದಾದರೂ ಫೋನ್ ಬರುತ್ತದೆ. ಹೀಗೆ ಸಾರ್ವಜನಿಕರಿಗೆ ಸಮರ್ಪಿತವಾದ ಮತ್ತೊಬ್ಬರನ್ನು ನಾನು ನೋಡಿಲ್ಲ.

ಶಾಸ್ತ್ರಿಗಳ ಅನೇಕ ಉಪನ್ಯಾಸ ನಾನು ಕೇಳಿದ್ದೇನೆ. ಸ್ವತಃ ನಂಬಿ ಆಚರಿಸದೇ ಅವರೇನೂ ಹೇಳುವುದಿಲ್ಲ. ಹಾಗೆಂದೇ ಆ ಮಾತಿಗೆ ಶಕ್ತಿ ಇದೆ. ಒಮ್ಮೆ ಉಪಾಕರ್ಮದಲ್ಲಿ ಅವರ ಮಾತು ಕೇಳಿದ ನಾನು ಮತ್ತೆಂದೂ ಸಂಧ್ಯಾವಂದನೆ ತಪ್ಪಿಸುವ ಧೈರ್ಯ ಮಾಡಲಿಲ್ಲ. ಇನ್ನೊಮ್ಮೆ ಮೈಸೂರಿನ ನಾಗರಾಜರಾವ್‌ರನ್ನು ಅಭಿನಂದಿಸಲು ಶಾಸ್ತ್ರಿಗಳನ್ನೇ ಕರೆಸಿದ್ದೆವು. ಅಂದು ಅವರು ಅಭಿನಂದಿಸಿದ ರೀತಿ ಮತ್ತೆಲ್ಲೂ ಕೇಳಸಿಗದು. ನುಡಿಗಳು ಪ್ರಾಮಾಣಿಕವಾಗಿ ಹೃದಯದಿಂದ ಬಂದರೆ ಅದಕ್ಕಿರುವ ಶಕ್ತಿಯೇ ಬೇರೆ.

ಮಾಜೀ ರಾಷ್ಟ್ರಪತಿ ಅಬ್ದುಲ್ ಕಲಾಂ ಶೃಂಗೇರಿಗೆ ಬಂದಾಗ ಅವರ ಸಭಾಕಾರ್ಯಕ್ರಮದ ಸ್ವಾಗತ, ನಿರೂಪಣೆ, ವಂದನೆ, ಪ್ರಸ್ತಾವನೆ ಎಲ್ಲವನ್ನೂ ಇಂಗ್ಲೀಷಿನಲ್ಲಿ ಸಿದ್ಧಪಡಿಸಿಕೊಟ್ಟಿದ್ದು ಶಾಸ್ತ್ರಿಗಳು. ಅದನ್ನು ಬಳಸಿ ವೇದಿಕೆಯಲ್ಲಿ ಮಿಂಚಿದ್ದು ಮಾತ್ರ ನಾವು. ಯಾರಾದರೂ ಮಹಾತ್ಮರ ಸನ್ನಿಧಿಯಲ್ಲಿರುವಾಗ ನಮ್ಮ ಹೃದಯ ಆನಂದದ ಅನುಭವ ಪಡೆಯುತ್ತಿರುತ್ತದೆ. ಶಾಸ್ತ್ರಿಗಳ ಜೊತೆಗಿರುವಾಗ ನನಗಂತೂ ಇಂತಹ ಆನಂದ ದೊರೆತಿದೆ. ಅವರ ಮನೆಗೆ ಹೋದಾಗಲೆಲ್ಲಾ "ಬಂದ್ಯೇನಪ್ಪಾ ಬಾಳಾ ಅಪರೂಪ" ಎಂದು ಅವರ ಹೆತ್ತಮ್ಮ ದೊಡ್ಡ ಲೋಟದಲ್ಲಿ ಕಷಾಯ ಮಾಡಿ ಉಪಚರಿಸುತ್ತಿದ್ದರು. ಅವರ ತಾಯಿಯನ್ನು ನೋಡಿದಾಗಲೆಲ್ಲಾ ನಾನಂದುಕೊಳ್ಳುವುದಿತ್ತು. ಎಂತಹಾ ಪುಣ್ಯಾತ್ಮರು ಈಕೆ. ಎಂತಹಾ ಮಗನಿಗೆ ಜನ್ಮನೀಡಿದ್ದಾರೆ ಎಂದು. ಮತ್ತೆ ಈ ಅಮ್ಮ ಬದುಕಿರುವವರೆಗೆ ಈ ಶಾಸ್ತ್ರಿಗಳು ಶೃಂಗೇರಿಯಲ್ಲಿದ್ದಾರು. ನಂತರ ಎಲ್ಲವನ್ನು ತ್ಯಜಿಸಿ ಹಿಮಾಲಯಕ್ಕೆ ಹೋದಾರು ಎಂದು ನನಗನಿಸುತ್ತಿತ್ತು. ಆದರೆ ಪುಣ್ಯ ಹಾಗಾಗಿಲ್ಲ. ಜಗನ್ಮಾತೆ ಶಾರದೆ ಶಾಸ್ತ್ರಿಗಳನ್ನು ಶೃಂಗೇರಿಯಿಂದ ಹೊರಗೆ ಕಳಿಸಿಲ್ಲ. ಆ ತಾಯಿಗೆ ಗೊತ್ತು. ಯಾರು ಎಲ್ಲಿರಬೇಕು ಎಂದು. ನಮ್ಮಂಥ ಅನೇಕರಿಗೆ ಆಸರೆಯಾಗಿ ಸಾತ್ವಿಕತೆಯ ಶಕ್ತಿಯಾಗಿ ಒಳ್ಳೆತನದ ಸ್ಫೂರ್ತಿಯಾಗಿ ಅವರಿಲ್ಲೇ ಇರಲಿ.

◆

ಸಹೃದಯಿ ಶಾಸ್ತ್ರಿಗಳು–ಶ್ರೀನಾಥಶಾಸ್ತ್ರಿಗಳು ಗಿರಿಧರಶಾಸ್ತ್ರಿಗಳು

– ಉಷಾ ರಾಮಚಂದ್ರಸ್ವಾಮಿ, ಶೃಂಗೇರಿ
ಗೃಹಿಣಿ ೦೮೨೬೫–೨೫೦೫೨೨

ಹಳ್ಳಿಯ ಶಾಲೆಗಳಲ್ಲಿ ಕನ್ನಡ ಮಾಧ್ಯಮದಲ್ಲಿ ಓದಿ, ಎಸ್‌ಎಸ್‌ಎಲ್‌ಸಿ ಪಾಸಾದ ಮೇಲೆ ಶೃಂಗೇರಿಯ ಶ್ರೀ ಜೆ.ಸಿ.ಬಿ.ಎಂ. ಕಾಲೇಜಿನಲ್ಲಿ ಪಿಯುಸಿಗೆ ಸೇರಿಕೊಂಡೆ. ಕಾಲೇಜು ಎಂದರೆ ಏನೋ ಭಯ. ಎಲ್ಲರೂ ಇಂಗ್ಲಿಷ್ ಮಾಧ್ಯಮದಲ್ಲೇ ಪಾಠಮಾಡುವಾಗ ಇನ್ನೂ ಭಯ ಜಾಸ್ತಿಯಾಗಿ ಯಾವುದೋ ಅಪರಿಚಿತ ವಾತಾವರಣದಲ್ಲಿ ಸಿಕ್ಕಿಹಾಕಿಕೊಂಡಂತೆ ಆಗಿತ್ತು. ಪಠ್ಯಪುಸ್ತಕಗಳನ್ನು ಓದುವುದನ್ನು ಬಿಟ್ಟರೆ ಬೇರೆ ಚಟುವಟಿಕೆಗಳ ಬಗ್ಗೆ ಗೊತ್ತೇ ಇರಲಿಲ್ಲ. ಅಂತಹ ಪರಿಸ್ಥಿತಿ ಹೆಚ್ಚಿನ ವಿದ್ಯಾರ್ಥಿಗಳೆಲ್ಲರದೂ. ಹೀಗಿರುವಾಗ ಬಿಡುವಿನ ಸಮಯದಲ್ಲಿ ಬಂದು, ಸ್ಪರ್ಧಾತ್ಮಕ ಪರೀಕ್ಷೆಗಳು, ಬೇರೆ ಬೇರೆ ಕಾಲೇಜುಗಳಲ್ಲಿ ನಡೆಯುವ ವಿವಿಧ ರೀತಿಯ ಸ್ಪರ್ಧೆಗಳು, ಇವುಗಳಲ್ಲಿ ಭಾಗವಹಿಸಲು ಹೇಗೆ ತಯಾರಿ ಮಾಡಬೇಕು ಎಂದು ಮಾಹಿತಿ ನೀಡುತ್ತಿದ್ದವರು ಶ್ರೀನಾಥಶಾಸ್ತ್ರಿಗಳು. ಅವರು ಅಚ್ಚಕನ್ನಡದಲ್ಲಿ ಮಾತನಾಡುತ್ತಿದ್ದುದರಿಂದ, ಆ ಇಂಗ್ಲಿಷ್‌ಮಯವಾದ ಕಾಲೇಜಿನಲ್ಲಿ ಆತ್ಮೀಯವಾದ ವಾತಾವರಣ ಸೃಷ್ಟಿಯಾಗುತ್ತಿತ್ತು. ಉತ್ಸಾಹದಿಂದ ಸೆಮಿನಾರುಗಳನ್ನು ಏರ್ಪಡಿಸಿ, ಅವುಗಳಲ್ಲಿ ಭಾಗವಹಿಸುವಂತೆ ವಿದ್ಯಾರ್ಥಿಗಳನ್ನು ಹುರಿದುಂಬಿಸುವುದು, ಭಾವಗೀತೆ ಹಾಡುವವರನ್ನು ಮನೆಗೆ ಆಹ್ವಾನಿಸಿ ತಮ್ಮ ಶ್ರೀಮತಿಯವರಿಂದ ಹೊಸತನ್ನು ಕಲಿಯಲು ಪ್ರೋತ್ಸಾಹಿಸುವುದು ಶಾಸ್ತ್ರಿಗಳಿಗೆ ಇಷ್ಟ.

ಅಂದಿನ ದಿನಗಳಲ್ಲಿ(೧೯೭೦) ಶೃಂಗೇರಿಯ ಜನಸಾಮಾನ್ಯರ ನಡುವೆ ಸಾಹಿತ್ಯದ ವಾತಾವರಣ ಅಷ್ಟಾಗಿ ಇರಲಿಲ್ಲ. ತಮ್ಮ ಪೂಜ್ಯ ತಂದೆಯವರ ಮಾರ್ಗದರ್ಶನದಲ್ಲಿ ಶಾಸ್ತ್ರಿಗಳು 'ಸಹೃದಯ ಗೋಷ್ಠಿ' ಎಂಬ ವೇದಿಕೆಯನ್ನು ಹುಟ್ಟುಹಾಕಿದರು. ವಾರಕ್ಕೊಮ್ಮೆ ಊರಿನವರಿಂದ ಅಥವಾ ಪರವೂರವರಿಂದ ಭಾಷಣವನ್ನೋ ಗಮಕ ಅಥವಾ ಸಂಗೀತವನ್ನೋ ಏರ್ಪಡಿಸುತ್ತಿದ್ದರು. ಹೀಗೆ ಸಣ್ಣದಾಗಿ ಆರಂಭವಾದರೂ ಅದೊಂದು ವಿಶೇಷವಾಗಿತ್ತು.

ತಮ್ಮ ವಿದ್ಯಾರ್ಥಿಗಳನ್ನು ಕಂಡರೆ ಶಾಸ್ತ್ರಿಗಳಿಗೆ ತುಂಬ ವಾತ್ಸಲ್ಯ. ವರ್ಷದ ಕೊನೆಯಲ್ಲಿ ಮನೆಗೆ ಕರೆದು ಅವರಿಗೆಲ್ಲ ಉಪಾಹಾರ ಕೊಟ್ಟು, ಪರೀಕ್ಷೆಗಳಲ್ಲಿ ಒಳ್ಳೆಯ ಅಂಕಗಳನ್ನು ಗಳಿಸಿರೆಂದು ಹರಸಿ ಕಳಿಸುತ್ತಿದ್ದರು. ವಿದ್ಯಾರ್ಥಿಗಳಿಗೆ ತಮ್ಮಿಂದ ಆಗುವ ಎಲ್ಲಾ

ಸಹಾಯಗಳನ್ನೂ ಮಾಡುತ್ತಿದ್ದರು. ಸಾಮಾನ್ಯವಾಗಿ ಪರೀಕ್ಷೆ ನಡೆಯುವಾಗ ಕೊನೆಯ ಐದು ನಿಮಿಷದ ಗಂಟೆ ಹೊಡೆದಾಗ ವಿದ್ಯಾರ್ಥಿಗಳು ಬರೆಯುವುದನ್ನು ನಿಲ್ಲಿಸಿ ತಾವು ತೆಗೆದುಕೊಂಡ ಅಡಿಷನಲ್ ಶೀಟ್‌ಗಳನ್ನು ಸೇರಿಸಿ ಉತ್ತರ ಪತ್ರಿಕೆಗಳನ್ನು ಕಟ್ಟಬೇಕು. ಸಮಯ ಉಳಿದರೆ ಉತ್ತರ ಬರೆಯುವುದನ್ನು ಮುಂದುವರೆಸಬಹುದು. ಆದರೆ ಶ್ರೀನಾಥಶಾಸ್ತ್ರಿಗಳು ಮೇಲ್ವಿಚಾರಕರಾಗಿ ಬಂದರೆ, ತಾವೇ ಆ ರೀತಿ ಕೊನೆ ಗಳಿಗೆಯಲ್ಲಿ ಉತ್ತರ ಬರೆಯುತ್ತಿರುವವರ ಬಳಿ ಹೋಗಿ ನೀವು ಬರೆಯುತ್ತಿರಿ, ನಾನು ಒಂದು ಕಡೆಯಿಂದ ಪೇಪರ್ ಜೋಡಿಸಿ ಕಟ್ಟುತ್ತೇನೆಂದು ಹೇಳಿ ಸಹಾಯ ಮಾಡುತ್ತಿದ್ದರು! ನಮಗೆಲ್ಲ ಅದು ವಿಶೇಷವಾಗಿ ಸಹಾಯ ಆಗುತ್ತಿತ್ತು.

ವಿಜ್ಞಾನವನ್ನು ಕನ್ನಡದಲ್ಲಿ ಬೆಳೆಸಬೇಕೆಂದು ಆಗಿನಿಂದಲೇ ಅವರು ಪ್ರಯತ್ನಪಡುತ್ತಿದ್ದರು. ಈಗಲೂ ಅಂದಿನ ಉತ್ಸಾಹವನ್ನು ಉಳಿಸಿಕೊಂಡು ಅಷ್ಟೇ ಶ್ರದ್ಧೆಯಿಂದ ಕನ್ನಡ ಗಣಕ ಪರಿಷತ್ತಿನ ಕೆಲಸ ಮಾಡುತ್ತಿರುವ ಅವರು ಇಂದಿನ ಪೀಳಿಗೆಗೆ ಮಾದರಿಯಾಗಿದ್ದಾರೆ.

* * *

'Even listening to someone with complete attention and open heart is a gift that will touch people's heart.' ಡಾ॥ ಗಿರಿಧರಶಾಸ್ತ್ರೀಗಳನ್ನು ನೋಡಿ, ಅವರ ಸ್ವಭಾವವನ್ನು ಬಲ್ಲವರಿಗೆ ಈ ಮಾತು ಶಾಸ್ತ್ರಿಗಳಿಗೆ ಅನ್ವಯವಾಗುತ್ತದೆಂದು ಅನ್ನಿಸಿಯೇ ಅನ್ನಿಸುತ್ತೆ. ಬೇರೆಯವರ ಮಾತನ್ನು ಗಮನವಿಟ್ಟು ಕೇಳಿ, ಅವರು ಅಪೇಕ್ಷೆಪಟ್ಟರೆ ಮಾತ್ರ ಶಾಸ್ತ್ರಿಗಳು ಪರಿಹಾರ ಹೇಳುತ್ತಾರೆ. ಅನವಶ್ಯವಾಗಿ ಅವರು ಯಾರನ್ನೂ ಟೀಕಿಸುವವರಲ್ಲ; ಎಷ್ಟೇ ಆತ್ಮೀಯರಾದರೂ, ವೈಯಕ್ತಿಕ ವಿಚಾರವನ್ನು ಕೆದಕುವವರಲ್ಲ. ಇಂತಹ ಸೌಜನ್ಯದ ನಮ್ರ ನಡತೆ ನಮ್ಮ ಶಾಸ್ತ್ರಿಗಳದ್ದು.

ನಾಲ್ಕು ದಶಕಗಳ ಹಿಂದೆ ಜೆ.ಸಿ.ಬಿ.ಎಂ. ಕಾಲೇಜಿನಲ್ಲಿ ನಾನು ಓದುತ್ತಿದ್ದೆ. ಒಂದು ಸಂಸ್ಕೃತ ಪ್ರಬಂಧ ಸ್ಪರ್ಧೆಯಲ್ಲಿ ಶಾಸ್ತ್ರಿಗಳಿಗೆ ಪ್ರಥಮ ಬಹುಮಾನ ಬಂದಿತ್ತು; ಅಭಿನಂದಿಸುವಾಗ ಅವರ ಪರಿಚಯ ನನಗೆ ಆಯಿತು. ಡಿಗ್ರಿ ಮುಗಿಸಿದ ಮೇಲೆ ಅವರು ಸಂಸ್ಕೃತ ಎಂ.ಎ. ಮಾಡಿದರು. ಅನಂತರ ಶ್ರೀಮಠದಲ್ಲಿ ಕೆಲವುಕಾಲ ಇದ್ದರು. ಆಮೇಲೆ ಒಂದು ಪ್ರತಿಷ್ಠಿತ ಕಂಪನಿಯ CEO ಆಗಿ ದೆಹಲಿಗೆ ಹೋದರು. ಆಗಾಗ ಅವರು ಶೃಂಗೇರಿಗೆ ಬಂದಾಗ ಕ್ಷೇಮಸಮಾಚಾರ ಮಾತನಾಡಿಕೊಳ್ಳುತ್ತಿದ್ದೆವು. ಅವರು CEO ಕೆಲಸವನ್ನು ಬಿಟ್ಟುಬಂದಮೇಲೆ ಏಕೆ ಕೆಲಸ ಬಿಟ್ಟಿರೆಂದು ಕೇಳಿದ್ದೆ. 'ನನ್ನಿಷ್ಟ ಬಂದಷ್ಟು ಅಧ್ಯಯನ ಮಾಡಲು ಕಾಲಾವಕಾಶವಾಗುತ್ತಿರಲಿಲ್ಲ. ಅದಕ್ಕಾಗಿ ಬಿಟ್ಟೆ.' ಎಂದರು. ಅಧ್ಯಯನದ ಬಗ್ಗೆ ಅವರಿಗಿದ್ದ ಅಪರಿಮಿತ ಆಸಕ್ತಿ ನೋಡಿ ನನಗೆ ವಿಸ್ಮಯವಾಯ್ತು. ಪ್ರತಿಷ್ಠಿತ ಹುದ್ದೆಯಿಂದ ಸಮಾಜದಲ್ಲಿ ಸಿಗುವ ಗೌರವ, ಹಣ, ಅಂತಸ್ತು, ಐಹಿಕ ಸುಖ –

ಯಾವುದೂ ಅವರಿಗೆ ಅಧ್ಯಯನಕ್ಕಿಂತ ಹೆಚ್ಚೆಂದು ಅನಿಸಲಿಲ್ಲ. ಈ ಅಧ್ಯಯನಪ್ರಿಯತೆಯಿಂದಲೆ ಅವರು ಇಂಗ್ಲಿಷ್‌ನಲ್ಲಿ ಎಂ.ಎ. ಮತ್ತು ಪಿಎಚ್.ಡಿ ಮಾಡಲು ಸಾಧ್ಯವಾದುದು.

ಡಾಕ್ಟರೇಟ್‌ಗಾಗಿ ಅವರು ಬರೆದ ಮಹಾ ಪ್ರಬಂಧ – 'The Sclerosis and Suffering: A Study of selected Kannada Novels in English Translation'. ಈ ಅಧ್ಯಯನಕ್ಕಾಗಿ ಅವರು ಆರಿಸಿಕೊಂಡ ಒಂದೊಂದು ಕಾದಂಬರಿಯೂ ಕನ್ನಡ ಕಾದಂಬರಿ ಲೋಕದ ಮೇರು ಕೃತಿಗಳು. ಇವುಗಳಲ್ಲಿ ಚಿತ್ರಿತವಾದ ಮನಸ್ಸಿನ ಜಡ್ಡುಗಟ್ಟುವಿಕೆ ಮತ್ತು ನರಳಾಟವನ್ನು ಹುಡುಕುವುದೇ ಇಲ್ಲಿನ ಮುಖ್ಯ ವಿಷಯ. ಆದರೆ ಈ ಕೃತಿಯನ್ನು ಓದಿದಾಗ ನನಗೆ ಅನಿಸಿದ್ದು ಇಲ್ಲಿ ಇರುವುದು ಈ ಎಲ್ಲ ಕಾದಂಬರಿಗಳಲ್ಲಿನ ಪ್ರಕೃತಿ ವರ್ಣನೆಯ ವೈಭವ; ದುಷ್ಟತನ, ವಂಚನೆ, ಮೋಸ, ಕುಟಿಲತನಗಳ ನಡುವೆಯೂ ಬೆಳ್ಳಿಯ ರೇಖೆಯಂತೆ ಸೂಸುವ, ಸಾಂತ್ವನ ಕೊಡುವ ಮಾನವೀಯತೆ ಹಾಗೂ ದುಃಖ ದುಮ್ಮಾನಗಳಿದ್ದರೂ ಅಂತರಂಗದಲ್ಲಿ ಕರುಣೆಯ ಸೆಲೆಯೂ ಇವೆ ಎಂಬ ಭಾವಗಳ ಹುಡುಕಾಟವೇ. ಒಂದು ರೀತಿಯಲ್ಲಿ ಇದು ಶಾಸ್ತ್ರಿಗಳು ಸಮಾಜವನ್ನು ನೋಡುವ ದೃಷ್ಟಿಕೋನ – ಎಲ್ಲದರಲ್ಲೂ ಒಳ್ಳೆಯದನ್ನು ಕಾಣುವ ಸ್ವಭಾವ.

ಇದೇ ಭಾವವನ್ನು ಅವರು ಬೇರೆ ಸಂದರ್ಭಗಳಲ್ಲೂ ವ್ಯಕ್ತಪಡಿಸುವುದನ್ನು ನಾನು ಕಂಡಿದ್ದೇನೆ. ಚಾರ್ಲ್ಸ್ ಡಿಕನ್ಸ್‌ನ ಕಾದಂಬರಿಗಳು ನಮ್ಮಿಬ್ಬರಿಗೂ ಪ್ರಿಯ. ಆಲಿವರ್ ಟ್ವಿಸ್ಟ್ ಕಾದಂಬರಿಯ ಬಗ್ಗೆ ಮಾತನಾಡುತ್ತ ನಾನು ಡಿಕನ್ಸ್‌ನ ಹಾಸ್ಯ, ಬಡವರ ಮೇಲೆ ಸಿರಿವಂತರ ದಬ್ಬಾಳಿಕೆಯನ್ನು ಅತ್ಯಂತ ವ್ಯಂಗ್ಯವಾಗಿ ಹೇಳಿರುವ ರೀತಿಯ ಬಗ್ಗೆ ಹೇಳಿದೆ. ಅವರು ಹೌದೆನ್ನುತ್ತಲೇ ತಮಗೆ ಪ್ರಿಯವಾದ ಪ್ರಕೃತಿಯ ವೈಭವ, ಮನುಷ್ಯನ ಮೇಲೆ ಅದರ ಪರಿಣಾಮದ ಬಗ್ಗೆ ಹೇಳುತ್ತ ನೆನಪಿನ ಆಳದಿಂದ ಈ ಸಾಲುಗಳನ್ನು ಹೇಳಿದರು: 'The memories which peaceful country scenes call up are neither of this world nor of its thoughts...' ಅಷ್ಟಕ್ಕೇ ನಿಲ್ಲದೆ ಕಾಳಿದಾಸನ ಕೃತಿಯಲ್ಲಿ ಇದೇ ಭಾವವಿರುವ 'ರಮ್ಯಾಣಿ ವೀಕ್ಷ್ಯ ಮಧುರಾಂಶ್ಚ ನಿಶಮ್ಯ...' ಮೊದಲಾದ ಸಾಲುಗಳನ್ನು ಹೇಳಿದರು. ನಾನು ಇವೆರಡನ್ನೂ ಓದಿದ್ದರೂ ಈ ಭಾವವು ನನ್ನ ಗಮನ ಸೆಳೆದಿರಲಿಲ್ಲ. ಒಂದು ಸಾಹಿತ್ಯ ಕೃತಿ ಕಾದಂಬರಿಯೇ ಆಗಲಿ, ಕಾವ್ಯವೇ ಆಗಲಿ ಎಷ್ಟೆಲ್ಲ ರೀತಿಯಲ್ಲಿ ಗಮನಕೊಟ್ಟು ಓದಬೇಕೆಂದು ಅವರಿಂದ ನಾನು ತಿಳಿದುಕೊಂಡೆ. ಅವರ ಆಳವಾದ ಅಧ್ಯಯನಕ್ಕೆ ಇದು ಒಂದು ಉದಾಹರಣೆ.

ಶಾಸ್ತ್ರಿಗಳ ಆಸಕ್ತಿಯ ವ್ಯಾಪ್ತಿ ಬಹಳ ವಿಸ್ತಾರವಾದುದು: ಸಾಹಿತ್ಯ, ಸಂಗೀತ, ವಿಜ್ಞಾನ ಮತ್ತು ವೈದ್ಯಕೀಯ; ಇವೆಲ್ಲದರಲ್ಲೂ ಸಾಕಷ್ಟು ಪರಿಶ್ರಮ. ಪರಿಶ್ರಮ ಎನ್ನುವುದಕ್ಕಿಂತಲೂ

ಪರಿಣತಿ ಎನ್ನಬಹುದು. ಅವರ ವೃತ್ತಿಯೆ ಸಾಹಿತ್ಯವಾದುದರಿಂದ, ಅದರಲ್ಲಿ ತೊಡಗಲು ವಿಶೇಷ ಪರಿಶ್ರಮ ಬೇಕಾಗದು. ಆದರೆ ಹೋಮಿಯೋಪತಿಯನ್ನು ತುಂಬ ಆಸಕ್ತಿಯಿಂದ ಅಧ್ಯಯನ ಮಾಡಿದ್ದು ಅವರ ಪ್ರತಿಭೆಗೆ ಸಾಕ್ಷಿ. ಅವರ ಬಳಿಗೆ ಬರುವ ರೋಗಿಗಳ ಸಮಸ್ಯೆಯನ್ನು ತಾಳ್ಮೆಯಿಂದ ಕೇಳಿ ಸೂಕ್ತವಾದ ಔಷಧ ಕೊಡುತ್ತಾರೆ. ಮೊದಲ ಸಲ ಬಂದಾಗ ಹತ್ತು ರೂಪಾಯಿ ಕೊಟ್ಟರೆ ಸಾಕು, ಮತ್ತೆ ಯಾವಾಗ ಬಂದರೂ ಶುಲ್ಕವಿಲ್ಲದೆ ಔಷಧ ತೆಗೆದುಕೊಳ್ಳಬಹುದು. ದುಬಾರಿಯಾಗುತ್ತಿರುವ ಅಲೋಪತಿ ಚಿಕಿತ್ಸೆ ಪಡೆಯಲಾರದ ಬಡವರಿಗೆ ಇದರಿಂದ ಅನುಕೂಲವಾಗಿದೆ. ಶ್ರೀಮಂತರು ಸಾವಿರ ರೂಪಾಯಿ ನೋಟನ್ನು ಕೊಟ್ಟು ತೆಗೆದುಕೊಳ್ಳಿರೆಂದು ಬೇಡಿಕೊಂಡರೂ ಊಹು ಬೇಡ, ಹತ್ತು ರೂಪಾಯಿ ಕೊಡಿ ಸಾಕು. ಮುಂದೆ ಮಾತೇ ಇಲ್ಲ. ನನಗೆ ಇದೂ ಒಂದು ವಿಸ್ಮಯ.

ಓದಲೆಂದು ಬೇರೆ ಬೇರೆ ಊರುಗಳಿಂದ ಬಂದು ವಿವಿಧ ತರಗತಿಗಳಲ್ಲಿ ಅಭ್ಯಾಸ ಮಾಡುತ್ತಿರುವ ಮಕ್ಕಳು ಅವರ ಮನೆ ತುಂಬ ಇದ್ದಾರೆ. ಅವರಲ್ಲಿ ಸಿರಿವಂತರನ್ನಾದರೂ ತಮ್ಮ ಊಟ ವಸತಿ ಇತ್ಯಾದಿ ಖರ್ಚುಗಳನ್ನು ನಿರ್ವಹಿಸಲು ಕೇಳಬಹುದಿತ್ತು, ಕೇಳರು. ಹಣ ಕೊಟ್ಟವರ, ಕೊಡದವರ ಮಧ್ಯೆ ಮೇಲರಿಮೆ ಕೀಳರಿಮೆ ಬಾರದಿರಲಿ ಎಂಬುದು ಕಾರಣವಿರಬೇಕು. ಇದೇ ಸಂದರ್ಭದಲ್ಲಿ ಅವರ ಮನೆಯಲ್ಲಿ ಆಶ್ರಯ ಪಡೆದಿರುವ ಮಕ್ಕಳ ಬಗ್ಗೆಯೂ ಎರಡು ಮಾತನ್ನು ಹೇಳಲೇ ಬೇಕು. ಶಾಸ್ತ್ರಿಗಳ ನಾನಾ ಕಾರ್ಯಗಳಲ್ಲಿ ಸಹಾಯ ಮಾಡುತ್ತಾ, ಮನೆಯಲ್ಲಿ ಚಿಕಿತ್ಸಾಲಯದಲ್ಲಿ ಉತ್ಸಾಹಪೂರ್ಣ ವಾತಾವರಣವನ್ನು ಉಂಟುಮಾಡುವುದರಲ್ಲಿ ಈ ಮಕ್ಕಳ ಸಹಯೋಗವಿದೆ. ಇವರನ್ನೆಲ್ಲ ನೋಡುತ್ತಿದ್ದರೆ ಬೇರೆ ಮನೆಯಿಂದ ಬಂದವರಂತೆ ಅನ್ನಿಸುವುದೇ ಇಲ್ಲ. ಹಳೆಯ ಕಾಲದ ಕೂಡು ಕುಟುಂಬದವರನ್ನು ನೆನಪಿಸುವ ಈ ಮಕ್ಕಳನ್ನು ನೋಡುವುದೇ ಒಂದು ಸೊಗಸು. ಓದು ಮುಗಿದವರು ಹೋಗುತ್ತಿರುತ್ತಾರೆ, ಹೊಸಬರು ಬರುತ್ತಿರುತ್ತಾರೆ; ಹಳಬರಿಂದ ಈ ಮನೆಯ ರೀತಿಯನ್ನು ಕಲಿಯುತ್ತಾರೆ.

ಶಾಸ್ತ್ರಿಗಳ ಆಸಕ್ತಿಗಳು ಹಲವಾರು. ಆದ್ದರಿಂದ ಅವಕ್ಕನುಗುಣವಾಗಿ ಅವರ ಮನೆಗೆ ಬರುವವರೂ ವಿವಿಧ ರೀತಿಯವರು. ಬಡವರಿರಲಿ, ಶ್ರೀಮಂತರಿರಲಿ ಅವರ ದೃಷ್ಟಿಯಲ್ಲಿ ಎಲ್ಲರೂ ಸಮಾನ. ವ್ಯತ್ಯಾಸವಿಷ್ಟೆ - ಹಿರಿಯರಿಗೆ ಗೌರವ, ಕಿರಿಯರಿಗೆ ವಾತ್ಸಲ್ಯ, ಸಮಾನ ವಯಸ್ಕರಿಗೆ ಸ್ನೇಹ.

ಶೃಂಗೇರಿಯ ಸಾಮಾಜಿಕ ಜೀವನದಲ್ಲಿ ಅವರ ಕುಟುಂಬದವರಿಂದ ಬಹಳ ಬದಲಾವಣೆಗಳು ಆಗಿವೆಯೆಂದು ನನ್ನ ಅನಿಸಿಕೆ. ಗೀತೆ, ಶ್ಲೋಕಪಾಠ, ವೇದಾಧ್ಯಯನ ಇತ್ಯಾದಿ ಕಲಿಯುವವರು, ಇಂಗ್ಲಿಷ್ ಎಂ.ಎ. ಮಾಡುವವರು ಅವರಿಂದ ಉಪಕೃತರು. ಕಲಿಸುವಿಕೆಯ ವಿಚಾರ ಬಂದಾಗ ಶಾಸ್ತ್ರಿಗಳಿಗೆ ತಾನು ಕಲಿಸುವವನು ಎಂಬ ಭಾವ ಒಂದು ಸಲವೂ ಬಂದಿಲ್ಲವೇನೋ. ಹೋಮಿಯೋಪತಿ ಆಗಲಿ, ಸಂಸ್ಕೃತ ಶ್ಲೋಕವಾಗಲಿ,

ವೇದಪಾಠವಾಗಲಿ, ಗೀತಾಪಾಠವಾಗಲಿ 'ಕಲಿಸುತ್ತೇನೆ' ಎನ್ನುವುದರ ಬದಲು, 'ಒಟ್ಟಿಗೆ ಕುಳಿತುಕೊಂಡು ಕಲಿಯೋಣ' ಎನ್ನುತ್ತಾರೆ. ಹಿರಿಯರೊಬ್ಬರು 'ನಾನೂ ಭಗವದ್ಗೀತೆ ಪಾಠಕ್ಕೆ ಬರುತ್ತೇನೆ' ಎಂದಾಗ, ಅಗತ್ಯವಾಗಿ ಬನ್ನಿ. ನಾನು ತಿಳಿದಿರುವುದು ಸರಿಯಾಗಿದೆಯೆ ಎಂದು ವಿಮರ್ಶಿಸಿಕೊಳ್ಳಲು ಸಹಾಯವಾಗುತ್ತೆ. ಸುರೇಶ್ವರಾಚಾರ್ಯರು ಒಂದು ಕಡೆ ಹೇಳುತ್ತಾರೆ – 'ನ ಖ್ಯಾತಿಲಾಭ ಪೂಜಾರ್ಥಂ ಗ್ರಂಥೋಽಯಂ ಪ್ರತ್ಯತೇ ಮಯಾ । ಸ್ವಬೋಧ ಪರಿಶುದ್ಧ್ಯರ್ಥಂ ಬ್ರಹ್ಮವಿನ್ನಿ ಕರಿಷ್ಯಾಮಿ' (ನಾನು ಪ್ರಸಿದ್ಧಿ ಪಡೆಯಲು ಈ ಗ್ರಂಥ ಬರೆಯುತ್ತಿಲ್ಲ. ನನ್ನ ಅರಿವನ್ನು ಪರಿಶುದ್ಧಗೊಳಿಸಲು ಬರೆದಿದ್ದೇನೆ) ಎಂದು. ನೀವೂ ಸಂಸ್ಕೃತ ಬಲ್ಲವರಾದ್ದರಿಂದ ನನ್ನ ತಿಳುವಳಿಕೆಯೂ ಹೆಚ್ಚುತ್ತದೆ." ಎಂದರು. ವಿದ್ಯಾದದಾತಿ ವಿನಯಂ ಎಂಬುದನ್ನು ನಾನು ನನ್ನ ಕಣ್ಣೆದುರಿಗೇ ಕಾಣುತ್ತಿದ್ದೇನೆ ಅನಿಸಿತು.

ಬಹಳ ಪ್ರಯತ್ನಪಟ್ಟು ವಿವಿಧ ಕ್ಷೇತ್ರಗಳಲ್ಲಿ ಸಾಧನೆ ಮಾಡಿದವರನ್ನು ನಾವು ನೋಡಬಹುದು. ಆದರೆ ಈ ಸಾಧನೆಗಳಿಂದ ಅಧ್ಯಯನದಿಂದ ವ್ಯಕ್ತಿತ್ವವನ್ನು ಉನ್ನತಿಗೇರಿಸಿಕೊಂಡರು, ನುಡಿದಂತೆ ನಡೆಯುವವರು ಬಹಳ ಅಪರೂಪ. ಆ ಅಪರೂಪರಲ್ಲಿ ಇಂದು ಇರುವ ನಿಜರೂಪ ಡಾ। ಗಿರಿಧರಸ್ತ್ರಿಗಳು.

ಶೃಂಗಗಿರಿಯ ಗಿರಿಶಿಖರ ಗಿರಿಧರಶಾಸ್ತ್ರೀ

– ಡಾ। ಹೆಚ್.ಸಿ. ವೀರಪ್ಪಗೌಡ, ಶೃಂಗೇರಿ
ಪ್ರಾಂಶುಪಾಲರು, ಶ್ರೀ ಜೆ.ಸಿ.ಬಿ.ಎಂ. ಕಾಲೇಜು
೯೪೪೮೭೩೪೪೬೩೦, sringerivg@gmail.com

ಪ್ರಶಾಂತ, ಸುಂದರ, ಶ್ರೀಮದ್ಗಾಂಭೀರ್ಯದ ಅದ್ಭುತ ಜ್ಞಾನ ಭಂಡಾರವಾಗಿರುವ ಡಾ. ಚಿ. ವಿ. ಗಿರಿಧರಶಾಸ್ತ್ರಿಯವರ ಬಗ್ಗೆ ಬರೆಯಲು ತುಂಬಾ ಸಂತೋಷವಾಗುತ್ತದೆ.

ಸಾಂಪ್ರದಾಯಿಕ ಸಜ್ಜನಿಕೆಯ, ಸುಸಂಸ್ಕೃತ, ಧಾರ್ಮಿಕ ಹಿನ್ನಲೆಯ ಸಹೃದಯಿ ಕುಟುಂಬದಲ್ಲಿ ಜನಿಸಿದ ಸದ್ಗುಣಿಗಳು. ಅವರ ಸಾಧನೆ, ಸಿದ್ಧಿಗಳು, ಆದರ್ಶಗಳು ಅವರ ಮುಂದಿನವರಿಗೆ ಅನುಕರಣೀಯ ಮಾರ್ಗದರ್ಶಕರಾಗಿ, ಹಿತೈಷಿಗಳಾಗಿ, ನನ್ನ ಜೀವನದಲ್ಲಿ ಪ್ರಭಾವ ಬೀರಿದ ವ್ಯಕ್ತಿಗಳಲ್ಲಿ, ಶಾಸ್ತ್ರೀಜಿಯವರು ಅಗ್ರಮಾನ್ಯರು. ತಂದೆ ಶ್ರೀ ವಿಶ್ವನಾಥಶಾಸ್ತ್ರಿಗಳು ಮತ್ತು ತಾಯಿ ಲಲಿತಮ್ಮ ದಂಪತಿಗಳ ನಾಲ್ಕನೇ ಮಗುವಾಗಿ ೨೮-೧೦-೧೯೫೪ ರಲ್ಲಿ ಶಾಸ್ತ್ರೀಜಿಯವರು ಜನಿಸಿದರು. ಮಹಾಲಕ್ಷ್ಮೀ, ಶ್ರೀನಾಥಶಾಸ್ತ್ರಿ, ಉಷಾ, ಶ್ರೀಮತಿ, ರಮಾ ಗಿರಿಧರಶಾಸ್ತ್ರಿಯವರ ಸಹೋದರ – ಸಹೋದರಿಯರು. ಬಾಲ್ಯದಲ್ಲೇ ವೇದಾಭ್ಯಾಸವನ್ನು, ತಂದೆಯಿಂದ ಭಗವದ್ಗೀತೆ ಮತ್ತು ಸಂಸ್ಕೃತ ಕಲಿತರು. ತಂದೆ ಪ್ರೌಢಶಾಲೆಯಲ್ಲಿ ಕನ್ನಡ, ಸಂಸ್ಕೃತ ಅಧ್ಯಾಪಕರಾಗಿ ಸೇವೆ ಸಲ್ಲಿಸುತ್ತಿದ್ದರು. ತಾಯಿ ಗೃಹಣಿಯಾಗಿ ಮನೆಯ ಕೆಲಸಗಳನ್ನು ಸಮರ್ಥವಾಗಿ ನಿರ್ವಹಿಸುತ್ತಿದ್ದರು. ಗಿರಿಧರಶಾಸ್ತ್ರಿಯವರು ಸಾಹಿತ್ಯಕ ಅಭಿರುಚಿಯನ್ನು ಹೊಂದಿದ್ದು, ಶೃಂಗೇರಿಯ ಗೋಪಾಲಕೃಷ್ಣ ದೇವಸ್ಥಾನದಲ್ಲಿ ಸಹೃದಯ ಗೋಷ್ಠಿಯನ್ನು ಹಮ್ಮಿಕೊಂಡು ಸಾಹಿತಿಗಳು ಮತ್ತು ಸ್ನೇಹಿತರುಗಳೊಡನೆ ಚರ್ಚಿಸುತ್ತಿದ್ದರು. ತಂದೆ ವಿಶ್ವನಾಥಶಾಸ್ತ್ರಿಗಳು ನಡೆಸುತ್ತಿದ್ದ ಉಚಿತ ಮನೆಪಾಠ, ಸಂಸ್ಕೃತ ಭಗವದ್ಗೀತೆ ಪಾಠಗಳನ್ನು ಗಿರಿಧರಶಾಸ್ತ್ರಿಗಳು ಈಗಲೂ ನಡೆಸಿಕೊಂಡು ಬರುತ್ತಿದ್ದಾರೆ. ಮನೆಯಲ್ಲಿ ಹತ್ತು ಹಲವು ವಿದ್ಯಾರ್ಥಿಗಳಿಗೆ ಶಾಲಾ ಶುಲ್ಕ ನೀಡುವುದರೊಂದಿಗೆ ವಸತಿ, ಭೋಜನಾ ವ್ಯವಸ್ಥೆಯನ್ನು ಮಾಡಿ ವಿದ್ಯಾರ್ಥಿಗಳ ವಿದ್ಯಾಭ್ಯಾಸಕ್ಕೆ ತಮ್ಮ ಕೊಡುಗೆಯನ್ನು ನೀಡುತ್ತಿದ್ದಾರೆ. ಪ್ರತಿ ವರ್ಷ ಸುಮಾರು ೧೦-೧೨ ವಿದ್ಯಾರ್ಥಿ-ವಿದ್ಯಾರ್ಥಿನಿಯರನ್ನು ಓದಿಸುವುದು, ಅವರ ವಸತಿ ಭೋಜನ ನೋಡಿಕೊಳ್ಳುವುದು ಸಾಮಾನ್ಯ ವಿಷಯವೇನಲ್ಲ, ವಿದ್ಯೆಯ ಜೊತೆಗೆ ಸಂಸ್ಕಾರವನ್ನು ಕಲಿಸಿಕೊಟ್ಟು ಅವರನ್ನು ಸುಸಂಸ್ಕೃತರನ್ನಾಗಿ ಮಾಡಿದ್ದಾರೆ. ಅವರ ಮನೆ "ವಸುಧೈವ

ಕುಟುಂಬಕಂ" ಎಂಬುದಕ್ಕೆ ಅನ್ವರ್ಥವಾಗಿದೆ. ಅವರ ತಾಯಿ ಶ್ರೀಮತಿ ಲಲಿತಮ್ಮ ನಮ್ಮೆಲ್ಲರ ಪ್ರೀತಿಯ ಅಜ್ಜಿ, ಜಾತಿ, ಮತ, ಕುಲ, ಗೋತ್ರ, ಧರ್ಮಗಳ ಭೇದವೆಣಿಸದೆ ಎಲ್ಲರನ್ನು ಪ್ರೀತಿ ವಾತ್ಸಲ್ಯದಿಂದ ನೋಡಿಕೊಳ್ಳುತ್ತಿದ್ದರು. ೮೦ರ ವಯಸ್ಸಿನಲ್ಲೂ ಯಾರೇ ಮನೆಗೆ ಬರಲಿ ಊಟ, ತಿಂಡಿ, ಕಾಫಿ ಕೊಟ್ಟು ಉಪಚರಿಸುತ್ತಿದ್ದ ನಮ್ಮ ಅಜ್ಜಿ ನಿಜಕ್ಕೂ ನಮ್ಮೆಲ್ಲರಿಗೂ ವಾತ್ಸಲ್ಯ ಮಮಕಾರದ ಸಾಕಾರಮೂರ್ತಿ. ಶೃಂಗೇರಿಯಲ್ಲಿ ಅನೇಕರಿಗೆ ಗಿರಿಮಾಮನಾದರೆ, ಇನ್ನು ಕೆಲವರಿಗೆ ಗಿರಿ, ಇನ್ನು ಕೆಲವರಿಗೆ ಶಾಸ್ತ್ರಿಗಳು ಹೀಗೆ ಹಲವು ಹೆಸರಿನಿಂದ ತಮ್ಮ ಪ್ರೀತಿ ವಾತ್ಸಲ್ಯವನ್ನು ಶೃಂಗೇರಿಯ ಜನತೆ ತೋರಿಸುತ್ತಿದ್ದಾರೆ.

ಕಾಲೇಜಿನ ವಿದ್ಯಾರ್ಥಿಗಳಿಗೆ ಪ್ರೀತಿಯ ಸಿವಿಜಿ ಆಗಿದ್ದಾರೆ. ಇವರ ಪಾಠಕ್ಕೆ ವಿದ್ಯಾರ್ಥಿಗಳು ಗೈರುಹಾಜರಾಗುವುದು ತುಂಬಾ ಕಡಿಮೆ. ಇವರ ಪಾಠದ ಶೈಲಿ, ವಿವರಿಸುವ ಬಗೆ, ಭಾಷಾ ಪ್ರಾವೀಣ್ಯತೆ, ವಿಷಯದ ಮೇಲಿನ ಹಿಡಿತ, ಇದನ್ನು ಎಂದೂ ಮರೆಯಲು ಸಾಧ್ಯವಿಲ್ಲ ಎಂದು ಅನೇಕ ವಿದ್ಯಾರ್ಥಿಗಳು ನನ್ನಲ್ಲಿ ಹೇಳಿದ್ದುಂಟು. ಅಲ್ಲದೆ, ವಿದ್ಯಾರ್ಥಿಗಳು ತಮ್ಮ ಕಾರ್ಯಕ್ರಮದ ನಿರೂಪಣೆ, ಭಾಷಣ ಅಥವಾ ಭಾಷಣ ಸ್ಪರ್ಧೆ, ಪ್ರಬಂಧ ಸ್ಪರ್ಧೆಗಳಿಗೆ ಶಾಸ್ತ್ರೀಜಿಯವರನ್ನು ಭೇಟಿ ಮಾಡಿ ಸಲಹೆ – ಸೂಚನೆ ಪಡೆಯುವುದು ಸರ್ವೇ ಸಾಮಾನ್ಯವಾದ ವಿಷಯವಾಗಿದೆ. ವಿದ್ಯಾರ್ಥಿಗಳಿಗೆ ಇಂಗ್ಲೀಷ್ ಭಾಷೆಯ ಪಾಠ ಮಾಡುತ್ತಿದ್ದರೆ, ಸಮಯ ಮುಗಿದಿರುವುದೇ ತಿಳಿಯುವುದಿಲ್ಲ, ಅಷ್ಟು ತನ್ಮಯತೆಯಿಂದ ರಸವತ್ತಾಗಿ ವಿವರಿಸುವುದು, ಕಷ್ಟದ ವಿಷಯವನ್ನು ಅತ್ಯಂತ ಸುಲಭವಾಗಿ ಮನಸ್ಸಿಗೆ ನಾಟುವಂತೆ ವಿವರಿಸುವುದು ಅವರ ಭಾಷಾ ಪ್ರಾವಿಣ್ಯತೆಗೆ ಹಿಡಿದ ಕೈಗನ್ನಡಿಯಾಗಿದೆ. ಕೊಡುಗೈ ದಾನಿಯಾದ ಶಾಸ್ತ್ರೀಜಿಯವರು ಕಾಲೇಜಿನ ಗ್ರಂಥಾಲಯಕ್ಕೆ ಹಲವಾರು ಉಪಯುಕ್ತ ಗ್ರಂಥಗಳನ್ನು ನೀಡಿದ್ದಾರೆ.

ಶಾಸ್ತ್ರಿಗಳವರ ಶೈಕ್ಷಣಿಕ ಸಾಧನೆ, ಸೇವೆಗಳ ಪಕ್ಷಿನೋಟ

ಶೈಕ್ಷಣಿಕ ಸಾಧನೆ: – "ಆಡು ಮುಟ್ಟದ ಸೊಪ್ಪಿಲ್ಲ" ಎಂಬಂತೆ ಶಾಸ್ತ್ರೀಜಿಯವರಿಗೆ ಗೊತ್ತಿಲ್ಲದ ಜ್ಞಾನ ಶಾಖೆಯಿಲ್ಲವೆಂದರೆ ತಪ್ಪಾಗಲಾರದು. ಸಹೋದ್ಯೋಗಿಗಳು ಅವರನ್ನು "ನಡೆದಾಡುವ ವಿಶ್ವವಿದ್ಯಾನಿಲಯ"ವೆಂದು ಕರೆಯುತ್ತಾರೆ. ವಿಜ್ಞಾನ, ಅರ್ಥಶಾಸ್ತ್ರ ಇತಿಹಾಸ, ಸಮಾಜಶಾಸ್ತ್ರ, ರಾಜ್ಯಶಾಸ್ತ್ರ, ಸಾಹಿತ್ಯ, ಸಂಗೀತ, ಧಾರ್ಮಿಕ ಆಧ್ಯಾತ್ಮ, ತಂತ್ರಜ್ಞಾನ, ಸಂಶೋಧನೆ, ಹೀಗೆ ಎಲ್ಲಾ ಕ್ಷೇತ್ರಗಳ ಜ್ಞಾನವೂ ಅವರಿಗಿದೆ.

ಕಾಲೇಜು ಶಿಕ್ಷಣವನ್ನು ಶ್ರೀ ಜೆ.ಸಿ.ಬಿ.ಎಂ ಕಾಲೇಜಿನಲ್ಲಿ ಮುಗಿಸಿ, ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಸಂಸ್ಕೃತ ಎಂ.ಎ ಪದವಿಯನ್ನು ೩ನೇ ರ್‍ಯಾಂಕ್‌ನೊಂದಿಗೆ, ೧೯೭೪ರಲ್ಲಿ ಮುಗಿಸಿ, ೨೦೦೧ರಲ್ಲಿ ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದಲ್ಲಿ ೭ನೇ

ರ್‍ಯಾಂಕ್ ಗಳಿಸುವುದರೊಂದಿಗೆ ಇಂಗ್ಲೀಷ್ ಎಂ.ಎ ಪದವಿಯನ್ನು ಮುಗಿಸಿರುತ್ತಾರೆ. ಅಧ್ಯಯನ ಅಧ್ಯಾಪನದ ಜೊತೆಗೆ ಸಂಶೋಧನೆಯನ್ನು ಕೈಗೊಂಡ ಶಾಸ್ತ್ರೀಜಿಯವರು ೨೦೧೧ರಲ್ಲಿ ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದಲ್ಲಿ "The Sclerosis and the Suffering: A Study of Select Kannada Novels in English Translation" ಎಂಬ ವಿಷಯದ ಮೇಲೆ ಮಂಡಿಸಿದ ಮಹಾ ಪ್ರಬಂಧಕ್ಕೆ ಪಿ.ಹೆಚ್‌ಡಿ ಪದವಿಯನ್ನು ಪಡೆದಿರುತ್ತಾರೆ. ಇದರ ಜೊತೆಗೆ ಸತತ ಅಧ್ಯಯನದಲ್ಲಿ ತೊಡಗಿರುವ ಶಾಸ್ತ್ರೀಜಿಯವರು ೧೯೯೮ರಲ್ಲಿ "Diploma of the Institute of Homoeopathy, Certificate, in Anatomy and Physiology" ಮತ್ತು "Certificate in Pathology and the Nature of Diseased" ಎಂಬ ವೈದ್ಯಕೀಯ ಶಾಸ್ತ್ರಕ್ಕೆ ಸಂಬಂಧಪಟ್ಟ ಕೋರ್ಸ್‌ಗಳನ್ನು The British institute of Homoeopathy Middle State England ನಲ್ಲಿ ೧೯೯೮ರಲ್ಲಿ ಮುಗಿಸಿರುತ್ತಾರೆ.

ವಿವಿಧ ಸಂಸ್ಥೆಗಳಲ್ಲಿ ಸಲ್ಲಿಸಿದ ಸೇವೆ – ಶ್ರೀ ಜೆ.ಸಿ.ಬಿ.ಎಂ ಪದವಿ ಪೂರ್ವ ಕಾಲೇಜಿನ ಪ್ರಾಂಶುಪಾಲರಾಗಿ ಸೇವೆ ಸಲ್ಲಿಸುತ್ತಿರುವ ಡಾ. ಸಿ ವಿ ಗಿರಿಧರಶಾಸ್ತ್ರೀಯವರು ಶ್ರೀ ಜೆ ಸಿ ಬಿ ಎಂ ಕಾಲೇಜಿನಲ್ಲಿ ೨೦ ವರ್ಷಗಳ ಕಾಲ ಸಂಸ್ಕೃತ ಮತ್ತು ಇಂಗ್ಲೀಷ್ ವಿಷಯಗಳನ್ನು ಬೋಧಿಸುತ್ತ, ಅನೇಕ ಸಹೋದ್ಯೋಗಿಗಳಿಗೆ ಸಂಶೋಧನೆಗೆ ಮಾರ್ಗದರ್ಶನ ಮಾಡಿದ್ದಾರೆ. ಕಾಲೇಜಿನಲ್ಲಿ ನಡೆಯುವ ಭಾಷಾ ವಿಷಯ, ಕಲಾ, ವಾಣಿಜ್ಯ ಮತ್ತು ವಿಜ್ಞಾನ ವಿಚಾರಸಂಕಿರಣ, ಕಾರ್ಯಗಾರಗಳಿಗೆ ಸಲಹೆ ಮಾರ್ಗದರ್ಶನ ನೀಡಿ ಕಾಲೇಜಿನ ಶೈಕ್ಷಣಿಕ ಕ್ಷೇತ್ರವನ್ನು ಶ್ರೀಮಂತಗೊಳಿಸಿದ ಕೀರ್ತಿ ಶಾಸ್ತ್ರೀಜಿಯವರಿಗೆ ಸಲ್ಲುತ್ತದೆ. ೨೦೦೪ ಮತ್ತು ೨೦೧೧ರಲ್ಲಿ ನ್ಯಾಕ್ ತಂಡದ ಭೇಟಿಗೆ ಬೇಕಾದ ಸಿದ್ಧತೆ ಮಾಡುವಲ್ಲಿ ಮಾರ್ಗದರ್ಶನ ಮಾಡಿ ನನಗೆ ಎಲ್ಲಾ ರೀತಿಯ ಸಹಕಾರವನ್ನು ನೀಡಿದ್ದಾರೆ. ಏನೇ ಸಮಸ್ಯೆ ಬಂದರೂ ಅದಕ್ಕೆ ಸೂಕ್ತ ಸಲಹೆ ನೀಡಿ ಸಮಸ್ಯೆಯನ್ನು ಎದುರಿಸುವ ಸಾಮರ್ಥ್ಯವನ್ನು ನೀಡಿರುವ ಧೀಮಂತರು.

ನಮ್ಮ ಕಾಲೇಜಿನ ಶೈಕ್ಷಣಿಕ ಸಾಧನೆಗೆ ಕಳೆದ ಹತ್ತು ವರ್ಷಗಳಲ್ಲಿ ಶಾಸ್ತ್ರೀಜಿಯವರ ಕೊಡುಗೆ ಅಪಾರವಾದುದು.

ನಮ್ಮ ಕಾಲೇಜಿನಲ್ಲಿರುವ ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ ಅಧ್ಯಯನ ಕೇಂದ್ರದ ಕೋಆರ್ಡಿನೇಟರ್ ಆಗಿ ೨೦೦೨ರಿಂದ ಕಾರ್ಯನಿರ್ವಹಿಸುತ್ತಿದ್ದಾರೆ. ಯುಜಿಸಿಯ ಅನೇಕ ಪ್ರಾಜೆಕ್ಟ್‌ಗಳಿಗೆ ಸಂಶೋಧನೆಗಳಿಗೆ ಸಂಶೋಧನಾ ಕೋಆರ್ಡಿನೇಟರ್ ಆಗಿ ಕಾರ್ಯನಿರ್ವಹಿಸುತ್ತಿದ್ದಾರೆ. ಅಧ್ಯಯನ, ಅಧ್ಯಾಪನ ಮತ್ತು

ಸಂಶೋಧನಾ ಚಟುವಟಿಕೆಯಲ್ಲಿ ಸದಾ ತೊಡಗಿರುವ ಶಾಸ್ತ್ರೀಜಿಯವರು ವಿದ್ಯಾರ್ಥಿಗಳಿಗೆ ಧನ ಸಹಾಯ ಮಾಡುವುದರ ಜೊತೆಗೆ ಸೇವಾ ಚಕ್ರ ಚೆನ್ನೈ, ಅವರ ಬಂಧುಗಳಿಂದ ಮಠದ ಭಕ್ತರಿಂದ ವಿದ್ಯಾನಿಧಿಗೆ ಧನ ಸಹಾಯ ಮಾಡಿ ಅನೇಕ ವಿದ್ಯಾರ್ಥಿಗಳ ವಿದ್ಯಾರ್ಜನೆಗೆ ಕಾರಣೀಭೂತರಾಗಿದ್ದಾರೆ. ವಿದ್ಯಾಭಿಮಾನಿಗಳಾದ ಶಾಸ್ತ್ರಿಗಳು ಕಾಲೇಜಿಗೆ ಅನೇಕ ಉಪಕರಣಗಳನ್ನು, Soil Test Lab ಗೆ ಬೇಕಾದ ಧನಸಹಾಯವನ್ನು ಸರಕಾರದಿಂದ ಕೊಡಿಸಿ ಕಾಲೇಜಿನ ಸರ್ವತೋಮುಖ ಬೆಳವಣಿಗೆಯಲ್ಲೂ ಪಾತ್ರವಹಿಸಿದ್ದಾರೆ.

ಶ್ರೀ ಶಾರದಾ ಪೀಠದಲ್ಲಿ ಸೇವೆ – ಶಾಸ್ತ್ರೀಜಿಯವರು ೧೯೮೧ ರಿಂದ ೧೯೮೬ರ ವರೆಗೆ ಶ್ರೀ ಶಾರದಾ ಪೀಠದ ಆಡಳಿತಾಧಿಕಾರಿಯಾಗಿ, ಹಣಕಾಸು, ಕಾನೂನು ಲೆಕ್ಕಪತ್ರಗಳನ್ನು ಸಮರ್ಥವಾಗಿ ನಿರ್ವಹಿಸಿದ್ದಾರೆ. ಹಾಗೆಯೇ ಪರಮ ಪೂಜ್ಯ ಶ್ರೀ ಶ್ರೀ **ಜಗದ್ಗುರು ಅಭಿನವವಿದ್ಯಾತೀರ್ಥ ಸ್ವಾಮೀಜಿಯವರ** ಆಪ್ತಕಾರ್ಯದರ್ಶಿಯಾಗಿ ವಿವಿಧ ಭಾಷೆಗಳಲ್ಲಿ ಪತ್ರ ವ್ಯವಹಾರ ನಡೆಸಿದ್ದಾರೆ. ವಿಶೇಷವಾಗಿ ಶ್ರೀ ಶ್ರೀ ಜಗದ್ಗುರುಗಳ ಸಾರ್ವಜನಿಕ ಸಂಪರ್ಕಾಧಿಕಾರಿಯಾಗಿ ಅವರ ದಿಗ್ವಿಜಯ ಯಾತ್ರೆಯ ಉಸ್ತುವಾರಿಯನ್ನು ನೋಡಿಕೊಳ್ಳುವ ಮೂಲಕ ಶ್ರೀ ಶ್ರೀಗಳವರ ಧರ್ಮ ಪ್ರಚಾರ ಕಾರ್ಯವನ್ನು ಯಶಸ್ವಿಗೊಳಿಸಿದ ಕೀರ್ತಿ ಶಾಸ್ತ್ರೀಜಿಯವರಿಗೆ ಸಲ್ಲುತ್ತದೆ. ಶ್ರೀಮಠದವರು ನಡೆಸುತ್ತಿರುವ ಶಾರದಾ ಧನ್ವಂತರಿ ಆಸ್ಪತ್ರೆಯ ಕಾರ್ಯದರ್ಶಿಯಾಗಿಯೂ ಕಾರ್ಯ ನಿರ್ವಹಿಸಿರುತ್ತಾರೆ. ಮಲಹಾನಿಕರೇಶ್ವರ ದೇವಸ್ಥಾನದ ಪುನರ್‌ಪ್ರತಿಷ್ಠೆ ಮತ್ತು ಕುಂಭಾಭಿಷೇಕದ ಸಂದರ್ಭದಲ್ಲಿ ನಿರ್ವಹಿಸಿದ ಶಾಸ್ತ್ರೀಯವರ ಕಾರ್ಯ, ಮಠ ಮತ್ತು ಸಾರ್ವಜನಿಕ ಸಂಬಂಧದ ಸೇತುವೆಯಾಗಿ, ನಂತರ ನಡೆದ ಎಲ್ಲಾ ಮಠದ ಕಾರ್ಯಗಳಲ್ಲಿ ಸಾರ್ವಜನಿಕರು, ಆಸ್ತಿಕರು ಹೆಚ್ಚು ಹೆಚ್ಚು ತೊಡಗಿಕೊಳ್ಳಲು ತಳಹದಿಯಾಯಿತು.

ಇತರ ಸಂಸ್ಥೆಗಳಲ್ಲಿ – ೧೯೯೧ ರಿಂದ ೧೯೯೩ ರವರೆಗೆ ನವದೆಹಲಿಯಲ್ಲಿರುವ Easter Industries Ltd., ಸಂಸ್ಥೆಯ General Manager ಆಗಿ ಕಾರ್ಯನಿರ್ವಹಿಸಿದ್ದಾರೆ. ಆದರೆ ಧಾರ್ಮಿಕ ಮತ್ತು ಆಧ್ಯಾತ್ಮದಲ್ಲಿ ಆಸಕ್ತಿಯಿರುವುದರಿಂದ ಶ್ರೀಮಠದ ಭಕ್ತರಾದ್ದರಿಂದ, ಓದಿದ ವಿದ್ಯಾಸಂಸ್ಥೆಯಲ್ಲೆ, ಸೇವೆ ಸಲ್ಲಿಸುವ ಸಲುವಾಗಿ, ಐಶಾರಾಮಿ ಹುದ್ದೆಯನ್ನು ಬಿಟ್ಟು ಶೃಂಗೇರಿಯಲ್ಲಿಯೇ ಬಂದು ನೆಲೆಸಿರುವುದು ಶ್ರೀಮಠ, ಶೃಂಗೇರಿ ಹಾಗೂ ಅವರು ಓದಿದ ಕಾಲೇಜಿನ ಮೇಲಿನ ಅಭಿಮಾನದ್ಯೋತಕವಾಗಿದೆ.

ಶಿವಾನಂದ ಹೆಲ್ತ್ ಸೆಂಟರ್, ಶೃಂಗೇರಿ, ಇದರ ಗೌರವ ನಿರ್ದೇಶಕರಾಗಿ ಪ್ರತಿ ಭಾನುವಾರ ಉಚಿತ ಪರ್ಯಾಯ ಚಿಕಿತ್ಸೆಯ ಕ್ಲಿನಿಕ್‌ನ್ನು ನಡೆಸುತ್ತಿರುವುದು ಅವರ ಸಾಮಾಜಿಕ ಕಳಕಳಿಗೆ ಹಿಡಿದ ಕೈಗನ್ನಡಿಯಾಗಿದೆ. ರಾಷ್ಟ್ರೀಯ ಸಂಸ್ಕೃತ ಸಂಸ್ಥಾನ ಶ್ರೀ

ರಾಜೀವ್‌ಗಾಂಧೀ ಕ್ಯಾಂಪಸ್, ಶೃಂಗೇರಿಯಲ್ಲಿ ೧೯೯೭ರಿಂದ ೨೦೦೧ರ ವರೆಗೆ ಪಿಯುಸಿ, ಸ್ನಾತಕ ಮತ್ತು ಸ್ನಾತಕೋತ್ತರ ವಿದ್ಯಾರ್ಥಿಗಳಿಗೆ ಸಂಸ್ಕೃತ ಬೋಧಕರಾಗಿಯೂ ಸೇವೆ ಸಲ್ಲಿಸಿರುತ್ತಾರೆ.

ಪ್ರಬೋಧಿನಿ ಗುರುಕುಲ, ಸರಸ್ವತಿ ಟ್ರಸ್ಟ್, ಆರ್ಷವಿದ್ಯಾಕೇಂದ್ರ ಮತ್ತು ಅನೇಕ ಪ್ರತಿಷ್ಠಿತ ವೇದಿಕೆಗಳಲ್ಲಿ; ಸಾಹಿತ್ಯ, ವೇದ, ವೇದಾಂತ ಭಾರತೀಯ ತತ್ವಶಾಸ್ತ್ರಗಳಲ್ಲಿ ಉಪನ್ಯಾಸ ನೀಡಿರುತ್ತಾರೆ.

ಆಧ್ಯಾತ್ಮಿಕ ಸಾಹಿತ್ಯ ಕ್ಷೇತ್ರಕ್ಕೆ ಕೊಡುಗೆ

ಸಂಸ್ಕೃತ ಮತ್ತು ಕನ್ನಡದಲ್ಲಿ "ಪೂಜಾವಿಧಿ" ತತ್ವದರ್ಶನ ಪ್ರಕಾಶನ ೪ ಸಂಪುಟಗಳಲ್ಲಿ, "ಜಗದ್‌ವಂದ್ಯಾ ಜಗದ್ಗುರು" ಇಂಗ್ಲೀಷಿನಿಂದ ಕನ್ನಡಕ್ಕೆ ಅನುವಾದ, "ಪ್ರಬೋಧಕ ಪ್ರಸಂಗಗಳು", "ತೀನಂಶ್ರೀ ಶೇಷ ವಿಶೇಷ" ಅಲ್ಲದೇ ಅನೇಕ ಮ್ಯಾಗಝಿನ್, ಸ್ಮರಣ ಸಂಚಿಕೆಗಳಿಗೆ ನೂರಾರು ಲೇಖನಗಳನ್ನು ಬರೆದಿರುತ್ತಾರೆ. Fifty Rays (ಸಂಪಾದಿತ ಕೃತಿ) ಶ್ರೀ ಶ್ರೀ ಶ್ರೀ ಭಾರತೀತೀರ್ಥ ಸ್ವಾಮೀಜಿಯವರ ಆಶೀರ್ವಚನ ಸಂಗ್ರಹ, "ಸದ್ಗುರು ಬ್ಲೆಸಿಂಗ್ಸ್" ಮಾಸಿಕಕ್ಕೆ ಲೇಖನಗಳು, ಆರ್.ಕೆ.ನಾರಾಯಣ್‌ರವರ ಕಥೆಗಳನ್ನು ಭಾಷಾಂತರಿಸಿದ್ದಾರೆ, ಅದನ್ನು ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ ಪ್ರಕಟಪಡಿಸಿದೆ.

ಭಾಷಾ ಪ್ರಾವೀಣ್ಯತೆ – ಶ್ರೀಯುತ ಗಿರಿಧರಶಾಸ್ತ್ರಿಯವರು ಸಂಸ್ಕೃತ, ಕನ್ನಡ, ಇಂಗ್ಲೀಷ್, ಹಿಂದಿ, ತಮಿಳು, ತೆಲಗು, ಮಲಯಾಳಂ. ಹೀಗೆ ಅನೇಕ ಭಾಷೆಗಳಲ್ಲಿ ಪಾಂಡಿತ್ಯವನ್ನು ಸಾಧಿಸಿ ಬಹುಭಾಷಾ ಪ್ರವೀಣರೆನಿಸಿಕೊಂಡಿದ್ದಾರೆ. ೨೦೧೧ರ ಜನವರಿ ೧೮ ಮತ್ತು ೧೯ರಂದು ನಡೆದ ತಾಲ್ಲೂಕ್ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರಾಗಿರುವುದು ಅವರ ಭಾಷಾ ಪ್ರಾವಿಣ್ಯತೆಗೆ ಸಂದ ಮನ್ನಣೆಯಾಗಿದೆ. ಬಹುಮುಖ ಪ್ರತಿಭೆಯ, ಸರಳ–ಸಜ್ಜನ–ಸಹೃದಯಿ ಬಂಧು, ವಿದ್ವಾಂಸ ಶ್ರೀ ಗಿರಿಧರಶಾಸ್ರಿಗಳ ಮೇಲೆ ಜಗನ್ಮಾತೆಶಾರದೆ ಹಾಗೂ ಜಗದ್ಗುರುಗಳ ಆಶೀರ್ವಾದ ಸದಾ ಇರಲೆಂದು ಪ್ರಾರ್ಥಿಸುತ್ತೇನೆ.

ಸರಳ ವ್ಯಕ್ತಿತ್ವದ ಸೃಜನಶೀಲರು

– ಡಾ। ರಾಘವೇಂದ್ರ ಭಟ್, ಸಾಲಿಗ್ರಾಮ
ನಿವೃತ್ತ ಪ್ರಾಚಾರ್ಯರು, ೯೮೮೬೦೨೪೮೧೧

ಶೃಂಗೇರಿಯಲ್ಲಿರುವ ಶ್ರೀ ಚಿ. ವಿ. ಗಿರಿಧರಶಾಸ್ತ್ರಿಯವರು ನನಗೆ ೧೩ ವರ್ಷಗಳ ಹಿಂದಿನ ಪರಿಚಯ. ಶೃಂಗೇರಿಯ ಜೆ.ಸಿ.ಬಿ.ಎಮ್. ಕಾಲೇಜಿನಲ್ಲಿ ನಾನು ಪ್ರಾಂಶುಪಾಲನಾಗಿದ್ದ ಸಮಯದಲ್ಲಿ, ಉಪನ್ಯಾಸಕರಾಗಿ ನಿಯುಕ್ತಿಗೊಂಡವರು ಇವರು. ಶ್ರೀಯುತರು ಈ ಕಾಲೇಜಿಗೆ ಸೇರುವ ಮೊದಲು ದೆಹಲಿಯಲ್ಲಿ ದೊಡ್ಡ ಉದ್ದಿಮೆಯೊಂದರಲ್ಲಿ ಉನ್ನತಾಧಿಕಾರಿಯಾಗಿದ್ದು ಐದಂಕಿಯ ಸಂಬಳವನ್ನು ಪಡೆಯುತ್ತಿದ್ದರು. ಶ್ರೀಮಠ ಶೃಂಗೇರಿಯಲ್ಲಿ ೧೬ ವರ್ಷಗಳ ಕಾಲ ಶ್ರೀ ಶ್ರೀ ಶ್ರೀ ಅಭಿನವ ವಿದ್ಯಾತೀರ್ಥ ಮಹಾಸ್ವಾಮಿಗಳವರ ಸಮ್ಮುಖದಲ್ಲಿ ಆಡಳಿತಾಧಿಕಾರಿಯಾಗಿ ಸೇವೆ ಸಲ್ಲಿಸಿ ಹೆಸರು ಮಾಡಿದವರು.

ನಮ್ಮ ಕಾಲೇಜಿನಲ್ಲಿ ಪ್ರಾಂಶುಪಾಲರಾಗಿ ಸೇವೆಸಲ್ಲಿಸುತ್ತಿದ್ದ ದಿ.ಶ್ರೀ ವೆಂಕಣ್ಣಯ್ಯನವರ ನಿವೃತ್ತಿಯ ನಂತರ ಸಂಸ್ಕೃತ ಪ್ರಾಧ್ಯಾಪಕರಾಗಿ ನಿಯೋಜನೆಗೊಂಡರು. ಹಿಂದಿ, ತೆಲಗು, ತಮಿಳು, ಇಂಗ್ಲಿಷ್ ಭಾಷೆಗಳಲ್ಲೂ ಪ್ರಭುತ್ವವನ್ನು ಹೊಂದಿದವರು. ಇಂಗ್ಲಿಷ್‌ನಲ್ಲಿನ ಪ್ರಾವೀಣ್ಯದಿಂದಾಗಿ ಇಂಗ್ಲಿಷ್ ಪಾಠಕ್ಕೂ ಅವರನ್ನೇ ನೇಮಿಸಲಾಯಿತು. ಇದು ಅವರ ಅಚ್ಚುಮೆಚ್ಚಿನ ವಿಷಯವೂ ಹೌದು. ಸಾಹಿತ್ಯದ ಮೇಲಿನ ಒಲವಿನಿಂದಾಗಿ ಕಾಲೇಜಿನ ವಾರ್ಷಿಕ ಸಂಚಿಕೆಯಾದ "ಭಾಮತಿ"ಯ ಸಂಪಾದಕತ್ವವೂ ಅವರಿಗೇ ಒಲಿಯಿತು. ಅತ್ಯಂತ ನಿಷ್ಠೆಯಿಂದ ಹಾಗೂ ಪ್ರಾಮಾಣಿಕತೆಯಿಂದ ಶ್ರೀ ವೆಂಕಣ್ಣಯ್ಯನವರು ಹಾಕಿಕೊಟ್ಟ ಮಾರ್ಗದಲ್ಲೇ ಸಾಗಿ ಹಲವಾರು ವರ್ಷ ಅದನ್ನು ಯಶಸ್ವಿಯಾಗಿ ನಡೆಸಿಕೊಂಡು ಬಂದರು.

ನನ್ನ ಹಾಗೂ ಶಾಸ್ತ್ರಿಗಳ ಸಂಬಂಧ ಅನ್ಯೋನ್ಯ. ನಾನು ಕಾಲೇಜಿನ ಪ್ರಾಂಶುಪಾಲನಾಗಿದ್ದಾಗ ಪ್ರತಿನಿತ್ಯವೂ ನಾನು, ವೆಂಕಣ್ಣಯ್ಯನವರೂ ಶಾಸ್ತ್ರಿಗಳ ಮನೆಯಲ್ಲಿ ಸಾಹಿತ್ಯ ಸಲ್ಲಾಪ ನಡೆಸುತ್ತಿದ್ದೆವು. ಕೆಲವೊಮ್ಮೆ ನನ್ನ ಕಾರಿನಲ್ಲಿ ವಾಯುವಿಹಾರ ಮಾಡುತ್ತಾ ಚರ್ಚೆ ನಡೆಸುತ್ತಿದ್ದುದೂ ಉಂಟು. ಶಾಸ್ತ್ರಿಗಳ ಮನೆಯಲ್ಲಿ ನಮ್ಮ ಮಾತಿನ ನಡುವೆ ಅವರ ತಾಯಿ (ಎಲ್ಲರಿಂದಲೂ ಅಜ್ಜಿ ಎಂದು ಕರೆಸಿಕೊಳ್ಳುತ್ತಿದ್ದವರು) ದಿನವೂ ೨-೩ ಬಾರಿ ಕಷಾಯ ಹಾಗೂ ಕುರುಕಲು ತಿಂಡಿಗಳನ್ನು ತಿನ್ನಲು ಕೊಡುತ್ತಿದ್ದರು. ಇದೇ ಸಂದರ್ಭದಲ್ಲಿ

ನಾನು ಶಾಸ್ತ್ರಿಗಳ ತಾಯಿಯ ಬಗ್ಗೆ ಒಂದೆರಡು ಮಾತನ್ನು ಹೇಳಲೇಬೇಕು. ಅವರು ನಾನು ನೋಡುವ ಕಾಲದಲ್ಲಿ ೭೫ರ ಗಡಿ ದಾಟಿದ್ದರು. ತುಂಬಾ ಲವಲವಿಕೆಯಿಂದಿರುವ ಆ ಮಹಾತಾಯಿಯ ಔದಾರ್ಯ ಮತ್ತು ಅತಿಥಿಗಳನ್ನು ಉಪಚರಿಸುವ ಪರಿ ಅನುಕರಣೀಯ. ಇಳಿವಯಸ್ಸಿನಲ್ಲೂ ಸ್ಥಿತಪ್ರಜ್ಞರಾಗಿದ್ದು ನೊಂದವರ ಮನೆಗೆ ಹೋಗಿ ಸಾಂತ್ವನ ಹೇಳುವ ದೊಡ್ಡತನ ಅವರದ್ದು. ತಮ್ಮ ಅನುಭವದ ಮೂಸೆಯಿಂದ ಕಷ್ಟದ ಪರಿಸ್ಥಿತಿಗಳನ್ನು ಅವರು ನಿಭಾಯಿಸುವ ರೀತಿ ಅಚ್ಚರಿಯೇ ಸರಿ. ಎಷ್ಟೋ ಸಲ ತಮ್ಮ ಮಕ್ಕಳಿಗೂ ಇದೇ ರೀತಿ ಧೈರ್ಯ ತುಂಬುತ್ತಿದ್ದುದನ್ನು ನಾನು ಕಣ್ಣಾರೆ ನೋಡಿದ್ದೇನೆ. ನನ್ನ ಹೆಂಡತಿ ಶಾಂತಾ ಹಾಗೂ ಇವರು ಬಹಳ ಆತ್ಮೀಯರು.

ನಾನು, ವೆಂಕಣ್ಣಯ್ಯ ಹಾಗೂ ಶಾಸ್ತ್ರಿಗಳು ಸೇರಿ ಶೃಂಗೇರಿಯಲ್ಲಿ ಹಲವಾರು ಸಾಹಿತ್ಯಿಕ ಕಾರ್ಯಕ್ರಮಗಳನ್ನು ನಡೆಸಿದ್ದೇವೆ. ಕಾಲೇಜಿನಲ್ಲಿ ಕನ್ನಡ ಸಂಘದ ಮೂಲಕ ಹಲವು ಕಾರ್ಯಕ್ರಮಗಳನ್ನು ಹಮ್ಮಿಕೊಂಡಿದ್ದೇವೆ. ಗಣ್ಯ ಸಾಹಿತಿಗಳನ್ನು ಕರೆಸಿ ಅವರೊಂದಿಗೆ ಸಂವಾದವನ್ನೂ ಏರ್ಪಡಿಸಿದ್ದೇವೆ. ಹೀಗೆ ಹಿರಿಯ ಕಿರಿಯ ಸಾಹಿತಿಗಳಿಗೆ ವೇದಿಕೆಯನ್ನೊದಗಿಸಿ ಅವರೂ ಕೂಡಾ ಸಾಹಿತ್ಯ ಸೇವೆಯಲ್ಲಿ ತಮ್ಮನ್ನು ತೊಡಗಿಸಿಕೊಳ್ಳುವಂತೆ ಮಾಡಿದ್ದೇವೆಂಬ ಹೆಮ್ಮೆ ನನಗೆ. ನಮ್ಮೀ ಕಾಯಕದಿಂದ ಅರಳಿದ ಮೊಗ್ಗುಗಳು ಇಂದು ಬರವಣಿಗೆಯನ್ನೇ ಉಸಿರಾಗಿಸಿಕೊಂಡು ಸಾಹಿತ್ಯ ಕ್ಷೇತ್ರದಲ್ಲಿ ಮಿಂಚುತ್ತಿವೆ.

ಡಿ.ವಿ.ಜಿ. ಯವರ ಆಪ್ತ ಸ್ನೇಹಿತ ಹಾಗೂ ಸಾಹಿತ್ಯ ವಿಮರ್ಶಕ ಶ್ರೀಮಾನ್ ವೆಂಕಟರಾಮನ್ ಅವರ ಪರಿಚಯವನ್ನು ನನಗೆ ಮಾಡಿಕೊಟ್ಟವರು ಶಾಸ್ತ್ರಿಗಳು. ಶ್ರೀಯುತ ಶಾಸ್ತ್ರಿಗಳು, ಪ್ರೊ|| ತೀ. ನಂ. ಶ್ರೀ ಅವರ ತೀರಾ ಹತ್ತಿರದಸಂಬಂಧಿ, ಸಾಹಿತ್ಯ ಲೋಕದ ದಿಗ್ಗಜರೊಂದಿಗೆ ಒಡನಾಟವನ್ನು ಇಟ್ಟುಕೊಂಡವರು ಎನ್ನುವುದು ನಮಗೆ ಸಂತಸದ ವಿಷಯ.

ಐದು ಅಡಿ ಎಂಟು ಇಂಚು ಎತ್ತರದ ಶಾಸ್ತ್ರಿಗಳದ್ದು ಸ್ವರ್ಣ ಮೈಬಣ್ಣ, ಸದಾ ಖಾದಿ ಉಡುಗೆ, ಹಣೆಯಲ್ಲಿ ರಾರಾಜಿಸುವ ಭಸ್ಮ, ಕನ್ನಡಕದ ಹಿಂದೆ ಹೊಳೆಯುವ ಕಣ್ಣುಗಳೆರಡು ಅವರ ವರ್ಚಸ್ಸು ಹಾಗೂ ವಿದ್ವತ್ತನ್ನು ಪ್ರಚುರಗೊಳಿಸುತ್ತವೆ.

ನಮ್ಮಲ್ಲಿ ಕರ್ನಾಟಕ ರಾಜ್ಯ ಮುಕ್ತವಿಶ್ವವಿದ್ಯಾನಿಲಯದ ಕೇಂದ್ರವಿದ್ದು ಕಾಲೇಜಿಗೆ ಹೋಗಿ ವಿದ್ಯಾಭ್ಯಾಸ ಮುಂದುವರೆಸಲು ಸಾಧ್ಯವಾಗದವರಿಗೆ ಕಲಿಯಲು ಅನುವು ಮಾಡಿಕೊಡಲಾಗಿತ್ತು. ಅದರ ಸಂಯೋಜಕರಾಗಿ ಜವಾಬ್ದಾರಿಯನ್ನು ಹೊತ್ತುಕೊಂಡ ಗಿರಿಧರಶಾಸ್ತ್ರಿಯವರು ಅದನ್ನು ಬಹಳ ಅಚ್ಚುಕಟ್ಟಾಗಿ ನಿರ್ವಹಿಸಿದವರು. ವಹಿಸಿಕೊಂಡ ಕೆಲಸವನ್ನು ವಿಶಿಷ್ಟ ರೀತಿಯಲ್ಲಿ ಮುಗಿಸುವ ಅವರ ಛಲ, ಕೆಲಸದಲ್ಲಿನ ಶ್ರದ್ಧೆ, ತಾಳ್ಮೆ,

ಉತ್ಸಾಹ, ಅಚ್ಚುಕಟ್ಟುತನಕ್ಕೆ ನಾನು ಮಾರುಹೋದೆ. ಉತ್ತಮ ವಾಗ್ಮಿಯಾಗಿ, ಶಾಸ್ತ್ರ, ವ್ಯಾಕರಣ, ಕಾವ್ಯ, ಭಗವದ್ಗೀತೆ, ವಿವೇಕಚೂಡಾಮಣಿಗಳ ಬಗ್ಗೆ ಅಧಿಕಾರಯುತವಾಗಿ ಮಾತನಾಡಬಲ್ಲವರು. ಪ್ರಚಾರದ ಖಯಾಲಿಯಿಂದ ಬಹಳ ದೂರ ಸರಿದಿರುವ ಸೀದಾ ಸಾದಾ ವ್ಯಕ್ತಿ. ೬೦ ತುಂಬುತ್ತಿರುವ ಈ ಸ್ಫುರದ್ರೂಪಿ ಬ್ರಹ್ಮಚಾರಿ ಯುವಕನಿಗೆ ದೇವರ ಶ್ರೀರಕ್ಷೆ ಸದಾ ಇರಲೆಂದು ತುಂಬು ಮನಸ್ಸಿನಿಂದ ಹಾರೈಸುತ್ತೇನೆ.

ಇವರೊಂದಿಗೆ ೭೦ರ ಹೊಸ್ತಿಲಲ್ಲಿರುವ ಗಿರಿಧರಶಾಸ್ತ್ರಿಗಳ ಅಣ್ಣ ಶ್ರೀನಾಥಶಾಸ್ತ್ರಿಗಳ ಬಗ್ಗೆ ಇಲ್ಲಿ ಉಲ್ಲೇಖಿಸುವುದು ಸೂಕ್ತ. ತಮ್ಮನಂತೆಯೇ ತುಂಬ ನಿಗರ್ವಿ, ಸೃಜನಶೀಲರಾದ ಇವರು ಸದಾ ನವೀನ ಶೈಲಿಯಲ್ಲಿ ಆಲೋಚಿಸುತ್ತಾ ತಮಗೆ ಸರಿಕಾಣಿಸಿದ ದಾರಿಯಲ್ಲಿ ಸಾಗುವವರು. ನಾವು ಪ್ರಥಮಬಾರಿಗೆ ಸಂಧಿಸಿದಾಗ ನಮ್ಮ ಕಾಲೇಜಿಗೆ ಅವರೇ ಅಭಿವೃದ್ಧಿ ಪಡಿಸಿದ ತಂತ್ರಜ್ಞಾನವನ್ನು ಉಚಿತವಾಗಿ ನೀಡಿದರು. ಇವರೂ ಕೂಡಾ ನಮ್ಮ ಕಾಲೇಜಿನಲ್ಲಿ ಒಂದೆರಡು ವರ್ಷ ಸೇವೆಸಲ್ಲಿಸಿದ್ದನ್ನು ಈ ಸಂದರ್ಭದಲ್ಲಿ ಸ್ಮರಿಸುತ್ತೇನೆ. ಇವರಿಗೂ ನನ್ನ ಶುಭಕಾಮನೆಗಳು.

◆

ಎಲ್ಲರ ಅಚ್ಚುಮೆಚ್ಚಿನ ಗಿರಿಮಾವ

– ಲಕ್ಷ್ಮೀನೃಸಿಂಹಭಟ್ಟ, ಚಂಪಕಾಪುರ
ಕೃಷಿಕರು, ೯೪೪೯೨೦೫೩೦೦

"ಈ ಕಲಿಯುಗದಲ್ಲಿ ಇಂಥಾ ವ್ಯಕ್ತಿಗಳೂ ಇದ್ದಾರಾ !" ಎಂದು ಕೆಲವೊಮ್ಮೆ ನಮ್ಮ ಬಾಯಿಂದ ಉದ್ಗಾರ ಹೊರಬರುವುದಿದೆ. ಅಂತಹ ಉದ್ಗಾರಕ್ಕೆ ಸಲ್ಲುವ ಅತ್ಯಂತ ಯೋಗ್ಯ ವ್ಯಕ್ತಿ ಎಂದರೆ ನಮ್ಮ ಶೃಂಗೇರಿಯ ಗಿರಿಧರಶಾಸ್ತ್ರಿಗಳು ಅಥವಾ ಎಲ್ಲರ ಅಚ್ಚುಮೆಚ್ಚಿನ "ಗಿರಿ ಮಾವ".

"ಮನಸ್ಯೇಕಂ ವಚಸ್ಯೇಕಂ ಕರ್ಮಣ್ಯೇಕಂ ದುರಾತ್ಮನಾಂ" – ಮನಸ್ಸಿನಲ್ಲಿ ಒಂದು, ಮಾತಿನಲ್ಲಿ ಇನ್ನೊಂದು, ಕೃತಿಯಲ್ಲಿ ಮತ್ತೊಂದಾದರೆ ಅದು ದುರಾತ್ಮರ ಲಕ್ಷಣ. ಕಣ್ಣು ಹಾಯಿಸಿದಲ್ಲೆಲ್ಲ ಈ ಎರಡನೆಯ ಅರ್ಥವೇ ಗೋಚರಿಸುತ್ತಿರುವ ಈ ಕಾಲಘಟ್ಟದಲ್ಲಿ "ಮನಸ್ಸು, ಮಾತು, ಕೃತಿಗಳಲ್ಲಿ ಸಮನ್ವಯ ಸಾಧಿಸಿರುವ ಅಪೂರ್ವ ವ್ಯಕ್ತಿ ನಮ್ಮ ಗಿರಿಮಾವ.

ನಿಂತಾಗ, ಕುಳಿತಾಗ, ಹೋದಲ್ಲಿ, ಬಂದಲ್ಲಿ, ಎಲ್ಲೆಂದರಲ್ಲಿ ತಿನ್ನುತ್ತಿರುವುದು, ಕುಡಿಯುವುದು ಈಗಿನ ನಾಗರೀಕತೆಯ ಒಂದು ಭಾಗವೇ ಆಗಿದೆ. ಇಂಥವರ ಮಧ್ಯೆ ಕಾಲೇಜಲ್ಲಿ ಆಂಗ್ಲ ಭಾಷೆಯ ಉಪನ್ಯಾಸಕರಾಗಿರುವ ಒಬ್ಬ ವ್ಯಕ್ತಿ – "ಹೋಟೆಲ್ಲಲ್ಲಿ ಏನನ್ನು ಸ್ವೀಕರಿಸುವುದಿಲ್ಲ. ತನ್ನ ದೈನಂದಿನ ನಿತ್ಯಕರ್ಮಾನುಷ್ಠಾನಗಳಾಗದೇ ಏನನ್ನೂ ಸ್ವೀಕರಿಸುವುದಿಲ್ಲ. ತಮ್ಮ ಪೂರ್ವಜರ ಪರಂಪರೆಗೆ ವಿಹಿತವೆನಿಸುವ ಆಹಾರ ಸಿಗುವ ಸಾಧ್ಯತೆಯಿಲ್ಲ ಎನ್ನುವ ಸಂದರ್ಭಗಳಲ್ಲಿ ಸ್ವಯಂಪಾಕ ಮಾಡಿಕೊಳ್ಳುತ್ತಾರೆ ಅಥವಾ ಹಣ್ಣು, ಹಾಲು ಮಾತ್ರ ಸ್ವೀಕರಿಸುತ್ತಾರೆಂದರೆ ನಿಮಗೆ ಆಶ್ಚರ್ಯವಾದೀತು. ಹಣೆಯಲ್ಲಿ ಭಸ್ಮಧಾರಣೆ ಮಾಡಿದ ಸ್ಥಿತಿಯಲ್ಲಿಯೇ ಕಾಲೇಜಿಗೆ ತೆರಳುವ, ಏಕಾದಶಿಯ ದಿನ ಸಂಪೂರ್ಣ ಮೌನವಾಗಿರುವ, ನಿತ್ಯ ಸ್ನಾನ–ಸಂಧ್ಯೆಗಳ ಜೊತೆ, ಅಗ್ನಿಕಾರ್ಯ, ದೇವತಾರ್ಚನೆ, ದೇವ–ಋಷಿ–ಪಿತೃ ತರ್ಪಣಗಳನ್ನು ಕೊಟ್ಟ ಬಳಿಕವೇ ತಮ್ಮ ಬಾಹ್ಯ ಕೆಲಸಗಳಿಗೆ ಅಡಿ ಇಡುವ" – ನಮ್ಮ ಗಿರಿಮಾವನ ಬಗ್ಗೆ ಅಭಿಮಾನ ಮೂಡುತ್ತದೆ.

ಮೂಲತಃ ವೈದಿಕ ಪರಂಪರೆಯ ಹಿನ್ನೆಲೆ ಹೊಂದಿ, ವೇದ–ಸಂಸ್ಕೃತಗಳ ಅಧ್ಯಯನ ಮಾಡುತ್ತಾ, ಶೃಂಗೇರಿಯ ಹಿಂದಿನ ಶ್ರೀ ಶ್ರೀಗಳವರ ಕಾಲದಲ್ಲಿ ಆಡಳಿತಾಧಿಕಾರಿಯಾಗಿಯೂ ಇದ್ದ ವ್ಯಕ್ತಿ, ಸ್ವಪ್ರಯತ್ನ ಹಾಗೂ ಸ್ವಾಧ್ಯಾಯದ ಮೂಲಕ ಆಂಗ್ಲ ಭಾಷೆಯಲ್ಲಿ ಸ್ನಾತಕೋತ್ತರ ಪದವಿ ಪಡೆದು, ಆಂಗ್ಲ ಸಾಹಿತ್ಯದ ಬಗ್ಗೆ ಪಿ.ಹೆಚ್.ಡಿ. ಮಾಡಿ ಡಾ। ಗಿರಿಧರಶಾಸ್ತ್ರಿಗಳಾಗುವುದೆಂದರೆ ಅವರ ಅಸಾಧಾರಣ ಬುದ್ಧಿಶಕ್ತಿ ಹಾಗೂ ಅಧ್ಯಯನ ಶೀಲತೆಗೆ ಹಿಡಿದ ಕೈಗನ್ನಡಿ.

ತಮಗೆ ಜೀವನೋಪಾಯ ನೀಡಿದ ವಿದ್ಯಾಸಂಸ್ಥೆಯ ಬಗ್ಗೆ ಸದಾ ಕಾಳಜಿ, ಅಲ್ಲಿ ಪ್ರಾಂಶುಪಾಲರಿಂದ ಹಿಡಿದು ಕಾರಕೂನರವರೆಗೆ ಎಲ್ಲರೊಂದಿಗೆ ಆತ್ಮೀಯ ಸಂಬಂಧ. ಸಂಸ್ಥೆಯ ಪುರೋಭಿವೃದ್ಧಿಯ ಪ್ರತಿ ಸಂದರ್ಭದಲ್ಲೂ ತನ್ನ ಕರ್ತವ್ಯಗಳನ್ನು ಚಾಚೂ ತಪ್ಪದೇ ನಿರ್ವಹಿಸುವ ತನ್ಮಯತೆ, ಇತ್ಯಾದಿಗಳು, ಪ್ರತಿಯೊಬ್ಬರೂ ತಮ್ಮ ಕಾರ್ಯಕ್ಷೇತ್ರದ ದೃಷ್ಟಿಯಿಂದ ಅಳವಡಿಸಿಕೊಳ್ಳಬೇಕಾದ ಸಂಗತಿಗಳೇ ಸರಿ.

ಆಹಾರ, ವಿದ್ಯೆ ಹಾಗೂ ಔಷಧಿಗಳು ನಮ್ಮ ಪರಂಪರೆಯಲ್ಲಿ ಮಾರಾಟದ ವಸ್ತುಗಳಾಗಿರಲಿಲ್ಲ. ಕರ್ನಾಟಕದ ಮೂರು ಗುರುಕುಲಗಳು ಹಾಗೂ ಅನೇಕ ಮಠಮಾನ್ಯಗಳು ಇಂದಿಗೂ ಇದೇ ರೀತಿ ವಿದ್ಯಾಸಂಸ್ಥೆಗಳನ್ನು ನಡೆಸುತ್ತಿರುವುದು ನಾವೆಲ್ಲ ಹೆಮ್ಮೆ ಪಡಬೇಕಾದ ಸಂಗತಿ. ಶ್ರೀ ಗಿರಿಧರಶಾಸ್ತ್ರಿಗಳ ಮನೆಯೇ ಒಂದು ಗುರುಕುಲ. ಇಲ್ಲಿ ಮೂರೂ ಉಚಿತವಾಗಿವೆ ಎಂಬುದು ಅತ್ಯಂತ ಅಭಿಮಾನದ ಸಂಗತಿ.

ಅನೇಕರಿಗೆ ತಮ್ಮ ಜೀವನ ಸಂಗಾತಿಗಳೇ ತಲೆನೋವಾಗುವ ಸಂದರ್ಭಗಳಿರಬಹುದು. ಆದರೆ ಶಾಸ್ತ್ರಿಗಳಿಗೆ ತಲೆನೋವೇ ಜೀವನ ಸಂಗಾತಿಯಾಗಿದೆ. ಅದು ಅನಿವಾರ್ಯ ಎಂದು ಗೊತ್ತಾದ ನಂತರ ಅದನ್ನೂ ತಮ್ಮ ಜೀವನದ ಒಂದು ಭಾಗವಾಗಿ ಸ್ವೀಕರಿಸುವುದರ ಜೊತೆಗೆ, ಇತರರಿಗೆ ಕಿಂಚಿತ್ತೂ ಭಾರವಾಗದಂತೆ, ಇರಿಸುಮುರಿಸಾಗದಂತೆ ನಿಭಾಯಿಸುವುದು ಗಿರಿಮಾವನಿಂದ ಮಾತ್ರ ಸಾಧ್ಯ.

ಈ ಸುಂದರ ಶಿಲ್ಪವನ್ನು ಭೂಮಿಗಿಳಿಸಿ ಕಡೆದು ನಿಲ್ಲಿಸಿದ, ತಾನೂ ಗೌರವಿಸುತ್ತಾ, ಇತರರೂ ಗೌರವಿಸುವಂತೆ ಮಾಡುತ್ತಾ, ಕ್ಷಣ ಕ್ಷಣವೂ, ಗಿರಿ ಗಿರಿ ಎಂದು ಕಾಳಜಿ ವಹಿಸುತ್ತಾ, ತನ್ನ ಕೊನೆಯುಸಿರು ಇರುವವರೆಗೂ ಸುಪುತ್ರನಿಗಾಗಿ ಜೀವನವನ್ನು ಶ್ರೀಗಂಧದಂತೆ ತೇಯ್ದವರು ಅವರ ತಾಯಿ ಲಲಿತಮ್ಮ.

ಒಬ್ಬ ವ್ಯಕ್ತಿ ಎಷ್ಟು ವಿದ್ಯಾವಂತ, ಪ್ರತಿಭಾವಂತ ಎಂಬುವುದಕ್ಕಿಂತ ಮುಖ್ಯವಾಗಿ ಪರಿಗಣಿತವಾಗುವುದು ಆತನ ಬಾಲಭಾವ. ಶ್ರದ್ಧೆ, ಸರಳತೆ, ನಿಷ್ಕಪಟತೆಗಳೇ ಬಾಲಭಾವದ ಲಕ್ಷಣಗಳು. ಕನ್ನಡ, ಸಂಸ್ಕೃತ ಮತ್ತು ಆಂಗ್ಲಭಾಷೆಗಳಲ್ಲಿ ಪದವಿಗಳು ಮತ್ತು ಅಸಾಧಾರಣ ಸಾಮರ್ಥ್ಯವನ್ನು ಪಡೆದು ಶೃಂಗೇರಿಯ ಜೆ.ಸಿ.ಬಿ.ಎಂ. ಕಾಲೇಜಿನಲ್ಲಿ 'ಸವ್ಯಸಾಚಿ'ಯಂತೆ ಉಭಯ ಭಾಷೆಗಳ (ಸಂಸ್ಕೃತ ಮತ್ತು ಇಂಗ್ಲಿಷ್) ಉಪನ್ಯಾಸಕರಾಗಿರುವುದರೊಂದಿಗೆ ಇಂತಹ ಬಾಲಭಾವವನ್ನು ಮೈಗೂಡಿಸಿಕೊಂಡಿರುವುದರಿಂದಲೇ ೬೦ರ ಗಡಿ ದಾಟುತ್ತಿರುವ ನಮ್ಮ "ಗಿರಿಮಾವ" ಅಸಂಖ್ಯ ಜನಗಳ ಹೃದಯ ಸಿಂಹಾಸನದಲ್ಲಿ ಆರೂಢರಾಗಿದ್ದಾರೆ.

ಅನ್ಯರಿಗೆ ಸಂತಸ ಹಂಚುವ ಚಿಕ್ಕ ಅವಕಾಶವನ್ನೂ "ಗಿರಿಮಾವ" ವ್ಯರ್ಥಮಾಡುವುದಿಲ್ಲ. ಮನಸ್ಸನ್ನು ಪ್ರಬೋಧಗೊಳಿಸುವ ಎಸ್.ಎಮ್.ಎಸ್. ಗಳನ್ನು ನಿತ್ಯ ಹಲವು ಆತ್ಮೀಯರಿಗೆ ಕಳಿಸುತ್ತಾರೆ. ಪ್ರತಿಯಾಗಿ ಒಂದು ಸಣ್ಣ ಪ್ರತಿಕ್ರಿಯೆಯನ್ನೂ

ನಿರೀಕ್ಷಿಸುವುದಿಲ್ಲ. ಅದನ್ನು ಆಸ್ವಾದಿಸುತ್ತಿದ್ದಾರೆಂದು ಗೊತ್ತಿದ್ದರೆ ಕಳಿಸುತ್ತಲೇ ಇರುತ್ತಾರೆ. ನೂರಾರು ಸೋದರಿಯರಿಗೆ ವಿದ್ಯೆ, ಆಶ್ರಯ, ಆತ್ಮೀಯತೆ ನೀಡಿದ ಮನೆ ಗಿರಿಮಾವನದು. ಗಿರಿಮಾವ ಸಿಗದಿದ್ದರೆ ಅವರಲ್ಲನೇಕರ ವಿದ್ಯಾಭ್ಯಾಸ ಯಾವಾಗಲೋ ಮೊಟಕಾಗುತ್ತಿತ್ತು. ಕೇವಲ ಆಹಾರ, ವಸತಿ ಮಾತ್ರವಲ್ಲದೇ ಕೆಲಮಕ್ಕಳಿಗೆ ಫೀಸಿಗೆ, ಪುಸ್ತಕಗಳಿಗೆ ಹಣದ ಅಡಚಣೆಯಾದಾಗ ತಾವೇ ಅದನ್ನೂ ಹೊಂದಿಸಿಕೊಡುತ್ತಿದ್ದಾರೆ. ಅಧ್ಯಯನದಲ್ಲಿ ಹಿಂದೆ ಬಿದ್ದವರಿಗೆ ಪಾಠ ಮಾಡುವುದು, ಆತಂಕವಿರುವವರಿಗೆ ಧೈರ್ಯ ತುಂಬುವುದು, ದುಃಖಿತರಿಗೆ ಸಾಂತ್ವನ ಹೇಳುವುದು ಹೀಗೆ ಹತ್ತು – ಹಲವು ವಿಧದಲ್ಲಿ ವ್ಯಕ್ತಿತ್ವಗಳನ್ನು ರೂಪಿಸುವ ಹಾಗೂ ಜೀವನವನ್ನು ಕಟ್ಟಿಕೊಡುವ ಕೆಲಸವನ್ನು ಗಿರಿಮಾವ ದಶಕಗಳಿಂದ ಮಾಡುತ್ತಲೇ ಬಂದಿದ್ದಾರೆ. ಉಚಿತವಾಗಿ ಹೋಮಿಯೋಪತಿ ಚಿಕಿತ್ಸೆ ನೀಡುತ್ತಾ, ಪ್ರತಿ ಭಾನುವಾರ ತಮ್ಮ ಸಮಯವನ್ನು ರೋಗಿಗಳಿಗೇ ಮೀಸಲಿಟ್ಟು ಪ್ರತಿಯಾಗಿ ಏನನ್ನೂ ಬಯಸದೇ ಸಾವಿರಾರು ಜನರ ಆರೋಗ್ಯ ಲಾಭಕ್ಕೆ ಕಾರಣರಾಗಿದ್ದಾರೆ. ಯಾರಿಗೆ ಯಾವುದೇ ರೀತಿಯ ಸಮಸ್ಯೆ ಬಂದಾಗ, ಸಹಾಯಕೋರಿ ಅವರ ಬಳಿಗೆ ಬಂದರೆ, ತಕ್ಷಣ ಸ್ಪಂದಿಸುವುದು, ಯಾವುದಾದರೊಂದು ರೀತಿಯಲ್ಲಿ ಪರಿಹಾರ ಸೂಚಿಸುವುದು, ಪರಿಹಾರ ದೊರಕಬಹುದಾದ ವಿಧಾನ, ವ್ಯಕ್ತಿಗಳನ್ನು ಸೂಚಿಸುವುದು, ಅವರ ಸಮಸ್ಯೆಗೆ ತಾರ್ಕಿಕ ಅಂತ್ಯ ಸಿಗುವವರೆಗೂ ಗಮನಿಸುತ್ತಿರುವುದು ಅವರ ಸ್ವಭಾವ.

ಕ್ಷಣ ಕ್ಷಣಕ್ಕೂ ಬಣ್ಣ ಬದಲಾಯಿಸುವುವ ವ್ಯಕ್ತಿಗಳು, ಆದರ್ಶಗಳು ಪಲ್ಲಟಗೊಳ್ಳುತ್ತಿರುವ ಈಗಿನ ಕಾಲಮಾನದಲ್ಲಿ ನಮ್ಮ ಶಾಸ್ತ್ರಿಗಳು ಮೂರು ತಲೆಮಾರಿನವರಿಂದ "ಗಿರಿಮಾವ" ಎಂದು ಕರೆಸಿಕೊಳ್ಳುತ್ತಿರುವುದು ಅವರ ವ್ಯಕ್ತಿತ್ವದ ಸ್ಥಿರತೆಗೆ ಕಿರೀಟಪ್ರಾಯವಾದ ಸಂಗತಿ. ಗಿರಿಮಾವ, ಗಿರಿಮಾವ.....ಎನ್ನುತ್ತಾ ಅವರ ಮನೆಯಲ್ಲೇ ಇದ್ದು ಅಧ್ಯಯನ ಮಾಡಿದ ಸೋದರಿಯೊಬ್ಬಳು ಗೃಹಿಣಿಯ ಪಟ್ಟಕ್ಕೇರಿದ ನಂತರ ತನ್ನ ಪುಟ್ಟ ಮಗುವಿನೊಂದಿಗೆ ಇವರ ಮನೆಗೆ ಬಂದಾಗ ಅದು ತೊದಲ್ನುಡಿಯಲ್ಲಿ "ಗಿರಿಮಾವ" ಎಂಬುದು ಸಹಜವೇ ತಾನೇ?

◆

ಮನದೊಳಗಿನ ಗಿರಿಧರರ ಸವಿನೆನಪು

– ಕೆ.ಎಸ್.ವೆಂಕಪ್ಪ, ಶೃಂಗೇರಿ
ಉಪನ್ಯಾಸಕರು, ಶ್ರೀ ಜೆ.ಸಿ.ಬಿ.ಎಂ.ಕಾಲೇಜು,
೯೪೪೯೯೯೬೮೪೩

ಸಚ್ಚಾರಿತ್ರ್ಯ ಹೊಂದಿದ ಕುಟುಂಬದ ಕುಡಿಯು; ಅಧ್ಯಯನಶೀಲತೆಯೊಂದಿಗೆ, ಸುಸಂಸ್ಕೃತರ ಸಂಸರ್ಗದಿಂದ ಲೋಕಾನುಭವಹೊಂದಿ ಆದರ್ಶಪ್ರಾಯವಾಗಿ ಬೆಳೆಯುತ್ತದೆ. 'ವಿದ್ಯಾ ದದಾತಿ ವಿನಯಂ' ಎಂಬಂತೆ ಉತ್ಕೃಷ್ಟಮಟ್ಟದ ವಿದ್ಯೆ ದೊರೆತಾಗ ವಿನಯ ಸಹಜವಾಗಿಯೆ ಮೈದಾಳುತ್ತದೆ. ವಿದ್ಯೆ ಮತ್ತು ವಿನಯಗಳೆರಡೂ ಮೈದಾಳಿದಾತನು ತುಂಬಿದ ಕೊಡದಂತಿದ್ದು ಎಲ್ಲರ ಮನದಲ್ಲೂ ನೆಲೆಯಾಗಿರುತ್ತಾನೆ. ಈ ಮಾತಿಗೆ ನಿದರ್ಶನ ಡಾ। ಸಿ. ವಿ. ಗಿರಿಧರಶಾಸ್ತ್ರಿಯವರು. ಸರಳ ಸಜ್ಜನಿಕೆಯ ಸಾಕಾರ ಮೂರ್ತಿಯಾಗಿ, ಅಗಾಧ ಪಾಂಡಿತ್ಯದ ನಿಧಿಯಾಗಿ, ದೇಶ ಭಾಷೆಗಳು ಎಲ್ಲೆ ಮೀರಿದ, ತರ-ತಮ ಭೇದವಿಲ್ಲದೆ ಆಬಾಲವೃದ್ಧರಾದಿಯಾಗಿ ಎಲ್ಲರ ಪ್ರೀತಿ ಹಾಗೂ ಗೌರವಕ್ಕೆ ಪಾತ್ರರಾಗಿದ್ದಾರೆ.

ನಾನು ಹತ್ತನೇ ತರಗತಿ ಓದುತ್ತಿರುವಾಗಲೇ ಅವರ ಬಗ್ಗೆ ಕುತೂಹಲಿಗನಾಗಿದ್ದೆ. ಶ್ರೀಮಠದ ಆಡಳಿತಾಧಿಕಾರಿಗಳಾಗಿ ಎಲ್ಲರ ಪ್ರೀತಿ ಗೌರವದೊಂದಿಗೆ ಭಯ – ಭಕ್ತಿಯು ಎದ್ದುಕಾಣಿಸುತ್ತಿತ್ತು. ನಮ್ಮೂರಿನ ಅನೇಕರು ಶ್ರೀಮಠದ ಉದ್ಯೋಗದಲ್ಲಿದ್ದರು. ಅವರು ಯಾವಾಗಲೂ ಆಡಳಿತಾಧಿಕಾರಿಗಳ ಕುರಿತು ಹೆಮ್ಮೆಯ ಮಾತುಗಳನಾಡುತ್ತಿದ್ದರು. ನಾನು ಇವರನ್ನು ನೋಡುವ ಹಾಗೂ ಕೇಳುವ ಆಸೆ ಇಮ್ಮಡಿಸುತ್ತಿತ್ತು. ಆ ದಿನದಲ್ಲಿ ಕಂಡ ಅವರ ರೂಪ ಇಂದೂ ನನ್ನ ಕಣ್ಣ ಮುಂದೆ ಹಾಗೆಯೇ ಇದೆ.

ಕಾಲೇಜು ಉಪನ್ಯಾಸಕನಾಗಿ ಇಪ್ಪತ್ತು ವರ್ಷಗಳಿಂದಲೂ ಅವರೊಂದಿಗೆ ನಿಕಟಸಂಪರ್ಕದಲ್ಲಿ ಇದ್ದೇನೆ. ನನ್ನ ವೃತ್ತಿಗೆ ಮಾರ್ಗದರ್ಶನ ನೀಡಿ, ಆತ್ಮಸ್ಥೈರ್ಯ ತುಂಬಿ ಹುರಿದುಂಬಿಸಿದ್ದಾರೆ. ಕಾಲೇಜಿನ ಚಟುವಟಿಕೆಗಳಲ್ಲಿ ಭಾಗವಹಿಸಲು ಪ್ರೇರೇಪಿಸಿದ್ದಾರೆ. ಅವರೊಂದಿಗೆ 'ಭಾಮತಿ' 'ನೂಪುರ' 'ಅಧ್ಯಯನ ಕೂಟ' 'ವಿಚಾರ ವೇದಿಕೆ' ಮೊದಲಾದವುಗಳನ್ನು ನಡೆಸುವ ಸದವಕಾಶ ದೊರಕಿದೆ. ಕಾರ್ಯಕ್ರಮದ ಸಂಪನ್ಮೂಲ ವ್ಯಕ್ತಿಯಾಗಿ ಹೋಗಲು ಬೆಂಬಲದ ಜೊತೆಗೆ ಮಾರ್ಗದರ್ಶನ, ಮಾಹಿತಿ ಹಾಗೂ ಅಗತ್ಯ ಸಲಕರಣೆಗಳನ್ನು ಒದಗಿಸಿಕೊಟ್ಟಿದ್ದಾರೆ. ಸಂಶೋಧನೆ, ಅಧ್ಯಯನ, ಕ್ಷೇತ್ರಕಾರ್ಯ ಮೊದಲಾದವುಗಳಿಗೆ ಮಾರ್ಗದರ್ಶನ ಮಾಡಿದ್ದಾರೆ. ನನ್ನ ವೈಯಕ್ತಿಕ ಸಮಸ್ಯೆಗೆ ಪರಿಹಾರ

ನೀಡಿದ್ದಾರೆ. ಕೇವಲ ನನ್ನೊಬ್ಬರಿಗೆ ಮಾತ್ರವಲ್ಲದೆ ಕಾಲೇಜಿನ ಕೆಲವು ಉಪನ್ಯಾಸಕರಿಗೆ ಇದೇ ರೀತಿಯ ಸಹಕಾರ ನೀಡಿದ್ದಾರೆ.

ಇಂದಿನ ಭ್ರಷ್ಟವ್ಯವಸ್ಥೆಯಲ್ಲಿ ಪ್ರಮಾಣಿಕತೆಗೆ ಬೆಲೆಯಿಲ್ಲ. ಎಲ್ಲರೊಳಗೊಂದಾದರೆ ಮಾತ್ರ ಬದುಕಲು ಸಾಧ್ಯ. ಇಲ್ಲವಾದರೆ ಕಡೆಗಣಿಸುವುದು ಮಾತ್ರವಲ್ಲದೆ ಹೊಸಕಿಹಾಕುತ್ತಾರೆ. ಇಂತಹ ಸಂದಿಗ್ಧ ಸ್ಥಿತಿಯಲ್ಲಿಯೂ ಎಲ್ಲಾ ರೀತಿಯ ಗೌರವಾದರಗಳಿಗೆ ಶಾಸ್ತ್ರಿಗಳು ಪಾತ್ರರಾಗಿರುವುದು ಗಮನಾರ್ಹವಾದುದು. ಕಾಲೇಜಿನಲ್ಲಿ ಕರ್ನಾಟಕ ರಾಜ್ಯ ಮುಕ್ತವಿಶ್ವವಿದ್ಯಾನಿಲಯ ಆರಂಭವಾದಂದಿನಿಂದ ಅದರ ಸಂಯೋಜಕರಾಗಿ ಸೇವೆಸಲ್ಲಿಸಿದ್ದಾರೆ. ಈ ಕೇಂದ್ರದಲ್ಲಿ ಅತಿಹೆಚ್ಚು ವಿದ್ಯಾರ್ಥಿಗಳು ಸೇರ್ಪಡೆಗೊಳ್ಳಲು ಹಾಗೂ ಸಂಪರ್ಕ ತರಗತಿಗೆ ಅತಿ ಹೆಚ್ಚು ವಿದ್ಯಾರ್ಥಿಗಳು ಭಾಗವಹಿಸಲು ಪ್ರಮುಖ ಕಾರಣರಾಗಿದ್ದಾರೆ. ಅದೆಷ್ಟೋ ಜ್ಞಾನದಾಹಿಗಳು ಇವರಿಂದ ತಣಿದಿದ್ದಾರೆ. ಬಹುಭಾಷಾ ಪಂಡಿತರಾಗಿರುವ ಇವರು ಇತ್ತೀಚೆಗೆ ಶ್ರೀ ಜೆ. ಸಿ. ಬಿ. ಎಂ. ಪದವಿ ಪೂರ್ವ ಕಾಲೇಜಿನ ಪ್ರಾಂಶುಪಾಲರಾಗಿ ಸೇವೆಯಲ್ಲಿ ತೊಡಗಿದ್ದಾರೆ. ಕಾಲೇಜು NAAC ನಲ್ಲಿ 'A' ಶ್ರೇಣಿ ಪಡೆಯಲು ಇವರ ಪರಿಶ್ರಮ ಅಗಾಧವಾದುದು. ಇವರ ದೂರದೃಷ್ಟಿಯ ಸಮಾಜಮುಖಿಯಾದ ಕಾರ್ಯಕ್ರಮಗಳು ಹೆಚ್ಚು ಪರಿಣಾಮ ಬೀರಿವೆ. N.S.S, N.C.C, ವಿಭಾಗವಾರು ಕಾರ್ಯಕ್ರಮಗಳ ಆಯೋಜನೆಯಲ್ಲಿ ಹೆಚ್ಚು ಶ್ರಮ ಹಾಕಿದ್ದಾರೆ. ರಾಜ್ಯ, ರಾಷ್ಟ್ರೀಯ ಮಟ್ಟದ ವಿಚಾರ ಸಂಕಿರಣ, ಉಪನ್ಯಾಸ, ಕಾರ್ಯಗಾರ, ಶಿಬಿರ ಮೊದಲಾದವುಗಳು ನಡೆದಿವೆ.

ತಂದೆ ತಾಯಿಯರನ್ನು ಕೊನೆಯ ಕಾಲದಲ್ಲಿ ನೋಡಿ ಸೇವೆ ಸಲ್ಲಿಸುವ ಸದವಕಾಶ ಎಲ್ಲ ಮಕ್ಕಳಿಗೂ ದೊರೆಯುವುದಿಲ್ಲ. ಅಂತಹ ಅವಕಾಶ ದೊರೆತರೆ ಅದು ಯಾತ್ರೆ ವ್ರತಗಳಿಗಿಂತಲೂ ಹೆಚ್ಚು ಪುಣ್ಯಕರವಾದುದು ಎಂಬ ಮಾತಿದೆ. ಅವರ ತಾಯಿ ಲಲಿತಮ್ಮನವರನ್ನು ಚೆನ್ನಾಗಿ ಬಲ್ಲೆ. ಶ್ರೀ ಶಂಕರಭಗವತ್ಪಾದಾಚಾರ್ಯರು ಹಾಗೂ ಮಾತೃಶ್ರೀ ಆರ್ಯಾಂಬಾ ದೇವಿಯವರ ಸಂಬಂಧವಿದ್ದ ಹಾಗೆ, ತಾಯಿ – ಮಗನ ಸಂಬಂಧ ಎಂದು ಭಾವಿಸಿದ್ದೂ ಉಂಟು. ತಾಯಿಗೆ ತಕ್ಕ ಮಗನಾಗಿ ಮಾತೃ ಹೃದಯವನ್ನು ಗೆದ್ದವರು. ಮಾತೃಶ್ರೀಯವರು ಎಲ್ಲರನ್ನೂ ಪ್ರೀತ್ಯಾದರದಿಂದ ಕಾಣುತ್ತಿದ್ದರು. ಇಳಿವಯಸ್ಸಿನಲ್ಲೂ ಮನೆಗೆ ಬಂದವರಿಗೆ ಏನಾದರೂ ಕೊಡುತ್ತಿದ್ದರು. ಮಡದಿ ಮಕ್ಕಳಿಗೂ ಕೊಟ್ಟು ಕಳುಹಿಸುತ್ತಿದ್ದರು. ಮನೆಗೆ ಆಗಿಂದಾಗ್ಗೆ ಬಂದು ಹೋಗುತ್ತಿರಿ ಎಂದು ಹೇಳುತ್ತಿದ್ದರು.

ಮಾತೃಶ್ರೀಯವರು ಗಿರಿಧರರನ್ನು ಅಕ್ಕರೆಯಿಂದ ಕೊನೆಯವರೆಗೂ ಕಂಡಿದ್ದಾರೆ. ಮಗನಿಗೆ ವಯಸ್ಸಾಗಿದ್ದರೂ ಚಿಕ್ಕಮಗುವೆಂದೇ ಭಾವಿಸಿ, ಅವರೊಂದಿಗೇ ಇರಲು

ಇಷ್ಟಪಟ್ಟರು. ಮಗ ಹೊರಗಡೆ ಹೋದಾಗ ಬರುವುದು ತಡವಾದರೆ, ಯಾವಾಗ ಬರುತ್ತಾನೆಂದು ನಮ್ಮೆಲ್ಲರಲ್ಲೂ ವಿಚಾರಿಸುತ್ತಿದ್ದರು. ಸದಾ ಅವರ ನೆನಪಿನಲ್ಲಿಯೆ ಇರುತ್ತಿದ್ದರು. ಒಮ್ಮೆ ಸಹೋದರಿ ಹಾಗೂ ಸಹೋದರನ ಮನೆಯಲ್ಲಿ ಸ್ವಲ್ಪ ಸಮಯ ಇದ್ದು ಬರಲು ನಿಶ್ಚಯಿಸಿ, ಏರ್ಪಾಟು ಮಾಡಿದ್ದ ವಾಹನವೇರಿ ಕೆಲವು ದೂರ ಕ್ರಮಿಸಿದ ಮೇಲೆ, "ಸಂಚಾರ ಮಾಡಲು ಸಾಧ್ಯವಿಲ್ಲ. ಹಿಂದಿರುಗಿಸಿ" ಎಂದು ಕಾಡಿ ಬೇಡಿ ಮತ್ತೆ ಇದೇ ಮನೆಯಲ್ಲಿಯೆ ನೆಲೆಸಿದರು. ಇದು ಬ್ರಹ್ಮಚಾರಿ ಮಗನ ಮೇಲಿನ ಅಕ್ಕರೆ ಹಾಗೂ ಶೃಂಗೇರಿ ಪರಿಸರದ ಮೇಲಿನ ಅಭಿಮಾನವನ್ನು ಸೂಚಿಸುತ್ತದೆ.

ಅವರೊಂದಿಗಿನ ಇಪ್ಪತ್ತು ವರ್ಷಗಳ ಒಡನಾಟದ ಸಂದರ್ಭದಲ್ಲಿ, ನಾನು ಗಮನಿಸಿದಂತೆ ಯಾರೊಬ್ಬರನ್ನೂ ಅವಹೇಳನ, ಅಪಮಾನ, ನಿಂದನೆ, ತೇಜೋವಧೆ, ಟೀಕೆ, ಮೂದಲಿಕೆ ಮೊದಲಾದವುಗಳನ್ನು ಮಾಡಿದವರಲ್ಲ. ಅಹಂಕಾರದಿಂದ ಬೀಗಿದವರಲ್ಲ. ಸರಳ, ಸಜ್ಜನನಾಗಿಯೆ ಎಲ್ಲರ ಪ್ರೀತಿಗೆ ಪಾತ್ರರಾದವರು. ಹಾಗಿರುವುದರಿಂದಲೆ "ತುಂಬಿದ ಕೊಡ ತುಳುಕುವುದಿಲ್ಲ" ಎಂಬ ಮಾತು ರೂಢಿಯಲ್ಲಿರುವುದು.

◆

ಮಹಾಮೌನಿ–ಜ್ಞಾನಿ

– ದ.ರಾಜಣ್ಣ, ದಂದೂರು
ನಿವೃತ್ತ ಉಪಾಧ್ಯಾಯರು, ೯೪೪೮೨೧೫೧೭೩

ಸಿ.ವಿ.ಗಿರಿಧರಶಾಸ್ತ್ರಿಗಳವರನ್ನು ನಾನು ಎಂದೇ ಭೇಟಿಯಾಗಲಿ ಆಗ ಅವರ ಬಾಯಿಂದ ಹೊರಟಶಬ್ದ. "ಬಾ. ರಾಜಣ್ಣ" ಎಂದು ಬಾಯ್ತುಂಬ ಕರೆಯುತ್ತಿದ್ದ ಆ ನುಡಿ ನನ್ನನ್ನು ಅವರ ಹತ್ತಿರಕ್ಕೆ ಹೋಗುವಂತೆ ಮಾಡಿತ್ತು. ಈ ಒಂದು ಸಲಿಗೆ ನನ್ನಲ್ಲಿದ್ದ ಕವಿತಾಶಕ್ತಿಗೆ ಪೂರಕವಾಗಿ ನಿಂತಿತ್ತು. ಗಿರಿಧರಶಾಸ್ತ್ರಿಗಳವರು ಸಂಪ್ರದಾಯ, ಧರ್ಮಕ್ಕೆ ಬದ್ಧರೂ, ಸಾಹಿತ್ಯಾಸಕ್ತರು ಆಗಿದ್ದಾರೆ. ಶ್ರೀ ಮಠದ ಆಡಳಿತಾಧಿಕಾರಿಗಳಾಗಿದ್ದ ಶ್ರೀಯುತರು ನನ್ನ ಮೊದಲ ಕವನಸಂಕಲನ "ಗಿರಿಸ್ಪಂದನ" ಕೃತಿಯ ಮುದ್ರಣಕ್ಕೆ ಸಹಕಾರ ನೀಡಿ, ಶ್ರೀ ಶಾರದೆಯ ಅನುಗ್ರಹಪೂರಿತ ಬ್ರಹ್ಮೈಕ್ಯ ಜಗದ್ಗುರು ಅಭಿನವವಿದ್ಯಾತೀರ್ಥ ಮಹಾಸ್ವಾಮಿಗಳವರ ಆಶೀರ್ವಾದ ಪತ್ರ ನೀಡಿ ಸಹಕರಿಸಿ ಪ್ರೋತ್ಸಾಹಿಸಿದ್ದು ಇನ್ನೂ ನನ್ನ ಮನದಲ್ಲಿದೆ. ಅಂದಿನ ಆ ಪ್ರೋತ್ಸಾಹ ಇಂದು ನನ್ನನ್ನು ಒಬ್ಬ ಸಾಹಿತಿ ಎಂದು ಗುರುತಿಸುವ ಮಟ್ಟಿಗೆ ಅವಕಾಶ ಕಲ್ಪಿಸಿದೆ.

ಶೃಂಗೇರಿಯಲ್ಲಿ ೧೯೮೫ರಲ್ಲಿ ನಡೆದ ಮಲಹಾನಿಕರೇಶ್ವರ ದೇವಾಲಯದ ಮಹಾ ಕುಂಭಾಭಿಷೇಕದ ಸಂದರ್ಭದಲ್ಲಿ ಸಾಹಿತ್ಯ ಹಾಗೂ ಸಾಂಸ್ಕೃತಿಕ ಕಾರ್ಯಕ್ರಮಗಳನ್ನೂ ಆಯೋಜಿಸಿ ಆ ಕಾರ್ಯಕ್ರಮಗಳ ಜವಾಬ್ದಾರಿಯನ್ನು ದಿ ॥ ಹೆಚ್.ಎಲ್. ಸುಬ್ರಹ್ಮಣ್ಯ ಹಾಗೂ ನನಗೆ ವಹಿಸಿ. ಅದನ್ನು ನಡೆಸಲು ಅನುವುಮಾಡಿಕೊಟ್ಟಿದ್ದು ಒಂದು ವಿಶೇಷವೆನಿಸುತ್ತದೆ. ಆ ಸಂದರ್ಭದಲ್ಲಿ ನನ್ನ ತಂದೆ–ತಾಯಿ ಶ್ರೀ ಮಠದ ಈ ಕಾರ್ಯಕ್ರಮವನ್ನು ನೋಡಲು ಬಯಲುನಾಡಿನಿಂದ ಶೃಂಗೇರಿಗೆ ಬಂದಿದ್ದರು. ಆಗ ನನ್ನ ತಂದೆಯವರು ನಿನಗೆ ಶಾರದೆಯ ಮಡಿಲಲ್ಲಿ ಸೇವೆ ಸಲ್ಲಿಸುವ ಅವಕಾಶ ಸಿಕ್ಕಿದ್ದು ಪೂರ್ವಜನ್ಮದ ಪುಣ್ಯ "ಮಗ" ಎಂದು ಹೇಳಿ ಶ್ರೀ ಮಠದಿಂದ ಬಂದಿದ್ದ ಕರೆಯ ಪತ್ರವನ್ನು ಓದಿ ಸಂತೋಷಪಟ್ಟಿದ್ದರು. ಈ ಅವಕಾಶ ನೀಡಿದ್ದ ಗಿರಿಧರಶಾಸ್ತ್ರಿಗಳು ಮಠದಲ್ಲಿನ ಪ್ರವಚನ ಮಂದಿರದಲ್ಲಿ ನಡೆದ "ಧರ್ಮ ಮತ್ತು ಸಾಹಿತ್ಯ" ಸಮ್ಮೇಳನದ ಜವಾಬ್ದಾರಿಯನ್ನು ನೀಡಿದ್ದರು. ಇದರಿಂದ ಹಲವಾರು ಹಿರಿಯ ಸಾಹಿತಿಗಳ ಸಂಪರ್ಕ ಹೊಂದಲು ಅನುಕೂಲವಾಯಿತು.

ಸಾಹಿತ್ಯ ಚಟುವಟಿಕೆಗಳಲ್ಲಿ ಸಕ್ರಿಯರಾಗಿದ್ದ ಗಿರಿಧರಶಾಸ್ರೀಗಳವರು, ಶೃಂಗೇರಿ ತಾಲ್ಲೂಕು ಕನ್ನಡ ಸಾಹಿತ್ಯಪರಿಷತ್ ವತಿಯಿಂದ ನಡೆಯುತ್ತಿದ್ದ ಅನೇಕ

ದತ್ತಿಉಪನ್ಯಾಸಗಳನ್ನು ಸಾಹಿತ್ಯಾಸಕ್ತರಿಗೆ ಉಣಬಡಿಸಿದವರು. ಅವರ ಸಾಹಿತ್ಯ ಪ್ರೌಢಿಮೆಯ ವಿಷಯ ಸಂಪತ್ತನ್ನು ಸವಿಯುವ ಭಾಗ್ಯ ನಮ್ಮದಾಗಿದೆ. ಒಮ್ಮೆ ಶ್ರೀ ಜಗದ್ಗುರು ಅಭಿನವ ವಿದ್ಯಾತೀರ್ಥ ಮಹಾಸ್ವಾಮೀಜಿಯವರನ್ನು ಕುರಿತು ಮಾತನಾಡುವ ಸಂದರ್ಭದಲ್ಲಿ ಹಲವು ವರ್ಷಗಳ ಕಾಲ ಶ್ರೀಮಠದ ಆಡಳಿತಾಧಿಕಾರಿಗಳಾಗಿದ್ದ ಶಾಸ್ತ್ರಿಗಳವರು ಗುರುಗಳೊಂದಿಗೆ ಉತ್ತರ ಭಾರತದ ಧರ್ಮ ದಿಗ್ವಿಜಯದ ಯಾತ್ರೆಯಲ್ಲಿನ ಅನುಭವಗಳನ್ನು ಎಳೆಎಳೆಯಾಗಿ ಬಿಡಿಸಿ ಹೇಳಿದಾಗ ನಮಗೆ ಗುರುಸಾನಿಧ್ಯದಲ್ಲಿದ್ದು ನೋಡಿದಂತಹ ಅನುಭವವಾಗಿತ್ತು.

ಪ್ರಸ್ತುತ ಶೃಂಗೇರಿ ಜೆ.ಸಿ.ಬಿ.ಎಂ. ಕಾಲೇಜಿನಲ್ಲಿ ಇಂಗ್ಲೀಷ್ ಪ್ರಾಧ್ಯಾಪಕರಾಗಿ, ಪದವಿ ಪೂರ್ವ ಶಿಕ್ಷಣದ ಪ್ರಾಂಶುಪಾಲರಾಗಿ ಹಾಗೂ ಮೈಸೂರು ಮುಕ್ತವಿಶ್ವವಿದ್ಯಾನಿಲಯದ ಕೆಲಸವನ್ನೂ ನಿರ್ವಹಿಸುತ್ತಿರುವುದು ಅವರ ಕಾರ್ಯದಕ್ಷತೆಗೆ ಹಿಡಿದ ಕೈಗನ್ನಡಿ. ಶ್ರೀಯುತರು ಹೋಮಿಯೋಪತಿ ಚಿಕಿತ್ಸೆ ನೀಡುವಲ್ಲಿ ಸಿದ್ಧಹಸ್ತರು. ಪ್ರತಿ ಭಾನುವಾರ ಶೃಂಗೇರಿ ಪರಿಸರದ ಹಲವಾರು ಜನರಿಗೆ ಉಚಿತ ಚಿಕಿತ್ಸೆ ನೀಡುತ್ತಿರುವುದು ಅವರ ಸಾಮಾಜಿಕ ಕಳಕಳಿಗೆ ದ್ಯೋತಕವಾಗಿದೆ. ಶ್ರೀ ಗಿರಿಧರಶಾಸ್ತ್ರಿಗಳವರ ಕಾಯಕವು ಸದ್ದುಗದ್ದಲವಿಲ್ಲದ್ದು. ನನ್ನ ಪಾಲಿಗೆ ೩೫ ವರ್ಷಗಳಿಂದಲೂ ಮಾರ್ಗದರ್ಶಕರಾಗಿದ್ದಾರೆ. ಸೃಹದಯಿಗಳಾದ ಶ್ರೀ ಗಿರಿಧರಶಾಸ್ತ್ರಿಗಳವರಿಗೆ ಶ್ರೀ ಶಾರದಚಂದ್ರಮೌಳೀಶ್ವರರ ಜಗದ್ಗುರುಗಳ ಅನುಗ್ರಹವು ಸದಾ ಇರಲಿ ಎಂದು ವಿನಮ್ರವಾಗಿ ಪ್ರಾರ್ಥಿಸುತ್ತೇನೆ.

◆

ಆತ್ಮೀಯರಾದ ಸಿವಿಜಿ

– ಡಾ|| ಬದರೀನಾರಾಯಣರಾವ್, ಕೆ.ಎಸ್.ಗೀತಾರಾವ್
ಜ್ಯೋತಿಷ್ಕರು, ಶೃಂಗೇರಿ
೯ಳಳಲಲಳ೩೦೨೬

ನಮ್ಮ ಜೀವನ ನಡೆಯಲ್ಲಿ ಅನೇಕ ಅನುಭವಗಳನ್ನು ಪಡೆಯುತ್ತೇವೆ. ಹಿತ ಅನುಭವ ಅಹಿತಕರ ಅನುಭವ. ಪ್ರೀತಿ, ವಾತ್ಸಲ್ಯ, ಆತ್ಮೀಯತೆ ಮತ್ತು ಮಿತ್ರಭಾವ ಹಾಗೂ ಆಪ್ತಮಿತ್ರ ವಿಶ್ವಾಸಗಳು ದೊರೆಯುವುದು ಕೆಲವೇ ಸಜ್ಜನರೊಂದಿಗೆ ಮಾತ್ರ. ಪ್ರಾಯಶಃ ಇದಕ್ಕೂ ಋಣಾನುಬಂಧವಿರಬೇಕೇನೋ ಅನಿಸುತ್ತದೆ. ಅಂತಹ ಸತ್ಪಾತ್ರರನ್ನು ದೊರೆಕಿಸಿಕೊಳ್ಳಲು ನಮ್ಮ ಪ್ರಯತ್ನ ಅಗತ್ಯ. ಅಂತಹ ಸಮಾನ ಭಾವನೆ ಮತ್ತು ವಿದ್ಯೆಯ ನಂಟು ಬಹು ಅಪರೂಪ. ಇವೆಲ್ಲದರ ಪ್ರತಿರೂಪ ನಮ್ಮ ಸಿ.ವಿ.ಜಿ.

ನಮ್ಮ ಹಿರಿಯರಿಂದ ಬಂದ ಸಂಸ್ಕಾರವೂ ಈ ಮಾರ್ಗದಲ್ಲಿ ಸಹಕಾರಿಯಾಗಿದೆ. ಅಂತಹ ಅಮೂಲ್ಯ ರತ್ನವನ್ನು ಪಡೆಯುವುದು ನಮ್ಮ ಯೋಗವೇ ಸರಿ. ದಂಪತಿಗಳಾದ ನಮಗೆ ಶೃಂಗೇರಿಯಲ್ಲಿ ವಾಸಿಸುವ ಮಹಾಭಾಗ್ಯ ಲಭ್ಯವಾಗಿದ್ದು ೧೯೯೧ನೇ ಇಸವಿಯಲ್ಲಿ. ಹೊಸದಾಗಿ ಊರಿಗೆ ಬಂದ ನಮಗೆ ಪರಿಚಿತರಾದ ಶ್ರೀ ಗಿರಿಧರಶಾಸ್ತ್ರಿಗಳು ಆತ್ಮೀಯರಾದರು. ಅವರಿಂದ ಅನೇಕ ವಿಷಯಗಳನ್ನು ಕಲಿತೆವು. ನಿತ್ಯ ಪೂಜೆ ಮಾಡಲು ಪ್ರೇರಣೆ ಹಾಗೂ ಸಂಕಷ್ಟದಲ್ಲಿ ಸಲಹೆಗಳು ದೊರೆಯುತ್ತಿದ್ದವು. ಈಗಲೂ ನಮ್ಮ ಪರಸ್ಪರ ವಿಚಾರ ವಿನಿಮಯ ಮುಂದುವರೆಯುತ್ತಿದೆ.

ವಿದ್ವಾಂಸರಾದ ಇವರಲ್ಲಿ ಇರುವ, ಶ್ರೀ ಜಗದ್ಗುರುಗಳ ಪವಿತ್ರ ಸಾಮೀಪ್ಯದಿಂದ ಪರಿಪಕ್ವವಾದ ಜೀವನ ರಸ ಫಲವನ್ನು ಅನುಭವಿಸಿದ ಮನೋಭಾವ, ಸಮರ್ಪಣಾ ಸಂಕಲ್ಪ ಹಾಗೂ ಧರ್ಮಶಾಸ್ತ್ರದಲ್ಲಿನ ಪರಿಪಕ್ವತೆ, ಧಾರ್ಮಿಕ ಶಕ್ತಿ ಮತ್ತು ಸೇವಾ ಮನೋಭಾವ – ನಮಗೆ ದಾರಿದೀಪವಾಗಿದೆ.

ಈ ಬಾರಿ ಕನ್ನಡೋತ್ಸವದಲ್ಲಿ ಅಧ್ಯಕ್ಷರಾಗಿ, ಯಾವ ಭಿನ್ನಾಭಿಪ್ರಾಯವೂ ಇಲ್ಲದೆ ಉತ್ಸವವನ್ನು ಫಲಪ್ರದವಾಗಿ ನಡೆಸಿಕೊಟ್ಟ ಹಿರಿಮೆ ಶ್ರೀಯುತ ಗಿರಿಧರ ಶಾಸ್ತ್ರಿಗಳದ್ದು. ಪ್ರಾಂಶುಪಾಲರಾಗಿ ಅನೇಕ ಹೊಸ ಕಾರ್ಯಕ್ರಮಗಳ ಅನುಷ್ಠಾನದಿಂದ ಪೋಷಕರ ಗೌರವಕ್ಕೆ ಪಾತ್ರರಾಗಿದ್ದಾರೆ. ವಾಹನ ಚಾಲನೆ ಅವರಿಗೆ ವಿಶ್ರಾಂತಿಯ ಅನುಭವ. ಅವರೊಂದಿಗೆ ಪ್ರಯಾಣದಲ್ಲಿ ನಮಗೆ ಅನೇಕ ವಿಷಯಗಳಲ್ಲಿನ ಜಿಜ್ಞಾಸೆಗೆ ಪರಿಹಾರ ದೊರೆಯುತ್ತದೆ.

ಶ್ರೀಯುತರು ಸಂಗೀತದಲ್ಲಿ ಆಸಕ್ತರು, ವೈದ್ಯಕೀಯದಲ್ಲಿ ಪಂಡಿತರು, ಶಾಸ್ತ್ರದಲ್ಲಿ ಸಲಹೆಗಾರರು. ಮಿತೃತ್ವದಲ್ಲಿ ಆತ್ಮೀಯರು. ಗುರುಸ್ಮರಣೆಯಲ್ಲಿ ಅಗ್ರಗಣ್ಯರು. ಇವರ ಹಲವು ಭಾಷಾ ಪ್ರಾವೀಣ್ಯವನ್ನು ಅನೇಕ ಬಾರಿ ನಾವು ಉಪಯೋಗಿಸಿಕೊಂಡಿದ್ದೇವೆ. ನಾವಿಬ್ಬರೂ ಇವರ ಮಾತೃಶ್ರೀಯವರ ವಿಶ್ವಾಸಕ್ಕೂ ಪಾತ್ರರಾಗಿದ್ದೆವು. ಶ್ರೀಯುತರು ಅನವರತವೂ ಮಾತೃ ಸೇವೆಯಲ್ಲಿ ಶ್ರದ್ಧಾವಂತರಾಗಿದ್ದರು. ಇವರ ಕುಟುಂಬದಲ್ಲಿ ವಿದ್ವಾಂಸರು, ಕಲಾವಿದರು ತುಂಬಿದ್ದಾರೆ.

ಅರವತ್ತು ಸಂವತ್ಸರಗಳನ್ನು ಪೂರ್ಣಗೊಳಿಸುತ್ತಿರುವ ಈ ಸಂದರ್ಭದಲ್ಲಿ ಅವರ ಸಹಯೋಗವನ್ನು ಸ್ಮರಿಸುತ್ತಾ – ಅವರ ಸ್ನೇಹ ವಿಶ್ವಾಸ ಪ್ರೀತಿ ನಮ್ಮ ಮೇಲೆ ಸದಾ ಇರಲಿ ಎಂದು ಬೇಡಿಕೊಳ್ಳುತ್ತೇನೆ.

◆

ಮಾತು ಬೆಳ್ಳಿ ಮೌನ ಬಂಗಾರ

– **ಅಕ್ಷಯ ಮರಾಠೆ, ಪುಣೆ**
ಇಂಜಿನಿಯರ್, ೯೦೨೮೭೮೩೬೭೫

ಅದು ೨೦೦೨ನೆಯ ಇಸವಿಯ ಜೂನ್. ನಮಗೆ ದ್ವಿತೀಯ ಪಿ.ಯು.ಸಿ. ತರಗತಿಯ ಆರಂಭದ ದಿನ. ಮೊತ್ತ ಮೊದಲನೆಯ ಅವಧಿಯಲ್ಲಿ ಪಾಠ ಮಾಡಿದ್ದು ಶ್ರೀ ಸಿ. ವಿ.ಜಿ ಸರ್. ಸಂಪೂರ್ಣ ಅವಧಿಯಲ್ಲಿ ಸರ್ ಒಂದೂ ಮಾತನಾಡಲಿಲ್ಲ, ಎಲ್ಲವೂ ಬರವಣಿಗೆಯ ಮುಖಾಂತರ. ನಮಗೆಲ್ಲಾ ಗೊಂದಲವೋ ಗೊಂದಲ. ತರಗತಿಯಲ್ಲಿ ಮಾತನಾಡದೇ ಪಾಠ ಮಾಡುವುದು ಹೇಗೆ ಸಾಧ್ಯ ಎಂಬುದು ಇನ್ನೂ ದೊಡ್ಡ ಪ್ರಶ್ನೆ. ಚಿದಂಬರ ರಹಸ್ಯ ಭೇದಿಸಿದ ಸರ್ ಕೊನೆಯಲ್ಲಿ ಅಂದು ಏಕಾದಶಿ ಇರುವುದರಿಂದ ತಾವು ಮಾತನಾಡುವುದಿಲ್ಲ. ಸಾಧಾರಣವಾಗಿ ಏಕಾದಶಿಯಂದು ರಜೆಯಲ್ಲಿರುತ್ತಾರೆ. ಆದರೆ ಅಂದು ತರಗತಿ ಆರಂಭದ ಮೊದಲ ದಿನವಾದ್ದರಿಂದ ಬರಲೇಬೇಕಾಯ್ತು ಎಂದರು. ಆನಂತರ ನಮ್ಮ ತರಗತಿಯಲ್ಲಿ ಒಂದಿಬ್ಬರಿಗೆ ಮುಂದಿನ ಏಕಾದಶಿ ನೋಡುವುದೇ ಕೆಲಸ.

ಒಮ್ಮೆ ಶ್ರೀ ಸಿ.ವಿ.ಜಿ ಸರ್, ಇಂಗ್ಲಿಷ್ ಪಾಠ ಮಾಡುತ್ತಿದ್ದರು. ಆಗ ನಮ್ಮ ಹಿರಿಯ ತರಗತಿಯವರು ಪಾಠವನ್ನು ತೊರೆದು ಸುತ್ತುತ್ತಾ ಬಂದರು. ಅವರನ್ನು ಬಾಗಿಲ ಬಳಿ ಗಮನಿಸಿದ ಸರ್ "There will be inspection committes that ensure smooth functioning" ಎಂದರು. ಆ ಮಾತು ಮುಗಿಯುತ್ತಿದ್ದಂತೆ ಇಡೀ ತರಗತಿ ಗೊಳ್ಳೆಂದು ನಕ್ಕಿತು. ಅದೇ ಸಮಯಕ್ಕೆ ಆ ಗುಂಪು ಸುತ್ತುತ್ತಾ ಮುಂಬಂದು ಕಿಟಕಿಯ ಸಮೀಪಕ್ಕೆ ಬಂದಿತು. ಆ ಮಾತಿನ ಸಮಯ ಹೇಗಿತ್ತೆಂದರೆ ಮುಂದೆಂದೂ ಆ ಗುಂಪು ನಮ್ಮ ತರಗತಿಯ ಹತ್ತಿರ ಸುಳಿಯಲಿಲ್ಲ.

ಪ್ರಥಮ ಬಿ.ಎಸ್.ಸಿಯಲ್ಲಿ ಓದುತ್ತಿದ್ದಾಗ ಒಂದು ಅವಧಿಯಲ್ಲಿ ಶಿಕ್ಷಕರು ಬರದಿದ್ದರಿಂದ ಎಲ್ಲಾ ಸಹಪಾಠಿಗಳು ಕಾಲೇಜಿನ ಪ್ರಾಂಗಣದಲ್ಲಿ ಸುತ್ತುತ್ತಿದ್ದೆವು. ಹೀಗೆ ಸಾಗುತ್ತಾ ಸಾಗುತ್ತಾ ಶ್ರೀ ಸಿ.ವಿ.ಜಿ ಸರ್ ಪಾಠ ಮಾಡುತ್ತಿದ್ದಲ್ಲಿಗೆ ಬಂದೆವು. ಮಾಡುತ್ತಿದ್ದ ಪಾಠವನ್ನು ನಿಲ್ಲಿಸಿದ ಸರ್ ಹೊರಗೆ ಬಂದು "ನಿಮಗೆ ಈ ಅವಧಿಯಲ್ಲಿ ಬದಲಿ ಪಾಠವನ್ನು ಆಯೋಜಿಸಿದ್ದೇವೆ" ಎಂದರು. ಅಂದಿನಿಂದ ನಾವು ಕಾಲೇಜಿನಲ್ಲಿ ಸುತ್ತುವಾಗ ಸರ್ ಎಲ್ಲಿ ಪಾಠ ಮಾಡುತ್ತಿದ್ದರು ಎಂಬುದನ್ನು ಗಮನಿಸಿ ಆ ಕಡೆ ತಪ್ಪಿಯೂ ಸುಳಿಯುತ್ತಿರಲಿಲ್ಲ.

◆

ಅಂತರಂಗದ ನುಡಿ ನಮನ

– ಶ್ರೀಮತಿ ಬನಶಂಕರಿ, ಶೃಂಗೇರಿ

ಮುದ್ದು ಮುಖದ ಮುಗ್ಧ ಮನದ
ವಿದ್ಯೆಯ ಗಣಿ ವಿನಯಶೀಲ
ಸರಳ ಜೀವಿ ಸೂಕ್ಷ್ಮಗ್ರಾಹಿ
ಇವರೆ ನಮ್ಮ ಗಿರಿಧರ

ತಾಯಿ ಲಲಿತೆಯ ಪ್ರೇಮಪುತ್ರ
ಭ್ರಾತೃ ಭಗಿನಿಯರ ಪ್ರೀತಿಪಾತ್ರ
ವಿದ್ವಜ್ಜನರ ವಿಶ್ವಾಸಪಾತ್ರ
ಇವರೆ ನಮ್ಮ ಗಿರಿಧರ

ಪಿತೃವಾಕ್ಯ ಪರಿಪಾಲಕ
ಮಾತೃಸೇವಾಸಕ್ತ
ಸದಾ ಅಧ್ಯಯನ ನಿರತ
ಇವರೆ ನಮ್ಮ ಗಿರಿಧರ

ಸಂಸ್ಕೃತಾಂಗ್ಲ ಪಂಡಿತ
ಮಾತೃಭಾಷೆ ಸುಲಲಿತ
ಅಧ್ಯಾಪನದಿ ಪರಿಣತ
ಇವರೆ ನಮ್ಮ ಗಿರಿಧರ

ಏಕಾದಶಿ ಉಪವಾಸದಿಂದ ದೇಹ ಶುದ್ಧಿಗೊಳಸುವ
ಮೌನವ್ರತಾಚರಣೆಯಿಂದ ಮನವ ಶುದ್ಧಿಗೊಳಸುವ
ಧೀರ ಗಂಭೀರ ಚೆಲುವ
ಇವರೇ ನಮ್ಮ ಗಿರಿಧರ

ಆರ್ಷ ವಿದ್ಯಾಕೇಂದ್ರ ಇವರ ವಾಸಸ್ಥಾನ
ವಿದ್ಯಾಕಲಿಕೆಗಿದುವೆ ಕೇಂದ್ರಸ್ಥಾನ
ಆಶ್ರಿತಜನ ಪೋಷಕ ಸ್ಥಾನ
ಸ್ತೋತ್ರಪಾಠ ಪಠಣದಿಂದ ಎಲ್ಲರ ಮನಸ್ಸು ಪಾವನ

ತಲೆಶೂಲೆಯಿಂದ ವಾರಕ್ಕೊಮ್ಮೆ ಮಲಗುವ
ಭಾನುವಾರ ಬಂದಿತೆಂದ್ರೆ ಡಾಕ್ಟರಾಗಿ ಕೂರುವ
ಬಂದು ಕೇಳ್ವ ಜನರಿಗೆಲ್ಲ ಮದ್ದು ಕೊಟ್ಟು ಕಳಸುವ
ಇವರ ನಮ್ಮ ಜೀವ ಬಂಧು ಗಿರಿಧರ

ಬೆಳಗಿನಲ್ಲಿ ಮನೆಗೆಲಸ
ದಿವಸಪೂರ್ತಿ ಕಾರ್ಯಕ್ಷೇತ್ರ
ಬಿಡುವಿನಲ್ಲಿ ಸ್ತೋತ್ರಪಾಠ
ದಣಿವೆ ಕಾಣದಿವರ ದಿನಚರಿ

ಸತತ ಅಭ್ಯಾಸ ನಡೆಸಿ
ಪ್ರಬುದ್ಧ ಪ್ರಬಂಧ ಮಂಡಿಸಿ
ಉತ್ತಮೋತ್ತಮ ಪದವಿ ಗಳಸಿದ
ಡಾ. ಗಿರಿಧರಶಾಸ್ತ್ರಿಗಳಗಿದುವೆ
ನಮ್ಮ ಪ್ರೀತಿಯ ನಮನ

ಶ್ರೀನಾಥಶಾಸ್ತ್ರಿ ಅವರ ಸಂದರ್ಶನ

– ಪ್ರೊ. ಎ.ಗುಂಡಣ್ಣ, ಮೈಸೂರು

ಚಿ.ವಿ.ಶ್ರೀನಾಥಶಾಸ್ತ್ರಿಗಳನ್ನು ೫೦ ವರ್ಷಗಳಿಂದಲೂ ಬಲ್ಲ, ಆರಂಭದಲ್ಲಿ ಶಾಸ್ತ್ರಿಗಳ ಸಹೋದ್ಯೋಗಿ ಮಿತ್ರರಾಗಿದ್ದು, ಅನಂತರ ಸರ್ಕಾರಿ ಸೇವೆಯಲ್ಲಿ ಕನ್ನಡ ಪ್ರಾಧ್ಯಾಪಕರೂ, ಪ್ರಾಚಾರ್ಯರೂ ಆಗಿ ನಿವೃತ್ತರಾಗಿರುವ ಎ.ಗುಂಡಣ್ಣ ಅವರು ಸಂದರ್ಶನ ಮಾಡಿದ್ದಾರೆ. ಶಾಸ್ತ್ರಿಗಳ ಶಿಸ್ತಿನ ಅಧ್ಯಯನ, ಸಿದ್ಧತೆಯ ಅಧ್ಯಾಪನ, ಹಾಸ್ಯಲೇಪನದ ಬರಹ ಕೃಷಿ, ಸಂಪಾದಕತ್ವದ ಹೊಣೆಗಾರಿಕೆ, ಸ್ನೇಹ ಮನೋಭಾವದ ವಿವರಗಳನ್ನು ದಾಖಲಿಸಿದ್ದಾರೆ.

ನಿಮ್ಮ ಮನೆತನ, ಬಾಲ್ಯ, ವಿದ್ಯಾಭ್ಯಾಸಗಳ ಬಗ್ಗೆ ತಿಳಿಸಿ.

ತುಮಕೂರು ಜಿಲ್ಲೆಯ ಚಿಕ್ಕನಾಯಕನಹಳ್ಳಿಯಲ್ಲಿ ಹುಟ್ಟಿಬೆಳೆದು ಕನ್ನಡ, ಸಂಸ್ಕೃತ ಪಂಡಿತರಾಗಿದ್ದ ನನ್ನ ತಂದೆ ಶ್ರೀ ಚಿ ನಾ ವಿಶ್ವನಾಥಶಾಸ್ತ್ರಿಗಳು ವೃತ್ತಿಯಲ್ಲಿ ಮುನಿಸಿಪಲ್ ಪ್ರೌಢಶಾಲೆಗಳಲ್ಲಿ ಅಧ್ಯಾಪಕರಾಗಿದ್ದರು. ಹವ್ಯಾಸ ಹಾಗೂ ಪ್ರವೃತ್ತಿಯಾಗಿ ಅವರು ಕನ್ನಡ ಸಂಘಗಳನ್ನು ಸ್ಥಾಪನೆ ಮಾಡಿ, ಕನ್ನಡ ಭಾಷೆ, ಸಂಸ್ಕೃತಿ, ವಿವಿಧ ಕಲೆಗಳಿಗೆ ಸಂಬಂಧಿಸಿದ ವೈವಿಧ್ಯಮಯ ಚಟುವಟಿಕೆಗಳನ್ನು ಸತತವಾಗಿ ಆಯೋಜಿಸುತ್ತಿದ್ದರು. ಕಾರ್ಯಕ್ರಮಗಳನ್ನು ನಡೆಸಿಕೊಡಲು ಆಗಮಿಸುತ್ತಿದ್ದ ವಿದ್ವಾಂಸರು, ಸಾಹಿತಿಗಳು, ಕಲಾವಿದರಿಗೆ ನಮ್ಮ ಮನೆಯಲ್ಲಿಯೇ ವಾಸ್ತವ್ಯ ಹಾಗೂ ಭೋಜನದ ವ್ಯವಸ್ಥೆಯಾಗುತ್ತಿತ್ತು. ಆನೇಕಲ್‌ನಲ್ಲಿ ಈ ವಾತಾವರಣದಲ್ಲೇ ಹುಟ್ಟಿ, ಬೆಳೆದ ನನಗೆ ಈ ಚಟುವಟಿಕೆಗಳಲ್ಲಿ ಆಸಕ್ತಿ ಉಂಟಾಯಿತು.

ನಾನು ಶಾಲೆಗೆ ಸೇರುವ ಮುನ್ನವೇ ನನ್ನ ತಂದೆ–ತಾಯಿಯರು ಕನ್ನಡವನ್ನು ಸುಲಲಿತವಾಗಿ ಓದಿ, ಬರೆಯಲು ಕಲಿಸಿದ್ದರಿಂದ, ಶಾಲೆಯ ಮುಖ್ಯೋಪಾಧ್ಯಾಯರು ನನ್ನನ್ನು ನೇರವಾಗಿ ಎರಡನೆಯ ತರಗತಿಗೆ, ಒಂದು ವರ್ಷದ ನಂತರ ನಾಲ್ಕನೆಯ ತರಗತಿಗೆ ಸೇರಿಸಿಬಿಟ್ಟರು. ೯ನೆಯ ತರಗತಿಯಲ್ಲಿದ್ದಾಗ ಶಾಲಾ ವಾರ್ಷಿಕೋತ್ಸವದಲ್ಲಿ ಪ್ರಸ್ತುತಪಡಿಸಿದ ನಾಟಕದಲ್ಲಿ ನಾನು ಪರಶುರಾಮನ ಪಾತ್ರವನ್ನು ವಹಿಸಿದ್ದೆ. ಮುಂದೆ ನನ್ನ ಕಾಲೇಜು ವಿದ್ಯಾಭ್ಯಾಸ ಮೈಸೂರಿನಲ್ಲಿ ನಡೆದು ೧೯೬೭ರಲ್ಲಿ ಗಣಿತಶಾಸ್ತ್ರದಲ್ಲಿ ಸ್ನಾತಕೋತ್ತರ ಪದವೀಧರನಾದೆ.

ತೀನಂಶ್ರೀ ಅವರ ಮನೆಯಲ್ಲಿ ಕಾಲೇಜು ವಿದ್ಯಾಭ್ಯಾಸ ನಿಮ್ಮ ಬೆಳವಣಿಗೆಗೆ ಹೇಗೆ ಸಹಕಾರಿಯಾಯಿತು?

ನನ್ನ ತಂದೆಯವರ ಸೋದರಮಾವ ಹಾಗೂ ನನ್ನ ತಾಯಿಯವರ ಚಿಕ್ಕಪ್ಪನವರಾಗಿದ್ದು ಮೈಸೂರು ವಿಶ್ವವಿದ್ಯಾನಿಲಯದ ಕನ್ನಡ ಸ್ನಾತಕೋತ್ತರ ವಿಭಾಗದಲ್ಲಿ

ಪ್ರಾಧ್ಯಾಪಕರಾಗಿದ್ದ ಪ್ರೊ॥ ತೀ. ನಂ. ಶ್ರೀಕಂಠಯ್ಯ ಅವರ ಮನೆಯಲ್ಲಿ ನನ್ನ ಸಮಗ್ರ ಕಾಲೇಜು ವಿದ್ಯಾಭ್ಯಾಸ ನಡೆಯಿತು. ತೀನಂಶ್ರೀ ಅವರ ಮಿತ್ರರು, ವಿದ್ಯಾರ್ಥಿಗಳು ಮನೆಗೆ ಬಂದಾಗಲೆಲ್ಲಾ, ಸಾಹಿತ್ಯ, ಸಂಸ್ಕೃತಿ, ಕಲೆ ಮುಂತಾದವುಗಳನ್ನು ಕುರಿತ ಸಂವಾದಗಳು ಮನೆಯಲ್ಲಿ ನಡೆಯುತ್ತಿದ್ದವು. ಇಂತಹ ಅಪೂರ್ವ ರಸಮಯ ಸನ್ನಿವೇಶಗಳು ನನ್ನ ಮೇಲೆ ಅಗಾಧ ಪರಿಣಾಮ ಬೀರಿತು.

ಯಾವ ಗುರುಗಳ ಪ್ರಭಾವ ತಮ್ಮ ಮೇಲೆ ವಿಶೇಷವಾಗಿ ಆಗಿದೆ?

೧೯೬೫-೧೯೬೭ರ ಅವಧಿಯಲ್ಲಿ ಗಣಿತಶಾಸ್ತ್ರದ ಸ್ನಾತಕೋತ್ತರ ವಿದ್ಯಾಭ್ಯಾಸ ಮಾಡುತ್ತಿದ್ದಾಗ ನಮಗೆ ಪ್ರಾಧ್ಯಾಪಕರಾಗಿದ್ದ ಪ್ರೊ॥ ಟಿ ಎಸ್ ನಂಜುಂಡಯ್ಯ ಅವರ ಪಾಠಪ್ರವಚನ ವಿಧಾನಗಳು ಸ್ಫೂರ್ತಿದಾಯಕವಾಗಿತ್ತು. ತರಗತಿಗಳು ಆರಂಭವಾದ ಮೊದಲ ಪೀರಿಯಡ್‌ನಲ್ಲಿ ಟಿ ಎಸ್ ನಂಜುಂಡಯ್ಯ ಅವರು 'Forget all Mathematics that you have learnt. Think that you have just joined a primary school. What are numbers? When did you learnt about numbers?' ಎಂದು ಪಾಠವನ್ನು ಆರಂಭಿಸಿ, ತಲಾ ಎರಡು ಗಂಟೆಗಳ ಕಾಲದ ಮೂರು ನಾಲ್ಕು ಅವಧಿಗಳಲ್ಲಿ ತರಗತಿಗಳನ್ನು ತೆಗೆದುಕೊಳ್ಳುತ್ತಿದ್ದರು. ಇವರು ಮನ ಸೆಳೆಯುವ ಉದಾಹರಣೆಗಳು, ಕಥೆಗಳು ಮುಂತಾದವನ್ನು ಬಳಸಿಕೊಂಡು ಗಣಿತ ತತ್ವಗಳನ್ನು ವಿವರಿಸುತ್ತಿದ್ದುದರಿಂದ, ಗಣಿತದ ಗಹನ ಪರಿಕಲ್ಪನೆಗಳನ್ನು ಅರ್ಥೈಸಿಕೊಳ್ಳುವುದರಲ್ಲಿ ನಮಗೆ ಯಾವ ಸಮಸ್ಯೆಗಳೂ ಉಂಟಾಗಲಿಲ್ಲ. ಇದರಿಂದ ಗಣಿತದ ಬಗ್ಗೆ ನನಗೆ ಆಗಾಗ್ಗೆ ಇರುತ್ತಿದ್ದ ಆತಂಕ, ಕೀಳರಿಮೆಗಳು ಇಲ್ಲವಾಗಿ ಗಣಿತದ ಬಗ್ಗೆ ಒಲವು ಮೂಡಲಾರಂಭಿಸಿತು.

ಶೃಂಗೇರಿಯಲ್ಲಿ ಅಧ್ಯಾಪಕ ವೃತ್ತಿಯ ಆರಂಭದಲ್ಲಿ ನಡೆದ ಘಟನೆಗಳನ್ನು ತಿಳಿಸಿ.

ಗಣಿತಶಾಸ್ತ್ರ ಎಂಎಸ್‌ಸಿ ಪರೀಕ್ಷೆಯಲ್ಲಿ ಉನ್ನತ ದರ್ಜೆಯಲ್ಲಿ ಉತ್ತೀರ್ಣನಾದ ನಾನು ಶೃಂಗೇರಿಯಲ್ಲಿ ೧೯೬೫ರಲ್ಲಿ ಆರಂಭವಾಗಿದ್ದ ಶ್ರೀ ಜಗದ್ಗುರು ಚಂದ್ರಶೇಖರಭಾರತೀ ಸ್ಮಾರಕ ಕಾಲೇಜಿನಲ್ಲಿ ಗಣಿತಶಾಸ್ತ್ರದ ಅಧ್ಯಾಪಕ ಕೆಲಸಕ್ಕೆ ಸೇರಿದೆ. ಡಾ॥ ಕೆಬಿ ರಾಮಕೃಷ್ಣರಾಯರು ಪ್ರಾಂಶುಪಾಲರಾಗಿದ್ದ ಈ ಕಾಲೇಜಿನಲ್ಲಿ ಶ್ರೀ ರಾಮಚಂದ್ರಭಟ್ಟ ಅವರೊಡನೆ ಗಣಿತಪಾಠಗಳನ್ನು ಆರಂಭಿಸಿದೆ. ಗಣಿತ ಸಂಬಂಧಿ ವಿಚಾರಗಳನ್ನು ನಿತ್ಯಜೀವನದ ಉದಾಹರಣೆಗಳ ಮೂಲಕ ಕಥಾರೂಪಗಳಲ್ಲಿ ತಿಳಿಸಿಕೊಡುತ್ತಿದ್ದುದು ನನ್ನ ಪಾಠದ ವೈಖರಿಯಾಗಿತ್ತು. ಇದರಿಂದ ನನ್ನ ಗಣಿತಪಾಠಗಳ ಅಧ್ಯಾಪನವು ನಿಧಾನವಾಗುತ್ತಿತ್ತು. ಆದರೆ ಭೌತಶಾಸ್ತ್ರದ ಪಾಠಗಳಿಗೆ ಈ ಗಣಿತ ವಿಚಾರಗಳ ಬಳಕೆಯು ಅನಿವಾರ್ಯವಾಗಿದ್ದರಿಂದ, ಭೌತಶಾಸ್ತ್ರದ ಅಧ್ಯಾಪಕರಿಗೆ ಸಹಜವಾಗಿಯೇ ಆತಂಕ, ಬೇಸರಗಳು ಉಂಟಾದವು. ಈ ಬಗ್ಗೆ ಅವರು ಪ್ರಾಂಶುಪಾಲರಲ್ಲಿ ಪ್ರಸ್ತಾವಿಸಿದಾಗ

ಪ್ರಾಂಶುಪಾಲರು ನನ್ನನ್ನು ಕರೆದು, 'ಗಣಿತದ ಪಾಠಗಳನ್ನು ಬೇಗ ಬೇಗ ಮುಗಿಸಿ, ಪ್ರತಿ ಅಧ್ಯಾಯದ ನಂತರವೂ ಅಭ್ಯಾಸದಲ್ಲಿರುವ ಲೆಕ್ಕಗಳನ್ನು ತರಗತಿಯಲ್ಲೇ ಹೆಚ್ಚಿನ ಸಂಖ್ಯೆಯಲ್ಲಿ ಬಿಡಿಸಿ' ಎಂದುಬಿಟ್ಟರು. ಅವರ ಆದೇಶದಿಂದ ನಾನು ಆತಂಕಕ್ಕೊಳಗಾದರೂ, ಪದವಿ ಶಿಕ್ಷಣದ ಪ್ರಥಮ ವರ್ಷದ ತರಗತಿಯಲ್ಲಿ `Permutation & Combination` ಪಾಠಕ್ಕೆ ಸಂಬಂಧಿಸಿದ ಸಮಸ್ಯೆಗಳನ್ನು ಉದಾಹರಣೆಯಾಗಿ ಹೇಳುತ್ತಾ ವಿವರಿಸತೊಡಗಿದೆ. ೪೫ ನಿಮಿಷಕ್ಕೂ ಮೀರಿ ಈ ರೂಪದಲ್ಲೇ ಪಾಠ ಮಾಡುತ್ತಿದ್ದಾಗ ನನಗೆ ಗೊತ್ತಾಗದಂತೆ ಹೊರಗೆ ನಿಂತುಕೊಂಡು ಬಾಗಿಲ ಸಂದಿಯಿಂದ ಇಣಿಕಿ ನೋಡುತ್ತಾ ನನ್ನ ಪಾಠವನ್ನು ಗಮನಿಸುತ್ತಿದ್ದ ಪ್ರಾಂಶುಪಾಲರನ್ನು ಕಂಡು ನನಗೆ ಗಾಬರಿ ಆಯಿತು. ಪೀರಿಯಡ್ ಆದನಂತರ ಭಯ ಹಾಗೂ ಆತಂಕಗಳಿಂದ ನಾನು ಪ್ರಾಂಶುಪಾಲರ ಬಳಿ ಹೋದಾಗ, ಅವರು ನನ್ನೊಡನೆ ಆತ್ಮೀಯವಾಗಿ ಮಾತನಾಡುತ್ತಾ 'ನಿಮ್ಮ ಪಾಠದ ವಿಧಾನವನ್ನೇ ಮುಂದುವರೆಸಿ, ಅದೇ ಚೆನ್ನ ಹಾಗೂ ಸೂಕ್ತ' ಮುಂತಾಗಿ ಹೇಳಿ ನನ್ನನ್ನು ಅಚ್ಚರಿಗೊಳಿಸಿಬಿಟ್ಟರು. ಮುಂದೆ ನನ್ನ ಈ ಪಾಠದ ವಿಧಾನ ನಿರ್ಬಾಧಿತವಾಗಿ ಮುಂದುವರೆಯಿತು. ಹೀಗೆ ಶೃಂಗೇರಿಯ ಕಾಲೇಜಿನಲ್ಲಿ ಪಾಠ ಮಾಡುತ್ತಾ ಇದ್ದಾಗ ನನಗೆ, ಅದರಲ್ಲೂ ವಿದ್ಯಾರ್ಥಿಗಳಿಗೆ ಆಗುತ್ತಿದ್ದ ತೃಪ್ತಿ, ಸಮಾಧಾನಗಳನ್ನು ವರ್ಣಿಸಲಾಗದು.

ಶೃಂಗೇರಿಯ ಜೀವನವನ್ನು ಪರಿಚಯಿಸಿ.

ಮಲೆನಾಡಿಗೆ ಹೊಸಬರಾಗಿದ್ದ ನಾವುಗಳು ರಜಾದಿನಗಳಲ್ಲಿ ಬಾಡಿಗೆ ಬೈಸಿಕಲ್ಲುಗಳಲ್ಲಿ ಕುಳಿತು ಆಗುಂಬೆ, ಕಿಗ್ಗ ಮುಂತಾದ ಕಡೆಗಳಿಗೆ ವಿಹಾರಕ್ಕಾಗಿ ಹೋಗಿಬರುತ್ತಿದ್ದೆವು. ಶೃಂಗೇರಿಯ ವಾತಾವರಣವಂತೂ ಅತ್ಯಂತ ಪರಿಶುದ್ಧವಾಗಿದ್ದಿತು. ಶೃಂಗೇರಿಯ ಮುಖ್ಯರಸ್ತೆ ಭಾರತೀಬೀದಿಯ ಎರಡು ಬದಿಗಳಲ್ಲೂ ಸೊಂಪಾಗಿ ಬೆಳೆದ ಮರಗಳಿದ್ದವು. ಹೊಳೆಮೈದಾನವು ಮೈದಾನವೇ ಆಗಿದ್ದು ಮಳೆಗಾಲದಲ್ಲಿ ಉಕ್ಕಿಹರಿಯುತ್ತಿದ್ದ ತುಂಗಾನದಿಯ ಜಲದಿಂದ ತುಂಬಿ ಸರೋವರದಂತೆ ಕಾಣುತ್ತಾ ಮನೋಹರವಾಗಿರುತ್ತಿತ್ತು. ಮಳೆ ಇಲ್ಲದ ದಿನಗಳಲ್ಲೆಲ್ಲಾ ನಾವುಗಳು ನದಿಯಲ್ಲಿ ಆನಂದದಿಂದ ಸ್ನಾನಮಾಡುತ್ತಿದ್ದೆವು. ನಾನಂತೂ ಅಲ್ಲಿಯೇ ಈಜುವುದನ್ನು ಕಲಿತೆ. ಮಲೆನಾಡಿನ ಸಹಜವಾತಾವರಣಕ್ಕೆ ಅನುಗುಣವಾಗಿ ಆ ದಿನಗಳಲ್ಲಿ ಧಾರಾಕಾರವಾಗಿ ಸುರಿಯುತ್ತಿದ್ದ ಮಳೆಯ ವೈಭವವು ನಮ್ಮೆಲ್ಲರ ಮನದಾಳದಲ್ಲಿ ತುಂಬಿಕೊಂಡಿದೆ.

ಪರಸ್ಥಳಗಳಿಂದಲೇ ಬಂದು ಕೆಲಸಕ್ಕೆ ಸೇರಿದ್ದ ನಮ್ಮೆಲ್ಲರ ಪೈಕಿ ಹಿರಿಯರಾಗಿದ್ದ ಶ್ರೀ ಎಚ್ ಪಿ ಕೃಷ್ಣಸ್ವಾಮಿ ಅವರು ವಾಸಿಸುತ್ತಿದ್ದ ಬಾಡಿಗೆ ಮನೆಯ ಮಹಡಿಯಲ್ಲಿನ ಒಂದು ದೊಡ್ಡ ಕೊಠಡಿಯಲ್ಲಿ ಬ್ರಹ್ಮಚಾರಿಗಳಾಗಿದ್ದ ಶ್ರೀ ವಿ ಗುಂಡಣ್ಣ, ಶ್ರೀ ಆನಂದರಾಮ ಮಡಿ, ಶ್ರೀ ವೆಂಕಟೇಶರಾವ್, ಶ್ರೀ ಆರ್ ಎಸ್ ನಾಗರಾಜ್, ಹಾಗೂ ನಾನು ವಾಸಿಸುತ್ತಿದ್ದೆವು. ಊಟೋಪಹಾರಗಳಿಗೆ ಆಗ ಅಲ್ಲಿ ಪ್ರಸಿದ್ಧವಾಗಿದ್ದ 'ಮಲ್ಲಿಕಾಮಂದಿರ'ವೇ ಆಧಾರ. ಬೆಳಗ್ಗೆ

ನದಿಯಲ್ಲಿ ಸ್ನಾನಮಾಡಿಕೊಂಡು ಬಂದನಂತರ ಮಲ್ಲಿಕಾ ಮಂದಿರಕ್ಕೆ ಹೋಗಿ ಉಪಾಹಾರ ಮುಗಿಸಿಕೊಂಡು ೯.೩೦ಕ್ಕೆ ಆರಂಭವಾಗುತ್ತಿದ್ದ ಕಾಲೇಜಿಗೆ ಹೋಗುವುದು; ಮಧ್ಯಾಹ್ನ ೧೨.೩೦ಕ್ಕೆ ಕಾಲೇಜಿನಿಂದ ಅಲ್ಲಿಗೇ ಬಂದು ಊಟಮಾಡಿ ಕಾಲೇಜಿಗೆ ಹೋಗುವುದು; ಸಂಜೆ ೫ಗಂಟೆಗೆ ಕಾಲೇಜು ಮುಗಿದನಂತರ ಮಲ್ಲಿಕಾ ಮಂದಿರಕ್ಕೆ ಬಂದು ತಿಂಡಿತಿಂದು ರಾತ್ರಿ ೯ ಗಂಟೆಯವೇಳೆಗೆ ಊಟಮಾಡಿ ರೂಮಿಗೆ ಹೋಗುವುದು ನಮ್ಮ ಹೊಟ್ಟೆತುಂಬಿಸುವ ದಿನಚರಿ ಆಗಿಬಿಟ್ಟಿತ್ತು. ನಾವು ಒಟ್ಟಾಗಿ ಓಡಾಡುವಾಗ, ರೂಮಿನಲ್ಲಿ ಇರುವಾಗ, ನಮ್ಮ ನಿತ್ಯಕ್ರಿಯೆಗಳಲ್ಲಿ ತೊಡಗಿರುವಾಗ ಪರಸ್ಪರ ನಡೆಸುತ್ತಿದ್ದ ಸಂಭಾಷಣೆಗಳು ಅತ್ಯಂತ ಆತ್ಮೀಯವಾಗಿಯೂ, ಸ್ವಾರಸ್ಯಕರವಾಗಿಯೂ, ಹಾಸ್ಯಪೂರಿತವಾಗಿಯೂ ಇರುತ್ತಿದ್ದು ಒಟ್ಟಿನಲ್ಲಿ ನಾವುಗಳೆಲ್ಲರೂ ಸೋದರತ್ವದ ಭಾವನೆಗಳಿಂದ ಮನೋಲ್ಲಾಸಕರವಾದ ಜೀವನವನ್ನು ನಡೆಸುತ್ತಿದ್ದೆವು.

ಮರೆಯಲಾಗದ ಕೆಲವು ಹಾಸ್ಯ ಪ್ರಸಂಗಗಳು ಇವೆ ಎಂದು ಹೇಳಿದ್ದ ನೆನಪು. ಕೆಲವನ್ನು ಹಂಚಿಕೊಳ್ಳಿ.

ನಾನು ಕಾಲೇಜಿಗೆ ಸೇರಿದ ಹೊಸದು. ಮೊದಲಬಾರಿಗೆ ಮಲ್ಲಿಕಾಮಂದಿರದಲ್ಲಿ ಊಟಮಾಡಲು ಹೋದಾಗ ಊಟಕ್ಕೆ ನನ್ನಿಂದ ೫೦ಪೈಸೆ ಹಣವನ್ನು ತೆಗೆದುಕೊಂಡರು. ಹೀಗೆ ಎರಡು ದಿನಗಳಾದ ಮೇಲೆ ೭೦ ಪೈಸೆ ಹಣವನ್ನು ಕೇಳಿದರು. ನಾನು 'ಏಕೆ ಹೆಚ್ಚು ಕೇಳುತ್ತಿದ್ದೀರಾ?' ಎಂದು ಪ್ರಶ್ನಿಸಿದಾಗ 'ನಿಮ್ಮನ್ನು ಕಾಲೇಜಿನ ವಿದ್ಯಾರ್ಥಿ ಎಂದುಕೊಂಡಿದ್ದೆವು. ನೀವು ಹೊಸದಾಗಿ ಬಂದಿರುವ ಅಧ್ಯಾಪಕರು ಎಂದು ತಿಳಿಯಿತು. ವಿದ್ಯಾರ್ಥಿಗಳಿಗೆ ಮಾತ್ರ ಕಡಿಮೆಬೆಲೆಯಲ್ಲಿ ಊಟಕೊಡುತ್ತೇವೆ' ಎಂದು ಹೋಟಲಿನ ಮಾಲೀಕರು ತಿಳಿಸಿದರು. ಹೀಗೆ ನನ್ನ ಆಕಾರದಿಂದ ನಡೆದ ಸ್ವಾರಸ್ಯಕರವಾದ ಘಟನೆಗಳು ಮನಸ್ಸಿಗೆ ಮುದನೀಡುತ್ತವೆ.

ನಾನು ಕಾಲೇಜಿಗೆ ಸೇರಿದ ವರ್ಷದ ಕೊನೆ. ಕಾಲೇಜು ದಿನಾಚರಣೆ ಸಂದರ್ಭದಲ್ಲಿ ಅಧ್ಯಾಪಕರು ಒಂದು ನಾಟಕ ಆಡಬೇಕೆಂದು ತೀರ್ಮಾನಿಸಿದೆವು. ವಿಷಯವನ್ನು ಗುಟ್ಟಾಗಿಟ್ಟು ಕಾರ್ಯಕ್ರಮಕ್ಕೆ ಒಂದು ವಾರ ಮುಂಚೆ ಮಾತ್ರ ಪ್ರಕಟಿಸುವುದು; ಪಾತ್ರಧಾರಿಗಳ ಹೆಸರುಗಳನ್ನು ನಾಟಕ ಮುಗಿದ ಅನಂತರವೇ ತಿಳಿಸುವುದು ಎಂದೆಲ್ಲಾ ನಿರ್ಧರಿಸಿದ್ದೆವು. ಕನ್ನಡ ಅಧ್ಯಾಪಕ ವಿ. ಗುಂಡಣ್ಣನವರ 'ಶುದ್ಧ ಶುಂಠಿ' ಎಂಬ ಹಾಸ್ಯ ನಾಟಕ. ಅವರದ್ದೇ ನಿರ್ದೇಶನ. ನಾವು ನಾಲ್ಕು ಜನ ಬ್ರಹ್ಮಚಾರಿಗಳಿದ್ದ ಮನೆಯಲ್ಲಿ ಬಾಗಿಲು ಕಿಟಕಿಗಳನ್ನು ಮುಚ್ಚಿ ಒಳಸೇರಿ ನಮ್ಮ ಅಭ್ಯಾಸ. ಗುಂಡಣ್ಣನವರದ್ದು ಹುಡುಗನ ಪಾತ್ರ, ನನ್ನದು ಹುಡುಗಿ ಮತ್ತು ಚರಿತ್ರೆ ಅಧ್ಯಾಪಕ ಕೃಷ್ಣಸ್ವಾಮಿ ಅವರದ್ದು ನನ್ನ ತಂದೆಯ ಪಾತ್ರ. ಹುಡುಗಿಯ ಪಾತ್ರಕ್ಕೆ ನನ್ನ ಧ್ವನಿಯೇನೋ ಹೊಂದುತ್ತದೆ. ಆದರೆ ನಡಿಗೆ? ಕೃಷ್ಣಸ್ವಾಮಿ ಅವರ ಪತ್ನಿ ಶ್ರೀಮತಿ ಇಂದ್ರಮ್ಮನವರ ಸೀರೆ ಉಟ್ಟು, ಸೊಂಟವನ್ನು ಕುಲುಕಿಸಿ, ಪೃಷ್ಠವನ್ನು ಕುಣಿಸಿ ವೈಯಾರದಿಂದ ನಡೆಯಲು ಕಲಿತಾಯಿತು. ಮೊದಲಬಾರಿ ನಾಟಕದಲ್ಲಿ ಭಾಗವಹಿಸಿದ್ದ

ನಾನು ಹೆದರಿಬಿಟ್ಟಿದ್ದೆ. ಕಾಲೇಜು ಅಧ್ಯಾಪಕರಿಂದ ನಾಟಕ ಎನ್ನುವುದು ಊರಿನ ಎಲ್ಲರಲ್ಲೂ ಕುತೂಹಲ, ಆಸಕ್ತಿಯನ್ನು ಕೆರಳಿಸಿತ್ತು.

ನಾಟಕದ ದಿನ ಹೆಚ್ಚು ಕಡಮೆ ಊರಿನ ಎಲ್ಲ ಜನರೂ ಸೇರಿದ್ದಾರೆ. ತೆರೆ ಸರಿಯಿತು. ಕಸೂತಿ ಹಾಕುತ್ತಾ ಕುಳಿತಿದ್ದ ಪದ್ದಿ (ಪದ್ಮ – ನಾನು) ಎದ್ದು ನಿಂತು ರಂಗಸ್ಥಳದ ಒಂದು ಕಡೆಯಿಂದ ಇನ್ನೊಂದು ಕಡೆಗೆ ನಡೆದು 'ಅಪ್ಪ'ನಿಗೆ (ಶ್ರೀ ಕೃಷ್ಣಸ್ವಾಮಿ) ಬಾಗಿಲು ತೆಗೆಯುವ ಕ್ರಿಯೆ. ಜನರಿಂದ ಒಟ್ಟಿಗೆ 'ಓ' ಎಂಬ ಉದ್ಗಾರ. ಇದ್ಯಾವ ಮಹಿಳಾ ಅಧ್ಯಾಪಕಿ? ಕಾಲೇಜಿನ ಯಾವ ಅಧ್ಯಾಪಕಿಯೂ ಹೀಗೆ ಇಲ್ಲವಲ್ಲಾ! ಅಧ್ಯಾಪಕರ ಹೆಂಡತಿ ಇರಬಹುದೇ? ಅಧ್ಯಾಪಕರ ಬಂಧುವೇ? ಇತ್ಯಾದಿ ಪ್ರಶ್ನೆಗಳು ಜನರನ್ನು ಕಾಡಲಾರಂಭಿಸಿದವು. ಪ್ರೇಕ್ಷಕರಲ್ಲೆಲ್ಲಾ ಪಿಸು ಪಿಸು, ಗುಸು ಗುಸು. ಮೊದಲ ಅಂಕ ಮುಗಿದು ನಾನು ನೇಪಥ್ಯದಲ್ಲಿದ್ದಾಗ ಅಲ್ಲಿಗೆ ಬಂದ (ಈ 'ಪದ್ದಿ' ನಿಜವಾಗಿಯೂ ಹುಡುಗಿಯೇ ಅಂದುಕೊಂಡ) ಕಾಲೇಜು ಸಮಿತಿಯ ಅಧ್ಯಕ್ಷರ, ಅವರ ತಮ್ಮಂದಿರ ಪತ್ನಿಯರು, ಹೆಣ್ಣುಮಕ್ಕಳು ತಾವು ಧರಿಸಿದ್ದ ಚಿನ್ನದ ಡಾಬು, ಝಗಮಗಿಸುವ ನೆಕ್ಲೇಸು, ಚಿನ್ನದಸರ, ಬಳೆಗಳು ಇತ್ಯಾದಿಗಳನ್ನು ಆತ್ಮೀಯತೆ, ಸಡಗರದಿಂದ ನನಗೆ ತೊಡಿಸಿದರು. ನಾಟಕ ಮುಗಿದ ಮೇಲೆ 'ಪದ್ದಿ' ಯಾರು ಎಂಬ ಹೂರಣ ಹೊರಬಿತ್ತು. ನನ್ನಿಂದ ಪ್ರೇಕ್ಷಕರು ಮೋಸ ಹೋದದ್ದು ಊರಲ್ಲೆಲ್ಲಾ ಸುದ್ದಿಯಾಯಿತು.

ಹೀಗೆ ಕಾಲೇಜಿನಲ್ಲಿ ಇದ್ದ ಆರು ವರ್ಷಗಳೂ ಹೊಸದಾಗಿ ಬಂದ ವಿದ್ಯಾರ್ಥಿಗಳಿಗೆ ಹಾಗೂ ಊರಿನವರಿಗೆ ನಾನು ಅಧ್ಯಾಪಕನೋ ವಿದ್ಯಾರ್ಥಿಯೋ ಎಂಬ ಜಿಜ್ಞಾಸೆ ಕಾಡುತ್ತಲೇ ಇತ್ತು.

ಪು ತಿ ನರಸಿಂಹಾಚಾರ್ ಅವರ ಭೇಟಿಯ ಸಂದರ್ಭವನ್ನು ತಿಳಿಸಿ.

೧೯೬೭ರ ಒಂದು ಸಂದರ್ಭ. ಅಂದಿಗೆ ಒಂದೂವರೆ ವರ್ಷದ ಹಿಂದೆ ದಿವಂಗತರಾಗಿದ್ದ ಪ್ರೊ॥ ತೀ.ನಂ. ಶ್ರೀಕಂಠಯ್ಯನವರ ಭಾವಚಿತ್ರವು ನಮ್ಮ ಕಾಲೇಜಿನಲ್ಲಿ ಅನಾವರಣವಾಗಬೇಕೆಂಬ ಹಂಬಲ ಉಂಟಾಯಿತು. ಇದನ್ನು ಕಾಲೇಜಿನ ಪ್ರಾಂಶುಪಾಲರಾಗಿದ್ದ ಡಾ॥ ಕೆ.ಬಿ. ರಾಮಕೃಷ್ಣರಾಯರಿಗೆ ತಿಳಿಸಿ ಅವರ ಒಪ್ಪಿಗೆ ಪಡೆದೆ. ಮೈಸೂರಿಗೆ ಹೋಗಿ ತೀನಂಶ್ರೀ ಅವರ ಭಾವಚಿತ್ರದ ಪ್ರತಿಯನ್ನು ಮಾಡಿಸಿ ಕಟ್ಟುಹಾಕಿಸಿ ಅದನ್ನು ಅನಾವರಣ ಮಾಡಲು ಸೂಕ್ತವ್ಯಕ್ತಿಯಾಗಿದ್ದ ಅವರ ಪರಮಾಪ್ತ ಮಿತ್ರರಾಗಿದ್ದ ಡಾ॥ ಪುತಿನ ಅವರನ್ನು ಭೇಟಿಮಾಡಿ ಭಾವಚಿತ್ರದ ಅನಾವರಣಕ್ಕೆ ಅವರನ್ನು ಒಪ್ಪಿಸಿದೆ. ಕಾರ್ಯಕ್ರಮದ ದಿನ ಸಂಕ್ರಮಣವಾದ್ದರಿಂದ, ಬೆಳಗ್ಗೆ ೪ ಗಂಟೆಗೆ ಮೈಸೂರಿನಿಂದ ಕಾರಿನಲ್ಲಿ ಹೊರಟು ಮಧ್ಯಾಹ್ನ ೧ ಗಂಟೆ ವೇಳೆಗೆ ಶೃಂಗೇರಿ ತಲುಪಿದಾಗ ನದಿಸ್ನಾನ, ಪಿತೃತರ್ಪಣಾದಿಗಳನ್ನು ಮಾಡಿ, ಮಡಿಯಲ್ಲಿ ಭೋಜನ ಮಾಡುವುದಾಗಿ ನನಗೆ ಡಾ॥ ಪುತಿನ ಪತ್ರ ಬರೆದಿದ್ದರು. ನನ್ನದು ಬ್ರಹ್ಮಚಾರಿ ಸಂಸಾರ. ಮನೆಯಲ್ಲಿ ನಾನು ಮತ್ತು ನನ್ನ

ತಮ್ಮ ಗಿರಿಧರಶಾಸ್ತ್ರೀ ಇಬ್ಬರೇ. ಪು.ತಿ. ನರಸಿಂಹಾಚಾರ್ಯರಿಗೆ ನಾನೇ ಅಡಿಗೆ ಮಾಡಿ ಬಡಿಸಬೇಕೆಂಬ ತೀವ್ರ ಆಸೆ ನನಗೆ. ಆದರೆ ಪ್ರಾಂಶುಪಾಲರು ಇನ್ನೂ ಬ್ರಹ್ಮಚಾರಿಯಾದ ನಾನು ಭಾವುಕತೆಯನ್ನು ಒತ್ತೊಟ್ಟಿಗಿಡಬೇಕೆಂದೂ, ತಮ್ಮ ಮನೆಯಲ್ಲೇ ನರಸಿಂಹಾಚಾರ್ಯರಿಗೆ ಊಟಕ್ಕೆ ಏರ್ಪಾಡು ಮಾಡುವುದಾಗಿ ಹೇಳಿದರು. ಆಗ ನಾನೊಂದು ಸುಳ್ಳು ಬೆರೆತ ಬಾಣವನ್ನೆಸೆದೆ. 'ನರಸಿಂಹಾಚಾರ್ಯರು ತುಂಬಾ ಆಚಾರ, ನಿಯಮ, ನಿಷ್ಠೆ ಉಳ್ಳವರು. ಅವರು ಬರುವ ದಿನ ಪಿತೃಪಕ್ಷದ ಸಂಕ್ರಮಣದ ದಿನ. ಆದ್ದರಿಂದ ಮೈಸೂರಿನಿಂದ ಬಂದಕೂಡಲೇ ನದೀಸ್ನಾನ ಮಾಡಿ, ಪಿತೃತರ್ಪಣ ನೀಡುತ್ತಾರೆ. ಇಂತಹ ಸಂದರ್ಭಗಳಲ್ಲಿ ಅವರು ಹೊರಗೆ ಯಾರ ಮನೆಯಲ್ಲೂ ಊಟಮಾಡುವುದಿಲ್ಲ; ಊಟ ಮಡಿಯಲ್ಲೇ ಮತ್ತು ತಮ್ಮ ಮನೆಯಲ್ಲೇ. ಆದರೆ ದೇಹವೆರಡು ಆತ್ಮ ಒಂದು ಎಂಬಂತಿದ್ದ ಪ್ರೊ॥ ತೀನಂಶ್ರೀ ಮನೆಗೆ ಸಂಬಂಧಿಸಿದಂತೆ ಮಾತ್ರ ಅವರ ಎಲ್ಲ ನಿಯಮಗಳಿಗೂ ವಿನಾಯಿತಿ. ಆದ್ದರಿಂದ ನಾನು ಮಡಿಯಲ್ಲಿ ಅಡುಗೆ ಮಾಡಿ ಬಡಿಸಿದರೆ ಮಾತ್ರ ಅವರು ಊಟಮಾಡುತ್ತಾರೆ. ನಿಮ್ಮ ಮನೆಯಲ್ಲಿ ಖಂಡಿತಾ ಊಟಮಾಡುವುದಿಲ್ಲ' ಎಂದೆಲ್ಲಾ ಹೇಳುತ್ತಾ ಅವರೊಡನೆ ವಾದಮಾಡಿದೆ. ನನ್ನ ವಾದ ಗೆದ್ದಿತೋ ಅಥವಾ ಪ್ರಾಂಶುಪಾಲರು ನನ್ನ ಭಾವುಕತೆಗೆ ಮಣಿದರೋ – ಒಟ್ಟಿನಲ್ಲಿ ಪುತಿನ ಅವರಿಗೆ ನಾನೇ ಅಡುಗೆ ಮಾಡಿ ಬಡಿಸುವುದೆಂದು ನಿಶ್ಚಯವಾಯಿತು.

ಲಂಗು ಲಗಾಮಿಲ್ಲದ ಸಂಭ್ರಮದಲ್ಲಿದ್ದ ನಾನು ಮತ್ತು ನನ್ನ ತಮ್ಮ ಇಬ್ಬರೂ ಮನೆಯ ಹಿಂದೆ ಫರ್ಲಾಂಗ್ ದೂರದಲ್ಲಿದ್ದ ತುಂಗಾನದಿಗೆ ಹಿಂದಿನ ದಿನ ಹೋಗಿ ಸ್ನಾನ ಮಾಡಿ ಬಟ್ಟೆಗಳನ್ನು ಒಗೆದು ಮನೆಗೆ ಬಂದು ನಮಗೂ ಮತ್ತು ಅವರಿಗೂ ಮಡಿ ಬಟ್ಟೆಗಳನ್ನು ಒಣಹಾಕಿದೆವು. ಮಾರನೆಯ ದಿನ ಬೆಳಗ್ಗೆ ಮಡಿಬಟ್ಟೆಗಳನ್ನು ಉಟ್ಟುಕೊಂಡು ಹನ್ನೊಂದು ಗಂಟೆಯವೇಳೆಗೆ ಅಡುಗೆ ಮಾಡಿ ಸಿದ್ಧವಾದೆವು.

ಮೈಸೂರಿನಿಂದ ತಮ್ಮ ಮಗಳು ಅಲುಮೇಲುವಿನೊಂದಿಗೆ ಕಾರಿನಲ್ಲಿ ಹೊರಟು ಮಧ್ಯಾಹ್ನ ಸುಮಾರು ಒಂದು ಗಂಟೆಗೆ ಶೃಂಗೇರಿಗೆ ಬಂದ ನರಸಿಂಹಾಚಾರ್ಯರು ನಮ್ಮೊಡನೆ ನೇರವಾಗಿ ನದಿಗೆ ಹೊರಟರು. ನಾವಿಬ್ಬರೂ ತಂದೆ, ಮಗಳನ್ನು ತುಂಗಾನದಿಯಲ್ಲಿ ಸ್ನಾನ ಮಾಡಲು ಪ್ರಶಸ್ತವಾದ ತಾಣಕ್ಕೆ (ಸಂಧ್ಯಾವಂದನೆ ಮಂಟಪ) ಕರೆದೊಯ್ದೆವು. ದಾರಿಯಲ್ಲಿ ಅಲಮೇಲುವಿನ ಗೊಣಗಾಟ ಆರಂಭ – "ನನಗೆ ಹರಿಯುವ ನೀರನ್ನು ಕಂಡರೆ ಭಯ. ಆಮೇಲೆ ಮನೆಗೆ ಬಂದು ಸ್ನಾನ ಮಾಡ್ತೀನಿ." 'ಒಳ್ಳೆ ಹೆದರು ಪುಕ್ಕಲಿ. ತುಂಗಾನದಿ ಸ್ನಾನದ ಲಭ್ಯ ಇವಳಿಗಿಲ್ಲ' ಎಂದುಕೊಂಡು ಸುಮ್ಮನಾದೆವು. ನಾವಿಬ್ಬರೂ ನರಸಿಂಹಾಚಾರ್ಯರೊಡನೆ ನದಿಗೆ ಇಳಿದೆವು. ಮೆಟ್ಟಿಲಿಗೆ ಬೆನ್ನು ಮಾಡಿ ಮುಳುಗುಹಾಕಿ ಏಳುತ್ತಿರುವಾಗ ಧಡಾರನೆ ನದಿಗೆ ಯಾರೋ ಬಿದ್ದ ಹಾಗಾಯಿತು. ನೋಡಿದರೆ ನದಿಯಲ್ಲಿ ಅಲಮೇಲು ತೇಲಿಹೋಗುತ್ತಿದ್ದಾಳೆ. ಹೋ ಎಂದು ಕೂಗಿದ ನಾವು ಪುತಿನ ಅವರ ಕಡೆ ನೋಡಿದೆವು. ನರಸಿಂಹಾಚಾರ್ಯರು 'ಅಲಮೇಲು ಒಳ್ಳೆ ಈಜುಗಾರ್ತಿ ಕಣಯ್ಯಾ. ಅವಳ ಈಜಿನ ಮುಂದೆ

ಯಾರು ಸಾಟಿ? ಗಾಬರಿಯಾಗಬೇಡ' ಎಂದು ಚೇಷ್ಟೆಯ ನಗು ನಕ್ಕರು. ತನಗೆ ನೀರೆಂದರೆ ಭಯ ಎಂದು ಅಲಮೇಲು ಹೇಳಿದಾಗ ಪುತಿನ ಅವರ ಮೊಗದಲ್ಲಿ ಸುಳಿದಿದ್ದ ಮುಗುಳ್ನಗೆ ಆಗ ನೆನಪಿಗೆ ಬಂದು ಅದೇಕೆ ಎಂದು ಈಗ ಅರ್ಥವಾಯಿತು. ಅಲ್ಲೇ ಸ್ವಲ್ಪ ದೂರದಲ್ಲಿ ಎಡಕ್ಕೆ ೯೦° ಕೋನದಲ್ಲಿ ತಿರುಗುತ್ತಿದ್ದ ನದಿಯಲ್ಲಿ ಸುಳಿಗಳಿರುವುದನ್ನು ಕೂಗಿ ಹೇಳಿ ಅಲಮೇಲುವನ್ನು ವಾಪಸ್ಸು ಕರೆಸಿದೆವು.

ಮುಂದೆ ಪುತಿನ ಅವರು ಒದ್ದೆ ಬಟ್ಟೆಯನ್ನುಟ್ಟು ತರ್ಪಣಾದಿ ವಿಧಿಗಳನ್ನು ಮುಗಿಸಿ ತಾವು ತಂದಿದ್ದ ಮೈಲಿಗೆ ಬಟ್ಟೆಯನ್ನು ಧರಿಸಿದರು. ಮನೆಗೆ ಬಂದೊಡನೆ ನಾನು ಪಡಿಪಂಚೆ ಉಟ್ಟುಕೊಂಡೆ. ಅವರಿಬ್ಬರಿಗೂ ಊಟಕ್ಕೆಂದು ಎಲೆಗಳನ್ನು ಹಾಕಿ, 'ಬನ್ನಿ, ನಿಮಗೂ ಮಡಿಬಟ್ಟೆ ಇದೆ. ಉಟ್ಟುಕೊಂಡು ಊಟಕ್ಕೆ ಕುಳಿತುಕೊಳ್ಳಿ. ಮಡಿಯಲ್ಲೇ ಅಡುಗೆ ಮಾಡಿದ್ದೇನೆ.' ಎಂದು ಹೇಳಿದೆ. 'ಹೌದೇನಪ್ಪಾ? ಭೇಷ್' ಎನ್ನುತ್ತಾ ಬಳಿಸಾರಿದ ಪುತಿನ ನನ್ನನ್ನು ಮುಟ್ಟೇಬಿಟ್ಟರು. ದಿಗ್ಭ್ರಮೆಗೊಂಡ ನಾನು ಇದೇನಿದು? ಮಡಿಯಲ್ಲಿದ್ದ ನನ್ನನ್ನು ಮುಟ್ಟಿಬಿಟ್ಟರಲ್ಲಾ. ಮೈಲಿಗೆ ಆಯ್ತಲ್ಲ! ಅವರಿಗೆ ಮಡಿಯಲ್ಲಿ ಊಟ ಬಡಿಸುವುದು ಹೇಗೆ ಎಂದು ಯೋಚಿಸುತ್ತಿರುವಾಗಲೇ ಅವರು ನನ್ನ ಬೆನ್ನು ತಟ್ಟುತ್ತಾ 'ನಿನ್ನ ಅಭಿಮಾನ, ಉತ್ಸಾಹ, ಶ್ರದ್ಧೆ, ಆಸಕ್ತಿ, ಮನಸ್ಸು ಇವುಗಳು ಹೆಚ್ಚೋ, ಮಡಿ ಹೆಚ್ಚೋ; ಏನೂ ಯೋಚಿಸಬೇಡ. ಬಾರಯ್ಯ. ಎಲ್ಲರೂ ಒಟ್ಟಿಗೆ ಊಟ ಮಾಡೋಣ' ಎಂದವರೇ ಮಗಳ ಪಕ್ಕದಲ್ಲಿ ಕುಳಿತು ನಾವೂ ಎದುರಿಗೆ ಊಟಕ್ಕೆ ಕೂರುವಂತೆ ಹೇಳಿದರು. 'ಅಡುಗೆ ಎಲ್ಲಾ ಎದುರಿಗೆ ತಂದು ಇಡು. ನಾವೇ ಬಡಿಸಿಕೊಂಡು ಊಟ ಮಾಡೋಣ' ಎಂದು ಹೇಳಿ ಅಡುಗೆ ಮನೆಯಿಂದ ಒಂದೆರಡು ಪಾತ್ರೆಗಳನ್ನು ಅವರೇ ತಂದು ಇಟ್ಟುಬಿಟ್ಟರು. ಮುಂದೆ ನಮ್ಮೊಡನೆ ಒಂದಾಗಿ ತಮಾಷೆ ಮಾಡುತ್ತಾ ಊಟ ಮುಗಿಸಿದರು. ಅಡುಗೆ ಏನು ಮಾಡಿದ್ದೆವೋ? ಏನು ಬಡಿಸಿದೆವೋ? ಎಲ್ಲ ಮರೆತು ಹೋಗಿದೆ. ಆದರೆ ಅವರ ನಿರ್ವ್ಯಾಜ ಪ್ರೇಮ, ಜೀವನಾದರ್ಶ ಇವುಗಳನ್ನು ಮರೆಯಲು ಸಾಧ್ಯವೇ? ಜೀವನಧರ್ಮದ ಮಾತನ್ನು ಕೃತಿಗಿಳಿಸುವ ಅಪೂರ್ವ ವ್ಯಕ್ತಿತ್ವ ಅವರದು. ಅಂದಿನ ದೃಶ್ಯ ಮಾತ್ರ ಇಂದಿಗೂ ಕಣ್ಣಿಗೆ ಕಟ್ಟಿದಂತಿದೆ. ಹೀಗೆ ಕಾಲೇಜಿನ ವಿವಿಧ ಕಾರ್ಯಕ್ರಮಗಳಿಗೆ ಅನೇಕ ಪ್ರಖ್ಯಾತ ಪ್ರಾಧ್ಯಾಪಕರುಗಳೂ, ಸಾಹಿತಿಗಳೂ, ಕಲಾವಿದರೂ ಬಂದು ನಮಗೆಲ್ಲಾ ಸಂತೋಷವನ್ನು ಉಂಟುಮಾಡುತ್ತಿದ್ದರು.

ನಿಮ್ಮ ತಂದೆಯವರ ನೇತೃತ್ವದಲ್ಲಿ ನಡೆದ ಸಾಹಿತ್ಯ, ಸಾಂಸ್ಕೃತಿಕ ಚಟುವಟಿಕೆಗಳ ಬಗ್ಗೆ ತಿಳಿಸಿ.

ನನ್ನ ತಂದೆಯವರು ೧೯೭೦ರಲ್ಲಿ ಶೃಂಗೇರಿಗೆ ಬಂದು ನೆಲಸಿದೊಡನೆ, ಶೃಂಗೇರಿಯಲ್ಲಿನ ಹಲವಾರು ಮಹನೀಯರನ್ನು ಸಂಪರ್ಕಿಸಿ ಅವರಲ್ಲಿ ಸಾಹಿತ್ಯ, ಸಂಸ್ಕೃತಿ, ಕಲೆಗಳ ತಿಳಿವಳಿಕೆ–ಪ್ರಸಾರಗಳ ಬಗ್ಗೆ ಆಸಕ್ತಿಯನ್ನು ಮೂಡಿಸಿ, 'ಸಹೃದಯ ಗೋಷ್ಠಿ'ಯನ್ನು ಸ್ಥಾಪಿಸಿದರು. ಇದರ ಅಳವಿನಲ್ಲಿ ಅನೇಕ ಕಾರ್ಯಕ್ರಮಗಳು ನಡೆಯುತ್ತಿದ್ದವು. ೧೯೭೧ರಲ್ಲಿ

ಶೃಂಗೇರಿ ಶ್ರೀ ಶಾರದಾಪೀಠದ ಜಗದ್ಗುರುಗಳಾಗಿದ್ದ ಶ್ರೀ ಶ್ರೀ ಶ್ರೀ ಅಭಿನವವಿದ್ಯಾತೀರ್ಥ ಮಹಾಸ್ವಾಮಿಗಳವರ ಸಮ್ಮುಖದಲ್ಲಿ ಬೆಂಗಳೂರಿನ ಸುಧಾ ಸಾಹಿತ್ಯ ಸಂಘದ ಸದಸ್ಯರಿಂದ 'ಶ್ರೀ ಶಂಕರವಿಜಯ ಗಮಕ ರೂಪಕ' ಕಾರ್ಯಕ್ರಮವನ್ನು ಏರ್ಪಡಿಸಿಲು ನನ್ನ ತಂದೆಯವರು ನಿರ್ಧರಿಸಿದರು. ನನ್ನ ತಂದೆಯವರ ಪರಿಚಯವಿರದಿದ್ದ ಶ್ರೀ ಶ್ರೀ ಜಗದ್ಗುರು ಮಹಾಸ್ವಾಮಿಗಳವರನ್ನು ಶೃಂಗೇರಿ ನರಸಿಂಹವನದಲ್ಲಿರುವ ಗುರುಮಂದಿರದಲ್ಲಿ ದರ್ಶನಮಾಡಿದ ನಾನು ನನ್ನ ತಂದೆಯವರ ಹಾಗೂ ಈ ಕಾರ್ಯಕ್ರಮದ ವಿಷಯಗಳನ್ನು ತಿಳಿಸಿ ಈ ಕಾರ್ಯಕ್ರಮಕ್ಕೆ ಅವರು ಕೃಪೆಮಾಡಿ ಆಗಮಿಸಿ ಆಶೀರ್ವದಿಸಬೇಕೆಂದು ಕೋರಿಕೊಂಡೆನು. ಈ ಬಗ್ಗೆ ಸಂತೋಷವನ್ನು ವ್ಯಕ್ತಪಡಿಸಿದ ಶ್ರೀ ಶ್ರೀ ಮಹಾಸ್ವಾಮಿಗಳು ತಮ್ಮ ಆಪ್ತಸಹಾಯಕರಾಗಿದ್ದ ಶ್ರೀ ಪದ್ಮನಾಭ ಉಪಾಧ್ಯಾಯ ಅವರನ್ನು ಕಾಣಲು ನನಗೆ ಹೇಳಿದರು. ಶ್ರೀ ಪದ್ಮನಾಭ ಉಪಾಧ್ಯಾಯ ನನ್ನನ್ನು ಆದರದಿಂದ ಕರೆದು, ಈ ಕಾರ್ಯಕ್ರಮದಲ್ಲಿ ಶ್ರೀ ಶ್ರೀಗಳು ಉಪಸ್ಥಿತರಿರುತ್ತಾರೆ ಎಂದು ಹೇಳಿ, ಗಮಕರೂಪಕವನ್ನು ನಡೆಸಿಕೊಡಲು ಬೆಂಗಳೂರಿನಿಂದ ಎಷ್ಟು ಮಂದಿ ಬರುತ್ತಾರೆಂದು ಕೇಳಿದರು. ೧೦ಮಂದಿ ಸಾಹಿತಿ–ಗಮಕ ಕಲಾವಿದರು ಆಗಮಿಸುತ್ತಾರೆಂದು ಹೇಳಿದ ಕೂಡಲೇ ಅಷ್ಟುಜನರಿಗೂ ಹೋಗಿಬರುವ ಪ್ರಯಾಣ ಮತ್ತಿತರ ಖರ್ಚು ವೆಚ್ಚಗಳಿಗೆ ತೆಗೆದುಕೊಳ್ಳಿ, ಗುರುಗಳ ಆಣತಿಯಂತೆ ಕೊಟ್ಟಿದ್ದೇನೆ ಎಂದು ನನಗೆ ೩೦೦ ರೂಪಾಯಿಗಳನ್ನು ಕೊಟ್ಟುಬಿಟ್ಟರು. ಆಗಿನ ದಿನಗಳಲ್ಲಿ ಬೆಂಗಳೂರಿನಿಂದ ಶೃಂಗೇರಿಗೆ ಪ್ರತಿಯೊಬ್ಬರ ಪ್ರಯಾಣದ ವೆಚ್ಚ ಕೇವಲ ೧೨ ರೂಪಾಯಿಗಳಾಗಿತ್ತು. ಯಾರೂ ನಿರೀಕ್ಷಿಸದಿದ್ದ ಗುರುಗಳ ಈ ಮಹತ್ತಮ ವಿಶ್ವಾಸ, ಅನುಗ್ರಹ, ಹೆಚ್ಚಿನ ಕೊಡುಗೆ ಮುಂತಾದವುಗಳಿಂದ ನಮ್ಮ ತಂದೆ ಹಾಗೂ ನಮಗೆ ಉಂಟಾದ ಆನಂದವು ಅಸದೃಶವಾಗಿದ್ದಿತು. ಅತ್ಯಂತ ಯಶಸ್ವಿಯಾಗಿ ನಡೆದ ಈ ಕಾರ್ಯಕ್ರಮದಲ್ಲಿ ಪೂರ್ಣವಾಗಿ ಪ್ರಸ್ತುತವಿದ್ದು ಸಂತೋಷಪಟ್ಟ ಶ್ರೀಶ್ರೀಗಳವರು ಶ್ರೀ ವಿಶ್ವನಾಥಶಾಸ್ತ್ರಿಗಳನ್ನು ತುಂಬುಹೃದಯದಿಂದ ಆಶೀರ್ವದಿಸಿದರು.

ಶೃಂಗೇರಿ ಜಗದ್ಗುರುಗಳವರ ಅನುಗ್ರಹದಿಂದ ಉತ್ತೇಜಿತರಾಗಿದ್ದ ನನ್ನ ತಂದೆಯವರು ಅನೇಕ ಸಾಹಿತ್ಯ ಹಾಗೂ ಧಾರ್ಮಿಕ ಕಾರ್ಯಕ್ರಮಗಳನ್ನು ಏರ್ಪಡಿಸುತ್ತಿದ್ದರು. ೧೯೭೩ರಲ್ಲಿ ವಾರ್ಷಿಕವಾಗಿ 'ಧರ್ಮಸಮ್ಮೇಳನ ಮತ್ತು ಸಾಹಿತ್ಯ ಸಮ್ಮೇಳನ' ಇವುಗಳನ್ನು ನಡೆಸುವ ಯೋಜನೆಯನ್ನು ಕಲ್ಪಿಸಿ ಶ್ರೀ ಶ್ರೀಗಳವರ ಅನುಗ್ರಹ, ಆಶೀರ್ವಾದಗಳಿಂದ ಜಾರಿಗೆ ತಂದರು; ಹಿಂದೂ ಧರ್ಮ ಹಾಗೂ ಸಾಹಿತ್ಯದ ವಿವಿಧ ಕವಲುಗಳಲ್ಲಿ ಪ್ರಸಿದ್ಧರಾದ ಮಹಾನ್ ಸಾಧಕರು ಹಾಗೂ ವಿದ್ವಾಂಸರನ್ನು ಶೃಂಗೇರಿಗೆ ಕರೆಸಿ ಉಪನ್ಯಾಸಗೋಷ್ಠಿಗಳನ್ನು ಏರ್ಪಡಿಸಿ ಜನತೆಯಲ್ಲಿ ಭಾವಸಾಮರಸ್ಯವನ್ನು ಉಂಟುಮಾಡುವಂತಹ ಈ ಸಮ್ಮೇಳನಗಳ ಪ್ರಮುಖ ರೂವಾರಿಯಾದರು. ಇದರಂತೆ ಶ್ರೀ ಜಗದ್ಗುರು ಮಹಾಸ್ವಾಮಿಗಳವರ ವರ್ಧಂತಿ ಅಂಗವಾಗಿ ದಿನಾಂಕ ಅದೇ ವರ್ಷ ಅಕ್ಟೋಬರ್ ೨೩,೨೪ರಂದು ಮೊದಲ ಧರ್ಮ ಮತ್ತು ಸಾಹಿತ್ಯ ಸಮ್ಮೇಳನವು ಶ್ರೀ ಜಗದ್ಗುರುಗಳ ಸಮ್ಮುಖದಲ್ಲಿ ನಡೆಯಿತು.

ಜಗದ್ಗುರು ಶ್ರೀ ಶ್ರೀ ಅಭಿನವವಿದ್ಯಾತೀರ್ಥ ಮಹಾಸ್ವಾಮಿಗಳವರು ಸಮ್ಮೇಳನದ ಎರಡು ದಿನಗಳೂ ಉಪಸ್ಥಿತರಾಗಿದ್ದು ಅನುಗ್ರಹ ಭಾಷಣ ಮಾಡಿ ನೆರೆದಿದ್ದ ಅಗಣಿತ ಜನಸ್ತೋಮವನ್ನು ಆಶೀರ್ವದಿಸಿದರು. ಮಲೆನಾಡಿನ ಪರಿಸರದಲ್ಲಿ ಅಭೂತಪೂರ್ವವಾಗಿ ನಡೆದ ಈ ಶರದುತ್ಸವವು ಎಲ್ಲೆಡೆಗಳಿಂದ ಬಂದು ವ್ಯಾಖ್ಯಾನ ಮಂಟಪದಲ್ಲಿ ನೆರೆದಿದ್ದ ಜನಕೋಟಿಯ ಕಣ್ಮನಗಳನ್ನು ತಣಿಸಿತು. ಜನತೆಯ ಮನದಲ್ಲಿ ಸುಪ್ತವಾಗಿದ್ದ ಧರ್ಮ ಮತ್ತು ಸಾಹಿತ್ಯದ ಪ್ರೇಮವನ್ನು ಹೊರಹೊಮ್ಮಿಸಿತು. ೧೯೭೪ನೇ ಇಸವಿಯಲ್ಲೂ ಈ ಬಗೆಯ ಸಮ್ಮೇಳನವು ಅತ್ಯಂತ ಯಶಸ್ವಿಯಾಗಿ ನಡೆಯಿತು.

ಗಿರಿಧರಶಾಸ್ತ್ರಿಗಳ ಬಗೆಗಿನ ನಿಮ್ಮ ಅಭಿಪ್ರಾಯವನ್ನು ತಿಳಿಸಿ.

ನಾನು ೧೯೭೩ರಲ್ಲಿ ಶೃಂಗೇರಿಯನ್ನು ಬಿಟ್ಟಾಗ ನನ್ನ ತಮ್ಮ ಗಿರಿಧರಶಾಸ್ತ್ರಿ ಬಿಎಸ್‌ಸಿ ಅಂತಿಮ ವರ್ಷದಲ್ಲಿ ವ್ಯಾಸಂಗಮಾಡುತ್ತಿದ್ದು ಮೈಸೂರಿನಲ್ಲಿ ಸಂಸ್ಕೃತ ಸ್ನಾತಕೋತ್ತರ ಪದವೀಧರನಾದನಂತರ ಅಧ್ಯಾಪಕವೃತ್ತಿಗಾಗಿ ಪ್ರಯತ್ನಿಸುತ್ತಿದ್ದಾಗ ಶೃಂಗೇರಿ ಶ್ರೀ ಶ್ರೀ ಶ್ರೀ ಅಭಿನವ ವಿದ್ಯಾತೀರ್ಥ ಮಹಾಸ್ವಾಮಿಗಳಿಂದ ಅವರ ಕಾರ್ಯದರ್ಶಿಯಾಗಿ ಕೆಲಸಮಾಡಬೇಕೆಂಬ ಅನುಗ್ರಹರೂಪವಾದ ಆದೇಶ ಬಂದಿತು. ಜಗದ್ಗುರುಗಳ ಈ ಪ್ರಸಾದವನ್ನು ಸ್ವೀಕರಿಸಿ, ಕಾರ್ಯದರ್ಶಿಯಾದ ಅವನು ಮುಂದೆ ಆಡಳಿತಾಧಿಕಾರಿಯಾಗಿ ಕಾರ್ಯನಿರ್ವಹಿಸಿದನು. ಹೀಗೆ ಹದಿನೈದು ವರ್ಷಗಳ ಕಾಲ ನಿಜವಾದ ಗುರುಸೇವೆಯಲ್ಲಿ ನಿರತನಾಗಿದ್ದ ಅವನಿಗೆ ಪ್ರಪಂಚದ ವಿಷಯಗಳ ಬಗ್ಗೆ ಆಸಕ್ತಿ ಇರಲಿಲ್ಲ. ೧೯೯೦ರಲ್ಲಿ ಮಠದಿಂದ ನಿವೃತ್ತನಾದ ಅವನು ಕೆಲವು ಕಾಲ ದೆಹಲಿಯಲ್ಲಿ ಒಂದು ಖಾಸಗಿ ಸಂಸ್ಥೆಯಲ್ಲಿ ಕೆಲಸಮಾಡುತ್ತಿದ್ದು ಒಂದೆರಡು ವರ್ಷಗಳ ನಂತರ ಶೃಂಗೇರಿಗೆ ವಾಪಸ್ಸಾಗಿ ಅಲ್ಲಿ ಶ್ರೀ ಜೆಸಿಬಿಎಂ ಕಾಲೇಜಿನಲ್ಲಿ ಅಧ್ಯಾಪಕನಾಗಿ ಕಾರ್ಯನಿರ್ವಹಿಸಲು ಆರಂಭಿಸಿದ. ಜೊತೆಗೆ ತನ್ನ ಬಿಡುವಿನ ಸಮಯವೆಲ್ಲವನ್ನೂ ವೇದ, ವೇದಾಂತ, ಶಾಸ್ತ್ರ, ಸಂಸ್ಕೃತ ಸಾಹಿತ್ಯ, ಭಾಷೆಗಳ ಅಧ್ಯಯನ, ಬೋಧನೆಗಳಲ್ಲಿ ತೊಡಗಿಸಿಕೊಂಡು ಶೃಂಗೇರಿಯಲ್ಲಿ ಎಲ್ಲರ ಗೌರವಾದರಗಳಿಗೆ ಪಾತ್ರನಾಗಿದ್ದಾನೆ. ಹೀಗೆ ಅಪಾರ ಸಾಧನೆ ಮಾಡುತ್ತಿರುವ ಅವನು ನನ್ನ ಸೋದರನಾಗಿರುವುದು ಹೆಮ್ಮೆಯ ವಿಷಯವಾಗಿದೆ.

ಎನ್‌ಎಎಲ್ ಸಂಸ್ಥೆಯಲ್ಲಿನ ಅನುಭವಗಳು

೧೯೭೩ರಲ್ಲಿ ಎನ್‌ಎಎಲ್ ಗಣಕವಿಭಾಗವನ್ನು ಸೇರಿದಾಗ ನನಗೆ ಗಣಕದ ಅರಿವೇ ಇರಲಿಲ್ಲ; ಗಣಕವನ್ನೂ ನೋಡಿರಲಿಲ್ಲ; ಆದರೂ ನನ್ನನ್ನು ಆಯ್ಕೆಮಾಡಿದ್ದು ಏಕೆ? ಎಂದು ಗಣಕವಿಭಾಗದ ಮುಖ್ಯಸ್ಥರಾಗಿದ್ದ ಶ್ರೀ ಶ್ರೀನಿವಾಸನ್ ಅವರನ್ನು ಕೇಳಿದೆ. ಅದಕ್ಕೆ ಅವರು ಉತ್ತರಿಸುತ್ತಾ "ಸಂದರ್ಶನದಲ್ಲಿ ಗಣಕವನ್ನು ನೋಡೇ ಇಲ್ಲ ಎಂದು ಹೇಳಿದಿರಿ. ನೀವು ಗಣಿತಶಾಸ್ತ್ರ ಪಾಠ ಮಾಡುತ್ತಿರುವುದನ್ನು ಹೇಳಿದಾಗ ಗಣಿತಕ್ಕೆ ಸಂಬಂಧಿಸಿದ ಕೆಲವು ಪ್ರಶ್ನೆಗಳನ್ನು ಕೇಳಿದೆವಲ್ಲವೇ? ಆಗ ನೀವು ಕೊಟ್ಟ ಉತ್ತರಗಳಿಂದ ಗಣಿತದ ಆಂತರ್ಯವು

ನಿಮಗೆ ಚೆನ್ನಾಗಿ ತಿಳಿದಿರುವುದು ನಮಗೆ ಗೊತ್ತಾಯಿತು. ಹೀಗೆ ಒಂದು ಅಧ್ಯಯನ ಅಥವಾ ಕಾರ್ಯಕ್ಷೇತ್ರದ ವಿಷಯದ ಆಂತರ್ಯಕ್ಕೆ ಹೋಗುವ ಪ್ರವೃತ್ತಿ ನಿಮ್ಮಲ್ಲಿದೆ. ಆದ್ದರಿಂದ ಇಲ್ಲಿಗೆ ಬಂದ ಕೆಲವೇ ದಿನಗಳಲ್ಲಿ ಗಣಕದ ಬಗ್ಗೆ ಪರಿಣಿತರಾಗುತ್ತೀರಿ ಎಂದು ನಮಗೆ ಅನ್ನಿಸಿ ನಿಮ್ಮನ್ನು ಕೆಲಸಕ್ಕೆ ಆಯ್ಕೆ ಮಾಡಿದೆವು" ಎಂದುಬಿಟ್ಟರು. ಮುಂದೆ ಗಣಕದ ಕಾರ್ಯವಿಧಾನಗಳು, ತಂತ್ರಾಂಶಗಳು ಮುಂತಾದವುಗಳನ್ನು ಗಣಕವಿಜ್ಞಾನ ವಿಭಾಗದ ಸಹೋದ್ಯೋಗಿಗಳು ಆತ್ಮೀಯತೆಯಿಂದ ತಿಳಿಸಿಕೊಟ್ಟರು. ಇದರಿಂದಾಗಿ ಗಣಕಸಂಬಂಧಿ ವಿಚಾರಗಳ ಕೂಲಂಕುಶ ಅಧ್ಯಯನವು ಸಾಧ್ಯವಾಗಿ ನಾನು ಆ ಕ್ಷೇತ್ರದಲ್ಲಿ ತೃಪ್ತಿಕರವಾಗಿ ಕೆಲಸಮಾಡಲು ಸಾಧ್ಯವಾಯಿತು. ರಾವೈಪ್ರದಲ್ಲಿ ಕೆಲಸ ಮಾಡುತ್ತಿದ್ದಷ್ಟು ಕಾಲವೂ ಅತ್ಯಾಧುನಿಕ ವೈಜ್ಞಾನಿಕ ವಿಚಾರಗಳಿಗೆ ಸಂಬಂಧಿಸಿದಂತೆ ಅಲ್ಲಿ ನಡೆಯುತ್ತಿದ್ದ ಸಂಶೋಧನೆ ಮತ್ತು ಬಳಕೆಯ ಚಟುವಟಿಕೆಗಳನ್ನು ನೋಡಿ ಸಂತೋಷವಾಗುತ್ತಿತ್ತು.

ಒಮ್ಮೆ ಒಂದು ಅಂತಾರಾಷ್ಟ್ರೀಯ ಪತ್ರಿಕೆಯಲ್ಲಿ ಪ್ರಕಟನೆಗೆಂದು ನನ್ನ ಒಂದು ಸಂಶೋಧನಾ ಲೇಖನವನ್ನು ಸಿದ್ಧಮಾಡಿದೆ. ಪ್ರಯೋಗಶಾಲೆಯ ನಿಯಮದ ಪ್ರಕಾರ ಎನ್‌ಎಎಲ್‌ನ ನಿರ್ದೇಶಕರು ಅದನ್ನು ಪರಿಶೀಲಿಸಿ ಒಪ್ಪಿಗೆ ಸೂಚಿಸಿದ ನಂತರವೇ ಅದನ್ನು ಪ್ರಕಟನೆಗೆ ಕಳುಹಿಸಬೇಕಾಗಿತ್ತು. ಅವರು ಬೇರೊಂದು ವಿಭಾಗದ ಮೂವರು ವಿಜ್ಞಾನಿಗಳಿಗೆ ಈ ಲೇಖನವನ್ನು ಕಳುಹಿಸಿ ಇದನ್ನು ಕೂಲಂಕುಶವಾಗಿ ಪರಿಶೀಲಿಸಿ ತಮ್ಮ ಅಭಿಪ್ರಾಯಗಳನ್ನು ತಿಳಿಸಲು ಸೂಚಿಸಿದರು. ಆ ಮೂವರಲ್ಲಿ ಒಬ್ಬರು ಲೇಖನದ ವಿಷಯದಲ್ಲಿ ಕೆಲವು ತಾಂತ್ರಿಕ ದೋಷಗಳಿವೆ ಎಂದೂ, ಇನ್ನೊಬ್ಬರು ಒಂದೆರಡು ಕಡೆ ಭಾಷೆಯ ವಿಷಯದಲ್ಲಿ ಸುಧಾರಣೆ ಅಗತ್ಯವೆಂದೂ, ಮತ್ತೊಬ್ಬರು ಒಂದೆರಡು ಚಿತ್ರಗಳಿಗೆ ಕೆಲವು ವಿವರಣೆಗಳು ಬೇಕೆಂದೂ ತಿಳಿಸಿದರು. ನಾನು ಆ ಮೂವರ ಬಳಿ ಹೋಗಿ ಲೇಖನದಲ್ಲಿನ ವಿಷಯದಲ್ಲಿ ದೋಷ ಇಲ್ಲವೆಂಬುದನ್ನೂ, ಒಂದೆರಡು ಕಡೆ ಭಾಷೆಯನ್ನು ಸರಿಪಡಿಸಬೇಕೆಂದೂ, ಚಿತ್ರಗಳಿಗೆ ಕೊಡಲಾಗಿದ್ದ ವಿವರಣೆಗಳನ್ನು ಎರಡು ಕಡೆ ಬದಲಾಯಿಸಬಹುದು ಎಂದೂ ತೋರಿಸಿಕೊಟ್ಟೆ. ಈ ಮಾತುಕತೆಗಳ ಸಂದರ್ಭದಲ್ಲಿ ನನ್ನಲ್ಲಿ ಯಾವುದೇ ರೀತಿಯ ಮೇಲರಿಮೆ, ಕೀಳರಿಮೆಗಳು ಇರಲಿಲ್ಲ. ಹೀಗೆ ರಾವೈಪ್ರದಲ್ಲಿ ಬೇರೆ ಬೇರೆ ಸಂದರ್ಭಗಳಲ್ಲಿ ಪರಸ್ಪರ ಅಭಿಪ್ರಾಯ ಭೇದಗಳಿದ್ದರೂ, ಅವೆಲ್ಲವೂ ಬಹುಮಟ್ಟಿಗೆ ಸಾಮರಸ್ಯ ಭಾವನೆಗಳಿಂದಲೇ ಕೊನೆಗೊಂಡಿವೆ.

ವಂಶಗೌರವ ವರ್ಧಕರಾದ ಶಾಸ್ತ್ರಿ ಸಹೋದರರು

– ನ.ಕೃಷ್ಣಪ್ಪ, ಬೆಂಗಳೂರು
ಹಿರಿಯ ಪ್ರಚಾರಕರು, ರಾಷ್ಟ್ರೀಯ ಸ್ವಯಂ ಸೇವಕ ಸಂಘ
೦೮೦-೨೬೬೧೦೦೮೧

ಪೂಜ್ಯರಾದ ದಿವಂಗತ ಶ್ರೀ ಚಿ.ನಾ ವಿಶ್ವನಾಥಶಾಸ್ತ್ರಿಗಳು ಕೆಜಿಎಫ್‌ನಲ್ಲಿ ಅಧ್ಯಾಪಕ ವೃತ್ತಿಯಲ್ಲಿದ್ದ ಕಾಲ. ಅವರ ಕುಟುಂಬವಿಡೀ ರಾಷ್ಟ್ರೀಯ ಸ್ವಯಂಸೇವಕ ಸಂಘದ ಸಂಬಂಧವಿದ್ದವರೇ. ಹಾಗಾಗಿ ೧೯೫೮ರಿಂದ ೧೯೭೦ರವರೆಗೆ ಕೆಜಿಎಫ್‌ನಲ್ಲಿ ಅವರ ಮನೆ ಸಂಘದ ಚಟುವಟಿಕೆಯ ಕೇಂದ್ರವಾಗಿದ್ದುದೂ ತುಂಬ ಸಹಜ.

ಈ ಅವಧಿಯಲ್ಲಿ ಪ್ರಾಂತಪ್ರಚಾರಕರಾಗಿದ್ದ ಮಾನ್ಯ ಶ್ರೀ ಹೊ. ವೆ. ಶೇಷಾದ್ರಿ ಅವರು ತಮ್ಮ ಪ್ರವಾಸದಲ್ಲಿ ಒಮ್ಮೆ ಕೆಜಿಎಫ್‌ಗೂ ಬಂದಿದ್ದರು. ನಮಗೆಲ್ಲಾ ಶಾಸ್ತ್ರಿಗಳ ಮನೆಯಲ್ಲೇ ವಸತಿ. ಹಗಲಿಡೀ ಹರಟೆ. ಶ್ರೀ ಶೇಷಾದ್ರಿ ಅವರ ಜೊತೆ ಜೋರಾಗಿ ನಗುತ್ತಾ ಹರಟೆಯಲ್ಲಿ ಸಮಯ ಕಳೆದುದು ಯಾರಿಗೂ ಅರಿವಾಗಲಿಲ್ಲ. ಸಂಜೆ ಹೊರಗಡೆ ಹೋಗಿ ಶಾಖೆ ಮುಗಿಸಿ ರಾತ್ರಿ ಮನೆಗೆ ಬಂದೆವು. ಶಾಸ್ತ್ರಿಗಳು ಶೇಷಾದ್ರಿಗಳಿಗೆ 'ಬೆಳಗಿನಿಂದ ಬಿಡುವಿಲ್ಲದಷ್ಟು ಕೆಲಸ ಮಾಡಿ ದಣಿದಿದ್ದೀರಿ. ಈಗಲಾದರೂ ಸ್ವಲ್ಪ ವಿಶ್ರಾಂತಿ ಪಡೆಯಿರಿ' ಎಂದು ಹೇಳಿ ಅವರನ್ನು ವಿಶ್ರಾಂತಿಗೆ ಕಳುಹಿಸಿ ತಾವೂ ಮಲಗಿದರು.

ರಾತ್ರಿ ಸುಮಾರು ಒಂದು ಗಂಟೆ ಆಗಿರಬಹುದು. ಶಾಸ್ತ್ರಿಗಳಿಗೆ ಎದೆನೋವು ಬಹಳ ಜೋರಾಗಿ ಬಂತು. ಅವರ ನರಳಾಟದಿಂದ ಎಲ್ಲರಿಗೂ ಎಚ್ಚರವಾಯಿತು. ಶೇಷಾದ್ರಿಗಳೂ ಎದ್ದು ಬಂದು ನೋಡಿದರು. ಹೃದಯಾಘಾತ ಆಗಿರಬಹುದೆಂದು ಹೇಳುತ್ತಾ ತಾವೇ ಚಿಕಿತ್ಸೆ ಆರಂಭಿಸಿದರು. ನನ್ನನ್ನು ಕರೆದು 'ಯಾರಾದರೂ ಡಾಕ್ಟರನ್ನು ಬೇಗನೇ ಕರೆದುಕೊಂಡು ಬಾ' ಎಂದರು. ನಾನು ಶ್ರೀ ವಿಶ್ವನಾಥಶಾಸ್ತ್ರಿಗಳ ಮಗ ಶ್ರೀನಾಥನನ್ನು ಜೊತೆಯಲ್ಲಿ ಕರೆದುಕೊಂಡು ಹೋಗಿ ಹತ್ತಿರದಲ್ಲಿದ್ದ ಒಬ್ಬ ಡಾಕ್ಟರನ್ನು ಕರೆತಂದೆನು.

ಪ್ರಥಮ ಚಿಕಿತ್ಸೆಯಿಂದಾಗಿ ಶಾಸ್ತ್ರಿಗಳು ಸ್ವಲ್ಪ ಸುಧಾರಿಸಿದ್ದರು. ಡಾಕ್ಟರನ್ನು ಕಂಡಕೂಡಲೇ 'ಬನ್ನಿ ಡಾಕ್ಟರೇ. ಮಧ್ಯರಾತ್ರಿಯಲ್ಲಿ ನಿಮಗೆಲ್ಲಾ ತೊಂದರೆ ಕೊಡುವಂತೆ ಆಯ್ತು' ಎಂದು ತಮ್ಮ ಸಹಜ ನಮ್ರತೆಯನ್ನು ವ್ಯಕ್ತಪಡಿಸಿದರು. ಆಗ ಡಾಕ್ಟರು 'ನನಗೇನೂ ತೊಂದರೆ ಆಗಿಲ್ಲ ಬಿಡಿ. ಆದರೆ ಈಗ ನಿಮಗೆ ಪ್ರಥಮ ಚಿಕಿತ್ಸೆ ಮಾಡಿದ್ದಾರಲ್ಲಾ ಅವರು ಸೂಕ್ತ ಸಮಯದಲ್ಲಿ ನಾವು ಮಾಡಬೇಕಿದ್ದ ಕೆಲಸವನ್ನು ತಾವೇ ಮಾಡಿ ನಿಮ್ಮನ್ನು ಉಳಿಸಿದ್ದಾರೆ. ಇವರು ಯಾರು?' ಎಂದು ಶಾಸ್ತ್ರಿಗಳನ್ನು ಕೇಳಿದರು. ಶಾಸ್ತ್ರಿಗಳು ಉತ್ತರಿಸುವ ಮೊದಲೇ ಶ್ರೀ ಶೇಷಾದ್ರಿಗಳು ನಗುತ್ತಾ 'ನಾನೇ? ನನ್ನ ಹೆಸರು ಶೇಷಾದ್ರಿ. ನಾನೂ ಈ

ಮನೆಯವನೇ. ನಾವೆಲ್ಲ ಬಂಧುಗಳು, ಸೋದರರು' ಎಂದು ಹೇಳುತ್ತಾ ಆ ವೈದ್ಯರ ಬಗ್ಗೆ ವಿಚಾರಿಸಲಾರಂಭಿಸಿದರು. ನನ್ನ ಜೀವನದಲ್ಲಿ ನನಗೆ ಹತ್ತಾರು ಪಾಠಗಳನ್ನು ಕಲಿಸಿದ ಘಟನೆ ಅದು. ಶೇಷಾದ್ರಿಗಳ, ಶಾಸ್ತ್ರಿಗಳ, ವೈದ್ಯರ ಮಾತುಗಳು ಅತ್ಯಂತ ಉಚ್ಚ ಸಂಸ್ಕಾರದ ಮಾತುಗಳು. ಮೂವರೂ ತಮಗಿಂತ ಅನ್ಯರ ಬಗೆಗೇ ಹೆಚ್ಚು ಚಿಂತಿಸುತ್ತಿದ್ದವರು. ಕೇವಲ ಅಳು, ನೋವು, ನಿರಾಶೆಗಳಲ್ಲಿ ಮುಳುಗಿರುವಂತಹ ವಾತಾವರಣವನ್ನು ಚೈತನ್ಯಮಯವಾಗಿಸಿದ ಕ್ಷಣಗಳವು.

ಅಂದಿನಿಂದಲೂ ಈ ಮನೆತನದವರನ್ನು ನೋಡುತ್ತಲೇ ಬಂದಿರುವೆ. ದಿನ ಕಳೆದಂತೆ ಇವರ ಬಗ್ಗೆ ಗೌರವ ಹೆಚ್ಚುತ್ತಲೇ ಇದೆ. ಅವರ ಪೂರ್ವಿಕರ ಪುಣ್ಯ ಇರಬೇಕು. ಮನೆಯ ಎಲ್ಲರಲ್ಲೂ ಪರಹಿತದ ಭಾವ ಒಂದಲ್ಲ ಒಂದು ರೀತಿ ಕಾಣುತ್ತಿದೆ. ನೂರಾರು ಜನರು ಶಾಸ್ತ್ರಿಗಳಿಂದ, ಅವರ ಪತ್ನಿಯಿಂದ, ಅವರ ಮಕ್ಕಳಿಂದ ಉಪಕೃತರಾಗಿದ್ದಾರೆ. ಶಿಕ್ಷಣ ಸಂಸ್ಕಾರ ಪಡೆದಿದ್ದಾರೆ. ಅವರುಗಳ ಮನೆಗೆ ಬಂದವರೆಲ್ಲಾ ನಗುನಗುತ್ತಾ ಹೆಚ್ಚು ತೇಜಸ್ಸಿನಿಂದ, ಉಕ್ಕಿದ ಚೈತನ್ಯದಿಂದ ಹೊರಹೊರಟಿದ್ದಾರೆ.

ಶಾಸ್ತ್ರಿಗಳು ತಮ್ಮ ನಿವೃತ್ತಿಯ ನಂತರ ೧೯೭೦ರಲ್ಲಿ ಶೃಂಗೇರಿಗೆ ಬಂದು ನೆಲಸಿದರು. ಅವರ ಮಗ ಶ್ರೀನಾಥ ೧೯೬೭ರಿಂದ ಶೃಂಗೇರಿಯ ಶ್ರೀ ಜೆಸಿಬಿಎಂ ಕಾಲೇಜಿನಲ್ಲಿ ಗಣಿತಶಾಸ್ತ್ರ ಅಧ್ಯಾಪಕನಾಗಿದ್ದ. ಶೃಂಗೇರಿಯ ಮಠ, ಶ್ರೀ ಶಾರದಾಂಬಾ ಸನ್ನಿಧಿ, ಆಗ ಜಗದ್ಗುರುಗಳಾಗಿದ್ದ ಶ್ರೀ ಶ್ರೀ ಅಭಿನವ ವಿದ್ಯಾತೀರ್ಥ ಮಹಾಸ್ವಾಮಿಗಳ ದರ್ಶನ, ಮಾರ್ಗದರ್ಶನಗಳಿಂದ ತಮ್ಮ ಜೀವನ ಸಾರ್ಥಕವಾಗುವುದೆಂಬ ಬಯಕೆ ಅವರದು. ಈ ಹಿನ್ನೆಲೆಯಲ್ಲಿ ಅವರು ಶೃಂಗೇರಿಯ ಮಕ್ಕಳಿಗೆ ಹಾಗೂ ಯುವಜನತೆಗೆ ಶ್ಲೋಕಗಳು, ಭಗವದ್ಗೀತೆ, ಅಮರ, ಸಂಸ್ಕೃತ, ಗಮಕ, ಕಥೆಗಳು ಮುಂತಾದವುಗಳನ್ನು ಹೇಳಿಕೊಡುವ ಮೂಲಕ ತಮ್ಮ ಸಮಯವೆಲ್ಲವನ್ನೂ ಉಪಯೋಗಿಸಿದರು. ಸಾಹಿತ್ಯ, ಸಾಂಸ್ಕೃತಿಕ ಚಟುವಟಿಕೆಗಳನ್ನು ನಡೆಸಲು ಸಹೃದಯಗೋಷ್ಠಿ ಎಂಬ ಸಂಸ್ಥೆಯನ್ನು ಸ್ಥಾಪಿಸಿ ಅನೇಕ ಚಟುವಟಿಕೆಗಳನ್ನು ನಡೆಸುತ್ತಾ ಹೋದರು. ಎಷ್ಟಾದರೂ ಅಧ್ಯಾಪಕ ಪ್ರವೃತ್ತಿ ಅವರದು. ಅವರ ಭಾವತೀವ್ರತೆಯನ್ನು ಕಂಡ ಜಗದ್ಗುರುಗಳು ಅವರಿಗೆ ಶೃಂಗೇರಿ ಮಠದ ಆವರಣದಲ್ಲಿದ್ದ ವ್ಯಾಖ್ಯಾನ ಮಂಟಪದಲ್ಲಿ ಈ ಚಟುವಟಿಕೆಗಳನ್ನು ನಡೆಸಲು ಅವಕಾಶ ಮಾಡಿಕೊಟ್ಟರು. ಈ ವೈವಿಧ್ಯಮಯ ಚಟುವಟಿಕೆಗಳ ಫಲವಾಗಿ ಶೃಂಗೇರಿಯ ಎಲ್ಲರಿಗೆ, ಶೃಂಗೇರಿಗೆ ಬರುತ್ತಿದ್ದ ಎಲ್ಲ ಭಕ್ತರಿಗೆ ಶ್ರೀ ವಿಶ್ವನಾಥಶಾಸ್ತ್ರಿಗಳ ಬಗ್ಗೆ ಅಪಾರ ಆದರ, ಆತ್ಮೀಯತೆಗಳು ಬೆಳೆದವು. ಶೃಂಗೇರಿಯ ವಾತಾವರಣವೂ ಜನಪ್ರಿಯವಾಗಲಾರಂಭಿಸಿತು.

ಇಂತಹ ಅನೇಕ ವಿಧವಾದ ಚಟುವಟಿಕೆಗಳ ಅಂಗವಾಗಿ ಶ್ರೀ ಶಾಸ್ತ್ರಿಗಳು ಬೇರೆ ಬೇರೆ ಊರುಗಳಿಂದ ವಿದ್ವಾಂಸರನ್ನು ಕರೆಸಿ ಮಠದ ಆವರಣದಲ್ಲಿ ಅವರಿಂದ ಪ್ರವಚನಗಳು, ವ್ಯಾಖ್ಯಾನಗಳು, ಉಪನ್ಯಾಸಗಳು ಮುಂತಾದವುಗಳನ್ನು ಏರ್ಪಡಿಸುತ್ತಿದ್ದರು.

ಒಮ್ಮೆ ಶ್ರೀ ಹೊ ವೆ ಶೇಷಾದ್ರಿ ಅವರಿಂದ ಐದು ದಿನಗಳ ಕಾಲ ಶ್ರೀ ಶಿವಾಜಿ ಮಹಾರಾಜರ ಬಗ್ಗೆ ಪ್ರವಚನಗಳನ್ನು ಏರ್ಪಡಿಸಿದ್ದರು. ಆ ಕಾರ್ಯಕ್ರಮಕ್ಕೆ ಶೃಂಗೇರಿ ಹಾಗೂ ಸುತ್ತಮುತ್ತಲ ಊರುಗಳಿಂದ ನೂರಾರು ಸಂಖ್ಯೆಯಲ್ಲಿ ಜನ ಬಂದು ವ್ಯಾಖ್ಯಾನ ಮಂಟಪದಲ್ಲಿ ಸ್ಥಳ ಸಾಲದಂತೆ ಆಗಿಬಿಟ್ಟಿತು.

ಈ ನಡುವೆ ಅವರ ಮಗ ಗಿರಿಧರಶಾಸ್ತ್ರಿ ಅವರು ಪದವೀಧರರಾದರು. ಶ್ರೀನಾಥಶಾಸ್ತ್ರಿ ೧೯೭೩ರಲ್ಲಿ ಬೆಂಗಳೂರಿಗೆ ಬಂದು ವಿಜ್ಞಾನಿಯಾಗಿ ಪ್ರಸಿದ್ಧರಾದರೆ, ಗಿರಿಧರಶಾಸ್ತ್ರಿ ಸಂಸ್ಕೃತ ಸಾಹಿತ್ಯ, ವೇದಾಂತಗಳ ಸಾಧಕರೆಂದು ಹೆಸರು ಪಡೆದರು.

ಈಗ ಶ್ರೀ ವಿಶ್ವನಾಥಶಾಸ್ತ್ರಿಗಳು, ಅವರ ಪತ್ನಿಯವರು ತಮ್ಮ ಸಫಲ ಜೀವನಯಾತ್ರೆಯನ್ನು ಮುಗಿಸಿದ್ದಾರೆ. ಅವರ ಕುಟುಂಬದ ಮಕ್ಕಳು ಹಾಗೂ ಅವರ ಮನೆಯವರು ತಮ್ಮದೇ ರೀತಿಯಲ್ಲಿ ಬೆಳೆದು, ತಮ್ಮ ಸುತ್ತಲಿನವರನ್ನು ಬೆಳೆಸುತ್ತಾ ತಮ್ಮ ತಂದೆ, ತಾಯಿಯವರಿಗೆ ಕೀರ್ತಿ ತರುತ್ತಿದ್ದಾರೆ. ಸಂಸ್ಕೃತ ಶ್ಲೋಕವೊಂದಿದೆ:

ಪರಿವರ್ತಿನಿ ಸಂಸಾರೇ ಮೃತಃ ಕೋ ವಾ ನ ಜಾಯತೇ।
ಸ ಜಾತೋ ಯೇನ ಜಾತೇನ ಯಾತಿ ವಂಶಃ ಸಮುನ್ನತಿಮ್॥

ಬದಲಾಗುತ್ತಿರುವ ಜಗತ್ತಿನಲ್ಲಿ ಸತ್ತವರನ್ನು, ಹುಟ್ಟದೇ ಇರುವವರನ್ನು ಗುರುತಿಸುವವರು ಯಾರು? ಯಾರಿಂದ ವಂಶವು ಗೌರವವನ್ನು ಪಡೆಯುವುದೋ ಅವರೇ ನಿಜವಾಗಿ ಹುಟ್ಟಿದವರು.

ಈ ಮಾತುಗಳಿಗೆ ಆದರ್ಶವಾಗಿ ಶ್ರೀನಾಥಶಾಸ್ತ್ರಿಗಳು ಮತ್ತು ಗಿರಿಧರಶಾಸ್ತ್ರಿಗಳು ಇದ್ದಾರೆ. ಉತ್ತಮ ಮಾನವನಿಗೆ ಇರಬೇಕಾದ ಎರಡು ಹೊಣೆಗಳೆಂದರೆ ತನ್ನ ಹಿಂದಿನ ಪೀಳಿಗೆಯ ಕುರಿತಾಗಿ ತಮ್ಮ ಸುತ್ತಮುತ್ತಲಿನ ಜನಮನದಲ್ಲಿ ಹೆಮ್ಮೆ ಹಾಗೂ ಗೌರವಗಳು ಹೆಚ್ಚುವಂತೆ ಬಾಳುವುದು ಮತ್ತು ತಮ್ಮ ಮುಂದಿನ ಪೀಳಿಗೆಯವರು ತಮಗೆ ಹಾಗೂ ತಮ್ಮ ದೇಶ, ಧರ್ಮ, ಸಂಸ್ಕೃತಿ ಇವುಗಳಿಗೆ ಹೆಮ್ಮೆ ಗೌರವ ತರುವಂತೆ ಅವರ ನಡೆ, ನುಡಿಗಳನ್ನು ತಿದ್ದುವುದು. ಈ ಎರಡು ಹೊಣೆಗಳನ್ನೂ ಹೊತ್ತು ಈ ಸೋದರರು ಹಲವಾರು ಸೇವಾಕಾರ್ಯಗಳನ್ನು ಮಾಡುತ್ತಾ ಬಂದಿದ್ದಾರೆ.

ಶ್ರೀ ಗಿರಿಧರಶಾಸ್ತ್ರಿಗಳು ೧೯೭೪ರಲ್ಲಿ ಸಂಸ್ಕೃತದಲ್ಲಿ ಎಂ.ಎ. ವಿದ್ಯಾಭ್ಯಾಸ ಮಾಡಿದನಂತರ ಶೃಂಗೇರಿ ಜಗದ್ಗುರು ಮಹಾಸ್ವಾಮಿಗಳವರ ಆದೇಶದಂತೆ ೧೯೭೫ರಲ್ಲಿ ಶೃಂಗೇರಿ ಮಠವನ್ನು ಸೇರಿ ಹತ್ತು ವರ್ಷಗಳನ್ನು ಮೀರಿ ಮಠದ ಆಡಳಿತಾಧಿಕಾರಿಯಾಗಿ ಸೇವೆ ಸಲ್ಲಿಸಿದರು. ಶ್ರೀಮಠದ ಲೌಕಿಕ ಮತ್ತು ಆಧ್ಯಾತ್ಮಿಕ ಕಾರ್ಯ ಹಾಗೂ ಸೇವಾವ್ಯವಸ್ಥೆಗಳು, ಸ್ವಾಮೀಜಿ ಅವರ ಸಾಧನೆಗಳಿಗೆ ಪೂರಕವಾದ ವ್ಯವಸ್ಥೆಗಳು, ಅವರ ಪ್ರವಾಸ ಯೋಜನೆಗಳು ಮುಂತಾದವುಗಳನ್ನೆಲ್ಲಾ ಯಶಸ್ವಿಯಾಗಿ ಮಾಡುತ್ತಾ ಶ್ರೀಮಠದ

ಬೆಳವಣಿಗೆಗೆ ತಮ್ಮದೇ ಆದ ರೀತಿಯಲ್ಲಿ ಕಾರಣರಾದರು. ೧೯೯೦ರ ಆಸುಪಾಸಿನಲ್ಲಿ ಗಿರಿಧರಶಾಸ್ತ್ರಿಗಳು ಮಠದ ಆಡಳಿತಾಧಿಕಾರಿಯ ಹೊಣೆಯಿಂದ ನಿವೃತ್ತರಾದರೂ ಮುಂದೆ ಶೃಂಗೇರಿಯಲ್ಲೇ ನೆಲೆಸಿಬಿಟ್ಟರು. ಸ್ಥಳೀಯ ಶ್ರೀ ಜಗದ್ಗುರು ಚಂದ್ರಶೇಖರಭಾರತೀ ಸ್ಮಾರಕ ಕಾಲೇಜಿನಲ್ಲಿ ಸಂಸ್ಕೃತವನ್ನು ಕಲಿಸುತ್ತಾ ಎಲ್ಲರಿಗೂ ಬೇಕಾದವರಾಗಿ ಬಾಳಲಾರಂಭಿಸಿದರು. ೧೯೮೧ರಲ್ಲಿ ತಮ್ಮ ತಂದೆಯವರು ತೀರಿಕೊಂಡನಂತರ ತಾಯಿಯವರ ಸೇವೆ ಮಾಡುತ್ತಾ ಬಂದರು. ಜೊತೆಗೆ ಅವರ ಕಲಿಕೆಯೂ ಮುಂದುವರೆಯಿತು. ೨೦೦೧ರಲ್ಲಿ, ಮೈಸೂರಿನಲ್ಲಿರುವ ಕರ್ನಾಟಕ ರಾಜ್ಯ ಮುಕ್ತವಿಶ್ವವಿದ್ಯಾನಿಲಯದ ಇಂಗ್ಲಿಷ್ ಎಂಎ ಪದವೀಧರರಾದರು. ಶೃಂಗೇರಿ ಕಾಲೇಜಿನಲ್ಲಿ ಇಂಗ್ಲಿಷ್ ಹಾಗೂ ಸಂಸ್ಕೃತ ಭಾಷೆಗಳ ಅಧ್ಯಾಪನ ಮಾಡಲಾರಂಭಿಸಿದರು. ಜೊತೆಗೆ ಹೋಮಿಯೋಪತಿ ವೈದ್ಯ ಪದ್ಧತಿಯನ್ನೂ ಕಲಿತರು. ತತ್ಫಲವಾಗಿ ಅವರ ಬಳಿ ನಾನಾ ರೀತಿಯ ರೋಗಿಗಳು ಬರಲಾರಂಭಿಸಿದರು. ಸ್ವಾಮಿ ದಯಾನಂದ ಸರಸ್ವತಿ ಅವರು ರೂಪಿಸಿರುವ ಆರ್ಷವಿದ್ಯಾಕೇಂದ್ರದ ಶೃಂಗೇರಿ ಘಟಕದಲ್ಲಿನ ಚಟುವಟಿಕೆಗಳಲ್ಲಿ ತೊಡಗಿಕೊಂಡು, ಈಗ ಗುರುಕುಲದ ಆಚಾರ್ಯರಾಗಿ ಅನೇಕಾನೇಕ ಕಾರ್ಯಚಟುವಟಿಕೆಗಳನ್ನು ಹಮ್ಮಿಕೊಂಡು ಪ್ರೌಢ ವಿದ್ಯಾರ್ಥಿಗಳಿಗೆ ಹಾಗೂ ಜನರಿಗೆ ಮಾರ್ಗದರ್ಶನ ಮಾಡುತ್ತಿದ್ದಾರೆ. ಹೀಗೆ ಉತ್ತಮವಾದ ಅಧ್ಯಯನ, ಅಧ್ಯಾಪನ, ಪ್ರವಚನ, ಶಿಷ್ಯರ ಬೆಳವಣಿಗೆ, ಹೋಮಿಯೋಪತಿ ಚಿಕಿತ್ಸೆ ಇತ್ಯಾದಿಗಳ ಮೂಲಕ ತಮ್ಮದೇ ಆದ ರೀತಿಯಲ್ಲಿ ಲೋಕಸೇವೆಯಲ್ಲಿ ನಿರತರಾಗಿದ್ದಾರೆ. ಮೈಸೂರು ಜಿಲ್ಲೆ ಕೃಷ್ಣರಾಜನಗರದಲ್ಲಿರುವ ಶ್ರೀ ಶ್ರೀ ಶಂಕರಭಾರತೀ ಸ್ವಾಮಿಗಳವರ ಮಾರ್ಗದರ್ಶನದಲ್ಲಿ ಕಾರ್ಯನಿರ್ವಹಿಸುತ್ತಿರುವ ವೇದಾಂತಭಾರತೀ ಮೂಲಕ ಪ್ರಕಟವಾಗಿರುವ ಹಲವಾರು ವೈದಿಕಧರ್ಮ ಗ್ರಂಥಗಳಿಗೆ ಸಂಪಾದಕರಾಗಿ ಅವುಗಳ ಯಶಸ್ವಿ ಪ್ರಕಟನೆಗೆ ಕಾರಣರಾಗಿದ್ದಾರೆ. ಹರಿಹರಪುರದ ಪ್ರಬೋಧಿನೀ ಗುರುಕುಲದೊಡನೆ ಹಾಗೂ ಕುಟುಂಬಗಳಲ್ಲಿ ಸಂಸ್ಕಾರ ವರ್ಧನೆಗಾಗಿ ಶ್ರಮಿಸುತ್ತಿರುವ 'ಶ್ರೀಮಾತಾ' ಕಾರ್ಯಕರ್ತರೊಡನೆಯೂ ಉತ್ತಮ ಸಂಬಂಧ ಬೆಳೆಸಿಕೊಂಡು ಅವರಲ್ಲೊಬ್ಬರಾಗಿ ದುಡಿಯುತ್ತಿದ್ದಾರೆ. ಹೀಗೆ ಉತ್ತಮ ಕೆಲಸಗಳಲ್ಲಿ ತೊಡಗಿಕೊಳ್ಳುತ್ತಾ ಯಾವ ಪ್ರತಿಫಲಗಳನ್ನೂ ನಿರೀಕ್ಷಿಸದೆ ಅಪರಿಗ್ರಹರಾಗಿಯೇ ಹತ್ತಾರು ಕೆಲಸಗಳಿಗೆ ನೆರವಾಗುತ್ತಿರುವ ಶ್ರೀ ಗಿರಿಧರಶಾಸ್ತ್ರಿಗಳು ತಾವಿರುವಲ್ಲೇ ಉತ್ತಮತೆ, ಔನ್ನತ್ಯಗಳ ಪ್ರವರ್ತಕರಾಗಿ ಜನಪ್ರಿಯರಾಗಿ ತಮ್ಮ ಪೂಜ್ಯ ತಂದೆಯವರ ಪರಂಪರೆಯನ್ನು ಮುಂದುವರೆಸಿದ್ದಾರೆ. ಇದೀಗ ಶೃಂಗೇರಿ ಶ್ರೀ ಜಗದ್ಗುರು ಚಂದ್ರಶೇಖರಭಾರತೀ ಪದವಿಪೂರ್ವ ಕಾಲೇಜಿನ ಪ್ರಾಂಶುಪಾಲರಾಗಿ ಜನಪ್ರಿಯರಾಗಿದ್ದಾರೆ.

ಶ್ರೀ ಗಿರಿಧರಶಾಸ್ತ್ರಿಗಳ ಅಣ್ಣ ಶ್ರೀನಾಥಶಾಸ್ತ್ರಿ ಅವರು ಬೆಂಗಳೂರಿನಂತಹ ವಾಣಿಜ್ಯ ಕ್ಷೇತ್ರದಲ್ಲಿ ಇದ್ದರೂ ತಮ್ಮ ಧರ್ಮ ನಿಷ್ಠೆ, ಕರ್ಮನಿಷ್ಠೆ ಇವುಗಳಿಂದ ಸ್ವದೇಶ ನಿಷ್ಠೆಗಳ ಜಾಗೃತಿಗಾಗಿ ನಿರಂತರವಾಗಿ ಶ್ರಮಿಸುತ್ತಿದ್ದಾರೆ. ಗಣಿತಶಾಸ್ತ್ರ ಸ್ನಾತಕೋತ್ತರ ಪದವೀಧರ

ಹಾಗೂ ಗಣಕತಜ್ಞರಾದ ಇವರು ಶೃಂಗೇರಿ ಶ್ರೀಮಠದ ಉತ್ತಮ ಅನುಯಾಯಿಯಾಗಿ ವಿಜ್ಞಾನ ವಿಷಯಗಳಲ್ಲಿನ ಅಧ್ಯಯನ, ಅಧ್ಯಾಪನಗಳಲ್ಲಿ ನಿರತರಾಗಿದ್ದು ತಮ್ಮ ಕಿರಿಯರಿಗೆಲ್ಲಾ ಸದಾ ನೆರವಾಗುವ ಹಿರಿತನ ತೋರುತ್ತಿದ್ದಾರೆ. ಗಣಕಗಳಲ್ಲಿನ ವ್ಯವಹಾರಗಳನ್ನು ಕನ್ನಡಭಾಷೆಯಲ್ಲಿಯೇ ಮಾಡಲು ಅನುವಾಗುವ 'ನುಡಿ' ಎಂಬ ತಂತ್ರಾಂಶದ ಅಭಿವೃದ್ಧಿಗೆ ರೂವಾರಿಯಾಗಿದ್ದಾರೆ. ಅವರು ಕರ್ನಾಟಕ ವಿಜ್ಞಾನ ಮತ್ತು ತಂತ್ರಜ್ಞಾನ ಅಕಾಡೆಮಿಯ ಸದಸ್ಯರಾಗಿದ್ದಾಗ, ವಿಜ್ಞಾನದ ವಿದ್ಯಾರ್ಥಿಗಳು ತಮ್ಮ ಅಧ್ಯಯನ ವಿಷಯಗಳಲ್ಲಿ ನಿಜವಾದ ಪ್ರೌಢಿಮೆ ಗಳಿಸಲು ಅಗತ್ಯವಾದ ವಿಜ್ಞಾನ ಶಿಕ್ಷಣ ವಿಧಾನಗಳನ್ನು ಪ್ರೌಢಶಾಲಾ ಅಧ್ಯಾಪಕರಿಗೆ ಸಸ್ನೇಹ ರೀತಿಯಲ್ಲಿ ತಿಳಿಸಿಕೊಡುವ ಕಾರ್ಯಾಗಾರಗಳನ್ನು ಕರ್ನಾಟಕದ ವಿವಿಧ ಜಿಲ್ಲೆಗಳ ಳಳ ತಾಲ್ಲೂಕುಗಳಲ್ಲಿ ಅಧಿಕೃತವಾಗಿ ಏರ್ಪಡಿಸಿದ್ದಾರೆ. ಕನ್ನಡ ಹಾಗೂ ಭಾರತೀಯ ಭಾಷೆಗಳಲ್ಲೇ ಗಣಕ ಯಂತ್ರಗಳು ಪೂರ್ಣವಾಗಿ ಕೆಲಸಮಾಡುವಂತಾಗಿ ಇಂಗ್ಲಿಷ್ ಮೇಲಿನ ಅವಲಂಬನೆ ಕಡಮೆಯಾಗಬೇಕೆಂದು ಚಿಂತಿಸುತ್ತಾ ಆ ಬಗ್ಗೆ ಹಲವಾರು ಕಾರ್ಯಕ್ರಮಗಳನ್ನು ಕೈಗೊಳ್ಳುವ ಯೋಜನೆಗಳನ್ನು ರೂಪಿಸಲು ಶ್ರಮಿಸುತ್ತಿದ್ದಾರೆ. ಕರ್ನಾಟಕದಲ್ಲಿ ಆಡಳಿತದ ಸರ್ವ ಚಟುವಟಿಕೆಗಳೂ ಕನ್ನಡದಲ್ಲೇ ಆಗಬೇಕೆಂದು ಶ್ರಮಿಸುತ್ತಿರುವ ಮಹನೀಯರಿಗೆ ನೆರವಾಗುವಂತಹ ಕಾರ್ಯಗಳಲ್ಲಿ ಮುಂದಿದ್ದಾರೆ.

ಶ್ರೀನಾಥಶಾಸ್ತ್ರಿಯವರ ಪತ್ನಿಯವರಾದ ಶ್ರೀಮತಿ ಸರಸ್ವತಿ ಅವರು ತಮ್ಮ ಪತಿಯ ಎಲ್ಲ ಚಟುವಟಿಕೆಗಳ ಯಶಸ್ಸಿಗೆ ತಾವೂ ಕಾರಣಕರ್ತರಾಗಿರುತ್ತಾರೆ.

ವಯಸ್ಸು ಹೆಚ್ಚಾದಂತೆ ಉತ್ಸಾಹ ಹಾಗೂ ಚಟುವಟಿಕೆಗಳು ಕಡಮೆ ಆಗುವುದು ಪ್ರಕೃತಿ ಸ್ವಭಾವ. ಆದರೆ ಈ ಸೋದರರು ಮಾತ್ರ ವಯಸ್ಸು ಹೆಚ್ಚಾದಂತೆ ದೇಶನಿಷ್ಠೆ ಹಾಗೂ ಧರ್ಮನಿಷ್ಠೆಯ ನವೀನ ಯೋಜನೆಗಳನ್ನು ಹಾಗೂ ಸೇವೆಯ ಹೊಸ ಮಜಲುಗಳನ್ನು ರೂಪಿಸುತ್ತಿದ್ದಾರೆ. ತಮ್ಮ ಅಂತಃಕರಣಕ್ಕೆ ಹೊಂದಿಕೊಳ್ಳುವ ಕ್ಷೇತ್ರಗಳನ್ನು ಆರಿಸಿಕೊಂಡು ತಮ್ಮ ಪ್ರತಿಭೆಗಳನ್ನು ಅದಕ್ಕಾಗಿ ಸುರಿದು ಮುಂದಿನ ಪೀಳಿಗೆಯವರಿಗೆ ಉತ್ತಮ ಬದುಕಿನ ರೀತಿಯನ್ನು ಕಲಿಸುತ್ತಿದ್ದಾರೆ. ತಮ್ಮ ಪೂಜ್ಯ ತಂದೆ, ತಾಯಿ ಇವರುಗಳ ಹೆಸರಿಗೆ ಗೌರವ ಹೆಚ್ಚುವಂತೆ ಶ್ರಮಿಸುತ್ತಿದ್ದಾರೆ. ಅವರ ಬಾಳ್ವೆ ಸಫಲವಾಗಲಿ, ಅವರಿಂದ ಮುಂದಿನ ಪೀಳಿಗೆಗಳೂ ಧರ್ಮನಿಷ್ಠರೂ, ದೇಶನಿಷ್ಠರೂ ಆಗಿ ಬೆಳೆಯುವಂತಾಗಲಿ, 'ಶಾಸ್ತ್ರಿ' ವಂಶದ ಹಿರಿಮೆಯನ್ನು ಬೆಳಗಿಸುತ್ತಿರುವ ಈ ಸಾಧಕ ಸೋದರರಿಗೆ ದೇವರು ಯಶ ನೀಡಲಿ ಎಂದು ಆಶಿಸುತ್ತೇನೆ.

◆

ವಾಮನ ಮೂರ್ತಿಯ ತ್ರಿವಿಕ್ರಮ ಸಾಧನೆ !

– ಶ್ರೀ ಹೆಚ್.ಪಿ. ಕೃಷ್ಣಸ್ವಾಮಿ, ಬೆಂಗಳೂರು
ನಿವೃತ್ತ ಉಪನ್ಯಾಸಕರು, ೯೯೦೧೨೬೯೦೯೦

ಒಂದು ಬೆಟ್ಟವನ್ನು ದೂರದಿಂದ ನೋಡಿ ವರ್ಣಿಸುವುದು ಸುಲಭ ಆದರೆ, ಅದರ ಹತ್ತಿರದಲ್ಲೇ ನಿಂತು, ಅದರ ಸೌಂದರ್ಯವನ್ನು ವರ್ಣಿಸುವುದು ದುಸ್ತರ. ಅಂತೆಯೇ, ಮೃದುಮಾತಿನ, ನಿಷ್ಕಲ್ಮಷ ಹೃದಯದ, ಸದಾ ಚಟುವಟಿಕೆಯಿಂದಿರುವ ಶ್ರೀನಾಥ ಶಾಸ್ತ್ರಿಗಳು ನಮ್ಮ ಕುಟುಂಬದ ಅತ್ಯಂತ ಆಪ್ತರು. ಅವರ ಬಗ್ಗೆ ಬರೆಯುವುದು ಕಠಿಣವಾದ ಕಾರ್ಯವೇ ಸರಿ.

ಶ್ರೀನಾಥ ಶಾಸ್ತ್ರಿಗಳು ಬಹುಮುಖ ಪ್ರತಿಭೆಯುಳ್ಳವರು. ಈಗ್ಗೆ ಸುಮಾರು ೪೫ ವರ್ಷಗಳ ಹಿಂದಿನ ಮಾತು. ಆಗ ತಾನೇ ಗಣಿತದಲ್ಲಿ ಸ್ನಾತಕೋತ್ತರ ಪದವಿ ಮುಗಿಸಿ, ನಮ್ಮ ಜೆ.ಸಿ.ಬಿ.ಎಂ. ಕಾಲೇಜಿಗೆ (ಶೃಂಗೇರಿ) ಸೇರಲು ಸಂದರ್ಶನಕ್ಕಾಗಿ ಬಂದಿದ್ದರು. ಸಂದರ್ಶನ ನಡೆಸಿದ ಪ್ರಾಂಶುಪಾಲರು, ನನ್ನೊಂದಿಗೆ, "ಏನ್ರೀ, ಈ ಹುಡುಗ ಡಿಗ್ರಿ ಕಾಲೇಜಿನ ವಿದ್ಯಾರ್ಥಿಗಳನ್ನು ನಿಭಾಯಿಸಬಲ್ಲನೆ?" ಎಂದು ಸಂಶಯ ವ್ಯಕ್ತಪಡಿಸಿದರು. ನಾನು ಅವರಿಗೆ ಧೈರ್ಯ ಹೇಳಿ, 'ಶೃಂಗೇರಿ ಕಾಲೇಜಿನ ವಿದ್ಯಾರ್ಥಿಗಳು ಬಹಳ ಸಭ್ಯರು. ಅದರಲ್ಲೂ, ವಿಜ್ಞಾನದ ವಿದ್ಯಾರ್ಥಿಗಳು ಬಹಳ ಸಾಧು ಸ್ವಭಾವದವರು. ಆದ್ದರಿಂದ, ಹುಡುಗನಂತೆ ಕಂಡರೂ, ಇವರು ತಮ್ಮ ಕೆಲಸವನ್ನು ಸಮರ್ಥವಾಗಿ ನಿರ್ವಹಿಸಬಲ್ಲರೆಂಬ ನಂಬಿಕೆ ನಮಗಿದೆ' ಎಂದು ಸಮಜಾಯಿಷಿ ನೀಡಿದೆ. ಅಂತೆಯೇ, ಅವರು ತಮ್ಮ ಅಧ್ಯಾಪಕ ವೃತ್ತಿಯನ್ನು ಬಹಳ ಅಚ್ಚುಕಟ್ಟಾಗೇ ನಿರ್ವಹಿಸಿದರು.

ಶ್ರೀನಾಥ ಶಾಸ್ತ್ರಿಗಳು ಬಹಳ ಸರಳ ಸ್ವಭಾವದವರು. ಅವರು ಎಂತಹ ಸಂದರ್ಭದಲ್ಲೂ ಕೋಪಕ್ಕೆ ಒಳಗಾಗಿದ್ದನ್ನು ನಾನು ನೋಡಲೇ ಇಲ್ಲ! ಇವರ ಶಾಂತ ಸ್ವಭಾವಕ್ಕೆ ಒಂದು ಉದಾಹರಣೆ. ಸರಳ ಉಡುಪಿನ, ವ್ಯಕ್ತಿತ್ವದ ಶಾಸ್ತ್ರಿಗಳ ಬಳಿ ಆಗ ಇದ್ದದ್ದು ೩–೪ ಜೊತೆ ಉಡುಪುಗಳು. ಒಂದು ಭಾನುವಾರ ಅವುಗಳನ್ನೆಲ್ಲಾ ಒಗೆಯಲೆಂದು ಬಕೇಟಿನಲ್ಲಿ ಸೋಪು ಹಾಕಿ, ನೆನೆಸಿಟ್ಟಿದ್ದರು. ಅವರ ತಮ್ಮ ಗಿರಿಧರ. ಆಗಿನ್ನೂ ವಿದ್ಯಾರ್ಥಿ. ಬಣ್ಣ ಹೋಗುವ ಸ್ವೆಟರ್ ಒಂದನ್ನು ತಿಳಿಯದೇ ಅದರಲ್ಲಿ ನೆನೆಸಿಬಿಟ್ಟರು! ಶ್ರೀನಾಥರ ಬಟ್ಟೆಗಳಿಗೆಲ್ಲಾ ಅದರ ಬಣ್ಣ ಮೆತ್ತಿಕೊಂಡಿತು. ಎಂಥವರಿಗಾದರೂ ಕೋಪದಿಂದ ಉರಿದು ಬೀಳುವ ಸಂದರ್ಭ. ಆದರೆ ಶ್ರೀನಾಥರು ತಮ್ಮನನ್ನು ನನ್ನ ಮುಂದೆ ನಿಲ್ಲಿಸಿ ಅವರು ಮಾಡಿದ ಕೆಲಸವನ್ನು ಹೇಳಿ ತಮ್ಮನನ್ನು ತರಾಟೆಗೆ ತೆಗೆದುಕೊಳ್ಳುವಂತೆ ನನಗೇ ಹೇಳಿದರು. ನಾನೂ, ಬೈಯುವಂತೆ ನಟಿಸಿ, ಸಂದರ್ಭವನ್ನು ಶಾಂತಗೊಳಿಸಿದೆ.

ಶ್ರೀನಾಥ ಶಾಸ್ತ್ರಿಗಳು ನಮ್ಮ ಬಾಡಿಗೆ ಮನೆಯ ಮೇಲ್ಭಾಗದಲ್ಲೇ ವಾಸವಾಗಿದ್ದರು. ಅಲ್ಲಿ ನಮ್ಮ– ಅವರ ಸಂಬಂಧ ಬಹಳ ಆತ್ಮೀಯವಾಗಿ ಬೆಳೆದು, ನನ್ನ ಮಕ್ಕಳನ್ನು ಬಹಳ

ಪ್ರೀತಿಯಿಂದ ಲಾಲಿಸಿದರು. ನನ್ನ ಮಗಳು ಚಿ.ವಾಣಿಗೆ ಮಲೆನಾಡಿನ ಹವಾ ಒಗ್ಗದೇ, ಆಗಾಗ ಶೀತ, ಕೆಮ್ಮಿನಿಂದ ನರಳುತ್ತಿದ್ದಳು. ರಾತ್ರಿ ನಿದ್ದೆ ಮಾಡದೇ ಗೋಳಾಡಿಸುತ್ತಿದ್ದಳು. ಶಾಸ್ತ್ರಿಗಳು ಮೇಲಿನಿಂದ ಕೆಳಗೆ ಬಂದು, ಮಗುವನ್ನು ಸಮಾಧಾನ ಮಾಡಿ, ಅವಳನ್ನು ಕತ್ತಲೆಯ ರಾತ್ರಿಯಲ್ಲೂ ಎತ್ತಿಕೊಂಡು ಓಡಾಡಿಸಿ, ತೂಗಿ ಮಲಗಿಸುತ್ತಿದ್ದರು. ನಮ್ಮ ಕುಟುಂಬದವರೆಲ್ಲಾ ಈ ಪ್ರಸಂಗವನ್ನು ಯಾವಾಗಲೂ ನೆನಪಿಸಿಕೊಳ್ಳುತ್ತಿರುತ್ತೇವೆ. ಅವರ ಈ ಮಕ್ಕಳ ಮೇಲಿನ ಪ್ರೇಮ ನನ್ನ ಮಗುವಿಗೇ ಸೀಮಿತವಾಗಿರಲಿಲ್ಲ. ಎಲ್ಲ ಮಕ್ಕಳ ಮೇಲೂ ಅದೇ ವಿಧವಾದ ಅಕ್ಕರೆ ಅವರಿಗೆ. ಮಕ್ಕಳಿಗೆ ಕಥೆ ಹೇಳುವುದು, ಮೆದುಳಿಗೆ ಕಸರತ್ತು ನೀಡುವ ಒಗಟುಗಳನ್ನು ಹೇಳುವುದು, ಶ್ಲೋಕ ಹೇಳಿಕೊಡುವುದು ಅವರ ಹವ್ಯಾಸ. ನನ್ನ ಮಗಳಂತೆ, ಎಲ್ಲ ಮಕ್ಕಳಿಗೂ, ಅವರು ಪ್ರೀತಿಯ ಶಾಸ್ತ್ರಿ ಮಾಮಾ! ಬಹುಶಃ ಅವರ ಮಕ್ಕಳ ಮೇಲಣ ಪ್ರೀತಿ ಮತ್ತು ಅವರಿಗೆ ಬೋಧಿಸುವ ಗುಣ ಅವರ ತಂದೆ ಶ್ರೀ ವಿಶ್ವನಾಥ ಶಾಸ್ತ್ರಿಗಳಿಂದ ಬಂದ ಬಳುವಳಿ. ಮುಂದೆ, ಶ್ರೀನಾಥಶಾಸ್ತ್ರಿಗಳು ತಮ್ಮ ಕುಟುಂಬವನ್ನು ಶೃಂಗೇರಿಗೆ ಕರೆತಂದಾಗ ಅಕ್ಕಪಕ್ಕದ ಮನೆಯವರಾದ ನಾವು, ಒಂದೇ ಮನೆಯವರಂತೆ ಆದೆವು. ಶಾಸ್ತ್ರಿಗಳ ತಾಯಿಯವರಾದ ಶ್ರೀಮತಿ ಲಲಿತಮ್ಮ ಮತ್ತು ನನ್ನ ಪತ್ನಿಯ ಮಧ್ಯೆ ತಾಯಿ-ಮಗಳ ಸಂಬಂಧವಿತ್ತೆಂದರೆ ತಪ್ಪಾಗಲಾರದು. ಶಾಸ್ತ್ರಿಗಳ ಮಡದಿ ಮತ್ತು ತಂಗಿಯರು ಈಗಲೂ ನಮ್ಮ ಕುಟುಂಬಕ್ಕೆ ಆಪ್ತರು.

ಶ್ರೀ ಶಾಸ್ತ್ರಿಯವರು ನಿಸರ್ಗ ಪ್ರೇಮಿಗಳು. ಅದಕ್ಕೆ ತಕ್ಕಂತೆ ಶೃಂಗೇರಿಯ ಸುತ್ತುಮುತ್ತಲಿನ ಪ್ರಕೃತಿ ಸೌಂದರ್ಯ ಅವರಿಗೆ ಬಹಳ ಆನಂದದಾಯಕವಾಗಿತ್ತು. ಈಗಲೂ ನೆನಪಿದೆ: ನಾವೆಲ್ಲಾ ಅಧ್ಯಾಪಕರು ಒಟ್ಟಿಗೆ ಸೇರಿ ೨೧ ಮೈಲಿ ದೂರದಲ್ಲಿದ್ದ ಗಂಗಾಮೂಲಕ್ಕೆ ಕಾಲ್ನಡಿಗೆಯಲ್ಲಿ ಪ್ರವಾಸಮಾಡಿ, ನಿಸರ್ಗ ಸೌಂದರ್ಯವನ್ನು ಆಸ್ವಾದಿಸಿದೆವು. ಆದರೆ ಶಾಸ್ತ್ರಿಗಳಿಗೆ ಅಷ್ಟಕ್ಕೇ ತೃಪ್ತಿಯಾಗಲಿಲ್ಲ. ಮತ್ತೊಮ್ಮೆ ಅನುಭವಿಸಿ ಬಂದರು.

ಶ್ರೀನಾಥರ ತಂದೆ ದಿ. ಶ್ರೀ ವಿಶ್ವನಾಥ ಶಾಸ್ತ್ರಿಗಳು, ಕನ್ನಡ ಮತ್ತು ಸಂಸ್ಕೃತದಲ್ಲಿ ಅಪಾರ ಪಾಂಡಿತ್ಯವನ್ನು ಉಳ್ಳವರಾಗಿದ್ದರು. ಆ ಜ್ಞಾನದಾಹವನ್ನು ಬೇರೆಯವರಿಗೂ ಹಂಚಬೇಕೆಂಬ ಹಂಬಲದಿಂದ ಅವರು 'ಸಹೃದಯ ಗೋಷ್ಠಿ'ಯನ್ನು ಸ್ಥಾಪನೆ ಮಾಡಿ, ಶೃಂಗೇರಿಗೆ ಬರುತ್ತಿದ್ದ ವಿದ್ವಾಂಸರನ್ನೆಲ್ಲಾ ಆಹ್ವಾನಿಸಿ, ಅವರಿಂದ ಭಾಷಣಗಳನ್ನು ಏರ್ಪಡಿಸಿ, ನಮ್ಮೆಲ್ಲರನ್ನೂ ಅದಕ್ಕೆ ಆಹ್ವಾನಿಸುವುದು ವಾಡಿಕೆಯಾಗಿತ್ತು. ಅವರ ಈ ಬಯಕೆಯನ್ನು ನಿರ್ವಹಿಸುತ್ತಿದ್ದವರು ಶ್ರೀನಾಥಶಾಸ್ತ್ರಿಗಳು.

ಶೃಂಗೇರಿಯ ಜೆ.ಸಿ.ಬಿ.ಎಂ. ಕಾಲೇಜಿನ ವಾರ್ಷಿಕ ಮಹೋತ್ಸವವನ್ನು ಬಹಳ ವಿಜೃಂಭಣೆಯಿಂದ ಆಚರಿಸಲಾಗುತ್ತಿತ್ತು. ಆ ಮೂರು ದಿನಗಳ ಸಮಾರಂಭದಲ್ಲಿ, ಅಧ್ಯಾಪಕ ಮಿತ್ರರು ನಾಟಕಗಳನ್ನು ಆಡುತ್ತಿದ್ದರು. ಆ ನಾಟಕಗಳಲ್ಲಿ ಶಾಸ್ತ್ರಿಗಳು ಅವರ ಮುದ್ದು ಮೊಗದಿಂದ ಸ್ತ್ರೀ ಪಾತ್ರಕ್ಕೆ ಸಹಜವಾಗಿಯೇ ಆಯ್ಕೆಯಾಗುತ್ತಿದ್ದರು! ನಾನು ಅವರ ತಂದೆಯ ಪಾತ್ರವನ್ನು ನಿರ್ವಹಿಸುತ್ತಿದ್ದೆ. ನನ್ನ ಆ "ಹೆಣ್ಣು ಮಗಳ ಸೌಂದರ್ಯಕ್ಕೆ ಹೆಮ್ಮೆಯನ್ನೂ ಪಡುತ್ತಿದ್ದೆ! ನಾಟಕಕ್ಕಾಗಿ ನನ್ನ ಮಡದಿಯ ಸೀರೆ, ಒಡವೆಗಳನ್ನು ಉಪಯೋಗಿಸುತ್ತಿದ್ದುದೂ

ವಾಡಿಕೆ. ಒಂದುಬಾರಿ, ನನ್ನ ಪತ್ನಿಯ ಬೆಲೆಬಾಳುವ ರೇಷ್ಮೆ ಸೀರೆಯನ್ನು ನಾಟಕಕ್ಕೆ ಉಪಯೋಗಿಸಿದ್ದರು. ರೇಷ್ಮೆ ಸೀರೆಯನ್ನು ಒಗೆಯಬಾರದೆಂದು ಈ ಸರಳ ಜೀವಿಗೆ ಗೊತ್ತಿರಲಿಲ್ಲ. ಅದನ್ನು ಚೆನ್ನಾಗಿ ಒಗೆದು ನನ್ನ ಮಡದಿಯ "ಕೃಪಾಕಟಾಕ್ಷ"ಕ್ಕೆ ಪಾತ್ರರಾದರು!

ಶ್ರೀನಾಥ ಶಾಸ್ತ್ರಿಗಳಿಗೆ ಮೊದಲಿನಿಂದಲೂ ಆಧ್ಯಾತ್ಮಿಕ ವಿಚಾರಗಳತ್ತ ಸೆಳೆತವಿತ್ತು. ಇದರಿಂದಾಗಿ, ಅವರಿಗೂ, ಶ್ರೀಮಠಕ್ಕೂ ನಿಕಟ ಸಂಪರ್ಕವೇರ್ಪಟ್ಟು, ಹಿಂದಿನ ಜಗದ್ಗುರುಗಳ ಆತ್ಮೀಯರಾಗಿದ್ದರು. ಮುಂದೆ ಅವರು ಬೆಂಗಳೂರಿನಲ್ಲಿ ಶ್ರೀ ಶಂಕರ ಮಠದ ಆಡಳಿತಾಧಿಕಾರಿಗಳಾಗಿ ಸೇವೆ ಸಲ್ಲಿಸಿದರು. ನಂತರ, ಕಾರಣಾಂತರಗಳಿಂದ, ಅಧ್ಯಾಪಕ ವೃತ್ತಿಯನ್ನು ತ್ಯಜಿಸಿ, ಬೆಂಗಳೂರಿನ ಎನ್.ಎ.ಎಲ್. ಸಂಸ್ಥೆಯಲ್ಲಿ ಹಿರಿಯ ವಿಜ್ಞಾನಿಯಾಗಿ ಸೇವೆ ಸಲ್ಲಿಸಿದ್ದಾರೆ. ಬೆಂಗಳೂರಿಗೆ ಬಂದ ಮೇಲೆ, ಅವರ ಕಾರ್ಯಕ್ಷೇತ್ರ ಹಾಗೂ ಸೇವಾಕ್ಷೇತ್ರ ಇನ್ನೂ ವಿಸ್ತಾರಗೊಂಡವು.

ತೀನಂಶ್ರೀ ಅವರ ಹತ್ತಿರದ ಸಂಬಂಧಿಗಳಾದ ಶಾಸ್ತ್ರಿಗಳು, ಎನ್.ಎ.ಎಲ್. ಸಂಸ್ಥೆಯಲ್ಲಿ ಕನ್ನಡ ಸೌರಭವನ್ನು ಪಸರಿಸಿದರು. ಅಲ್ಲಿ ವೈಜ್ಞಾನಿಕ ಸಂಚಿಕೆ 'ಕಣಾದ'ವನ್ನು ಪ್ರಾರಂಭಿಸಿ, ವೈಚಾರಿಕ ಹಾಗೂ ವೈಜ್ಞಾನಿಕ ಲೇಖನಗಳನ್ನು ವಿಜ್ಞಾನಿಗಳಿಂದ ಬರೆಸಿ, ಕನ್ನಡದಲ್ಲಿ ವಿಜ್ಞಾನವನ್ನು ಬೆಳೆಸಲು ಪ್ರಯತ್ನಿಸಿದರು. ಬಹುಶಃ ವಿಜ್ಞಾನಕ್ಕೆ ಸಂಬಂಧಪಟ್ಟ ವೈಜ್ಞಾನಿಕ ಪತ್ರಿಕೆ ಮತ್ತೊಂದು ಇರಲಾರದು. ಬೆಂಗಳೂರಿನಲ್ಲೂ ವಿದ್ಯಾರ್ಥಿಗಳನ್ನು ಸೇರಿಸಿ, ಅವರಿಗೆ ತಮ್ಮ ತಂಗಿ ಶ್ರೀಮತಿಯವರ ಮೂಲಕ ಗಮಕವನ್ನು ಕಲಿಸಿ, ಪ್ರಾಚೀನ ಕನ್ನಡ ಗ್ರಂಥಗಳ ಪರಿಚಯ ಮಾಡಿಸಿದರು.

ಅವರ ಹೆಸರು ಚಿರಸ್ಥಾಯಿಯಾಗಿ ನಿಲ್ಲುವ ಕಾರ್ಯವೆಂದರೆ. ಅವರ 'ನುಡಿ' ಕನ್ನಡ ಲಿಪಿ ತಂತ್ರಾಂಶದ ಸಂಶೋಧನೆ. ಅವರು ಹಗಲು ರಾತ್ರಿ ಎನ್ನದೇ, ಕನ್ನಡಕ್ಕೆ ಒಂದು 'ಸಾಫ್ಟ್‌ವೇರ್' ಕೊಡಲು ಶ್ರಮಿಸಿ, ಕೃತಕೃತ್ಯರಾದರು. ಶಾಲೆಗಳಲ್ಲಿ ವಿಜ್ಞಾನವನ್ನು ಬೋಧಿಸುವ ಅಧ್ಯಾಪಕರನ್ನು ಸೇರಿಸಿ, ವಿಜ್ಞಾನದ ಹೊಸ ಆವಿಷ್ಕಾರಗಳನ್ನು ತಿಳಿಯ ಹೇಳಿ, ಮಕ್ಕಳಿಗೆ ಅವನ್ನು ಬೋಧಿಸುವಂತೆ ಅವರನ್ನು ಹುರಿದುಂಬಿಸಿದವರು.

ಈಗ ಶಾಸ್ತ್ರಿಗಳು ಒಂದು ಅಪಘಾತಕ್ಕೆ ಒಳಗಾಗಿ, ಅದರಿಂದ ಚೇತರಿಸಿಕೊಳ್ಳುತ್ತಿದ್ದರೂ ಅದನ್ನು ಲೆಕ್ಕಿಸದೇ, ಗಣಕ ಪರಿಷತ್ತು ಹಾಗೂ ಕರ್ನಾಟಕ ವಿಜ್ಞಾನ ಮತ್ತು ತಂತ್ರಜ್ಞಾನ ಅಕಾಡೆಮಿಗಳ ಸದಸ್ಯರಾಗಿ, ಜನಾದರಣೀಯ ಕಾರ್ಯವನ್ನು ಮಾಡುತ್ತಿದ್ದಾರೆ. ಅವರ ಮಡದಿ ಸರಸ್ವತಿ ಹಾಗೂ ಮಕ್ಕಳಾದ ಕ್ಷಮಾ ಹಾಗೂ ವಿಶ್ವನಾಥರೂ ಕನ್ನಡ ಪ್ರೇಮಿಗಳು. ತಮ್ಮದೇ ಆದ ರೀತಿಯಿಂದ ಶಾಸ್ತ್ರಿಗಳ ಕಾರ್ಯಕ್ಕೆ ಕೈ ಜೋಡಿಸಿದ್ದಾರೆ. ಅವರಿಗೆ ಎಪ್ಪತ್ತು ವರ್ಷಗಳು ತುಂಬಿವೆ ಎಂದರೆ ನಂಬಲು ಸಾಧ್ಯವಾಗುತ್ತಿಲ್ಲ. ಈ ಶುಭ ಸಂದರ್ಭದಲ್ಲಿ, ಭಗವಂತನು ಅವರಿಗೆ ಆಯುರಾರೋಗ್ಯ ಹಾಗೂ ಐಶ್ವರ್ಯಗಳನ್ನು ಕೊಟ್ಟು ಅವರು ಇನ್ನೂ ಜನಾದರಣೀಯ ಸಾಮಾಜಿಕ ಕಾರ್ಯಗಳನ್ನು ಮುಂದುವರಿಸುವಂತಾಗಲೆಂದು ನಾನು ಮತ್ತು ಕುಟುಂಬದವರು ಆಶಿಸುತ್ತೇವೆ.

◆

ಮೇರು ಸದೃಶ ವ್ಯಕ್ತಿತ್ವದ ಗಿರಿಧರಶಾಸ್ತ್ರಿಗಳು

– ಇಂದಿರಾ ಕೃಷ್ಣಸ್ವಾಮಿ, ಬೆಂಗಳೂರು
೯೯೦೧೨೬೯೦೯೦

ಗಂಭೀರ ನಡೆ ನುಡಿಯು, ತೇಜಸ್ವಿ ವ್ಯಕ್ತಿ ಗಿರಿಧರಶಾಸ್ತ್ರಿಗಳು. ದಿ. ಶ್ರೀ ವಿಶ್ವನಾಥಶಾಸ್ತ್ರಿಗಳಿಗೆ ತಕ್ಕ ಮಗ ಹಾಗೂ ಶ್ರೀನಾಥ ಶಾಸ್ತ್ರಿಗಳಿಗೆ ತಕ್ಕ ಸಹೋದರ. ಶ್ರೀನಾಥ ಶಾಸ್ತ್ರಿಗಳು ಶೃಂಗೇರಿಗೆ ಬಂದು ತಂದೆತಾಯಿಗಳೊಂದಿಗೆ ಇರಲು ಪ್ರಾರಂಭಿಸಿದಾಗ, ಗಿರಿಧರ ಶಾಸ್ತ್ರಿಗಳು ಇನ್ನೂ ವಿದ್ಯಾರ್ಥಿ. ಮುಂದಿನ ಭವಿಷ್ಯದಲ್ಲಿ ಅಷ್ಟು ಎತ್ತರಕ್ಕೆ ಬೆಳೆಯುತ್ತಾರೆಂಬ ಊಹೆಯನ್ನೂ ನಾನು ಮಾಡಿರಲಿಲ್ಲ. ಅವರು ತನ್ನ ತಂದೆ ಮತ್ತು ಅಣ್ಣನಂತೆ ಬಹಳ ಸರಳ, ಸುಸಂಸ್ಕೃತ ಸ್ವಭಾವದವರು. ಹಿರಿಯರಲ್ಲಿ ಗೌರವ, ಕಿರಿಯರಲ್ಲಿ ಪ್ರೀತಿ, ವಿಶ್ವಾಸಗಳನ್ನು ತೋರಿಸುವ ಸ್ವಭಾವದವರೂ ಹೌದು.

ಶೃಂಗೇರಿಯ ಜೆ.ಸಿ.ಬಿ.ಎಂ ಕಾಲೇಜಿನಲ್ಲಿ ಅವರು ಬಿ.ಎಸ್ಸಿ. ಪದವಿಯನ್ನು ಪಡೆದರು. ಅವರಿಗೆ ಚಿಕ್ಕಂದಿನಿಂದಲೂ ಆಧ್ಯಾತ್ಮದ ಸೆಳೆತ. ಕನ್ನಡ, ಸಂಸ್ಕೃತ, ಇಂಗ್ಲೀಷ್ ಭಾಷೆಗಳ ಉತ್ತಮ ಗ್ರಂಥಗಳನ್ನು ಗ್ರಂಥಾಲಯದಿಂದ ಪಡೆದು ಓದುವ ಹವ್ಯಾಸವನ್ನು ಬೆಳೆಸಿಕೊಂಡವರು. ವ್ಯಾಸಂಗದ ಜೊತೆಗೆ ಆಧ್ಯಾತ್ಮದಲ್ಲೂ ಆಸಕ್ತಿಹೊಂದಿ, ಶೃಂಗೇರಿಯ ಶ್ರೀಮಠಕ್ಕೆ ಭೇಟಿಯನ್ನು ಕೊಡುವುದನ್ನು ರೂಢಿಸಿಕೊಂಡರು. ಕ್ರಮೇಣ, ಆಗಿನ ಜಗದ್ಗುರುಗಳಾದ ಶ್ರೀ ಶ್ರೀ ಶ್ರೀ ಅಭಿನವವಿದ್ಯಾತೀರ್ಥ ಮಹಾಸ್ವಾಮಿಗಳವರ ಸಂಪರ್ಕ ಬೆಳೆಸಿಕೊಂಡರು. ಸಂಸ್ಕೃತದಲ್ಲಿ ಅಪಾರವಾದ ಆಸಕ್ತಿಯನ್ನು ಬೆಳೆಸಿಕೊಂಡು ಅದರಲ್ಲಿ ಸ್ನಾತಕೋತ್ತರ ಪದವಿಯನ್ನು ಪಡೆದರು. ಉತ್ತರೋತ್ತರ, ಶ್ರೀಮಠದಲ್ಲಿ ಪ್ರಭಾವಶಾಲಿಗಳಾಗಿ, ಶ್ರೀ ಜಗದ್ಗುರುಗಳ ಆಪ್ತಸಹಾಯಕರೂ ಆದರು. ಮುಂದೆ, ಶ್ರೀ ಗುರುವರ್ಯರು ಅವರನ್ನು ಶೃಂಗೇರಿ ಸಂಸ್ಥಾನದ ಆಡಳಿತಾಧಿಕಾರಿಗಳನ್ನಾಗಿ ನೇಮಿಸಿದರು. ಶ್ರೀ ಶೃಂಗೇರಿ ಮಠ, ಭಾರತದಲ್ಲೇ ಪ್ರಸಿದ್ಧವಾದ ಸಂಸ್ಥೆ. ಅದರ ಎಲ್ಲಾ ಶಾಖೆಗಳ ಜವಾಬ್ದಾರಿ ಮತ್ತು ನಿರ್ವಹಣೆಗಳನ್ನು ಬಹು ವಿಚಕ್ಷಣೆಯಿಂದ ಮತ್ತು ನಿಸ್ವಾರ್ಥದಿಂದ ನಿರ್ವಹಿಸಿದರು. ಮಠದ ಸಂಪತ್ತನ್ನು ರೂಢಿಸಿ, ಬೆಳೆಸುವುದರಲ್ಲಿ ಅವರ ಪಾತ್ರ ಹಿರಿದು.

ಅವರ ಆಡಳಿತ ನಿರ್ವಹಣೆಯ ವೈಖರಿಯನ್ನು ಮೆಚ್ಚಿ, ದೆಹಲಿಯ ಓರ್ವ ಸಿರಿವಂತ ಉದ್ಯಮಿಗಳು ಶೃಂಗೇರಿಗೆ ಭೇಟಿ ನೀಡಿದಾಗ ಅವರಿಗೆ ಆಹ್ವಾನವನ್ನು ನೀಡಿದರು. ದೆಹಲಿಯಲ್ಲಿ ಅವರಿಗೆ ಉನ್ನತ ಹುದ್ದೆ, ವಾಸಕ್ಕೆ ಎಲ್ಲ ರೀತಿಯ ಅನುಕೂಲಗಳನ್ನು

ನೀಡಿದರು. ಆದರೆ ಮಠ ಮತ್ತು ಆಧ್ಯಾತ್ಮದ ಕಡೆಗೆ ತೀವ್ರ ಸೆಳೆತವಿದ್ದ ಶಾಸ್ತ್ರಿಗಳು ಅಲ್ಲಿ ಬಹುಕಾಲ ನಿಲ್ಲಲಿಲ್ಲ. ಪುನಃ ಶೃಂಗೇರಿಗೆ ಬಂದು ಮಠದ ಹಾಗೂ ಶ್ರೀ ಗುರುವರ್ಯರ ಸೇವೆಯಲ್ಲಿ ನಿರತರಾದರು.

ಮುಂದೆ ಅವರು ಇಂಗ್ಲೀಷ್ ಭಾಷೆಯಲ್ಲೂ ಸ್ನಾತಕೋತ್ತರ ಪದವಿ ಪಡೆದರು. ಅದರಲ್ಲೇ ಪಿ.ಎಚ್‌ಡಿಯನ್ನೂ ಪಡೆದರು. ಅವರು ಎಂದಿಗೂ ತಮ್ಮ ಹೆಸರಿನ ಹಿಂದೆ "ಡಾಕ್ಟರ್" ಎಂಬುದನ್ನು ಬಳಸಿಕೊಳ್ಳದ ಸರಳವ್ಯಕ್ತಿಗಳು. ಈಗ ಅವರು ಜೆ.ಸಿ.ಬಿ.ಎಂ. ಕಾಲೇಜಿನಲ್ಲಿ ಸಂಸ್ಕೃತ ಮತ್ತು ಇಂಗ್ಲೀಷ್ ಭಾಷೆಯ ಅಧ್ಯಾಪಕರಾಗಿದ್ದಾರೆ. ಜೊತೆಗೆ ಕಾಲೇಜಿನ ನಿರ್ವಹಣೆಯಲ್ಲಿ ಬಲಗೈಯಾಗಿದ್ದಾರೆ. ಈಗ ಅವರು ಪಿ.ಯು.ಸಿ. ಕಾಲೇಜಿನ ಉಪಪ್ರಾಂಶುಪಾಲರಾಗಿ ಕಾರ್ಯ ನಿರ್ವಹಿಸುತ್ತಿದ್ದಾರೆ. ಗಿರಿಧರಶಾಸ್ತ್ರಿಗಳ ಕಾರ್ಯಕ್ಷೇತ್ರ ಕಾಲೇಜಿನಲ್ಲಿ ಬೋಧನೆ ಮತ್ತು ಆಡಳಿತಕ್ಕೆ ಮಾತ್ರ ಸೀಮಿತವಾಗಿಲ್ಲ. ತಮ್ಮ ಮನೆಯಲ್ಲೂ ವಿದ್ಯಾರ್ಥಿಗಳಿಗೆ ಸಂಸ್ಕೃತವನ್ನು ಬೋಧಿಸುತ್ತಾರೆ. ಅವರ ಮನೆ ಒಂದು ವಿದ್ಯಾದೇಗುಲ. ಎಷ್ಟೋ ವಿದ್ಯಾರ್ಥಿಗಳಿಗೆ ತಮ್ಮ ಮನೆಯಲ್ಲಿ ಆಶ್ರಯವಿತ್ತು ಅವರ ಓದನ್ನು ಮುಂದುವರೆಸಲು ಸಹಾಯ ಮಾಡಿದ್ದಾರೆ. ಅವರ ತಾಯಿ ಲಲಿತಮ್ಮನವರೂ ಈ ಕಾರ್ಯದಲ್ಲಿ ಬಹಳ ಸಹಕರಿಸಿದ್ದಾರೆ. ಇದರ ಜೊತೆಗೆ ಹೋಮಿಯೋಪತಿ ಚಿಕಿತ್ಸಾ ಪದ್ಧತಿಯಲ್ಲೂ ನಿಪುಣರಾಗಿ ತಮ್ಮ ಔಷಧಿಗಳನ್ನು ಯಾವ ಪ್ರತಿಫಲವೂ ಇಲ್ಲದೆ ರೋಗಿಗಳಿಗೆ ನೀಡುತ್ತಾರೆ. ವಿರಾಮದ ವೇಳೆಯಲ್ಲಿ, ತಮ್ಮ ಮನೆಯಲ್ಲೇ ಸ್ಥಾಪಿಸಿಕೊಂಡಿರುವ ಗ್ರಂಥಾಲಯದಲ್ಲಿ ವ್ಯಾಸಂಗದಲ್ಲಿ ತೊಡಗಿಕೊಳ್ಳುತ್ತಾರೆ. ಅವರು ಮಾಡಿದ ಮಾತೃಸೇವೆ ಅನುಕರಣೀಯ. ಸಂಸಾರದ ಗೊಂದಲವಿಲ್ಲದೇ ತಮ್ಮ ವೇಳೆಯನ್ನೆಲ್ಲಾ ಅಧ್ಯಾಪನ, ಅಧ್ಯಯನ, ಸಮಾಜಸೇವೆ ಇವುಗಳಲ್ಲಿ ತೊಡಗಿಸಿ ಒಬ್ಬ ಆದರ್ಶವ್ಯಕ್ತಿಯಾಗಿ ರೂಪುಗೊಂಡಿದ್ದಾರೆ.

ಇವರಿಗೆ ೬೦ ವರ್ಷ ತುಂಬುತ್ತದೆ ಎಂದರೆ ಅವರನ್ನು ಚಿಕ್ಕವಯಸ್ಸಿನಿಂದ ನೋಡಿದ ನನಗೆ ನಂಬಲಾಗುತ್ತಿಲ್ಲ. ಅವರಿಗೆ ನಮ್ಮ ಕುಟುಂಬದ ಬಗ್ಗೆ ಅಪಾರವಾದ ಗೌರವ. ಭಗವಂತನು ಅವರಿಗೆ ದೀರ್ಘ ಆಯಸ್ಸನ್ನು ಕೊಟ್ಟು ಅವರು ಮಾಡುತ್ತಿರುವ ನಿಸ್ವಾರ್ಥ ಸೇವೆ ನಿರಂತರವಾಗಿ ನಡೆಯುವಂತಾಗಲೆಂದು ಹಾರೈಸುತ್ತೇನೆ.

◆

ಕನ್ನಡ ನುಡಿಯನ್ನು ಗಣಕೀಕರಿಸಿದ ಶ್ರೀನಾಥಶಾಸ್ತ್ರೀ

– ಡಾ॥ ಎಸ್.ನಂಜುಂಡಸ್ವಾಮಿ, ಎಂ.ಎ.,ಎಂ.ಫಿಲ್.ಪಿಎಚ್.ಡಿ., ಬೆಂಗಳೂರು
snbachahally@gmail.com

ಸುಮಾರು ೨೦೦೦ನೇ ಇಸವಿ. ನಾನು ಕರ್ನಾಟಕ ವಿಧಾನ ಪರಿಷತ್ತಿನಲ್ಲಿ ಮುಖ್ಯ ವರದಿಗಾರನಾಗಿ (ಚೀಫ್ ರೆಕಾರ್ಡಿಂಗ್ ಆಫೀಸರ್) ಸೇವೆ ಸಲ್ಲಿಸುತ್ತಿದ್ದೆ. ಶ್ರೀ ಎಸ್. ದ್ವಾರಕಾನಾಥ್ ಎನ್ನುವವರು ಚರ್ಚಾ ಸಂಪಾದಕರಾಗಿ ಸೇವೆ ಸಲ್ಲಿಸುತ್ತಿದ್ದರು. ಆಗತಾನೆ ನಮ್ಮ ವರದಿಗಾರರ ಶಾಖೆಯ ಕಂಪ್ಯೂಟರೀಕರಣ ನಡೆಯುತ್ತಿತ್ತು. ಅಲ್ಲಿಯವರೆಗೆ ಕನ್ನಡ ಬೆರಳಚ್ಚು ಯಂತ್ರದಲ್ಲೇ ನಮ್ಮ ಕೆಲಸ ಸಾಗುತ್ತಿತ್ತು.

ಕಂಪ್ಯೂಟರ್ ಯುಗವು ಪ್ರಾರಂಭವಾಗಿ, ಕನ್ನಡ ಭಾಷೆಯನ್ನು (ಲಿಪಿ) ಬೇರೆ ಬೇರೆ ತಂತ್ರಾಂಶಗಳ ಮೂಲಕ (ಶ್ರೀಲಿಪಿ, ಬರಹ ಇತ್ಯಾದಿ) ಕಂಪ್ಯೂಟರ್‌ನಲ್ಲಿ ಅಳವಡಿಸಿದ್ದರೂ, ಅದಿನ್ನೂ ವಿಧಾನಸೌಧವನ್ನು, ಅದರಲ್ಲೂ ವಿಧಾನ ಮಂಡಲವನ್ನು ಪ್ರವೇಶಿಸಿರಲಿಲ್ಲ. ವಿಧಾನ ಪರಿಷತ್ತಿನಲ್ಲಿ ಈ ಕೆಲಸ ಬೆರಳಚ್ಚು ಯಂತ್ರದ ಮೂಲಕವೇ ನಡೆಯುತ್ತಿತ್ತು. ಆದರೆ ಬೆರಳಚ್ಚಿನ ಮೂಲಕ ಇದನ್ನು ಮಾಡುವುದು ಬಹಳ ಕಠಿಣವಾದ ಕೆಲಸವಾಗಿತ್ತು.

ಸುಮಾರು ೨೦೦೦ನೇ ಇಸವಿಯ ವೇಳೆಗೆ ಕರ್ನಾಟಕ ವಿಧಾನಪರಿಷತ್ತಿನ ವರದಿಗಾರರ ಶಾಖೆಯನ್ನು ಪೂರ್ತಿಯಾಗಿ ಕಂಪ್ಯೂಟರೀಕರಣಗೊಳಿಸಲು ತೀರ್ಮಾನಿಸಲಾಯಿತು. ಕಂಪ್ಯೂಟರ್‌ಗಳು ಬಂದವು. ಈ ವೇಳೆಗಾಗಲೇ ಕರ್ನಾಟಕ ಸರ್ಕಾರದ ಕಚೇರಿಗಳಲ್ಲಿರುವ ಕಂಪ್ಯೂಟರ್‌ಗಳಲ್ಲಿ, ಕನ್ನಡವನ್ನು ಬೆರಳಚ್ಚು ಮಾಡಲು "ನುಡಿ" ಸಾಫ್ಟ್‌ವೇರ್ ಬಳಸಬೇಕೆಂಬ ನಿರ್ಣಯವಾಗಿತ್ತು. ಕರ್ನಾಟಕ ವಿಧಾನ ಪರಿಷತ್ತಿನಲ್ಲಿ ಕಂಪ್ಯೂಟರೀಕರಣವಾಗುತ್ತಿದೆ ಎಂಬುದನ್ನು ಹೇಗೋ ತಿಳಿದುಕೊಂಡ ಶ್ರೀನಾಥಶಾಸ್ತ್ರಿಯವರು ತಾವೇ ಖುದ್ದಾಗಿ ವಿಧಾನ ಪರಿಷತ್ತಿನ ಸಚಿವಾಲಯಕ್ಕೆ ಬಂದು, ಸಭಾಪತಿಯವರನ್ನು, ಅಧಿಕಾರಿಗಳನ್ನೂ ಭೇಟಿಯಾಗಿ, ಕಂಪ್ಯೂಟರ್‌ಗಳ ಮೂಲಕ ಕನ್ನಡದ ಕೆಲಸ ಮಾಡಲು, "ನುಡಿ" ಸಾಫ್ಟ್‌ವೇರ್‌ನ್ನು ಒಂದು ನಯಾಪೈಸೆ ಖರ್ಚಿಲ್ಲದೆ ಉಚಿತವಾಗಿ ಅಳವಡಿಸಿಕೊಡುವುದಾಗಿ ತಿಳಿಸಿದರು.

ವರದಿಗಾರರ ಶಾಖೆಯಲ್ಲಿ ಸುಮಾರು ೧೫ ಕನ್ನಡ ವರದಿಗಾರರು ಇದ್ದು ಎಲ್ಲರೂ ಕನ್ನಡದ ಕೆಲಸವನ್ನು ಮಾಡುತ್ತಿದ್ದುದರಿಂದ ಶ್ರೀನಾಥಶಾಸ್ತ್ರಿಯವರು ಸಹಜವಾಗಿಯೇ ಮೊದಲು ನಮ್ಮ ವರದಿಗಾರರ ಶಾಖೆಗೆ ಬಂದರು. ಒಂದು ದಿವಸ ನಮ್ಮ ಚರ್ಚಾ ಸಂಪಾದಕರಾಗಿದ್ದ ಎಸ್. ದ್ವಾರಕಾನಾಥ್‌ರವರ ಮುಂದೆ ತೆಳ್ಳಗೆ, ಬೆಳ್ಳಗೆ,

ಸಫಾರಿಧಾರಿಗಳಾಗಿದ್ದ, ಕನ್ನಡಕವನ್ನು ಧರಿಸಿದ್ದ ಒಬ್ಬರು ವ್ಯಕ್ತಿ ಕುಳಿತಿದ್ದರು. ಮುಖ್ಯ ವರದಿಗಾರನಾಗಿದ್ದ ನಾನು ನಮ್ಮ ಚರ್ಚಾ ಸಂಪಾದಕರ ಕೊಠಡಿಗೆ ಬಂದು ಅವರ ಪಕ್ಕದಲ್ಲಿ ಕುಳಿತುಕೊಂಡೆ. ದ್ವಾರಕಾನಾಥ್ ಅವರು ನನಗೆ ಶ್ರೀನಾಥ ಶಾಸ್ತ್ರಿಯವರನ್ನು ಪರಿಚಯ ಮಾಡಿ, 'ಇವರು ನುಡಿ ಸಾಫ್ಟ್‌ವೇರ್ ಕಂಡುಹಿಡಿದು ತಯಾರಿಸಿದವರು. ಈಗ ನಮ್ಮ ಕಂಪ್ಯೂಟರ್‌ಗೆ ಉಚಿತವಾಗಿ ಇದನ್ನು ಅಳವಡಿಸಲು ಬಂದಿದ್ದಾರೆ' ಎಂದರು. ನಾನು ಶ್ರೀನಾಥಶಾಸ್ತ್ರಿಯವರನ್ನು ಮಾತನಾಡಿಸಿ ಪರಿಚಯ ಮಾಡಿಕೊಂಡೆ. ಕಂಪ್ಯೂಟರ್, ಸಾಫ್ಟ್‌ವೇರ್ ಬಗ್ಗೆ ನನಗೆ ಯಾವುದೇ ಜ್ಞಾನ ಇರಲಿಲ್ಲ. ನುಡಿ ಬಗ್ಗೆ ನನಗೆ ಏನೂ ಗೊತ್ತಿರಲಿಲ್ಲ. ಆದರೂ ಅದರಿಂದ ಬಹಳ ಅನುಕೂಲವಾಗುತ್ತದೆ ಎಂಬುದನ್ನು ತಿಳಿದುಕೊಂಡು ನಮ್ಮ ವರದಿಗಾರರ ಶಾಖೆಯನ್ನು ಪೂರ್ತಿಯಾಗಿ ಗಣಕೀಕರಣ ಮಾಡುವ ಬಗ್ಗೆ ನಾನು ಆಗಿನ ಮಾನ್ಯ ಸಭಾಪತಿಯವರು, ಅವರ ಆಪ್ತ ಕಾರ್ಯದರ್ಶಿಗಳು ಮತ್ತು ಸಚಿವಾಲಯದ ಅಧಿಕಾರಿಗಳ ಮನವೊಲಿಸಿ, ನಮ್ಮ ಶಾಖೆಯು ಪೂರ್ಣವಾಗಿ ಗಣಕೀಕರಣ ಆಗುವಲ್ಲಿ ನನ್ನ ಸೇವೆ ಸಲ್ಲಿಸಿದ್ದೆ.

ತೀನಂಶ್ರೀ ನನಗೆ ಒಬ್ಬ ಆದರ್ಶ ವ್ಯಕ್ತಿಯಾಗಿದ್ದರು. ಈ ಕಾರಣಕ್ಕಾಗಿ ಶ್ರೀನಾಥ ಶಾಸ್ತ್ರಿಯವರು ಅವರ ಸಂಬಂಧಿಗಳು ಎಂದು ತಿಳಿದ ಮೇಲೆ ನನಗೆ ಅವರ ಬಗ್ಗೆ ವಿಶೇಷ ಗೌರವ ಉಂಟಾಯಿತು. ನಾನೂ ಚಿಕ್ಕನಾಯಕನಹಳ್ಳಿಯಲ್ಲಿದ್ದ ನಮ್ಮ ಸಂಬಂಧಿಗಳ ಬಗ್ಗೆ ಹೇಳಿಕೊಂಡೆ. ಶ್ರೀನಾಥಶಾಸ್ತ್ರಿಯವರು ನಮ್ಮ ಶಾಖೆಗೆ ಪದೇ ಪದೇ ಬರುತ್ತಿದ್ದರು. ಅವರ ಸಹಾಯಕರುಗಳನ್ನೂ ಕರೆದುಕೊಂಡು ಬಂದು, ಎಲ್ಲ ಕಂಪ್ಯೂಟರ್‌ಗಳಿಗೆ ನುಡಿ ತಂತ್ರಾಂಶವನ್ನು ಅನುಸ್ಥಾಪನೆ ಮಾಡಿಸುತ್ತಿದ್ದರು ಹಾಗೂ ನಮ್ಮ ವರದಿಗಾರರುಗಳಿಗೆ ಕಂಪ್ಯೂಟರ್ ಬಳಕೆಯನ್ನೂ ಸಹ ಉಚಿತವಾಗಿ ಹೇಳಿಕೊಡುತ್ತಿದ್ದರು. ಜೊತೆಗೆ ನುಡಿ ತಂತ್ರಾಂಶ ಬಳಕೆಯನ್ನೂ ಹೇಳಿಕೊಡುತ್ತಿದ್ದರು. ನಮ್ಮ ವರದಿಗಾರರಿಗೆ ಕನ್ನಡ ಮತ್ತು ಇಂಗ್ಲಿಷ್ ಟೈಪಿಂಗ್ ಬರುತ್ತಿದ್ದುದರಿಂದ ಎಲ್ಲರೂ ಕಂಪ್ಯೂಟರ್ ಉಪಯೋಗ, ನುಡಿ ತಂತ್ರಾಂಶ ಬಳಕೆಯನ್ನು ಬಹುಬೇಗ ಕಲಿತುಕೊಂಡು ತಮ್ಮ ಕೆಲಸದಲ್ಲಿ ಉಪಯೋಗ ಮಾಡತೊಡಗಿದರು. ಆದರೆ ನನಗೆ ಮಾತ್ರ ಬರಲಿಲ್ಲ. ನಾನು ಕಲಿಯಲೂ ಪ್ರಯತ್ನಿಸಲಿಲ್ಲ. ಶ್ರೀನಾಥಶಾಸ್ತ್ರಿಯವರು ನಮ್ಮ ಶಾಖೆಗೆ ಬಂದಾಗಲೆಲ್ಲಾ, ಕಂಪ್ಯೂಟರ್ ಮತ್ತು ನುಡಿ ತಂತ್ರಾಂಶ ಬಳಕೆಯ ವಿಚಾರದ ಹೊರತಾಗಿಯೂ, ಸಾಹಿತ್ಯದ ವಿಚಾರವನ್ನು ಮಾತನಾಡುತ್ತಾ, ಹಾಸ್ಯ ಚಟಾಕಿಗಳು ಹಾರಿಸುತ್ತಾ ಲವಲವಿಕೆಯಿಂದ ಇರುತ್ತಿದ್ದರು. ನಮ್ಮ ಚರ್ಚಾ ಸಂಪಾದಕರೂ ಹಾಸ್ಯ ಪ್ರವೃತ್ತಿಯವರು. ಹಾಸ್ಯ ಸಮ್ಮೇಳನಗಳಿಗೆ ಹೋಗುತ್ತಿದ್ದರು. ಅವರೂ ಸಾಹಿತ್ಯ ಪ್ರಿಯರು. ನಾನಂತೂ ಸರಿಯೇ. ಹೀಗಾಗಿ ನಮಗೆ ಶ್ರೀನಾಥಶಾಸ್ತ್ರಿಯವರು ಬಹಳ ಹಿಡಿಸಿತು.

ನಮ್ಮ ಎಲ್ಲ ವರದಿಗಾರರಿಗೆ ನುಡಿ ತಂತ್ರಾಂಶ ಕೀಲಿಮಣೆ ವಿನ್ಯಾಸದ ಹಾರ್ಡ್‌ಕಾಪಿಗಳನ್ನು (ಪ್ರಿಂಟ್‌ಔಟ್) ಉಚಿತವಾಗಿ ಝೆರಾಕ್ಸ್ ಮಾಡಿಸಿ ತಂದು ಹಂಚಿದರು. ಅವರು ಬಂದಾಗ ನುಡಿ ತಂತ್ರಾಂಶದ ಬಗ್ಗೆ ಯಾವುದಾದರೂ ಅನುಮಾನಗಳಿದ್ದಲ್ಲಿ ನಮ್ಮ ವರದಿಗಾರರು ಅವರನ್ನು ಕೇಳುತ್ತಿದ್ದರು. ಅವರ ಸಹಾಯಕರನ್ನು ಕೇಳುತ್ತಿದ್ದರು. ಅವರು ಎಲ್ಲವನ್ನೂ ಸರಳವಾಗಿ ವಿವರಿಸಿ ತಿಳಿಸಿಕೊಡುತ್ತಿದ್ದರು. ಇದರಿಂದ ನಮ್ಮ ಸಚಿವಾಲಯದಲ್ಲೇ ಅತ್ಯಂತ ವೇಗವಾಗಿ ಕಂಪ್ಯೂಟರ್ ಬಳಕೆ ಮತ್ತು ನುಡಿ ತಂತ್ರಾಂಶ ಬಳಕೆ ನಡೆಯಿತು. ನಮ್ಮ ಎಲ್ಲ ವರದಿಗಾರರು, ಮಹಿಳಾ ವರದಿಗಾರರೂ ಸೇರಿದಂತೆ ಅದರಲ್ಲಿ ಪರಿಣತರಾದರು. ನಮ್ಮ ಸಚಿವಾಲಯದ ಬೇರೆ ಬೇರೆ ಶಾಖೆಯವರೂ ನಮ್ಮ ಶಾಖೆಗೆ ಬಂದು ಕಂಪ್ಯೂಟರ್ ಉಪಯೋಗದ ಬಗ್ಗೆ, ನುಡಿ ತಂತ್ರಾಂಶ ಉಪಯೋಗದ ಬಗ್ಗೆ ತಿಳಿದುಕೊಂಡರು. ನುಡಿ ತಂತ್ರಾಂಶದ ಒಂದೆರಡು ಸಿ.ಡಿ.ಗಳನ್ನು ಉಚಿತವಾಗಿ ನಮಗೆ ನೀಡಿದರು. ಅದಕ್ಕೆ ನೂರು ರೂ. ಬೆಲೆ ಇತ್ತು. ಆದರೆ ನುಡಿ ತಂತ್ರಾಂಶವನ್ನು ಉಚಿತವಾಗಿ ಅಂತರಜಾಲದಿಂದ ಯಾರು ಬೇಕಾದರೂ ಡೌನ್‌ಲೋಡ್ ಮಾಡಿಕೊಳ್ಳಬಹುದಾಗಿತ್ತು.

ಕರ್ನಾಟಕ ವಿಧಾನ ಪರಿಷತ್ತಿನಲ್ಲಿ ಗಣಕಗಳನ್ನು ಅಳವಡಿಸಿ, ನುಡಿ ತಂತ್ರಾಂಶದ ಮೂಲಕ ನಡವಳಿಕೆಗಳನ್ನು ತಯಾರಿಸುವ ಕಾರ್ಯ ಯಶಸ್ವಿಯಾದ ಮೇಲೆ ಎರಡು ಮೂರು ವರ್ಷಗಳ ನಂತರ ವಿಧಾನಸಭೆ ಸಚಿವಾಲಯದ ವರದಿಗಾರರ ಶಾಖೆಯೂ ಕಂಪ್ಯೂಟರೀಕರಣವಾಯಿತು. ಅಲ್ಲಿಯೂ ನುಡಿ ತಂತ್ರಾಂಶವನ್ನೇ ಅಳವಡಿಸಲಾಯಿತು. ವಿಧಾನಸಭೆ ಸಚಿವಾಲಯದಲ್ಲಿ ಸುಮಾರು ೨೫ಕ್ಕೂ ಹೆಚ್ಚು ಕನ್ನಡ ವರದಿಗಾರರು ಇದ್ದು, ಅಲ್ಲಿ ಎಲ್ಲ ನಡವಳಿಕೆಗಳೂ ನುಡಿ ತಂತ್ರಾಂಶದ ಮೂಲಕ ಕನ್ನಡದಲ್ಲಿಯೇ ತಯಾರಾಗುತ್ತಿವೆ.

ಶಾಸ್ತ್ರಿಯವರ ಪ್ರೋತ್ಸಾಹದಿಂದ ನಾನು ನಿಧಾನವಾಗಿ ನುಡಿ ತಂತ್ರಾಂಶ ಬಳಕೆಯನ್ನು ಕಲಿತುಕೊಂಡೆ. ಶಾಸ್ತ್ರಿಯವರು ಹೇಳಿದಂತೆ ನನಗೆ ಈಗ ಅದರ ಮಹತ್ವ ಗೊತ್ತಾಗಿದೆ. ನುಡಿ ತಂತ್ರಾಂಶದಲ್ಲಿ ಬಹಳ ಸುಲಭವಾಗಿ, ಬಹಳ ವೇಗವಾಗಿ ಟೈಪ್ ಮಾಡಿಕೊಂಡು ಹೋಗಬಹುದು. ಸಮಯದ ಉಳಿತಾಯ, ಪೇಪರ್ ಉಳಿತಾಯ ಆಗುತ್ತದೆ. ಈಗ ನಾನು ಬರವಣಿಗೆ ಕಡಿಮೆ ಮಾಡಿಕೊಂಡು, ನುಡಿ ತಂತ್ರಾಂಶ ಬಳಕೆಯಲ್ಲೇ ಲೇಖನಗಳನ್ನು, ಪತ್ರಗಳನ್ನು ಸಿದ್ಧಪಡಿಸುತ್ತೇನೆ. ನಾನು ಮನೆಯಲ್ಲೇ ಗಣಕ ಇಟ್ಟುಕೊಂಡು, ನುಡಿ ತಂತ್ರಾಂಶ ಬಳಕೆ ಕಲಿತಿದ್ದುದರಿಂದ ನನಗೆ ಅಪಾರ ಹಣವೂ ಉಳಿತಾಯವಾಯಿತು. ಇದು ನನಗೆ ಶ್ರೀನಾಥಶಾಸ್ತ್ರಿಯವರು ಮಾಡಿದ ಸಹಾಯ ಎಂದೇ ಹೇಳಬಹುದು. ಅನೇಕ ಬರಹಗಾರರು ಮತ್ತು ಸಾಹಿತಿಗಳ ಹತ್ತಿರ ಮಾತನಾಡಿದಾಗ,

ಅವರು ಬರವಣಿಗೆಗೆ ನುಡಿ ತಂತ್ರಾಂಶ ಬಳಕೆ ಮಾಡುತ್ತಿರುವುದಾಗಿಯೂ, ಅದು ಬಳಕೆಗೆ ಬಹಳ ಸುಲಭವಾಗಿದೆ ಎಂದೂ ಹೇಳುವುದನ್ನು ಕೇಳಿದ್ದೇನೆ. ಇತ್ತೀಚೆಗೆ ಕರ್ನಾಟಕದ ಪ್ರಮುಖ ಪತ್ರಿಕೆಗಳು ನುಡಿ ತಂತ್ರಾಂಶವನ್ನು ಅಳವಡಿಸಿಕೊಂಡಿರುವುದನ್ನು ನಾವು ಕಾಣಬಹುದು.

ಕನ್ನಡ ನುಡಿಯ ಬಗೆಗಿನ ಅಭಿಮಾನವೇ ಶಾಸ್ತ್ರಿಯವರು ನುಡಿ ತಂತ್ರಾಂಶವನ್ನು ಅನ್ವೇಷಿಸಲು ಕಾರಣ. ಗಣಕಗಳಲ್ಲಿ ಕನ್ನಡವು ರಾರಾಜಿಸಬೇಕೆಂದು, ಪ್ರಪಂಚದ ಎಲ್ಲೆಡೆ ಇರುವ ಕನ್ನಡಿಗರಿಗೆ ಅದು ತಲುಪಬೇಕೆಂಬುದು ಅವರ ಅಭೀಪ್ಸೆಯಾಗಿತ್ತು. ನಮ್ಮ ರಾಜ್ಯದಲ್ಲಿ ಯಾವುದೇ ಕಚೇರಿಯವರು ಕೇಳಲಿ, ನುಡಿ ತಂತ್ರಾಂಶವನ್ನು ಉಚಿತವಾಗಿಯೇ ಅಳವಡಿಸಿಕೊಡುತ್ತಿದ್ದರು. ಅದನ್ನು ಉಪಯೋಗಿಸುವವರಿಗೆ ಉಚಿತ ತರಬೇತಿಯನ್ನು ನೀಡಲೂ ಅವರು ಸಿದ್ಧರಿದ್ದರು.

ಕನ್ನಡ ಗಣಕ ಪರಿಷತ್ತು ಎಂಬ ಒಂದು ಬೋರ್ಡ್ ಬಸವನಗುಡಿಯ ಬುಲ್‌ಟೆಂಪಲ್ ರಸ್ತೆಯ ಗೋಖಲೆ ಇನ್‌ಸ್ಟಿಟ್ಯೂಟ್‌ನಲ್ಲಿತ್ತು. ಈ ಗಣಕ ಪರಿಷತ್ತಿನ ಸಂಸ್ಥಾಪನಾಕಾರರಾಗಿ ಶ್ರೀನಾಥಶಾಸ್ತ್ರಿಯವರು ಪ್ರಮುಖ ಪಾತ್ರ ವಹಿಸಿದ್ದಾರೆ ಎಂಬುದು ನನಗೆ ತಿಳಿದು ಬಂದಿತು. ಈ ಪರಿಷತ್ತಿನ ಮೂಲಕ ನುಡಿ ತಂತ್ರಾಂಶದ ಅಭಿವೃದ್ಧಿಯ ಜೊತೆಗೆ, ಕನ್ನಡ ಭಾಷೆಗೆ ಸಂಬಂಧಿಸಿದ ಮಹತ್ವದ ಕೃತಿಗಳನ್ನು ಗಣಕೀಕರಣಗೊಳಿಸಲು ಅವರು ಸತತವಾಗಿ ಪ್ರಯತ್ನ ಮಾಡುತ್ತಿದ್ದಾರೆಂದು ತಿಳಿಯಿತು. ಜೊತೆಗೆ ನುಡಿ ಬಳಕೆಯ ಬಗ್ಗೆ ಉಚಿತವಾಗಿ ತರಬೇತಿಯನ್ನು ಅಲ್ಲಿ ನೀಡುತ್ತಿದ್ದಾರೆಂದು ತಿಳಿಯಿತು. ಈ ಸಂಸ್ಥೆಯು ಬುಲ್‌ಟೆಂಪಲ್ ರಸ್ತೆಯ ಒಂದು ಕೊನೆಯಿಂದ ಇನ್ನೊಂದು ಕೊನೆಗೆ ಅಂದರೆ ಚಾಮರಾಜಪೇಟೆಗೆ ಸ್ಥಳಾಂತರವಾಯಿತು. ಕನ್ನಡ ಗಣಕ ಪರಿಷತ್ತಿನವರು ಮೈಸೂರು ವಿಶ್ವವಿದ್ಯಾನಿಲಯದ ವಿಶ್ವಕೋಶವನ್ನು ಅಂಕೀಕರಣಗೊಳಿಸಿ, ಸಿ.ಡಿ.ಬಿಡುಗಡೆ ಮಾಡಿದರು. ಆ ಸಮಾರಂಭಕ್ಕೆ ನಾನು ಹೋಗಿದ್ದೆ. ಆಮೇಲೆ ಕನ್ನಡದ ಆದಿ ಕೃತಿಯಾದ ಆದಿಕವಿ ಪಂಪನ 'ವಿಕ್ರಮಾರ್ಜುನ ವಿಜಯ' ಮತ್ತು ಗದುಗಿನ ನಾರಣಪ್ಪನ 'ಕರ್ನಾಟಕ ಭಾರತ ಕಥಾ ಮಂಜರಿ'ಗಳನ್ನು ಕೂಡಾ ಗಣಕೀಕೃತಗೊಳಿಸಿ ಸಿ.ಡಿ. ಬಿಡುಗಡೆ ಮಾಡಿದರು. ಗದುಗಿನ ನಾರಣಪ್ಪನ ಕರ್ನಾಟಕ ಭಾರತ ಕಥಾಮಂಜರಿಯ ಸಿಡಿ ಬಿಡುಗಡೆ ಸಮಾರಂಭಕ್ಕೆ ನಾನು ಹೋಗಿದ್ದೆ. ಕನ್ನಡ ಭಾಷೆಗೆ ಇಂತಹ ಒಂದು ದೊಡ್ಡ ಮಹತ್ವದ ಕಾರ್ಯವನ್ನು ಗಣಕ ಪರಿಷತ್ತು ಮಾಡಿದೆ. ಇದರ ಹಿಂದೆ ಶ್ರೀನಾಥಶಾಸ್ತ್ರಿಯವರ ಅಪಾರ ಶ್ರಮ ಇದೆ. ಅವರು ಕನ್ನಡದ ಎಲ್ಲ ವಿದ್ವಾಂಸರುಗಳನ್ನು ಒಂದೆಡೆ ಸೇರಿಸಿ ಗದುಗಿನ ಭಾರತದ ಗಣಕೀಕರಣ, ಗಮಕ, ವ್ಯಾಖ್ಯಾನಗಳನ್ನು ಕೂಡಾ ಸಿಡಿ.ಯಲ್ಲಿ ಸೇರಿಸಿರುವುದು ಅಭೂತಪೂರ್ವವಾದ ಕಾರ್ಯ.

ನುಡಿ ತಂತ್ರಾಂಶದ ಹೊಸ ಆವೃತ್ತಿಗಳು ಬಿಡುಗಡೆಯಾದಾಗ ಒಂದೆರಡು ಸಲ ಶ್ರೀನಾಥಶಾಸ್ತ್ರಿಯವರು ನಮ್ಮ ಕಚೇರಿಗೆ ಬಂದು ಅದರ ಬಗ್ಗೆ ವಿವರಿಸಿ ಹೋಗಿದ್ದರು. ನಿಜವಾದ ಬಳಕೆದಾರರಾದ ಅಂದರೆ ದಿನನಿತ್ಯ ಉಪಯೋಗ ಮಾಡುವ ನಮ್ಮನ್ನು ಈ ತಂತ್ರಾಂಶದಲ್ಲಿ ಏನು ಕೊರತೆ ಇದೆ ಎಂದು ನಮ್ಮಿಂದ ಕೇಳಿ ತಿಳಿದುಕೊಳ್ಳುತ್ತಿದ್ದರು ಹಾಗೂ ಅದನ್ನು ಮುಂದಿನ ಆವೃತ್ತಿಯಲ್ಲಿ ಉತ್ತಮಪಡಿಸುವುದಾಗಿಯೂ ಹೇಳುತ್ತಿದ್ದರು. ಕನ್ನಡ ನುಡಿ ತಂತ್ರಾಂಶದ ಬಗ್ಗೆ ಕೆಲವರು ತಕರಾರು ತೆಗೆಯುತ್ತಿದ್ದಾರೆಂದೂ ಅವರು ಹೇಳುತ್ತಿದ್ದರು. ಇವತ್ತು ಕನ್ನಡ ನುಡಿ ತಂತ್ರಾಂಶವು ಗಣಕಗಳಲ್ಲಿ ರಾರಾಜಿಸುತ್ತಿದೆ. ದೊಡ್ಡ ದೊಡ್ಡ ಪತ್ರಿಕೆಗಳು ನುಡಿ ತಂತ್ರಾಂಶದ ಮಹತ್ವವನ್ನು ಅರಿತುಕೊಂಡು, ತಮ್ಮ ಪತ್ರಿಕೆಗಳಲ್ಲಿ ಅಳವಡಿಸಿಕೊಂಡಿವೆ. ಲೇಖಕರು ನುಡಿ ತಂತ್ರಾಂಶದ ಮೂಲಕ ತಮ್ಮ ಲೇಖನಗಳನ್ನು ಕಳುಹಿಸಕೊಡಬಹುದೆಂದು ಸೂಚನೆಗಳನ್ನು ನೀಡುತ್ತಿವೆ. ಮೊಬೈಲ್‌ಗಳಿಗೂ ಅದು ಪ್ರವೇಶವಾಗಿದೆ. ಇವುಗಳೆಲ್ಲದರ ಹಿಂದೆ ಶ್ರೀನಾಥಶಾಸ್ತ್ರಿಯವರ ಮತ್ತು ಅವರ ಜೊತೆಗಾರರ ದೂರದೃಷ್ಟಿ, ಕನ್ನಡ ನಾಡು ನುಡಿಯ ಬಗೆಗಿನ ಕಳಕಳಿ ಅಡಗಿದೆ. ಕನ್ನಡ ನಾಡಿನ ಜನತೆ ಶ್ರೀನಾಥಶಾಸ್ತ್ರಿಯವರ ಸೇವೆಗೆ ಕೃತಜ್ಞರಾಗಿರಬೇಕಾಗಿದೆ.

ಶೃಂಗೇರಿಯ ಪ್ರತಿಭಾವಂತ ಸಹೋದರರು

– ಶ್ರೀಮತಿ ಸರಸ್ವತಮ್ಮ ವೆಂಕಟರಮಣನ್, ಬೆಂಗಳೂರು
೦೮೦–೨೬೫೬೬೦೦೬೧

ಶ್ರೀ ಗಿರಿಧರ ಶಾಸ್ತ್ರಿಗಳಿಗೆ ಅರವತ್ತರ ಸಂಭ್ರಮ ಹಾಗೂ ಅವರ ಅಣ್ಣ ಶ್ರೀ ಶ್ರೀನಾಥ ಶಾಸ್ತ್ರಿಗಳಿಗೆ ಎಪ್ಪತ್ತು ವರ್ಷಗಳು ತುಂಬಿದ ಈ ಶುಭ ಸಂದರ್ಭಕ್ಕಾಗಿ, ಈ ಒಂದು ನೆನಪಿನ ಸಂಚಿಕೆಯನ್ನು ಹೊರ ತರುತ್ತಿರುವುದು ಸಂತೋಷದ ಸಂಗತಿ. ಅವರಿಬ್ಬರೂ ಸಾಹಿತ್ಯಾಸಕ್ತರು, ಅಧ್ಯಯನದಲ್ಲಿ ಆಸಕ್ತಿ ಉಳ್ಳವರು.

ನಮ್ಮ ಪರಿವಾರಕ್ಕೂ ಅವರ ಕುಟುಂಬಕ್ಕೂ ಬಹಳ ಹಿಂದಿನಿಂದಲೂ ಪರಿಚಯವಿತ್ತು. ಅವರ ತಂದೆ ಶ್ರೀ ವಿಶ್ವನಾಥಶಾಸ್ತ್ರಿಗಳ ಕುಟುಂಬ ಆನೇಕಲ್ಲಿನಲ್ಲಿದ್ದಾಗ, ನಮ್ಮ ತಂದೆ ಡಾ॥ ಕೃಷ್ಣಮೂರ್ತಿಯವರು ಅಲ್ಲಿ ಸರ್ಕಾರಿ ಸೇವೆಯಲ್ಲಿದ್ದರು. ಅವರ ಮೊದಲನೆಯ ಮಗಳು ಶ್ರೀಮತಿ ಮಹಾಲಕ್ಷ್ಮಿ ಅವರಿಗೆ ನನ್ನ ಅಕ್ಕ ಶ್ರೀಮತಿ ಕಲಾವತಿ ಅವರಿಗೆ ಒಂದೇದಿನ ಮದುವೆಯಾಯಿತು. ಇದು ನಡೆದದ್ದು ೧೯೫೭ರಲ್ಲಿ. ಅನಂತರ ಮತ್ತೆ ನಮಗೆ ಆ ಕುಟುಂಬದೊಡನೆ ಸಂಪರ್ಕ ಏರ್ಪಟ್ಟದ್ದು ೧೯೮೯. ನಾನು ಹಾಗೂ ನಮ್ಮ ಮನೆಯವರು ಶ್ರೀ ಡಿ.ಆರ್.ವೆಂಕರಟಮಣನ್ ಅವರು ಶೃಂಗೇರಿಯಲ್ಲಿ ನೆಲೆಸಲು ನಿರ್ಧರಿಸಿದಾಗ, ನಾವು ಮಠದಲ್ಲಿ ಶ್ರೀ ಶ್ರೀ ಸ್ವಾಮಿಗಳ ದರ್ಶನ ಮಾಡಿ, ಆಡಳಿತಾಧಿಕಾರಿಯಾಗಿದ್ದ ಶ್ರೀ ಗಿರಿಧರ ಶಾಸ್ತ್ರಿಗಳಿಗೆ ಪೂಜ್ಯ ಡಿವಿಜಿಯವರ 'ವಿರಕ್ತ ರಾಷ್ಟ್ರಕ ಡಿ.ವಿ.ಜಿ' ಪುಸ್ತಕದ ಒಂದು ಪ್ರತಿಯನ್ನು ಕೊಟ್ಟು ಬಂದಿದ್ದೆವು. ಆಗ ಮರುದಿನ ಬೆಳಗ್ಗೆ ಪುಸ್ತಕವನ್ನು ಓದಿ, ಅದರ ಬಗ್ಗೆ ಮೆಚ್ಚುಗೆಯನ್ನು ಸೂಚಿಸಿ, ನಮ್ಮನ್ನು ಕಾಣಲು ಸಂಜೆ ಮನೆಗೆ ಬಂದರು. ಆಗ ನಾವು ಶೃಂಗೇರಿಯ ಮಲ್ಲಿಕಾರ್ಜುನ ಬೆಟ್ಟದ ಎದುರಿನಲ್ಲಿದ್ದ ಶ್ರೀ ನರಹರಿಯವರ ಮನೆಯಲ್ಲಿ ವಾಸವಾಗಿದ್ದೆವು. ಆ ದಿನ ಪ್ರಾರಂಭವಾದ ನಮ್ಮ ಅವರ ಸ್ನೇಹ ಸಂಬಂಧ ಇದುವರೆಗೂ ಅವಿಚ್ಛಿನ್ನವಾಗಿ ನಡೆದುಕೊಂಡು ಬಂದಿದೆ. ಆಗ ಅವರು ನಮ್ಮ ಯಜಮಾನರೊಂದಿಗೆ ಡಿವಿಜಿಯವರ ಮಂಕುತಿಮ್ಮನ ಕಗ್ಗವನ್ನು ಅಧ್ಯಯನ ಮಾಡುವ ಅಭಿಲಾಷೆ ವ್ಯಕ್ತಪಡಿಸಿದರು. ಅದೇ ಮೊದಲನೆಯ ಬಾರಿ ಕಗ್ಗವನ್ನು ಡಿ.ಆರ್.ವಿ ಅವರು ಪಾಠ ಮಾಡಿದರು. ನಂತರ ಹಲವಾರು ಬಾರಿ ಹಲವಾರು ಜನಕ್ಕೆ ವ್ಯಾಖ್ಯಾನಮಾಡಿ, ಅದು 'ಕಗ್ಗಕ್ಕೊಂದು ಕೈಪಿಡಿ' ಎಂಬ ಪುಸ್ತಕವಾಗಿ, ಹೊರಬಂತು. ಈಗ ಅದು ಅತ್ಯಂತ ಜನಪ್ರಿಯಗೊಂಡಿದೆ. ಆಗ ದಿನವೂ ಬೆಳಗ್ಗೆ ಆರು ಘಂಟೆಗೆಲ್ಲ ಗಿರಿಧರಶಾಸ್ತ್ರಿಗಳು, ಶುಚಿರ್ಭೂತರಾಗಿ, ಬರುತ್ತಿದ್ದರು. ಇಬ್ಬರೂ ಒಂದೊಂದು ಪದ್ಯವನ್ನು ಓದಿ, ಚರ್ಚೆ ಮಾಡುತ್ತಿದ್ದರು. ಇಲ್ಲಿ ಬಹಳ ಮುಖ್ಯವಾದ ವಿಷಯವೆಂದರೆ ವೆಂಕಟರಮಣನ್ ಅವರ

ಗುರುಗಳು ಡಾ॥ ಡಿ.ವಿ.ಜಿಯವರು. ಅವರ ಬಳಿ ಸುಮಾರು ೧೮ ವರ್ಷಗಳ ಕಾಲ, ಅಧ್ಯಯನ ಮಾಡಿದ್ದರು. ಹಾಗೆಯೇ ಶ್ರೀ ಗಿರಿಧರ ಶಾಸ್ತ್ರಿಗಳು ಪೂಜ್ಯ ಗುರುಗಳಾದ ಶ್ರೀ ಶ್ರೀ ಅಭಿವನ ವಿದ್ಯಾತೀರ್ಥರ ಬಳಿ ಹಲವಾರು ವರ್ಷಗಳು ಕಾರ್ಯದರ್ಶಿಗಳಾಗಿದ್ದರು. ಹೀಗಾಗಿ ಇಬ್ಬರಿಗೂ ಅವರವರ ಗುರುಗಳು ಹೇಳಿದ್ದ ಅನೇಕ ವಿಷಯಗಳು ನೆನಪಿಗೆ ಬರುತ್ತಿದ್ದವು. ಹೀಗಾಗಿ, ಅವರಿಬ್ಬರಲ್ಲಿ ವಯಸ್ಸಿನ ವ್ಯತ್ಯಾಸವಿದ್ದರೂ ಆತ್ಮೀಯತೆಗೂ ಮೀರಿದ ಒಂದು ಅಂತರಂಗ ಸಂಬಂಧವೇರ್ಪಟ್ಟಿತು. ಅವರು ಹೀಗೆ ನಮ್ಮ ಮನೆಗೆ ಪ್ರತಿದಿನವೂ ಬರುತ್ತಿದ್ದರು, ನನಗೂ ಬಹಳ ಆತ್ಮೀಯರಾದರು. ನಮ್ಮ ಮಕ್ಕಳಿಗೆ, ನಮ್ಮ ಸ್ನೇಹಿತರಿಗೆ ಎಲ್ಲರಿಗೂ ಹತ್ತಿರದವರಾದರು. ಇದಾದ ನಂತರ ೧೯೯೨ರ ಸುಮಾರಿಗೆ ನಾವು ಬೆಂಗಳೂರಿಗೆ ಹಿಂತಿರುಗಿದೆವು. ಆದರೂ ಅವರು ಬೆಂಗಳೂರಿಗೆ ಬಂದಾಗಲೆಲ್ಲ ಒಂದು ದಿನವಾದರೂ ನಮ್ಮೊಡನೆ ಇರುತ್ತಿದ್ದರು. ೧೯೯೪ರಲ್ಲಿ ನಾವು, ನಮ್ಮ ಸ್ನೇಹಿತರಾದ ಶ್ರೀಮತಿ ಮತ್ತು ಶ್ರೀ ಪದ್ಮನಾಭನ್ ಅವರೊಂದಿಗೆ ದೆಹಲಿಗೆ ಹೋದೆವು. ಅಲ್ಲಿಂದ ಬದರಿ, ಕೇದಾರ ಎಲ್ಲವನ್ನೂ ನೋಡಿಕೊಂಡು, ದೆಹಲಿಯಲ್ಲಿ ಶ್ರೀ ಗಿರಿಧರಶಾಸ್ತ್ರಿಗಳವರ ಮನೆಯಲ್ಲಿ ಸುಮಾರು ಒಂದು ತಿಂಗಳ ಕಾಲ ಕಳೆದದ್ದು ಅವಿಸ್ಮರಣೀಯ. ನಾವು ತಿರುಗಿ ೧೯೯೭ರಲ್ಲಿ ಶೃಂಗೇರಿಗೆ ಹೋದೆವು. ಆಗ ಅವರೂ ಅಲ್ಲಿಯೇ ಮೇಲಿನ ಮನೆಯಲ್ಲಿದ್ದರು. ಹಾಗಾಗಿ ಹೆಚ್ಚಿನ ಸಮಯ ಅವರೊಂದಿಗೆ ಕಳೆಯುವಂತೆ ಆಯಿತು. ಆಗ ಅವರು ಇಂಗ್ಲಿಷ್ ಎಂ.ಎ. ಪರೀಕ್ಷೆಯನ್ನು ತೆಗೆದುಕೊಂಡಿದ್ದರು. ಕೆಲವು ಭಾಗಗಳನ್ನು ಪಾಠ ಹೇಳಿಸಿಕೊಳ್ಳುತ್ತಿದ್ದರು.

ಅವರೊಂದಿಗೆ ಅಧ್ಯಯನ ಮಾಡಲು ಬರತ್ತಿದ್ದ ಆತ್ಮೀಯರಾದ ಶ್ರೀ.ಟಿ.ಎಸ್.ವೆಂಕಣ್ಣಯ್ಯನವರೊಂದಿಗೆ ಕಳೆದ ದಿನಗಳು ನೆನಪಿನಲ್ಲಿ ಉಳಿಯುವಂಥದ್ದು. ನನಗೂ ನಮ್ಮ ಯಜಮಾನರಿಗೂ ಶೃಂಗೇರಿಯಲ್ಲಿದ್ದಷ್ಟು ದಿನವೂ, ಎಲ್ಲ ರೀತಿಯ ಸಹಾಯವನ್ನು ಮಾಡಿದವರು ಶ್ರೀ ಗಿರಿಧರಶಾಸ್ತ್ರಿಗಳು. ಇದರೊಂದಿಗೆ ಅವರ ತಾಯಿ ಶ್ರೀಮತಿ ಲಲಿತಮ್ಮನವರ ಸಹೃದಯತೆ ಮರೆಯುವಂತೆಯೇ ಇಲ್ಲ. ಶೃಂಗೇರಿ ಎಂದರೆ ಈಗಲೂ ನಮಗೆ ನೆನಪಿಗೆ ಬರುವುದು ಗಿರಿಧರ ಶಾಸ್ತ್ರಿಗಳು ಹಾಗೂ ಅವರ ತಾಯಿ.

ಇದೇ ರೀತಿ ಶ್ರೀ ಶ್ರೀನಾಥ ಶಾಸ್ತ್ರಿಗಳೂ ನಮಗೆ ಬಹಳ ಆಪ್ತರು. ೧೯೯೫ರ ಸುಮಾರಿನಲ್ಲಿ ಸಂಸ್ಕೃತ ಪಂಡಿತರಾದ ಪ್ರಸಿದ್ಧ ವಿದ್ವಾನ್ ಎನ್. ರಂಗನಾಥ ಶರ್ಮಾ ಅವರಿಗೆ ಅಭಿನಂದನ ಸಮಾರಂಭ ಆಯೋಜಿಸಲಾಗಿತ್ತು. ಆಗ ನಮ್ಮ ಯಜಮಾನರಾದ ಶ್ರೀ ವೆಂಕಟರಮಣನ್ ಅವರೂ ಸಮಿತಿಯಲ್ಲಿದ್ದರು. ಶ್ರೀನಾಥಶಾಸ್ತ್ರಿಗಳೂ ಅಭಿನಂದನಾ ಸಮಿತಿಯಲ್ಲಿದ್ದರು. ಆಗ ಒಟ್ಟಿಗೆ ಎಲ್ಲರಿಂದಲೂ ಲೇಖನಗಳನ್ನು ತಂದು, ದೇಣಿಗೆಯನ್ನೂ ತಂದು, ಸಮಾರಂಭ ಬಹಳ ಯಶಸ್ವಿಯಾಯಿತು. ಇದರ ನಂತರ ಅವರ ಶ್ರೀಮತಿ ಸರಸ್ವತಿಯವರ ಪರಿಚಯವೂ ಆಯಿತು. ಅವರೂ ನಮ್ಮ ಮನೆಗೆ ಬರುತ್ತಿದ್ದರು. ಹಲವಾರು

ವಿಷಯಗಳ ಬಗ್ಗೆ ಮಾತನಾಡುತ್ತಿದ್ದರು. ಈಗಲೂ ಅವರು ಅದೇ ರೀತಿಯಾದ ಅಭಿಮಾನವನ್ನು ಹೊಂದಿದ್ದಾರೆ. ಇವರ ಪರಿವಾರವೆಲ್ಲ ಬಹಳ ಹತ್ತಿರವಾದದ್ದು ಅವರ ಸ್ನೇಹಪರ ನಡವಳಿಕೆಯಿಂದ, ಅವರ ಆತ್ಮೀಯತೆಯಿಂದ. ಗಿರಿಧರಶಾಸ್ತ್ರಿಗಳಂತೂ ನಮ್ಮ ಪರಿವಾರದ ಸದಸ್ಯರೆಂದೇ ನಾನು ತಿಳಿದು ಕೊಂಡಿದ್ದೇನೆ. ನಯ, ವಿನಯ ಹಾಗೂ ಸ್ನೇಹ ಪರತೆಯಿಂದ ಕೂಡಿದ ಅವರ ವ್ಯಕ್ತಿತ್ವ, ಅವರ ಅಧ್ಯಯನ-ಶೀಲತೆ ಹಾಗೂ ಎಲ್ಲರಲ್ಲೂ ಸಮಾನತೆ, ಈ ಗುಣಗಳು ನಮ್ಮ ಮನಸ್ಸನ್ನು ಗೆದ್ದಿತು. ಓದುವ ಮಕ್ಕಳನ್ನು ಪ್ರೋತ್ಸಾಹಿಸಿ, ಅವರನ್ನು ಮನೆಯಲ್ಲಿಟ್ಟುಕೊಂಡು, ಅವರ ಜೀವನಕ್ಕೆ ಒಂದು ದಾರಿಯನ್ನು ತೋರಿಸುತ್ತಿರುವ ಶ್ರೀ ಗಿರಿಧರಶಾಸ್ತ್ರೀ ಅವರ ಮಾನವೀಯತೆ, ಅನುಕರಣೀಯವಾದದ್ದು.

ಶ್ರೀ ಗಿರಿಧರ ಶಾಸ್ತ್ರಿಗಳಿಗೂ ಶ್ರೀ ಶ್ರೀನಾಥ ಶಾಸ್ತ್ರಿಗಳಿಗೂ ಅವರ ಕುಟುಂಬಕ್ಕೂ ಭಗವಂತನು ಎಲ್ಲ ಮಂಗಳವನ್ನೂ ಉಂಟು ಮಾಡಲಿ ಎಂದು ಹಾರೈಸುತ್ತೇನೆ.

◆

ಶಾಸ್ತ್ರಿ ಕುಟುಂಬ

– ಡಾ॥ ಹೆಚ್. ಪಾಂಡುರಂಗ ವಿಠಲ, ವಿರಾಜಪೇಟೆ
ನಿವೃತ್ತ ಪ್ರಾಚಾರ್ಯರು, ೯ಳಳಲಂಖಿಶಳರ್ಳ
hpvittal@gmail.com

ನಾನು ಬಿ.ಎಸ್ಸಿ ಓದಲು ೧೯೬೦ರಲ್ಲಿ ಶೃಂಗೇರಿಗೆ ಬಂದೆ. ನಮ್ಮ ಅಣ್ಣ ಡಾ| ಹೆಚ್.ರಾಮಚಂದ್ರ ಸ್ವಾಮಿ ಜೆ.ಸಿ.ಬಿ.ಎಂ. ಕಾಲೇಜಿನಲ್ಲಿ ರಸಾಯನ ಶಾಸ್ತ್ರ ಉಪನ್ಯಾಸಕರಾಗಿದ್ದರು. ಕೆಲವು ದಿನಗಳಲ್ಲಿ ನಾವು ಗಣಿತ ಉಪನ್ಯಾಸಕ ಶ್ರೀ ಚಿ.ವಿ.ಶ್ರೀನಾಥ ಶಾಸ್ತ್ರೀ ಹಾಗೂ ಅವರ ಸೋದರ ಗಿರಿಧರ ಶಾಸ್ತ್ರಿಗಳೊಡನೆ ಒಂದು ಮನೆಯಲ್ಲಿ ವಾಸಮಾಡತೊಡಗಿದೆವು. ನನಗೆ ಇದೊಂದು ಹೊಸ ಅನುಭವ. ಅಲ್ಲಿಯವರೆಗೆ ಬೇರೆ ಉಪನ್ಯಾಸಕರೊಂದಿಗೆ ಒಟ್ಟಿಗೆ ಇರಲಿಲ್ಲವಾಗಿ, ಹೇಗೆ ನಡೆದುಕೊಂಡರೆ ಏನಾಗುವುದೋ ಎಂಬ ಆತಂಕ. ಆದರೆ ಬೇಗನೆ ಶಾಸ್ತ್ರಿ ಸಹೋದರರು ನನ್ನ ಸಂಕೋಚವನ್ನು ದೂರಮಾಡಿ, ಒಂದೇ ಕುಟುಂಬದವರಂತೆ ಇರತೊಡಗಿದೆವು. ಅಂದಿನಿಂದಲೂ ಶಾಸ್ತ್ರಿಗಳಿಗೆ ನನ್ನ ಮೇಲೆ ಸಹೋದರ ವಾತ್ಸಲ್ಯ. ಭಾಸ್ಕರಕಾಮತರಂತಹ ಎಷ್ಟೋ ಜನ ಹಿರಿಯರು ಇತ್ತೀಚಿನವರೆಗೂ ನನ್ನನ್ನು ಶ್ರೀನಾಥ ಶಾಸ್ತ್ರಿಗಳ ತಮ್ಮನೆಂದೇ ತಿಳಿದು ಅವರ ಬಗ್ಗೆ ವಿಚಾರಿಸುತ್ತಿದ್ದರು.

ಈ ಮನೆಯಲ್ಲಿ ನಮ್ಮ ಅಣ್ಣ ಶ್ರೀರಾಮಕೃಷ್ಣ ಆಶ್ರಮದಲ್ಲಿ ನಡೆಸುವಂತೆ ಆಸಕ್ತರನ್ನು ಸೇರಿಸಿ, ನಿತ್ಯ ಸಂಜೆ ಭಜನೆ ಮಾಡಲು ಆರಂಭಿಸಿದರು. ಶ್ರೀನಾಥ ಶಾಸ್ತ್ರಿಗಳನ್ನು ವಾಕಿಂಗ್‌ಗೆ ಕರೆದುಕೊಂಡುಹೋಗಿ, ತೈತ್ತಿರೀಯ ಉಪನಿಷತ್ತನ್ನು ಹೇಳಿಕೊಡಲಾರಂಭಿಸಿದರು. ಈಗಲೂ ಶಾಸ್ತ್ರಿಗಳು ಮಂತ್ರ ಹೇಳುವಾಗ ನಮ್ಮ ಅಣ್ಣನನ್ನು ನೆನಪುಮಾಡಿಕೊಳ್ಳುತ್ತಿರುತ್ತಾರಂತೆ. ಅಳಿಯದೇವರು ಎಂಬ ನಾಟಕವನ್ನು ಕಾಲೇಜು ಸಹಾಯಾರ್ಥ ಎಲ್ಲ ಉಪನ್ಯಾಸಕರೂ ಸೇರಿ ಅನೇಕ ಬಾರಿ ಆಡಿದರು. ಕಾಲೇಜಿಗೆ ಎಷ್ಟು ಸಹಾಯವಾಯಿತೋ ಗೊತ್ತಿಲ್ಲ. ಆದರೆ ಇದರಿಂದ ಉಪನ್ಯಾಸಕರೆಲ್ಲರ ಬಾಂಧವ್ಯ ಗಟ್ಟಿಯಾಯಿತು. ನಮ್ಮ ಅಣ್ಣನದು ಮಡಿ ಹೆಂಗಸಿನ ಪಾತ್ರ, ಕೆಂಪುಕೆಂಪಾಗಿ ಲಕ್ಷಣವಾಗಿದ್ದ ಶಾಸ್ತ್ರಿಗಳು ಪದ್ದುವಿನ(ಮನೆಯ ಸೊಸೆ) ಪಾತ್ರ ವಹಿಸಿದ್ದರು. ಅಣ್ಣ ನೆನಪಾದಾಗ ನಾಟಕದ ಸಂಭಾಷಣೆಗಳನ್ನು ಹೇಳಿ, 'ಅಲ್ವೇನೇ ಪದ್ದೂ' ಎಂದು ಶಾಸ್ತ್ರಿಗಳ ತಲೆಗೆ ಮೊಟಕುತ್ತಿದ್ದರು. ಮತ್ತೊಬ್ಬ ವಿಚಿತ್ರ ಸ್ವಭಾವದ ಉಪನ್ಯಾಸಕ ವೈ.ವಿ.ರಾವ್ 'ಶ ಕ್ಕೆ ಇಳಿ ಶಾ ಸ್ತ್ರೀ' ಎಂದು ಅಣಕಿಸುತ್ತಿದ್ದರು. ಮನೆಯ ಮಾಲೀಕರು ಕೆಲವು ಕಾಲದ ಅನಂತರ ಮನೆಯನ್ನು ಬೇರೆಯವರಿಗೆ ಮಾರಿದುದರಿಂದ ಹಾಗೂ ಶಾಸ್ತ್ರಿಗಳು ತಮ್ಮ ತಂದೆ-ತಾಯಿಯರನ್ನು ಶೃಂಗೇರಿಗೆ ಕರೆತಂದುದರಿಂದ ಈ ಸೊಗಸಾದ ಸಹ-ವಾಸಕ್ಕೆ ನಿಲುಗಡೆಯಾಯಿತು. ಆದರೆ,

ಸ್ನೇಹ ಮುಂದುವರಿಯಿತು. ಶಾಸ್ತ್ರಿಗಳ ಕುಟುಂಬ ಶೃಂಗೇರಿಯಲ್ಲಿ ಹೊಸ ಸಾಂಸ್ಕೃತಿಕ ಅಲೆಯನ್ನು ಉಂಟುಮಾಡಿತು. ಅವರ ಪೂಜ್ಯ ತೀರ್ಥರೂಪರಾದ ಶ್ರೀ ವಿಶ್ವನಾಥ ಶಾಸ್ತ್ರಿಗಳು ಸಹೃದಯ ಗೋಷ್ಠಿ ಆರಂಭಿಸಿ, ಖ್ಯಾತನಾಮರನ್ನು ಊರಿಗೆ ಕರೆತರಲು ಆರಂಭಿಸಿದರು. ಉಚಿತವಾಗಿ ಸಂಸ್ಕೃತ ಪಾಠ, ಗಮಕ, ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಎಡೆಬಿಡದೆ ನಡೆಸುತ್ತಿದ್ದರು.

ಎಲ್ಲರನ್ನೂ ತಮ್ಮೊಡನೆ ಎಳೆದೊಯ್ಯುವ, ಅವರಿಗೆ ಸಾಮಾಜಿಕ ಪ್ರತಿಷ್ಠೆ ತಂದುಕೊಡಲು ಪ್ರಯತ್ನಿಸುವ ಹಿರಿ ಶಾಸ್ತ್ರಿಗಳ ಹಿರಿದಾದ ಗುಣಕ್ಕೆ ಒಂದು ಉದಾಹರಣೆ ಇಲ್ಲಿದೆ.

ನನ್ನ ಕಿರಿಯ ಮಿತ್ರ ಶ್ರೀ ರಫೀಕ್ ಅಹ್ಮದ್ ನಮ್ಮ ಕಾಲೇಜಿನಲ್ಲಿ ಒಂದು ವರ್ಷ ಲಿಟರರಿ ಚಾಂಪಿಯನ್ ಆಗಿದ್ದರು. ಭಾರತೀಯತೆಗೆ ತೆರೆದುಕೊಂಡಿದ್ದ ಅವರಿಗೆ ಸಂಸ್ಕೃತದ ಬಗ್ಗೆ ಒಲವು; ತಮಗೆ ಕಲಿಯಲಾಗದಿದ್ದುದಕ್ಕೆ ವ್ಯಸನ. ತಮ್ಮ ಅಕ್ಕನ ಮಗ ಆಫ್ತಾಬ್‌ನಿಗೆ (ಈಗ ಗಲ್ಫ್‌ನಲ್ಲಿ ಇಂಜಿನಿಯರ್ ಆಗಿದ್ದಾನೆ) ಪ್ರೌಢಶಾಲೆಯಲ್ಲಿ ಸಂಸ್ಕೃತ ತೆಗೆದುಕೊಳ್ಳಲು ಪ್ರಭಾವ ಬೀರಿದರು. 'ಕಲಿಸುವಿರಾ?' ಎಂದು ಶಾಸ್ತ್ರಿಗಳನ್ನು ಕೇಳಿದಾಗ, ಸಂತೋಷದಿಂದ ಒಪ್ಪಿದುದಲ್ಲದೆ, ತುಂಬ ಪ್ರೀತಿಯಿಂದ ಉಚಿತವಾಗಿ ಮೂರು ವರ್ಷ ಹೇಳಿಕೊಟ್ಟರು. ಇವರ ಪ್ರೀತಿಗೆ ಮಾರುಹೋದ ಆಫ್ತಾಬ್ ಸುರಸರಸ್ವತೀ ಸಭಾ ನಡೆಸುವ ಪರೀಕ್ಷೆಗಳಿಗೂ ಕೂತ. ಒಳ್ಳೆಯ ಅಂಕಗಳೊಡನೆ ಪಾಸಾದ. ಶಾಸ್ತ್ರಿಗಳಿಗೆ ಇದೊಂದು ಅಪರೂಪದ ಘಟನೆ ಎನ್ನಿಸಿತು. ಮಠಕ್ಕೆ ಅವನನ್ನು ಕರೆದೊಯ್ದು, ಚಿಕ್ಕಗುರುಗಳಿಗೆ ಈ ಸಮಾಚಾರ ತಿಳಿಸಿ, ಅವರಿಂದ ಅಂಕಪಟ್ಟಿ, ಪ್ರಮಾಣಪತ್ರ ಕೊಡಿಸಿದರು!

ಕೆಲವು ತಿಂಗಳಲ್ಲಿ ನಾವು ಶಿವಯ್ಯನವರ ಒಂದು ಮನೆಗೆ ಹೋದಾಗ, ಶಾಸ್ತ್ರಿಗಳು ನಮ್ಮ ನೆರೆಮನೆಯವರಾದರು. ಶಾಸ್ತ್ರಿಗಳ ಮಕ್ಕಳಾದ ಶ್ರೀಮತಿ ಹಾಗೂ ರಮಾ ಗಮಕ ತರಗತಿಗಳನ್ನು ತೆಗೆದುಕೊಳ್ಳುತ್ತಿದ್ದರು. ಹೀಗಾಗಿ, ನಮಗೆ ಸಂಗೀತದ ಗಂಧ ಗಾಳಿ ತಗುಲಿತು. ಒಂದೆರಡು ವರ್ಷದ ಅನಂತರ ನಮ್ಮ ಅಣ್ಣ ಇನ್ನಿಬ್ಬರು ಉಪನ್ಯಾಸಕರೊಡನೆ ಶಾಸ್ತ್ರೀಯ ಸಂಗೀತ ಕಲಿಯಲಾರಂಭಿಸಲು ಇದೇ ಪ್ರೇರಣೆ ಎಂದು ನನಗೆ ಅನ್ನಿಸಿದೆ. ಶಾಸ್ತ್ರಿಗಳು ಬೇರೆ ಮನೆಗೆ ಹೋದಮೇಲೂ ಈ ಸಂಗೀತ ಪಾಠಗಳು ಮುಂದುವರೆದುವು.

ಶ್ರೀ ಶ್ರೀನಾಥಶಾಸ್ತ್ರಿಗಳು ನನಗೆ ಗಣಿತದ ಉಪನ್ಯಾಸಕರಾಗಿದ್ದರು. ಸಲಿಗೆಯಿಂದಾಗಿ, ನಾನು ಎಂದಾದರೂ ಹೇಳಿಸಿಕೊಳ್ಳಬಹುದು ಎಂಬ ಧೋರಣೆಯಿಂದ ತರಗತಿಗಳಲ್ಲಿ ಅವರ ಪಾಠವನ್ನು ಸರಿಯಾಗಿ ಕೇಳದೆ ನಿದ್ದೆ ಮಾಡುತ್ತಿದ್ದೆ. ಮೃದು ಸ್ವಭಾವದ ಶಾಸ್ತ್ರಿಗಳಿಗೆ ಬಯ್ಯಲು ಬಾರದು. ಸಹೋದ್ಯೋಗಿಯ ತಮ್ಮನೇ ಫೇಲಾದರೆ ಏನು ಹೇಳೋದು ಎಂದು ಆತಂಕ. ಹೀಗಾಗಿ, ಒಂದು ದಿನ 'ಇದುವರೆಗೆ ಎಲ್ಲ ಟೆಸ್ಟಿನಲ್ಲೂ ಫೇಲಾಗಿದ್ದೀಯೆ. ಮನೆಗೆ

ಬಂದು ಹೇಳಿಸಿಕೊಳ್ಳದಿದ್ದರೆ ಖಂಡಿತ ಕೊನೆಯ ಪರೀಕ್ಷೆಯಲ್ಲಿ ಪಾಸಾಗುವುದಿಲ್ಲ' ಎಂದು ಸ್ನೇಹಿತರೊಡನೆ ಇದ್ದ ನನಗೆ ಹೇಳಿದರು. ನನಗೆ ಅವಮಾನವಾದಂತಾಗಿ, ಉಳಿದಿದ್ದ ಎರಡು ತಿಂಗಳು ಸ್ನೇಹಿತ ರಾಮಮೂರ್ತಿಯೊಡನೆ ಕಂಬೈನ್ಡ್ ಸ್ಟಡಿ ಮಾಡಿದೆ. ದೇವರ ದಯೆ. ತರಗತಿಗೆ ಎರಡನೆಯವನಾಗಿ ಪಾಸಾದೆ. ಶಾಸ್ತ್ರಿಗಳಂತೂ ತುಂಬ ಸಂತೋಷಪಟ್ಟರು.

ಅನಂತರ ಅವರು ಕಾಲೇಜು ಬಿಟ್ಟು ಬೆಂಗಳೂರಿನ ಎನ್.ಎ.ಎಲ್ ಸೇರಿದರು. ಎನ್.ಎ.ಎಲ್‌ನಲ್ಲಿ ಕಣಾದ ಮಾಸಪತ್ರಿಕೆ ಹುಟ್ಟುಹಾಕಿ ಅನೇಕರು ಬರಹಗಾರರಾಗುವಂತೆ ಒತ್ತಾಸೆ ನೀಡಿದರು. ಅನಂತರ ಅವರು ಕಂಪ್ಯೂಟರ್ ತಜ್ಞರಾಗಿ ಹೆಸರು ಮಾಡಿದರು; ಈಗಲೂ ಕನ್ನಡ ಗಣಕ ಪರಿಷತ್ತಿನ ಸ್ಥಾಪಕ ಕಾರ್ಯದರ್ಶಿಯಾಗಿ ಕೆಲಸ ಮಾಡುತ್ತಿದ್ದಾರೆ. ಈ ವಯಸ್ಸಿನಲ್ಲೂ ಚಟುವಟಿಕೆಯಿಂದ ಎಲ್ಲೆಡೆ ಓಡಾಡಿ, ಗಣ್ಯರು ಎಲ್ಲರನ್ನೂ ಭೇಟಿಯಾಗುತ್ತ, ಕರ್ನಾಟಕದಲ್ಲಿ ಮಾತೃಭಾಷೆ ಕನ್ನಡದಲ್ಲಿಯೇ ಪ್ರಾಥಮಿಕ ಶಿಕ್ಷಣ ಕಡ್ಡಾಯವಾಗಬೇಕು, ಕಂಪ್ಯೂಟರ್ ಪ್ರೋಗ್ರಾಮಿಂಗ್ ಭಾಷೆಯಾಗಿ ಸಂಸ್ಕೃತ ಬಳಕೆಗೆ ಬರಬೇಕು ಎಂದು ಹೋರಾಟ ನಡೆಸಿದ್ದಾರೆ. ಹೆಂಗರುಳು, ಎಲ್ಲರನ್ನೂ ಹಚ್ಚಿಕೊಳ್ಳುವ ಗುಣ, ಎರಡೇ ವರ್ಷ ಉಪನ್ಯಾಸಕರಾಗಿದ್ದರೂ, ತಮ್ಮ ವಿದ್ಯಾರ್ಥಿಗಳನ್ನು ಈಗಲೂ ಮರೆತಿರದ ಪ್ರೀತಿ ಅವರದು. ಈಚೆಗೆ ಒಮ್ಮೆ ಮೈಸೂರಿಗೆ ಬಂದಾಗ 'ನಿಮ್ಮ ಆ ದಿನಗಳ ಪ್ರಿಯಶಿಷ್ಯ ಕುಮಾರಸ್ವಾಮಿ ದಿಲ್ಲಿಯ ಎನ್‌ಪಿಎಲ್ ಕೆಲಸದಿಂದ ನಿವೃತ್ತನಾಗಿ ಬಂದು ಇಲ್ಲೇ ನೆಲೆಸಿದ್ದಾನೆ' ಎಂದು ನಾನು ಹೇಳಿದಾಗ, ತಕ್ಷಣವೇ ಮುಂದಿನ ಬಾರಿ ಬಂದಾಗ ಭೇಟಿ ಮಾಡಿಸು ಎಂದಿದ್ದರು. ಮೊನ್ನೆ ಬಂದಾಗ, ನೆನಪಿಟ್ಟು, ಗುಂಡಣ್ಣನವರ ಮನೆಯಲ್ಲಿ ಕಾದು ಕುಳಿತು ಕುಮಾರಸ್ವಾಮಿಗೆ ಹೇಳಿಕಳಿಸಿ ಭೇಟಿಯಾದರು! ನನಗಂತೂ ಶಾಸ್ತ್ರಿಗಳು ಉಪಾಧ್ಯಾಯ ವೃತ್ತಿಯಲ್ಲೇ ಇದ್ದಿದ್ದರೆ ತುಂಬ ಹೆಸರು ಗಳಿಸಬಹುದಿತ್ತು ಎಂದು ಈಗಲೂ ಅನ್ನಿಸುತ್ತದೆ.

ಶ್ರೀ ಗಿರಿಧರ ಶಾಸ್ತ್ರಿಗಳ ಬಗ್ಗೆ ನನಗೆ ಮೊದಮೊದಲು ಸ್ಪರ್ಧೆ, ಆ ಮೂಲಕ ಅಸೂಯೆ ಇದ್ದರೂ, ಅವರು ಬೆಳೆದುಬಂದ ರೀತಿ ಬೆರಗನ್ನು ಉಂಟುಮಾಡಿದೆ. ಆಧ್ಯಾತ್ಮಿಕ ಸಾಧನೆಯಲ್ಲಿ ಮುಂದುವರೆದಂತೆಲ್ಲ ಮೊದಲ ಲಕ್ಷಣವೆಂದರೆ ಹೃದಯ ವಿಸ್ತಾರ ಹೊಂದಿ ಎಲ್ಲರನ್ನೂ, ಕೊನೆಗೆ ಇಡೀ ಜಗತ್ತನ್ನೇ ಒಳಗೊಳ್ಳುತ್ತದೆ ಎಂದಿದ್ದಾರೆ ಸ್ವಾಮಿ ವಿವೇಕಾನಂದರು. ಇವರನ್ನು ನೋಡಿದಾಗ ಇದು ಸತ್ಯ ಎನ್ನಿಸುತ್ತದೆ. ಶೃಂಗೇರಿಯ ಹಿಂದಿನ ಪೀಠಾಧಿಪತಿಗಳಾದ ಶ್ರೀಅಭಿನವವಿದ್ಯಾತೀರ್ಥ ಮಹಾಸ್ವಾಮಿಗಳು ತಮ್ಮ ಪ್ರೈವೇಟ್ ಸೆಕ್ರಟರಿಯಾಗಿ ಇವರನ್ನು ಎಳೆಯ ವಯಸ್ಸಿನವರಾಗಿರುವಾಗಲೆ ಆರಿಸಿದ್ದರು. ಮಹಾಸ್ವಾಮಿಗಳ ಕೊನೆಯ ದಿನಗಳವರೆಗೂ ಇವರೂ ಅಷ್ಟೇ ನಿಷ್ಠೆಯಿಂದ ಸೇವೆ

ಸಲ್ಲಿಸಿದರು. ಕೆಲವು ವರ್ಷಗಳ ಅನಂತರ ಅಧ್ಯಯನ ನಿಷ್ಠೆ ಇವರನ್ನು ಉಪನ್ಯಾಸಕರಾಗುವಂತೆ ಮಾಡಿತು. ಅನಂತರ ಎಷ್ಟು ಜನರಿಗೆ ಇವರು ಅಧ್ಯಯನದ ಸವಿ ತೋರಿಸಿ ಇಂಗ್ಲಿಷ್ ಎಂ.ಎ. ಮಾಡಿಸಿದರು! ಇವರ ವಿದ್ಯಾರ್ಥಿಯೊಬ್ಬ ನನಗೆ ಬೇರೆಯವರ ನೋಟ್ಸ್ ಕೊಡಿಸಿ, ಒತ್ತಾಯ ಮಾಡಿ ನನ್ನಿಂದಲೂ ಇಂಗ್ಲಿಷ್ ಎಂ.ಎ. ಮಾಡಿಸಿದ. ಹೀಗಾಗಿ ಇವರು ನನಗೆ 'ಪರಮ ಗುರು' ಆಗಿದ್ದಾರೆ. ಶೃಂಗೇರಿಯ ಪರಂಪರೆಯ, ಸಂಸ್ಕೃತಿಯ ಐಕಾನ್ ಆಗಿ ಇವರಿದ್ದಾರೆ ಎಂಬುದು ನನ್ನ ಅನುಭವಕ್ಕೆ ಬಂದ ಒಂದು ಸನ್ನಿವೇಶ ಹೀಗಿದೆ.

ಊರಿಗೆ ಹೋದಾಗ ಗೆಳೆಯ ರಾಮಮೂರ್ತಿಯ ಜತೆ ಮಾತಾಡುವಾಗ ಶಾಸ್ತ್ರಿಗಳ ಬಗ್ಗೆ ವಿಚಾರ ಬಂತು. ನಾನು ಏಕವಚನದಲ್ಲಿ ಶಾಸ್ತ್ರಿಗಳ ಬಗ್ಗೆ ಗಿರಿ ಈಗ ಏನು ಮಾಡುತ್ತಿದ್ದಾನೆಂದು ವಿಚಾರಿಸಿದೆ. ತಕ್ಷಣವೇ ರಾಮಮೂರ್ತಿ 'ಅವರು ಗಿರಿ ಅಲ್ಲ, ಗಿರಿಧರ ಶಾಸ್ತ್ರಿಗಳು' ಎಂದು ನನ್ನ ಮಾತನ್ನು ತಿದ್ದಿ, ಎಲ್ಲರೂ ಅವರಿಗೆ ಎಷ್ಟು ಗೌರವ ನೀಡುತ್ತಾರೆ ಎಂದು ಒಂದೆರಡು ಸಂಗತಿಗಳನ್ನು ಹೇಳಿದ! ನನಗೆ ತುಂಬ ಆಶ್ಚರ್ಯ, ಆನಂದ ಆಯಿತು". ಸಾಮಾನ್ಯವಾಗಿ ಒಂದು ಹಂತಕ್ಕೆ ಎಲ್ಲರೂ ಬೆಳೆದು, ಅಲ್ಲಿಯೇ ನಿಂತುಬಿಡುತ್ತಾರೆ. ಈ ವ್ಯಕ್ತಿ ಬೆಳೆದು, ಬೆಳೆದು ಇನ್ನೂ ಬೆಳೆಯುತ್ತಲೇ ಇರುವ ಪರಿ ಕಂಡು, ಇಂತಹ ಇನ್ನೊಬ್ಬರನ್ನು ನೋಡಲಿಲ್ಲವಲ್ಲ ಎನ್ನಿಸಿತು.

ಈಗ ಶಾಸ್ತ್ರಿಗಳು ತಾವು ಓದಿದ ಕಾಲೇಜಿನಲ್ಲೆ ಪ್ರಾಂಶುಪಾಲರಾಗಿದ್ದಾರೆ. ಶೈಕ್ಷಣಿಕ ಮೌಲ್ಯಗಳು ಕುಸಿಯುತ್ತಿರುವ ಈ ಕಾಲದಲ್ಲಿ ಶಾಸ್ತ್ರಿಗಳಂತಹವರ ಬಳಿ ಓದಿದವರಾದರೂ ಪರೀಕ್ಷೆಗಾಗಿ ಓದದೆ ಜ್ಞಾನದಾಹಿಗಳಾಗಿ ಬೆಳೆದು ಭಾರತದ ಹಿರಿಮೆಯನ್ನು ಎತ್ತಿಹಿಡಿಯುವವರಾದಾರು ಎಂಬ ನಂಬಿಕೆ ನನ್ನದಾಗಿದೆ.

◆

ವಿಜ್ಞಾನಿ ಗೆಳೆಯನ ನೆನಪುಗಳು

– ವಿಜಯವಿಠ್ಠಲ, ಬೆಂಗಳೂರು
ರಾವೈಪ್ರ ನಿವೃತ್ತ ವಿಜ್ಞಾನಿ, ೯೪೪೮೦೬೧೨೩೧
ngvittala@gmail.com

ಚಿ.ವಿ.ಶ್ರೀನಾಥಶಾಸ್ತ್ರೀ, ಕಛೇರಿಯಲ್ಲಿ ಸಿ.ವಿ.ಎಸ್ ಆದರೆ, ನನಗೆ ಬರೀ ಶಾಸ್ತ್ರೀ. ನನಗೆ ಪರಿಚಯವಾದದ್ದು ನಾನು ಎನ್.ಎ.ಎಲ್ (ರಾ.ವೈ.ಪ್ರ) ಸೇರಿದ ಮೇಲೆಯೇ. ನಾನು ೧೯೭೩ನೇ ಇಸವಿಯಲ್ಲಿ ಎನ್.ಎ.ಎಲ್ ಸೇರಿ ಅಲ್ಲಿನ ಕನ್ನಡ ಸಂಘಕ್ಕೂ ಸದಸ್ಯನಾದೆ. ಅನೇಕರ ಪರಿಚಯವಾಗಿ ಸಖ್ಯವು ಬೆಳೆದರೂ ಜೀವನದಲ್ಲಿ ಅಚ್ಚಳಿಯದೇ ಹಿತವಾದ ಬೆಚ್ಚನೆಯ ನೆನಪುಗಳ ಬುತ್ತಿಯನ್ನು ಕಟ್ಟಿಕೊಟ್ಟ ಸರಳ ಸುಂದರವಾದ ಗೆಳೆತನವಾದದ್ದು ಶಾಸ್ತ್ರಿಯೊಂದಿಗೆ. ಅಂದಿನಿಂದ ಇಂದಿನವರೆಗೂ ಉಳಿದು ಬೆಳೆದು ಬಂದಿರುವ ಸಖ್ಯವು ಕೇವಲ ಕಛೇರಿಗೆ ಸೀಮಿತವಾಗದೇ, ಮನೆಯವರೆಗೂ ಆಕ್ರಮಿಸಿ, ನಮ್ಮ ಜೀವನಸಂಗಾತಿಗಳನ್ನೂ ಈ ಸ್ನೇಹಸಿಂಚನದಲ್ಲಿ ಒಂದುಗೂಡಿಸಿದೆಯೆಂದರೆ ಅಚ್ಚರಿಯ ವಿಷಯವೇನಲ್ಲ. ಏಕೆಂದರೆ ಶಾಸ್ತ್ರಿಯೊಡನೆಯ ಒಡನಾಟ ಎಂದೂ ಅಶಾಸ್ತ್ರೀಯವಾಗಿಯೇ ಇಲ್ಲ. ಈ ನನ್ನ ನಾಲ್ಕು ದಶಕಗಳ ಗೆಳೆತನದಲ್ಲಿ ಶಾಸ್ತ್ರಿಯೊಡನೆ ಕಳೆದ ಅನೇಕ ನೆನಪುಗಳ ಸರಣಿಯಿಂದ ಕೆಲವೊಂದನ್ನು ಆಯ್ದು ಅದರಿಂದ ಶಾಸ್ತ್ರಿಯ ವ್ಯಕ್ತಿತ್ವವನ್ನು ನಾನು ಅರಿತಂತೆ ದಾಖಲಿಸುವ ಪ್ರಯತ್ನ ನನ್ನದು.

ಕನ್ನಡಸಂಘದ ಸದಸ್ಯನಾದೆ ಎಂದೆನಲ್ಲಾ, ಅದು ಕೇವಲ ಮಾಸಪತ್ರಿಕೆ, ಕಾದಂಬರಿಗಳನ್ನು ಎರವಲು ಪಡೆದು ಓದುವುದಕ್ಕಷ್ಟೆ ನನ್ನ ಚಟುವಟಿಕೆಯು ಸೀಮಿತವಾಗದಂತೆ, ಸಂಘದ ಅನೇಕ ಚಟುವಟಿಕೆಗಳಲ್ಲಿ ಸಕ್ರಿಯವಾಗಿ ಭಾಗವಹಿಸುವಂತೆ ನನ್ನನ್ನು ಸೆಳೆದದ್ದೇ ನನ್ನ ಮತ್ತು ಶಾಸ್ತ್ರಿಯ ಗೆಳೆತನಕ್ಕೆ ಅಂಕುರವಾಯಿತು. ಪ್ರಯೋಗಶಾಲೆಯ ಕನ್ನಡ ಸಂಘವು ಕೈಗೊಂಡ ಕನ್ನಡ ವಿಜ್ಞಾನ ಪತ್ರಿಕೆಯಾದ 'ಕಣಾದ' ಪ್ರಕಟಣೆಯ ನಿರ್ಧಾರದೊಂದಿಗೆ ನನ್ನ ಮತ್ತು ಶಾಸ್ತ್ರಿಯ ಒಡನಾಟ ಹೆಚ್ಚಾಯಿತು. ಗೆಳೆತನದ ಮೊದಲ ಹಂತದಲ್ಲೇ ಶಾಸ್ತ್ರಿಯ ಸರಳ ಸಜ್ಜನಿಕೆಯ ಪರಿಚಯವಾಯಿತು. ಕನ್ನಡ ಲೇಖನಗಳನ್ನು ಪರಿಶೀಲಿಸುವಲ್ಲಿ, ಮುದ್ರಣ ದೋಷಗಳನ್ನು ಸರಿಪಡಿಸುವಲ್ಲಿ, ಲೇಖನಗಳನ್ನು ಅಂತಿಮ ಹಂತಕ್ಕಾಗಿ ಸಿದ್ಧಪಡಿಸುವಲ್ಲಿ ಶಾಸ್ತ್ರಿಯ ನೇತೃತ್ವದಲ್ಲಿ ಹಲವರು ಒಗ್ಗೂಡಿದರು. ಅವರಲ್ಲಿ ನಾನೂ ಒಬ್ಬನಾದೆ. ಪ್ರಯೋಗಶಾಲೆಯ ಕೆಲಸದ ಒತ್ತಡದಿಂದ ಕಛೇರಿಯ ವೇಳೆಯಲ್ಲಿ ಹೆಚ್ಚಿನ ಬಿಡುವು ದೊರೆಯುತ್ತಿಲ್ಲವಾಗಿ, ನಂತರದ ಸಮಯವು

ಕಣಾದ ಕೆಲಸಕ್ಕೆ ಮೀಸಲಾಯಿತು. ಅದರ ಕಾರ್ಯಾಗಾರವು ಶಾಸ್ತ್ರಿಯ ಮನೆಯೇ ಆಯಿತು. ಆ ಸಮಯದಲ್ಲಿ ಇನ್ನೂ ಸಂಸಾರದ ಗೊಡವೆಯೇ ಇಲ್ಲದೆ ಬಿಡುಬೀಸಾಗಿದ್ದ ನಮಗೆ ಹೊತ್ತುಗೊತ್ತುಗಳ ಪರಿವೆಯೇ ಇರುತ್ತಿರಲಿಲ್ಲ. ಶಾಸ್ತ್ರಿಗಳು ಸಂಸಾರಿಯಾಗಿದ್ದರೂ, ಅವರ ಶ್ರೀಮತಿಯವರು ಬಾಣಂತನಕ್ಕಾಗಿ ತವರಿಗೆ ಹೋಗಿದ್ದರಿಂದ ಕೆಲಸದ ನಡುವೆಯೂ ನಮ್ಮ ಹರಟೆ, ಚೇಷ್ಟೆ, ನಗೆ ಚಟಾಕಿಗಳಿಗೆ ಮಿತಿಯಿರುತ್ತಿರಲಿಲ್ಲವಾಗಿ ನಿಗದಿತ ಕೆಲಸವನ್ನು ನಮ್ಮಿಂದ ಶಾಸ್ತ್ರಿಗಳು ಹೇಗೆ ಪೂರೈಸುತ್ತಿದ್ದರೋ ತಿಳಿಯುತ್ತಿರಲಿಲ್ಲ. ಮಧ್ಯೆ ಮಧ್ಯೆ ಶಾಸ್ತ್ರಿಯಿಂದ ಕಾಫ್ಹಿ ಸಮಾರಾಧನೆಗೇನೂ ಕೊರತೆ ಇರುತ್ತಿರಲಿಲ್ಲ. ಅವರು ಕಾಫ್ಹಿ ಕುಡಿಯದಿದ್ದರೂ ನಮ್ಮ ಕುಡಿತಕ್ಕೇನೂ ಅವರ ತಕರಾರಿರುತ್ತಿರಲಿಲ್ಲ. ಒಮ್ಮೆ ಕೆಲಸದ ಭರಾಟೆಯಲ್ಲಿ ಸಮಯ ಸರಿದದ್ದೇ ತಿಳಿಯಲಿಲ್ಲ. ಸಮಯ ಬಹಳವಾಗಿತ್ತು, ಹೊಟ್ಟೆ ಚುರುಗುಟ್ಟುತ್ತಿತ್ತು. ಕೆಲಸ ಮುಂದೆಯೇ ಸಾಗುತ್ತಿರಲಿಲ್ಲ. ಸ್ವಲ್ಪ ಹೊತ್ತು ಮಾಯವಾಗಿ ಪ್ರತ್ಯಕ್ಷವಾದ ಶಾಸ್ತ್ರಿಗಳ ಕೈನಲ್ಲಿ ಪ್ಲೇಟುಗಳು. ಅದರಲ್ಲಿ ಘಮಘಮಿಸುವ ಬಿಸಿಬಿಸೀ ಸಜ್ಜಿಗೆ. ಓಹೋ ಸ್ವರ್ಗಕ್ಕೆ ಮೂರೇಗೇಣು. ಅಂದೇ ತಿಳಿದದ್ದು ಶಾಸ್ತ್ರಿಗಳು ಕೆಲವು ಅಡಿಗೆಗಳನ್ನು ಅಚ್ಚುಕಟ್ಟಾಗಿ ಮಾಡಬಲ್ಲರು, ಅದರಲ್ಲೂ ಅವರು ಸಜ್ಜಿಗೆ ಪ್ರಿಯರು ಎಂದು. ಅಂದಿನಿಂದ ಕೆಲಸದ ನಡುವೆ ಹಸಿವಾದರೆ ಯೋಚನೆಯಿರುತ್ತಿರಲಿಲ್ಲವೆನ್ನಿ.

ಅವಿನಾಭಾವ ಸಂಬಂಧ ಹೊಂದಿದ್ದ ಶಾಸ್ತ್ರಿಯ ಮತ್ತು ಕಣಾದದ ಒಡನಾಟದಲ್ಲಿ ಹಲವಾರು ರಸಪ್ರಸಂಗಗಳು ನಡೆದಿವೆ. ಒಮ್ಮೆ ಡಾ. ಶ್ರೀಮತಿ. ಪ್ರತಿಭಾ ಅವರಿಂದ ಕಣಾದಕ್ಕೆ ಒಂದು ಲೇಖನವಿದ್ದು ಅದರ ತಲೆಬರಹ **'ಕಣ್ಣಿನ ದೋಷಗಳು'** ಎಂದಿತ್ತು. ಲೇಖನವೆಲ್ಲಾ ಪರಿಷ್ಕೃತವಾಗಿ, ಅಂತಿಮ ಮುದ್ರಣವಾಗಿ, ಕಣಾದವು ಬೈಂಡ್ ಆಗುವ ಮೊದಲೇ ಕಣ್ಣಿಗೆ ಬಿದ್ದದ್ದು ಲೇಖಕಿಯ ಹೆಸರು ಡಾ. ಶ್ರೀ. ಪ್ರತಿಭಾ ಆಗಿಬಿಟ್ಟಿದೆ ಎಂದು. ಸಾವಿರಾರು ಹಾಳೆಗಳು ಹಾಳಾಗುವುದಲ್ಲದೇ ಮರುಮುದ್ರಣಕ್ಕೆ ಸಮಯವಿಲ್ಲ. ಏಕೆಂದರೆ ಆಗಿನ ಕಾಲದಲ್ಲಿ ಅಕ್ಷರಗಳ ಮೊಳೆ ಜೋಡಿಸಿ ಮಾಡಬೇಕಿತ್ತು. ಅಲ್ಲಾ, ಕಣ್ಣಿನ ದೋಷಗಳು ಎಂಬ ಲೇಖನದಲ್ಲೇ ಈ ದೋಷ ಕಾಣಬೇಕೇ? ನಗು ತಡೆಯಲಾಗಲಿಲ್ಲ ನಮಗೆ. ಇದಕ್ಕೆ ಪರಿಹಾರ ಸೂಚಿಸಿದವರೂ ಶಾಸ್ತ್ರಿಗಳೇ. ಡಾ. ಶ್ರೀ. ಪ್ರತಿಭಾ ಎಂದಿರುವುದನ್ನು ಡಾ.ಪ್ರತಿಭಾ ಎಂದು ಬದಲಿಸೋಣ ಆಗದೇ? ಎಂದರು. ಸರಿ, ಆದರೆ ಹೇಗೆ? ಎಂದರೆ ಕೆಲವರು ರಬ್ಬರ್‌ನ ತುಂಡುಗಳನ್ನು ತೋರಿಸಿದರು. ಅದನ್ನು ಕಪ್ಪು ಮಸಿಯಲ್ಲಿ ಒತ್ತಿದರಾಯಿತು ಎಂದರು ಶಾಸ್ತ್ರಿಗಳು. ಎಷ್ಟು ಒತ್ತಿದರೂ ಹಾಳೆಗಳು ಮುಗಿಯವೊಲ್ಲವು, ಶಾಸ್ತ್ರಿಗಳು ಬಿಡಲೊಲ್ಲರು. ಅಂತೂ ಇಂತೂ ಮುಗಿಸಿ ಕೈನೀವಿಕೊಳ್ಳುತ್ತಿದ್ದಾಗ ಮುದ್ರಕ ಧರ್ಮಯ್ಯನಿಗೆ ನಿರಾಳ. ಎಲ್ಲಿ ಮತ್ತೆ ಆ ಹಾಳೆಗಳನ್ನು ಮುದ್ರಿಸಬೇಕೋ ಎಂಬ ಪರದಾಟದಲ್ಲಿದ್ದ ಆತ. ಹೀಗೆ ಶಾಸ್ತ್ರಿಯ ಸಮಯೋಪಾಯದಿಂದ ಲೇಖನ ಉಳಿದದ್ದೇ ಅಲ್ಲ, ಮುದ್ರಕರ ಕಷ್ಟನಷ್ಟಗಳಿಗೆ ಸ್ಪಂದಿಸುವ ಅವರ ವ್ಯಕ್ತಿತ್ವದ ಪರಿಚಯ ನನಗಾಯಿತು. ನಂತರದ ದಿನಗಳಲ್ಲಿ ಅನೇಕ

ಮುದ್ರಣ ಕೆಲಸಗಳನ್ನು ನಾನೇ ಮಾಡಿಸಿದರೂ, ದೋಷಗಳಾದರೂ ಹಿಂದಿನ ಘಟನೆಗಳ ನೆನಪಿನಲ್ಲಿ, ಮನಸ್ಸನ್ನು ಸಮಾಧಾನಿಸಿಕೊಂಡು ಚಿಂತಿಸದಿರುವುದನ್ನು ನಾನು ರೂಢಿಸಿಕೊಂಡೆ.

'ಕಣಾದ' ಮಾರಾಟ ಮತ್ತು ಪ್ರಚಾರಕ್ಕಾಗಿ ಕನ್ನಡ ಸಾಹಿತ್ಯ ಪರಿಷತ್ತು ನಡೆಸುವ ಕೆಲವು ಸಮ್ಮೇಳನಗಳಲ್ಲಿ ಶಾಸ್ತ್ರಿಯೊಡನೆ ಭಾಗಿಯಾದ ನನಗೆ, ಅಲ್ಲಿನ ಅನೇಕ ಅವ್ಯವಸ್ಥೆಗಳ ಬಗ್ಗೆ ತಕರಾರಿದ್ದರೂ, ಅವುಗಳ ಬಗ್ಗೆ ನಿರ್ಯೋಚನೆಯಿಂದ, ಅದಮ್ಯ ಉತ್ಸಾಹದಲ್ಲಿಯೇ ಕೆಲಸವನ್ನು ನಿರ್ವಹಿಸುತ್ತಿದ್ದ ಶಾಸ್ತ್ರಿಯ ಒಡನಾಟದಿಂದ, ಈ ತಕರಾರುಗಳಿಂದ ಕಿರಿಕಿರಿಯಾದರೂ ಶಾಸ್ತ್ರಿಯ ಉತ್ಸಾಹಕ್ಕೆ ಭಂಗಬಾರದಂತೆ ನನ್ನ ನಡೆನುಡಿಗಳನ್ನು ಸಂಭಾಳಿಸಿಕೊಂಡಿದ್ದಿದೆ. 'ಯಾಕೆಂದರೆ ಶಾಸ್ತ್ರಿಗೆ ಸಿಟ್ಟು ವಿಪರೀತವಾದರೆ ಅವರ ಮೈ ನಡುಗುತ್ತದೆಯೇ ಹೊರತು ಅವರು ಇನ್ನೊಬ್ಬರನ್ನು ಎಂದಿಗೂ ನಡುಗಿಸಲಾರರು. ಇದು ಅವರ ವೈಶಿಷ್ಟ್ಯ.'

ಕಣಾದಕ್ಕೆ ಸಂಬಂಧಿಸಿದಂತೆ, ಮಡಿಕೇರಿಯಲ್ಲಿನ ಸಾಹಿತ್ಯ ಸಮ್ಮೇಳನದಲ್ಲಿನ ರಸಸಘಳಿಗೆ ನೆನಪಾಗುತ್ತದೆ. ನಾನು, ನನ್ನ ಸಹೋದ್ಯೋಗಿ ಮಿತ್ರ ನಾಗರಾಜ್‌ರವರು ಮಡಿಕೇರಿಯ ಸಾಹಿತ್ಯ ಸಮ್ಮೇಳನಕ್ಕೆ ಕಣಾದ ಮಾರಾಟ ಮತ್ತು ಪ್ರಚಾರಕ್ಕಾಗಿ ಹೋಗಿದ್ದೆವು. ಕಾರಣಾಂತರಗಳಿಂದ ಶಾಸ್ತ್ರಿಗಳು ಬರಲಿಲ್ಲ. ಅಲ್ಲಿನ ಕನ್ನಡ ಪ್ರಿಯ ಓದುಗರಿಗೆ ನಮ್ಮ ಕಣಾದ ಹೆಚ್ಚು ಪ್ರಿಯವಾಗಿ ಪ್ರತಿಗಳೆಲ್ಲಾ ಮೊದಲ ದಿನವೇ ಮುಗಿದು ಹೋಯಿತು. ಇನ್ನೂ ಮೂರು ದಿನಗಳಿದೆ. ಹೆಚ್ಚು ಪ್ರತಿಗಳು ಬೇಕು. ಮರುದಿನ ೯ ಘಂಟೆಯ ಸುಮಾರಿಗೇ ಪ್ರತಿಗಳಿಲ್ಲದಿದ್ದರೆ ಮಾರಾಟ ಕಳೆಕಟ್ಟುವುದಿಲ್ಲ. ಈಗಿನಂತೆ ದೂರವಾಣಿ ವ್ಯವಸ್ಥೆಯಿಲ್ಲ. ನನಗೆ ದಿಕ್ಕೇ ತೋಚದಂತಾಯಿತು. ಶ್ರೀಯುತ ನಟರಾಜ್‌ರವರು ಸರಸರನೇ ಅಂಚೆ ಕಛೇರಿಗೆ ಹೋದವರು, ನಗೆ ಮುಖದೊಡನೆ ಹಿಂತಿರುಗಿದರು. ಏನಾಯಿತು ಎಂಬ ಪ್ರಶ್ನೆಗೆ ಉತ್ತರವಾಗಿ ಅವರು ಶಾಸ್ತ್ರಿಗೆ ಕಳಿಸಿದ ತಾರಿನ ಪ್ರತಿಯೊಂದನ್ನು ನನ್ನ ಕೈಗೆ ಕೊಟ್ಟರು. ಅದರಲ್ಲಿ ಈ ರೀತಿ ಇತ್ತು. 'kannada expired. 1980, start immediately'. "ಈ ತಾರನ್ನು ಅಂಚೆ ಕಚೇರಿಯವರು ಕೆಲವೇ ಘಂಟೆಗಳಲ್ಲಿ ಕಛೇರಿಯಲ್ಲಿರುವ ಶಾಸ್ತ್ರಿಗೆ ಮುಟ್ಟಿಸುತ್ತಾರೆ ಯೋಚಿಸಬೇಡಿ, ತಮಾಷೆ ನೋಡಿ" ಎಂದರು. ಮರುದಿನ ಬೆಳಿಗ್ಗೆ ೮.೩೦ಕ್ಕೆ ಮಡಿಕೇರಿಗೆ ನಗುಮೊಗದ ಶಾಸ್ತ್ರಿಯ ಆಗಮನ. ಹೊರಲಾರದೆ ಹೊತ್ತುಬಂದ **ಕಣಾದ ಪುಸ್ತಕಗಳ** ಪ್ರತಿಗಳು ಅವರ ಬಳಿಯಲ್ಲಿ. ಅಂತೂ ಕಛೇರಿಯವರು ಬೇಸ್ತುಬಿದ್ದರು. ಕಣಾದದ ನಾಡಿಮಿಡಿತ ಅರಿತಿದ್ದ ಶಾಸ್ತ್ರಿಗಳಿಗೆ ನಮ್ಮ ಉದ್ದೇಶ ಸರಿಯಾಗಿ ಅರ್ಥವಾಗಿ, ಬೇರೆಯಾರನ್ನೂ ಕಳಿಸದೇ, ತಮ್ಮ ಎಲ್ಲಾ ಅನಿವಾರ್ಯತೆಗಳನ್ನೂ ಬದಿಗಿಟ್ಟು ತಾವೇ ಖುದ್ದಾಗಿ ಬಂದರು. ಬೇರೆ ಯಾರಿಗೂ ಈ ತಾರಿನ ಕರಾಮತ್ತು ತಿಳಿಯಲೇ ಇಲ್ಲ, ಆದರೆ

ಶಾಸ್ತ್ರಿಗೆ ಸರಿಯಾಗಿ ಅರಿವಾಗಿತ್ತು. ಕಣಾದ ೧೯೮೦ ಮುಗಿದಿದೆ, ಹೆಚ್ಚಿನ ಬೇಡಿಕೆ ಇದೆ, ಪ್ರತಿಗಳನ್ನು ತಕ್ಷಣ ತಲುಪಿಸಬೇಕು ಎಂದು. ನಂತರ ನಮ್ಮ ಚೇಷ್ಟೆಯ ಬಗ್ಗೆ ಏನೂ ಬೇಸರಿಸದ ಶಾಸ್ತ್ರಿಗಳು ಹೇಳಿದ್ದು- "ಈ ಸಲ ಸಮ್ಮೇಳನಕ್ಕೆ ಬರಲಾಗಲಿಲ್ಲ ಎಂದು ಬೇಸರಿಸಿದ್ದೆ, ಆದರೆ ಆ ಬೇಸರ ನಿಮ್ಮಿಂದ ದೂರವಾಯಿತು. ಅದಕ್ಕಾಗಿ ಧನ್ಯವಾದಗಳು" ಎಂದು. ಬೇರೆ ಯಾರೂ ಹಾಗೆ ಕಣಾದವನ್ನು ಹೊತ್ತು, ಒಂದೇ ರಾತ್ರಿಯಲ್ಲಿ ಬೆಂಗಳೂರಿನಿಂದ ಮಡಿಕೇರಿಗೆ ಓಡಿ ಬರುತ್ತಿರಲಿಲ್ಲ.

ಮತ್ತೊಂದು ಸಂದರ್ಭ ನಾನು ಕನ್ನಡ ಸಂಘದ ಉಪಾಧ್ಯಕ್ಷನಾಗಿದ್ದಾಗ ನಡೆದದ್ದು. ಆಗ ಶಾಸ್ತ್ರಿಗಳು ಕಣಾದದ ಸಂಪಾದಕರಾಗಿದ್ದರು. ಎಲ್ಲವೂ ಅಚ್ಚುಕಟ್ಟಾಗಿ, ಕರಾರುವಾಕ್ಕಾಗಿ ನಡೆಯಬೇಕೆಂದು ನನ್ನ ತಾಕೀತು. ಹಾಗೆ ಅಗದಿದ್ದರೆ ಬೇಗ ವ್ಯಗ್ರನಾಗುತ್ತಿದ್ದೆ ಎಂಬುದನ್ನು ಶಾಸ್ತ್ರಿಗಳು ಗಮನಿಸಿದ್ದರು. ಕಣಾದದ ಎಲ್ಲಾ ಸಾವಿರ ಪ್ರತಿಗಳೂ ನಿಗದಿತ ದಿನವೇ ಬರಬೇಕು ಎಂಬುದು ನನ್ನ ಒತ್ತಡ. ಅಂತೂ ಕಣಾದ ಬಿಡುಗಡೆಯಾದ ಸಂತೋಷದಿಂದ ಮರುದಿನ ಶಾಸ್ತ್ರಿಯ ಕೊಠಡಿಗೆ ಹೋದೆ. ಅವರು ಮುದ್ರಕನಾದ ಧರ್ಮಯ್ಯನೊಡನೆ ಮಾತನಾಡುತ್ತಿದ್ದರು. ನನ್ನ ಬರವಿನಿಂದ ಇಬ್ಬರೂ ಗಾಬರಿಯಾದರು. "ಏಕೆ ಶಾಸ್ತ್ರಿಗಳೇ ಏನಾಯಿತು?" ಎಂದರೆ, "ಏನಿಲ್ಲಾ, ಪ್ರತಿಸಲದಂತೆ ಈ ಸಲವೂ ಎಲ್ಲಾ ಕಣಾದದ ಪ್ರತಿಗಳೂ ನಮ್ಮ ಕೈ ಸೇರಿಲ್ಲ. ಮುದ್ರಕನಾದ ಧರ್ಮಯ್ಯನಿಗೆ ಪ್ರಶ್ನೆಪತ್ರಿಕೆಗಳನ್ನು ಮುದ್ರಿಸುವ ಅವಸರದ ಕೆಲಸವಿದ್ದುದರಿಂದ, ನಮ್ಮ ಕೆಲಸ ಸ್ವಲ್ಪ ವಿಳಂಬವಾಗಿದೆ. ಮುಂದಿನ ಪಕ್ಷದಲ್ಲಿ ಎಲ್ಲಾ ಪ್ರತಿಗಳನ್ನೂ ತಲುಪಿಸುತ್ತೇನೆ ಎಂದು ಹೇಳುತ್ತಿದ್ದಾನೆ. ಇದು ನನಗೆ ಮೊದಲೇ ತಿಳಿದಿತ್ತು. ನಿಮಗೆ ತಿಳಿಸಿದರೆ ವ್ಯಗ್ರರಾಗುತ್ತೀರಿ ಎಂದು ತಿಳಿಸಲಿಲ್ಲ. ಈಗ ಕಣಾದ ಬಿಡುಗಡೆಯಾದ ಸಂಭ್ರಮದಿಂದ ನಿರಾಳವಾಗಿದ್ದೀರಿ ತಿಳಿದರೆ ಪರವಾಗಿಲ್ಲ ಎಂದು ತಿಳಿಸಿದೆ" ಎಂದರು. ನನ್ನ ಕೋಪವೆಲ್ಲಾ ಶಾಸ್ತ್ರಿಗಳ ನಗುವಿನಲ್ಲಿ ಕರಗಿ ಹೋಯಿತು. ಹೀಗೆ ಮತ್ತೊಬ್ಬರ ಮನಸ್ಸಿಗೆ ಘಾಸಿ ಅಥವಾ ನೋವನ್ನು ಉಂಟುಮಾಡುವ ವಿಷಯಗಳನ್ನು ಶಾಸ್ತ್ರಿಯವರು ತಮ್ಮಲ್ಲೇ ಇಟ್ಟುಕೊಂಡು, ಇತರರನ್ನು ನಿರಾಳನಾಗಿ ಇರುವಂತೆ ಮಾಡುತ್ತಾರೆಂಬ ಅವರ ವ್ಯಕ್ತಿತ್ವದ ಮತ್ತೊಂದು ಮುಖದ ಪರಿಚಯ ನನಗಾಯಿತು. ನನಗೆಂದೂ ಹೀಗೆ ಮಾಡಲು ಸಾಧ್ಯವೇ ಆಗಿಲ್ಲ. ಹೀಗೆ ಕಛೇರಿಯಲ್ಲಿ ಕಣಾದದಿಂದ ಹೆಪ್ಪುಗಟ್ಟಿದ ನನ್ನ ಮತ್ತು ಶಾಸ್ತ್ರಿಯ ಗೆಳೆತನ, ಇತರೇತರ ವಿಷಯಗಳಿಗೂ ಹಬ್ಬಿ, ನನ್ನ ಅನೇಕ ಸಮಸ್ಯೆಗಳನ್ನು ಅವರೊಡನೆ ಚರ್ಚಿಸಿ ನಿರಾಳವಾಗುವುದನ್ನೂ ಸಹ ನಾನು ರೂಪಿಸಿಕೊಂಡೆ.

ಕೇವಲ ಶಾಸ್ತ್ರಿಯ ಸಜ್ಜನಿಕೆಯಷ್ಟೇ ಅಲ್ಲ, ಅವರ ಮನೆಯವರೆಲ್ಲರ ವ್ಯಕ್ತಿತ್ವವೂ ಕೂಡ ಅದರಷ್ಟೆ ಮಧುರವಾಗಿದ್ದುದು ನನಗೆ ತಿಳಿದು ಬಂದದ್ದು ಹೀಗೆ. ಅನೇಕ ಬಾರಿ ಶಾಸ್ತ್ರಿಯಿಂದ

ತುಂಗಾ ತೀರಗಳ ದಂಡೆಯಲ್ಲಿನ ಶೃಂಗೇರಿಯ ಶಾಂತ ವಾತಾವರಣದ, ಆಗುಂಬೆಯ ಸೂರ್ಯಾಸ್ತಮದ, ಮತ್ತು ಹೊರನಾಡ ಅನ್ನಪೂರ್ಣೇಶ್ವರಿಯ ಸತ್ಕಾರದ ಪರಿಯ ವಿವರಣೆಯನ್ನು ಕೇಳಿದ ಕನ್ನಡ ಸಂಘದ ಸದಸ್ಯರೂ ಶೃಂಗೇರಿ ಹೊರನಾಡ ಪ್ರವಾಸವನ್ನು ಏರ್ಪಡಿಸಿದರು. ಸದಸ್ಯರೆಲ್ಲರು ವಸತಿ ಊಟೋಪಚಾರದ ವ್ಯವಸ್ಥೆ ಶಾಸ್ತ್ರಿಯದೇ ಎಂದು ಪ್ರತ್ಯೇಕವಾಗಿ ಹೇಳಬೇಕಾಗಿಲ್ಲವಷ್ಟೆ. ಶಾಸ್ತ್ರಿಯಾದರೂ ಅತ್ಯಂತ ಉತ್ಸಾಹದಿಂದ ತಮ್ಮನಾದ ಗಿರಿಧರನನ್ನು ಸಂಪರ್ಕಿಸಿ ಎಲ್ಲಾ ವ್ಯವಸ್ಥೆಗಳು ಸೂಕ್ತವಾಗಿರುವುದನ್ನು ಖಾತ್ರಿ ಮಾಡಿದರು. ಏಕೆಂದರೆ ಆಗ ಶ್ರೀ ಗಿರಿಧರಶಾಸ್ತ್ರಿಗಳು ಶೃಂಗೇರಿ ಶಾರದಾ ಪೀಠದಲ್ಲಿ ಆಡಳಿತಾಧಿಕಾರಿಯಾಗಿದ್ದರು. ನಮ್ಮ ಕಛೇರಿಯ ಬಸ್ಸಿನಲ್ಲೇ ಸುಮಾರು ೫೦ ಜನ ರಾತ್ರಿಯಿಡೀ ಪಯಣಿಸಿ, ಹರಟೆ ಹಾಡು ನಗೆ ಚಾಟಿಗೆಗಳ ಸಂಭ್ರಮದಲ್ಲಿ ಹೆಚ್ಚು ಸಮಯ ಕಳೆದು ಬೆಳಗಿನ ಜಾವಕ್ಕೆ ತೂಕಡಿಸುತ್ತಿದ್ದ ನಮಗೆ, 'ಏಳಿರಪ್ಪಾ, ಶೃಂಗೇರಿಯಲ್ಲಿ ಬಸ್ಸು ನಿಂತಾಯಿತು' ಎಂದು ಎಬ್ಬಿಸಿದ್ದೆ ಶಾಸ್ತ್ರಿಯ ಸುಪ್ರಭಾತ. ಬೆಂಗಳೂರಿನ ಗಿಜಿ ಗಿಜಿ ವಾತಾವರಣದಿಂದ, ಬಂದ ನಮಗೆ, ಶೃಂಗೇರಿಯ ಬೆಳಗಿನ ಶಾಂತಸಿದ್ದ ಸುಂದರ ಬೆಳಕು, ಹಿತವಾದ ಗಾಳಿ, ಮನೋಲ್ಲಾಸ ಮೂಡಿಸಿತು. 'ಊರು ಹೀಗೂ ಇರುತ್ತದೆಯೆ?' ಎಂದು ಅಚ್ಚರಿಗೊಂಡೆವು. ಗಿರಿಧರಶಾಸ್ತ್ರಿಗಳು ಎದುರುಗೊಂಡು ವಸತಿ ಗೃಹದೆಡೆಗೆ ಕರೆದೊಯ್ದರು. ನಮ್ಮ ಪ್ರಾತರ್ವಿಧಿಗಳು ಮುಗಿದು, ಬಿಸಿ ಬಿಸಿ ಕಾಫಿ ಹೀರುವಷ್ಟರಲ್ಲಿ, ಶಾಸ್ತ್ರಿಯವರ ಚುಟುಕು ಚರ್ಚೆಯಿಂದ ನಮ್ಮ ಅಂದಿನ ಕಾರ್ಯಕ್ರಮ ಸಿದ್ಧವಾಗಿತ್ತು. ಅದರಂತೆ ನಾವು ಜಲಕ್ರೀಡೆಯಾತುರದಲ್ಲಿ ತುಂಗಾ ನದಿಯನ್ನು ಸೇರಿದೆವು. 'ಹುಷಾರು, ಎಚ್ಚರಿಕೆ, ದಡದಿಂದ ದೂರ ಹೋಗಬೇಡಿ, ಸುಳಿಗಳಿರುತ್ತವೆ.' ಎಂದು ದಡದಲ್ಲಿನ ಶಾಸ್ತ್ರಿಯ ಪರದಾಟ, ನಮಗೋ ಜುಳುಜುಳ ಹರಿವ ತುಂಗೆಯಲ್ಲಿ ಕೈ ಕೈ ಹಿಡಿದು ಮಿಂದು ಮೈ ಹಗುರವಾಗಿ ಹೂವಾದ ಅನುಭವ. ಅಂತೂ ಎಲ್ಲರೂ ದಡ ಸೇರಿದ ಮೇಲೆಯೇ ಶಾಸ್ತ್ರಿಯ ಮುಖದಲ್ಲಿ ಅದೇ ಶಾಂತ ಸಿದ್ಧ ಮುಗುಳ್ನಗೆ. ಹೇಗಿತ್ತು ಎಂಬಂತೆ ಅರಳಿದ ಮುಖ. ಅವರ ಕೈಲಿ ಒಂದು ಚೀಲ. ಅದರಲ್ಲಿ ಏನಿದೆ ಎಂಬ ಕುತೂಹಲ ನಮಗೆ. ಬಟ್ಟೆ ಧರಿಸಿ, ಚೀಲ ತೆಗೆದುಕೊಂಡರೆ ತುಂಬಾ ಕಡಲೆಪುರಿ. ಕಂಡು ನಮ್ಮ ಮುಖ ಪೆಚ್ಚಾಯಿತು. ನಂತರ ಶಾಸ್ತ್ರಿಯದೇ ಸಡಗರ. 'ಇದು ನಿಮಗಲ್ಲ. ಇಲ್ಲಿ ಮೆಟ್ಟಿಲ ಬಳಿ ಹಾಕಿ' ಎಂದರು. 'ಇದೇನು ಶಾಸ್ತ್ರವಾ?' ಎನ್ನುತ್ತಾ ಪುರಿ ಸುರಿಯುತ್ತಿದ್ದಂತೆಯೇ ಪುಳುಕು ಪುಳುಕು ಹಾರಿದ ಮೀನಿನ ದಂಡನ್ನು ಕಂಡು ಅಚ್ಚರಿಗೊಂಡೆವು. ಹೀಗೆ ಹರೆಯದಲ್ಲಿದ್ದ ನಾವೂ ಮಗು ಮನಸ್ಸಿನ ಶಾಸ್ತ್ರಿಯೊಡನೆ ಮಕ್ಕಳಾಗಿ ಹೋದೆವು. ನಂತರ ಚುರುಗುಟ್ಟುವ ಹೊಟ್ಟೆ ತನ್ನ ಇರವನ್ನು ಸಾರುತ್ತಿತ್ತು, ವಸತಿ ಗೃಹದೆಡೆ ಹೆಜ್ಜೆ ಹಾಕಿದೆವು; ಅಲ್ಲಿನ ಪರಿಮಳ ನಮ್ಮ ಮೂಗರಳಿಸಿತು. ಬಿಸಿ ಬಿಸಿ ಇಡ್ಲಿ, ಚಟ್ನಿ, ಪೊಂಗಲು ನಮಗಾಗಿ ಕಾಯುತ್ತಿದ್ದವು. ಎಲ್ಲರೂ ಕುಳಿತು ತಿಂದದ್ದೇ ತಿಂದದ್ದು, ನಾವು ತಿಂದಷ್ಟು ಅವರು ಬಡಿಸಿದರು, ಅವರು ಬಡಿಸಿದಷ್ಟೂ ನಾನು ತಿಂದೆವು. ಭಾರವಾದ ಕಣ್ಣು

ರೆಪ್ಪೆಗಳನ್ನು ಬಿಡಿಸುವಲ್ಲಿ ಬಿಸಿ ಬಿಸಿ ಕಾಫಿಯ ಸಹಾಯವನ್ನು ಖಂಡಿತಾ ಮರೆಯಲಾರದು. ನಂತರ ದೇವಾಲಯ ದರ್ಶನ, ವಿವರವಾದ ವಿವರಣೆ, ಸುಂದರ ದೇಗುಲದಲ್ಲಿ, ವಿದ್ಯಾ ದೇವತೆಯಾದ ಶಾರದಾಂಬೆಯ ದರ್ಶನ ಪೂಜೆ, ಇತ್ಯಾದಿಗಳನ್ನೆಲ್ಲಾ ಸಾಂಗೋಪಾಂಗವಾಗಿ ಮುಗಿಸಿ, ಮಧ್ಯಾಹ್ನ ಸಮೀಪಿಸುವಾಗಲೇ ಶ್ರೀ ಗಿರಿಧರಶಾಸ್ತ್ರಿಯವರ ಆಗಮನವಾಯಿತು. ನೀಳಕಾಯದ, ವಿಭೂತಿ ಕುಂಕುಮಗಳನ್ನು ಧರಿಸಿ, ಸಂಪ್ರದಾಯದ ಉಡುಗೆಯಲ್ಲಿ ಕಲಕಲಕಿಸುತ್ತಿದ್ದ ಅವರನ್ನು ನಾವು ಬೆಳಿಗ್ಗೆ ಹೆಚ್ಚು ಗಮನಿಸಿರಲಿಲ್ಲ ಎಂಬುದು ತಿಳಿಯಿತು. ಊಟದ ವ್ಯವಸ್ಥೆಯನ್ನು ಮತ್ತು ನಂತರ ಕಾರ್ಯಕ್ರಮವನ್ನು ವಿವರಿಸಿದ ಅವರು, 'ಏನಾದರೂ ಕುಂದು ಕೊರತೆಗಳಾಯಿತೇ?' ಎಂದು ವಿಚಾರಿಸುವುದನ್ನು ಮಾತ್ರ ಮರೆಯಲಿಲ್ಲ. ಪಟ್ಟಣದ ಜನಕ್ಕೆ ಈ ಪರಿಯ ಆಥಿತ್ಯ ಹೊಸತು. ನಮ್ಮ ಮನೆಯಲ್ಲಿ ಇವಕ್ಕೆಲ್ಲಾ ಸಮಯವೇ ಇರುವುದಿಲ್ಲ. ಶೃಂಗೇರಿಯ ಸೊಗಸನ್ನು ಸವಿಮ, ಆಗುಂಬೆಯ ಸೂರ್ಯಾಸ್ತದ ಬೆಡಗನ್ನು ಆನಂದಿಸಿ, ಶಾಸ್ತ್ರಿದ್ವಯರ ಆಥಿತ್ಯದ ಸವಿಯುಂಡ ನನಗೆ ಈ ಇಳಿ ವಯಸ್ಸಿನಲ್ಲಿಯೂ ಆ ಅನುಭವ ಹಚ್ಚ ಹಸುರಾಗಿ ಮನದಲ್ಲಿ ಮೂಡಿದಾಗ ಮನಸ್ಸು ಹೂವಾಗುತ್ತದೆ.

ನಂತರದ ದಿನಗಳಲ್ಲಿ ಒಮ್ಮೆ ಶಾಸ್ತ್ರಿಯಿಂದ ತಿಳಿದು ಬಂದದ್ದೇನೆಂದರೆ ಶೃಂಗೇರಿಯಲ್ಲಿದ್ದ ಅವರ ನಿವಾಸದ ಬದಲಾವಣೆಯಾಗಿದೆ, ಅವರೀಗ ತುಂಗೆಯ ಮತ್ತೊಂದು ದಂಡೆಯಲ್ಲಿನ ವಿದ್ಯಾರಣ್ಯಪುರದಲ್ಲಿ ನಿವಾಸ ಹೂಡಿದ್ದಾರೆ. ಶಾಂತ ಸುಂದರ ವಾತಾವರಣದಲ್ಲಿ ಅದು ಸೊಗಸಾಗಿದ್ದು ಸಮೀಪವೇ ನದಿ ಇದೆ ಇತ್ಯಾದಿ ವಿವರಗಳು. ಸರಿ ಈ ಸಲ ಕೇವಲ ಆತ್ಮೀಯ ಕುಟುಂಬಗಳು ಸೇರಿ, ಖಾಸಗಿ ವಾಹನ ವ್ಯವಸ್ಥೆಯಲ್ಲಿ ನಾಲ್ಕಾರು ದಿವಸಗಳ ಶೃಂಗೇರಿ, ಕಳಸ, ಹೊರನಾಡು ಪ್ರವಾಸ ಶಾಸ್ತ್ರಿಯ ಮೇಲ್ವಿಚಾರಣೆಯಲ್ಲಿ ಏರ್ಪಟ್ಟಿತು. ವಿದ್ಯಾರಣ್ಯಪುರದ ಮನೆಯನ್ನು ಸೇರಿದ ನಮಗೆ ಶಾಸ್ತ್ರಿ ಹೇಳಿದ್ದು ಅತಿಶಯೋಕ್ತಿ ಏನಲ್ಲಾ ಎಂದು ಮನದಟ್ಟಾಯಿತು. ಈ ಸಲ ಶಾಸ್ತ್ರಿಯ ಮನೆಯಲ್ಲಿಯೇ ಠಿಕಾಣಿ, ಅವರ ಮಾತೃಶ್ರೀಯವರದೇ ಆಥಿತ್ಯ, ನಮ್ಮ ಊಟೋಪಚಾರದ ವ್ಯವಸ್ಥೆಯಲ್ಲಿಯೇ ಅತ್ತೆ ಸೊಸೆಯರ ಸಡಗರ, ನಮ್ಮ ಅನೇಕ ಕೌತುಕಮಯ ಪ್ರಶ್ನೆಗಳಿಗೆ ಗಿರಿಧರಶಾಸ್ತ್ರಿಗಳ ವಿವರವಾದ ಉತ್ತರ – ಇವುಗಳ ನಡುವೆಯೇ ತುಂಗೆಯಲ್ಲಿ ಮಿಂದು ಶಾರದೆಯ, ಕಿಗ್ಗದ ಋಷ್ಯಶೃಂಗ ದೇಗುಲಗಳ ದರ್ಶನ, ಆಗುಂಬೆಯ ಸೂರ್ಯಾಸ್ತಮಾನ ನೋಡಿ,ಇನ್ನು ಮನೆಯಲ್ಲಿ ಅಚ್ಚುಕಟ್ಟಾದ ಊಟ ವಿಶ್ರಾಂತಿಗಳಲ್ಲಿ ಕಾಲ ಸಂದದ್ದೇ ತಿಳಿಯದೆ ನನಗೆ ಒಂದು ಸಮಸ್ಯೆ ಎದುರಾಯಿತು. ಅದೇನೆಂದರೆ ಮರುದಿನ ಏಕಾದಶಿ, ನಾನೋ ಅಂದು ನಿರಾಹಾರಿ. ಆದರೆ ದ್ವಾದಶಿಯ ಬೆಳಿಗ್ಗೆಯೇ ಪಾರಣೆಯಾಗಬೇಕು ಇತ್ಯಾದಿ ಇದನ್ನು ತಿಳಿದ ಗಿರಿಧರ ಅವರು 'ಎಲ್ಲ ವ್ಯವಸ್ಥಿತವಾಗುವುದು ಯೋಚಿಸಬೇಡಿ' ಎಂದರು. ಎಲ್ಲಾ ಪ್ರಶ್ನೆಗೂ ವಿವರ ಉತ್ತರ ಕೊಡುತ್ತಾ ಮಾತನಾಡುತ್ತಿದ್ದ ಗಿರಿಧರರವರು,

ಏಕಾದಶಿಯಂದು ಮಾತನಾಡಲೇ ಇಲ್ಲ. ಕಾರಣ ವಿಚಾರಿಸಿದಾಗ ಶಾಸ್ತ್ರಿಯಿಂದ ತಿಳಿದು ಬಂದದ್ದು ಅವರದು ಅಂದು ಮೌನವ್ರತ. ಹೇಳಲೇಬೇಕಾದ ವಿಷಯಗಳನ್ನು ಮಾತ್ರ ಸ್ಲೇಟಿನಲ್ಲಿ ಬರೆದು ತೋರಿಸಿದ್ದು ಬಿಟ್ಟರೆ, ಕೇವಲ ಧ್ಯಾನ ಮುದ್ರೆಯಲ್ಲೆ ದಿನ ಕಳೆದರು. ಮರುದಿನ ದ್ವಾದಶಿಯ ಬೆಳಗಿನ ಜಾವದಲ್ಲಿ ನನ್ನ ಪ್ರಾತರ್ವಿಧಿಗಳು ಪೂರೈಸುವಷ್ಟರಲ್ಲೆ ಗಿರಿಧರಶಾಸ್ತ್ರಿಗಳ ಪೂಜೆ, ನೈವೇದ್ಯ ಇತ್ಯಾದಿ ಆಗಿ, ನನಗೆ ತೀರ್ಥ ನೀಡಿದರು ಮತ್ತು 'ಪಾರಣೆಗಾಗಿ ವ್ಯವಸ್ಥೆಯಾಗಿದೆ, ಕೂಡಿ.' ಎಂದರು. ದ್ವಾದಶಿಯ ಪಾರಣೆಯನ್ನು ಅಚ್ಚುಕಟ್ಟಾಗಿ ರುಚಿಕಟ್ಟಾದ ಊಟದಿಂದ ಮುಗಿಸಿದ ನಾನು ನಂತರ ಗಮನಿಸಿದ್ದು, ಗಿರಿಧರನೂ ಅವರ ಅಮ್ಮನೂ ಪಾರಣೆಯನ್ನೇ ಮಾಡಲಿಲ್ಲ ಎಂಬುದು. ಏಕೆ ಹೀಗೆ? ಎಂದು ನನ್ನ ಕುತೂಹಲ. ನಂತರ ತಿಳಿದಿದ್ದು ಅಂದು ಪ್ರದೋಷ, ಸಂಜೇಗೇನೇ ಗಿರಿಧರ ಶಾಸ್ತ್ರಿಗಳ ಪೂಜೆ, ನಂತರವೇ ಪಾರಣೆ, ಇತ್ಯಾದಿ ಇದು ಅವರ ಸಂಪ್ರದಾಯ. ಆದರೆ, ನನಗಾಗಿಯೇ ಬೆಳಗಿನ ಪೂಜೆ, ಪಾರಣೆ ವ್ಯವಸ್ಥೆಗಳು; ನನ್ನ ಆಚರಣೆಯ ಬಗ್ಗೆ ಅವರದೇನೂ ತಕರಾರಿಲ್ಲ. ಹೀಗೆ ಉದಾತ್ತ ಮನೋಭಾವ ಹೊಂದಿದ್ದು ಆದರಾಥಿತ್ಯ ನೀಡಿದ ಪರಿಯನ್ನು ನಾನು ಇಂದಿಗೂ ಮರೆಯಲುಂಟೆ.

ಶಾಸ್ತ್ರಿಯೊಡನೆ ನನ್ನ ಬಾಂಧವ್ಯ ಮತ್ತಷ್ಟು ಹೆಪ್ಪುಗಟ್ಟಲು ಶಿವರಾತ್ರಿಗಳೂ ಒಂದು ಕಾರಣವೆಂದರೆ ತಪ್ಪಾಗಲಾರದು. ಅದು ಶುರುವಾದದ್ದು ಹೀಗೆ. ನೆರೆಹೊರೆಯವರೆಲ್ಲಾ ಸೇರಿ ಶಿವರಾತ್ರಿಯನ್ನು ಒಟ್ಟಿಗೆ ಆಚರಿಸಿ ಸಂಭ್ರಮಿಸುವ ಸಡಗರವನ್ನು ಹುಟ್ಟು ಹಾಕಿದವರು ಶಾಸ್ತ್ರಿಗಳು. ಈ ಸಡಗರದಲ್ಲಿ ಫಲಹಾರ ಪ್ರಿಯನಾದ ನನಗೂ ಆಹ್ವಾನವಿರುತ್ತಿತ್ತು. ಮೊದಲನೆ ಜಾವದ ಪೂಜೆ ಮುಗಿದ ನಂತರ ಅಚ್ಚುಕಟ್ಟಾದ ಫಲಹಾರದ ವ್ಯವಸ್ಥೆ. ಹಲವಾರು ವರ್ಷಗಳು ಇದು ನಡೆದು ಬಂದು ನಂತರ ನೆರೆಹೊರೆಯವರ ಒಳ ಕಿರಿಪಿರಿಗಳಿಂದ ಸ್ಥಗಿತಗೊಂಡಿತು. ಆದರೂ ಶಾಸ್ತ್ರಿಯ ಮನೆಗೆ ನನಗೆ ಆಮಂತ್ರಣವಿರುತ್ತಿತ್ತು, ಇಲ್ಲದಿದ್ದರೇ ನಾನೇ ನೆನಪಿಸುತ್ತಿದ್ದೆ. ಮುಂದಿನ ವಾರ ಶಿವರಾತ್ರಿಯಲ್ಲವೆ? ಎಂದು. ಹೀಗೆ ಶಿವನಿಗೆ ಪೂಜೆಯನ್ನು ತಪ್ಪಿಸದ ಶಾಸ್ತ್ರಿಯೊಂದಿಗೆ ನನ್ನ ಫಲಹಾರ ಪೂಜೆಯೂ ಸಂಗೋಪಾಂಗವಾಗಿಯೇ ಸಾಗುತ್ತಿತ್ತು. ಶಾಸ್ತ್ರೀಯ ನಿವಾಸವು ನನ್ನ ಮನೆಯಿಂದ ದೂರವಾದಾಗ ಮಾತ್ರವೇ ಶಾಸ್ತ್ರಿಗಳು ಈ ಪಿಡುಗಿನಿಂದ ಪರಿಹಾರ ಕಂಡದ್ದು. ಇಂದಿಗೂ ಶಿವರಾತ್ರಿಯೆಂದರೆ ನನಗೆ ಶಾಸ್ತ್ರಿಯದೇ ಕನವರಿಕೆ. ಇದರಲ್ಲಿ ಶಾಸ್ತ್ರಿಯ ಸಮಾಜ ಸಾಂಗತ್ಯ, ಹಂಚಿ ತಿನ್ನುವ ಸಡಗರ, ದೈವಭಕ್ತಿಗಳ ಅಪ್ಪಟತನವನ್ನು ಸನಿಹದಿಂದ ಕಂಡು ಅರಿತವನು ನಾನು. ಸ್ವಂತ ಮನೆಗಾಗಿ ಪರದಾಡುತ್ತಿದ್ದ ನನಗೆ ಕೋಣನಕುಂಟೆಯಲ್ಲಿ ಒಂದು ನಿವೇಶನ ದೊರೆತು, ಮನೆ ಕಟ್ಟಿಸುವ ಭಾಗ್ಯ ದೊರೆಯಿತು. ಗಾಂಧಿ ಬಜಾರು, ನರಸಿಂಹರಾಜಾ ಕಾಲೋನಿಯಲ್ಲೇ ಹೆಚ್ಚಿನ ಜೀವನ ಕಳೆದ ನನಗೆ ಕೋಣನಕುಂಟೆ ಹೆಚ್ಚೇನು ಪ್ರಿಯವಾಗಲಿಲ್ಲವಾದರೂ, ಸನಿಹದಲ್ಲಿಯೇ ಶಾಸ್ತ್ರಿಯ ಮನೆ ಇದೆ ಎಂಬುದು

ಆಕರ್ಷಕವಾಯಿತು. ಇದರ ಪ್ರಯೋಜನದ ಅರಿವಾದದ್ದು ಹೀಗೆ. ಮನೆ ಕಟ್ಟುವ ಸಂಭ್ರಮದಲ್ಲಿ ಕೊಳವೆ ಬಾವಿಯನ್ನು ತೋಡಿಸುವ ಸಡಗರ. ಬೆಳಗ್ಗೆಯೇ ನಿವೇಶನದ ಬಳಿಯಲ್ಲಿದ್ದರೂ ಕೊಳವೆ ಬಾವಿ ತೋಡುವ ವಾಹನಗಳು ಬಂದಾಗ ಮಧ್ಯಾಹ್ನ ೧೧ ಘಂಟೆ. ನಂತರದ ಗಡಿಬಿಡಿಯಲ್ಲಿ ಸಮಯ ಹೊಂದದ್ದೇ ತಿಳಿಯಲಿಲ್ಲ. ಹೊಟ್ಟೆ ಚುರುಗುಟ್ಟಿದಾಗಲೇ ಸಮಯ ನೋಡಿದ್ದು. ಮಧ್ಯಾಹ್ನ ೨.೩೦ ಆಗಿತ್ತು. ಕೋಣನಕುಂಟೆಯಲ್ಲಿದ್ದ ಹೋಟಲುಗಳಿಗೆ ಹೋಗಲು ಮನಸ್ಸಾಗಲಿಲ್ಲ. ನರಸಿಂಹ ರಾಜಾ ಕಾಲೋನಿಯ ಮನೆಗೆ ಬಸ್ಸಿನಲ್ಲಿ ತಲುಪವಷ್ಟು ವ್ಯವಧಾನವಿರಲಿಲ್ಲ. ಏನು ಮಾಡಲಿ ಎಂದು ಪರಿತಪಿಸಿದ ನನಗೆ ಹೊಳದದ್ದೇ ಶಾಸ್ತ್ರಿಯ ಮನೆ. ನಂತರ ಕೆಲವೇ ನಿಮಿಷಗಳಲ್ಲಿ ಅವರ ಮನೆಯಲ್ಲಿದ್ದೆ. ವಿಶ್ರಾಂತಿ ಪಡೆಯುತ್ತಿದ್ದ ಶಾಸ್ತ್ರಿಯ ಶ್ರೀಮತಿಯವರಾದ ಸರಸ್ವತಿಯವರು ನನ್ನ ಬಳಲಿದ ಮುಖ ಕಂಡು ಮೊದಲು ಪಾನಕದಿಂದ ಸತ್ಕರಿಸಿ ನಂತರ ಏನೆಂದು ವಿಚಾರಿಸಿದರು. ನಾನೋ ನಾಚದೆ, ನನ್ನ ಊಟದ ಬೇಡಿಕೆಯನ್ನು ಮುಂದಿಟ್ಟೆ. 'ಸ್ವಲ್ಪ ಹೊತ್ತು ಕುಳಿತಿರಿ' ಎಂದು ಕೆಲವೇ ನಿಮಿಷಗಳಲ್ಲಿ ಶುಚಿ ರುಚಿಯಾದ ಊಟ ಬಡಿಸಿದರು ತುಂಬಿದ ಹೊಟ್ಟೆಯಿಂದ ಮನಸ್ಸು ಉಲ್ಲಾಸವಾಯಿತು. ಹೀಗೆ ಸಮಯವಿಲ್ಲದೇ, ಮೊದಲೇ ತಿಳಿಸದೆ ಪ್ರಾಪ್ತವಾದ ನನ್ನ ಬರವು ಅವರನ್ನು ಕಿಂಚಿತ್ತೂ ಕಂಗೆಡಿಸಲಿಲ್ಲ. 'ನೀವು ಇಲ್ಲಿ ಬಂದದ್ದು ಒಳ್ಳೆಯದೇ ಆಯಿತು. ಸಂಕೋಚಿಸಬೇಡಿ, ಬರುತ್ತಲಿರಿ, ಬೇಕಾದಾಗೆಲ್ಲಾ' ಎಂದರು. ಯಾರಿಗುಂಟು ಈ ರೀತಿಯ ಭಾಗ್ಯ? ಎಲ್ಲರೂ ಮನೆ ಕಟ್ಟಿಸುವಾಗ ತೂಕ ಕಳೆದುಕೊಂಡರೆ, ನನ್ನ ತೂಕ ಹೆಚ್ಚಾಗುತ್ತಿದೆಯಲ್ಲಾ ಇದು ಹೇಗೆ ಎಂದು ಕೆಪಿಯಲ್ಲಿನ ಸಹದ್ಯೋಗಿಗಳಲ್ಲಿ ತಕರಾರು. ಇದಕ್ಕೆ ಶಾಸ್ತ್ರಿ ಮತ್ತವರ ಮನೆಯವರ ಸತ್ಕಾರವೇ ಕಾರಣ ಎಂಬ ಗುಟ್ಟನ್ನು ನಾನು ನಿಧಾನವಾಗಿಯೇ ಅವರಿಗೆಲ್ಲಾ ತಿಳಿಸಿದ್ದು. ನನ್ನ ಅನೇಕ ಸಮಸ್ಯೆಗಳಿಗೆ ಶಾಸ್ತ್ರಿಯವರ ಬಳಿ ಸಕ್ರಿಯವಾದ ಪರಿಹಾರವಿರುತ್ತಿತ್ತು. ಅದನ್ನು ನಾನು ಹೆಚ್ಚು ಸ್ವಾತಂತ್ರ್ಯ ವಹಿಸಿ ಬಳಸಿರುವ ಪ್ರಸಂಗಗಳೊಂದನ್ನು ಮರೆಯಲಾರೆ. ನನ್ನ ಮಗಳು ಅಪರ್ಣ ತನ್ನ ಇಂಜಿನಿಯರಿಂಗ್ ಪದವಿಯನ್ನು ಮುಗಿಸಿ ಸತ್ಯಂ ಕಂಪ್ಯೂಟರ್‌ನ ಸಂಶೋಧನಾ ವಿಭಾಗದಲ್ಲಿ ಕೆಲಸ ಪಡೆದಳು. ಆದರೆ ಅಲ್ಲಿ ಸೇರಲು ೨ ಲಕ್ಷದ ಸೆಕ್ಯೂರಿಟಿ ಪತ್ರದ ಅವಶ್ಯಕತೆಯಿತ್ತು. ಇದು ಎರಡು ವರ್ಷಕ್ಕೆ ಸೀಮಿತವಾಗಿತ್ತು. ಇದಕ್ಕೆ ನನ್ನ ಮತ್ತು ನನಗೆ ಸಂಬಂಧಿಯಾಗದವರು ಆಸ್ತಿ ವಿವರಗಳನ್ನು ನಮೂದಿಸಿ ಸಹಿ ಮಾಡುವುದು ಅವಶ್ಯವಾಗಿತ್ತು. ನನಗೆ ತೋಚಿದವರು ಶಾಸ್ತ್ರಿಯೇ ಎಂಬುದು ನಿಮಗೀಗಲೇ ಮನದಟ್ಟಾಗಿರಬಹುದು. ಪರಿಸ್ಥಿತಿಯನ್ನು ಶಾಸ್ತ್ರಿಗೆ ಅಳುಕುತ್ತಲೇ ವಿವರಿಸಿದೆ. 'ಅದಕ್ಕೇನು ಚಿಂತೆ? ಮಾಡೋಣ ಬಿಡಿ' ಎಂದರು ನಿರಾಳಾನಾದೆ. ಆದರೆ ಆಸ್ತಿಯ ಸಂಪೂರ್ಣ ವಿವರಣೆಗಾಗಿ ನಿವಾಸಗಳನ್ನಳಸಿ ಅದರ ಮೌಲ್ಯಮಾಪನ ಮಾಡಲು, ಪರಿಶೀಲಕರು ತಮ್ಮ ಪರಿಕರಗಳೊಡನೆ ಬಂದಾಗಲೇ ಶಾಸ್ತ್ರಿಯವರಿಂದ ಅದರ ಮನೆಯವರಿಗೆ ಈವಿಷಯ

ತಿಳಿದು ಬಂದದ್ದು ಎಂದು ನನಗೆ ತಿಳಿದಿದ್ದು. ಆದರೂ ಸ್ವಲ್ಪವೂ ವಿಚಲಿತರಾಗದೇ ದಂಪತಿಗಳು ಸಹಕರಿಸಿ, ಕಾಗದ ಪತ್ರಗಳು ಶಾಸ್ತ್ರಿಯ ಮತ್ತು ನನ್ನ ಸಹಿಯೊಡನೆ ತಯಾರಾಗಿ ಮಗಳು ಕಛೇರಿಯ ಕೆಲಸಕ್ಕೆ ಯಾವ ತೊಂದರೆ ತಕರಾರುಗಳಿಲ್ಲದೇ ಸೇರಿಕೊಂಡಳು. ಇದು ನಡೆದದ್ದು ಒಂದು ದಶಕದ ಹಿಂದೆ. ಇಂದು ನನ್ನ ಮಗಳು ಅಮೆರಿಕೆಯ ವರ್ಜೀನಿಯಾ ರಾಜ್ಯದಲ್ಲಿ, ಅಮೆಜ್ಞಾನ್ ಕಂಪನಿಯ ಸಂಶೋಧನ ವಿಭಾಗದಲ್ಲಿ ಕೆಲಸ ಮಾಡುತ್ತಿದ್ದಾಳೆ ಎಂದರೆ, ಅದಕ್ಕೆ ಶಾಸ್ತ್ರೀ ದಂಪತಿಗಳು ಅಂದು ಕೊಟ್ಟ ಸಹಕಾರವೇ ಮೂಲಕಾರಣವೆಂದರೆ ತಪ್ಪಾಗಲಾರದು. ಇಷ್ಟಾಗಿಯೂ, ಅವರು ಅಮೇರಿಕಾಗೆ ತಮ್ಮ ಮಗನನ್ನು ಕಾಣಲು ಹೋದಾಗ ನನ್ನ ಮಗಳ ಮನೆಗೂ ಹೋಗಿದ್ದು, ನಂತರದ ದಿನಗಳಲ್ಲಿ, ಇಂದಿನವರೆಗೂ ಅವಳ ಸತ್ಕಾರವನ್ನು ಮುಕ್ತವಾಗಿಯೇ ಶಾಘ್ಲಿಸುತ್ತಲಿರುತ್ತಾರೆ. ಇದು ಅವರ ದೊಡ್ಡತನವನ್ನು ತೋರುತ್ತದೆ ಎಂದರೆ ತಪ್ಪಾಗಲಾರದು. ಹೀಗೆ ಅನೇಕ ಪ್ರಕರಣಗಳಿಂದ ಸನಿಹ ಒಡನಾಟಗಳಿಂದ ಶಾಸ್ತ್ರಿಯ ವ್ಯಕ್ತಿತ್ವದ ಕಿರು ಪರಿಚಯವನ್ನು ನನಗೆ ಕಂಡು ಬಂದಂತೆ ನಿಮ್ಮ ಮುಂದಿಟ್ಟು ಉಪಸಂಹರಿಸುವ ಮುಂಚೆ ನನ್ನ ಇಂದಿನ ಆಶಯವನ್ನೂ ಅದರಲ್ಲಿನ ಸ್ವಾರ್ಥವನ್ನು ಸಹ ಹಂಚಿಕೊಂಡು ಬಿಡುತ್ತೇನೆ.

ಎಪ್ಪತ್ತು ಮತ್ತು ಅರವತ್ತರ ದಶಕಗಳನ್ನು ತಮಗೂ, ಇತರರಿಗೂ ಸಮಾಜಕ್ಕೂ ಉಪಯುಕ್ತವಾಗಿ ಕಳೆದ ಶಾಸ್ತ್ರಿದ್ವಯರು, ಮತ್ತೆರಡು ಮೂರು ದಶಕಗಳನ್ನು ಕಳೆದು ಅವರ ಶತಜನ್ಮದಿನೋತ್ಸವವನ್ನು ಆಚರಿಸಿಕೊಳ್ಳಲಿ, ಅದರಲ್ಲಿ ಭಾಗವಹಿಸಿ, ನೆನಪುಗಳನ್ನು ಮತ್ತೊಮ್ಮೆ ಮೆಲಕು ಹಾಕುವ ಭಾಗ್ಯ ನಮ್ಮದಾಗಲೀ ಎಂದು ಹೃದಯಾಂತರಾಳದಿಂದ ಭಗವಂತನಲ್ಲಿ ಪ್ರಾರ್ಥಿಸುತ್ತೇನೆ.

◆

ಜ್ಞಾನ, ಸರಳತೆಯ ಮೂರ್ತರೂಪ ಜಿ.ವಿ.ಶ್ರೀನಾಥಶಾಸ್ತ್ರೀ

– ಕೆ.ಎಸ್. ನವೀನ್, ಬೆಂಗಳೂರು
ಕಾರ್ಯಕರ್ತರು, ಕನ್ನಡ ಗಣಕ ಪರಿಷತ್ತು
೯೪೪೪೮೯೦೫೨೧೪, ksn.bird@gmail.com

ಸುಮಾರು ಇಪ್ಪತ್ತಮೂರು ವರ್ಷಗಳ ಹಿಂದಿನ ಮಾತು (೧೯೯೧). ಕಣಾದ ಪತ್ರಿಕೆಯಲ್ಲಿ ಶ್ರೀಯುತರ ಲೇಖನ ಓದಿ ಅವರಿಗೆ ಪತ್ರ ಬರೆದಿದ್ದೆ. ಆಗ ಅವರು ರಾಷ್ಟ್ರೀಯ ವೈಮಾಂತರಿಕ್ಷ ಪ್ರಯೋಗಶಾಲೆಯಲ್ಲಿನ ಸಿಸ್ಟಮ್ಸ್ ವಿಭಾಗದಲ್ಲಿದ್ದರು. ತಿಂಗಳಾದರೂ ಅವರಿಂದ ಉತ್ತರ ಬರಲಿಲ್ಲ. ವಿದ್ಯಾರ್ಥಿಯಾಗಿದ್ದ ನನ್ನ ಪತ್ರಕ್ಕೆ ಯಾರು ಬೆಲೆಕೊಟ್ಟಾರೆಂದು ಸುಮ್ಮನಾದೆ. ಆದರೆ, ಸುಮಾರು ಎರಡೂವರೆ ತಿಂಗಳ ನಂತರ ಅನಿರೀಕ್ಷಿತವಾಗಿ ಅವರಿಂದ ಉತ್ತರ ಬಂದಿತು! ಇವರ್‍ಯಾರೋ ಅಪರಿಚಿತ ವ್ಯಕ್ತಿಯ ಪತ್ರ ಎನಿಸದೆ ಹಿತೈಷಿಯೊಬ್ಬರ ಪತ್ರವೆನಿಸುವಷ್ಟು ಆತ್ಮೀಯತೆಯಿತ್ತು ಅದರಲ್ಲಿ. ಶಂಕರಪುರದಲ್ಲಿನ ಅವರ ಮನೆಯ ವಿಳಾಸ ನೀಡಿ ಅಲ್ಲಿಗೆ ಬರುವಂತೆ ಆಹ್ವಾನಿಸಿದ್ದರು. ಹೀಗೆ ಆರಂಭವಾಯಿತು ೨೩ ವರ್ಷಗಳ ಸಂಬಂಧ!

ಮುಂದೆ ಅನೇಕ ಬಾರಿ ಭೇಟಿಯಾಯಿತು. ಕನ್ನಡ ಗಣಕ ಪರಿಷತ್ತು ಎಂಬ ಸಂಸ್ಥೆಯನ್ನು ಇವರು ಹುಟ್ಟುಹಾಕಿದರು. ಇಂದು ಅದರ ಪ್ರಭಾವವನ್ನು ಜಗತ್ತಿನಾದ್ಯಂತ ಕಾಣಬಹುದು. ಇಲ್ಲಿ ನಾನು ಹೇಳಬಯಸುವುದು ಅವರ ಬದ್ಧತೆ ಮತ್ತು ಕರ್ತವ್ಯ ನಿಷ್ಠೆ. ಪ್ರತಿಯೊಂದು ಕಾರ್ಯವನ್ನು ಅವರು ಅಚ್ಚುಕಟ್ಟಾಗಿ, ಶಿಸ್ತಿನಿಂದ ಅದು ನಿರೀಕ್ಷಿತ ಫಲ ನೀಡುವವರೆಗೆ ತಾಳ್ಮೆಯಿಂದ ಮಾಡುತ್ತಿದ್ದರು. ಇದು ಒಂದು ಭಾಗ. ಮತ್ತೊಂದು ಭಾಗವೆಂದರೆ, ಜನರನ್ನು ಒಟ್ಟುಗೂಡಿಸಿ ಅವರಿಗೆ ತಮ್ಮ ವಿಚಾರಗಳನ್ನು ಮನದಟ್ಟು ಮಾಡಿಸುವ ಅವರ ಪರಿ, ಅವರು ಹೋದೆಡೆಯೆಲ್ಲ ಒಂದು ಗುಂಪು ಅವರ ಸುತ್ತ ಇದ್ದೇ ಇರುತ್ತದೆ. ಅವರೊಂದಿಗೆ ಇವರು ಕನ್ನಡ, ಗಣಕ, ಬರೆಹದಲ್ಲಿನ ಸರಿರೂಪ, ಗಣಕದಲ್ಲಿ ಕನ್ನಡ ಮೂಡಿಸುವ ಪರಿ. ಅಲ್ಲಿ ಅರ್ಕಾವೊತ್ತಿನ ಸ್ಥಾನ ಇವುಗಳನ್ನು ಕುರಿತಾಗಿ ನಿರಂತರವಾಗಿ ಮಾತನಾಡುತ್ತಿರುತ್ತಾರೆ. ಇದರ ಜೊತೆಗೆ, ಮಾತೃಭಾಷೆಯಲ್ಲಿ ಶಿಕ್ಷಣ, ಶಿಕ್ಷಣದ ವೈಜ್ಞಾನಿಕತೆ. ನಮ್ಮ ಸಂಸ್ಕೃತಿ, ಜಾನಪದ, ಲಲಿತಕಲೆಗಳು ಇತ್ಯಾದಿಗಳಿಂದ ಕಲಿಕೆಗೆ ದೊರೆಯುವ ಇಂಬು ಹೀಗೆ ನಾನಾ ವಿಚಾರಗಳನ್ನು ಕುರಿತು ಒಂದಿಷ್ಟೂ ಬೇಸರಿಸಿಕೊಳ್ಳದೆಮಾತನಾಡುತ್ತಾರೆ. ಈ ಮಾತಿನಲ್ಲಿ ಅವಗ ಜ್ಞಾನ, ಹೃದ್ಯಸ್ಥವಾದ ತಿಳಿವಳಿಕೆ ಎದ್ದು ಕಾಣುತ್ತದೆ, ಅವರ ಅದಮ್ಯ ಸರಳತೆಯ ಹಿನ್ನೆಲೆಯಲ್ಲಿ.

ಇವರು ಮಾಡಿದ ಅನೇಕ ಕಾರ್ಯಗಳಲ್ಲಿ ಬಹುಮುಖ್ಯವಾದದ್ದು ಅವರು ಕರ್ನಾಟಕ ವಿಜ್ಞಾನ ತಂತ್ರಜ್ಞಾನ ಅಕಾಡೆಮಿಯ ಸದಸ್ಯರಾಗಿದ್ದಾಗ ಆಯೋಜಿಸಿದ ಪ್ರೌಢಶಾಲಾ ವಿಜ್ಞಾನ ಮತ್ತು ಗಣಿತ ಶಿಕ್ಷಕರಿಗೆ ಪುನಶ್ಚೇತನ ಶಿಬಿರ. ಇದು ಶಿಕ್ಷಕ ತರಬೇತಿಯಲ್ಲೆ ಒಂದು ದೊಡ್ಡ ಮೈಲುಗಲ್ಲು. ಮೂರು ಜಿಲ್ಲೆಗಳ ವ್ಯಾಪ್ತಿಯಲ್ಲಿ ಬರುವ ಎಲ್ಲ ಪ್ರೌಢಶಾಲಾ ವಿಜ್ಞಾನ ಶಿಕ್ಷಕರಿಗೆ ಭೌತವಿಜ್ಞಾನ, ರಸಾಯನ ವಿಜ್ಞಾನ, ಗಣಿತ ಮತ್ತು ಜೀವವಿಜ್ಞಾನದ ಶಿಕ್ಷಣದ ತರಬೇತಿ. ಆರಿಸಿ ಆರಿಸಿ ಸಂಪನ್ಮೂಲ ವ್ಯಕ್ತಿಗಳನ್ನು ಈ ಶಿಬಿರಗಳಿಗೆ ನಿಯೋಜಿಸುತ್ತಿದ್ದರು. ಇನ್ನು ಈ ಶಿಬಿರಗಳ ನಿರ್ವಹಣೆ ಇತರರಿಗೆ ಮಾದರಿಯಾಗಿತ್ತು. ಯಾವುದೇ ಉದ್ಘಾಟನಾ ಭಾಷಣ ಇತ್ಯಾದಿಗಳಿಗೆ ಆಸ್ಪದ ಕೊಡದೆ, ಬಂದ ಸಂಪನ್ಮೂಲ ವ್ಯಕ್ತಿಯ ಕಿರು ಪರಿಚಯ ಮಾಡಿ, ಅವರ ಮುಂದಿರುವ ಕಾರ್ಯವನ್ನು ಕೆಲವೇ ಮಾತುಗಳಲ್ಲಿ ಸ್ಪಷ್ಟವಾಗಿ ಹೇಳುತ್ತಿದ್ದರು. ಇದರಿಂದಾಗಿ ತರಬೇತಿ ಶಿಬಿರ, ಭಾಷಣ ಕಾರ್ಯಕ್ರಮವಾಗುವುದು ತಪ್ಪುತ್ತಿತ್ತು! ಇವುಗಳ ನಿರ್ವಹಣೆಗಾಗಿ ಎಷ್ಟು ಜನರಿಗೆ ಪತ್ರ ಬರೆದರೊ, ಎಷ್ಟು ದೂರವಾಣಿ ಕರೆಮಾಡಿದರೊ, ಎಷ್ಟು ಜನರ ಮನೆಗೆ ತಿರುಗಿದರೊ ಅವರೇ ಬಲ್ಲರು! ಇವೆಲ್ಲವೂ ಪುಕ್ಕಟೆ ಸೇವೆ. ಇದಾವುದಕ್ಕು ಅವರು ಅಕಾಡೆಮಿಯಿಂದ ಹಣ ಪಡೆಯಲಿಲ್ಲ. ಜೊತೆಗೆ, ಶಿಕ್ಷಕರಿಗಿರಬೇಕಾದ ಗುಣಗಳು, ಶಿಕ್ಷಣದ ಪ್ರಾಮುಖ್ಯತೆ, ವಿಜ್ಞಾನ ಮತ್ತು ಗಣಿತ ಬೋಧಿಸುವ ಪರಿ ಇವುಗಳನ್ನು ಕುರಿತ ಕರಪತ್ರಗಳನ್ನು ಮುದ್ರಿಸಿ ಹಂಚಿದರು! ಇಂದಿಗೂ ಅನೇಕ ಶಿಕ್ಷಕರು ಆ ಶಿಬಿರಗಳನ್ನು ನೆನೆಪಿಸಿಕೊಳ್ಳುತ್ತಾರೆ.

ಇವೆಲ್ಲಕ್ಕಿಂತಲೂ ಮುಖ್ಯವಾದದ್ದು ಅವರ ಮಾನವೀಯ ಮುಖ. ನೊಂದವರಿಗೆ ಅವರು ನೀಡುವ ಸಾಂತ್ವನ ಅತ್ಯಂತ ಪರಿಣಾಮಕಾರಿಯಾಗಿರುತ್ತದೆ. ನಿಜದಲ್ಲಿ, ಆಪ್ತಸಲಹೆಗಾರರು. ಇವರಿಂದ ಅದನ್ನು ಕಲಿಯಬೇಕು ಎಂದರೆ ಅತಿಶಯೋಕ್ತಿಯಲ್ಲ. ನಾನು ಒಂದು ಹಂತದಲ್ಲಿ ತೀವ್ರವಾದ ಮಾನಸಿಕ ಒತ್ತಡದಲ್ಲಿದ್ದೆ. ಆಗ ಅವರಿಂದ ಪಡೆದ ಸಾಂತ್ವನ ನನಗೆ ಅವನ್ನೆಲ್ಲ ಎದುರಿಸಿ ಎದ್ದು ನಿಲ್ಲುವ ಚೈತನ್ಯ ನೀಡಿದೆ. ಸಮಸ್ಯೆಯಲ್ಲಿರದ ವ್ಯಕ್ತಿಗಳು ಆ ಮಾತುಗಳನ್ನು ಕೇಳಿದರೆ ನಗಬಹುದು, ಆದರೆ ಸಮಸ್ಯೆಯಲ್ಲಿರುವವರಿಗೆ ಅದು ಎಷ್ಟು ಒತ್ತಾಸೆ ನೀಡುತ್ತದೆ, ಎದುರಿಸಿ ನಿಲ್ಲುವ ಚೈತನ್ಯ ನೀಡುತ್ತದೆ ಎಂಬುದನ್ನು ಪದಗಳಲ್ಲಿ ವಿವರಿಸಲಾಗದು. ಇವರು ನಮ್ಮ ನಡುವಿನ ತಂಪನ್ನೆರೆಯುವ ವೃಕ್ಷ.

◆

ಕನ್ನಡ ಗಣಕ ಪರಿಷತ್ತಿನ ಗಣನೀಯ ಸಾಧಕ

– ಚಿನ್ಮಯ ಎಂ.ರಾವ್, ಹೊನಗೋಡು
ಯುವ ಸಂಗೀತ ನಿರ್ದೇಶಕರು,
೯೪೪೯೧೧೫೯೦, ೯೫೩೫೫೮೫೨೭೦
chinmayamrao@gmail.com

ವಿಜ್ಞಾನ ತಂತ್ರಜ್ಞಾನ ಆವಿಷ್ಕಾರಗಳು ಸದಾ ತಪಸ್ವಿಗಳ ಕೊಡುಗೆ. ತಮ್ಮ ಅನ್ವೇಷಣೆಗಳನ್ನು ಸಮಾಜದೊಳಿತಿಗಾಗಿ ಮುಡಿಪಾಗಿಡುವವರೇ ತಪಸ್ವಿಗಳು. ತಪಸ್ಸಿಗೆ ತೂಕ ಬರುವುದೇ, ಅದು ಸಮಾಜಕ್ಕಾಗಿ ಸದ್ವಿನಿಯೋಗವಾಗಿ ಸಾರ್ಥಕ್ಯ ಪಡೆದಾಗ. ಅಂತೆಯೇ ಅನ್ವೇಷಣೆಗಳನ್ನು ಅದರ ಸಾಧಕ ಬಾಧಕಗಳ ಸಹಿತ, ಸ್ವಾರಸ್ಯಗಳ ಸಮೇತ ತೆರೆದಿಟ್ಟು ಮುಂದಿರುವ ಮುಂದೊದಗಬಹುದಾದ ಸವಾಲುಗಳನ್ನು ಸವಿವರವಾಗಿ ತೆರೆದೆಡಿಡುವ ತವಕ ಯಾರಿಗಿರುವುದೋ ಅವರಿಗೆ ನಿಜವಾಗಿಯೂ ಆ ಕ್ಷೇತ್ರದ ಭವಿಷ್ಯದ ಬಗ್ಗೆ ವಿಶೇಷ ಕಾಳಜಿಯಿದೆ ಎಂದರ್ಥ. ಹೀಗೆ ವಿಶೇಷ ಕಾಳಜಿ ಇರುವ ವಿಶೇಷ ವ್ಯಕ್ತಿಯೇ ಈ ಹಿರಿಯ ಜೀವ... ಬೆಂಗಳೂರಿನ ಚಾಮರಾಜಪೇಟೆಯಲ್ಲಿ ಕನ್ನಡ ಸಾಹಿತ್ಯ ಪರಿಷತ್ತಿನಿಂದ ಅನತಿ ದೂರದಲ್ಲೇ ಇರುವ ಕನ್ನಡ ಗಣಕ ಪರಿಷತ್ತಿನ ಕಚೇರಿಗೆ ಯಾರಾದರು ಯುವ ಉತ್ಸಾಹಿಗಳು ಹೋಗಿ ಕುಳಿತರೆ ಸಾಕು, ಅಲ್ಲೊಂದು ಹಿರಿಯ ಜೀವಿ ಸನಿಹದಲ್ಲೇ ಬಂದು ಕುಳಿತು ಆತ್ಮೀಯವಾಗಿ ನಮ್ಮ ಜ್ಞಾನದಾಹಕ್ಕೆ ನೀರುಣಿಸಲಾರಂಭಿಸುತ್ತಾರೆ. ಅಷ್ಟೆಲ್ಲಾ ಮಾತನಾಡಿದ ನಂತರ ಅವರು ಅಲ್ಲಿಯ ಒಬ್ಬ ಸಾಮಾನ್ಯ ನೌಕರನೆಂದು ನಾವೇನಾದರು ತಿಳಿದುಕೊಂಡರೆ ಅದು ಮಹಾಪ್ರಮಾದವಾಗುತ್ತದೆ. "ಅವರೇ ಕನ್ನಡ ಗಣಕ ಪರಿಷತ್ತಿನ ಸಂಸ್ಥಾಪಕ" ಎಂದು ಅಲ್ಲಿದ್ದವರು ಯಾರಾದರು ಹೇಳಿದರೆ ಮಾತ್ರ ಗೊತ್ತಾಗುತ್ತದೆ. ಅಂತಹ ಅಸಾಮಾನ್ಯ ಹಿರಿಯ ಸರಳ ಸಜ್ಜನ ಸಾಧಕ ಚಿ.ವಿ. ಶ್ರೀನಾಥಶಾಸ್ತ್ರಿ, ಜ್ಞಾನಿ, ವಿಜ್ಞಾನಿ, ಗಣಿತಜ್ಞಾನಿ, ತಂತ್ರಜ್ಞಾನಿ, ಕನ್ನಡ ತಂತ್ರಜ್ಞಾನಿ ಅದೆಲ್ಲಕ್ಕಿಂತ ಮಿಗಿಲಾಗಿ ಕನ್ನಡಾಭಿಮಾನಿ. ಹೀಗೆ ಶ್ರೀನಾಥಶಾಸ್ತ್ರಿಗಳಿಗೆ ಅತಿಶಯೋಕ್ತಿಯೇನಲ್ಲದ ಬಿರುದುಗಳನ್ನು ಪೋಣಿಸಿದರೂ ಸಾಕು ಅಕ್ಷರಲೋಕದ ವಿಶೇಷಣಗಳು ಖಾಲಿಯಾಗುವುದು ಖಂಡಿತಾ ! ಇವರು ಮಾತ್ರ ಖಾಲಿಯಾಗದ ಕೊಡ... ಇವರ ಬಗ್ಗೆ ಹೆಚ್ಚಿನ ಮಾಹಿತಿಗಳನ್ನು ಸಂಗ್ರಹಿಸುತ್ತಾ ಹೋದರೆ ಅದೊಂದು ಮುಗಿಯದ ಮಹಾನ್ ಗ್ರಂಥವಾಗುತ್ತದೆ. ಆದರೂ ಅವರ ಸರ್ವಸ್ವವನ್ನು ಸಾರರೂಪದಲ್ಲಿ ಹಿಡಿದಿಡುವ ಪ್ರಯತ್ನ ಇಲ್ಲಿದೆ.

ತುಮಕೂರು ಜಿಲ್ಲೆ ಚಿಕ್ಕನಾಯಕನಹಳ್ಳಿಯಲ್ಲಿ ೧೯೪೪ರ ಸೆಪ್ಟೆಂಬರ್ ೬ ರಂದು ಶ್ರೀ ಚಿ. ನಾ. ವಿಶ್ವನಾಥಶಾಸ್ತ್ರಿ ಹಾಗೂ ಶ್ರೀಮತಿ ಲಲಿತಮ್ಮ ದಂಪತಿಗಳ ಮೊದಲ ಪುತ್ರರಾಗಿ ಜನಿಸಿದ ಶ್ರೀನಾಥಶಾಸ್ತ್ರಿಗಳು ತಮ್ಮ ತಂದೆಯವರಂತೆಯೇ ಸಾಹಿತ್ಯ, ಸಂಸ್ಕೃತಿ, ಕಲೆಗಳ

ಆರಾಧಕರು, ಪ್ರಸಾರಕರೂ ಆಗಿ ತಾವಿದ್ದೆಡೆಯಲ್ಲೆಲ್ಲಾ ಕನ್ನಡಸಾಹಿತ್ಯ ಸಂಸ್ಕೃತಿ ಪ್ರಸಾರಕ್ಕೆ ಅಹರ್ನಿಶಿ ದುಡಿದವರು. ಆನೇಕಲ್ಲಿನಲ್ಲಿ ಪ್ರಾಥಮಿಕಶಿಕ್ಷಣ ಮುಗಿಸಿದ ಇವರು ಮೈಸೂರು ವಿಶ್ವವಿದ್ಯಾನಿಲಯದಿಂದ ಗಣಿತ ಶಾಸ್ತ್ರದಲ್ಲಿ ಸ್ನಾತಕೊತ್ತರ ಪದವಿಯನ್ನು ರ್‍ಯಾಂಕಿನೊಂದಿಗೆ ಪಡೆದವರು. ಮುಂದೆ ಆರು ವರ್ಷಗಳಕಾಲ ಶೃಂಗೇರಿಯ ಪ್ರಥಮ ದರ್ಜೆ ಕಾಲೇಜಿನಲ್ಲಿ ಗಣಿತ ಪ್ರಾಧ್ಯಾಪಕರಾಗಿ ಕಾರ್ಯನಿರ್ವಹಿಸಿದರು. ಆ ಸಂದರ್ಭದಲ್ಲಿಯೇ ಗಣಿತ ಶಿಕ್ಷಣಕ್ಕೆ ಹೊಸ ಆಯಾಮ ನೀಡಿದರು.

ಭಾರತದ ಹೆಮ್ಮೆಯ ಸಂಶೋಧನಾಸಂಸ್ಥೆಗಳಲ್ಲಿ ಒಂದಾದ ರಾಷ್ಟ್ರೀಯ ವೈಮಾಂತರಿಕ್ಷ ಪ್ರಯೋಗಶಾಲೆಯಲ್ಲಿ ವಿಜ್ಞಾನಿಗಳಾದರು. ಅಲ್ಲಿ ಮುವ್ವತ್ತೊಂದು ವರ್ಷಗಳ ಸಾರ್ಥಕಸೇವೆಯ ನಂತರ ಪ್ರಯೋಗಶಾಲೆಯಿಂದ ನಿವೃತ್ತರಾದರು, ಕೆಲಸದಿಂದಲ್ಲ ! ಇವರು ಸೇವೆಯಲ್ಲಿದ್ದ ಸಂದರ್ಭದಲ್ಲಿ ಪ್ರತ್ಯಾನುಕರಣೆ ಹಾಗೂ ವಿಶ್ಲೇಷಣೆಗೆ ಸಂಬಂಧಪಟ್ಟ ತಂತ್ರಾಂಶಗಳ ಸಿದ್ಧತೆಗೆ ಸಾಕಷ್ಟು ಕೊಡುಗೆ ನೀಡಿದ್ದರು. ಇವುಗಳಲ್ಲಿ ವಿಮಾನದ ರೆಕ್ಕೆಗಳ ಮಾದರಿ ವಿನ್ಯಾಸ, ಪ್ರಯೋಗ ಪರೀಕ್ಷೆಗಳನ್ನು ಸಂಶೋಧನೆಗೆ ಉಪಯುಕ್ತವಾಗುವಂತೆ ನಮೂದಿಸಲು ಅಗತ್ಯವಾದ ಗಣಕೀಯ ಮಾದರಿಗಳನ್ನು ಅಭಿವೃದ್ಧಿಪಡಿಸಿದ್ದು, ಎಎಸ್‌ಡಬ್ಲ್ಯೂಎಸಿ ಪ್ರತ್ಯನುಕರಣೆಗಾಗಿ ವಾಯುಚಲನ ಮಾದರಿ, ಹಾರಾಟ ನಿಯಂತ್ರಣ, ಪ್ರತ್ಯಾನುಕರಣೆ ಪ್ರದರ್ಶನ ವ್ಯವಸ್ಥೆ ಇತ್ಯಾದಿ ಉನ್ನತ ತಾಂತ್ರಿಕ ವಿಷಯಗಳನ್ನು ಕುರಿತಂತೆ ಕಾರ್ಯಮಾಡಿದ್ದು ಉಲ್ಲೇಖನೀಯ.

ಧ್ವನ್ಯತೀತ ವಾಯುಸುರಂಗ ಅಂತಾರಾಷ್ಟ್ರೀಯ ಸಂಸ್ಥೆಯ ವತಿಯಿಂದ ೧೯೯೮ರಲ್ಲಿ ಒಟ್ಟಾವಾದಲ್ಲಿ ನಡೆದ ಸಮ್ಮೇಳನದಲ್ಲಿ ಮಂಡಿಸಿದ ಸಂಶೋಧನಾ ಪ್ರಬಂಧದ ಸಹಲೇಖಕರಾಗಿ, ಏರ್‌ಕ್ರಾಫ್ಟ್ ಡಿಸೈನ್ ಎಂಬ ಅಂತಾರಾಷ್ಟ್ರೀಯ ನಿಯತಕಾಲಿಕೆಯ ಸಂಚಿಕೆಯಲ್ಲಿ ಪ್ರಕಟವಾದ ತಮ್ಮ ನೂತನ ಸಂಶೋಧನಾ ವಿಷಯದ ಪ್ರಬಂಧಕಾರರಾಗಿ, ಒಟ್ಟಾರೆ ಇಪ್ಪತ್ತೈದಕ್ಕೂ ಹೆಚ್ಚು ವೈಜ್ಞಾನಿಕ ಪ್ರಬಂಧಗಳ ಲೇಖಕರಾಗಿ ತಮ್ಮ ಬೌದ್ಧಿಕ ಸಾಮರ್ಥ್ಯವನ್ನು ಮೆರೆದಿದ್ದಾರೆ, ಅನೇಕ ಪ್ರಶಂಸಾ ಪತ್ರಗಳನ್ನು ಪಡೆದಿದ್ದಾರೆ. ಇಷ್ಟೆಲ್ಲಾ ತಾಂತ್ರಿಕ ಕಾರ್ಯಗಳಲ್ಲಿ ನಿರತರಾಗಿದ್ದರೂ ಕಣಾದ ಎಂಬ ಜನಪ್ರಿಯ ವಿಜ್ಞಾನ ವಾರ್ಷಿಕಪತ್ರಿಕೆಯನ್ನು ಎನ್.ಎ.ಎಲ್ ಕನ್ನಡಸಾಂಸ್ಕೃತಿಕ ಸಂಘದಿಂದ ಆರಂಭಿಸಲು ಕಾರಣಪುರುಷರಾಗಿ ಮತ್ತು ಸುಮಾರು ೨೭ವರ್ಷಗಳ ಕಾಲ ಅದರ ಸಂಪಾದನೆ, ನಿರ್ವಹಣೆಯಲ್ಲಿ ತೊಡಗಿಕೊಂಡರು.

ದಾಖಲಾರ್ಹ ಕೃತಿಗಳು !

ಶ್ರೀನಾಥಶಾಸ್ತ್ರಿಗಳು ಬರೆದದ್ದಕ್ಕಿಂತ ಬರೆಸಿದ್ದು ಹೆಚ್ಚು. ಇಂದು ವಿಜ್ಞಾನ ಬರಹಗಾರರೆಂದು ಸ್ಥಾಪಿತರಾಗಿರುವ ಅನೇಕರು ತಮ್ಮ ಮೊದಲ ಬರಹಗಳನ್ನು ಕಣಾದದಲ್ಲಿ ಬರೆದದ್ದು, ಸತತವಾಗಿ ಉನ್ನತಮಟ್ಟದಲ್ಲಿ ಹೊರಬರುತ್ತಿರುವ ಪತ್ರಿಕೆ ಕಣಾದ

ಎಂಬುದು ಸಹ ಇವರ ವ್ಯಕ್ತಿತ್ವಕ್ಕೆ ಹೆಮ್ಮೆ ತರುವ ವಿಷಯ. ಇದರಲ್ಲಿ ವಿಜ್ಞಾನ ಪ್ರಬಂಧಸ್ಪರ್ಧೆ ಏರ್ಪಡಿಸಿ ವಿದ್ಯಾರ್ಥಿಗಳು ಹಾಗೂ ಸಾರ್ವಜನಿಕರಲ್ಲಿ ವಿಜ್ಞಾನ ವಿಷಯಗಳನ್ನು ಕುರಿತು ಬರೆಯುವ ಒತ್ತಾಸೆಯನ್ನು ತುಂಬಿದರು. ಐವತ್ತಕ್ಕೂ ಹೆಚ್ಚು ಜನಪ್ರಿಯ ವಿಜ್ಞಾನ ಲೇಖನಗಳನ್ನೂ ಬರೆದು, ನೂರಕ್ಕೂ ಹೆಚ್ಚು ಬಾನುಲಿ ಭಾಷಣಗಳು ಹಾಗೂ ಇತರೆ ಸಂದರ್ಶನ ಕಾರ್ಯಕ್ರಮಗಳಲ್ಲಿ ಭಾಗವಹಿಸಿ ವಿಜ್ಞಾನ ಪ್ರಸರಣಕಾರ್ಯದಲ್ಲಿ ತೊಡಗಿಕೊಂಡರು. ಗಣಕ ಯಂತ್ರಗಳು, ರೇಡಿಯೋ, ಧೂಮಕೇತು ಎಂಬ ಮೂರು ಜನಪ್ರಿಯ ವಿಜ್ಞಾನ ಪುಸ್ತಕಗಳನ್ನು ಕನ್ನಡಕ್ಕೆ ನೀಡಿದ್ದಾರೆ. ಇವುಗಳಲ್ಲಿ ಗಣಕ ಯಂತ್ರಗಳು ಎಂಬ ಪುಸ್ತಕ ಆ ಕ್ಷೇತ್ರದಲ್ಲೇ ಮೊಟ್ಟಮೊದಲ ಕನ್ನಡ ಪುಸ್ತಕ ಎಂಬುದು ಇವರ ತಜ್ಞತೆ, ದೂರದೃಷ್ಟಿ ಹಾಗೂ ವಿಜ್ಞಾನವನ್ನು ಜನಸಾಮಾನ್ಯರಿಗೆ ಮುಟ್ಟಿಸಬೇಕೆಂಬ ಕಳಕಳಿಯನ್ನು ತೋರಿಸುತ್ತದೆ.

ಅತ್ಯುತ್ತಮ ಸಂಘಟಕ-ಆಯೋಜಕ: ಕನ್ನಡ ಗಣಕ ಪರಿಷತ್ತಿನ ಸಂಸ್ಥಾಪಕ

ಕನ್ನಡ ಗಣಕ ಪರಿಷತ್ತು ಎಂಬ ಸಂಸ್ಥೆಯನ್ನು ಸ್ಥಾಪಿಸಿ, ಗಣಕದಲ್ಲಿ ಕನ್ನಡ ಬಳಕೆಯ ಕುರಿತಂತೆ ಸರ್ಕಾರಕ್ಕೆ ಸಲಹೆಗಾರರಾಗಿ, ನುಡಿ ತಂತ್ರಾಂಶದ ಅಭಿವೃದ್ಧಿಯ ಜವಾಬ್ದಾರಿ, ಕೇಂದ್ರ ಸರ್ಕಾರದ ಮಾಹಿತಿ ತಂತ್ರಜ್ಞಾನ ಇಲಾಖೆಯು ಏರ್ಪಡಿಸಿದ ಸಭೆಗಳಲ್ಲಿ ಕರ್ನಾಟಕ ಸರ್ಕಾರದ ಪರವಾಗಿ ಭಾಗವಹಿಸಿ ಕನ್ನಡಕ್ಕೆ ಸಂಬಂಧಿಸಿದಂತೆ ಸೂಕ್ತ ಸಲಹೆಗಳನ್ನು ನೀಡಿದರು, ಯೂನಿಕೋಡ್ ಸಂಕೇತಗಳ ಸಿದ್ಧತೆಗೆ ಸಂಬಂಧಿಸಿಯೂ ಸಲಹೆ ನೀಡಿದರು. ೧೯೮೬ರಲ್ಲಿ ನಾಲ್ಕುದಿನಗಳ ಕಾಲ ನಡೆದ ವಿಜ್ಞಾನ ಮತ್ತು ದರ್ಶನಶಾಸ್ತ್ರಗಳಲ್ಲಿ "ವಿಷಯ ಪ್ರತ್ಯಕ್ಷಮ್" ಮತ್ತು ೧೯೮೯ರಲ್ಲಿ "ವೇದಗಣಿತ" ಎಂಬ ವಿಶಿಷ್ಟ ರಾಷ್ಟ್ರೀಯ ಸಮ್ಮೇಳನಗಳನ್ನು ಆಯೋಜಿದರು. ೧೯೮೭ರಲ್ಲಿ ಬೆಂಗಳೂರಿನಲ್ಲಿ ಸಂಸ್ಕೃತದಲ್ಲಿ "ಜ್ಞಾನ ಪ್ರತಿನಿರೂಪಣೆ ಮತ್ತು ಅನುಮಾನ" ಎಂಬ ಗಣಕ-ಸಂಸ್ಕೃತ ಕುರಿತ ಅಂತರಾಷ್ಟ್ರೀಯ ಸಮ್ಮೇಳನವನ್ನು ಆಯೋಜಿಸಿದರು. ಕರ್ನಾಟಕ ಸರ್ಕಾರದ ವಿಜ್ಞಾನ ಮತ್ತು ತಂತ್ರಜ್ಞಾನ ಅಕಾಡೆಮಿಯ ಸದಸ್ಯರಾಗಿ ಅನೇಕ ಯೋಜನೆಗಳನ್ನು ಜಾರಿಗೆ ತಂದರು. ಪ್ರಮುಖವಾಗಿ ಪ್ರೌಢಶಾಲಾ ಶಿಕ್ಷಕರಿಗೆ ವಿಜ್ಞಾನ ಶಿಕ್ಷಣದ ತರಬೇತಿ ಕಾರ್ಯಕ್ರಮಗಳನ್ನು ಹಮ್ಮಿಕೊಂಡಿದ್ದು ರಾಜ್ಯದಾದ್ಯಂತ ಶಿಕ್ಷಕರಿಗೆ ಅನುಕೂಲಕರವಾಗಿ ಪರಿಣಮಿಸಿತು. ಇವರ ಸೇವೆಯನ್ನು ಪರಿಗಣಿಸಿ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ "ಕೆಂಪೇಗೌಡ ಪ್ರಶಸ್ತಿ" ನೀಡಿ ಗೌರವಿಸಿದೆ. ಕನ್ನಡ ಸಾಹಿತ್ಯ ಪರಿಷತ್ತಿನ ಜಿಲ್ಲಾ ಶಾಖೆಗಳು ಇವರನ್ನು ಸನ್ಮಾನಿಸಿವೆ.

ಹೀಗೆ ಈ ಎಪ್ಪತ್ತರ ಹಿರಿಯ ಜೀವ ಇಪ್ಪತ್ತರ ಯುವಕರನ್ನೂ ನಾಚಿಸುವಂತೆ ಕನ್ನಡ ಗಣಕ ಪರಿಷತ್ತಿನ ಕಚೇರಿಯಲ್ಲಿ ಕೆಲಸಕ್ಕೆ ತೊಡಗಿಕೊಂಡಿರುವುದನ್ನು ನೋಡಿದರೆ ಮುಂದಿನ ಪೀಳಿಗೆಗೆ ಇವರೇ ಬಹುದೊಡ್ಡ ಆದರ್ಶವ್ಯಕ್ತಿ ಎಂದೆನಿಸುತ್ತದೆ.

◆

ಸುಚರಿತರು

- ಎಂ.ಆರ್. ಸತ್ಯನಾರಾಯಣ, ಬೆಂಗಳೂರು
ಅಧ್ಯಕ್ಷರು, ಕರ್ನಾಟಕ ಗಮಕಕಲಾ ಪರಿಷತ್ತು,
೯೨೪೩೪೧೨೫೮೫,
mrsathyanarayana@yahoo.co.in

ಸ್ನೇಹ ವರ್ಗದಲ್ಲಿ ಅನೇಕ ಬಗೆ. ಅವುಗಳಲ್ಲಿ ಬೈಟು ಕಾಫಿ, ತಿಂಡಿ, ಊಟ, ಹರಟೆ, ಸಾಹಿತ್ಯ-ಸಂಗೀತ ತೀರಾ ಹತ್ತಿರ – ದೂರ ಹೀಗೆ ಬಗೆಬಗೆಯ ಅಭಿರುಚಿಯ ಸ್ನೇಹಿತರು ಒಬ್ಬರ ಜೀವಮಾನದಲ್ಲಿ ಲಭ್ಯವಾಗುತ್ತಾರೆ. ಸಾಹಿತ್ಯ ಸಂಸ್ಕೃತಿಯ ಚಿಂತಕರು ಈ ವರ್ಗದಲ್ಲಿ ಅತಿ ವಿರಳ. ಅದರಲ್ಲೂ ಸಜ್ಜನರು, ಬಹುಶ್ರುತರು, ಸಂಯಮಶೀಲರು, ಸಮಾಧಾನಿಗಳು ಈ ಎಲ್ಲ ಗುಣಗಳನ್ನು ಹೊಂದಿದ್ದು, ಯಾವುದಾದರೊಂದು ಮೌಲ್ಯಾಧಾರಿತ ವೃತ್ತಿಯನ್ನು ಅವಲಂಬಿಸಿರುವವರು ಮತ್ತೂ ವಿರಳ. ಇಂತಹ ವಿರಳರ ಸಾಲಿನಲ್ಲಿ ಬಹಳ ಸಜ್ಜನಿಕೆಯಿಂದ ಕೀರ್ತಿಗಳಿಸಿರುವ ಸರಳರಲ್ಲಿ ಸರಳರೆನಿಸಿರುವ **ಶ್ರೀ ಸಿ.ವಿ.ಶ್ರೀನಾಥಶಾಸ್ತ್ರಿ** ಹಾಗೂ **ಶ್ರೀ ಸಿ.ವಿ.ಗಿರಿಧರಶಾಸ್ತ್ರಿ** ಸಹೋದರರು ನಮ್ಮ (ಗಮಕಿ ರಾಘವೇಂದ್ರರಾಯರ) ಕುಟುಂಬದ ತುಂಬಾ ಆತ್ಮೀಯರು. ಇವರೀರ್ವರ ತೀರ್ಥರೂಪರಾದ ಶ್ರೀ ವಿಶ್ವನಾಥಶಾಸ್ತ್ರಿಗಳು ಕನ್ನಡ ಭಾಷೆಯಲ್ಲಿ ಪ್ರಾವೀಣ್ಯತೆ ಗಳಿಸಿದ್ದವರು, ಉತ್ತಮ ಉಪಾಧ್ಯಾಯರಾಗಿದ್ದವರು. ಅದೇ ಸುಸಂಸ್ಕೃತ ಪರಿಸರದಲ್ಲಿ ಬೆಳೆದ ತುಂಗೆಯ ಮಡಿಲ ಮಕ್ಕಳಾದ ಶ್ರೀನಾಥಶಾಸ್ತ್ರಿ ಹಾಗೂ ಅವರ ತಮ್ಮ ಗಿರಿಧರಶಾಸ್ತ್ರಿ ನಮ್ಮ ನಾಡಿನ ಪರಂಪರೆಯ ದಿವ್ಯ ಜ್ಯೋತಿಗಳು. ಶ್ರೀನಾಥ ಶಾಸ್ತ್ರಿಗಳು ವಿಜ್ಞಾನಿಗಳಾಗಿದ್ದು, **'ಕಣಾದ'** ಪತ್ರಿಕೆಯ ಸಂಪಾದಕರಾಗಿದ್ದು, **'ಕನ್ನಡ ನುಡಿ'** ತಂತ್ರಾಂಶ ರೂಪಿಸಿರುವುದರಲ್ಲಿ ಪ್ರಮುಖ ಪಾತ್ರ ವಹಿಸಿದವರು. ಅಲ್ಲದೆ ಲಲಿತಕಲೆಗಳಲ್ಲಿ ವಿಶೇಷ ಅಭಿರುಚಿಯನ್ನು ಬೆಳೆಸಿಕೊಂಡು, ಗಮಕ ಕ್ಷೇತ್ರದಲ್ಲಿ **ಶ್ರೀ ಎಂ.ರಾಘವೇಂದ್ರರಾಯರ** ಜೊತೆಗೂಡಿ ಕಾಯ-ವಾಚ-ಮನಸ ದುಡಿದವರು. ತಂದೆ ವಿಶ್ವನಾಥಶಾಸ್ತ್ರಿಗಳು ಕಾಲವಾದ ನಂತರ, ರಾಘವೇಂದ್ರರಾಯರನ್ನೇ ತಂದೆಯ ಸ್ಥಾನದಲ್ಲಿ ತುಂಬು ಭಾವನೆಯಿಂದ ಕಂಡವರು. ಸಂತೋಷದ ಸಂಗತಿಯೆಂದರೆ ತಾವು ನಡೆದು ಬಂದ ಹಾದಿಯಲ್ಲೇ ತಮ್ಮ ಮಗಳು ಶ್ರೀಮತಿ ಕ್ಷಮಾಳನ್ನು ಉತ್ತೇಜಿಸಿ ವಿಜ್ಞಾನ ಕ್ಷೇತ್ರದಲ್ಲಿ ಆಕೆಯ ಸಾಧನೆಗೆ ಇಂಬು ಕೊಟ್ಟವರು. ಶಾಸ್ತ್ರಿಗಳ ಕುಟುಂಬ ಸಾತ್ವಿಕ ಸಮಾಜದ ಪ್ರತೀಕ. ಒಂದು ಪರಂಪರೆಯ ಪ್ರತಿನಿಧಿ. ಕುಟುಂಬದವರೆಲ್ಲರ ಪರಿಚಯ ಇರುವ ನನಗೆ ಇಂಥಾ ಕುಟುಂಬವೂ ನಮ್ಮ ಸಮಾಜದಲ್ಲಿ ಇರುವುದಕ್ಕೆ ಸಾಧ್ಯವೇ? ಎಂದು ಆಗಾಗ ಅನ್ನಿಸಿದ್ದುಂಟು. ಕಾರಣ, ಹೆಣ್ಣುಮಕ್ಕಳಾದಿಯಾಗಿ ಎಲ್ಲರೂ ಸಮಾಧಾನ ಚಿತ್ತರೇ.

ನಾನು ೪೫ ದಿನಗಳ ಕಾಲ ಕಾರ್ಯನಿಮಿತ್ತ ದೆಹಲಿಗೆ ಹೋಗಿದ್ದೆ, ಆಗ ಗಿರಿಧರಶಾಸ್ತ್ರಿ ಅವರು ತಾಯಿಯವರೊಂದಿಗೆ ದೆಹಲಿಯಲ್ಲೇ ವಾಸ್ತವ್ಯ ಹೂಡಿದ್ದರು. ಶ್ರೀನಾಥಶಾಸ್ತ್ರಿಗಳಿಂದ ಗಿರಿಧರಶಾಸ್ತ್ರಿ ಅವರ ವಿಳಾಸ ಪತ್ತೆ ಮಾಡಿ, ಅವರ ನಿವಾಸಕ್ಕೆ ಎರಡು ಬಾರಿ ಹೋಗಿದ್ದರ ನೆನಪು ಈಗಲೂ ನನ್ನನ್ನು ಬಹುವಾಗಿ ಕಾಡಿಸುತ್ತದೆ. ನಾನು ಗಿರಿಧರಶಾಸ್ತ್ರಿ ಅವರ ಮನೆಗೆ ಭೇಟಿ ಕೊಟ್ಟ ಸಂದರ್ಭದಲ್ಲಿ ಅವರ ಮನೆಯಲ್ಲಿ ದಿನನಿತ್ಯ ಬಾಳೆಎಲೆ ಊಟದ ಸಂತರ್ಪಣೆ. ಅಲ್ಲಿ ಅವರಿವರೆಂಬ ಭೇದವಿರಲಿಲ್ಲ. ಅಷ್ಟೂ ಜನಕ್ಕೂ ಅವರ ತಾಯಿಯವರದ್ದೇ ಅಡುಗೆ! ಬಂದವರನ್ನು ಆರೈಕೆಮಾಡಿ, ಸಂತೃಪ್ತಿಗೊಳಿಸಿ, ಹಾರೈಸುತ್ತಿದ್ದ ಆ ಮಹಾತಾಯಿ. ಆ ಸಂದರ್ಭದಲ್ಲಿ ದೆಹಲಿಯಲ್ಲಿ ನಡೆಯುತ್ತಿದ್ದ ಹಿಂದೂಸ್ತಾನಿ ಸಂಗೀತ ಕಚೇರಿಗಳಿಗೆ ಗಿರಿಧರಶಾಸ್ತ್ರಿ ಅವರೊಂದಿಗೆ ಹೋಗಿದ್ದೆ. ನನಗೆ ನೆನಪಿದ್ದಂತೆ ಆ ಸಂಗೀತ ಕಚೇರಿ ನಡೆಸಿಕೊಟ್ಟವರು **ಪಂ.ಜಸ್‌ರಾಜ್ ಹಾಗೂ ಪಂ. ಭೀಮಸೇನ ಜೋಷಿ.** ಸಮಯ ರಾತ್ರಿ ೯ ರಿಂದ ೧ ಗಂಟೆ. ಹಿಂದೂಸ್ತಾನಿ ಸಂಗೀತ ಕೇಳಲು ಬಂದ ಆ ಜನಸ್ತೋಮವನ್ನು ಕಂಡು ನಾನು ನಿಬ್ಬೆರಗಾಗಿದ್ದೆ. ರಾಗ ರಸದೊಂದಿದೆ ವಿವಿಧ ರಸಾಯನ ಆ ಆವರಣದಲ್ಲಿ! ಕಲಾವಿದರಿಗೆ ಆ ಜನ ಕೊಟ್ಟ ಮರ್ಯಾದೆ, ಮನಃಪೂರ್ವಕವಾಗಿ ಮಾಡಿದ ದೀರ್ಘದಂಡ ನಮಸ್ಕಾರಗಳನ್ನು ನೋಡಿ, 'ಅಲ್ಲಿ ಸೇರಿದ್ದ ಕೇಳುಗ ಮಂದಿ ನಮ್ಮ ಸಂಸ್ಕೃತಿಯ ಮುಂದಿನ ದಿನಗಳ ಪ್ರತಿನಿಧಿಗಳು' ಎಂದು ನನ್ನ ಮನಸ್ಸು ಹೇಳಿದ್ದು ಇನ್ನೂ ಮಾಸಿಲ್ಲ. ಇಂತಹ ಕಚೇರಿ ನೋಡಲು ಅವಕಾಶಮಾಡಿಕೊಟ್ಟ ಗಿರಿಧರಶಾಸ್ತ್ರೀ ಅವರಿಗೆ ನಾನು ಚಿರಋಣಿ. **ಗಿರಿಧರಶಾಸ್ತ್ರಿ** ಅವರು ಸಂಸ್ಕೃತ ಪ್ರಾಧ್ಯಾಪಕರು. ಅನೇಕ ಗುಣವಿಶೇಷಣಗಳ ಕೇಂದ್ರ ಬಿಂದು ಅವರು. ದೆಹಲಿಯಲ್ಲೇ ಮತ್ತೊಮ್ಮೆ ನಾವಿಬ್ಬರೂ ಸಂಗೀತ ಕೇಳಲು ಕಾರಿನಲ್ಲಿ ಹೋಗುತ್ತಿದ್ದಾಗ ಮತ್ತೊಂದು ಕಡೆಯಿಂದ ತುಸು ವೇಗದಿಂದ ಕಾರು ಚಲಾಯಿಸುತ್ತಿದ್ದವನನ್ನ ಕಂಡ ಶಾಸ್ತ್ರಿಗಳು, ತಮ್ಮ ಮಾರುತಿಯನ್ನು ಕೊಂಚ ನಿಧಾನಿಸಿ ಬ್ರೇಕ್ ಹಾಕಿದ ನಂತರ, ಸ್ಟೇರಿಂಗ್‌ನಿಂದ ಕೈಗಳನ್ನು ತೆಗೆದು, ನಗುಮೊಗದಿಂದ ಆ ಕಾರಿನವನೇ ಮುಂದೆ ಹೋಗಲು ಅನುವು ಮಾಡಿಕೊಟ್ಟ ಘಟನೆ ಎಂಥವರಿಗೂ ಒಂದು ನೀತಿ ಪಾಠವಿದ್ದಂತೆ. ಯಾವುದೇ ರೀತಿಯ ಕೋಪಕ್ಕೂ, ಘರ್ಷಣೆಗೂ ಒಳಗಾಗುವಂಥ ಸನ್ನಿವೇಶದಿಂದ ಬಹು ದೂರ ಉಳಿಯುವ ಮನಸ್ಸು ಶಾಸ್ತ್ರಿಯವರದಾಗಿತ್ತು. ನನ್ನ ೪೫ ದಿನಗಳ ಅವಧಿಯಲ್ಲಿ ಆ ಎರಡೂ ದಿನಗಳು ಮರೆಯುವಂಥದ್ದಲ್ಲ. ದೆಹಲಿಯಲ್ಲಿ ನನ್ನ ವಾಸ್ತವ್ಯ ಇದ್ದದ್ದು ಗಿರಿಧರಶಾಸ್ತ್ರಿಗಳ ಮನೆಯಿಂದ ಕೇವಲ ೪೦ ಕಿ.ಮೀ.ದೂರದಲ್ಲಿ. ತಾಯಿ ಮಗ ಇವರಿಬ್ಬರನ್ನೂ ದೆಹಲಿಯಲ್ಲಿ ನೋಡುವ ಸೌಭಾಗ್ಯ ನನಗೆ ಒದಗಿದ್ದು ಆಕಸ್ಮಿಕವೇ ಆದರೂ ಅದೊಂದು ನನ್ನ ಜೀವಮಾನದಲ್ಲಿ ಎಂದೂ ನೆನಪಿನಲ್ಲಿರಬಹುದಾದ ಘಟನೆಯಾಗಿ ಉಳಿದಿದ್ದು ನನ್ನ ಪೂರ್ವ ಸುಕೃತವಷ್ಟೇ !

◆

ವಿಶಿಷ್ಟ ಸಂಶೋಧನಾ ವಿದ್ಯಾರ್ಥಿ ಗಿರಿಧರ್ !

– ಪ್ರೊ. ಆರ್.ಪೂರ್ಣಿಮಾ, ಮೈಸೂರು
ಪ್ರಾಧ್ಯಾಪಕರು, ಕರಾಮುವಿವಿ, ೯೬೩೨೩೧೮೫೨೪

ನಾನು ಮೊದಲ ಬಾರಿಗೆ ನನ್ನ ನೆಚ್ಚಿನ ವಿದ್ಯಾರ್ಥಿಯಾದ ಗಿರಿಧರ್‌ರನ್ನು ನೋಡಿದ್ದು ೨೦೦೦ ಇಸವಿಯಲ್ಲಿ ನಡೆದ ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ (ಕರಾಮುವಿ) ಸಂಪರ್ಕ ಕಾರ್ಯಕ್ರಮದಲ್ಲಿ. ಆಗ ಸಂಪರ್ಕ ಕಾರ್ಯಕ್ರಮ ಕೇವಲ ಮೈಸೂರಿನಲ್ಲಿ ಮಾತ್ರ ಏರ್ಪಾಡಾಗುತ್ತಿತ್ತು. ಎಲ್ಲಾ ವಿದ್ಯಾರ್ಥಿಗಳು, ಎಲ್ಲೇ ಇದ್ದರೂ, ಮೈಸೂರಿಗೆ ಬರಲೇ ಬೇಕಾಗುತ್ತಿತ್ತು. ಆದುದರಿಂದ ಒಂದು ಕ್ಲಾಸ್‌ನಲ್ಲಿ ನೂರಾರು ವಿದ್ಯಾರ್ಥಿಗಳಿರುತ್ತಿದ್ದರು. ನಾನು ಮೊದಲ ಬಾರಿಗೆ ಪ್ರಥಮ ಎಂ.ಎ. ತರಗತಿಗೆ ಪಾಠ ಮಾಡಲು ಬಹಳ ದೊಡ್ಡದೇ ಆದ ಹಾಲಿನೊಳಗೆ ಹೋದೆ. ನೂರಾರು ವಿದ್ಯಾರ್ಥಿಗಳಿದ್ದರೂ ನನ್ನ ದೃಷ್ಟಿಗೆ ಬಿದ್ದ ಮೊದಲನೆಯ ವಿದ್ಯಾರ್ಥಿ ಗಿರಿಧರ್. ಅವರನ್ನು ಕಂಡ ಕೂಡಲೇ ನನ್ನ ಮನಸ್ಸಿಗೆ ಬಂದ ಭಾವನೆ ಏನೆಂದರೆ, 'ಹಿಮಾಲಯದ ಪರ್ವತ ಶ್ರೇಣಿಯಲ್ಲಿ ತಪಸ್ಸು ಮಾಡಬೇಕಾಗಿದ್ದವರು, ಇಲ್ಲಿಗೇಕೆ ಬಂದರು?' ಎಂದು. ಅಂದು ನಾನು ನೋಡಿದ ಅವರ ಸಾತ್ವಿಕ ತೇಜಸ್ಸಿನ ಮುಖಭಾವ ಇಂದಿಗೂ ಹಸಿರಾಗೇ ಉಳಿದಿದೆ. ನಮ್ಮ ದೂರ ಶಿಕ್ಷಣದಲ್ಲಿ ನಾವು ಸಹಸ್ರಾರು ವಿದ್ಯಾರ್ಥಿಗಳಿಗೆ ಪ್ರತಿ ವರ್ಷವೂ ಪಾಠ ಮಾಡಿದರೂ, ಯಾರ ನಿಕಟ ಪರಿಚಯವೂ ನಮಗೆ ಆಗಿರುವುದಿಲ್ಲ. ನಾವು ರಚಿಸಿದ ಪಾಠಗಳ ಪ್ರಯೋಜನ, ಅವರು ಪಡೆದುಕೊಂಡಿದ್ದರೂ, ನಮ್ಮ ಭೇಟಿ ಎಷ್ಟೋ ಬಾರಿ ಸಂಪರ್ಕ ಕಾರ್ಯಕ್ರಮಕ್ಕೆ ಮಾತ್ರ ಸೀಮಿತವಾಗಿಬಿಡುತ್ತದೆ. ಈ ಕಾರಣದಿಂದ ನಾನು ಮತ್ತೆ ಗಿರಿಧರ್‌ನ ನೋಡಿದ್ದು ಎಷ್ಟೋ ತಿಂಗಳುಗಳ ನಂತರ. ಮುಂದೊಂದು ದಿನ ನಾನು canteen ನಲ್ಲಿ ಕಾಫಿ ಕುಡಿಯುತ್ತಿದ್ದಾಗ, ಗಿರಿಧರ್ ನನ್ನ ಬಳಿಗೆ ಬಂದು, ತಮಗೆ ಸಂಶೋಧನೆ ಮಾಡಬೇಕೆಂಬ ಬಯಕೆ ತೀವ್ರವಾಗಿದೆ ಎಂದರು. ನಾನು ಎರಡೇ ಮಾತಿನಲ್ಲಿ "ಸರಿ ಹಾಗಾದರೆ, ಮಾಡಿ" ಎಂದೆ. ಅಲ್ಲಿಗೇ ನಿಲ್ಲಿಸದ ಅವರು "ದಯವಿಟ್ಟು ನೀವೆ ನನ್ನ ಮಾರ್ಗದರ್ಶಕರಾಗಬೇಕು" ಎಂದು ಸವಿನಯದಿಂದ ಕೇಳಿಕೊಂಡರು. "ಆಗಲಿ, ಆದರೆ ನಾನು ಬಹಳ "strein guide" ಅಂದೆ. "ಈ ವಿಷಯ ನನಗೆ ಆಗಲೇ ತಿಳಿದಿದೆ madam. ನಾನು ನೀವು ಹೇಳಿದ ಹಾಗೆಯೇ ಮಾಡುತ್ತೇನೆ" ಎಂದರು. ಆಗ ಅವರು ತಮಗೆ ಹೊಳೆದಿದ್ದ, ಸಂಸ್ಕೃತ ಸಾಹಿತ್ಯಕ್ಕೆ ಸಂಬಂಧಿಸಿದ್ದ ಹಾಗೂ translation discipline ನನ್ನು ಅಳವಡಿಸಿಕೊಂಡಿದ್ದ ಒಂದು topic ಹೇಳಿದರು. ನನಗೆ ಸಂಸ್ಕೃತ ತಿಳಿಯದೇ ಇದ್ದುದರಿಂದ, ಈ topic ನನಗೆ ಸಮ್ಮತವಿಲ್ಲವೆಂದೆ. ಆಗಲೇ

ನನಗೆ ತಿಳಿದದ್ದು ಗಿರಿಧರ್ ಸಂಸ್ಕೃತದಲ್ಲಿ ಎಂ.ಎ. ಮಾಡಿದ್ದರು ಎಂದು. ನಂತರ topic identify ಮಾಡಲು ಅವರು ಸುಮಾರು ೧ ವರ್ಷ ತೆಗೆದುಕೊಂಡರು. ಆಗಾಗ್ಗೆ ನನಗೆ phone ಮಾಡುತ್ತ "ಇದರ ಮೇಲೆ ಮಾಡಿದರೆ ಹೇಗೆ, ಅದು ಹೇಗೆ, ಇದು ಹೇಗೆ?" ಎಂದು ಚರ್ಚೆ ಮಾಡುತ್ತಲೇ ಇದ್ದರು. ತಿಂಗಳುಗಳು ಉರಳಿದರೂ, topic ನ್ನು ಹುಡುಕುವ ತಮ್ಮ ಪ್ರಯತ್ನವನ್ನು ನಿಲ್ಲಿಸದೆ, ಕಿಂಚಿತ್ತು ಬೇಸರ ಪಡದೆ, ಜ್ಞಾನ ದಾಹದಿಂದ ತುಂಬಿದ್ದ ಅವರಿಗೆ ನಾನು, ಒಂದು ದಿನ ನನ್ನ ಮನಸ್ಸಿಗೆ ಬಹಳಷ್ಟು ಹಿಡಿಸಿದ್ದ topic ನ್ನು ಅವರ ಜೊತೆ ಚರ್ಚಿಸಿದೆ. ಮುಗ್ಧತೆಯ ಅಪರಾವತಾರ ಎನ್ನಿಸುವ ಅವರು typical ನಗುವನ್ನು ನಗುತ್ತ 'ಈ topic ನನಗೂ ತುಂಬ ಹಿಡಿಸಿತು ಮೇಡಮ್. ಅದರ ಬಗ್ಗೆ ಓದಿ, ಆಲೋಚಿಸಿ ಕೆಲವು ದಿನಗಳ ನಂತರ ಮತ್ತೆ ಬರುತ್ತೇನೆ' ಎಂದರು. ನಾನು ಅವರಿಗೆ ಹೇಳಿದ್ದು ಇಂಗ್ಲೀಷ್ ಭಾಷೆಯಲ್ಲಿ ಲಭ್ಯವಿರುವ ೫ ದಿಗ್ಗಜ ಕನ್ನಡ ಸಾಹಿತಿಗಳ ೬ ಕಾದಂಬರಿಗಳು. ವರ್ಷಗಳು ಉರುಳುತ್ತ ಹೋದ ಹಾಗೆ, ನನಗೆ ಅರಿವಾಗುತ್ತ ಬಂದದ್ದು ಗಿರಿಧರ್‌ರವರು ಸಂಸ್ಕೃತ, ಕನ್ನಡ ಹಾಗೂ ಇಂಗ್ಲಿಷ್ ಸಾಹಿತ್ಯವನ್ನು ಎಷ್ಟು ಆಳವಾಗಿ ತಿಳಿದಿದ್ದರು ಎಂದು. ಈ ರೀತಿಯ ಸಾಧನೆ ಈಗಂತೂ ನಿಜಕ್ಕೂ ವಿರಳ. ಇಷ್ಟೆಲ್ಲ ಸಾಹಿತ್ಯ ಮತ್ತು ಭಾಷೆಗಳ ಮೇಲೆ ಹಿಡಿತವಿದ್ದರೂ, ಗಿರಿಧರ್‌ಗೆ ತಿಳಿಯದೆ ಇದ್ದ ಎರಡು ಪದಗಳು "ಆಗೋಲ್ಲ" ಹಾಗೂ "ಇಲ್ಲ" ಯಾವತ್ತೂ ಅವರು "ಆಗೋದಿಲ್ಲ ಮೇಡಮ್" ಎಂದು ಹೇಳಿಲ್ಲ. ಅವರ ಬಳಿಗೆ ಯಾರೇ ವಿದ್ಯಾದಾಹದಿಂದ ಹೋಗಿದ್ದರೂ, ಅವರಿಗೆ "ಇಲ್ಲ" ಎಂದಿಲ್ಲ. ತಮ್ಮ ಅಗಾಧವಾದ ಪಾಂಡಿತ್ಯವನ್ನು ತಮ್ಮ ಸಹಸ್ರ ಸಹಸ್ರ ಶಿಷ್ಯರಿಗೆ, ಅದೂ ಗಾಯಿತ್ರಿ ಮಂತ್ರವೇ ಇರಬಹುದು, ವೇದಪಾಠವೇ ಇರಬಹುದು, ಸಾಹಿತ್ಯವೇ ಇರಬಹುದು, ಭಾಷಾ ಕೌಶಲ್ಯಗಳನ್ನು ಅರಿಯುವುದೇ ಇರಬಹುದು, ಗಿರಿಧರ್‌ರವರು ನಿಸ್ವಾರ್ಥವಾಗಿ ಹಂಚಿಕೊಳ್ಳುತ್ತಲೇ ಬಂದಿದ್ದಾರೆ. ನಾನು ಚಿಕ್ಕಮಗಳೂರಿನ ಯಾವುದೇ ತಾಲ್ಲೂಕಿಗೆ ಹೋದರೂ, (ಅಲ್ಲಿ ಪ್ರಾಥಮಿಕ ಶಾಲೆಯಿಂದ, ಕಾಲೇಜಿನಲ್ಲಿ ಪಾಠ ಮಾಡುತ್ತಿರುವ ಉಪಾಧ್ಯಾಯರು) ಗಿರಿಧರ್‌ರವರಿಂದ ಮಾರ್ಗದರ್ಶನ ಪಡೆದುಕೊಂಡವರೇ. ನನಗೆ ಸಂಗೀತದಷ್ಟು ಅಪ್ಯಾಯಮಾನವಾಗಿ ಕೇಳಿ ಬರುವ ಮಾತು "ಮೇಡಮ್! ಈವತ್ತು ನಾವು ಮೇಷ್ಟ್ರುಗಳಾಗಿರುವುದು ಗಿರಿಧರ ಸರ್‌ರವರಿಂದ. ನಮಗೆ ಏನಾದರೂ ಅರ್ಥವಾಗದೇ ಇದ್ದರೆ, ನಿರ್ಭೀತಿಯಿಂದ, ನಿಸ್ಸಂಕೋಚದಿಂದ, ದಿನ, ಗಳಿಗೆ, ಯಾವುದನ್ನೂ ನೋಡದೆ ಅವರ ಬಳಿಗೆ ಹೋಗುತ್ತಿದ್ದೆವು. ಅವರ ಮಗುವಿನಂತ ಮನಸ್ಸು ಮತ್ತು ಮುಗುಳ್ನಗೆ ನಮ್ಮನ್ನು ಎಂದೆಂದಿಗೂ ಸ್ವಾಗತಿಸುತ್ತಿತ್ತು. ನಾವು ಇಂದು ಹೀಗಿರುವುದು, ಅವರಿಂದಲೇ" ಎಂದು.

ನಾನು ಕರಾಮುವಿಯ ಇಂಗ್ಲಿಷ್ ವಿಭಾಗದ ಅಧ್ಯಕ್ಷಳಾಗಿದ್ದಾಗ ಗಿರಿಧರ್‌ರವರನ್ನು ಹಾಸನ, ಶಿವಮೊಗ್ಗ, ಉಡುಪಿ ಕ್ಷೇತ್ರಗಳಲ್ಲಿ ಎಂ.ಎ.ತರಗತಿಗಳಿಗೆ ಪಾಠ ಮಾಡಲು ಆಹ್ವಾನಿಸಿದ್ದೆ. ಅವರು ಉಡುಪಿಯಲ್ಲಿ ತರಗತಿ ತೆಗೆದುಕೊಂಡ ಕೆಲವು ತಿಂಗಳುಗಳ ನಂತರ ನನ್ನ ಸಹೋದ್ಯೋಗಿಯಾಗಿದ್ದ ಪ್ರೊ. ರಾಧಾಕೃಷ್ಣ ಭಟ್ಟರು ಹೇಳಿದರು "ಮೇಡಂ ನಾನು ಯಾರದೋ ವಿವಾಹಕ್ಕೆಂದು ಉಡುಪಿಗೆ ಹೋಗಿದ್ದೆ. ಅಲ್ಲಿ ಇಂಗ್ಲಿಷ್ ವಿಭಾಗದ ವಿದ್ಯಾರ್ಥಿನಿಯೊಬ್ಬಳ ಭೇಟಿಯಾಯಿತು. ಆಕೆ ನಿಮ್ಮ ವಿದ್ಯಾರ್ಥಿಯಾದ ಗಿರಿಧರ್‌ರವರು ಪಾಠ ಮಾಡುವ ರೀತಿಯನ್ನು ನೆನೆದು, ಅವರ ವೈಖರಿಯನ್ನು, ಅವರ ಅಪಾರ ಜ್ಞಾನವನ್ನು ಕೊಂಡಾಡಿದರು" ಎಂದು. ಇದು ನನಗೆ ಎಷ್ಟು ತೃಪ್ತಿ ಉಂಟುಮಾಡಿತೆಂದು ಹೇಳಬೇಕಾಗಿಲ್ಲ. ಒಮ್ಮೆ ನೀವು ಚಿಕ್ಕಮಗಳೂರಿನಿಂದ ಶೃಂಗೇರಿಗೆ ಹೋಗುವ ಬೆಳಗಿನ ಬಸ್ಸಿನಲ್ಲಿ ಪ್ರಯಾಣ ಮಾಡಿ. ಆ ಬಸ್ಸು ಸಿ.ವಿ. ಗಿರಿಧರ್ (ಸಿವಿಜಿ) ಪಾಠ ಮಾಡುವ J.C.B.M College ವಿದ್ಯಾರ್ಥಿಗಳಿಂದ ತುಂಬಿರುತ್ತದೆ. ಆ ವಿದ್ಯಾರ್ಥಿಗಳ ಬಾಯಿಂದ ನೀವು ಕೇಳಲೇಬೇಕು, ಅವರ ನೆಚ್ಚಿನ ಗುರುಗಳಾದ ಸಿವಿಜಿಯವರ ಗುಣಗಾನ.

ಮೆರವಣಿಗೆಗಳಲ್ಲಿ ಪಾಲ್ಗೊಳ್ಳದೆ, ಬಾವುಟಗಳನ್ನು ಹಿಡಿಯದೆ, ಸ್ತ್ರೀ ಸಮಾನತೆಯನ್ನು, ಮುಕ್ತ ಚಿಂತನೆಯನ್ನು ಗಿರಿಧರ್ ಗೌರವಿಸುತ್ತಲೇ ಬಂದಿದ್ದಾರೆ. ಅವರ ಉಡುಗೆ ತೊಡುಗೆ ೨೦೦ ವರ್ಷಗಳಷ್ಟು ಹಿಂದಿನದಾದರೂ, ಅವರ ಆಲೋಚನೆ ಹಾಗೂ ದೃಷ್ಟಿ ೨೦೦ ವರ್ಷಗಳ ಆಚೆಯದು. ಒಂದು ಕಡೆ ಪಂಚೆಯನ್ನು ಉಟ್ಟರೆ, ಮತ್ತೊಂದೆಡೆ backpack notebook, mobile ಗಳ ಬಳಕೆ. ಶೃಂಗೇರಿ ಮಠದ ಆಡಳಿತಾಧಿಕಾರಿ ಆಗಿದ್ದಾಗ ಗನ್ ಹಿಡಿದು ಢಿಶುಂ ಢಿಶುಂ ಮಾಡುವುದನ್ನೂ ಕಲಿತಿದ್ದರಂತೆ. ಸೈಕ್ಲಿಂಗ್ ಕೂಡ ಬರುವುದಿಲ್ಲವೇನೋ ಎನ್ನುವ ಹಾಗೆ ಕಂಡರೂ, ನೂರಾರು ಮೈಲಿಗಳನ್ನು ಸತತವಾಗಿ drive ಮಾಡುವ ಸಾಮರ್ಥ್ಯವನ್ನು ಹೊಂದಿರುವವರು. ಸಿವಿಜಿಯವರು ತಂತ್ರಜ್ಞಾನವನ್ನು ತಿಳಿದುಕೊಳ್ಳುತ್ತ ಅಳವಡಿಸಿಕೊಳ್ಳುತ್ತ ಇದ್ದರೂ, ಅವರು ಅದರ ಸೇವಕನಾಗಿಲ್ಲ. ಪುಸ್ತಕಗಳನ್ನು ಓದುತ್ತಿದ್ದು, ವಿವಿಧ ವಸ್ತು ವಿಷಯಗಳ ಬಗ್ಗೆ ಬರೆಯುವುದನ್ನು ಮಾಡುತ್ತಲೇ ಬಂದಿದ್ದಾರೆ. ಅವರ ಮಹಾಪ್ರಬಂಧದಲ್ಲಿ ಮಾತ್ರವಲ್ಲದೆ, ಅವರ ಲೇಖನಗಳಲ್ಲಿ, ಉಪನ್ಯಾಸಗಳಲ್ಲಿ, ಜ್ಞಾನವಾಣಿಯಿಂದ ಬಿತ್ತರಿಸಿದ ಪಾಠಗಳಲ್ಲಾಗಲಿ, UG/PG class ಗಳಲ್ಲಿ ಅವರು ಮಾಡುವ ಪಾಠದ ರೀತಿ ನೀತಿ ಅನುಕರಣೆಗೆ ಯೋಗ್ಯವಾದದ್ದು. Intert extability close ಹಾಗೂ 'Intensive and Extensive Reading ಅವರ ಅಸ್ತ್ರಗಳು. ಕಿರಿಯರಿಗೆ ಪಾಠ ಮಾಡುವಾಗ, ಅವರಿಗೆ ನಿಲುಕುವಂತೆ, ವಯಸ್ಕರಿಗೆ ಮಾಡುವಾಗ ಅವರಿಗೆ ಬೇಕಾಗುವ ಹಾಗೆ ತಯಾರಿ ಮಾಡಿ ವ್ಯಾಖ್ಯಾನ ಮಾಡುತ್ತಾರೆ. ಲಲಿತ ಕಲೆಯಾಗಲಿ, ಕ್ರೀಡೆಗಳಾಗಲಿ ಅವರ ಒಲವಿನಿಂದ ದೂರ

ಉಳಿದಿಲ್ಲ. ವಿಜ್ಞಾನ ಹಾಗೂ ಸಾಹಿತ್ಯ ಕ್ಷೇತ್ರಗಳೆರಡರಲ್ಲೂ ಆಸಕ್ತರು ಹಾಗೂ ಅವುಗಳ ಪೋಷಕರು. ಅವರೊಂದಿಗೆ ಚರ್ಚೆ ಮಾಡಬೇಕು, ತಿಳಿಸಿ, ತಿಳಿದುಕೊಳ್ಳಬೇಕೆಂದು ಸರಸ್ವತಿ ಮಂದಿರದ ಹಾಗೆ ಇರುವ, ಶೃಂಗೇರಿಯಲ್ಲಿರುವ ಅವರ ವಸತಿ–ವಿದ್ಯಾಕೇಂದ್ರಕ್ಕೆ ಬರುವವರಲ್ಲಿ, ಏನೂ ತಿಳಿಯದೆ, ಆದರೆ ತಿಳಿದು ಕೊಳ್ಳುವ ದಾಹವಿರುವ ಅಪರಿಚಿತರಿಂದ ಹಿಡಿದು ಅಮೆರಿಕಾದಿಂದ ಬರುವ fulbright ಸಂಶೋಧಕರೂ ಇದ್ದಾರೆ. ಎಂದಿಗೂ ಆತ್ಮಸಂತೃಪ್ತಿಯನ್ನು ಬೆಳಸಿಕೊಳ್ಳದೆ, ನಿಂತ ನೀರಾಗಿ ಉಳಿಯಲು ಇಷ್ಟಪಡದೆ, ತಾವೂ ಕಲಿಯುತ್ತ, ಕಲಿಸುತ್ತ ಬಂದಿರುವ ಗಿರಿಧರ್ ಅಪೂರ್ವ ವಿದ್ಯಾರ್ಥಿ.

ಒಂದು ಘಟನೆಯನ್ನು ನಿಮ್ಮೊಂದಿಗೆ ಹಂಚಿಕೊಳ್ಳಲೇಬೇಕು. ಸಂಶೋಧನೆ ಮಾಡುತ್ತಿರುವ ವಿದ್ಯಾರ್ಥಿಗಳು ೬ ತಿಂಗಳಿಗೊಮ್ಮೆ ಸಂಶೋಧನ ವರದಿಯನ್ನು ನೀಡಬೇಕು. ಒಮ್ಮೆ ಅವರು ಸಹಿ ಮಾಡಿಸಿಕೊಳ್ಳಲು ತಮ್ಮ ವರದಿಯನ್ನು ತಂದರು. ಅದನ್ನು ಓದಿ ನಾನು ಸಹಿ ಮಾಡಿದೆ. ಅದನ್ನು ತೆಗೆದುಕೊಂಡರೂ, ಅವರು ನಿಂತೇ ಇದ್ದರು. ನಾನು ಏಕೆ ಇನ್ನು ನಿಂತಿದ್ದಾರೆಂದು ಕೇಳಿದೆ. ಎಷ್ಟು ಜ್ಞಾನಿಗಳಾಗಿದ್ದರೂ, ಒಬ್ಬ ಹದಿಹರೆಯದ ವಿದ್ಯಾರ್ಥಿಯ ಹಾಗೆ ಕಳೆದ ಬಾರಿ ನೀವು 'satisfactory' ಎಂದು ಬರೆದಿದ್ದೀರಿ, ಆದರೆ ಈ ಬಾರಿ ಹಾಗೆ ಬರೆದಿಲ್ಲ. ಕೇವಲ ನಿಮ್ಮ ಸಹಿ ಇದೆ, ಅದಕ್ಕೆ ನಿಂತಿದ್ದೀನಿ" ಎಂದರು. ನನಗೆ ಒಂದು ಕಡೆ ಮನಸ್ಸು ಕರಗಿದರೂ, "ನನಗೆ ನಿಮ್ಮ ಈ ಆರು ತಿಂಗಳ ಕೆಲಸ ತೃಪ್ತಿ ತಂದಿಲ್ಲ. ಆದುದರಿಂದ ಅದನ್ನು ಬರೆಯಲು ಸಾಧ್ಯವಿಲ್ಲ" ಎಂದೆ. ಅದಕ್ಕೆ ಅವರು "Madam, ನಿಮಗೆ ತಿಳಿದ ಹಾಗೆ ನನಗೆ ಆರೋಗ್ಯ ಅಷ್ಟು ಚೆನ್ನಾಗಿರಲಿಲ್ಲ" ಎಂದರು. ಅದಕ್ಕೆ ನಾನು "that's your problem, not mine. ನನ್ನ ಮನಸ್ಸಿನ ವಿರುದ್ಧ ನಾನು ಬರೆಯುವುದಿಲ್ಲ" ಎಂದೆ. ಅವರು ಅಲ್ಲಿಂದ ನಿರ್ಗಮಿಸಿದ ಮೇಲೆ, ನಾನು ಅಷ್ಟೊಂದು ನಿಷ್ಠುರ ಆಗಿರಬಾರದಾಗಿತ್ತು ಎಂದು ಅನ್ನಿಸಿದರೂ, ನನ್ನ ಈ ಸ್ವಭಾವ ಅವರನ್ನು ಸಂಶೋಧನ ಕ್ಷೇತ್ರದಲ್ಲಿ ಮತ್ತಷ್ಟು ಗಟ್ಟಿಯಾಗಿ ಕೆಲಸ ಮಾಡಲು ಹುರಿದುಂಬಿಸಿತು. ಅವರು ಸಂಶೋಧನೆ ಮಾಡಿದ topic "The sclerosis and the suffering: A study of selected Kannada Novels in English Translation" ಅವರು ಅವರ ಅಧ್ಯಯನಕ್ಕೆ ತೆಗೆದುಕೊಂಡ ಕಾದಂಬರಿಗಳು ಆಲನಹಳ್ಳಿ ಕೃಷ್ಣರವರ The Avatars of Bhujangaiah (ಭುಜಂಗಯ್ಯನ ದಶಾವತಾರಗಳು), ಅನಂತಮೂರ್ತಿಗಳ ಭಾರತೀಪುರ, ಕುವೆಂಪುರವರ The House of Kanooru (ಕಾನೂರು ಹೆಗ್ಗಡತಿ), ರಾವ್ ಬಹಾದ್ದೂರರ ಗ್ರಾಮಾಯಣ ಮತ್ತು ಶಿವರಾಮಕಾರಂತರ Return to Earth

(ಮರಳಿ ಮಣ್ಣಿಗೆ) ಮತ್ತು The Headman of the Little Hill (ಕುಡಿಯರ ಕೂಸು).

ಎಷ್ಟು ಆಳವಾಗಿ, ಗಂಭೀರವಾಗಿದೆ ಅವರ ಅಧ್ಯಯನವೆಂದರೆ, ಅವರ ಮಹಾಪ್ರಬಂಧ ಒಂದು gold mine. ಆಗಾಗ್ಗೆ ಅವರಿಗೆ ಕಾಟ ಕೊಡುತ್ತಿದ್ದ ತಲೆ ನೋವು, ಹಾಸಿಗೆ ಹಿಡಿದಿದ್ದ ತಾಯಿಯವರು; ಮನೆಯ ಜವಾಬ್ದಾರಿ ಮಾತ್ರವಲ್ಲದೆ ಕಾಲೇಜಿನ ಬಿಡುವಿಲ್ಲದ ಕೆಲಸಕಾರ್ಯಗಳು. ಇವುಗಳ ಮಧ್ಯೆಯು ಸಿವಿಜಿರವರು ಬಹಳ ಗಂಭೀರವಾಗಿರುವ ಮಹಾಪ್ರಬಂಧವನ್ನು ಬರೆದಿರುವುದು ನನಗೆ ಎಷ್ಟು ತೃಪ್ತಿ ಆನಂದ ತಂದಿದೆಯೆಂದರೆ, ಅದನ್ನು ವರ್ಣಿಸಲು ಅಸಾಧ್ಯ.

ಗಿರಿಧರ್‌ರವರು ನಮ್ಮ ಮನೆಯಲ್ಲಿ ಎಲ್ಲರಿಗೂ ಎಷ್ಟು ಹತ್ತಿರವಾಗುತ್ತ ಬಂದರು ಎಂದರೆ, ತೊಂದರೆಗಳು ಬಂದಾಗ, ಅವರ ಹತ್ತಿರ ಹಂಚಿಕೊಳ್ಳುವುದು, ಪರಿಹಾರ ಕೇಳುವುದು ಇಂದಿಗೂ ನಡೆಯುತ್ತಲೇ ಬಂದಿದೆ.

ಗಿರಿಧರ್‌ರವರಿಂದ ಸಾಕಷ್ಟು ವಿಚಾರಗಳನ್ನು ನಾವೆಲ್ಲ ಕಲಿತೆವು. ಏಕಾದಶಿ ದಿನ ಅವರು ಮೌನವನ್ನು ಆಚರಿಸುತ್ತಾರೆ. ಯಾವುದೋ ಗೌಪ್ಯ ಕೆಲಸಕ್ಕೆ ಅವರು ಕರಾಮುವಿಗೆ ಬಂದಾಗ, ಅವರು ಮೌನವಾಗಿಯೇ ಕೆಲಸವನ್ನು ನಿಭಾಯಿಸುತ್ತಿದ್ದರು. ನನ್ನ ಸ್ನೇಹಿತೆ ನಳಿನಿ ನನ್ನ ಬಳಿಗೆ ಬಂದು "ಅಯ್ಯೋ, ಪಾಪ ಆತ ಎಷ್ಟು ಲಕ್ಷಣವಾಗಿದ್ದಾರೆ. ಆದರೆ, ದೇವರು ಅವರನ್ನೂ ಮೂಕರನ್ನಾಗಿ ಮಾಡಿಬಿಟ್ಟನಲ್ಲ ಎಂಥ ಅನ್ಯಾಯ!" ಎಂದಳು. ಆಗ ನಾನು ನಗುತ್ತ ಅವರ ಆಚಾರ ವಿಚಾರಗಳನ್ನು ಅವಳಿಗೆ ಹೇಳಿದೆ. ಮತ್ತೊಬ್ಬಳು ನನ್ನ ಬಳಿಗೆ ಬಂದು "Madam that muni has always suggested that – I pursue my Ph.D" ಎಂದಳು. ನಾನು ಆಗ ಆಶ್ಚರ್ಯದಿಂದ "Who is that Muni? ಎಂದೆ. ಆಗ ಅವಳು "your student Madam, your Ph.D student" ಎಂದಳು. ಅವಳ ದೃಷ್ಟಿಯಲ್ಲಿ ಗಿರಿಧರ್ ಮುನಿಯೇ. ಅವಳು ಹೇಳಿದ್ದು ಎಷ್ಟು ಸತ್ಯ. ನಿಜಕ್ಕೂ ಗಿರಿಧರ್ ಒಬ್ಬರು ಮುನಿಯೇ. "A friend of all the world" ಆಗಿರುವ ಅವರು ನನ್ನ ಸಂಶೋಧನ ವಿದ್ಯಾರ್ಥಿಯೆಂದು ಹೇಳಿಕೊಳ್ಳಲು ನನಗೆ ಬಹಳ ಹೆಮ್ಮೆ.

◆

ಶ್ರೀನಾಥಶಾಸ್ತ್ರಿಗಳು–ಓರ್ವ ವಿದ್ಯಾರ್ಥಿ ಕಂಡಂತೆ

– ಬಿ.ವಿ.ಕುಮಾರಸ್ವಾಮಿ, ಮೈಸೂರು
ನಿವೃತ್ತ ವಿಜ್ಞಾನಿ, ಉಪನ್ಯಾಸಕರು, ೮೨೭೭೩೨೫೦೭೭
swamybvk@gmail.com

೧೯೬೮ನೇ ಇಸವಿಯ ಜುಲೈ ತಿಂಗಳು ನಾನು ಆಗ ಶೃಂಗೇರಿಯ ಶ್ರೀ ಜೆ.ಸಿ.ಬಿ.ಎಂ ಕಾಲೇಜಿನಲ್ಲಿ ಬಿ.ಎಸ್ಸಿ ಮೊದಲನೆಯ ವರ್ಷದಲ್ಲಿ ಓದುತ್ತಿದ್ದೆ. ಭೌತಶಾಸ್ತ್ರ, ರಸಾಯನಶಾಸ್ತ್ರ ಹಾಗೂ ಗಣಿತಗಳು ನಮಗೆ ಪದವಿಯಲ್ಲಿನ ಮೂರು ಮುಖ್ಯ ವಿಷಯಗಳಾಗಿದ್ದವು. ಕಾಲೇಜು ಸ್ಥಾಪನೆಯಾಗಿ ಎರಡು ವರ್ಷಗಳಷ್ಟೇ ಆಗಿದ್ದವು. ಪದವಿ ವಿಭಾಗದ ಕಟ್ಟಡದ ಕೆಲಸ ಇನ್ನೂ ಪೂರ್ಣಗೊಂಡಿರಲಿಲ್ಲ. ತಾತ್ಕಾಲಿಕವಾಗಿ ನಿರ್ಮಿಸಿದ್ದ, ಲೋಹದ ಶೀಟಿನ ಮೇಲ್ಛಾವಣಿ ಇರುವ ಹಾಗೂ ತಡಿಕೆಯ ಗೋಡೆಗಳುಳ್ಳ ಷೆಡ್ಡುಗಳಲ್ಲಿ ಪಾಠಗಳು ನಡೆಯುತ್ತಿದ್ದವು.

ಜುಲೈ ತಿಂಗಳ ಜಡಿಮಳೆ ಹಿಡಿದಿತ್ತು. ಈ ದಿನ ಗಣಿತ ಪಾಠವಿತ್ತು. ಶೆಡ್ಡಿನಲ್ಲಿ ಕುಳಿತು, ಮೇಲ್ಛಾವಣಿಯ ಮೇಲೆ ಬೀಳುತ್ತಿದ್ದ ಮಳೆಯ ಶಬ್ದವನ್ನೇ ಆಲಿಸುತ್ತಾ ಶಿಕ್ಷಕರು ಬರುವುದನ್ನೇ ಕಾಯುತ್ತಿದ್ದೆವು. ಪಿಯುಸಿಯಲ್ಲಿ ನಮಗೆ ಗಣಿತದ ಪಾಠ ಮಾಡಿದ್ದ ಸಮರ್ಥ ಶಿಕ್ಷಕ ಶ್ರೀಯುತ ರಾಮಚಂದ್ರಭಟ್ಟರೇ ಬಿಎಸ್ಸಿಯಲ್ಲೂ ನಮಗೆ ಬೋಧಿಸುತ್ತಿದ್ದರು. ಯಾವಾಗಲೂ ಸಮಯಕ್ಕೆ ಸರಿಯಾಗಿ ತರಗತಿಗೆ ಬರುತ್ತಿದ್ದ ಅವರು ಅಂದು ಅದೇಕೋ, ಹತ್ತು ನಿಮಿಷಗಳು ಕಳೆದರೂ ಇನ್ನೂ ಬರಲಿಲ್ಲ. ಅನಂತರ ಅವರು ತರಗತಿಗೆ ಬಂದಾಗ, ಜತೆಯಲ್ಲಿ ಅವರಿಗಿಂತ ಕಿರಿಯರಾದ ಇನ್ನೊಬ್ಬರು ಇದ್ದರು. ಜತೆಯಲ್ಲಿದ್ದವರು ಗೌರವರ್ಣ, ದುಂಡು ಮುಖ ಹಾಗೂ ತೆಳ್ಳನೆಯ ಮೈಕಟ್ಟನ್ನು ಹೊಂದಿದ್ದರು. ಶ್ರೀಯುತ ಭಟ್ಟರು "ಇವರು ಶ್ರೀನಾಥಶಾಸ್ತ್ರಿಯವರು; ಮೈಸೂರಿನಲ್ಲಿ ಎಂಎಸ್ಸಿ ಮಾಡಿದ್ದಾರೆ. ನಿಮಗೆ ಇವರು ಗಣಿತದ ಎರಡು ಪೇಪರುಗಳಲ್ಲಿ ಒಂದರ ವಿಷಯಗಳನ್ನು ಬೋಧಿಸುತ್ತಾರೆ" ಎಂದು ಹೇಳಿದರು. ಈ ರೀತಿ ನನಗೆ ಶ್ರೀನಾಥಶಾಸ್ತ್ರಿಯವರ ಮೊದಲ ಪರಿಚಯ ಆಯಿತು.

ಶಾಸ್ತ್ರಿಯವರು ಪಾಠ ಆರಂಭಿಸಿದ ಮೇಲೆ ನಾವೆಲ್ಲ ಅವರನ್ನು ಸೂಕ್ಷ್ಮವಾಗಿ ವೀಕ್ಷಿಸಿದೆವು. ಅವರು ಕಪ್ಪುಬಣ್ಣದ ಸೂಟ್ ಧರಿಸಿದ್ದರು; ಆದರೆ ಕೋಟು, ತೆಳ್ಳಗಿದ್ದ ಅವರ ಮೈ ಕಟ್ಟಿಗೂ ಸಹ ಸ್ವಲ್ಪ ಬಿಗಿಯಾಗಿಯೇ ಇತ್ತು. ಮೈಸೂರಿನಲ್ಲಿ ಓದು ಮುಗಿಸಿ, ಶೃಂಗೇರಿಯ ಕಾಲೇಜಿಗೆ ಬೋಧಕರಾಗಿ ಬಂದು ಸೇರಿದ ನಂತರ ಮೊದಲ ತರಗತಿಗೆ ಬಹುತೇಕ ಮಂದಿ ಶಿಕ್ಷಕರು ಸೂಟ್ ಹಾಕಿಕೊಂಡು ಬರುವುದನ್ನು ನಾವು ಪಿಯುಸಿಗೆ ಹಿಂದಿನ ವರ್ಷ ಸೇರಿಕೊಂಡಾಗಲೇ ಕಂಡಿದ್ದೆವು. ದಕ್ಷಿಣ ಕನ್ನಡ ಮೂಲದ ಶ್ರೀಯುತ

ರಾಮಚಂದ್ರ ಭಟ್ಟರಂತಹವರು ಎಂದೂ ಸೂಟ್ ಧರಿಸುತ್ತಿರಲಿಲ್ಲ. ಸುಮಾರು ೪೫ ವರ್ಷಗಳ ಹಿಂದಿನ, ಆಗಿನ ಕಾಲದ ಶೃಂಗೇರಿಯಲ್ಲಿ ಸೂಟ್ ಎಂಬುದು, ಪಂಚೆ ಉಟ್ಟು ಕಾಲೇಜಿಗೆ ಬರುತ್ತಿದ್ದ ನಮ್ಮ ಮಟ್ಟಿಗೆ ಒಂದು ವಿಚಿತ್ರ, ಅಪರಿಚಿತ ಹಾಗೂ ಅಸ್ನೇಹಿ ಉಡುಪೇ ಆಗಿತ್ತು. ಇದಕ್ಕೆ ಮತ್ತೊಂದು ಕಾರಣವೂ ಇತ್ತು ನಾವು ಪಿಯುಸಿ ಓದುವಾಗ, ಸೂಟ್ ತೊಟ್ಟು ಬಂದ ವಿಜ್ಞಾನದ ಶಿಕ್ಷಕರೊಬ್ಬರು ತಮ್ಮ ಮೊದಲನೆಯ ತರಗತಿಯಲ್ಲಿಯೇ, ಉದ್ದೇಶ ಪೂರ್ವಕವಾಗಿ ನಮ್ಮನ್ನು ಗಾಬರಿಪಡಿಸಲೆಂದೇ, ಒಂದು ಗಂಟೆಯ ಕಾಲ ಯಾವ ಕನ್ನಡ ಪದಗಳನ್ನೂ ಬಳಸದೇ ಅತಿ ವೇಗವಾಗಿ ಇಂಗ್ಲೀಷಿನಲ್ಲಿ "ಲೆಕ್ಚರ್" ಕೊಟ್ಟು, ಕಡೆಗೆ ಕನ್ನಡ ಮಾಧ್ಯಮದಲ್ಲಿ ಎಸ್.ಎಸ್.ಎಲ್.ಸಿ ಮುಗಿಸಿ ಬಂದಿದ್ದ ನಮ್ಮೆಲ್ಲರ ಇಂಗ್ಲಿಷ್ ಬಗೆಗಿನ ಅಜ್ಞಾನದ ವಿಚಾರವಾಗಿ ಕುಹಕ ನುಡಿಗಳನ್ನಾಡಿದ್ದರು. ಆ ಘಟನೆ ನಮ್ಮೆಲ್ಲರ ಮನಸ್ಸಿನಲ್ಲಿ ಕಹಿ ನೆನಪಾಗಿ ಅಚ್ಚೊತ್ತಿ ಉಳಿದಿತ್ತು. ಆದ್ದರಿಂದ ಶ್ರೀಯುತ ಶಾಸ್ತ್ರಿಯವರ ಬಗ್ಗೆ ಅಳಕು ಹಾಗೂ ಭಯದ ಮನೋಭಾವದಿಂದಲೇ ಪಾಠವನ್ನು ಕೇಳತೊಡಗಿದೆವು. ಸ್ವಲ್ಪ ಸಮಯದಲ್ಲೇ, ಶಾಸ್ತ್ರಿಯವರ ಮಟ್ಟಿಗೆ ನಮ್ಮ ಅಳಕು ಹಾಗೂ ಭಯ ನಿರಾಧಾರವಾದುದೆಂದು ದೃಢವಾಯಿತು. ನಾವು ಶಾಸ್ತ್ರಿಯವರಿಗೆ ಹೆದರುವುದಿರಲಿ, ಅವರೇ ನಮಗೆ ಹೆದರಿದಂತೆ ತೋರಿತು! ವಿಷಯಗಳನ್ನು ಸ್ಪಷ್ಟವಾಗಿ ತಿಳಿಸಿ, ಕಪ್ಪು ಹಲಗೆಯ ಮೇಲೆ ಬರೆಯುತ್ತಿದ್ರೂ, ಅದೇ ಅವರ ಜೀವನದ ಮೊದಲ ತರಗತಿಯಾದ್ದರಿಂದ, ಸ್ವಲ್ಪ ಅಂಜಿಕೆಯ ಭಾವದಿಂದಲೇ ನಮ್ಮೆಲ್ಲರ ಕಡೆ ಹೆಚ್ಚಾಗಿ ತಿರುಗದೇ, ಕಪ್ಪು ಹಲಗೆಯ ಕಡೆಗೇ ಮುಖ ಮಾಡಿಕೊಂಡು ಪಾಠ ಮುಗಿಸಿದರು. ಅನಂತರ ನಮ್ಮ ಕಡೆಗೆ ತಿರುಗಿ "ಅರ್ಥವಾಗದಿದ್ದರೆ ಸಂಕೋಚ ಪಡದೇ ತಿಳಿಸಿ, ಮುಂದಿನ ಕ್ಲಾಸಿನಲ್ಲಿ ಮತ್ತೊಮ್ಮೆ ವಿವರಿಸುತ್ತೇನೆ" ಎಂದು ನಮ್ರತೆಯಿಂದ ಕನ್ನಡದಲ್ಲಿ ಹೇಳಿದರು. ಸೂಟ್ ತೊಟ್ಟವರ ಬಗ್ಗೆ ನಮಗಿದ್ದ ಮನೋಭಾವ ತಕ್ಷಣ ಬದಲಾಯಿತು. ಶಾಸ್ತ್ರಿಯವರೊಡನೆ ನಮ್ಮ ಸಂಬಂಧ ಮುಂದೆ ಇನ್ನೂ ಮಧುರವಾಗಬಹುದೆಂದು ಅನಿಸಿತು.

ಅದೇಕೋ ಶಾಸ್ತ್ರಿಯವರು ಮುಂದೆಂದೂ ತರಗತಿಗೆ ಸೂಟ್ ತೊಟ್ಟು ಬರಲಿಲ್ಲ. ಆದರೆ ಮೊದಲನೆಯ ದಿನ ನಮ್ಮಲ್ಲಿ ಮೂಡಿಸಿದ ಭರವಸೆ ಮತ್ತೂ ದೃಢವಾಗುವಂತೆ ಅವರು ನಮ್ಮೆಲ್ಲರ ಜತೆ ಸ್ನೇಹಭಾವವನ್ನು ಬೆಳಸಿಕೊಂಡರು. ದಿನಗಳು ಉರುಳಿದಂತೆ, ಅವರ ಸಭಾಕಂಪ (stage fear) ಮಾಯವಾಗಿ, ನಮ್ಮೆದುರಿಗೆ ಮುಖ ಮಾಡಿ ಪಾಠ ಮಾಡಲು ಆರಂಭಿಸಿದರು. ವಿಷಯದ ಬಗ್ಗೆ ಅಗಾಧವಾದ ಜ್ಞಾನ ಹಾಗೂ ಸ್ಪಷ್ಟತೆ ಅವರಿಗೆ ಮೊದಲೇ ಇತ್ತು.

ಶ್ರೀಯುತ ಶಾಸ್ತ್ರಿಯವರ ಬೋಧನಾ ಕ್ರಮದ ಬಗ್ಗೆ ಹಲವಾರು ಒಳ್ಳೆಯ ಅಂಶಗಳನ್ನು ಪಟ್ಟಿಮಾಡಬಹುದು.

- ಅವರು ಯಾವಾಗಲೂ ಅಗತ್ಯದ ಸಿದ್ಧತೆಗಳನ್ನು ಉತ್ತಮವಾಗಿ ಮಾಡಿಕೊಂಡೇ ತರಗತಿಗೆ ಬರುತ್ತಿದ್ದರು.
- ಕೇವಲ ಪರೀಕ್ಷಾ ದೃಷ್ಟಿಯಿಂದ ಅವರು ಬೋಧಿಸುತ್ತಿರಲಿಲ್ಲ. ವಿಷಯಗಳನ್ನು ಅರ್ಥಮಾಡಿಸುವುದರ ಬಗ್ಗೆ ಹೆಚ್ಚಿನ ಗಮನವಹಿಸುತ್ತಿದ್ದರು. ಹಾಗೆಂದು ಪರೀಕ್ಷಾ ದೃಷ್ಟಿಯನ್ನೂ ಅವರು ಅವಗಣಿಸುತ್ತಿರಲಿಲ್ಲ. ಹಿಂದಿನ ವರ್ಷಗಳ ಪ್ರಶ್ನೆ ಪತ್ರಿಕೆಗಳ ಪ್ರಶ್ನೆಗಳನ್ನು ಬಿಡಿಸಲು ಅಗತ್ಯದ ಸೂಚನೆಗಳನ್ನು ವಿದ್ಯಾರ್ಥಿಗಳಿಗೆ ಕೊಡುತ್ತಿದ್ದರು ಹಾಗೂ ವಿದ್ಯಾರ್ಥಿಗಳೇ ಆ ಪ್ರಶ್ನೆಗಳನ್ನು ಬಿಡಿಸುವಂತೆ ಮಾಡುತ್ತಿದ್ದರು.
- ವಿದ್ಯಾರ್ಥಿಗಳನ್ನು ಅವರು ಪ್ರೀತಿಸುತ್ತಿದ್ದರು. ವಿದ್ಯಾರ್ಥಿಗಳಿಗಿಂತ ತಾನೇ ಮೇಲೆಂಬ ಅಹಂಭಾವ ಅವರಲ್ಲಿ ಇರಲಿಲ್ಲ.
- ಪ್ರಶ್ನೆಗಳನ್ನು ಕೇಳಿದರೆ, ಮನದಟ್ಟಾಗುವಂತೆ ಉತ್ತರಗಳನ್ನು ತಿಳಿಸುತ್ತಿದ್ದರು. ಒಂದು ವೇಳೆ ಉತ್ತರಗಳು ಗೊತ್ತಿಲ್ಲದಿದ್ದರೆ ಸಂಕೋಚಪಡದೇ ತನಗೆ ಅದು ತಿಳಿದಿಲ್ಲ, ಪುಸ್ತಕಗಳನ್ನು ಅಭ್ಯಾಸ ಮಾಡಿ ಮುಂದಿನ ಕ್ಲಾಸಿನಲ್ಲಿ ಹೇಳುತ್ತೇನೆ ಎನ್ನುತ್ತಿದ್ದರು. ಗೊತ್ತಿಲ್ಲದಿದ್ದರೂ, ಗೊತ್ತಿದೆಯೆಂದು, ಎಂದಿಗೂ ನಟನೆ (posing) ಮಾಡುತ್ತಿರಲಿಲ್ಲ.
- ಪರೀಕ್ಷೆಗಳಲ್ಲಿ ಉತ್ತಮ ಅಂಕಗಳನ್ನು ಗಳಿಸಿದ ವಿದ್ಯಾರ್ಥಿಗಳನ್ನು ಪ್ರಶಂಸಿಸಿ ಪ್ರೋತ್ಸಾಹಿಸುತ್ತಿದ್ದರು. ಹಾಗೂ ಉತ್ತಮ ಅಂಕ ಗಳಿಸಲು ಆಗದಿದ್ದ ವಿದ್ಯಾರ್ಥಿಗಳಿಗೆ ಧೈರ್ಯ ಹೇಳಿ ಸಹಾಯ ಮಾಡುತ್ತಿದ್ದರು.

ಕೆಲವೊಮ್ಮೆ ಅವರ ಪಾಠದಲ್ಲಿ ಬೇಸರ ಎನಿಸುವಷ್ಟು ಪುನರಾವರ್ತನೆ ಇರುತ್ತದೆ ಹಾಗೂ ವಿಷಯಗಳನ್ನು ಅಗತ್ಯವಿಲ್ಲದೆ ಅತಿ ಆಳವಾಗಿ ಬೋಧಿಸುತ್ತಾರೆ ಎಂದೆಸುತ್ತಿತ್ತು. ಆದರೆ ಈಗ ಪರಾಮರ್ಶಿಸಿದರೆ ಇವೆರಡು ಅಂಶಗಳೂ ಅವರ ಬೋಧನೆಯ ಸಕಾರಾತ್ಮಕ ಗುಣಗಳೇ ಆಗಿದ್ದವೆಂದು ಅನಿಸುತ್ತದೆ. ಅಷ್ಟೇನೂ ಬುದ್ಧಿವಂತರಲ್ಲದ ವಿದ್ಯಾರ್ಥಿಗಳಿಗೆ ಪುನರಾವರ್ತನೆಗಳು ಬಹಳ ಉಪಯೋಗಕಾರಿಯಾಗುತ್ತವೆ. ಹಾಗೆಯೇ ವಿಷಯಗಳ ಆಳವಾದ ಅಧ್ಯಯನ ಮತ್ತು ಬೋಧನೆ, ಬುದ್ಧಿವಂತರಾಗಿರುವ ಹಾಗೂ ಜ್ಞಾನದ ದಾಹವುಳ್ಳ ವಿದ್ಯಾರ್ಥಿಗಳಿಗೆ ಅಗತ್ಯವಾಗಿರುತ್ತದೆ.

ಗಣಿತದಲ್ಲಿ ಆಸಕ್ತಿ ವಹಿಸಿ ಉತ್ತಮ ಅಂಕಗಳನ್ನು ಪಡೆಯುತ್ತಿದ್ದ ನನ್ನ ಬಗ್ಗೆ ಶಾಸ್ತ್ರಿಯವರಿಗೆ ವಿಶೇಷ ಒಲವು ಇತ್ತು. ಬಿ.ಎಸ್ಸಿ ಎರಡನೆಯ ವರ್ಷದ ಅಂತಿಮದಲ್ಲಿ ನಡೆದ ವಿಶ್ವವಿದ್ಯಾನಿಲಯದ ಪರೀಕ್ಷೆಯ ಫಲಿತಾಂಶಗಳು ಅಂಚೆಯಲ್ಲಿ ಕಾಲೇಜಿಗೆ ತಲಪಿದ ಕೂಡಲೇ ಶಾಸ್ತ್ರಿಯವರು ಓಡಿಹೋಗಿ ಮೊದಲು ನನ್ನ ಫಲಿತಾಂಶವನ್ನು ನೋಡಿದರು.

ಗಣಿತದಲ್ಲಿ ನನಗೆ ೨೦೦ ಕ್ಕೆ ೨೦೦ ಅಂಕಗಳು ಬಂದಿದ್ದು ತಿಳಿದು, ನನಗಿಂತ ಮಿಗಿಲಾಗಿ ಅವರೇ ಖುಷಿಪಟ್ಟು ನನ್ನನ್ನು ತುಂಬು ಹೃದಯದಿಂದ ಹೊಗಳಿದರು.

ನಾವು ಬಿ.ಎಸ್ಸಿ ಮೂರನೆಯ ಹಾಗೂ ಅಂತಿಮ ವರ್ಷಕ್ಕೆ ಕಾಲಿಟ್ಟಾಗ, ನಮಗೆ ಗಣಿತ ಇರಲಿಲ್ಲ; ಭೌತಶಾಸ್ತ್ರ ಮತ್ತು ರಸಾಯನ ಶಾಸ್ತ್ರಗಳಷ್ಟೇ ಇದ್ದವು. ಶಾಸ್ತ್ರಿಯವರ ತರಗತಿಗಳು ತಪ್ಪಿಹೋದುದಕ್ಕೆ ನನಗಂತೂ ತುಂಬಾ ವ್ಯಸನವಾಯಿತು. ಆದರೆ ಗಣಿತದ ತರಗತಿಗಳು ಇಲ್ಲದಿದ್ದರೂ, ನನ್ನ ಹಾಗೂ ಶಾಸ್ತ್ರಿಯವರ ಸಂಬಂಧ ಕಡಿದುಹೋಗಲಿಲ್ಲ. ಅಂತಿಮ ಬಿಎಸ್ಸಿಯಲ್ಲಿ ಓದುವಾಗಲೂ, ಕಾಲೇಜಿನ ಕಾರಿಡಾರಿನಲ್ಲಿ ಕಂಡಾಗಲೆಲ್ಲಾ ನನ್ನನ್ನು ಬಹು ವಿಶ್ವಾಸದಿಂದ ಮಾತನಾಡಿಸುತ್ತಿದ್ದರು.

೧೯೭೦ರಲ್ಲಿ ಬಿ.ಎಸ್ಸಿ ಮುಗಿಸಿದ ಬಳಿಕ ನನಗೆ ಬೆಂಗಳೂರಿನ ತಾತಾ ಇನ್‌ಸ್ಟಿಟ್ಯೂಟಿನಲ್ಲಿ ಬಿ.ಇ. ವ್ಯಾಸಂಗಕ್ಕೆ ಪ್ರವೇಶ ದೊರಕಿದಾಗ ಶಾಸ್ತ್ರಿಯವರು ಬಹಳ ಸಂಭ್ರಮಿಸಿದರು. ತಾತಾ ಇನ್‌ಸ್ಟಿಟ್ಯೂಟಿನಲ್ಲಿ ಮೊದಲನೆಯ ಸೆಮಿಸ್ಟರ್ ಪರೀಕ್ಷೆ ಮುಗಿಸಿಕೊಂಡು ಡಿಸೆಂಬರ್ ರಜೆಯಲ್ಲಿ ಶೃಂಗೇರಿಗೆ ಬಂದಾಗ, ಶಾಸ್ತ್ರಿಯವರು ಶಿಕ್ಷಕವೃತ್ತಿಯನ್ನು ಬಿಟ್ಟು ಬೆಂಗಳೂರಿನ ರಾಷ್ಟ್ರೀಯ ವೈಮಾನಿಕ ಪ್ರಯೋಗಶಾಲೆ (ಎನ್‌ಎಎಲ್) ಯಲ್ಲಿ ವಿಜ್ಞಾನಿಯಾಗಿ ಸೇರಿಕೊಂಡರೆಂದು ತಿಳಿಯಿತು. ಶಿಕ್ಷಣ ಕ್ಷೇತ್ರ ಉತ್ತಮ ಶಿಕ್ಷಕರೊಬ್ಬರನ್ನು ಕಳೆದುಕೊಂಡದ್ದರ ಬಗ್ಗೆ ದುಃಖವಾದರೂ, ಶಾಸ್ತ್ರಿಯವರಿಗೆ ದೊರಕಿದ ಉದ್ಯೋಗ ಪ್ರಗತಿಯ ವಿಚಾರವಾಗಿ ಸಂತಸವಾಯಿತು.

ಅನಂತರ ನನ್ನ ಹಾಗೂ ಶಾಸ್ತ್ರಿಯವರ ಭೇಟಿ ೧೯೭೪ರಲ್ಲಿ ಮದರಾಸಿನ ಐ.ಐ.ಟಿಯಲ್ಲಿ ಆಯಿತು. ಆಗ ನಾನು ಎಂ.ಟೆಕ್ ಮಾಡುತ್ತಿದ್ದೆ. ಮದರಾಸಿನ ಐ.ಐ.ಟಿಯಲ್ಲಿದ್ದ ಶಕ್ತಿಯುತ ಕಂಪ್ಯೂಟರನ್ನು ಎನ್‌ಎಎಲ್‌ನಲ್ಲಿ ತಾವು ಮಾಡುತ್ತಿದ್ದ ಸಂಶೋಧನೆಗೆ ಉಪಯೋಗಿಸಿಕೊಳ್ಳಲೆಂದು ಶಾಸ್ತ್ರಿಯವರು ಅಲ್ಲಿಗೆ ಬಂದಿದ್ದರು. ಆಗಿನ್ನೂ ಹೊಸದಾಗಿ ಮದುವೆಯಾಗಿದ್ದ ಶಾಸ್ತ್ರಿಯವರು ಜತೆಯಲ್ಲಿ ಪತ್ನಿಯನ್ನೂ ಕರೆತಂದಿದ್ದರು. ಐಐಟಿಯ ಅತಿಥಿಗೃಹದಲ್ಲಿ ರೂಮು ಸಿಗದಿದ್ದ ಕಾರಣ ಹಾಸ್ಟೆಲಿನಲ್ಲಿ ನನ್ನ ರೂಮಿನಲ್ಲಿಯೇ ಉಳಿದುಕೊಂಡರು. ನಾನು ಸ್ನೇಹಿತನ ರೂಮಿನಲ್ಲಿ ಇರುತ್ತೇನೆ, ನೀವಿಬ್ಬರೂ ನನ್ನ ರೂಮಿನಲ್ಲಿ ಇರಿ ಎಂದರೂ ಸಹ ಅವರು ಒಪ್ಪಲಿಲ್ಲ. ನೀನೂ ಕೂಡ ನಮ್ಮ ಕುಟುಂಬದ ಸದಸ್ಯನೇ, ನಿನ್ನ ಜತೆಯೇ ಇರುತ್ತೇವೆ ಎಂದರು. ರೂಮಿನಲ್ಲಿ ನೆಲದ ಮೇಲೆ ಜಮಖಾನ ಹಾಸಿಕೊಂಡು ಮಲಗುತ್ತಿದ್ದರು. ಇದು ಶಾಸ್ತ್ರಿಯವರ ಸರಳತೆಗೊಂದು ಉದಾಹರಣೆ. ಮದರಾಸಿನಲ್ಲಿ ಶಾಸ್ತ್ರಿಯವರು ಕುಟುಂಬ ಸಹಿತ ಮೂರು ದಿನಗಳು ನನ್ನ ಜತೆ ತಂಗಿದ್ದುದು ನನ್ನ ಸಿಹಿ ಅನುಭವಗಳಲ್ಲಿ ಒಂದಾಗಿದೆ.

ಎಂ.ಟೆಕ್. ಮುಗಿಸಿದ ಬಳಿಕ ನಾನು ದೆಹಲಿಯ ರಾಷ್ಟ್ರೀಯ ಭೌತಿಕ ಪ್ರಯೋಗಶಾಲೆ (ಎನ್.ಪಿ.ಎಲ್)ನಲ್ಲಿ ವಿಜ್ಞಾನಿಯಾಗಿ ಕೆಲಸಕ್ಕೆ ಸೇರಿದೆ. ಶಾಸ್ತ್ರಿಯವರು ಸೇರಿದ್ದ ಎನ್‌ಎಎಲ್ ಹಾಗೂ ಎನ್‌ಪಿಎಲ್ ಗಳು ಸೋದರಿ ಸಂಸ್ಥೆಗಳು (sister instituters) ಮುಂದೆ ಸುಮಾರು ನಾಲ್ಕು ದಶಕಗಳ ಕಾಲ ಶಾಸ್ತ್ರಿಯವರನ್ನು ಭೆಟ್ಟಿಯಾಗುವ ಅವಕಾಶ ಒದಗಿ ಬರಲಿಲ್ಲ. ಆದರೆ ೧೯೭೭ರಲ್ಲಿ ದೆಹಲಿಯ ನಮ್ಮ ಮನೆಗೆ ಫೋನ್ ಸಂಪರ್ಕ ಬಂದ ಬಳಿಕ ಕೆಲವಾರು ಬಾರಿ ಅವರೊಡನೆ ಮಾತುಕತೆ ನಡೆಯಿತು. ಆ ಸಂದರ್ಭಗಳಲ್ಲಿ ಅವರು ತಪ್ಪದೇ, ಶೃಂಗೇರಿಯಲ್ಲಿನ ತಮ್ಮ ಶಿಕ್ಷಕ ವೃತ್ತಿಯ ಬಗ್ಗೆ ನೆನಪು ಮಾಡಿಕೊಳ್ಳುತ್ತಿದ್ದರು ಹಾಗೂ ಗಣಿತದಲ್ಲಿ ನನಗೆ ಇದ್ದ ಆಸಕ್ತಿಯನ್ನೂ ಪ್ರಶಂಸಿಸುತ್ತಿದ್ದರು.

ಶಾಸ್ತ್ರಿಯವರ ಮುಖತಃ ಭೇಟಿ ಬಹುಕಾಲ ಆಗದಿದ್ದರೂ, ಶೃಂಗೇರಿಯಲ್ಲಿ ನನ್ನ ಸಹಪಾಠಿಯಾಗಿದ್ದು, ಮೈಸೂರಿನಲ್ಲಿ ನೆಲಸಿರುವ ಗೆಳೆಯ ಶ್ರೀಯುತ ಪಾಂಡುರಂಗ ವಿಠಲರ ಮೂಲಕ ಶಾಸ್ತ್ರಿಯವರ ವಿಚಾರಗಳು ತಿಳಿಯುತ್ತಿದ್ದವು. ಎನ್‌ಎಎಲ್‌ನಲ್ಲಿ ಶಾಸ್ತ್ರಿಯವರು ಹುಟ್ಟು ಹಾಕಿದ **'ಕಣಾದ'** ಎಂಬ, ಕನ್ನಡದ ವೈಜ್ಞಾನಿಕ ಪತ್ರಿಕೆ, ಹಾಗೂ ಕನ್ನಡ ವಿಶ್ವಕೋಶದಲ್ಲಿನ ವಿಜ್ಞಾನದ ವಿಷಯಗಳ ಸಂಗ್ರಹಣೆ ಹಾಗೂ ಪ್ರಕಟಣೆಯಲ್ಲಿ ಶಾಸ್ತ್ರಿಯವರ ಸಕ್ರಿಯ ಪಾತ್ರ ತಿಳಿದು ಬಂದಿತು. ಶಿಕ್ಷಕವೃತ್ತಿಯಿಂದ ಹೊರಬಂದ ಮೇಲೂ, ತಮ್ಮ ಹೊಸ ಕಾರ್ಯಕ್ಷೇತ್ರದಲ್ಲಿಯೂ ಸಹ, ವಿಭಿನ್ನ ಸಕಾರಾತ್ಮಕ ಕಾರ್ಯಗಳನ್ನು ಮಾಡಿ ತಮ್ಮದೇ ಛಾಪು ಮೂಡಿಸಿದ ಶಾಸ್ತ್ರಿಯವರ ಬಗ್ಗೆ ಹೆಮ್ಮೆಯಾಯಿತು. ಹಾಗೂ ಸಮಯ ಸಿಕ್ಕಾಗಲೆಲ್ಲ ತಮ್ಮ ನೆಚ್ಚಿನ ವಿದ್ಯಾರ್ಥಿಯಾದ ನನ್ನ ಬಗ್ಗೆಯೂ ಮಾತನಾಡುತ್ತಿದ್ದಾರೆಂದು ತಿಳಿದು, ನನ್ನ ಬಗ್ಗೆ ಅವರ ಪ್ರೀತಿಯ ವಿಚಾರವಾಗಿ ಕೃತಜ್ಞತೆ ಮೂಡಿತು.

ದೆಹಲಿಯ ಎನ್.ಪಿ.ಎಲ್‌ನಿಂದ ನಿವೃತ್ತನಾಗಿ ನಾನು ಮೂರು ವರ್ಷಗಳ ಹಿಂದೆ ಮೈಸೂರಿಗೆ ಬಂದು ನೆಲಸಿದೆ. ಇಲ್ಲಿಗೆ ಬಂದ ಎರಡು ವರ್ಷಗಳ ಬಳಿಕ ಶಾಸ್ತ್ರಿಯವರು ಮೈಸೂರಿಗೆ ಭೇಟಿಕೊಟ್ಟಾಗ, ೩೮ ವರ್ಷಗಳ ನಂತರ ಅವರನ್ನು ಮುಖತಃ ಕಂಡೆ. ನನ್ನನ್ನು ಕಂಡ ಅವರು ಬಹಳ ಖುಷಿಪಟ್ಟರು. ಸಮಯದ ಅಭಾವದಿಂದಾಗಿ ಬಹು ಹೊತ್ತು ಮಾತುಕತೆಯಾಗಲಿಲ್ಲ. ವಯಸ್ಸಿನ ಜತೆಗೆ ಅವರಿಗೆ ನನ್ನ ಬಗ್ಗೆ ಇದ್ದ ಪ್ರೀತಿ ವಿಶ್ವಾಸಗಳೂ ವೃದ್ಧಿಯಾಗಿದ್ದವು.

೭೦ರ ವಯಸ್ಸಿನಲ್ಲಿಯೂ ಶಾಸ್ತ್ರಿಯವರು ಮಾನಸಿಕವಾಗಿ ಬಹಳ ಶಕ್ತರಾಗಿದ್ದು ಸಕಾರಾತ್ಮಕ ಚಟುವಟಿಕೆಗಳಲ್ಲಿ ತಮ್ಮನ್ನು ತೊಡಗಿಸಿಕೊಂಡಿದ್ದಾರೆ. ತಾವು ದೃಢವಾಗಿ ನಂಬಿದ ವಿಚಾರಗಳ ಬಗ್ಗೆ ನಿರಂತರವಾಗಿ ಚಿಂತಿಸುತ್ತಾ, ಆ ವಿಚಾರಗಳನ್ನು ಆಸಕ್ತರ ಜತೆ ಚರ್ಚಿಸುತ್ತಾ, ಅವನ್ನು ನಿಜಜೀವನದಲ್ಲಿ ಪ್ರಾಯೋಗಿಕವಾಗಿ ಅಳವಡಿಸಲು ಪ್ರಯತ್ನಿಸುವ ಉತ್ತಮ ಪ್ರವೃತ್ತಿ ಶಾಸ್ತ್ರಿಯವರದ್ದು. ಭೆಟ್ಟಿಯಾದಾಗ ಸಿಕ್ಕಿದ ಕಡಿಮೆ ಅವಧಿಯಲ್ಲೇ ಅವರು

ತಮ್ಮ ಸದ್ಯದ ಚಟುವಟಿಕೆಗಳ ಬಗ್ಗೆ ನನ್ನೊಡನೆ ಚರ್ಚಿಸಿದರು. ವಿಜ್ಞಾನದ ವಿಷಯಗಳನ್ನು ಕನ್ನಡದಲ್ಲಿ ಬೋಧನೆ ಮಾಡಲು ಅನುಕೂಲವಾಗುವ ಶಿಕ್ಷಣ ಸಾಮಗ್ರಿಗಳ ತಯಾರಿಕೆ, ಕನ್ನಡದಲ್ಲಿ ಗಣಕ ತಂತ್ರಜ್ಞಾನದ ಅಭಿವೃದ್ಧಿ ಹಾಗೂ ಅಳವಡಿಕೆ ಇತ್ಯಾದಿ ಚಟುವಟಿಕೆಗಳಲ್ಲಿ ಅವರು ಈಗಲೂ ತಮ್ಮನ್ನು ತೊಡಗಿಸಿಕೊಂಡಿದ್ದಾರೆ.

ಒಬ್ಬರ ವಿದ್ಯಾರ್ಥಿ ಜೀವನದಲ್ಲಿ ಬಹು ಮಂದಿ ಶಿಕ್ಷಕರ ಪರಿಚಯ ಹಾಗೂ ಅನುಭವ ಆಗುತ್ತದೆ. ಆದರೆ ಎಂದೆಂದಿಗೂ ಮನಃಪಟಲದಲ್ಲಿ ಉಳಿಯುವಂತಹ ಉತ್ತಮ ಪ್ರಭಾವ ಬೀರುವ ಶಿಕ್ಷಕರು ಬಹಳ ವಿರಳ. ಅಂತಹ ವಿರಳರಲ್ಲಿ ಶ್ರೀಯುತ ಶ್ರೀನಾಥಶಾಸ್ತ್ರಿಯವರು ಒಬ್ಬರಾಗಿದ್ದಾರೆಂಬುದರಲ್ಲಿ ಎಳ್ಳಷ್ಟೂ ಸಂಶಯವಿಲ್ಲ.

ಇದುವರೆಗಿನ ಏಳು ದಶಕಗಳ ಬಾಳನ್ನು ಸಾರ್ಥಕವಾಗಿ ಬದುಕಿರುವ ಶ್ರೀಯುತ ಶಾಸ್ತ್ರಿಯವರಿಗೆ ಭಗವಂತನು ಆಯುರಾರೋಗ್ಯಗಳನ್ನು ಕರುಣಿಸಿ, ಅವರು ಇನ್ನು ಮುಂದೆಯೂ ತಮ್ಮ ಸಕಾರಾತ್ಮಕ ಚಟುವಟಿಕೆಗಳನ್ನು ಮಾಡುತ್ತಿರುವಂತೆ ಅನುಗ್ರಹಿಸಲೆಂದು ಪ್ರಾರ್ಥಿಸುತ್ತೇನೆ.

◆

ರಾವೈಪ್ರ ಸಹೋದ್ಯೋಗಿಗಳು ಕಂಡಂತೆ ಚಿವಿಶ್ರೀ

– ಕೆ. ಅನಂತರಾವ್

ಕಣಾದ ವಾರ್ಷಿಕ ಸಂಚಿಕೆ ಇಪ್ಪತ್ತೊಂಭತ್ತು ವರ್ಷಗಳಿಂದಲೂ ಸತತವಾಗಿ ವಿಜ್ಞಾನದ ಕ್ಲಿಷ್ಟವಾದ ವಿಚಾರಗಳನ್ನು ಕನ್ನಡದಲ್ಲಿ ಸುಲಭವಾಗಿ ಎಲ್ಲರಿಗೂ ಅರ್ಥವಾಗುವಂತೆ ಪ್ರಕಟಿಸುತ್ತಿದೆ. ಇಂತಹ ಪ್ರಯತ್ನ ಭಾರತದ ಪ್ರಾದೇಶಿಕ ಭಾಷೆಗಳಲ್ಲಿ ನಡೆಯುತ್ತಿರುವುದು ಅತಿ ವಿರಳ ಎಂದೇ ಹೇಳಬಹುದು. ಇದೊಂದು ಅಪರೂಪದ ಅದ್ಭುತ ಸಾಧನೆಯೆಂದರೆ ಅತಿಶಯೋಕ್ತಿಯಲ್ಲ. ಕಣಾದ ವಿಜ್ಞಾನ ಪತ್ರಿಕೆಯ ಮೂಲ ಉದ್ದೇಶವೆಂದರೆ ವಿಜ್ಞಾನದ ವಿವಿಧ ಪ್ರಾಕಾರಗಳ ಜ್ಞಾನವನ್ನು ಸುಲಭ, ಸರಳ ಕನ್ನಡದಲ್ಲಿ ವಿದ್ಯಾರ್ಥಿಗಳಿಗೆ ಮತ್ತು ಇತರ ಆಸಕ್ತರಿಗೆ ಲಭಿಸುವಂತೆ ಮಾಡುವುದು; ಕ್ಲಿಷ್ಟವಾದ ವೈಜ್ಞಾನಿಕ ಲೇಖನಗಳನ್ನು ಕನ್ನಡದಲ್ಲಿ ಬರೆಯಬಹುದೆಂದು ಮನವರಿಕೆ ಮಾಡಿಕೊಡುವುದು. ಈ ಪ್ರಯತ್ನ ಭಾಷೆಯ ಬೆಳವಣಿಗೆಗೂ ಪೂರಕ.

ಇಂತಹ ಅತ್ಯಮೂಲ್ಯವಾದ ಕಣಾದ ವಿಜ್ಞಾನ ಪತ್ರಿಕೆಯ ಅವಶ್ಯಕತೆಯನ್ನು ಮೂರು ದಶಕಗಳ ಹಿಂದೆಯೇ ಮನಗಂಡು ಈ ಸಾಹಸಕ್ಕೆ ಕೈ ಹಾಕಿದ ರಾಷ್ಟ್ರೀಯ ವೈಮಾಂತರಿಕ್ಷ ಪ್ರಯೋಗಶಾಲೆಗಳ (ಎನ್.ಎ.ಎಲ್) ಕನ್ನಡಾಭಿಮಾನಿಗಳಲ್ಲಿ ಶ್ರೀ ಚಿ.ವಿ. ಶ್ರೀನಾಥಶಾಸ್ತ್ರಿಗಳು ಪ್ರಮುಖರು. ಇವರು ಮೂರು ದಶಕಗಳಿಗೂ ಮೀರಿ ರಾಷ್ಟ್ರೀಯ ವೈಮಾಂತರಿಕ್ಷ ಪ್ರಯೋಗಶಾಲೆಗಳಲ್ಲಿ ವಿಜ್ಞಾನಿಯಾಗಿ ಸೇವೆ ಸಲ್ಲಿಸಿ ನಿವೃತ್ತರಾಗಿದ್ದಾರೆ. ಪ್ರಯೋಗಶಾಲೆಯ ಕಾರ್ಯಭಾರ ಇವರ ಕಣಾದ ಮತ್ತು ಕನ್ನಡದ ವಿವಿಧ ಕ್ಷೇತ್ರಗಳಲ್ಲಿನ ಸೇವೆಗೆ ಅಡಚಣೆಯಾಗದೆ ಅದನ್ನು ಪೂರಕವಾಗಿ ಬಳಸಿಕೊಂಡಿರುವುದು ಇವರ ಕಾರ್ಯವೈಖರಿಗೊಂದು ಉದಾಹರಣೆ. ಗಣಿತ, ಗುಣಿತಗಳು ಇವರ ವೃತ್ತಿ, ಕನ್ನಡ ನುಡಿಯ ಸೇವೆ ಇವರ ಪ್ರವೃತ್ತಿ.

ಭಾರತದ ಪ್ರಧಾನ ಮಂತ್ರಿಗಳ ಪರಂಪರೆಯಲ್ಲಿ ಲಾಲ್ ಬಹಾದ್ದೂರ್ ಶಾಸ್ತ್ರಿಗಳವರದು ಒಂದು ಅತಿ ವಿಶಿಷ್ಟಸ್ಥಾನ. ಅವರಂತೆಯೇ ಮೂರ್ತಿ ಚಿಕ್ಕದಾದರೂ ಕೀರ್ತಿ ದೊಡ್ಡದು ಎನ್ನುವಂತೆ ಶ್ರೀನಾಥಶಾಸ್ತ್ರಿಗಳ ವ್ಯಕ್ತಿತ್ವ ಬಹುಮುಖ. ಯಾವುದೇ ಕ್ಷೇತ್ರದಲ್ಲಿ ತಮ್ಮನ್ನು ತೊಡಗಿಸಿಕೊಂಡರೂ ಆಳವಾದ ಅಧ್ಯಯನ, ಅಪಾರ ಜ್ಞಾನ ಸಂಪಾದನೆ ಇವರ ಗುರಿ. ಇವರ ಜ್ಞಾನ ನಿಂತ ನೀರಲ್ಲ. ಲೇಖನಗಳು ಹಾಗೂ ಉಪನ್ಯಾಸಗಳ ಮೂಲಕ ಪ್ರಸರಣ ಮಾಡುವ ಹವ್ಯಾಸ.

ಇವರ ಕನ್ನಡದ ಸೇವೆ ರಾಷ್ಟ್ರೀಯ ವೈಮಾಂತರಿಕ್ಷ ಪ್ರಯೋಗಶಾಲೆಗಳು ಮತ್ತು ಅದರಲ್ಲಿನ ಕನ್ನಡ ಸಾಂಸ್ಕೃತಿಕ ಸಂಘಕ್ಕೆ ಸೀಮಿತವಾಗಲಿಲ್ಲ. ಗಣಕಯಂತ್ರದ ಜಗತ್ತಿನಲ್ಲಿ ಹೊಸ ಹೊಸ ತಂತ್ರಾಂಶಗಳ ಉಪಯೋಗ ಬಳಕೆಗೆ ಬರುತ್ತಿದ್ದಂತೆಯೇ ಅವುಗಳನ್ನು

ಕನ್ನಡ ಭಾಷೆಗಾಗಿ ಹಾಗೂ ಕನ್ನಡ ಭಾಷೆಯ ಮುಖಾಂತರ ಉಪಯೋಗಿಸಿಕೊಳ್ಳಲು ಕನ್ನಡಕ್ಕಾಗಿ ಒಂದು ಆಧುನಿಕ ತಂತ್ರಾಂಶದ ಅವಶ್ಯಕತೆಯನ್ನು ಮನಗಂಡವರಲ್ಲಿ ಶ್ರೀನಾಥಶಾಸ್ತ್ರಿಗಳಿಗೆ ಬಹುಮುಖ್ಯ ಸ್ಥಾನವಿದೆ.

ಇದಕ್ಕಾಗಿ ಇತರ ಕೆಲವು ಗಣ್ಯರೊಡಗೂಡಿ ಕನ್ನಡ ಗಣಕ ಪರಿಷತ್ತನ್ನು ಸ್ಥಾಪಿಸಿ, ಪರಿಷತ್ತಿಗೆ ಕರ್ನಾಟಕ ಸರಕಾರದ ಮಾನ್ಯತೆ ಸಿಗುವಲ್ಲಿ ಶ್ರಮಿಸಿದರು. ಪರಿಷತ್ತಿನ ಸುದೀರ್ಘ ಪರಿಶ್ರಮದ ಫಲವಾಗಿ ಕನ್ನಡದ ಆಧುನಿಕ ತಂತ್ರಾಂಶ "ನುಡಿ" ಬೆಳಕು ಕಂಡಿತು. "ನುಡಿ" ಅನೇಕ ಟೀಕೆ, ಅಡ್ಡಿ ಆತಂಕಗಳನ್ನು ಎದುರಿಸಿದರೂ ಕನ್ನಡಕ್ಕೆ ಅತ್ಯಮೂಲ್ಯ ಕಾಣಿಕೆಯಾಗಿದೆ. ಇವೆಲ್ಲಕ್ಕೂ ಶಾಸ್ತ್ರಿಗಳ ಪರಿಶ್ರಮ, ಕೊಡುಗೆ ಅಪಾರ. ಈಗ ರಾಜ್ಯ ಸರಕಾರದ ಎಲ್ಲಾ ಕಛೇರಿಗಳಲ್ಲೂ "ನುಡಿ" ತಂತ್ರಾಂಶ ಬಳಕೆಯಾಗುತ್ತಿದೆ. ಕನ್ನಡ ಆಡಳಿತ ಭಾಷೆಯಾಗಲು "ನುಡಿ"ಯೇ ಬಹುಮುಖ್ಯ ಸಾಧನ. ನುಡಿಯಿಂದಲೇ ಆಡಳಿತ ವ್ಯವಸ್ಥೆಯ ಕನ್ನಡೀಕರಣಕ್ಕೆ ರೆಕ್ಕೆ, ಪುಕ್ಕ.

ಪ್ರಚಾರಕ್ಕೆ ನಾಚುವ ಶಾಸ್ತ್ರಿಗಳನ್ನು ಅರಸಿ ಬಂದ ಪ್ರಶಂಸೆ ಪ್ರಶಸ್ತಿಗಳು ಅನೇಕ. ಅದರಲ್ಲಿ ಕೆಂಪೇಗೌಡ ಪ್ರಶಸ್ತಿಯೂ ಒಂದು. ಕನ್ನಡ ಸಾಹಿತ್ಯ ಸಮ್ಮೇಳನದಲ್ಲಿ ಭಾಷಣ ಮಾಡಲು ಆಹ್ವಾನ. ಹೀಗೆಯೇ ಆಕಾಶವಾಣಿ, ದೂರದರ್ಶನಗಳಲ್ಲೂ ಹಲವಾರು ಭಾಷಣ, ಸಂದರ್ಶನಗಳು. ಕನ್ನಡಕ್ಕಾಗಿ ಏನು ಮಾಡಲೂ ಕಂಕಣಬದ್ಧ; ಸದಾ ಸಿದ್ಧ.

ಕನ್ನಡ ನಾಡು-ನುಡಿಯ ಅಭಿಮಾನಿಗಳಾದ ಶಾಸ್ತ್ರಿಗಳು ಎಂದೂ ಭಾಷೆಯ ದುರಭಿಮಾನಿಯಲ್ಲ. ಆಂಗ್ಲಭಾಷೆ ಹಾಗೂ ಸಂಸ್ಕೃತಗಳ ಮೇಲೂ ಇವರ ಪ್ರಭುತ್ವ ಗಣನೀಯ. ಇತರ ಪ್ರಾಂತೀಯ ಭಾಷೆಗಳಲ್ಲೂ ಆಸಕ್ತಿ. ಎಲ್ಲವನ್ನೂ ತಾನೇ ಮಾಡಬೇಕೆನ್ನುವ ಹಟವಿಲ್ಲ. ಯಾವುದೇ ಯೋಜನೆ ಇರಲಿ, ತನ್ನೊಡನೆ ಇತರರನ್ನೂ ಹುರಿದುಂಬಿಸಿ ಕರೆದೊಯ್ಯುತ್ತಾ ಮಾರ್ಗದರ್ಶನ ಮಾಡುವ ಮನೋಭಾವ. ತನ್ನ ಸಾಧನೆಗಳನ್ನು ಪ್ರಚಾರಕ್ಕೊಡ್ಡದ ಸರಳ ಸ್ವಭಾವ. ಇತರರದು ಅಲ್ಪ ಸಾಧನೆಯಾದರೂ "ಅದ್ಭುತ" ಎಂದು ಹಾಡಿಹೊಗಳುವ ಸಜ್ಜನಿಕೆ, ಹೃದಯವಂತಿಕೆ.

"ಚಿಕ್ಕನಾಯಕನಹಳ್ಳಿ ವಿಶ್ವನಾಥಶಾಸ್ತ್ರೀ ಶ್ರೀನಾಥ ಶಾಸ್ತ್ರಿಗಳು ಸೇವೆಯಿಂದ ನಿವೃತ್ತಿ ಹೊಂದಿರುವುದು (೩೦ ಸೆಪ್ಟೆಂಬರ್ ೨೦೦೪) ಒಂದು ವಿಧದಲ್ಲಿ ದುಃಖಕರವಾದರೂ ಕಣಾದ ವಿಜ್ಞಾನ ಪತ್ರಿಕೆಗೆ ಶಾಸ್ತ್ರಿಗಳಿಂದ ಇನ್ನೂ ಹೆಚ್ಚಿನ ಲಾಭವಾಗಬಹುದೆಂದು ಆಶಿಸಬಹುದಾಗಿದೆ. ಇವರು ಸುಮ್ಮನೆ ಕೈ ಕಟ್ಟಿ ಕುಳಿತುಕೊಳ್ಳುವ ವ್ಯಕ್ತಿಯಲ್ಲ. ಇವರ ಹೆಚ್ಚಿನ ಬಿಡುವಿನ ವೇಳೆ ಕನ್ನಡಕ್ಕೆ, ಕನ್ನಡ ಸಾಂಸ್ಕೃತಿಕ ಸಂಘಕ್ಕೆ ಮತ್ತು ಕಣಾದಕ್ಕೆ ಲಭಿಸುವ ನಿರೀಕ್ಷೆ ಹೆಚ್ಚಾಗಿದೆ.

ಕಣಾದವನ್ನು ಪ್ರತಿ ವರ್ಷ ಪ್ರಕಟಿಸುವುದು ಒಂದು ಗುರುತರವಾದ ಹೊಣೆ. ಅದನ್ನು ಶಾಸ್ತ್ರಿಗಳು ಹಲವಾರು ವರ್ಷಗಳು ಯಶಸ್ವಿಯಾಗಿ ನಿರ್ವಹಿಸಿದರು. ಅವರು

ಅಷ್ಟಕ್ಕೇ ಸುಮ್ಮನಾಗದೆ, ತಾವು ಕಣಾದದ ಸಾರಥ್ಯ ವಹಿಸಿಕೊಳ್ಳದೇ ಇರುವಾಗಲೂ ಇತರರನ್ನು ಹುರಿದುಂಬಿಸಿ, ಕಣಾದದ ಪ್ರಕಟಣೆ ಸುಸೂತ್ರವಾಗಿ ನಡೆಯುವಂತೆ ಒಂದು ಉತ್ಸಾಹೀ ತಂಡವನ್ನೇ ಕಟ್ಟಿದ್ದಾರೆ. ಇದರಿಂದಾಗಿ ಕಣಾದ ವಿಜ್ಞಾನ ಪತ್ರಿಕಾ ಪ್ರಕಟಣೆ ಸತತವಾಗಿ ನಡೆದು, ಅದರ ಭವಿಷ್ಯ ಉಜ್ವಲವಾಗಿದೆ ಎನ್ನುವುದರಲ್ಲಿ ಸಂಶಯವಿಲ್ಲ. ಅಂತೆಯೇ ಶ್ರೀನಾಥಶಾಸ್ತ್ರಿಗಳು ತಮ್ಮ ವೈಯಕ್ತಿಕ ಜೀವನದಲ್ಲಿ ಹಾಗೂ ಕನ್ನಡಕ್ಕಾಗಿ ಕಂಡ ಕನಸುಗಳು ನನಸಾಗಿ ಅವರ ಸಂಕಲ್ಪಗಳೆಲ್ಲಾ ಫಲಪ್ರದವಾಗಲೆಂದು ನಮ್ಮೆಲ್ಲರ ಹಾರೈಕೆ.

****

ಡಾ॥ ಎಮ್.ಎಸ್.ರಾಜಮೂರ್ತಿ

ಶ್ರೀನಾಥಶಾಸ್ತ್ರಿ ಹಾಗೂ ಕಣಾದ, ನಾಣ್ಯದ ಎರಡು ಮುಖಗಳ ಹಾಗೆ. ಮೂವತ್ತರ ಪ್ರಾಯಕ್ಕೆ ಪದಾರ್ಪಣೆ ಮಾಡುತ್ತಿರುವ ಕಣಾದ ಪತ್ರಿಕೆಯ ಜನ್ಮ, ಬೆಳವಣಿಗೆ ಮತ್ತು ಈಗಿನ ಪ್ರೌಢಾವಸ್ಥೆಗೆ, ತಮ್ಮ ಜೀವನದ ಮೂರು ದಶಕವನ್ನು ಅನೇಕ ರೂಪಗಳಲ್ಲಿ ಯೋಗದಾನ ನೀಡಿರುವ ಶಾಸ್ತ್ರಿಗಳನ್ನು ಕಣಾದ ಶಾಸ್ತ್ರಿಗಳೆಂದು ಕರೆದರೆ ತಪ್ಪಾಗಲಾರದು. ಕಣಾದದ ಪ್ರಪ್ರಥಮ ಸಂಚಿಕೆ ಹೊರಬಂದಾಗ ಶುರುವಾದ ಶಾಸ್ತ್ರಿಗಳೊಂದಿಗಿನ ಸ್ನೇಹ, ಅವರ ಕನ್ನಡದ ಬೆಳವಣಿಗೆಗೆ ಇರುವ ಕಾಳಜಿ ಮತ್ತು ಅಚಲ ಬಾಂಧವ್ಯ ಅವರ ಬಗ್ಗೆ ಗೌರವವಾಗಿ ಪರಿವರ್ತಿಸಿದೆ. ೧೯೭೫ರಲ್ಲಿ ಕಣಾದ ಜನ್ಮ ತಳೆದಾಗ, ಕನ್ನಡದಲ್ಲಿ ವಿಜ್ಞಾನ ಪ್ರಬಂಧಗಳನ್ನು ಬರೆಯುವ ಪ್ರಯತ್ನಗಳನ್ನು ಟೀಕಿಸಿದವರು ಹಲವಾರು ಮಂದಿ. ಇನ್ನು ಕೆಲವರು ಸುಲಭವಾಗಿ ಕಲಿಯುವ ಆಂಗ್ಲ ಮಾರ್ಗವಿರುವಾಗ ಇದೊಂದು ಸುತ್ತಿಬಳಸಿ ಕಷ್ಟಕರವಾಗಿ ವಿಷಯವನ್ನು ತಿಳಿಯಹೇಳುವ ದಾರಿ ಎಂದು ಮುಖ ಮುರಿದರು. ಧೃತಿಗೆಡದ ತ್ರಿವಿಕ್ರಮನಂತೆ ಮುಂದುವರಿದವರು ಶಾಸ್ತ್ರಿಗಳು. ಕಣಾದ ಪ್ರಬಂಧ ಸ್ಪರ್ಧೆಗಳಿಂದ ಜನಸಾಮಾನ್ಯರಿಗೆ ವಿಜ್ಞಾನದ ವಿಷಯಗಳನ್ನು ತಲುಪಿಸುವ ಹಲವಾರು ಪ್ರತಿಭೆಗಳು ಅರಳಿದವು. ಡಾ॥ ನಾ.ಸೋಮೇಶ್ವರ ಇದಕ್ಕೆ ಒಂದು ಉತ್ತಮ ಉದಾಹರಣೆ. ಪ್ರಯೋಗಶಾಲೆಯಲ್ಲೂ ಕನ್ನಡ ಪ್ರಬಂಧಗಳ ಮೂಲಕ, ವಿಜ್ಞಾನ ವಿಷಯಗಳನ್ನು ಆಕರ್ಷಕ ರೀತಿಯಲ್ಲಿ ಹೇಳುವ ಕಲೆ ಹೊರಹೊಮ್ಮಲು ನಾಂದಿಯಾದರು. ತಮ್ಮದೇ ಆದ ಶೈಲಿಯಲ್ಲಿ ಸಹೋದ್ಯೋಗಿಗಳನ್ನು ಹುರಿದುಂಬಿಸಿ ಪ್ರಬಂಧಗಳನ್ನು ಬರೆಸುವ ಚಾಣಾಕ್ಷತನ ಶಾಸ್ತ್ರಿಗಳದು. ಜೂನ್/ಜುಲೈ ತಿಂಗಳಲ್ಲಿ ಶುರುವಾಗುವ ಕಣಾದ ಜ್ವರ ಶಾಂತವಾಗುತ್ತಿದ್ದದ್ದು ನವೆಂಬರ್ ಅಂತ್ಯದಲ್ಲಿ. ಶಾಸ್ತ್ರಿಗಳಿಗೆ ವರ್ಷದ ಈ ೬ ತಿಂಗಳು ವಿಶೇಷ ಪರ್ವ. ಕಣಾದದ ಕಂಪು ಶಾಸ್ತ್ರಿಗಳ ಮನೆಗೆ ಹರಡಿ, ಅವರ ಮನೆ "ಎಡಿಟಂಗ್ ಅಂಡ್ ಪಬ್ಲಿಶಿಂಗ್ ಆಫೀಸ್" ಆಗಿ ಮಾರ್ಪಾಡಾಗುತ್ತಿತ್ತು. ಇತ್ತೀಚಿನ ವರ್ಷಗಳಲ್ಲಿ ಕನ್ನಡ ಕವನಗಳನ್ನು ಬರೆಯುವ ಗೀಳನ್ನು ಹಲವರಿಗೆ ತಗುಲಿಸುವಲ್ಲಿ ಸಹ ಶಾಸ್ತ್ರಿಗಳು

ಯಶಸ್ವಿಯಾದರು. ೩೦ ವರುಷಗಳ ಕಣಾದ ಪ್ರಯಾಣದಲ್ಲಿ, ತಾವೂ ಸಾಹಿತ್ಯ ಸೇವೆಯಲ್ಲಿ ಬೆಳೆದು ತಮ್ಮೊಟ್ಟಿಗೆ ಇನ್ನಿತರರನ್ನು ಬೆಳೆಸಿದ ಶ್ರೀನಾಥ/ಕಣಾದ ಶಾಸ್ತ್ರಿಗಳಿಗೆ ನನ್ನ ಹೃತ್ಪೂರ್ವಕ ನಮನಗಳು.

****

– ಎಚ್.ವಿ.ರಾಮಚಂದ್ರ

ಸೃಜನಶೀಲರು, ಅಗಾಧ ಜ್ಞಾನವಿದ್ದರೂ ನಿರಹಂಕಾರಿಗಳು ಹಾಗೂ ಚಟುವಟಿಕೆಯ ಕ್ರಿಯಾಶೀಲತೆಯ ಆಗರವಾದ ಶ್ರೀನಾಥಶಾಸ್ತ್ರಿಗಳ ನಿಕಟವರ್ತಿಗಳಲ್ಲಿ ನಾನು ಒಬ್ಬ ಎಂದು ಯೋಚಿಸುವಾಗ ನನಗೆ ಬಹಳ ಹೆಮ್ಮೆಯಾಗುತ್ತದೆ. ನನ್ನಲ್ಲಿರುವ ಕನ್ನಡದ ಪುಸ್ತಕಗಳ ಮೇಲಿನ ಪ್ರೀತಿ ಅವರೊಂದಿಗೆ ಸ್ನೇಹಕ್ಕೆ ನಾಂದಿ ಹಾಡಿತು. ಆ ರೀತಿ ಆರಂಭವಾದ ಪರಿಚಯ ನನ್ನ ಜೀವನದ ಅವಿಸ್ಮರಣೀಯ ಘಟನೆ. ನಂತರ ಸಂಘದ ಉಪಾಧ್ಯಾಕ್ಷನಾಗಿ ಹಲವಾರು ವರ್ಷ ಅವರೊಂದಿಗೆ ಗ್ರಂಥಾಲಯದಲ್ಲಿ, ಕಣಾದ ಮಾರಾಟದಲ್ಲಿ, ಸಂಘದ ಕಾರ್ಯ ಚಟುವಟಿಕೆಗಳಲ್ಲಿ, ಕೆಲವು ಧಾರ್ಮಿಕ ಮತ್ತು ವಿಜ್ಞಾನಕ್ಕೆ ಸಂಬಂಧಪಟ್ಟ ಕಾರ್ಯಕ್ರಮಗಳಲ್ಲಿ ಅವರೊಂದಿಗೆ ಕೆಲಸ ಮಾಡುವಾಗ ಅವರ ಅದ್ಭುತ ವ್ಯಕ್ತಿತ್ವವನ್ನು ಕಂಡು ಬೆರಗಾಗಿದ್ದೇನೆ. ಹೊಸ ಚಿಗುರು ಹಳೆ ತತ್ವದೊಡಗೂಡಿದಂತೆ, ಪುರಾತನ ಶಾಸ್ತ್ರ-ಜ್ಞಾನ ಮತ್ತು ಆಧುನಿಕ ವಿಜ್ಞಾನಗಳ ಸರಿಯಾದ ಮಿಲನವನ್ನು ಇವರ ಮಾತುಗಳಲ್ಲಿ ಕಂಡಿದ್ದೇನೆ. ಇವರ ಭಾಷಾಪ್ರೇಮ, ಸಂಸ್ಕೃತಿಯ ಬಗೆಗಿನ ಅಭಿಮಾನ ಅನನ್ಯವಾದುದು. ಕಣಾದಕ್ಕೆ ಇವರ ಕೊಡುಗೆ ಅಪಾರವಾದುದು. ಬಹು ಜನಕ್ಕೆ ಇವರು ಕಣಾದ ಶಾಸ್ತ್ರಿಗಳೆಂದೇ ಪರಿಚಯ. ಇವರ ಕಾರ್ಯಶ್ರದ್ಧೆ, ಸಹಕಾರಿ ಮನೋಭಾವ ಕಿರಿಯರಿಗೆ ಮಾದರಿಯಾಗಿದೆ. ಯಾವ ಸಮಸ್ಯೆ ಎದುರಾದರೂ ಅದನ್ನು ನಗುನಗುತ್ತಲೇ ಬಗೆಹರಿಸುವ ಸಾಮರ್ಥ್ಯ ಇವರಿಗೆ ಇದೆ. ಇವರಿಂದ ಗಣಕ ಪರಿಷತ್ತಿಗೆ, ಕನ್ನಡ ಭಾಷೆಯ ಅಭಿವೃದ್ಧಿಗೆ, ಕಿರಿಯ ಲೇಖಕರಿಗೆ ವಿಜ್ಞಾನದ ವಿಷಯವನ್ನು ಸಾಮಾನ್ಯ ಜನರಿಗೆ ತಿಳಿಯುವ ಹಾಗೆ ತಲುಪಿಸುವಲ್ಲಿ ಮಾರ್ಗದರ್ಶನ ಇನ್ನೂ ಆಗಬೇಕಿದೆ. ದೇವರು ಇವರಿಗೂ ಇವರ ಕುಟುಂಬಕ್ಕೂ ಆಯುರಾರೋಗ್ಯ ಕರುಣಿಸಲಿ ಮತ್ತು ಇವರ ನಿವೃತ್ತಿ ಜೀವನ ಆನಂದಮಯವಾಗಿರಲೆಂದು ಆ ದೇವರಲ್ಲಿ ಬೇಡುತ್ತೇನೆ.

****

– ಡಾ॥ ಸಿ.ದಿವಾಕರ್

ಶ್ರೀ ಶ್ರೀನಾಥಶಾಸ್ತ್ರಿಗಳು ಮತ್ತು ನನ್ನ ಸ್ನೇಹವು ನಾನು ಎನ್.ಎ.ಎಲ್ ಸೇರಿದ ವರ್ಷ ೧೯೭೭ರಿಂದ ಪ್ರಾರಂಭವಾಯಿತು. ಸುಮಾರು ೨೫ ವರ್ಷಗಳ ಕಾಲ ಎನ್.ಎ.ಎಲ್.

ಕನ್ನಡ ಸಂಘದ ವಾರ್ಷಿಕ ವಿಜ್ಞಾನ ಪತ್ರಿಕೆ, ಮತ್ತಿತರ ಪ್ರಕಟಣೆ ಮತ್ತು ಪ್ರಸಾರ ಕಾರ್ಯದಲ್ಲಿ ಅವರೊಡನೆಯ ಸಹಭಾಗಿತ್ವವು ನನ್ನ ಮನಸ್ಸಿನಲ್ಲಿ ಅಚ್ಚಳಿಯದೆ ಉಳಿದಿದೆ. ಕನ್ನಡ ಭಾಷೆಗೆ ಶ್ರೀಯುತರ ಸೇವೆಯು ನಿರಂತರವಾಗಿ ನಡೆಯಲಿ ಎಂದು ಹಾರೈಸುತ್ತೇನೆ.

– ಎಮ್.ಆರ್.ಸುರೇಶ್

ಕನ್ನಡ ಸಾಂಸ್ಕೃತಿಕ ಸಂಘದ ಕಾರ್ಯಕಾರಿ ಸಮಿತಿಯ ಉಪಾಧ್ಯಕ್ಷರಲ್ಲಿ ಒಬ್ಬರಾದ ಶ್ರೀ ಚಿ.ವಿ.ಶ್ರೀನಾಥಶಾಸ್ತ್ರಿಯವರದು ಬಹುಮುಖ ವ್ಯಕ್ತಿತ್ವ ಕೈಗೊಂಡ ಕಾರ್ಯದಲ್ಲಿ ಪರಿಣತಿ, ಮಗ್ನತೆ, ಆಳವಾದ ಅಧ್ಯಯನ ಹಾಗೂ ಸಂಪಾದಕೀಯದಲ್ಲಿ ತೀವ್ರವಾದ ಆಸಕ್ತಿ ಉಳ್ಳವರು. ಕನ್ನಡ ಭಾಷೆಯಲ್ಲಿ ವಿಜ್ಞಾನ ಲೇಖನಗಳನ್ನು ಒಳಗೊಂಡ ಕಣಾದ ಪುಸ್ತಕದ ಪ್ರಥಮ ಸಂಚಿಕೆಯನ್ನು ೧೯೭೫ರಲ್ಲಿ ಹೊರತರಲಾಯಿತು. ಇದರ ಸಂಪಾದಕೀಯ ಪ್ರಕಟಣಾ ಕಾರ್ಯವನ್ನು ಡಾ.ಕೆ.ಜಗನ್ನಾಥರಾವ್ ಮತ್ತು ಶ್ರೀ ಶ್ರೀನಾಥಶಾಸ್ತ್ರಿಯವರು ನಿರ್ವಹಿಸಿದ್ದರು. ಕನ್ನಡ ಸಾಂಸ್ಕೃತಿಕ ಸಂಘದ ರಜತ ಮಹೋತ್ಸವ ಸಂದರ್ಭದಲ್ಲಿ (೧೯೮೨) 'ಸಾರಸ' ಸಂಚಿಕೆಯನ್ನು ಶ್ರೀ ತಿಪ್ಪೇರುದ್ರಪ್ಪನವರ ನೇತೃತ್ವದಲ್ಲಿ ಯಶಸ್ವಿಯಾಗಿ ಹೊರತಂದರು. ಈ ಸಾರಸ ಸಂಚಿಕೆಯನ್ನು ಡಾ. ರಾಜಕುಮಾರ್‌ರವರು ಬಿಡುಗಡೆ ಮಾಡಿದರು. ನಾನು ಕಾರ್ಯದರ್ಶಿಯಾಗಿದ್ದ ಎರಡು ವರ್ಷಗಳ ಅವಧಿಯಲ್ಲಿ (೧೯೮೬-
೯ ೮)
ಶ್ರೀ ಶಾಸ್ತ್ರಿಯವರ ಸಹಾಯ ಅಪಾರ. ಎಲ್ಲಾ ಚಟುವಟಿಕೆಗಳಲ್ಲಿಯೂ ಅವರ ಪಾತ್ರ ಬಹಳ ಶ್ಲಾಘನೀಯ. ಅದಕ್ಕಾಗಿ ನಾನು ಅವರಿಗೆ ನನ್ನ ಕೃತಜ್ಞತೆಗಳನ್ನು ಅರ್ಪಿಸುತ್ತೇನೆ.

****

– ಈ.ರಾ.ನ.ಗೌಡರ್

ರಾಷ್ಟ್ರೀಯ ವೈಮಾಂತರಿಕ್ಷ ಪ್ರಯೋಗಾಲಯದ ಕನ್ನಡ ಸಾಂಸ್ಕೃತಿಕ ಸಂಘದ ಸ್ಥಾಪನೆ, ಬೆಳವಣಿಗೆ ಮತ್ತು ಚಟುವಟಿಕೆಗಳಿಗೆ ಶ್ರೀ ಶ್ರೀನಾಥಶಾಸ್ತ್ರಿಗಳ ಕೊಡುಗೆ ಅಪಾರ. ಇವರು ವಿಜ್ಞಾನ ಪತ್ರಿಕೆ 'ಕಣಾದ'ದ ೨೯ ಸಂಚಿಕೆಗಳು ಪ್ರಕಟಣೆಯಾಗಲು ಮತ್ತು ಯಶಸ್ವಿಯಾಗಿ ಸಮಯಕ್ಕೆ ಸರಿಯಾಗಿ ಬಿಡುಗಡೆಯಾಗಲು ಬಹಳ ಶ್ರಮ ಪಟ್ಟಿದ್ದಾರೆ. ಇವರ ಚಟುವಟಿಕೆ ಈ ಸಂಘಕ್ಕೆ ಮಾತ್ರ ಸೀಮಿತವಾಗಿರದೆ ಕನ್ನಡ ಗಣಕ ಪರಿಷತ್ತಿನ ಸ್ಥಾಪನೆ ಹಾಗೂ ರಾಜ್ಯದೆಲ್ಲೆಡೆ ಗಣಕ ಯಂತ್ರದಲ್ಲಿ ಕನ್ನಡದ ಅಳವಡಿಕೆಯಲ್ಲಿ ಹೆಚ್ಚಿನ ಪಾತ್ರವಹಿಸಿದ್ದಾರೆ.

◆

ಶ್ರೀನಾಥಶಾಸ್ತ್ರಿ ಅಂಕಲ್

–ಎಂ. ಆರ್ . ಶಿಲ್ಪಾ ಜೋಯಿಸ್
ಸಾಫ್ಟ್‌ವೇರ್ ಇಂಜಿನಿಯರ್, ಯುಎಸ್‌ಎ

ಒಮ್ಮೆ ನಾನು ಎನ್.ಎ.ಎಲ್‌ನಲ್ಲಿ ಆಯುಧ ಪೂಜೆಗೆ ಹೋದಾಗ, ನಮ್ಮ ತಂದೆಯ ಸ್ನೇಹಿತರಾದ ಶ್ರೀ ಶ್ರೀನಾಥ ಶಾಸ್ತ್ರಿಗಳ ವ್ಯಕ್ತಿ ಪರಿಚಯವಾಯಿತು. ಆಗ ಕೆಲವೇ ದಿನಗಳಲ್ಲಿ ಅವರ ವ್ಯಕ್ತಿತ್ವದ ಪರಿಚಯವಾಗುವುದೆಂದೂ ಮತ್ತು ಅವರಿಂದ ನನ್ನ ಮೇಲೆ ಯಾವುದೇ ಪ್ರಭಾವ ಆಗುವುದೆಂದೂ ನೆನಸಿರಲಿಲ್ಲ. ನಮ್ಮಿಬ್ಬರ ವಯಸ್ಸಿನಲ್ಲಿ ಬಹಳಷ್ಟು ಅಂತರವಿದ್ದರೂ ಸಹ ಎಲ್ಲರನ್ನೂ ಆಕರ್ಷಿಸಬಲ್ಲ ಅವರ ಆತ್ಮೀಯತೆ, ಮೃದು ಸ್ವಭಾವಗಳಿಗೆ ನಾನೂ ಒಳಗಾದೆ. ಇವರ ಮೊದಲ ಒಲವು ವಿಜ್ಞಾನವೋ ಅಥವಾ ಕನ್ನಡವೋ ಹೇಳುವುದು ಕಷ್ಟ ಆದರೆ ಇವೆರಡರ ಬಗ್ಗೆಯೂ ಇವರ ವಿಶ್ವಾಸ ಅದಮ್ಯ. ವೈಜ್ಞಾನಿಕ ಕ್ಷೇತ್ರದಲ್ಲಿ ಕನ್ನಡವನ್ನು ಬೆಳೆಸಲು ಶಾಸ್ತ್ರಿಗಳು ಪ್ರತಿ ಅವಕಾಶವನ್ನೂ ಬಳಸುತ್ತಾರೆಂಬುದು ನಿಜ. ಈ ದಿಶೆಯಲ್ಲಿ ಭಾಗವಹಿಸಲು ನನಗೂ ಒಂದು ಅವಕಾಶ ಕೊಟ್ಟು, ಧೈರ್ಯ ತುಂಬಿ, ಪ್ರೋತ್ಸಾಹ ನೀಡಿ, ಶಾಸ್ತ್ರಿಗಳು ನನಗೇ ತಿಳಿಯದ ನನ್ನ ಒಂದು ಅಂಶವನ್ನು ಹೊರತಂದಿದ್ದಾರೆ. ನನ್ನಂತೆಯೇ ಲಾಭ ಪಡೆದ ಕಿರಿಯರು ಅನೇಕ. ಇಂದಿಗೂ ನನ್ನ ಮತ್ತು ಶಾಸ್ತ್ರಿಗಳ ನಡುವಿನ ಬಾಂಧವ್ಯ ಸತತವಾಗಿ ಮುನ್ನಡೆಯುತ್ತಾ ಬಂದಿದೆ. ಇವರ ಕನ್ನಡದ ಒಲವು ಅಪಾರ. ಹಾಗೆಂದು ಇತರ ಭಾಷೆಗಳ ಬಗ್ಗೆ ತಾಳ್ಮೆ ಮತ್ತು ಸಹೃದಯತೆಗಳನ್ನು ಉಳಿಸಿಕೊಂಡಿರುವುದು ಅವರ ಹಿರಿಮೆ. ನಾನು ಮೊದಲು ವಾಡಿಕೆಯಂತೆ "ಅಂಕಲ್" ಎಂದು ಕರೆದೂ ಇವರ ಆದರದ ಒಪ್ಪಿಗೆ ನಿರ್ದಿಷ್ಟ ಗುರಿಯಿರುವಾಗ ಸಣ್ಣ ವಿಷಯಗಳ ಬಗ್ಗೆ ವಿಶಾಲ ದೃಷ್ಟಿ. ನನ್ನ ಕೈಯಲ್ಲಿ ಬಹಳಷ್ಟು ಕನ್ನಡ ಲೇಖನಗಳನ್ನು ಬರೆಸಿದ ನಂತರವೂ ಈ ಕನ್ನಡ ಪ್ರೇಮಿಗಳು ನನ್ನ ಮಟ್ಟಿಗೆ ಶ್ರೀನಾಥಶಾಸ್ತ್ರಿ ಅಂಕಲ್ ಆಗೇ ಉಳಿದಿದ್ದಾರೆ.

ಅವರ ಸಲಹೆಯನ್ನು ಒಪ್ಪಲು ಸ್ವಲ್ಪ ಹಿಂಜರಿದರೂ ಅವರ ಪ್ರೋತ್ಸಾಹ ಹಾಗೂ ನನ್ನ ತಂದೆ–ತಾಯಿಯರ ಪ್ರೇರಣೆಯಿಂದಾಗಿ ಕನ್ನಡ ಬರಹದಲ್ಲಿ ನನ್ನ ಪುಟ್ಟ ಹೆಜ್ಜೆಗಳು ಆರಂಭವಾದವು. ನನ್ನ ಮೊದಲ ಪ್ರಯತ್ನ ಜ್ವಾಲಾಮುಖಿಗಳ ಬಗ್ಗೆ ಒಂದು ಲೇಖನ. ಎನ್.ಎ.ಎಲ್ ಕನ್ನಡ ಸಾಂಸ್ಕೃತಿಕ ಸಂಘವು ಹೈಸ್ಕೂಲ್ ವಿದ್ಯಾರ್ಥಿಗಳಿಗೆ ನಡೆಸಿದ ಸ್ಪರ್ಧೆಯಲ್ಲಿ ಬಹುಮಾನ ಪಡೆಯಿತು. ಇದರಿಂದ ಉತ್ತೇಜಿತಗೊಂಡು ನಾನು ಮುಂದೆ ಲೇಖನಗಳನ್ನು ಬರೆಯುತ್ತಲೇ ಬಂದೆ. ಇದಕ್ಕೆ ಶಾಸ್ತ್ರಿ ಅಂಕಲ್ ನನಗೆ ಹಿಮ್ಮೆಟ್ಟಲು ಅವಕಾಶವಾಗಲೀ ಅಥವಾ ಅನುಮತಿಯಾಗಲೀ ಕೊಡದಿರುವುದೇ ಕಾರಣ. ಅನೇಕ ವೇಳೆ ರಾತ್ರಿ ಹತ್ತು ಗಂಟೆಯ ಮೇಲೆ ಫೋನ್ ಮೂಲಕ ಇವರನ್ನು ಸಂಪರ್ಕಿಸಿ ಇವರ

ಸಲಹೆಗಳನ್ನು ಪಡೆಯುವುದು ಸಾಮಾನ್ಯವಾಗಿತ್ತು. ಇಂತಹ ಬೆಂಬಲದಿಂದ ಮುಂದಿನ ಎಲ್ಲಾ ಸ್ಪರ್ಧೆಗಳಲ್ಲೂ ಯಶಸ್ವಿಯಾಗಿ ಭಾಗವಹಿಸಿದೆ. ಮುಂದೊಂದು ದಿನ ಶಾಸ್ತ್ರಿ ಅಂಕಲ್ "ಇನ್ನು ಮುಂದೆ ನಿನ್ನ ಲೇಖನಗಳನ್ನು ಸ್ಪರ್ಧೆಗೆ ತೆಗೆದುಕೊಳ್ಳುವುದಿಲ್ಲ, ಆದರೆ ಬರೆಯುವುದನ್ನು ಬಿಡಬೇಡ. ಸೂಕ್ತವಾಗಿದ್ದರೆ ಲೇಖನಗಳನ್ನು ಆಹ್ವಾನಿತ ಬರಹಗಳಾಗಿ ಪ್ರಕಟಿಸುತ್ತೇವೆ. ಸ್ವಲ್ಪ ಹೆಚ್ಚಿನ ಶ್ರಮ ಪಡು" ಎಂದರು. ಇದರ ಫಲಿತಾಂಶ ಮತ್ತೆ ಕೆಲವು ಲೇಖನಗಳ ಪ್ರಕಟಣೆ. ಈ ಹವ್ಯಾಸ ಮುಂದೆ ವಿಶ್ವಕನ್ನಡ ಸಮ್ಮೇಳನದ ವಿಜ್ಞಾನದ ಸಂಪುಟದಲ್ಲಿ ಒಂದು ಲೇಖನ ಬರೆಯಲು ಅವಕಾಶ ಸಿಗಲು ಸಹಾಯವಾಯಿತು. ಈ ಪ್ರಯತ್ನವೂ ಯಶಸ್ವಿಯಾಗಿ ಕೆಲವರು ಬೆನ್ನು ತಟ್ಟಿದಾಗ ನನ್ನ ಮೊದಲ ವಂದನೆ ಶಾಸ್ತ್ರಿ ಅಂಕಲ್‌ಗೆ ಸಂದಿತು. ಇದನ್ನು ಅವರಿಗೆ ತಿಳಿಸಿದಾಗ, "ಬಹಳ ಸಂತೋಷ, ಆದರೆ ಆಶ್ಚರ್ಯವಿಲ್ಲ, ಇನ್ನೂ ಮುಂದೆ ನಡೆ" ಎಂದರು. ಮತ್ತೊಮ್ಮೆ, ಶ್ಲಾಘನೆ, ಉತ್ತೇಜನದೊಂದಿಗೆ ಬೆಂಬಲದ ಆಶ್ವಾಸನೆ, ಪ್ರಗತಿಗೆ ಪ್ರೇರಣೆ ನೀಡಿದರು. ಶಾಸ್ತ್ರಿಗಳಿಂದ ನನ್ನಂತೆಯೇ ಉಪಕಾರ, ಪ್ರಯೋಜನ ಪಡೆದ ಕಿರಿಯರು ಅನೇಕ. ಇವರಲ್ಲಿ ನನ್ನ ತಂಗಿ ಮತ್ತು ಕೆಲವು ಮಿತ್ರರೂ ಸೇರಿದ್ದಾರೆ. ಇದೇ ರೀತಿ ಆರಂಭಿಸಿ ಬಹಳ ಮುನ್ನಡೆದ ಕೆಲವರು ಇಂದು ಪ್ರಸಿದ್ಧರಾಗಿದ್ದಾರೆ.

ಕಣಾದದ ಬಳಗ ಸತತ ಹೊಸ ಹೆಜ್ಜೆಗಳನ್ನಿಡುತ್ತ ಮುಂದುವರೆಯಿತು. ಇವುಗಳಲ್ಲಿ ವಿದ್ಯಾರ್ಥಿಗಳಿಗಾಗಿ ನಡೆಸುತ್ತಿದ್ದ ವೈಜ್ಞಾನಿಕ ರಸಪ್ರಶ್ನೆ ಕಾರ್ಯಕ್ರಮ ಬಹಳ ಪ್ರಮುಖವಾದುದು. ಇದೂ ಕಿರಿಯರ ಪ್ರತಿಭೆಯನ್ನು ಹೊರತರುವುದರಲ್ಲಿ ಬಹು ಯಶಸ್ವಿಯಾಯಿತು. ಜೊತೆಗೆ ಅವರಿಗೆ ಸಭಾ ಕಂಪನವನ್ನು ಎದುರಿಸಲೂ ಸಹಾಯ ಮಾಡಿತು.

ಪ್ರತಿ ವರ್ಷ ಆಗಸ್ಟ್ ತಿಂಗಳು ಬಂದಿತೆಂದರೆ ನಮಗೆಲ್ಲಾ ಈ ಚಟುವಟಿಕೆಯ ನಿರೀಕ್ಷೆ. ಶ್ರಮವೆಂಬ ಕಲ್ಪನೆ, ಆದರೂ ಸಂಭ್ರಮದ ಸಿದ್ಧತೆ. ಆದರೆ ಕಣಾದದ ಎಲ್ಲಾ ಕ್ಷೇತ್ರಗಳಿಗೂ ಶ್ರಮಿಸುತ್ತಿದ್ದ ಶಾಸ್ತ್ರಿ ಅಂಕಲ್ ಮತ್ತು ಸಂಪಾದಕ ಬಳಗದವರ ಹೊರೆ ಎಷ್ಟೆಂದು ತಿಳಿದಾಗ ಬಹಳ ಆಶ್ಚರ್ಯವಾಯಿತು. ಇವರೆಲ್ಲರೂ ತಮ್ಮ ಎಂದಿನ ಕೆಲಸ ಕಾರ್ಯಗಳೊಂದಿಗೆ ಈ ಹೊರೆಯನ್ನು ಹೇಗೆ ನಿಭಾಯಿಸುತ್ತಿದ್ದರೋ ತಿಳಿಯದು. ಆದರೆ ಚಟುವಟಿಕೆಯ ಒಲವು ಅದರ ಯಶಸ್ಸಿಗೆ ಮೂಲ ಕಾರಣ ಎಂಬ ಮಾತಿಗೆ ಕಣಾದ ಒಂದು ಸಾಕ್ಷಿ. ಇದರ ಲಾಭ ಪಡೆಯಬಯಸುವ ಕಿರಿಯರಿಗೆ ಎಂದೂ ಕಣಾದ ಬಳಗದ ಸಹಾಯ ಹಸ್ತ ಸಿದ್ಧ.

ಕನ್ನಡದ ಗಣಕೀಕರಣಕ್ಕೆ ಅವಶ್ಯವಾದ ಮುಂದಿನ ಹೆಜ್ಜೆಗಳಲ್ಲಿ ತಂತ್ರಾಂಶದ ಬದಲಾವಣೆಗಳ ಅಗತ್ಯವಿತ್ತು. ಇದಕ್ಕೆ ಬೇಕಾದ ಶ್ರಮ, ದೃಢ ಸಂಕಲ್ಪಗಳ ಕೊರತೆಯನ್ನು

ತುಂಬಲು ಕನ್ನಡ ಗಣಕ ಪರಿಷತ್ತಿನ ಮೂಲಕ ಶಾಸ್ತ್ರಿ ಅಂಕಲ್ ಅವರ ಕೊಡುಗೆ ಅಪಾರ. ಇವರ ಪರಿಶ್ರಮದಲ ಫಲ "ನುಡಿ" ತಂತ್ರಾಂಶ. ಅನೇಕ ಅಡ್ಡಿ ಆತಂಕಗಳು ಬಂದರೂ ನುಡಿ ಯಶಸ್ವಿಯಾದುದು ಶಾಸ್ತ್ರಿಗಳ ತಾಳ್ಮೆ ಮತ್ತು ಧೃತಿಗಳಿಗೆ ಸಾಕ್ಷಿ. ನುಡಿಯ ಇಂದಿನ ಪ್ರಯೋಗ, ವಿಸ್ತರಣೆಗಳ ವ್ಯಾಪ್ತಿಗೆ ಶಾಸ್ತ್ರಿ ಅಂಕಲ್‌ರವರದೂ ಸ್ವಂತ ಪ್ರಯತ್ನ ಮತ್ತು ಪರಿಶ್ರಮಗಳ ಅಪಾರ ಕೊಡುಗೆ.

ಶಾಸ್ತ್ರಿ ಅಂಕಲ್ ಮೂಲಕ ನನಗೆ ಗಣಕ ಪರಿಷತ್ತಿನ ಪರಿಚಯ. ಬಹಳಷ್ಟು ಹಿರಿಯ ವಿದ್ವಾಂಸರ ಭೇಟಿ ಮತ್ತು ಅವರೊಡನೆ ವಿಚಾರ ವಿನಿಮಯಕ್ಕೆ ಅವಕಾಶ. ಇವೆಲ್ಲಾ ನನ್ನ ಬರಹದ ಕಿರು ಪ್ರಯತ್ನವನ್ನು ಮುಂದುವರೆಸಲು ಬಹಳ ಉಪಕಾರಿ, ನನ್ನ ಪ್ರಯತ್ನಗಳಿಗೆ ಹಿರಿಯರ, ವಿದ್ವಾಂಸರ ಆಶೀರ್ವಾದ ಪಡೆಯಲು ಒಂದು ಹಾದಿ.

ಶಾಸ್ತ್ರಿ ಅಂಕಲ್ ಒಬ್ಬ ಅಪರೂಪದ ವ್ಯಕ್ತಿ. ಇವರ ಸಹನೆ, ಸೌಜನ್ಯಶೀಲತೆ ಮತ್ತು ಗುರಿ ಮುಟ್ಟಲು ನಿರಂತರ ಪ್ರಯತ್ನಿಸುವ ಇವರ ಗುಣಗಳು ಕಿರಿಯರಿಗೆ ಮಾದರಿ. ಕನ್ನಡ ಮತ್ತು ವಿಜ್ಞಾನದ ವಿಷಯಗಳಲ್ಲಿ ಇವರ ಉತ್ಸಾಹ, ಉತ್ಸುಕತೆ ಕಂಡಾಗ ಇವರು ನಿವೃತ್ತಿಯ ವಯಸ್ಸು ತಲುಪಿದ್ದಾರೆಂದು ನಂಬುವುದು ಕಷ್ಟ ಆದರೆ ಇವರ ಉತ್ಸಾಹದ ಚಿಲುಮೆಯ ಅರಿವು ಇದ್ದವರಿಗೆ ಇವರ ವಯಸ್ಸು ಮುಖ್ಯವಲ್ಲ –"He is 60 years young" ಎಂಬುದು ಅನ್ವಯ. ಇವರ ಆತ್ಮೀಯ ನಗೆಮೊಗದ ಒಡನಾಟ ಮುಖ್ಯ. ಇವರು ವೃತ್ತಿ ಜೀವನದಿಂದ ನಿವೃತ್ತಿಯಾದರೂ ಪ್ರವೃತ್ತಿಯಲ್ಲಿ ಸದಾ ನಿರತರಾಗಿರುವುದರಲ್ಲಿ ಸಂಶಯವಿಲ್ಲ. ಇವರ ನೆರವು ಕನ್ನಡಕ್ಕೆ, ಅದರಲ್ಲೂ ಮುಂದಿನ ಪೀಳಿಗೆಯವರಿಗೆ ಅತಿ ಅವಶ್ಯ. ಇವರಿಗೆ ಬರುವ ವರ್ಷಗಳಲ್ಲಿ ಆರೋಗ್ಯ ಮತ್ತು ಶಾಂತಿ ಲಭಿಸಲೆಂದೂ, ಅವರ ಮುಂದಿನ ಕೆಲಸಗಳು ಅವರಿಗೆ ಹೆಚ್ಚಾದ ತೃಪ್ತಿ ಸಂತೋಷ ಕೊಡಲೆಂದೂ ದೇವರಲ್ಲಿ ಪ್ರಾರ್ಥಿಸುತ್ತೇನೆ.

◆

ಶ್ರೀ-ಗಿರಿ ದರ್ಶನ

- ಎಚ್.ಎಂ.ನಾಗರಾಜರಾವ್, ಮೈಸೂರು
ಶಾಸನ ತಜ್ಞರು, ೯೯೦೧೧೦೮೪೯೮೮

ಶೃಂಗೇರಿಯ ಶ್ರೀಜಗದ್ಗುರು ಚಂದ್ರಶೇಖರಭಾರತೀ ಮೆಮೋರಿಯಲ್ ಕಾಲೇಜು (ಜೆ. ಸಿ. ಬಿ. ಎಂ.) ಪ್ರಾರಂಭವಾಗಿ ಒಂದೆರಡು ವರ್ಷಗಳು ಕಳೆದಿದ್ದವೆಂದು ಕಾಣುತ್ತದೆ. ಗಣಿತ ವಿಭಾಗದಲ್ಲಿ ಅಧ್ಯಾಪಕರಾಗಿದ್ದ ಶ್ರೀರಾಮಚಂದ್ರಭಟ್ಟರಿಗೆ ಸಿಂಡಿಕೇಟ್ ಬ್ಯಾಂಕ್‌ನಲ್ಲಿ ಉನ್ನತ ಹುದ್ದೆ ದೊರೆತು ಅವರು ಕಾಲೇಜಿನಿಂದ ತೆರಳಿದಾಗ, ಅವರ ಹುದ್ದೆಗೆ ಹೊಸಬರೊಬ್ಬರು ನೇಮಕವಾದರು. ಮೊದಲ ನೋಟಕ್ಕೇ ಅವರು ಕಾಲೇಜಿನ ಹಲವಾರು ವಿದ್ಯಾರ್ಥಿಗಳಿಗಿಂತ ಕಿರಿಯರಂತೆ ಕಾಣುತ್ತಿದ್ದರಷ್ಟೇ ಅಲ್ಲ, ಕಿರಿಯರೇ ಆಗಿದ್ದರು.

ತೆಳುವಾದ ಮೈಕಟ್ಟು, ಮಧ್ಯಮ ಎತ್ತರ, ನಸುಗೆಂಪು ಬಣ್ಣ, ಮುಗ್ಧ ಮುಖ, ಹೊಳೆವ ಕಣ್ಣುಗಳಿಗೆ ಹಾಕಿದ ಕನ್ನಡಕ, ಪ್ಯಾಂಟುಶರಟುಗಳ ಸಾಮಾನ್ಯವೇಷ, ಒಪ್ಪಾಗೇನೂ ಬಾಚಿರದ ಕೇಶ – ಇದು ಅವರ ರೂಪದ ಸಾಮಾನ್ಯ ನಿರೂಪಣೆ. ಯಾವ ಗತ್ತು ಗೈರತ್ತೂ ಇಲ್ಲದ ವಿದ್ವತ್ತು. ವಿದ್ಯಾರ್ಥಿಗಳು ಅವರನ್ನು ಅಧ್ಯಾಪಕರೆಂದು ನಂಬುವ ಸ್ಥಿತಿಯಲ್ಲಿರಲಿಲ್ಲ. ಆದರೆ ಅವರು ಪಾಠ ಮಾಡಲು ಬಂದಾಗಲೇ ಸತ್ಯದರ್ಶನ!

ಇವರು ಸಿ.ವಿ. ಶ್ರೀನಾಥ ಶಾಸ್ತ್ರೀ, ಗಣಿತ ಪ್ರಾಧ್ಯಾಪಕರು. ಇವರ ಸರಳ ಸ್ವಭಾವದಿಂದಾಗಿ ಊರಿನ ಹಿರಿಯರೂ ಇವರನ್ನು ವಿದ್ಯಾರ್ಥಿ ಎಂದೇ ಭಾವಿಸುವಂತಾಗುತ್ತಿದ್ದುದು ಕೇವಲ ಸ್ವಾಭಾವಿಕ. ಶಿವಮೊಗ್ಗಕ್ಕೊ ಚಿಕ್ಕಮಗಳೂರಿಗೊ ಹೋಗಲು ಇವರು ಶಂಕರ್ ಬಸ್ಸೇರಿ ಕುಳಿತಿದ್ದರೆ, ರಷ್ ಇದ್ದರೆ, "ಸ್ವಲ್ಪ ಪಕ್ಕಕ್ಕೆ ಸರ್ಕೊಪ್ಪ" ಎಂದು ಯಾರಾದರೂ ಹೇಳಿದ್ದರೆ ಅದೂ ಕೇವಲ ಸಹಜವೇ! ಅವರ ಮುಖದಲ್ಲಿ ಎದ್ದು ಕಾಣುತ್ತಿದ್ದ ಸಾತ್ತ್ವಿಕ ಮತ್ತು ವಿನಮ್ರಭಾವ ಕೂಡ ಈ ಭಾವನೆಗೆ ಪೂರಕವೂ ಪೋಷಕವೂ ಆಗಿರುತ್ತಿತ್ತು!

ಶೃಂಗೇರಿಯ ಅಧಿದೇವತೆ ಶಾರದೆ ಶಾಸ್ತ್ರಿಗಳನ್ನು ಹೆಚ್ಚು ಕಾಲ ಶೃಂಗೇರಿಯಲ್ಲಿ ಇರಿಸಿಕೊಳ್ಳಲಿಲ್ಲ. ಅವರಿಗೆ ಬೆಂಗಳೂರಿನ ರಾಷ್ಟ್ರೀಯ ವೈಮಾನಿಕ ಪ್ರಯೋಗಶಾಲೆಯಲ್ಲಿ ಉನ್ನತಹುದ್ದೆ ಲಭಿಸಿತು. ಅಲ್ಲಿಯೇ ಹಲವು ದಶಕಗಳ ಕಾಲ ಸೇವೆಸಲ್ಲಿಸಿ ಈಗ ನಿವೃತ್ತ ಜೀವನವನ್ನು ನಡೆಸುತ್ತಿದ್ದಾರೆ. **"ಕಣಾದ"** ಎಂಬ ಪತ್ರಿಕೆಯನ್ನು ಅಲ್ಲಿದ್ದಾಗ ಅವರು ಹೊರತರುತ್ತಿದ್ದರು.

ನಾನು ಶೃಂಗೇರಿ ಕಾಲೇಜಿನ ಮೊದಲ ತಂಡದ ವಿದ್ಯಾರ್ಥಿ. ಅವರು ನನಗೆ ಗುರುಗಳು; ಆದರೆ ನಾನು ಅವರ ನೇರ ವಿದ್ಯಾರ್ಥಿಯಲ್ಲ! ನಾನು ನನ್ನ ವ್ಯಾಸಂಗ ಪೂರ್ಣಗೊಂಡ ಮೇಲೆ ಮೈಸೂರು ವಿಶ್ವವಿದ್ಯಾನಿಲಯದ ಕನ್ನಡ ಅಧ್ಯಯನಸಂಸ್ಥೆಯಲ್ಲಿ ಕೆಲಸಕ್ಕೆ ಸೇರಿದೆ. ಶಾಸ್ತ್ರಿಗಳೊಡನೆ ನನ್ನ ಭೇಟಿ ನಿಂತೇಹೋಗಿತ್ತು.

ಕಂಪ್ಯೂಟರ್ ಕ್ರಾಂತಿಯಾದ ಮೇಲೆ ಬೆಂಗಳೂರಿನಲ್ಲಿ ಕನ್ನಡ ಗಣಕ ಪರಿಷತ್ತು (ಕ.ಗ.ಪ) ಜನ್ಮತಾಳಿತು. ಈ ಸಂಸ್ಥೆಯ ಸ್ಥಾಪಕರಲ್ಲೊಬ್ಬರು ಅವರು. 'ಕನ್ನಡ ಲಿಪಿ ತಂತ್ರಾಂಶ' (ಕಲಿತ) ಅಭಿವೃದ್ಧಿ ಹೊಂದಿ ಕೊನೆಗೆ **'ನುಡಿ'** ಎಂಬ ಅಧಿಕೃತ ಹೆಸರನ್ನು ಪಡೆಯಿತು. ಕನ್ನಡ ಅಧ್ಯಯನಸಂಸ್ಥೆಯ ಪ್ರೊ. ಪಂಡಿತಾರಾಧ್ಯ (ಅವರು ಕನ್ನಡ ಅಂಕಿಗಳ ಉಳಿವಿಗೆ ಹೋರಾಡುತ್ತಿರುವ ಕನ್ನಡಿಗರು) ಅವರನ್ನು ನೋಡಲು ಶಾಸ್ತ್ರಿಗಳು ಮತ್ತು ಶ್ರೀ ಜಿ. ಎಲ್. ನರಸಿಂಹಮೂರ್ತಿ ಅವರೂ ಬರುತ್ತಿದ್ದರು. ಪ್ರೊ. ಪಂಡಿತಾರಾಧ್ಯರ ಕೊಠಡಿ ಮತ್ತು ನನ್ನ ಕೊಠಡಿ ಬಹಳ ಸಮೀಪದಲ್ಲಿದ್ದವು. ಶಾಸ್ತ್ರಿಗಳೊಡನೆ ಇದ್ದ ಸಂಬಂಧ ಮತ್ತೆ ಆತ್ಮೀಯವಾಯಿತು; ಮೂರ್ತಿಯವರ ಸ್ನೇಹಭಾಗ್ಯದ ಬೋನಸ್ಸೂ ಸಿಕ್ಕಿತು! ಇವರಿಬ್ಬರ ಉತ್ಸಾಹ, ಕ್ರಿಯಾಶೀಲತೆ ಮತ್ತು ಮುಂದಾಳತ್ವದಿಂದಾಗಿ ಅನೇಕ ಗ್ರಂಥಗಳು ಸಿಡಿ–ಡಿವಿಡಿ ರೂಪಗಳಲ್ಲಿ ಹೊರಬಂದವು. ಕನ್ನಡ ವಿಶ್ವಕೋಶದ ಹದಿನಾಲ್ಕು ಸಂಪುಟಗಳು, ನಿಘಂಟುಗಳು, ಕನ್ನಡ ಕಾಮು ಗ್ರಂಥಗಳು ಇವುಗಳಲ್ಲಿ ಸೇರಿವೆ. ಮಾಹಿತಿ ಮತ್ತು ತಂತ್ರಜ್ಞಾನಕ್ಕೆ ಸಂಬಂಧಿಸಿದ ವಿಷಯ ವಿಶ್ವಕೋಶರಚನೆಯಲ್ಲಿ ಅತ್ಯಂತ ಪ್ರಮುಖ ಪಾತ್ರವನ್ನು ವಹಿಸಿದರು.

ಶಾಸ್ತ್ರಿಯವರು ಸುಮಾರು ಆರುವರ್ಷಗಳ ಕಾಲ ಬೆಂಗಳೂರಿನ ಶೃಂಗೇರಿ ಶಂಕರ ಮಠದ ವ್ಯವಸ್ಥಾಪಕರಾಗಿಯೂ ಸೇವೆ ಸಲ್ಲಿಸಿರುವುದು ವಿಶೇಷ. ದರ್ಪವೇ ಇಲ್ಲದ ಅಧಿಕಾರಿಯೊಬ್ಬರು ಪ್ರೀತಿಯಿಂದಲೇ ಕೆಲಸ ಮಾಡಿಸುವ ಕುಶಲತೆ ಅನನ್ಯ. ಕನ್ನಡ ಗಣಕ ಪರಿಷತ್ತಿನಲ್ಲಿ ಕೂಡ ಕನ್ನಡದ ಮೇಲಿನ ಪ್ರೀತಿಯಿಂದ ಕೆಲಸ ಮಾಡುವ ಯುವ ಪಡೆಯೊಂದು ರೂಪುಗೊಂಡಿತ್ತು. ನನ್ನ ಬಂಧು ರಾಜ್‌ಕೃಷ್ಣ ಅಂಥವರಲ್ಲೊಬ್ಬ. ಶಾಸ್ತ್ರಿಗಳಮಗ ವಿಶ್ವನಾಥ ಇಂಜನಿಯರಿಂಗ್ ವಿದ್ಯಾರ್ಥಿಯಾಗಿದ್ದೂ ಕಗಪಕ್ಕೆ ದುಡಿಯುತ್ತಿದ್ದುದು ಗಮನಾರ್ಹ. ದಸರಾ-ವಸ್ತುಪ್ರದಶನದಲ್ಲಿ ಕಗಪದ ಮಳಿಗೆಗೆ ಬಂದಿದ್ದ ಶಾಸ್ತ್ರಿಗಳ ಮಗಳು ಕ್ಷಮಾ ನಮ್ಮ ಮನೆಯಲ್ಲಿ ಉಳಿದುಕೊಂಡರು. ಅವರು ನಮ್ಮ ಕುಟುಂಬದವರೊಡನೆ ಬೆರೆತ ರೀತಿ ತುಂಬ ಆತ್ಮೀಯವಾಗಿತ್ತು.

ನನ್ನಮಗ ಟಿಸಿಎಸ್ ಕಂಪೆನಿಯಲ್ಲಿ ಕೆಲಸ ಮಾಡುತ್ತಿದ್ದ. ಬಿಟಿಎಂನಲ್ಲಿದ್ದ ನನ್ನ ಭಾವನವರೊಡನೆ ಒಂದು ಸಲ ಉಪಾಕರ್ಮಕ್ಕೆ ಯಲಚೇನಹಳ್ಳಿಯ ಮನೆಯೊಂದಕ್ಕೆ

ಹೋದ. ಅವನಿಗೆ ಆಮೇಲೆ ತಿಳಿಯಿತಂತೆ ಅದು ಶ್ರೀನಾಥಶಾಸ್ತ್ರಿಗಳ ಮನೆ ಎಂದು! ಇವನನ್ನು ಬಹಳ ವಾತ್ಸಲ್ಯದಿಂದ ಕಂಡರಂತೆ. ಹಾಗೆಯೇ ಅವರು "ಕಣಾದ" ಹೊರತರುತ್ತಿದ್ದ ದಿನಗಳಲ್ಲಿ ಸ್ವಲ್ಪ ಕಾಲ ನನ್ನ ಸೋದರ ಮಾವನ ಮಗ ಎಂ. ವಿ. ಶಂಕರ ಅವರೊಡನೆ ದುಡಿದ.

ಶಾಸ್ತ್ರಿಗಳ ಕನ್ನಡ ಪ್ರೀತಿಯ ಬಗ್ಗೆ ಒಂದು ಘಟನೆಯನ್ನು ಕೇಳಿದ್ದೆ. ಒಮ್ಮೆ ಯಾವುದೋ ಹತ್ತಿರದ ಬಂಧುಗಳ ಮದುವೆಗೆ ಚಿಕ್ಕಮಗಳೂರಿಗೆ ಹೋಗಿದ್ದರಂತೆ. ಸಮಯವಿತ್ತು. ಆಟೋ ಮಾಡಿಕೊಂಡು ಜಿಲ್ಲಾಧಿಕಾರಿಗಳ ಕಛೇರಿಗೆ ಹೋಗಿ, ಅವರಿಗೆ ಕಗಪದ ಅಭಿವೃದ್ಧಿಯ ಬಗ್ಗೆ ತಿಳಿಸಿ 'ನುಡಿ'ಯನ್ನು ಬಳಸುವಂತೆ ಒತ್ತಾಯಿಸುತ್ತಿದ್ದರಂತೆ. ಮದುವೆ ಮನೆಯಲ್ಲೂ ಇವರಿಗೆ ಕನ್ನಡಕ್ಕೆ ಮತ್ತು ಕನ್ನಡನಾಡಿಗೆ ಒಳ್ಳೆಯದಾಗುವುದರ ಚಿಂತೆ!

* * *

ಶ್ರೀನಾಥಶಾಸ್ತ್ರಿಗಳು ಶೃಂಗೇರಿಯ ಕಾಲೇಜಿನಲ್ಲಿ ಇದ್ದಾಗ ಅವರ ತಮ್ಮ 'ಗಿರಿ' ಕಾಲೇಜಿನ ವಿದ್ಯಾರ್ಥಿಯಾಗಿದ್ದ. ತುಂಬ ಮನೋಹರ ರೂಪದ ಎಳೆಬಾಳೆಯಂಥ ಹುಡುಗ; ಮಿಂಚುಗಣ್ಣಿನ ಪ್ರತಿಭಾವಂತ. ಆಗ ಹೆಚ್ಚು ಎತ್ತರ ಬೆಳೆದಿರಲಿಲ್ಲ. ನಾವು ಕಾಲೇಜಿನಲ್ಲೋ ಹೊರಗಡೆಯೋ ಭೇಟಿ ಆದಾಗ ಮುಗುಳ್ನಗೆಯ ವಿನಿಮಯ. ಆತನದು ಹೃನ್ಮನ ಸೂರೆಗೊಳ್ಳುವ ನಗು! ನಗು ವಿಶ್ವ ಭಾಷೆಯಷ್ಟೇ? ನಾನು ಮೈಸೂರು ಸೇರಿದ ಎರಡು–ಮೂರು ವರ್ಷಗಳ ತರುವಾಯ ಸಂಸ್ಕೃತ ಎಂ. ಎ. ಗೆ. ಸೇರಿಕೊಳ್ಳಲು ಗಿರಿಧರ ಮೈಸೂರಿಗೆ ಬಂದರು. ಸರಸ್ವತಿಪುರದಲ್ಲಿದ್ದ ತೀ. ನಂ. ಶಂಕರನಾರಾಯಣ ಅವರ ಮನೆಯಲ್ಲಿದ್ದರು. ಆಗಾಗ ಭೇಟಿಯಾಗುತ್ತಿದ್ದೆವಾದರೂ ಮಾತ್ತು ಕಡಿಮೆ; ನಗುವಿನ ವಿನಿಮಯವಷ್ಟೇ.

ಮುಂದೆ ಎಂಬತ್ತರ ದಶಕದಲ್ಲಿ ಅವರು ಶೃಂಗೇರಿ ಮಠದಲ್ಲಿ ಆಡಳಿತಾಧಿಕಾರಿಯಾದರು. ನಾನು ಊರಿಗೆ ಹೋಗುತ್ತಿದ್ದುದೇ ಕಡಿಮೆ. ಭೇಟಿ ಅಪರೂಪವಾಯಿತು. ಒಮ್ಮೆ ಅವರು ಖ್ಯಾತ ಲೇಖಕರಾದ ಶ್ರೀ ಹುರಗಲವಾಡಿ ಲಕ್ಷ್ಮೀನರಸಿಂಹಶಾಸ್ತ್ರೀ ಹಾಗೂ ಮೈಸೂರಿನಲ್ಲಿ ಶೃಂಗೇರಿ ಮಠದ ಧರ್ಮಾಧಿಕಾರಿಗಳಾದ ಶ್ರೀ ಪಿ. ಆರ್. ಹರಿಹರನ್ ಜೊತೆ ನಮ್ಮ ಮನೆಗೆ ಬಂದರು. ಈಗ ಗಿರಿಧರಶಾಸ್ತ್ರೀಗಳು ಎತ್ತರದ ತೇಜಸ್ವಿಯಾದ ಸುಂದರ ತರುಣರಾಗಿದ್ದರು. ಅದೇ ಪರಿಚಯದ ನಗೆ. ಕೂಡಲಿ ಮಠಕ್ಕೆ ಸಂಬಂಧಿಸಿದ ಒಂದು ಕಿರುಪುಸ್ತಕ ಪ್ರಕಟವಾಗಿತ್ತು. ಅದರಲ್ಲಿ ಶೃಂಗೇರಿ ಮಠದ

ಬಗ್ಗೆ ತಪ್ಪು ಅಭಿಪ್ರಾಯ ಮೂಡಿಸುವಂಥ ಬಹಳ ವಿಷಯಗಳು ತುಂಬಿದ್ದವು. ಅದು ಇಂಗ್ಲಿಷಿನಲ್ಲಿತ್ತು. ಅದಕ್ಕೆ ಪ್ರತಿಯಾಗಿ ಒಂದು ಕೃತಿ ಅವಶ್ಯವಾಗಿತ್ತು ಹಾಗೂ ಅನಿವಾರ್ಯವೂ ಆಗಿತ್ತು, ಶ್ರೀ ಲ.ನ ಶಾಸ್ತ್ರಿಗಳೇ ಉತ್ತಮ ಲೇಖಕರು. ಆದರೆ ನಾನು ಬರೆಯಬೇಕೆಂಬುದು ಅವರೆಲ್ಲರ ಆಶಯವಾಗಿತ್ತು. ಬಹುಬೇಗನೆ ಸಾಕ್ಷ್ಯ ಸಮೇತ ಬರೆದು ಹಸ್ತಪ್ರತಿಯೊಡನೆ ಶ್ರೀ ಲ. ನ. ಶಾಸ್ತ್ರೀ ಅವರೊಡನೆ ಶೃಂಗೇರಿಗೆ ಹೋದೆ. ಆದರೆ ಗಿರಿಧರಶಾಸ್ತ್ರಿಗಳು ದೆಹಲಿಯಲ್ಲಿ ಬೇರೆ ಉದ್ಯೋಗಕ್ಕೆ ಸೇರಿಕೊಂಡಿದ್ದರು. ಕೂಡಲಿ ಮಠದ ಬಗ್ಗೆ ನನ್ನ ಪುಟ್ಟ ಕೃತಿ ಪ್ರಕಟವಾಯಿತು.

ಶ್ರೀ ಗಿರಿಧರಶಾಸ್ರೀಗಳು ಮರಳಿ ಶೃಂಗೇರಿಗೆ ಬಂದರು. ಆಗಾಗ ಮೈಸೂರಿಗೆ ಬಂದಾಗ ನಮ್ಮ ಭೇಟಿ ಆಕಸ್ಮಿಕವಾಗಿ ಆಗುತ್ತಿದ್ದುದುಂಟು. ಒಮ್ಮೆ ಲಕ್ಷ್ಮೀಪುರದಲ್ಲಿದ್ದ ಅವರ ಭಾವನವರ ಮನೆಯಲ್ಲಿ ಕೆಲವು ಗಂಟೆಗಳ ಕಾಲ ಮಾತನಾಡಿದ್ದೆವು. ಈಗ ನಮ್ಮಿಬ್ಬರಿಗೂ ಸಮಾನಾಸಕ್ತಿಯ ಒಂದು ಹೊಸ ಕ್ಷೇತ್ರವಿತ್ತು. ಅದು ಹೋಮಿಯೋಪತಿ. ಮನುಷ್ಯನನ್ನು ಬಿಡಿಯಾಗಿ ನೋಡದೆ ಇಡಿಯಾಗಿ ನೋಡಬೇಕು ಎಂದು ಪ್ರತಿಪಾದಿಸುವ ಹೋಮಿಯೋ ಸಿದ್ಧಾಂತ ನನಗೆ ಔಷಧಿಗಳಿಗಿಂತ ಹೆಚ್ಚು ಪ್ರಿಯ. ಆದರೆ ಅವರು ಆ ವಿಜ್ಞಾನದ ಆಳಕ್ಕಿಳಿದು, ಕರಗತ ಮಾಡಿಕೊಂಡು, ನೂರಾರು ಜನರಿಗೆ ಉಚಿತವಾಗಿ ಹೋಮಿಯೋ ಔಷಧಿಗಳನ್ನು ನೀಡುತ್ತಿದ್ದಾರೆ.

ಮುಂದೆ ಗಿರಿಧರಶಾಸ್ತ್ರಿಗಳು ಇಂಗ್ಲಿಷ್ ಎಂ. ಎ. ಮಾಡಿದರು; ಪ್ರೊ॥ ಪೂರ್ಣಿಮಾ ಅವರ ಮಾರ್ಗದರ್ಶನದಲ್ಲಿ ಡಾಕ್ಟರೇಟ್ ಪದವಿಯನ್ನೂ ಪಡೆದರು. ಒಮ್ಮೆ ಮುಕ್ತವಿಶ್ವವಿದ್ಯಾನಿಲಯದ ಪ್ರಸಾರಾಂಗದ ವತಿಯಿಂದ ನನ್ನ **"ಶಾಸನ ಸಂಪದ"** ಎಂಬ ಕೃತಿ ಬಿಡುಗಡೆಯಾಯಿತು; ಜೊತೆಗೆ ಇನ್ನೂ ಹಲವಾರು ಕೃತಿಗಳು. ಬಿಡುಗಡೆ ಸಮಾರಂಭದಲ್ಲಿ ಶ್ರೀ ಗಿರಿಧರಶಾಸ್ತ್ರಿಗಳನ್ನು ಕಂಡು ಸಂತೋಷವಾಯಿತು. ನನಗೆ ಇನ್ನೂ ಗೌರವ ಪ್ರತಿಗಳು ದೊರೆತಿರಲಿಲ್ಲ. ರಿಯಾಯಿತಿ ದರದಲ್ಲಿ ಅಂದು ಬೇರೆಯವರ, ನನ್ನ ಕೃತಿಯ, ಪ್ರತಿಗಳನ್ನು ಕೊಳ್ಳಲು ಪ್ರಸಾರಾಂಗದ ಮಳಿಗೆಗೆ ಹೋದೆ. ಅಲ್ಲಿ ಶಾಸ್ತ್ರಿಗಳು ಆಗಲೇ ಪುಸ್ತಕಗಳನ್ನು ಕೊಂಡು ಬಿಲ್ ಹಾಕಿಸುತ್ತಿದ್ದರು! ನನ್ನ ಪುಸ್ತಕವೂ ಕಟ್ಟಿನಲ್ಲಿತ್ತು.

ಬದುಕಿನಲ್ಲಿ ಯಾವುದೋ ದೈವ ನನ್ನನ್ನು ಕೈಹಿಡಿದು ನಡೆಸುತ್ತಿದೆ ಎಂಬುದು ನನ್ನ ದೃಢ ನಂಬುಗೆ. ಚಿಕ್ಕಮಗಳೂರು ಜಿಲ್ಲೆಯ ಹತ್ತನೆಯ ಕನ್ನಡ ಸಾಹಿತ್ಯಸಮ್ಮೇಳನಾಧ್ಯಕ್ಷನಾಗಿ ನನ್ನನ್ನು ಆರಿಸಲಾಯಿತು. ಆದು ಹಿರಿಯರ ಪುಣ್ಯದ ಫಲ. ಬಂಧುಗಳೆಲ್ಲ ಸೇರಿ ನೀರೊಳ್ಳಿಯ ಪಟ್ಟಾಭಿರಾಮ ದೇವಾಲಯದ ಆವರಣದಲ್ಲಿ ಒಂದು ಸನ್ಮಾನಸಮಾರಂಭ

ಏರ್ಪಡಿಸಿದ್ದರು. ಪತ್ರಕರ್ತ ಪ್ರಭಾಕರ ಕಾರಂತರಿದ್ದರು. ಅಂದು ನನ್ನ ಬಗ್ಗೆ ಮಾತನಾಡಿದವರು ಶ್ರೀ ಗಿರಿಧರಶಾಸ್ತ್ರಿಗಳು. ಅವರು ಸಂಸ್ಕೃತ–ಇಂಗ್ಲಿಷ್ ಭಾಷೆಗಳಲ್ಲಿ ದೊಡ್ಡವಿದ್ವಾಂಸರೆಂದು ಖ್ಯಾತರು. 'ಮಿತಂ ಚ ಸಾರಂ ಚ ವಚೋ ಹಿ ವಾಗ್ಮಿತಾ' ಎಂಬ ಭವಭೂತಿಯ ಮಾತಿನಂತೆ ನಡೆದುಕೊಳ್ಳುವವರು. ಅವರ ಮಾತು ಎಷ್ಟೇ ಹಿತವಾಗಿದ್ದರೂ ಅವರ ನಿರೀಕ್ಷೆಯ ಮಟ್ಟಕ್ಕೆ ನಾನು ಏರಿರಲಿಲ್ಲವೆಂಬ ನಾಚಿಕೆಯ ಭಾವನೆಯೇ ಮೇಲುಗೈ ಸಾಧಿಸಿತು. ಶೃಂಗೇರಿಯ ಇತಿಹಾಸದ ಬಗ್ಗೆ ನಾನೇನಾದರೂ ಮಹತ್ವದ ಕೆಲಸ ಮಾಡಬೇಕೆಂಬುದು ಅವರ ಹಂಬಲ.

ಕೈಲಾಸ–ಮಾನಸ ಯಾತ್ರೆ ಮಾಡಿ ಬಂದ ಮೇಲೆ ನಾನು ಬರೆದ **'ಮಾನಸ ಸಂಚರ ರೇ!'** ಯಾತ್ರಾ ಕಥನದ ಕೃತಿಯನ್ನು ಅವರಿಗೆ ಕಳುಹಿಸಿಕೊಟ್ಟೆ. ಅವರು ದೂರವಾಣಿಯ ಮೂಲಕ ಮಾತನಾಡಿದರು. ಈಚೆಗೆ ಬರೆದ **'ಚಿತ್ರ ಚೌಕಟ್ಟು'** ಕೃತಿಯ ಪ್ರತಿಯನ್ನೂ ಅವರಿಗೆ ಕಳುಹಿಸಿದ್ದೇನೆ.

***

ಶ್ರೀ–ಗಿರಿ–ದರ್ಶನದ ಈ ಲೇಖನದಲ್ಲಿರುವ ನೆನಪಿನ ಬಿಂದುಗಳಲ್ಲಿ ಭಾವನೆಯ ಸಿಂಧುವಿದೆ. ಸಾತ್ವಿಕತೆ ಮತ್ತು ಸಂಸ್ಕೃತಿಯ ಸಾಕಾರವಾದ ಈರ್ವರು ವಂದನೀಯ ಮಹಾನುಭಾವರಿಗೆ ಪ್ರಸ್ತುತ ಲೇಖನ, ಕಿರು ಕಾಣಿಕೆ.

◆

ಸಾರಸ್ವತ ಸಜ್ಜನ-ತತ್ವಾಧಾರಿತ ಜೀವನ

-ಎಚ್. ಎಂ. ನಾಗರಾಜರಾವ್ ಕಲ್ಕಟ್ಟೆ, ಚಿಕ್ಕಮಗಳೂರು
ಉಪನ್ಯಾಸಕರು, ೯೪೪೮೨೧೭೯೬

"ಅಮ್ಮಾ ಎಂಬ ಮಾತಿಗಿಂತ ಬೇರೆ ಮಂತ್ರ ಎಲ್ಲಿದೆ? ಅದು ನೀಡುವ ಶಾಂತಿ ಕಾಂತಿ ಯಾವ ತಾರೆ ರವಿಗಿದೆ?" ಅಂತ ಕವಿ ಡಾ|| ಎನ್. ಎಸ್. ಲಕ್ಷ್ಮೀನಾರಾಯಣಭಟ್ಟರು ಬರೆದಿದ್ದು ಶೃಂಗೇರಿಯ ಸಜ್ಜನ ಸಾತ್ವಿಕ ವಿದ್ವಾಂಸ ಗಿರಿಧರಶಾಸ್ತ್ರಿಯವರನ್ನು ನೋಡಿಯೇ ಇರಬೇಕು ಎಂದರೆ ಯಾರೂ ಅಲ್ಲಗಳೆಯುವಂತಿಲ್ಲ. ಹಲವು ವರ್ಷಗಳ ಕಾಲ ತಾಯಿ ಶಾರದೆಯ ಆರಾಧಿಸುವ ಶ್ರೀಮಠದ ಆಡಳಿರಾಧಿಕಾರಿಯಾಗಿದ್ದರಿಂದಲೋ ಏನೋ, ಶಂಕರರ ಮಾತೃಭಕ್ತಿಯ ಸಾರ ರಕ್ತಗತವಾಗಿದ್ದರಿಂದಲೋ ಏನೋ ಗುರುಗಳಾದ ಶಾಸ್ತ್ರಿಯವರು ತಾಯಿಗೆ ತಕ್ಕ ಮಗನಾದರು. ಮಾತು ಮೀರುವ ಮಕ್ಕಳೇ ಹೆಚ್ಚಾಗಿರುವ ಈ ಕಾಲಕ್ಕೆ 'ಮಾತೃದೇವೋಭವ" ಎಂದರೆ ಅದು ನಿಜ ಸತ್ಪಥ ಎನ್ನುವುದಕ್ಕೆ ರೋಲ್ ಮಾಡೆಲ್ ಆದರು.

ಶ್ರೀ ಗಿರಿಧರ ಶಾಸ್ತ್ರಿಗಳು ಎಂದಕೂಡಲೆ ಮೊದಲು ನೆನಪಾಗುವುದೇ ಸಾತ್ವಿಕ ಕಳೆ, ತಾತ್ವಿಕ ನೆಲೆ ಮತ್ತು ಹಾರ್ದಿಕ ನಗು. ನಗುವಿನ ಮಗು ಅವರೋ, ನಗುವೇ ಮಗುವಾಯಿತೋ, ಮೊಗವಾಯಿತೋ ಎಂಬಂತಹ ಅನುಮಾನ ಅವರನ್ನು ನೋಡಿದವರಿಗೆ ಖಂಡಿತಾ ಕಾಡುತ್ತದೆ. ಇದು ನಿತ್ಯಾನುಷ್ಠಾನ, ಪ್ರಸನ್ನಚಿತ್ತದ ಫಲ ಎಂದು ನನಗೆ ಸದಾ ಅನಿಸುತ್ತದೆ.

ಗಿರಿಧರಶಾಸ್ತ್ರಿಗಳವರು ಹಲವು ವರ್ಷಗಳಿಂದ ಹೋಮಿಯೋಪತಿ ವೈದ್ಯಕೀಯದ ಕಾಯಕವನ್ನು ಬಹು ನಿಷ್ಠೆಯಿಂದ ನಡೆಸುತ್ತಿದ್ದ ಅವರೊಂದಿಗೆ ನನ್ನ ಸಾಹಿತ್ಯ ಗುರುಗಳಾದ ಹಯವದನ ಉಪಾಧ್ಯರೂ ಇದ್ದರು. ಅವರು ಇವರ ಬಗ್ಗೆ ತುಂಬಾ ಧನಾತ್ಮಕವಾಗಿ ಮಾತಾಡುತ್ತಿದ್ದುದರಿಂದ ನಾನಿವರತ್ತ ಆಕರ್ಷಿತನಾದೆ. 'ಕಲಿಸಲು ಯೋಗ್ಯತೆ ಇರುವವರು ಇವರು' ಎಂದರಿತುಕೊಂಡೆ. ತನ್ನ ಜ್ಞಾನಾನುಸರಣೆಯಿಂದ ವಾತಾವರಣವನ್ನು ಬೆಳಕುಗೊಳಿಸುವ ಸಾಮರ್ಥ್ಯವಿವರಿಗೆ ಇದೆ ಎಂದು ತಿಳಿದೆ. ಹಾಗಾಗಿ ಎಂ. ಎಸ್. ಸಿ ಮುಗಿಸಿ ಕೆಲಸ ಸಿಕ್ಕ ನಂತರ ರಜಾವಧಿಯಲ್ಲಿ ಬಂದು ಅವರಲ್ಲಿ ಸಂಸ್ಕೃತ ಕಲಿಯುವ ಶಿಷ್ಯ ನಾನಾದೆ.

"ನೀವೇನೂ ವೇದಾಧ್ಯಯನ ಮಾಡಲು ಬರುತ್ತಿಲ್ಲ. ಭಾಷೆಯಾಗಿ ಸಂಸ್ಕೃತ ಕಲಿಯಲು ಬರುತ್ತಿದ್ದೀರಿ. ಹಾಗಾಗಿ ಕಲ್ಕಟ್ಟೆಯಿಂದ ವಿದ್ಯಾರಣ್ಯಪುರದವರೆಗೆ ನೀವು ನಿಮಗೆ ಅನುಕೂಲಕರವಾದ ಪ್ಯಾಂಟ್ ಹಾಕಿಕೊಂಡೇ ಬನ್ನಿ ತೊಂದರೆ ಇಲ್ಲ" ಎಂದು ಅವರು ನನಗೆ ಹೇಳುತ್ತಿದ್ದರಾದರೂ, ಸಂಸ್ಕೃತ ಭಾಷೆಯಿರಬಹುದು, ಆದರೆ ಸುಸಂಸ್ಕೃತರಾದ ಶಾಸ್ತ್ರಿಯವರೆದುರು ಪಂಚೆ ಉಟ್ಟುಕೊಂಡೇ ಸದಾಚಾರ ಪಾಲಿಸಬೇಕು ಎಂಬುದು ನನ್ನ ನಿಲುವಾಗಿತ್ತು. "ನಿಮ್ಮಿಷ್ಟ" ಎಂದು ಮತ್ತೆ ಮಗುವಂತೆ ನಕ್ಕಿದ್ದರು ಆ ಪ್ರಬುದ್ಧರು.

ನನಗನಿಸುತ್ತೆ ಆಧುನಿಕ ಜಗತ್ತಿನ ಮುಕ್ತದ್ವಾರವೇ ಆಗಿರುವ ಕಾಲೇಜೊಂದರ ಉಪನ್ಯಾಸಕರಾಗಿ (ಈಗ ಪ್ರಾಚಾರ್ಯರೂ ಆಗಿ) ಶಾಸ್ತ್ರಿಗಳು ಹೇಗೆ ಹೊಂದಿಕೊಂಡಿದ್ದಾರೆಂದರೆ ಅದು ಕಾಲವನ್ನು ಒಪ್ಪುತ್ತಲೇ ಸ್ವಂತಿಕೆ ಉಳಿಸಿಕೊಳ್ಳಬಹುದೆಂಬ ದೃಢ ವಿಶಾಲ ಹೃದಯದಿಂದ ಎಂದು. ಶ್ರೀ. ಜೆ. ಸಿ. ಬಿ. ಎಂ. ಕಾಲೇಜು ಈ ದಿಸೆಯಲ್ಲಿ ಶೃಂಗೇರಿಯಲ್ಲಿ ಸಂಸ್ಕೃತ ಉಳಿಸುವ ಗುಣಗಳನ್ನು ಹೊಂದಿದೆ. ಹಾಗಾಗಿ ಶಾಸ್ತ್ರಿಗಳಲ್ಲಿ ಬಹುಮಾನ್ಯರಾಗಿದ್ದಾರೆ.

ಶೃಂಗಗಿರಿಯ ವಿಶ್ವಕೋಶ ಟಿ. ಎಸ್. ವೆಂಕಣ್ಣಯ್ಯನವರಿಂದ ತೆರವಾದ ಸಾತ್ವಿಕ ಭಾವಪೀಠದಲ್ಲಿ ಸಾರಸ್ವತ ಸಜ್ಜನರಾದ ಶ್ರೀ ಗಿರಿಧರಶಾಸ್ತ್ರಿಗಳು ವಿರಾಜಮಾನರಾಗಿದ್ದಾರೆ. ಸಾಮಾಜಿಕವಾಗಿ ನಗುವುದು ಅಗತ್ಯವಾಗಬಹುದೇನೋ ಆದರೆ ಅಂತರ್ಯದಲ್ಲಿ ಮತ್ತು ವೈಯಕ್ತಿಕವಾಗಿ ಶಾಸ್ತ್ರ ಸಂಹಿತೆಯನ್ನು ರೂಢಿಸಿಕೊಂಡು ಋಜುತ್ವದಲ್ಲಿ ಬಾಳುವುದು ಗಿರಿಧರಶಾಸ್ತ್ರಿಯಂತಹವರಿಗೆ ಮಾತ್ರಾ ಸಾಧ್ಯ.

ನಿತ್ಯಾಧ್ಯಯನ ನಿರತರಾದ ಶಾಸ್ತ್ರಿಗಳು ಶಿಷ್ಯರನ್ನು ಹೊನಲಾಗಿಸುವ ಶರಧಿ. ಸರಳ ವಸ್ತ್ರದಲ್ಲಿ ಕಂಗೊಳಿಸುವ ಶಾಸ್ತ್ರನಿಧಿ "ಮನೆಗೆದ್ದು ಮಾರುಗೆಲ್ಲು" ಎನ್ನುವುದಕ್ಕೆ ಶಾಸ್ತ್ರೀಜಿ ಉದಾಹರಣೆ. ಹಾಗಾಗಿಯೇ ಕುಟುಂಬದವರು ಅಭಿನಂದನಾಗ್ರಂಥವನ್ನು ತರುತ್ತಿದ್ದಾರೆ. ಈ ಸೌಭಾಗ್ಯ ಯಾರಿಗುಂಟು ಯಾರಿಗಿಲ್ಲ. ಸನ್ಮಾನ್ಯ ಶ್ರೀ ಸಿ. ವಿ. ಗಿರಿಧರಶಾಸ್ತ್ರಿಗಳು ನೂರ್ಕಾಲ ಬಾಳಲಿ.... ನಮ್ಮನ್ನೂ ಮಾರ್ಗದರ್ಶನ ನೀಡಿ ಹರಸುತ್ತಿರಲಿ.

◆

ಶಾಸ್ತ್ರಿಗಳೇ ಏನ್ ಸಮಾಚಾರ?

– ಶ್ರೀ ಸತ್ಯಪ್ರಸಾದ್, ಬೆಂಗಳೂರು
ರಾವೈಪ್ರ ಸಹೋದ್ಯೋಗಿ, ೯೮೪೫೨೭೧೦೯೫

ಶಾಸ್ತ್ರಿಗಳು ಹೊರಟರು ಬಗಲಿಗೊಂದು 'ಬ್ಯಾಗ್' ಏರಿಸಿ।
ಸಿಕ್ಕವರಿಗೆಲ್ಲಾ ನಗುಮುಖದಿ ನಮಸ್ಕರಿಸಿ
ನಾಸಿಕವ ಸಿಂಗರಿಪ ನಯನಗಳ ಕವಚದಲಿ
ಅನ್ಯರಿಗೆ ಸಿಗದ ಕಸ್ತೂರಿ ಕನ್ನಡದ ಸೊಗಡ ಸವಿಯುತಲಿ ॥

ಆಯ್ತು ಮಾಮೂಲಿ ಉಭಯ ಕುಶಲೋಪರಿ ವಿನಿಮಯ
ಕೇಳದೆ ನಾನು ಶಾಸ್ತ್ರಿಗಳೆ ಏನ್ ಸಮಾಚಾರ?
ಶುರು ಹಚ್ಕೊಂಡ್ರು ನೋಡಿ ಕನ್ನಡದ ವಿಚಾರ
ಉಲಿಯಿತು ರಸನ ಭಾಷೆಯ ಸವಿವರ ಸಮಾಚಾರ
ಕಸ್ತೂರಿ ಕನ್ನಡದ ಕಂಪ ಪಸರಿಸಲು ಈ ಚಾರ ॥

ಬಗಲಿನ 'ಬ್ಯಾಗ್' ತುಂಬ ಕನ್ನಡದ ಅಮಲು
ವಿತರಿಸುತ ನಡೆಯುವರು ಎಲ್ಲರಿಗು ಅವರು
ಸ್ವೀಕರಿಸಿ 'ಮತ್ತೇರಿ' ನಲಿದಾಡಿ ನಡೆದರೆ
ಹಿರಿಹಿರಿ ಮುಖಹಿಗ್ಗಿ ಖುಷಿ ಪಡುವರವರು ॥

ಭಾಷೆಯ 'ಮತ್ತು' ಹುದುಗಿಹುದು ಅವರಲ್ಲಿ
ಈ ಜ್ಞಾನಿ–ವಿಜ್ಞಾನಿ ಧಮನಿಗಳ ಕಣಕಣಗಳಲ್ಲಿ
ಮಿಂಚುವುದು ಸಾಧನೆಯ ಸಾರ್ಥಕತೆ ಈ
ವಾಮನಾಕೃತಿಯಲ್ಲಿ
ಅರ್ಪಿಸಲು ಧನ್ಯತೆಯ ಕುಸುಮಗಳ 'ಅಮ್ಮನ' ಚರಣದಲ್ಲಿ ॥

ಸವೆದಿದ್ದು ಮೂರು ದಶಕದ ಮೇಲೆ ಮತ್ಮೂರು ವರ್ಷಗಳು
ರಾಷ್ಟ್ರೀಯ ವೈಮಾಂತರಿಕ್ಷ ಪ್ರಯೋಗಾಲಯದ ವಿಜ್ಞಾನ ಸೇವೆಯಲ್ಲಿ
ಕಳೆದದ್ದು ಅತ್ಯಲ್ಪ, ಉಳಿದಿದ್ದು ಭಾಷೆಯ ಬೆಳೆಸುವ ಸಂಕಲ್ಪ
ನೀಡಿದ್ದು 'ಕಣಾದ' ವಿಜ್ಞಾನ ಸಂಚಿಕೆಯ ಸರ್ವತೋಮುಖ ಬೆಳವಣಿಗೆಗೆ ಕಾಯಕಲ್ಪ ॥

ಕನ್ನಡ ಭಾಷೆಗೆ ಲಿಪಿ ತಂತ್ರಾಂಶ ಸುಲಲಿತವಾಗಿ ರೂಪಿಸಲು
ಶಾಸ್ತ್ರಿಗಳಿದ್ದ ಮಿತ್ರವೃಂದ ಅವಿರತ ಚಿಂತನೆ ನಡೆಸಿತ್ತು
ಚಿಂತನ ಮಂಥನ ಸಾಗುತ್ತಿರಲು ಸಿಂಚನವಾಯಿತು ಯೋಜನೆಯು
ಸಾಕಾರಗೊಂಡಿತು ಗುರಿ ಸಾಧಿಸಲು 'ಕನ್ನಡ ಗಣಕ ಪರಿಷತ್ತು' ॥

ಸುದ್ದಿ ಮುಟ್ಟಲು ಸರ್ಕಾರವು ಆಹ್ವಾನಿಸಿತು ಈ ಸಮಿತಿಯನು
ಕಚೇರಿಗಳಲಿ ಅಳವಡಿಸಲು ನುಡಿ ತಂತ್ರಾಂಶದ ಆಡಳಿತ
ಮನೆಮಾತಾಯಿತು ಈ ಆವಿಷ್ಕರಣೆ ಬುದ್ಧಿಜೀವಿಗಳ ವಲಯದಲಿ
ಸಂತಸ ತಂದಿತು 'ಶಾಸ್ತ್ರಿ ಮಿತ್ರ'ರಿಗೆ ಸರ್ಕಾರದ ಈ ನಿರ್ಧಾರ ॥

ಪುಳಕಗೊಂಡರು ಶಾಸ್ತ್ರಿ ಮಿತ್ರರು ತಮ್ಮೆಲ್ಲರ ಈ ಸಾಧನೆಗೆ
ಕನ್ನಡ ಭಾಷೆಗೆ ಕನ್ನಡ ಮಾತೆಗೆ ತಾವ್ ನೀಡಿದ ಈ ಕಾಣಿಕೆಗೆ
ಕನ್ನಡಮ್ಮನ ಆಶೀರ್ವಾದ ಅವರೆಲ್ಲರಿಗಿರಲಿ ಅನವರತ
ನನ್ನಯ ಪ್ರಾರ್ಥನೆ ಭುವನೇಶ್ವರಿಗೆ ಆಶೀರ್ವದಿಸಲು ಈ ಸಾಧಕರ ॥

ಶಾಸ್ತ್ರಿಗಳೇ ಬೇಕಿನ್ನೇನು ಈ ಸಂಧ್ಯಾಕಾಲದಲ್ಲಿ
'ಅಮ್ಮನ' ಮಮತೆಯ ಸಾನಿಧ್ಯವಿರಲು ನಿಮ್ಮ ಪಯಣದ ದೋಣಿಯಲಿ
ನನ್ನ ಪ್ರಾರ್ಥನೆ ಇಷ್ಟೆ – ನಿಮ್ಮ ಒಡನಾಟ ಸತತ ನಮಗಿರಲಿ
ಹೂ ಹೊತ್ತ ನಾರಿನಾ ತೆರದಿ 'ಅಮ್ಮನಿಗೆ' ಅಲಂಕರಿಸಲು ಅನವರತ ॥

ತುಂಬಿದರೇನು ಎಪ್ಪತ್ತು? ಆಕೃತಿಯಲ್ಲೀಗಲೂ ಇಪ್ಪತ್ತು !
ನಿಮ್ಮ ರಕ್ಷಾ ಕವಚದಲಿ ಭಾಷೆಗಿಲ್ಲ ಆಪತ್ತು
ಮಸ್ತಕ ತಿಜೋರಿಯಲ್ಲಿದೆ ಅಳಿಯದ ಭಾಷಾ ಸಂಪತ್ತು
ಇದೇ ಅಲ್ಲವೆ ನಿಮ್ಮ ತಾರುಣ್ಯದ ಗುಟ್ಟು । ಮಾಡಿದೆ ನಾನು ರಟ್ಟು ॥

"ಹುಟ್ಟಿನಾ ಸಾರ್ಥಕತೆ ನಿಮಗೆ ಪ್ರಭೆಯಾಗಿರಲು
ಧನ್ಯತೆಯ ಕುಸುಮವಿದೋ ನಿಮ್ಮ ಹೆತ್ತವರಿಗೆ
ನಿಮ್ಮಿರುವ ಜಗಕಿತ್ತ ಪ್ರಕೃತಿ ಪುರುಷರಿಗೆ
ನಿಮ್ಮ ಅರ್ಧಾಂಗಿಗೆ, ಪ್ರೀತಿಯ ಕುಡಿಗಳಿಗೆ

"ಶಾಸ್ತ್ರಿಗಳೇ ಮತ್ತೇನ್ ಸಮಾಚಾರ ?
ನಂದೇನಿದೆ ಸಮಾಚಾರ ? ಜಾಡ್ಸ್‌ಬಿಟ್ರಲ್ಲ ನನ್ನ ಜಾತಕದ ವಿವರ !

ಶ್ರೀನಾಥಶಾಸ್ತ್ರೀ

–ಎಸ್.ಗೋಪಾಲ, ಬೆಂಗಳೂರು
ರಾವೈಪ್ರ ಸಹೋದ್ಯೋಗಿ

ಪ್ರಯೋಗಾಲಯದ ಬೆರಳೆಣಿಕೆಯ ಶಾಸ್ತ್ರಿಗಳಲ್ಲಿ
ಅತ್ಯಂತ ಚಿರಪರಿಚಿತ ಹೆಸರೇ
ಶ್ರೀ ಚಿ.ವಿ.ಶ್ರೀನಾಥ ಶಾಸ್ತ್ರಿಗಳು
ಸರಳ ಸಜ್ಜನಿಕೆಯ ಮೆದು ಸ್ವಭಾವದ ಇವರು
ಸರಳರಲ್ಲಿ ಅತಿ ಸರಳ
ಕುರುಚಲುಗಡ್ಡ, ಸಣಕಲು ದೇಹ ಮತ್ತೆ ಕೈಲೊಂದು ಚೀಲ ಇದ್ದರೆ
ಮತ್ತೆ ಅವರೇ ಶ್ರೀನಾಥಶಾಸ್ತ್ರಿ
ಕನ್ನಡಕ್ಕಾಗಿ ಸದ್ದಿಲ್ಲದ ಹೋರಾಟ
ತನುಮನಗಳಲ್ಲಿ ಕನ್ನಡದ ಮಂತ್ರ ನಿರಂತರ
ತೀ.ನಂ.ಶ್ರೀ, ಬಿ.ಎಂ.ಶ್ರೀ, ಯವರಂತೆ ಇವರು ಚಿ.ವಿ.ಶ್ರೀ
ಕನ್ನಡ ವಿಜ್ಞಾನ ಪತ್ರಿಕೆ "ಕಣಾದ" ಕ್ಕೆ ಇವರ ಕೊಡುಗೆ ಅಪಾರ
ಪತ್ರಿಕೆಯ ಬೆಳ್ಳಿ ಹಬ್ಬದವರೆಗೆ ಇವರ ಸಾರಥ್ಯ
ಕನ್ನಡದ ಗಣಕೀಕರಣಕ್ಕೆ ಅಪಾರಸೇವೆ!
'ಕನ್ನಡ ಗಣಕ ಪರಿಷತ್ತಿನ' ಹುಟ್ಟು ಅಪಾರ ಮೆಚ್ಚುಗೆ
ಕರ್ನಾಟಕ ಸರಕಾರದ ಮಾನ್ಯತೆ
ಕೆಂಪೇಗೌಡ ಪ್ರಶಸ್ತಿಯಿಂದ ಪುರಸ್ಕೃತ
ಕರ್ನಾಟಕದ ಎಲ್ಲಾ ಇಲಾಖೆಗಳಲ್ಲಿ 'ನುಡಿ'ಯ ಬಳಕೆ
ಕನ್ನಡಕ್ಕೆ ಚ್ಯುತಿ ಬರದಂತೆ 'ಕೀಲಿ ಮಣೆಯ' ವಿನ್ಯಾಸ
ನಿವೃತ್ತಿ ನಂತರವೂ ಇವರ ಕನ್ನಡ ಸೇವೆ ನಿರಂತರ
ಬರಲಿ ಇವರಿಗೆ ಮತ್ತಷ್ಟು ಶಕ್ತಿ ಉತ್ಸಾಹಗಳು
ನಡೆಯಲಿ ಕನ್ನಡಮ್ಮನ ಸೇವೆ ನಿರಂತರ

Shastry Gems – As I have Perceived

– ಡಾ। ಮುಕುಂದ್, ಬೆಂಗಳೂರು
ರಾವೈಪ್ರ ವಿಜ್ಞಾನಿ, ೯೪೪೮೩೭೩೧೧೪
mukund13@yahoo.com

Sri Srinatha Sastry is very popular and dear to all of us at NAL. I met him when he got transferred to our division in the Belur campus some time during 1990s. Sastry had joined NAL as a scientist in the computer division during 1973. He acknowledges that he had not seen a computer at that time. But he could convince the interviewers from his clear thinking in mathematics obtained from his master's degree and teaching experience. Immediately after joining NAL he became proficient in programming and was much sought after for solving the aeronautical computational problems. In fact, he was transferred to Belur to help in the programming for the analysis of wind tunnel data.

As we shared the room in the office, I came to know this interesting gentleman better. I recognized his analytical mind, roots in mathematics and programming which helped him explain difficult problems in mathematics or aeronautics lucidly on several occasions. His passion, I soon realised, has been in spreading science to the Kannada speaking students and people across the state. Over the years, he had been striving almost single handedly to publish 'Kanaada' the annual Science magazine of the Kannada Samskritika Sangha of NAL. As I saw, he put in considerable effort right from goading co-scientists to submit articles, studying the subject to rewrite them if necessary, editing and translating them, compiling the magazine, getting advertisements, running about to the printer to get the books. The day the books were released at grand function he was a busy but happy man. His next task was to see that the magazine reached students in a large number of schools and colleges all over Karnataka. Kanaada has more than met its intention by popularinzing Science across the state. The effort is being continued at NAL partly by his daughter Kshama.

Sastry's quest to contribute in Kannada made him start the Kannada Ganaka Parishath. He used his simple nature, persuasive skills and of course his expertise in the subject to convince the high

officials of Karnataka Government to sanction the project 'Nudi' to build a free and state of the art Kannada word processing software. We jointly reformulated the Kannada keyboard layout. Though my contribution was small he gave me a chance to introduce the layout to the government. He and his team worked hard on Nudi, which has enabled us to write and correspond in Kannada through the electronic medium. He has also authored two humorous Kannada books.

These ventures did not decrease his contributions to our Division till he retired in 2004. He learnt aerodynamics and contributed to various projects. In one such project, he used artificial intelligence in the form of neural networks to evaluate flight data. This program was much sought after by Indian defence establishments. Sastry was never perturbed by the ravings of one of our short tempered senior scientists. He would simply ignore the tempered onslaught to continue with his seminar that the head would finally calm down and come to terms with him. In fact on many occasions has acted like a 'simple-ton' to softly convince everyone. He also has an unquenching 'hambala' to tell everyone that he is humble.

Away from all these, one of Sastry's interests was trekking. He had arranged a two-day trekking among some friends at NAL from Horanadu to where else but Sringeri. The energy he had in trekking about 12 years ago is astounding. At the end of the trek we were taken his house at Sringeri, where I had the fortune of meeting another two great personalities. One look at his mother, you would be so overwhelmed with respect and affection that you would seek your place at her feet. I am sorry to miss the kind lady now. The highly capable administrator, multi-lingual professor, multi-system medicine practitioner and social worker brother Giridhar was a welcome introduction. I have met Sastry's wife Smt. Saraswathi on several occasions and found her to be soft spoken, cultured and talented. His children Kshama and Vishwanath are also intelligent and cultured and show their good upbringing.

I feel honoured to be given a chance to write these few lines about my friends Srinatha and Giridhara Sastry. I congratulate them on their respective landmark birthdays and wish them long healthy and happy life and whole family the very best.

◆

Philosopher Friend–Sri Giridhara Shastry

-ಎ. ರಾಮಸ್ವಾಮಿ, ಬೆಂಗಳೂರು
ನಿವೃತ್ತ ಐ.ಎ.ಎಸ್ ಅಧಿಕಾರಿಗಳು
೦೮೦-೨೬೬೪೯೫೩೭
aramaswamy9@gmail.com

I am happy and glad to have got an opportunity to write few words about my philosopher friend on the eve of his sixtieth birthday.

I had the pleasure of meeting Sri Giridhara Sastry about forty years ago. The brief meeting turned into acquaintanship and blossomed into True friendship in a short time. I have deliberately used the word true with a capital "T", as over the years I have actually experienced what Adi Shankaracharya has written in his ***"Prasnottara Ratna Malika. Kim Mitram? Yo nivarayati papat. Ko; alankarah? Shilam. Kim Vachanha Mandanam? Satyam".***

Sri.Giridhara Sastry is a multifacted personality and trying to capture such a multidimensional person in a small article is akin to trying to capture the beauty of Mount Everest in a flash of lightening.

Sri.Giridhara Sastry completed his BSc and MA in Sanskrit with distinction. Endowed with a ever smiling pleasant personality and a simplicity which came natural to him, Sri.Sastry had by this time gathered considerable friends and followers from a wide cross section of the society. He was fortunate to have come in contact at an early age with Sringeri Sharada Peetham and in particular with Poojya Jagadguru Sri Sri Abhinava VidyaTirtha Mahaswamiji who was the 35th Jagadguru of Sringeri Sharada Peetam in the resplendent unbroken guru parampara commencing from His Holiness Sureshwaracharya the first disciple of Adi Shankaracharya. Poojya Jagadguru in the words of the present Jagadguru Sri Sri BharatiThirtha Mahaswamiji. "He was a great Pandit among Pandits, a great Yogi among Yogis and great Jnani

among Jnani's. He had the special quality of being very kind to everyone with not even a trace of ego or ahankara. Not withstanding his extraordinary knowledge and proficiency in Shastras, he not only spoke freely with the common man but also conveyed to them lucidly the import of tattvas or truth". It is this that has let a lasting impression on the mind of Sri Giridhara Sastry and moulded his outlook towards life and dealings with the people.

Sri Giridhara Sastry was fortunate to undergo traditional, learning sitting at the Lotus Feet of the present Shankaracharya of Sringeri Sharada Peetam an ocean of knowledge and a scholar extraordinary. Leading a very dedicated life as per the dictates of Samana Dharma, he went on to become the Administrator of Sri Sringeri Sharada Peetam and in later years private secretary to the 35th Jagadguru Dakshinamnaya Sri Sringeri Sharada Peetam. After the attainment of "Mahasamadhi" of the Jagadguru, Sri Sastry shifted his activities to New Delhi and joined the **"Corporate World".** He rubbed shoulders with the high and mighty of the captains of industry was well as those in public life and in administration. The extraordinary feature was that in midst of all pomp and glitter he never gave up his traditional approach to life including his traditional attire of dhoti, kurta and angavastram with Vibuthi and Kumkum adorning his forehead. Even in the corporate world he was able to soon make a mark. He showed by personal example and in his work ethics how Gita and Upanishads had great relevance to the present day world and could play a very meaningful role in developing good Human Relation practices, improve production and productivity and in the longer run ensure peace property and progress.

On return from Delhi he immersed himself in the study of English Literature and obtained MA degree from Mysore University and later Ph.d in English from the same university. The works of Bhana Bhatta, Kalidasa, Bharathruhari on the one hand, Shakespeare, Emerson, Wordsworth, Dicken, Milton, Keats on the other hand along with Ponna, Pampa, Ranna, DVG, Masti and lots others became his

constant companion. Sri Sastry took up teaching in a college and due to sheer hard work, sincerity and scholarship became the Principal of the college at Sringeri.

Devotion of Jagadguru and renunciation have been his guidelife principles. ***"Sarvani Vastu bhayanvitam bhuvi nrnam, vairagyam evabhayam"*** - While everything in this world is fraught with fear, for men's, renunciation alone gives fearlessness.

When the comforts of the world were in Sastry's reach and could have been his, left them and gave his talents to the service of the Sringeri Mutt and later to the college at Sringeri. He sincerely believes in the Vedantic Maximum, **"Men are great not by what they acquire but by what they renounce".** He is of the firm belief that those who engage in public work should not look upon it as a career with glittering prizes.

Giridhara Sastry has shown by personal example that if one leads dedicated life, devoted to truth and avoids intrigues both in private and public life he is qualified to called truly religious. I have heard from numerous persons and organizations saying "Sir, when men like you visit our house, our institution, you purify the atmosphere". Sri Sastry continues to sympathise with the poor and the oppressed. The problems that Sri Sastry faced after the demise of his father a scholar in his own right were formidable. With total faith in the Jagadguru and conscious of the long distance he had to traverse, he whole-heartedly engaged himself with various tasks that lay before him and came out successfully. He had no doubt in his mind that however difficult and hard it may be, out of those difficulties, the strength will come, which in the end will keep him to accomplish the tasks.

Some of the finest moments of Sri Giridhara Sastry was when he was in Sringeri Mutt as Administrator and Private Secretary to His Holiness. He had an eye for the scarest resource of all talent and he could bring out the best in his team. No one worked under him, everyone was made to feel that he was not merely a cog in a big

machine, but was helping to strengthen and advance a great mutt with rich history, legacy and traditions for well over thousand years.

Extravagance is wholly alien to his nature. It was difficult to imagine the office of the Administrator and Private Secretary more Spartan in its functioning then Sri.Giridhara Sastry's office. Integrity and self effacement comes to him as naturally as deviousness and ostentation come to some others.

Whenever Sri Giridhara Sastry came to Bangalore he made it a point to spend some time with me. A good conversationalist, I used to eagerly look forward to such meetings inspite to my hectic schedule. It was an education for me. I learnt a lot about the rich tradition of Sringeri Mutt and the formidable problems it had faced and was facing. I did whatever I could do".

When Sri Sastry shifted to Bangalore, our meetings were more frequent and longer. In one of our meetings I raised the question what constitutes the principle of a good life? who is supposed to be a good man. Sri Giridhara Sastry thought for a while and with a smile on his face said our Poojya Guruji had once said "Look at the Upanishad". It says "Didn't you hear the thunder clap? What did it say? ***Da da da, Datta, Damyata, Dayadhavam.*** Charity, Self control, compassion these are the principles which constitute a good life. It is these principles which we have to take up and adopt in our life". Apart from discussing current affairs our discussion would invariably take us to the Upanishads, Ramayana and Mahabharatha, Commentaries of Adi Shankara on Gita, Upanishads and Bramasutra and the life and time of Jagadgurus of Sringeri Sharada Peetam.

The lesson which we must learn from Sri.Giridhara Sastry's life is that is we are to improve ourselves, we must have reverence for Adi Shankara and to our spiritual Guru. True reverence is unfortunately is fast disappearing from our life. We should be grateful to people who put us on the right track. Next to true reverence is the principle of renunciation.

Things come and go, Prestige and Power disappear in a few days. Today one is a great man, tomorrow he is brought down. That is how it is, ***Vibhavo Naiva, Sasvatah.*** All this power, pomp and glory are not eternal.

Sri Giridhara Sastry was fortunate to have had the Blessings and guidance of Poojya Abhinava VidyaTirtha Mahaswamiji. During my conversation and discussions he would throw light on how the Jagadguru views a particular problem or mention about his observation of various happenings. Once he mentioned that Poojya Jagadguru Sri Sri Abhinava Vidya Tirtha Mahaswamiji had told him **"History is not a battle of kings, is not merely an account of what happened between dynasties. History is a march of social changes, new economic structures, new movements which happen in this world. They are the things that matter in the life time of a nation"**.

As I said in the beginning itself, a small article would not do much justice to the personality of Sri Giridhara Sastry. Probably a good book critically edited would do some justice. In this small article I must also mention the reverence, respect and love with which he looked after his widowed mother who spent most of her time with him. Some how his mother felt she should be with him, since he is a confirmed bachelor and she should look after him. Sri Girildhara Sastry sincerely believed and practiced in what Adi Shankaracharya had said ***"Pratyaksha-devata ka? Mata. Pujyo guru ca kah? Tatah. Kah sarva-devatatma? Vidya-karmanvito viprah".*** Sastry served his mother with respect, love and affection till the very end and has set a noble example before all of us.

For all of us in the family knowing Sri. Giridhara Sasry has been an enlightening experience. We even now look forward to his visits to our house and are eager to listen to his words full of knowledge and wisdom.

ಆದಿಶಂಕರರು ಪ್ರತಿಪಾದಿಸಿದ ಅದ್ವೈತ ಸಿದ್ಧಾಂತ

– ಡಾ॥ ಎಚ್.ವಿ.ನರಸಿಂಹ ಮೂರ್ತಿ, ಕುಂದಾಪುರ
ನಿವೃತ್ತ ಪ್ರಾಧ್ಯಾಪಕರು, ೦೮೨೫೪-೨೬೧೧೪೫

ವೇದಾಂತ ನಮ್ಮ ಪವಿತ್ರ ಭಾರತದ ಅಪೂರ್ವ ಅನರ್ಘ್ಯರತ್ನ. ಬೇರಲ್ಲಾ ಭೌತಿಕ ಸಂಪತ್ತುಗಳನ್ನು ಇತರರು ಭಾರತದಿಂದ ಕೊಂಡೊಯ್ಯಬಹುದು; ಆದರೆ ಆರ್ಷಸಂಪತ್ತಾದ ವೇದಾಂತವನ್ನು ಯಾರೂ ಅಪಹರಿಸಲಾರರು; ಅದೊಂದು ಅಮೂಲ್ಯ ನಿಧಿ.

ನಾವು ನೋಡುವ, ಅನುಭವಿಸುವ ಈ ಜಗತ್ತು ಎಲ್ಲಿಂದ ಬಂದಿತು? ಯಾರ ಸೃಷ್ಟಿಯಿದು? ನನಗೂ ಈ ಜಗತ್ತಿಗೂ ಇರುವ ಸಂಬಂಧವೇನು? ಇತ್ಯಾದಿ ಜಿಜ್ಞಾಸೆಗಳಿಗೆ ಉತ್ತರ ಹುಡುಕುವ ಕೆಲಸವನ್ನು ವೇದಾಂತ ಮಾಡುತ್ತದೆ. ಭೌತಿಕ ಜಗತ್ತಿಗೆ ಹೊರತಾಗಿ ಅಧ್ಯಾತ್ಮ ಜಗತ್ತೊಂದಿದೆ- ಎಂಬ ಅರಿವನ್ನು ಮೂಡಿಸುವುದೇ ವೇದಾಂತದ ಗುರಿ. ಚರಾಚರ ಜಗತ್ತಿಗೆ ಮೂಲವಾದ 'ಬ್ರಹ್ಮ' ಎಂಬ ತತ್ವವಿದೆ. ಅದೇ ಪರಮತತ್ತ್ವ ಪರಮಾರ್ಥವೂ ಅದೇ ಆಗಿರುತ್ತದೆ. 'ಬ್ರಹ್ಮ ಒಂದೇ ಸತ್ಯ; ಕಾಣುವ ಈ ಜಗತ್ತು ಮಿಥ್ಯ'- ಎಂಬ ರಹಸ್ಯವನ್ನು ವೇದಾಂತ ತಿಳಿಸುತ್ತದೆ. ಈ ಬ್ರಹ್ಮನನ್ನು ಅರಿತಾಗಲೇ ಸಂಸಾರ ಬಂಧನದಿಂದ ಮುಕ್ತಿ ಸಾಧ್ಯ.

'ನಾನು ಯಾವಾಗಲೂ ಸುಖಿಯಾಗಿರಬೇಕು, ನನಗೆಂದೂ ದುಃಖ ಬರಬಾರದು' – ಎಂಬುದು ಎಲ್ಲರ ಆಕಾಂಕ್ಷೆ. ಸುಖಕ್ಕಾಗಿ ಮನುಷ್ಯನು ನಿರಂತರ ಯತ್ನಿಸುತ್ತಾನೆ; ಕಷ್ಟಪಡುತ್ತಾನೆ. ಭ್ರಮರವೊಂದು ಮಕರಂದಕ್ಕಾಗಿ ಹೂವಿನಿಂದ ಹೂವಿಗೆ ಹಾರಾಡುವಂತೆ ಮಾನವರ ಮನಸ್ಸು ಸುಖವನ್ನು ಲೌಕಿಕವಸ್ತುಗಳಲ್ಲಿ ಹುಡುಕುತ್ತಾ, ಕೊನೆಗೂ ನಿಜವಾದ ಸುಖವನ್ನು ಹೊಂದದೇ ಬಳಲುತ್ತದೆ. ಆದರೆ 'ಸುಖ ಹೊರಗಿನವಸ್ತುಗಳಲ್ಲಿಲ್ಲ. ಅದು ಅಂತರಾತ್ಮನಲ್ಲೇ ಇದೆ. ಬ್ರಹ್ಮಸಾಕ್ಷಾತ್ಕಾರದಿಂದಲೇ ನಿರತಿಶಯ ಆನಂದ ಲಭ್ಯ'- ಎನ್ನುವುದನ್ನು ವೇದಾಂತ ಸ್ಪಷ್ಟಪಡಿಸುತ್ತದೆ.

ಇಂತಹ ವೇದಾಂತ ಪರಂಪರೆಯಲ್ಲಿ ಅದ್ವೈತಸಿದ್ಧಾಂತ ಭಾರತದಲ್ಲಿ ಮಾತ್ರವಲ್ಲ, ಜಗತ್ತಿನಾದ್ಯಂತ ಮಾನ್ಯವಾಗಿದೆ. ಎಂದಿಗೂ ಅದರ ಶ್ರೇಷ್ಠತೆಗೆ ಚ್ಯುತಿಯುಂಟಾಗಲು ಸಾಧ್ಯವಿಲ್ಲ.

ಅದ್ವೈತವೆಂದರೇನು?

'ಅದ್ವೈತ' ಎಂದರೆ 'ಎರಡಲ್ಲದ್ದು' ಅಥವಾ 'ಒಂದೇ ಇರುವಿಕೆ' ಎಂದರ್ಥ. ಆದರೆ ಉಪನಿಷತ್ತುಗಳು ಸಾರುವಂತೆ 'ಬ್ರಹ್ಮವೆಂಬ ವಸ್ತು ಒಂದೇ ಇರುವುದು'- ಎಂದು ಹೇಳಿದಹಾಗಾಯಿತು. ಅರ್ಥಾತ್ ನಮಗೆ ಕಾಣಿಸುವ ಜಗತ್ತು ಭ್ರಮೆ. ಇದರ ಮೂಲರೂಪ

ಬೇರೆಯೇ ಇದೆ. ಅದು ಮನಸ್ಸು – ಇಂದ್ರಿಯಗಳಿಗೆ ಗೋಚತವಾಗದ ತತ್ತ್ವ ಅದೇ ಬ್ರಹ್ಮ. 'ತತ್ವಮಸಿ', 'ಅಹಂ ಬ್ರಹ್ಮಾಸ್ಮಿ', 'ಏಕಮೇವಾದ್ವಿತೀಯಂ ಬ್ರಹ್ಮ', 'ನೇಹ ನಾನಾಸ್ತಿ ಕಿಂಚನ'– ಇತ್ಯಾದಿ ಶ್ರುತಿವಾಕ್ಯಗಳ ಆಧಾರದಿಂದ ಪರಬ್ರಹ್ಮವೊಂದೇ ನಿತ್ಯಸತ್ಯ ಎಂದು ಪರಿಗಣಿಸಬೇಕು. ಮತ್ತೆಲ್ಲವೂ ಇರುವಂತೆ ಭಾಸವಾಗುತ್ತದೆ. ಅವು ಸತ್ತೂ ಅಲ್ಲ; ಅಸತ್ತೂ ಅಲ್ಲದ ಅನಿರ್ವಚನೀಯ. ಇದನ್ನೇ 'ವಿವರ್ತ' ಎಂದು ಕರೆಯುವುದು. ಹಗ್ಗವನ್ನು ಹಾವೆಂದು ತಿಳಿಯುವಂತೆ ಈ ಜಗತ್ತು ಕಾಣಿಸುತ್ತದೆ ಎಂಬ ಉಪನಿಷತ್ ಪ್ರತಿಪಾದಿತವಾದ ಅದ್ವೈತತತ್ತ್ವವನ್ನು ಆದಿಶಂಕರಾಚಾರ್ಯರು ಉಪನಿಷತ್ತು, ಬ್ರಹ್ಮಸೂತ್ರ ಮತ್ತು ಭಗವದ್ಗೀತೆಗಳೆಂಬ ಪ್ರಸ್ಥಾನತ್ರಯಕ್ಕೆ ಭಾಷ್ಯಬರೆಯುವ ಮೂಲಕ ಜಗತ್ತಿಗೆ ಸಾರಿದರು. ಇತರ ಮತಗಳನ್ನು ಖಂಡಿಸಿ ತಮ್ಮ ಮತವನ್ನು ಸಮರ್ಥಿಸುವಲ್ಲಿ ಶ್ರೀಶಂಕರರ ಪ್ರತಿಭೆ ಪರಿಪೂರ್ಣವಾಗಿ ಅಭಿವ್ಯಕ್ತವಾಗಿದೆ. ಅವರು ಇದಕ್ಕಾಗಿ ಬಳಸುವ ಉಕ್ತಿಯುಕ್ತಿಗಳು ಸತ್ಯಾನ್ವೇಷಣೆಗಾಗಿಯೇ ಹೊರಟಿವೆ; ಜನರ ಅಭ್ಯುದಯ– ನಿಃಶ್ರೇಯಸ್ಸುಗಳು ಸತ್ಯವನ್ನೇ ಅವಲಂಬಿಸಿವೆ – ಎನ್ನುವುದು ನಿಸ್ಸಂದೇಹ.

ವ್ಯಕ್ತಿ–ವ್ಯಕ್ತಿಗಳಲ್ಲಿ, ವಸ್ತು–ವಸ್ತುಗಳಲ್ಲಿ ನಮಗೆ ಪ್ರತಿಕ್ಷಣದಲ್ಲೂ ಭೇದವೇ ತೋರಿಬರುತ್ತಿರುವಾಗ, ಅನಾದಿಕಾಲದಿಂದ ಬಂದ ಈ ಸಂಸಾರ ನಿತ್ಯ ಮತ್ತು ಸತ್ಯ ಎಂಬ ಅನುಭವವಿರುವಾಗ, ಅದ್ವೈತವನ್ನು ಸ್ಥಾಪಿಸಿವುದು ಅಸಾಮಾನ್ಯವಾದ ಕಾರ್ಯ. ದ್ವೈತದಲ್ಲಿ ವ್ಯವಹರಿಸುವ ಎಲ್ಲ ಜನರನ್ನೂ ಅದ್ವೈತದತ್ತ ಸೆಳೆದುಕೊಂಡು ಹಾಗೂ ದ್ವೈತವನ್ನು ಪ್ರತಿಪಾದಿಸುವ ಇತರ ಶಾಸ್ತ್ರಕಾರರನ್ನು ಸಮರ್ಥವಾಗಿ ಎದುರಿಸಿದ ಅಸಾಧಾರಣ ಪಾಂಡಿತ್ಯ ಆದಿಶಂಕರಭಗವತ್ಪಾದರದು. ಆದ್ದರಿಂದಲೇ ಇದೇ ತಳಹದಿಯಮೇಲೆ ಇಂದಿನ ವೈಜ್ಞಾನಿಕಯುಗದಲ್ಲೂ ಅದ್ವೈತಸಿದ್ಧಾಂತವು ಪ್ರಸಿದ್ಧಿಹೊಂದುತ್ತಾ ಅಚ್ಚಳಿಯದಂತೆ ಉಳಿದಿದೆ.

ನಾನು ಎಂಬ ವ್ಯವಹಾರದಿಂದಲೇ 'ಆತ್ಮ' ಸ್ವಯಂಸಿದ್ಧನಾಗುತ್ತಾನೆ. ಪ್ರಪಂಚದಲ್ಲಿ 'ನಾನು ಇಲ್ಲ' ಎಂಬ ವ್ಯವಹಾರ ಇಲ್ಲವಷ್ಟೆ? ಆತ್ಮ ಒಬ್ಬ ಇದ್ದಾನೆಯೇ? ಅಥವಾ ಇಲ್ಲವೇ? ಎಂಬ ಚರ್ಚೆಗಳಿಗೆ ಇಲ್ಲಿ ಆಸ್ಪದವೇ ಇಲ್ಲ.

ಚಾರ್ವಾಕರು ದೇಹಕ್ಕಿಂತ ಭಿನ್ನವಾದ ಆತ್ಮವನ್ನು ಒಪ್ಪುವುದಿಲ್ಲ. ಇಂದ್ರಿಯ ಅಥವಾ ಮನಸ್ಸು 'ಆತ್ಮ'ಎಂಬುದು ಕೆಲವರ ವಾದ. ದೇಹ, ಇಂದ್ರಿಯ, ಮನಸ್ಸುಗಳಿಗಿಂತ ಭಿನ್ನವಾಗಿ ಚೈತನ್ಯರೂಪಿ 'ಆತ್ಮ' ಇದ್ದಾನೆ. ಸಮಾಧಿಯಲ್ಲಿ ಅದರ ಅರಿವು ಚೆನ್ನಾಗಿ ಆಗುತ್ತದೆ.

ಜಾಗ್ರತ್, ಸ್ವಪ್ನ ಮತ್ತು ಸುಷುಪ್ತಿ–ಈ ಮೂರು ಅವಸ್ಥೆಗಳೂ ನಮಗೆ ತಿಳಿಯುತ್ತದೆ. ಜಾಗೃತ್ತಿನಲ್ಲಿ ಹೊರಗಿನ ವಸ್ತುಗಳು ಅರಿವಿಗೆ ಬರುತ್ತವೆ. ಸುಷುಪ್ತಿಯಲ್ಲಿ ಶುದ್ಧ ಅರಿವು ಸಿಗುತ್ತದೆ. ಆದ್ದರಿಂದಲೇ ಗಾಢನಿದ್ರೆಯಿಂದ ಎಚ್ಚೆತ್ತ ವ್ಯಕ್ತಿ 'ಚೆನ್ನಾಗಿ ನಿದ್ರಿಸಿದೆನು' ಎನ್ನುತ್ತಾನೆ. ನಿದ್ರಿಸುವಾಗಲೂ ಜ್ಞಾನ ಅಥವಾ ಚೈತನ್ಯ ಇರುತ್ತದೆ– ಎನ್ನುವುದು ಇದರಿಂದ ತಿಳಿದುಬರುತ್ತದೆ.

ಆತ್ಮನ ಅಸ್ತಿತ್ವ ಸ್ವಯಂಸಿದ್ಧ ಎಂದಮೇಲೆ ಬ್ರಹ್ಮತ್ವವೂ ಸ್ವಯಂಸಿದ್ಧವೇ. ಏಕೆಂದರೆ ಅದ್ವೈತಸಿದ್ಧಾಂತದ ಪ್ರಕಾರ 'ಆತ್ಮ' ಮತ್ತು 'ಬ್ರಹ್ಮ'ರ ನಡುವೆ ಯಾವ ಭೇದವೂ ಇಲ್ಲ. ಇದನ್ನೇ 'ಆತ್ಮಾ ಚ ಬ್ರಹ್ಮ', 'ಸರ್ವಂ ಖಲ್ವಿದಂ ಬ್ರಹ್ಮ', 'ಬ್ರಹ್ಮವಿದಾಪ್ನೋತಿಪರಂ'– ಮೊದಲಾದ ಶೃತಿವಾಕ್ಯಗಳು ಪ್ರತಿಪಾದಿಸಿ, ಅದ್ವೈತಸಂಪ್ರದಾಯಕ್ಕೆ ಭದ್ರಬುನಾದಿಯನ್ನು ಒದಗಿಸಿವೆ.

ಅದ್ವೈತ ಸಾಹಿತ್ಯ :

ಸಂಸ್ಕೃತವಾಙ್ಮಯದ ವೈದಿಕ ಮತ್ತು ಲೌಕಿಕ ಸಾಹಿತ್ಯಗಳಲ್ಲೆಲ್ಲಾ ಅದ್ವೈತಸಿದ್ಧಾಂತ ನಿಚ್ಚಳವಾಗಿ ಮೂಡಿಬಂದಿದೆ. **'ಏಕಂ ಸಂತಂ ಬಹುದಾಕಲ್ಪಯಂತಿ'** (ಒಬ್ಬನನ್ನೇ ಅನೇಕ ಬಗೆಯಾಗಿ ಕಲ್ಪನೆ ಮಾಡುತ್ತಾರೆ), **'ಪುರುಷ ಏವೇದಂ ಸರ್ವಂ'** (ಇವೆಲ್ಲವೂ ಪುರುಷನೇ), **ಇಮಾಚ ವಿಶ್ವಾ ಭುವನಾನ್ಯಪು'** (ಸಕಲ ಚರಾಚರ ಜಗತ್ತು ಅವನಲ್ಲದೆ ಬೇರೆಯಲ್ಲ), **ಏಕಂ ಸದ್ವಿಪ್ರಾಬಹುಧಾ ವದಂತಿ'** (ಒಂದೇ ಇರುವುದನ್ನು ಜ್ಞಾನಿಗಳು ವಿಧವಿಧವಾಗಿ ವರ್ಣಿಸುತ್ತಾರೆ) ಇವೇ ಮೊದಲಾದ ಶೃತಿವಾಕ್ಯಗಳು ಅದ್ವೈತ ಸಂಪ್ರದಾಯದ ಬ್ರಹ್ಮೈಕತತ್ತ್ವವನ್ನು ಸೂಚಿಸುತ್ತವೆ.

ಪ್ರಸ್ಥಾನತ್ರಯಗಳಲ್ಲಿ ಪ್ರಮುಖವಾದ ಉಪನಿಷತ್ತುಗಳು **'ಶಿವಂ ಶಾಂತಂ ಅದ್ವೈತಂ'** (ಶಿವ, ಶಾಂತ, ಎರಡಿಲ್ಲದ್ದು), 'ಏಕಮೇವ ಅದ್ವಿತೀಯಂ' (ಒಂದೇಒಂದು, ಎರಡಿಲ್ಲದ್ದು), **ತತ್ರ ಕೋ ಮೋಹಃ ಕಃ ಕೋಕಃ ಏಕತ್ವಮನುಪಶ್ಯತಃ** (ಏಕತ್ವವನ್ನು ನೋಡುವವನಿಗೆ ಶೋಕಮೋಹಗಳೆಲ್ಲಿಯದು?), **'ಸರ್ವಮೇತತ್ ಬ್ರಹ್ಮ', 'ಅಯಮಾತ್ಮಾ ಬ್ರಹ್ಮ'** (ಈ ಜಗತ್ತು ಬ್ರಹ್ಮವೇ; ಈ ಆತ್ಮನು ಬ್ರಹ್ಮನೇ), **'ಯತ್ರತ್ವಸ್ಯ ಸರ್ವಮಾತ್ಮೈವಾಭೂತ್, ಕೇನ ಕಿಂ ಪಶ್ಯೇತ್'** (ಯಾವ ಜ್ಞಾನಿಗೆ ಇದೆಲ್ಲವೂ ಆತ್ಮವೇ ಆಗಿವೆಯೋ, ಅಲ್ಲಿ ಯಾತರಿಂದ ಏನನ್ನು ಅವನು ಕಾಣಬೇಕು?), **'ಯತ್ರ ನಾನ್ಯತ್ ಪಶ್ಯತಿ, ನಾನ್ಯತ್ ಶೃಣೋತಿ, ನಾನ್ಯದ್ವಿಜಾನಾತಿ, ಸಭೂಮಾ, ವೈಭೂಮಾ ತದಮೃತಂ'** (ಯಾವ ಸ್ಥಿತಿಯಲ್ಲಿ ಬೇರೊಂದನ್ನು ಕಾಣುವುದಿಲ್ಲವೋ, ಬೇರೊಂದನ್ನು ಕೇಳುವುದಿಲ್ಲವೋ, ಬೇರೊಂದನ್ನು ಅರಿಯುವುದಿಲ್ಲವೋ, ಅದು 'ಭೂಮಾ', ಭೂಮವಾಗಿ ಇರುವುದೇ ಅಮೃತವಾದದ್ದು), **'ಸರ್ವಂ ಖಲ್ವಿದಂ ಬ್ರಹ್ಮ'** (ಎಲ್ಲವೂ ಬ್ರಹ್ಮವೇ), **'ತತ್ವಮಸಿ'** (ಆ ಬ್ರಹ್ಮವೇ ನೀನಾಗಿರುವೆ), **'ಅಹಂ ಬ್ರಹ್ಮಾಸ್ಮಿ'** (ನಾನು ಬ್ರಹ್ಮವಾಗಿದ್ದೇನೆ)–ಇತ್ಯಾದಿ ವಾಕ್ಯಗಳು ಘಂಟಾಘೋಷವಾಗಿ ಭೇದನಿರಾಕರಣೆಯನ್ನು ಒತ್ತಿಹೇಳುತ್ತಾ ಅದ್ವೈತಸಿದ್ಧಾಂತವನ್ನು ಸಾರುತ್ತವೆ.

ಅದ್ವೈತದ ಕುರಿತು ಅತ್ಯಂತ ಪ್ರಾಚೀನ ನಿರೂಪಣೆ ಇರುವುದು ಗೌಡಪಾದರ ಕಾರಿಕೆಗಳಲ್ಲಿ. ಅವರು ಆಗಮ, ವೈತಥ್ಯ, ಅದ್ವೈತ ಮತ್ತು ಅಲಾತಶಾಂತಿ– ಎಂಬ ನಾಲ್ಕು ಅಧ್ಯಾಯಗಳಲ್ಲಿ ಅದ್ವೈತಸಂಪ್ರದಾಯದ ಸಾರಸರ್ವಸ್ವವನ್ನು ಹಿಡಿದಿಟ್ಟಿದ್ದಾರೆ. 'ಅದ್ವೈತ ಕೇಸರಿ' ಎಂದೆನಿಸಿದ ಶ್ರೀಮದಾದಿಶಂಕರಭಗವತ್ಪಾದರಿಗಿಂತ ಹಿಂದೆ ಭರ್ತೃಹರಿ, ಭರ್ತೃಪ್ರಪಂಚ ಮೊದಲಾದವರು ತಮ್ಮ ಕೃತಿಗಳಲ್ಲಿ ಅದ್ವೈತಸಂಪ್ರದಾಯವನ್ನು ಸ್ಪಷ್ಟವಾಗಿ

ನಿರೂಪಿಸಿದ್ದಾರೆ. ಆಚಾರ್ಯ ಶಂಕರರು ತಮಗಿಂತ ಹಿಂದೆಯೇ ಪ್ರತಿಪಾದಿತವಾದ ಈ ಅದ್ವೈತಸಿದ್ಧಾಂತವನ್ನೆಲ್ಲಾ ಸಮಗ್ರವಾಗಿ ಕ್ರೋಢೀಕರಿಸಿ, ಪ್ರಸ್ಥಾನತ್ರಯಗಳ ಮೇಲಿನ ತಮ್ಮ ಭಾಷ್ಯಗಳ ಮೂಲಕ ವಿಸ್ತಾರವಾಗಿ ಪ್ರತಿಪಾದಿಸಿದ್ದಾರೆ. ಅವರ ಉಪದೇಶಸಾಹಸ್ರಿ, ವಿವೇಕಚೂಡಾಮಣಿ- ಮೊದಲಾದ ಗ್ರಂಥಗಳು ಹಾಗೂ ಸ್ತೋತ್ರಗಳು ಅದ್ವೈತಸಿದ್ಧಾಂತಕ್ಕೆ ಹಿಡಿದ ಕೈಗನ್ನಡಿಗಳಂತಿವೆ.

ಭಗವತ್ಪಾದಶಂಕರರ ನಂತರ ಪದ್ಮಪಾದಾಚಾರ್ಯರು(ಪಂಚಪಾದಿಕಾ), ಸುರೇಶ್ವರಾಚಾರ್ಯರು (ನೈಷ್ಕರ್ಮ್ಯಸಿದ್ಧಿ), ವಾಚಸ್ಪತಿಮಿಶ್ರರು (ಭಾಮತೀ), ಪ್ರಕಾಶಾತ್ಮಮುನಿ (ವಿವರಣ), ಚಿತ್ಸುಖಾಚಾರ್ಯರು (ತತ್ವದೀಪಿಕಾ), ವಿದ್ಯಾರಣ್ಯರು (ಪಂಚದಶೀ, ಜೀವನ್ಮುಕ್ತಿವಿವೇಕ ಇತ್ಯಾದಿ), ಮಧುಸೂದನಸರಸ್ವತೀ (ಅದ್ವೈತಸಿದ್ಧಿ), ಅಪ್ಪಯ್ಯದೀಕ್ಷಿತ (ಸಿದ್ಧಾಂತಲೇಶಸಂಗ್ರಹ ಇತ್ಯಾದಿ)- ಮೊದಲಾದ ಅನೇಕ ವಿದ್ವಾಂಸರು ಅದ್ವೈತಸಂಪ್ರದಾಯ ಪ್ರತಿಪಾದಕಗ್ರಂಥಗಳಿಂದ ಈ ಕ್ಷೇತ್ರವನ್ನು ಸಮೃದ್ಧಗೊಳಿಸಿದ್ದಾರೆ.

ಮಹಾಭಾರತದ ಪ್ರಮುಖ ಅಂಗವಾದ ಭಗವದ್ಗೀತೆ 'ಅದ್ವೈತಾಮೃತವರ್ಷಿಣಿ'ಯಾಗಿ ಅದ್ವೈತಸಿದ್ಧಾಂತವನ್ನು ಎತ್ತಿಹಿಡಿದ ಮಹೋನ್ನತಗ್ರಂಥ. ಭಾಗವತದ ಹನ್ನೊಂದನೆಯ ಸ್ಕಂಧ ಅದ್ವೈತವೇದಾಂತ ಪ್ರತಿಪಾದನೆಗೆ ಮುಡಿಪಾಗಿದೆ. 'ವಾಗರ್ಥಾವಿವಸಂಪೃಕ್ತೌ' - ಎಂಬ ವಾಗರ್ಥಗಳಲ್ಲಿ ಅದ್ವೈತವನ್ನು ಕಂಡ ಮಹಾಕವಿ ಕಾಳಿದಾಸನ ಕೃತಿಗಳೂ ಅಲ್ಲಲ್ಲಿ ಅದ್ವೈತತತ್ವವನ್ನು ಪ್ರತಿಪಾದಿಸಿವೆ. ಸಂಸ್ಕೃತದ ಮತ್ತೊಬ್ಬ ಮಹಾಕವಿ ಮಾಘ (ಶಿಶುಪಾಲವಧ), ನಾಟಕಕಾರರಾದ ಭಟ್ಟನಾರಾಯಣ (ವೇಣೀಸಂಹಾರ) ಮತ್ತು ಕೃಷ್ಣಮಿಶ್ರ (ಪ್ರಬೋಧ ಚಂದ್ರೋದಯ), ಕೇರಳದ ಸಂಸ್ಕೃತಕವಿ ನಾರಾಯಣಭಟ್ಟತ್ತಿರಿ(ನಾರಾಯಣೀಯಂ)- ಇವರೆಲ್ಲಾ ತಮ್ಮ ಕೃತಿಗಳಲ್ಲಿ ಅದ್ವೈತವನ್ನು ಪ್ರತಿಪಾದಿಸಿದ್ದಾರೆ.

ಅದ್ವೈತ ಕೇಂದ್ರಗಳು

ಪವಿತ್ರಭಾರತದ ಅತ್ಯಂತ ಪ್ರಾಚೀನಕೇಂದ್ರಗಳೆಂದರೆ, ಶಂಕರಭಗವತ್ಪಾದರು ಸ್ಥಾಪಿಸಿದ ಚತುರಾಮ್ನಾಯ ಪೀಠಗಳಾದ ಶೃಂಗೇರಿ, ಪುರಿ, ದ್ವಾರಕಾ ಮತ್ತು ಬದರಿ. ಈ ಅದ್ವೈತಪೀಠಗಳ ಶಾಖಾಮಠಗಳು ಮತ್ತು ಶಾಂಕರಪರಂಪರೆಯ ಇತರ ನೂರಾರು ಮಠಗಳಲ್ಲದೆ, ದೇಶಾದ್ಯಂತ ವ್ಯಾಪಿಸಿರುವ ರಾಮಕೃಷ್ಣಾಶ್ರಮದ ಕೇಂದ್ರಗಳು, ಚಿನ್ಮಯ ಮಿಶನ್ ಸಂಸ್ಥೆಗಳು, ರಮಣಮಹರ್ಷಿಗಳ ಆಧ್ಯಾತ್ಮಕೇಂದ್ರಗಳು, ಮಹರ್ಷಿಮಹೇಶಯೋಗಿಗಳ ಭಾವಾತೀತ ಕೇಂದ್ರಗಳು- ಇವೆಲ್ಲಾ ಒಂದಲ್ಲಾ ಒಂದು ವಿಧದಲ್ಲಿ ಅದ್ವೈತ ಪರಂಪರೆಯನ್ನು ಮುಂದುವರಿಸಿಕೊಂಡು ಬರುತ್ತಿರುವ ಸಂಸ್ಥೆಗಳು.

◆

ವೇದಗಳು

– ಡಾ। ಸುಬ್ರಾಯ ವಿ.ಭಟ್ಟ, ಶೃಂಗೇರಿ
ಉಪನ್ಯಾಸಕರು, ರಾಜೀವಗಾಂಧಿ ರಾಷ್ಟ್ರೀಯ ಸಂಸ್ಕೃತ ವಿದ್ಯಾಪೀಠ

ಭಾರತೀಯ ಸನಾತನ ವೈದಿಕ ಸಂಸ್ಕೃತಿಯ ಮೂಲವೇ ವೇದಗಳು. ಇವು ಅಲೌಕಿಕ ಜ್ಞಾನನಿಧಿಯಾಗಿವೆ. ನಾವು ಈ ಪ್ರಪಂಚದಲ್ಲಿರುವ ಎಲ್ಲಾ ವಸ್ತುಗಳನ್ನೂ ಪ್ರತ್ಯಕ್ಷಾದಿ ಪ್ರಮಾಣಗಳಿಂದ ಒಂದಲ್ಲ ಒಂದು ತೆರನಾಗಿ ತಿಳಿದುಕೊಳ್ಳಲು ಸಾಧ್ಯ. ಆದರೆ ಅಲೌಕಿಕವಾದ ಪರಲೋಕದ ಸ್ಥಿತಿಗತಿಗಳನ್ನು ಹಾಗೂ ಪಾರಲೌಕಿಕವಾದ ಸುಖವನ್ನು ಹೊಂದುವ ಬಗೆ ಹೇಗೆ? ಎಂಬುದು ಮನುಷ್ಯ ಮಾತ್ರನಿಂದ ಲೌಕಿಕ ಪ್ರಮಾಣಗಳಿಂದ ಊಹಿಸಲು ಅಸಾಧ್ಯ.

ವೇದೋಽಖಿಲೋ ಧರ್ಮಮೂಲಮ್ – ವೇದಗಳೇ ಧರ್ಮದ ಮೂಲ ಎಂಬುದು ಪ್ರಸಿದ್ಧವಾದ ವಚನ.

ಕೃಷ್ಣಯಜುರ್ವೇದ ಭಾಷ್ಯದ ಆರಂಭದಲ್ಲಿ ಭಾಷ್ಯಕಾರರಾದ ಭಗವಾನ್ **ಸಾಯಣಾಚಾರ್ಯ**ರು ವೇದದ ಲಕ್ಷಣವನ್ನು ತಿಳಿಸುತ್ತಾ – **"ಇಷ್ಟಪ್ರಾಪ್ತ್ಯನಿಷ್ಟಪರಿಹಾರಯೋಃ ಅಲೌಕಿಕಂ ಉಪಾಯಂ ಯೋ ಗ್ರಂಥೋ ವೇದಯತಿ ಸ ವೇದಃ"** – ನಿರತಿಶಯವಾದ ಸುಖಪ್ರಾಪ್ತಿಗೆ ಹಾಗೂ ಅನಿಷ್ಟಪರಿಹಾರಕ್ಕೆ ಮಾರ್ಗವನ್ನು ತಿಳಿಸುವ ಗ್ರಂಥ ಅಥವಾ ಶಬ್ದರಾಶಿಯೇ ವೇದವೆಂದು ತಿಳಿಸಿದ್ದಾರೆ.

ಈ ವೇದಗಳು ಯಾವುದೇ ಒಬ್ಬ ವ್ಯಕ್ತಿಯಿಂದ ರಚಿತವಾದವುಗಳಲ್ಲ. ಇವು ಅಪೌರುಷೇಯವಾದವುಗಳು. ಹಾಗಾಗಿಯೇ ನಿತ್ಯ. ಎಂದಿಗೂ ಇವುಗಳಿಗೆ ಅಂತ್ಯವೆಂಬುದೇ ಇಲ್ಲ. ಸೃಷ್ಟಿಯ ಆದಿಯಲ್ಲಿ ಭಗವಂತನಿಂದ ಸ್ಮರಿಸಿ ಮುಂದೆ ಋಷಿಪರಂಪರೆಯ ಮೂಲಕವಾಗಿ ಇಂದಿನವರೆಗೂ ಅಧ್ಯಯನ ಪರಂಪರೆ ನಡೆದು ಬರುತ್ತಿದೆ.

"ಸ್ವಾಧ್ಯಾಯೋಽಧ್ಯೇತವ್ಯಃ" ಎಂಬ ವಿಧಿವಾಕ್ಯವು, ಅಧಿಕಾರಿಯಾದ ಪ್ರತಿಯೊಬ್ಬ ವ್ಯಕ್ತಿಯೂ ತನ್ನ ಶಾಖೆಯ ವೇದವನ್ನು ಓದಲೇಬೇಕೆಂದು ವಿಧಿಸಿದೆ.

ಈ ಪರಮ ಪವಿತ್ರವಾದ ವೇದವು ಪಾರಂಪರಿಕವಾಗಿ ಗುರುಮುಖದಿಂದ ಉಪದೇಶಿಸಲ್ಪಟ್ಟಾಗಲೇ ಅಧ್ಯಯನ ಸಂಸ್ಕಾರವೆಂಬುದು ಉಂಟಾಗುತ್ತದೆ. ಈ ಅಧ್ಯಯನ ಸಂಸ್ಕಾರದಿಂದ ಸಂಸ್ಕರಿಸಲ್ಪಟ್ಟಾಗ ಮಾತ್ರ ಆ ವೇದವು ಫಲಪ್ರದವಾಗುವುದು. ಅಷ್ಟೇ ಅಲ್ಲ ಸಂರಕ್ಷಿಸಲ್ಪಡುವುದೂ ಸಹ.

ವಿಧಿಸಲ್ಪಟ್ಟ ವೇದಾಧ್ಯಯನವನ್ನು ಮಾಡದಿದ್ದರೆ ದೋಷ (ಪ್ರತ್ಯವಾಯ) ಉಂಟಾಗುವುದೆಂದು "ವಿಹಿತಸ್ಯ ಅನನುಷ್ಠಾನಾತ್ ನಿಂದಿತಸ್ಯ ಚ ಸೇವನಾತ್" ಇತ್ಯಾದಿ ವಚನಗಳು ಸ್ಪಷ್ಟವಾಗಿ ತಿಳಿಸುತ್ತಿವೆ.

ಈ ಪವಿತ್ರವಾದ ವೇದವನ್ನು ಅಧ್ಯಯನ ಮಾಡಿದರೆ ಸಾಲದು ಅದರ ಅರ್ಥವನ್ನೂ ಅವಶ್ಯವಾಗಿ ತಿಳಿಯಬೇಕು. ವೇದಾರ್ಥಜ್ಞಾನವಿಲ್ಲದವನ ಬಗ್ಗೆ ನಿಂದೆಯೂ, ಅರ್ಥವನ್ನರಿತವನ ಬಗ್ಗೆ ಪ್ರಶಂಸೆಯೂ ಶಾಸ್ತ್ರದಲ್ಲಿ ಕೇಳಿಬರುತ್ತದೆ.

ಸ್ಥಾಣುರಯಂ ಭಾರಹಾರಃ ಕಿಲಾಭೂತ್

ಅಧೀತ್ಯ ವೇದಂ ನ ವಿಜಾನಾತಿ ಯೋಽರ್ಥಮ್ ।

ಯೋಽರ್ಥಜ್ಞ ಇತ್ಸಕಲಂ ಭದ್ರಮಶ್ನುತೇ

ಸ ನಾಕಮೇತಿ ಜ್ಞಾನವಿಧೂತಪಾಪ್ಮಾ ॥ (ನಿರುಕ್ತ – ಯಾಸ್ಕಾಚಾರ್ಯರು)

ಹೇಗೆ ಒಂದು ವೃಕ್ಷವು ಎಲೆ, ಹೂ, ಕಾಯಿ, ಹಣ್ಣು, ಕೊಂಬೆ ಹೀಗೆ ಅನೇಕ ವಿಧವಾದ ಭಾರವನ್ನು ಹೊತ್ತಿದ್ದರೂ ಅದರ ಪ್ರಯೋಜನವು ಆ ಮರಕ್ಕೆ ದೊರೆಯುವುದಿಲ್ಲವೋ ಹಾಗೆ ಅರ್ಥವನ್ನು ತಿಳಿಯದೆ ಕೇವಲ ವೇದವನ್ನು ಓದಿದರೆ ಅದರ ಪ್ರಯೋಜನ ಅವನಿಗೆ ಸಿಗಲಾರದು. ಅರ್ಥವನ್ನು ತಿಳಿದವನಿಗೆ ಶ್ರೇಯಸ್ಸು (ಸುಖ) ದೊರೆಯುವುದು ಎಂದು ಅರ್ಥ ಜ್ಞಾನದ ಮಹತ್ವವನ್ನು ತಿಳಿಸಿದ್ದಾರೆ.

ವೇದವಿಭಾಗಗಳು

ವೇದಗಳು ಅಖಂಡ, ಅಪೌರುಷೇಯ ಹಾಗೂ ನಿತ್ಯ. **"ಅನಂತಾ ವೈ ವೇದಾಃ"** ಎಂದು ವೇದಗಳ (ವಾಕ್ಯಗಳ) ಸಂಖ್ಯೆ ಅಥವಾ ಪರಿಮಾಣ ಅಪರಿಮಿತ ಎಂಬುದಾಗಿ ತಿಳಿಸುತ್ತದೆ. ಅಧ್ಯಯನ ಹಾಗೂ ಅನುಷ್ಠಾನ ಸೌಕರ್ಯಕ್ಕಾಗಿ ಮಹರ್ಷಿಗಳಾದ ಬಾದರಾಯಣರು ಇದನ್ನು ಋಗ್ವೇದ, ಯಜುರ್ವೇದ, ಸಾಮವೇದ ಮತ್ತು ಅಥರ್ವವೇದ ಎಂಬುದಾಗಿ ನಾಲ್ಕು ವಿಭಾಗಗಳಾಗಿ ವಿಂಗಡಿಸಿದ್ದಾರೆ. ಹಾಗಾಗಿಯೇ ನಾಲ್ಕು ವೇದಗಳು ಎಂಬುದಾಗಿ ಪ್ರಸಿದ್ಧಿ. ಈ ಅಖಂಡವಾದ ವೇದವನ್ನು ವಿಭಾಗಮಾಡಿ ತಮ್ಮ ನಾಲ್ವರು ಶಿಷ್ಯರಿಗೆ ಕ್ರಮವಾಗಿ ಪೈಲಮಹರ್ಷಿಗಳಿಗೆ ಋಗ್ವೇದವನ್ನೂ, ವೈಶಂಪಾಯನರಿಗೆ ಯಜುರ್ವೇದವನ್ನೂ ಜೈಮಿನಿ ಮಹರ್ಷಿಗಳಿಗೆ ಸಾಮವೇದವನ್ನೂ ಸುಮಂತುಮಹರ್ಷಿಗಳಿಗೆ ಅಥರ್ವವೇದವನ್ನೂ ಉಪದೇಶಿಸಿ, ಪರಂಪರೆಯನ್ನು ಮುನ್ನಡೆಸಿಕೊಂಡು ಹೋಗುವಂತೆ ಉಪದೇಶಿಸಿದರು. ವೇದಗಳನ್ನು ವಿಭಾಗ ಮಾಡಿಕೊಟ್ಟಿದ್ದಕ್ಕಾಗಿಯೇ ಬಾದರಾಯಣರಿಗೆ (ಕೃಷ್ಣದ್ವೈಪಾಯನರಿಗೆ) ವೇದವ್ಯಾಸ ಎಂಬುದಾಗಿ ಹೆಸರು ಬಂದಿದೆ. ಈ ನಾಲ್ಕೂ ವೇದಗಳೂ ಅನೇಕ ಶಾಖೆಗಳಾಗಿ ಪರಂಪರೆ ಬೆಳೆದುಬರುತ್ತಿದ್ದು ಅವುಗಳಲ್ಲೂ ಸಹ ಕಾಲಕ್ರಮೇಣ ಹಲವು ಶಾಖೆಗಳು

ಲುಪ್ತಪ್ರಾಯವಾಗಿವೆ. ಏಕಶತಮಧ್ವರ್ಯುಶಾಖಾಃ ಯಜುರ್ವೇದವು ನೂರೊಂದುಶಾಖೆಗಳನ್ನೂ ಸಹಸ್ರವರ್ತ್ಮಾ ಸಾಮವೇದ;ಸಾಮವೇದವು ಸಾವಿರ ಶಾಖೆಗಳನ್ನೂ, ಏಕವಿಂಶತಿಧಾಬಾಹ್ವೃಚ್ಯಂ; ಋಗ್ವೇದವು ಇಪ್ಪತ್ತೊಂದು ಶಾಖೆಗಳನ್ನೂ, ನವಧಾಥರ್ವಣೋವೇದ; ಅಥರ್ವವೇದವು ಒಂಬತ್ತುಶಾಖೆಗಳನ್ನೂ ಹೊಂದಿವೆ ಎಂಬುದಾಗಿ ತಿಳಿಸಿದ್ದಾರೆ.

ಆದರೆ ಇವುಗಳಲ್ಲಿ ಬಹುಸಂಖ್ಯಾತ ಶಾಖೆಗಳು ಈಗ ಲುಪ್ತವಾಗಿವೆ. ಈಗ ಋಗ್ವೇದದಲ್ಲಿ ಶಾಕಲ, ಬಾಷ್ಕಲ ಮತ್ತು ಸಾಂಖ್ಯಾಯನ ಎಂಬ ಮೂರು ಶಾಖೆಗಳು ಮಾತ್ರ ಪ್ರಧಾನವಾಗಿ ಅಧ್ಯಯನ ಪರಂಪರೆಯಲ್ಲಿ ಉಳಿದುಕೊಂಡಿವೆ. ಯಜುರ್ವೇದವು ಪುನಃ ಕೃಷ್ಣಯಜುರ್ವೇದ ಮತ್ತು ಶುಕ್ಲಯಜುರ್ವೇದವೆಂದು ವಿಭಾಗವಾಗಿದೆ. ಕೃಷ್ಣಯಜುರ್ವೇದದಲ್ಲಿ ತೈತ್ತರೀಯ, ಮೈತ್ರಾಯಣೀಯ ಎಂಬ ಶಾಖೆಗಳು ಬಳಕೆಯಲ್ಲಿವೆ. ಶುಕ್ಲ ಯಜುರ್ವೇದದಲ್ಲಿ ಕಾಣ್ವ ಮತ್ತು ಮಾಧ್ಯಂದಿನ ಶಾಖೆಗಳು ಅಧ್ಯಯನದಲ್ಲಿ ಉಳಿದುಕೊಂಡು ಬರುತ್ತಿವೆ.

ಸಾಮವೇದದ ಸಾವಿರ ಶಾಖೆಗಳಲ್ಲಿ ರಾಣಾಯನೀಯ, ಕೌಥುಮ, ಜೈಮಿನೀಯ, ಪೈಂಗಿ ಎಂಬ ಕೆಲವೇ ಕೆಲವು ಶಾಖೆಗಳು ಉಳಿದುಕೊಂಡಿವೆ. ಅಥರ್ವವೇದದ ಶಾಖೆಗಳಲ್ಲಿ ಶೌನಕ, ಪೈಪ್ಪಲಾದ ಶಾಖೆಗಳು ಕಾಣಸಿಗುತ್ತವೆ.

ಈ ನಾಲ್ಕೂ ವೇದಗಳನ್ನೂ ಸ್ವರೂಪ ಮತ್ತು ಅರ್ಥಗಳಿಗನುಗುಣವಾಗಿ ಅಧ್ಯಯನ ಹಾಗೂ ವಿನಿಯೋಗದ ಸೌಕರ್ಯಕ್ಕಾಗಿ ಬ್ರಾಹ್ಮಣ, ಸಂಹಿತಾ, ಅರಣ್ಯಕ ಮತ್ತು ಉಪನಿಷತ್ತುಗಳೆಂದು ನಾಲ್ಕು ವಿಧವಾಗಿ ವಿಂಗಡಿಸಿದ್ದಾರೆ.

ಬ್ರಾಹ್ಮಣಗಳು: ವಿಧಾಯಕವಾಕ್ಯಗಳನ್ನು ಅಥವಾ ಸಂಹಿತೆಯ ಮಂತ್ರಗಳ ವ್ಯಾಖ್ಯಾನರೂಪವಾದ ಗದ್ಯಗ್ರಂಥವನ್ನು ಬ್ರಾಹ್ಮಣಗಳೆಂದು ತಿಳಿಸಿದ್ದಾರೆ. ಬ್ರಹ್ಮಶಬ್ದಕ್ಕೆ ವೇದ ಅಥವಾ ಮಂತ್ರ ಎಂದರ್ಥ. ಅವುಗಳನ್ನು ವಿವರಿಸುವುದರಿಂದ ಇವುಗಳಿಗೆ 'ಬ್ರಾಹ್ಮಣ' ಎಂಬ ಹೆಸರು ಬಂದಿದೆ.

ಮಂತ್ರಗಳನ್ನು ಯಜ್ಞದಲ್ಲಿ ಹೇಗೆ ವಿನಿಯೋಗಿಸಬೇಕು? ಯಾವ ಕಾಲದಲ್ಲಿ ಯಾವ ಕರ್ಮವನ್ನು ಹೇಗೆ ಮಾಡಬೇಕು? ಎಂಬುದರ ಜೊತೆಗೆ ಅವುಗಳಿಗೆ ಸಂಬಂಧಿಸಿದ ಉಪಾಖ್ಯಾನಗಳೂ ಇಲ್ಲಿ ಹೇಳಲ್ಪಟ್ಟಿವೆ.

ಋಗ್ವೇದದಲ್ಲಿ ಪ್ರಧಾನವಾಗಿ ಐತರೇಯ ಬ್ರಾಹ್ಮಣ ಮತ್ತು ಕೌಷೀತಕೀ ಬ್ರಾಹ್ಮಣಗಳು ಪ್ರಸಿದ್ಧಿಹೊಂದಿವೆ. ತೈತ್ತರೀಯ ಬ್ರಾಹ್ಮಣ ಮತ್ತು ಶತಪಥ ಬ್ರಾಹ್ಮಣಗಳು ಯಜುರ್ವೇದದ ಬ್ರಾಹ್ಮಣಗಳು, ತಾಂಡ್ಯಬ್ರಾಹ್ಮಣ, ಜೈಮಿನೀಯ ಬ್ರಾಹ್ಮಣ, ಷಡ್ವಿಂಶ ಬ್ರಾಹ್ಮಣಗಳು ಸಾಮವೇದಕ್ಕೆ ಸಂಬಂಧಿಸಿದವು. ಗೋಪಥ ಬ್ರಾಹ್ಮಣವು ಅಥರ್ವವೇದದ ಬ್ರಾಹ್ಮಣ.

ಸಂಹಿತಾ: ಯಜ್ಞಯಾಗಾದಿ ಅನುಷ್ಠಾನದಲ್ಲಿ ಉಪಯುಕ್ತವಾದ (ಅರ್ಥವನ್ನು ತಿಳಿಸಿಕೊಡುವ) ಮಂತ್ರಭಾಗಗಳನ್ನು ಸಂಹಿತಾ ಎಂದು ಕರೆದಿದ್ದಾರೆ. "ಸಂಹಿತಾ" ಎಂದರೆ ಒಟ್ಟುಗೂಡಿಸಿರುವ ಭಾಗ. ಅಂದರೆ ಪದಪಾಠವನ್ನು ಸ್ವರ, ಸಂಧಿ ಇತ್ಯಾದಿ ನಿಯಮಾನುಸಾರ ಕೂಡಿಸಿ ಒಟ್ಟಾಗಿ ದಂಡಾಕಾರವಾಗಿ ಪಾರಾಯಣ ಮಾಡುವಂತೆ ಅಳವಡಿಸಿರುವ ವೇದಮಂತ್ರಗಳು. ಐತರೇಯ ಸಂಹಿತಾ, ತೈತ್ತಿರೀಯ ಸಂಹಿತಾ, ವಾಜಸನೇಯ ಸಂಹಿತಾ, ಕೌಥುಮೀಯ ಸಂಹಿತಾ, ಶೌನಕೀಯ ಸಂಹಿತಾ ಇತ್ಯಾದಿಗಳು ಪ್ರಸಿದ್ಧ ಸಂಹಿತಾಗ್ರಂಥಗಳು. ಒಟ್ಟಿನಲ್ಲಿ ಮಂತ್ರಗಳ ಸಮೂಹದಿಂದ ಕೂಡಿದ ಭಾಗವೇ ಸಂಹಿತೆ. ಋಗ್ವೇದ ಸಂಹಿತೆ ಮತ್ತು ಶುಕ್ಲಯಜುರ್ವೇದ ಸಂಹಿತೆ ಮೊದಲಾದವುಗಳಲ್ಲಿ ಮಂತ್ರ ಭಾಗವು ಮಾತ್ರ ಇವೆ. ಕೃಷ್ಣಯಜುರ್ವೇದದಲ್ಲಿ ಮಾತ್ರ ಸಂಹಿತೆಯಲ್ಲಿ ಬ್ರಾಹ್ಮಣ ಭಾಗವೂ ಬ್ರಾಹ್ಮಣದಲ್ಲಿ ಮಂತ್ರಭಾಗವೂ ಸೇರಿಕೊಂಡಿದೆ. ತೈತ್ತರೀಯ ಸಂಹಿತೆಯ ನಾಲ್ಕನೆಯ ಕಾಂಡವು ಚಯನ (ಕರ್ಮ) ದ ಮಂತ್ರ ಭಾಗದಿಂದ ಕೂಡಿದೆ. ಐದನೇ ಕಾಂಡವು ಚಯನ ಬ್ರಾಹ್ಮಣ ಭಾಗವನ್ನೊಳಗೊಂಡಿದೆ. ತೈತ್ತರೀಯ ಬ್ರಾಹ್ಮಣದ ಮೂರನೇ ಪ್ರಶ್ನವು ಇಷ್ಟಿಗೆ ಸಂಬಂಧಿಸಿದ ಹೌತ್ರ ಮಂತ್ರಗಳಿಂದ ಕೂಡಿದೆ. ಅದರ ಬ್ರಾಹ್ಮಣ ಭಾಗವು ತೈತ್ತರೀಯ ಸಂಹಿತೆಯ ಎರಡನೇ ಕಾಂಡದಲ್ಲಿ ಪಠಿತವಾಗಿದೆ. ಹೀಗೆ ತೈತ್ತರೀಯ ಶಾಖೆಯಲ್ಲಿ ಸಂಹಿತೆಯಲ್ಲಿ ಬ್ರಾಹ್ಮಣವೂ ಬ್ರಾಹ್ಮಣಗಳಲ್ಲಿ ಮಂತ್ರಭಾಗವೂ ಸೇರಿರುವುದರಿಂದ ಸಾಮಾನ್ಯವಾಗಿ ಸಂಹಿತಾ ಎಂಬ ಶಬ್ದ **'ಮಂತ್ರಗಳ ಸಮೂಹ'** ಎಂಬ ಅರ್ಥದಲ್ಲಿ ಪ್ರಯೋಗಿಸಲ್ಪಟ್ಟಿದೆ.

ಉಪನಿಷತ್ತುಗಳು: ಜೀವ, ಬ್ರಹ್ಮ, ಜಗತ್ತು ಮುಂತಾದ ರಹಸ್ಯಗಳನ್ನೂ ಮೋಕ್ಷಸಾಧನೀಭೂತವಾದ ತತ್ವ ಜ್ಞಾನವನ್ನು ತಿಳಿಸುವ ವೇದ ಭಾಗವನ್ನು "ಉಪನಿಷತ್ತು"ಗಳೆಂದೂ ವಿಂಗಡಿಸಿದ್ದಾರೆ. ಉಪನಿಷತ್ತುಗಳು ವೇದ ವಿಭಾಗಗಳಲ್ಲಿ ಕೊನೆಯಲ್ಲಿ ಇರುವುದರಿಂದಲೂ, ಪುರುಷಾರ್ಥಗಳಲ್ಲಿ ಕೊನೆಯದಾದ ಮೋಕ್ಷರೂಪ ಪರಮ ಪುರುಷಾರ್ಥವನ್ನು ಉಪದೇಶಿಸುವುದರಿಂದಲೂ ಇವುಗಳಿಗೆ "ವೇದಾಂತ" ವೆಂಬ ಹೆಸರು ಅನ್ವರ್ಥವಾಗಿ ಬಂದಿದೆ.

ಆರಣ್ಯಕಗಳು: ಆರಣ್ಯಕಗಳು ಕರ್ಮ ಮತ್ತು ಜ್ಞಾನಕಾಂಡಗಳ ಮಧ್ಯದಲ್ಲಿ ಉಪಾಸನಾ ಭಾಗವೆಂಬುದಾಗಿಯೂ ಅಭಿಪ್ರಾಯ ತೋರಿಬರುತ್ತಿದೆ. "ಅರಣ್ಯೇಽಧೀಯೀತ" ಎಂಬ ವೇದವಾಕ್ಯದಂತೆ ಅರಣ್ಯದಲ್ಲಿ ಅಧ್ಯಯನ ಮಾಡಬೇಕೆಂಬ ನಿಯಮಕ್ಕೆ ಒಳಗಾದ ವೇದ ಭಾಗಗಳು ಕರ್ಮಾನುಷ್ಠಾನವನ್ನು ಹೇಳುವ ಸಂಹಿತೆ, ಬ್ರಾಹ್ಮಣಗಳಿಗೂ ಮತ್ತು ಆತ್ಮಜ್ಞಾನವನ್ನು ಉಪದೇಶಿಸುವ ಉಪನಿಷತ್ತುಗಳಿಗೂ ಸೇತುವೆಯಂತಿರುವ ಗದ್ಯರೂಪವಾದ ವೇದಭಾಗವೇ ಆರಣ್ಯಕಗಳು. ಇಲ್ಲಿ ಕರ್ಮಕಾಂಡಕ್ಕೆ ಸಂಬಂಧಿಸಿದ ಭಾಗಗಳು, ಕೆಲವೆಡೆ ಉಪಾಸನಾ ವಿಧಿಗೆ ಸಂಬಂಧಿಸಿದ ಮಂತ್ರಗಳು ಹಾಗೂ ಜ್ಞಾನಕಾಂಡ

ಪ್ರಕಾಶಕವಾದ ಮಂತ್ರಗಳೂ ತೋರಿಬರುತ್ತವೆ. ಯಜ್ಞದಲ್ಲಿ ಅನುಷ್ಠಾನಮಾಡುವ ಪ್ರವರ್ಗ್ಯ ಎಂಬ ಅಂಗಾನುಷ್ಠಾನದ ವಿಧಾನವು ಹೇಳಲ್ಪಟ್ಟಿದೆ. ಹಾಗೆಯೇ "ಪ್ರತಿಷ್ಠೇತ್ಯುಪಾಸೀತ" ಮೊದಲಾಗಿ ಉಪಾಸನಾಕಾಂಡವೂ ತಿಳಿಸಲ್ಪಟ್ಟಿದೆ. ಅದರಂತೆ "ಅಣೋರಣೀಯಾನ್ ಮಹತೋ ಮಹೀಯಾನ್ ಆತ್ಮಾ ಗುಹಾಯಾಂ ನಿಹಿತೋಽಸ್ಯ ಜಂತೋಃ" ಎಂಬುದಾಗಿ ಪರಮಾತ್ಮ ವಿಚಾರವೂ ಬೋಧಿಸಲ್ಪಟ್ಟಿದೆ. ಯಜ್ಞಗಳಿಗೆ ತಾತ್ವಿಕವಾದ ಅರ್ಥವನ್ನು ಕೊಟ್ಟು ಜ್ಞಾನದೆಡೆಗೆ ನಮ್ಮನ್ನು ಇವು ಒಯ್ಯುತ್ತವೆ. ನಿವೃತ್ತಿ ಧರ್ಮದಲ್ಲಿರುವ ನೈಷ್ಠಿಕರು, ಸನ್ಯಾಸಿಗಳು ಅಧ್ಯಯನ ಮಾಡಲು ಯೋಗ್ಯವಾದ ಅತಿಪವಿತ್ರವೂ ರಹಸ್ಯವೂ ಆದ ವಿದ್ಯೆಯ ಗ್ರಂಥಗಳಾಗಿದ್ದರಿಂದಲೂ ಇವುಗಳಿಗೆ "ಆರಣ್ಯಕ" ಎಂಬ ಹೆಸರು ಪ್ರಸಿದ್ಧಿ ಪಡೆದಿದೆ. ಆರಣ್ಯಕದ ಕೊನೆಯ ಭಾಗವೇ ಉಪನಿಷತ್ತಾಗಿರುವುದರಿಂದ "ಆರಣ್ಯಕೋಪನಿಷತ್" ಎಂದು ಒಂದಾಗಿ ಸೇರಿಸಿ ಹೇಳುವ ಕ್ರಮವೂ ಕೆಲವೆಡೆ ಇದೆ.

ಹೀಗೆ ವೇದವಾಕ್ಯಗಳ ಅರ್ಥತಾತ್ಪರ್ಯಕ್ಕನುಗುಣವಾಗಿ ಪ್ರಧಾನವಾಗಿ ಕರ್ಮಕಾಂಡ ಮತ್ತು ಜ್ಞಾನಕಾಂಡ ಎಂಬುದಾಗಿ ಎರಡು ಬಗೆಯಾಗಿ ವಿಂಗಡಿಸಿದ್ದಾರೆ.

ಕೃಷ್ಣಯಜುರ್ವೇದದ ಕಲ್ಪಸೂತ್ರಕಾರರಲ್ಲೊಬ್ಬರಾದ ಆಪಸ್ತಂಬಾಚಾರ್ಯರು ಶ್ರೌತಪರಿಭಾಷಾ ಸೂತ್ರದಲ್ಲಿ ಸಮಗ್ರವೇದವನ್ನು ಎರಡೇ ವಿಭಾಗವಾಗಿ **"ಮಂತ್ರಬ್ರಾಹ್ಮಣಯೋರ್ವೇದನಾಮಧೇಯಮ್"** ಎಂದು ಸೂತ್ರಿಸಿದ್ದಾರೆ. ಅಂದರೆ ಈ ವಿಭಾಗದಲ್ಲಿ ಮಂತ್ರ (ಕರ್ಮಾನುಷ್ಠಾನದಲ್ಲಿ ವಿನಿಯುಕ್ತವಾದ ಭಾಗ)ಗಳನ್ನು ಹೊರತುಪಡಿಸಿ ಉಳಿದೆಲ್ಲವನ್ನೂ ಬ್ರಾಹ್ಮಣ ಭಾಗದಲ್ಲಿ ಸೇರಿಸಿದ್ದಾರೆ. ಉಪನಿಷತ್ತು ಮತ್ತು ಆರಣ್ಯಕಗಳು ಬ್ರಾಹ್ಮಣದಲ್ಲೇ ಸೇರುತ್ತವೆ.

ಈ ವೇದಗಳ ಪರಮ ಪ್ರಯೋಜನವೇ ಅರ್ಥಜ್ಞಾನದ್ವಾರಾ ವೇದವಿಹಿತ ಕರ್ಮಾನುಷ್ಠಾನ, ಆ ಮೂಲಕ ಫಲಸಿದ್ಧಿ. ಇದನ್ನೇ ಆಚಾರ್ಯ ಭಗವತ್ಪಾದ ಶಂಕರರು – **"ಅಗ್ನಿಹೋತ್ರಫಲಂ ವೇದಾಃ"** ಎಂಬುದಾಗಿ ಅಗ್ನಿಹೋತ್ರಾದಿ ಕರ್ಮಾನುಷ್ಠಾನವೇ ವೇದದ ಪ್ರಯೋಜನ ಅಂದರೆ, ವೇದ ವಿಹಿತವಾದ ನಿತ್ಯ-ನೈಮಿತ್ತಿಕ ಮತ್ತು ಕಾಮ್ಯವೇ ಮೊದಲಾದ ಕರ್ಮಾನುಷ್ಠಾನದ ಮೂಲಕವಾಗಿ ಸ್ವರ್ಗಾದಿ ಸುಖವನ್ನು ನಾವು ಹೊಂದಬೇಕು ಎಂದು ತಿಳಿಸಿದ್ದಾರೆ. ಅವುಗಳಲ್ಲಿ ನಿತ್ಯ ಮತ್ತು ನೈಮಿತ್ತಿಕ ಕರ್ಮಗಳಿಗೆ ಪಾಪಕ್ಷಯವೇ ಫಲ. ಕಾಮ್ಯಕರ್ಮಗಳಿಗೆ ಆಯಾ ವಿಧಿವಾಕ್ಯಗಳಲ್ಲಿ ತಿಳಿಸಿದ ಕಾಮನೆಗಳೇ ಫಲ. ಜೊತೆಗೆ ಲೋಕಕಲ್ಯಾಣವೂ ಉಂಟಾಗುವುದೆಂದು ಭಗವದ್ಗೀತೆಯು ತಿಳಿಸುತ್ತದೆ:

ಅನ್ನಾದ್ಭವಂತಿ ಭೂತಾನಿ ಪರ್ಜನ್ಯಾದನ್ನಸಂಭವಃ ।
ಯಜ್ಞಾದ್ಭವತಿ ಪರ್ಜನ್ಯಃ ಯಜ್ಞಃ ಕರ್ಮಸಮುದ್ಭವಃ ।
ಕರ್ಮಬ್ರಹ್ಮೋದ್ಭವಂ ವಿದ್ಧಿ ಬ್ರಹ್ಮಾಕ್ಷರಸಮುದ್ಭವಂ ।
ತಸ್ಮಾತ್ಸರ್ವಗತಂ ಬ್ರಹ್ಮ ನಿತ್ಯಂ ಯಜ್ಞೇ ಪ್ರತಿಷ್ಠಿತಮ್ ॥ (ಭ.ಗೀ.ಅ–, ಶ್ಲೋ –)

ಲೋಕದಲ್ಲಿ ಸುಭಿಕ್ಷೆ ಯಜ್ಞದಿಂದಲೇ ಸಾಧ್ಯ. ಈ ಯಜ್ಞಕರ್ಮ ವೇದದಿಂದ ಸಿದ್ಧಿಯಾಗುತ್ತದೆ. ಅಂದರೆ ಯಜ್ಞ ಸ್ವರೂಪ ಜ್ಞಾನ ಸಿದ್ಧಿ ವೇದದಿಂದಲೇ. ವೇದವೇ ಸಾಕ್ಷಾತ್ ಪರಬ್ರಹ್ಮ ಸ್ವರೂಪದ್ದಾಗಿದೆ. ಇದನ್ನೇ ಕಠೋಪನಿಷತ್ತಿನಲ್ಲಿ ಯಮನು ನಚಿಕೇತನಿಗೆ ಆತ್ಮ ವಿದ್ಯೆಯನ್ನು ಉಪದೇಶಿಸುವ ಸಂದರ್ಭದಲ್ಲಿ ಹೀಗೆ ತಿಳಿಸಿದ್ದಾನೆ:

ಏತದೇವಾಕ್ಷರಂ ಬ್ರಹ್ಮ ಏತದೇವಾಕ್ಷರಂ ಪರಂ।

ಏತದಾಲಂಬನಂ ಜ್ಞಾತ್ವಾ ಬ್ರಹ್ಮಲೋಕೇ ಮಹೀಯತೇ ॥ ಪ್ರಣವರೂಪವಾದ ವೇದದ ಅಕ್ಷರವನ್ನೇ ಪರಮಾತ್ಮ ಎಂಬುದಾಗಿ ತಿಳಿಸಿದೆ.

ಹಾಗೆಯೇ – ಯಜ್ಞ – ಯಾಗಾದಿಗಳಲ್ಲಿ ಸಂಬಂಧ ಹೊಂದಿದ ಪ್ರತಿಯೊಂದು ಮಂತ್ರಗಳಿಂದಲೂ ಪರಮಾತ್ಮನನ್ನುದ್ದೇಶಿಸಿ ಹೋಮ ಮಾಡುವುದರಿಂದಲೂ ಶ್ರೇಯಸ್ಸು (ಪುಣ್ಯ) ಲಭ್ಯವಾಗುವುದೆಂದು ಬೋಧಾಯನಾದಿ ಆಚಾರ್ಯರು ತಿಳಿಸಿದ್ದಾರೆ. ಈ ಮೂಲಕವಾಗಿಯೇ "ಸಂಹಿತಾ ಹೋಮ" ದ ಪ್ರಕ್ರಿಯೆ ಆಚಾರ್ಯರಿಂದ ಬೋಧಿಸಲ್ಪಟ್ಟಿದೆ.

ಹೀಗೆ ಈ ಪರಮಾತ್ಮ ಸ್ವರೂಪವಾದ ವೇದದ ತಾತ್ಪರ್ಯಾರ್ಥವನ್ನು ತಿಳಿದು ಕರ್ಮ ಬ್ರಹ್ಮರೂಪವಾದ ಯಜ್ಞಾನುಷ್ಠಾನಮಾಡುವುದರಿಂದ ಪಾಪಗಳೆಲ್ಲ ಪರಿಹಾರವಾಗಿ ಚಿತ್ತ ಶುದ್ಧಿಯುಂಟಾಗಿ ತನ್ಮೂಲಕವಾಗಿ ನಿರತಿಶಯ ಸುಖವನ್ನು ಹೊಂದಬೇಕೆಂಬುದು ವೇದಮಾತೆಯ ದಿವ್ಯ ಸಂದೇಶ.

◆

ನಿತ್ಯ ಜೀವನದಲ್ಲಿ ವೇದಾಂತ

– ಡಾ। ಎಚ್.ಎಲ್. ಚಂದ್ರಶೇಖರ, ಮೈಸೂರು
ಅಧ್ಯಕ್ಷರು, ತತ್ವಶಾಸ್ತ್ರ ಅಧ್ಯಯನ ವಿಭಾಗ, ಮಾನಸಗಂಗೋತ್ರಿ

ಶ್ರೀ ಶಂಕರ ಭಗವತ್ಪಾದರು "ಸಾಧನ ಪಂಚಕಮ್" (ಉಪದೇಶಪಂಚರತ್ನಮ್) ಎಂಬ ಪ್ರಕರಣವನ್ನು ರಚಿಸಿದ್ದಾರೆ. ಇದರಲ್ಲಿ ಭಗವತ್ಪಾದರು ಮನುಷ್ಯನ ದೈನಂದಿನ ಕರ್ತವ್ಯಗಳನ್ನು ಬಹು ಮನೋಜ್ಞವಾಗಿ ವಿವರಿಸುತ್ತಾರೆ. ವೇದಾಂತವು ನಿತ್ಯ ಜೀವನದಲ್ಲಿ ಹೇಗೆ ಅನುಷ್ಠೇಯ ಎಂಬುದನ್ನು ಶ್ರೀ ಶಂಕರರು ನಮಗೆ ಈ ಸ್ತೋತ್ರದಲ್ಲಿ ಮನಗಾಣಿಸುತ್ತಾರೆ. ಅದರ ಮೊದಲನೆಯ ಶ್ಲೋಕ ಹೀಗಿದೆ:

ವೇದೋ ನಿತ್ಯಮಧೀಯತಾಂ ತದುದಿತಂ ಕರ್ಮಸ್ವನುಷ್ಠೀಯತಾಂ
ತೇನೇಶಸ್ಯ ವಿಧೀಯತಾಮಪಚಿತಿಃ ಕಾಮ್ಯೇ ಮತಿಸ್ತ್ಯಜ್ಯತಾಮ್ ।
ಪಾಪೌಘಃ ಪರಿಧೂಯತಾಂ ಭವಸುಖೇ ದೋಷೋಽನು ಸಂಧೀಯತಾಂ
ಆತ್ಮೇಚ್ಛಾ ವ್ಯವಸೀಯತಾಂ, ನಿಜಗೃಹಾತ್ತೂರ್ಣಂ ವಿನಿರ್ಗಮ್ಯತಾಮ್ ॥

ಧರ್ಮಾಧರ್ಮಗಳನ್ನು ಕುರಿತಂತೆ ವೇದದ ಹೊರತಾಗಿ ಪ್ರಪಂಚದಲ್ಲಿ ಇನ್ನಾವ ಪ್ರಮಾಣವೂ ನಮಗೆ ಮಾಹಿತಿಯನ್ನು ನೀಡಲಾರದು. ಆದ್ದರಿಂದ ನಾವು ಪ್ರತಿನಿತ್ಯವೂ ವೇದವನ್ನು ಅಧ್ಯಯನ ಮಾಡಬೇಕೆಂಬುದು ಶ್ರೀಭಗವತ್ಪಾದರ ಇಂಗಿತ. ಇದನ್ನೇ ಅವರು **"ವೇದೋ ನಿತ್ಯಮಧೀಯತಾಂ"** ಎಂಬ ಮೊದಲ ಆದೇಶದಲ್ಲಿ ಸ್ಪಷ್ಟಪಡಿಸುತ್ತಾರೆ. ಅರ್ಥಗ್ರಹಣವಿಲ್ಲದೆ ಬರೀ ಬಾಯಿಪಾಠವಷ್ಟೇ ವೇದಾಧ್ಯಯನವಲ್ಲ. ಅಧ್ಯಯನದಲ್ಲಿ ನಾವು ವೇದವನ್ನು ಬಾಯಿಪಾಠ ಮಾಡುವುದಷ್ಟೇ ಅಲ್ಲ, ಅದನ್ನು ಅರ್ಥಸಹಿತವಾಗಿ ಮಾಡುತ್ತೇವೆ. ವೇದದ ಬಾಯಿಕಲಿಕೆಯಿಂದ ನಮಗೆ ಸ್ವಲ್ಪ ಮಟ್ಟಿಗೆ ಪ್ರಯೋಜನವಾದರೂ, ವೇದವನ್ನು ಅರ್ಥಸಹಿತವಾಗಿ ಕಲಿಯುವುದರಿಂದ ಆಗುವ ಪ್ರಯೋಜನ ಅಧಿಕ.

ನಮ್ಮ ಜೀವನದಲ್ಲಿ ನಾವು ಅಗತ್ಯವಾಗಿ ಮಾಡಲೇಬೇಕಾದ ಕೆಲವು ಕರ್ಮಗಳುಂಟು. ಇವುಗಳಲ್ಲಿ ಸಾಮಾನ್ಯ ಮತ್ತು ವಿಶೇಷ ಧರ್ಮಗಳೆಂದು ಎರಡು ರೀತಿ. ಹಾಗೆಯೇ ಅವಶ್ಯವಾಗಿ ಮಾಡಬಾರದ ಕರ್ಮಗಳೂ ಉಂಟು (ಹೊಗೆಸೊಪ್ಪು ಸೇವನೆ, ಮದ್ಯಪಾನ, ಮುಂತಾದುವು). ಇವುಗಳನ್ನು ಕ್ರಮವಾಗಿ ಧರ್ಮ ಮತ್ತು ಅಧರ್ಮಗಳೆಂದು (ವಿಧಿ ಮತ್ತು ನಿಷೇಧಗಳೆಂದು) ಕರೆಯುತ್ತಾರೆ. ಆದರೆ, ನಾವು ಜೀವನದಲ್ಲಿ ಕಟ್ಟುನಿಟ್ಟಾಗಿ ಆಚರಿಸಬೇಕಾದ ಧರ್ಮಗಳನ್ನು ಮತ್ತು ಆಚರಿಸಲೇಬಾರದ ಅಧರ್ಮಗಳನ್ನು

ತಿಳಿಯಬೇಕು. ಯಾವುದೇ ವಿಷಯವನ್ನು ಅರಿಯಲು ಒಂದು ಸಾಧನವಿರಬೇಕು. ಈ ಸಾಧನವನ್ನು ಪ್ರಮಾಣವೆಂದು ಕರೆಯುತ್ತಾರೆ. ವಿವಿಧ ವಸ್ತುಗಳನ್ನು ಅರಿಯಲು ವಿವಿಧ ರೀತಿಯ ಪ್ರಮಾಣಗಳುಂಟು. ಎಲ್ಲ ವಸ್ತುಗಳನ್ನೂ ಒಂದೇ ಪ್ರಮಾಣದಿಂದ ಅರಿಯಲು ಸಾಧ್ಯವಿಲ್ಲ. ವಸ್ತುವೈವಿಧ್ಯವು ಪ್ರಮಾಣ ವೈವಿಧ್ಯದ ಅಗತ್ಯವನ್ನು ಸೂಚಿಸುತ್ತದೆ. ಪ್ರಮಾಣವೊಂದು ವಸ್ತುವಿನ ಸ್ವರೂಪದಿಂದ ನಿರ್ಧಾರಿತ. ಅಂತೆಯೇ ಕೆಲವು ವಸ್ತುಗಳನ್ನು ಅನುಮಾನ, ಉಪಮಾನ, ಅರ್ಥಾಪತ್ತಿ ಅಥವಾ ಅನುಪಲಬ್ಧಿ ಮೂಲಕ ತಿಳಿಯುತ್ತೇವೆ. ಆದರೆ, ಪ್ರಸ್ತುತ ಧರ್ಮಾಧರ್ಮಗಳನ್ನು ಯಾವ ಪ್ರಮಾಣದಿಂದ ತಿಳಿಯಬೇಕೆಂದು ಪ್ರಶ್ನೆ. ಅವುಗಳನ್ನು ಇಲ್ಲಿ ಉಲ್ಲೇಖಿಸಿರುವ ಐದು ಪ್ರಮಾಣಗಳಲ್ಲಿ ಯಾವುದರಿಂದಲೂ ತಿಳಿಯಲು ಸಾಧ್ಯವಿಲ್ಲ. ಅವುಗಳನ್ನು ತಿಳಿಯಲು ಸಾಧ್ಯವಾಗಿರುವ ಏಕೈಕ ಪ್ರಮಾಣವೆಂದರೆ ವೇದ, ವೇದದ ವ್ಯಾಖ್ಯೆ ಹೀಗಿದೆ:

ಪ್ರತ್ಯಕ್ಷೇಣಾನುಮಿತ್ಯಾ ವಾ ಯಸ್ತೂಪಾಯೋ ನ ಬುಧ್ಯತೇ।
ಏನಂ ವಿದಂತಿ ವೇದೇನ ತಸ್ಮಾದ್ವೇದಸ್ಯ ವೇದತಾ॥

"ಯಾವ ಮುಕ್ತಿಯ ಉಪಾಯವನ್ನು ಪ್ರತ್ಯಕ್ಷ ಅಥವಾ ಅನುಮಾನದಿಂದ ತಿಳಿಯಲು ಅಸಾಧ್ಯವೋ ಅದನ್ನು ಜನರು ವೇದದ ಮೂಲಕ ತಿಳಿಯುತ್ತಾರೆ. ಆದ್ದರಿಂದಲೇ ಅದನ್ನು ವೇದ ಎನ್ನುವುದು.

(೨) ವೇದಾಧ್ಯಯನದ ಅಗತ್ಯವನ್ನು ಒತ್ತಿ ನುಡಿದ ನಂತರ ಆಚಾರ್ಯರು ತಮ್ಮ ಎರಡನೇ ಉಪದೇಶವನ್ನು ಮುಂದಿಡುತ್ತಾರೆ. **"ತದುದಿತಂ ಕರ್ಮ ಸ್ವನುಷ್ಠೀಯತಾಂ"** ಎಂಬುದು ಎರಡನೆಯ ಆದೇಶ. ನಮ್ಮ ಕರ್ತವ್ಯವು ವೇದಾಧ್ಯಯನಕ್ಕಷ್ಟೇ ಸೀಮಿತವಾಗದೇ, ಶ್ರುತಿಯು ಪ್ರತಿಪಾದಿಸುವ ಕರ್ಮಗಳನ್ನೂ ಆಚರಿಸಬೇಕು. ನಮ್ಮ ಅಧ್ಯಯನವನ್ನು ಕಾರ್ಯರೂಪಕ್ಕೆ ತರಬೇಕು. ಕೆಲವರು ವೇದಾಂತವನ್ನು ಅರ್ಥಮಾಡಿಕೊಳ್ಳದೆ, ಕರ್ಮತ್ಯಾಗವೇ ವೇದಾಂತದ ತಾತ್ಪರ್ಯವೆಂದು ತಪ್ಪಾಗಿ ಭಾವಿಸುತ್ತಾರೆ. ವೇದಾಂತವನ್ನು ನಾವೆಷ್ಟೇ ಅಧ್ಯಯನ ಮಾಡಿದ್ದರೂ ಸ್ವಧರ್ಮಾಚರಣೆಯ ಮೂಲಕ ಚಿತ್ತಶುದ್ಧಿಯನ್ನು ಸಾಧಿಸದಿದ್ದರೆ, ನಮ್ಮ ಅಧ್ಯಯನವು ವ್ಯರ್ಥವಾಗುತ್ತದೆ. ಭೂಮಿಯ ಮೇಲೆ ಧಾನ್ಯ ಬೆಳೆಯಬೇಕಿದ್ದರೆ, ಮೊದಲು ನಾವು ಕಳೆಗಳನ್ನು ಕೀಳಬೇಕು. ಆನಂತರ ಭೂಮಿಗೆ ಸರಿಯಾದ ಗೊಬ್ಬರ ಹಾಕಿ ಬೀಜವನ್ನು ಬಿತ್ತಬೇಕು. ಕಳೆಗಳನ್ನೇ ಕೀಳದೆ, ನಾವು ಉಳಿದ ಕೆಲಸಗಳನ್ನು ಮಾಡಿದರೆ – ನಾವು ಆ ಕೆಲಸಗಳನ್ನು ಎಷ್ಟೇ ಸಮರ್ಪಕವಾಗಿ ಮಾಡಿದರೂ – ಅವುಗಳಿಂದ ಫಲವಿಲ್ಲ. ಹಾಗೆಯೇ ನಮಗೆ ವೇದವು ವಿಧಿಸಿರುವ ಕರ್ಮಗಳನ್ನು ನಿಷ್ಠೆಯಿಂದ ಮಾಡಿ, ತನ್ಮೂಲಕ ನಮ್ಮ ಮನಸ್ಸನ್ನು ಕಶ್ಮಲಗಳಿಂದ ಶುದ್ಧಗೊಳಿಸದೇ,

ನಾವೆಷ್ಟೇ ವೇದಾಂತ ಶ್ರವಣವನ್ನು ಮಾಡಿದರೂ ಅದು ವ್ಯರ್ಥ. **"ಕಷಾಯೇ ಕರ್ಮಭಿಃ ಪಕ್ವೇ ತತೋ ಜ್ಞಾನಂ ಪ್ರವರ್ತತೇ"** – ಕರ್ಮಗಳಿಂದ ಕೊಳೆಯು ನಾಶವಾದ ಮೇಲೆಯೇ ಜ್ಞಾನೋದಯವಾಗುವುದು ಎಂಬುದು ಉಕ್ತಿ.

(೩) **"ತೇನೇಶಸ್ಯ ವಿಧೀಯತಾಮಪಚಿತಿಃ"** – ಎಂಬುದು ಭಗವತ್ಪಾದರ ಮೂರನೆಯ ಆದೇಶ. ಭಗವಾನ್ ಶಂಕರರು ಕರ್ಮಾಚರಣೆಯ ವಿಧಾನವನ್ನು ಮತ್ತು ಅದರ ಹಿನ್ನೆಲೆಯಲ್ಲಿ ನಮಗಿರಬೇಕಾದ ಮನೋಭಾವವನ್ನು ನೆನಪಿಸುತ್ತಾರೆ. ಅವರ ಪ್ರಕಾರ ನಾವು ಕರ್ಮಗಳನ್ನು ಯಾಂತ್ರಿಕವಾಗಿ ಮಾಡುವುದಲ್ಲ. ಅವುಗಳನ್ನು ನಾವು ಭಗವಂತನ ಪೂಜೆಯೆಂದು ಮಾಡಬೇಕು. ಫಲವನ್ನು ಆತನಿಗೆ ಸಮರ್ಪಿಸಿ, ಕರ್ಮಗಳನ್ನು ನಾವು ನಿಸ್ಪೃಹವಾಗಿ ಮಾಡಬೇಕು. ವೇದಗಳ ಮೂಲಕ ಭಗವಂತನು ನಮಗೆ ವಿಧಿಸಿರುವ ಕರ್ಮಗಳನ್ನು ಆಚರಿಸುವುದೇ ಭಗವಂತನ ಪೂಜೆ. ಸ್ವಧರ್ಮಾಚರಣೆಯು ಬೇರೆಯಲ್ಲ, ಭಗವದರ್ಚನೆಯು ಬೇರೆಯಲ್ಲ. ತನ್ನ ಕರ್ಮವನ್ನು ಈಶ್ವರನ ಪೂಜೆಯೆಂದು ಮಾಡುವವನು ಸಿದ್ಧಿಯನ್ನು ಹೊಂದುವನೆಂದು ಗೀತೆಯು **"ಸ್ವಕರ್ಮಣಾ ತಮಭ್ಯರ್ಚ್ಯ ಸಿದ್ಧಿಂ ವಿಂದತಿ ಮಾನವಃ"** ಹೇಳುತ್ತದೆ.

(೪) ಆಚಾರ್ಯರ ಪ್ರಕಾರ ಭಗವತ್ಪೂಜೆಯೆಂದು ಪರಿಗಣಿಸಲು ಯೋಗ್ಯವಾದ ಕರ್ಮಗಳೆಂದರೆ– ನಿತ್ಯಮತ್ತು ನೈಮಿತ್ತಿಕ ಕರ್ಮಗಳು ಮಾತ್ರ. ಕಾಮ್ಯಕರ್ಮಗಳು ದೇವರ ಪೂಜೆಯಲ್ಲ. ಅಲ್ಲದೆ, ಅವುಗಳಲ್ಲಿ ಎರಡು ತೊಂದರೆಗಳುಂಟು. ಒಂದು, ಕಾಮ್ಯಕರ್ಮಗಳಿಂದ ಫಲ ಬರಬೇಕಿದ್ದರೆ, ಅವುಗಳನ್ನು ನಾವು ಕಟ್ಟುನಿಟ್ಟಾಗಿ ಆಚರಿಸಬೇಕು. ಅವುಗಳ ಆಚರಣೆಯಲ್ಲಿ ಲೋಪವಿರಬಾರದು. ಹಾಗೇನಾದರೂ ಆದರೆ ಅದು ವ್ಯರ್ಥವಷ್ಟೇ ಅಲ್ಲ, ಅದರಿಂದ ಕರ್ತೃವಿಗೆ ಅಪಾಯವುಂಟು. ಆದರೆ ಈ ಕಾಲದಲ್ಲಿ ಅಂತಹ ಕರ್ಮಗಳನ್ನು ಅಷ್ಟು ಕಟ್ಟುನಿಟ್ಟಾಗಿ ಆಚರಿಸುವುದು ಬಲು ಕಷ್ಟ. ಎರಡು, ಒಂದು ಪಕ್ಷ ಅವುಗಳನ್ನು ಕಟ್ಟುನಿಟ್ಟಾಗಿ ಆಚರಿಸಿದರೂ, ಅವುಗಳ ಫಲವು ಅಶಾಶ್ವತ. ಆದ್ದರಿಂದಲೇ ಆಚಾರ್ಯರು ಸಾರುವುದು **"ಕಾಮ್ಯೇ ಮತಿಸ್ತ್ಯಜ್ಯತಾಂ"** ಎಂದರೆ "ಕಾಮ್ಯಕರ್ಮಗಳನ್ನು ತ್ಯಜಿಸು" ಎಂದು.

(೫) **"ಪಾಪೌಘಃ ಪರಿಧೂಯತಾಂ"** – **"ಪಾಪಗಳನ್ನು ಧೂಳೀಪಟ ಮಾಡಿ"** ಎಂಬುದು ಆಚಾರ್ಯರ ಮುಂದಿನ ಉಪದೇಶ. ಕಾಮ್ಯಕರ್ಮಗಳನ್ನು ಬಿಟ್ಟು ನಿತ್ಯನೈಮಿತ್ತಿಕ ಕರ್ಮಗಳನ್ನು ನಾವು ಭಗವಂತನ ಸೇವೆಯೆಂದು ಮಾಡಿದಲ್ಲಿ ಪಾಪಗಳು ನಮ್ಮಿಂದ ದೂರಾಗುತ್ತವೆಂಬುದು ಇದರ ಇಂಗಿತ. ಈಶ್ವರ ಸೇವೆಯೆಂದು ನಾವು ನಮ್ಮ ಕರ್ತವ್ಯಗಳನ್ನು ಆಚರಿಸಿದರೆ, ನಮ್ಮ ದುರಿತಗಳು ನಾಶವಾಗುತ್ತವೆ. ಪಾಪಗಳು

ನಾಶವಾದಾಗ ಭಗವಂತನಿಗೆ ನಮ್ಮ ಮೇಲೆಪ್ರೀತಿ ಬರುತ್ತದೆ. ಆದರೆ ಪಾಪನಾಶವಾಗದೇ ಈಶ್ವರಪ್ರೀತಿಯು ಸಾಧ್ಯವಿಲ್ಲ. ಹಾಗೆಯೇ ಕರ್ತವ್ಯಾಚರಣೆಯಿಲ್ಲದೇ ನಮ್ಮ ಪಾಪಗಳು ನಾಶವಾಗುವುದಿಲ್ಲ.

(೬) ಆದರೆ, ಕರ್ಮಾಚರಣೆಯೊಂದಿಗೆ ವೈರಾಗ್ಯವೂ ಅಗತ್ಯ. ವೈರಾಗ್ಯವಿಲ್ಲದೇ ಮನಸ್ಸು ಶುದ್ಧವಾಗುವುದಿಲ್ಲ. ಈ ವೈರಾಗ್ಯವನ್ನು ಬೆಳೆಸಿಕೊಳ್ಳುವ ಬಗೆಯನ್ನು ಆಚಾರ್ಯರು ಹೀಗೆ ಸಾರುತ್ತಾರೆ – **"ಭವಸುಖೇ ದೋಷೋನುಸಂಧೀಯತಾಮ್"** – ಪ್ರಾಪಂಚಿಕ ಸುಖದಲ್ಲಿ ದೋಷವನ್ನು ಅನುಸಂಧಾನ ಮಾಡುವ ಮೂಲಕ ವೈರಾಗ್ಯವನ್ನು ಬೆಳೆಸಿ. ನಿತ್ಯ ನೈಮಿತ್ತಿಕ ಕರ್ಮಗಳನ್ನು ವೈರಾಗ್ಯ ಭಾವದಿಂದ ಆಚರಿಸಿದಾಗ ನಮ್ಮ ಮನಸ್ಸು ಕಶ್ಮಲದೂರವಾಗುತ್ತದೆ. ತತ್ಪರಿಣಾಮವಾಗಿ ನಮ್ಮ ಮನಸ್ಸಿಗೆ ಪ್ರಾಪಂಚಿಕ ಬದುಕಿನ ಲೋಪದೋಷಗಳು ಸ್ಫುಟವಾಗಿ ಕಾಣುತ್ತವೆ. ಪ್ರಪಂಚದ ವಸ್ತುಗಳ ಮೇಲೆ ಆರೋಪಿತವಾದ – "ಅವು ಒಳ್ಳೆಯವು, ಅವು ನನಗೆ ಬೇಕು" – ಎಂಬ ರಾಗಭಾವನೆಯು ತೊಲಗುತ್ತದೆ. ವಸ್ತುವೊಂದು ನಾಲಿಗೆಗೆ ಸಿಹಿಯಾಗಿ ಕಂಡರೂ, ಅದರಿಂದ ದೇಹಕ್ಕೆ ತೊಂದರೆಯಾಗುವಂತಿದ್ದರೆ, ನಾವು ಅದನ್ನು ತಿನ್ನಲಾರೆವು. ಜಗತ್ತಿನ ಎಲ್ಲ ವಸ್ತುಗಳೂ ಮೋಲ್ನೋಟಕ್ಕೆ ಹಿತವಾಗಿ ಕಂಡರೂ ಆಂತರಿಕವಾಗಿ ಭಯದ ಅಥವಾ ಕೆಡುಕಿನ ಬೀಜವನ್ನು ಹೊತ್ತಿವೆ. ಲೌಕಿಕ ವಿಷಯಗಳನ್ನು ಕುರಿತ ನಮ್ಮ ಮನೋಭಾವವು ಹೀಗಿರಬೇಕು. ಈ ಮನೋಭಾವದ ಮೂಲಕ ನಮ್ಮ ಮನಸ್ಸು ಶುದ್ಧವಾಗುತ್ತದೆ. ಮನಸ್ಸು ಶುದ್ಧವಾಯಿತೆಂದರೆ ಗುರೂಪದೇಶದಿಂದ ತಕ್ಷಣವೇ ಆತ್ಮಜ್ಞಾನವುಂಟಾಗುತ್ತದೆ. ಶ್ರೀ ಸುರೇಶ್ವರರು ತಮ್ಮ ಪೂರ್ವಾಶ್ರಮದಲ್ಲಿ ಕರ್ಮನಿಷ್ಠರು. ಆದ್ದರಿಂದಲೇ ಅವರ ಮನಸ್ಸು ದೋಷಮುಕ್ತವಾಗಿತ್ತು. ಇದರ ಪರಿಣಾಮವಾಗಿ ಭಗವತ್ಪಾದರ ಬೋಧನೆಯು ಅವರ ಮನಸ್ಸಿನ ಮೇಲೆ ಸಹಜವಾಗಿ ಪರಿಣಾಮ ಬೀರಿತು. ಆದ್ದರಿಂದ ತಮ್ಮ ಮೊದಲ ಸಂಪರ್ಕದಲ್ಲೇ ಅವರು ವೈರಾಗ್ಯ ಸಂಪನ್ನರಾಗಿ ಜ್ಞಾನಪಥವನ್ನು ಪ್ರವೇಶಿಸಿದರು. ಹಾಗೆಯೇ ಕರ್ಮನಿಷ್ಠನಾದ ಜನಕರಾಜನೂ ಕೂಡ ಜ್ಞಾನಿಯೊಬ್ಬರಿಂದ ಉಪದೇಶವಾದ ತಕ್ಷಣವೇ ಜ್ಞಾನಿಯಾದನೆಂದು ಪ್ರತೀತಿ.

ನಮ್ಮ ಮನಸ್ಸು ಶುದ್ಧವಾಗಿ ಅದಕ್ಕೆ ಪ್ರಪಂಚದ ನಿಜವಾದ ಸ್ವರೂಪವು ತಿಳಿಯಿತೆಂದರೆ, ಅದು ಸಹಜವಾಗಿಯೇ ಅಂತರ್ಮುಖವಾಗುತ್ತವೆ. ಈ ಹಂತದಲ್ಲೇ ಭಗವತ್ಪಾದರ **"ಆತ್ಮೇಚ್ಛಾ ವ್ಯವಸೀಯತಾಮ್"** – ಎಂಬ ಉಪದೇಶವು ಅರ್ಥಪೂರ್ಣವಾಗುವುದು. ಅಂತರ್ಮುಖತೆಗೂ ಪ್ರಯತ್ನವು ಅಗತ್ಯ. ಇಲ್ಲಿ ಮತ್ತೊಂದು ಪ್ರಶ್ನೆಯು ಬರುತ್ತದೆ. ಮೂಲತಃ ನಾವು ಆತ್ಮವೇ ಆಗಿರಲು, ಅದನ್ನು ಹೊಂದಲು ನಾವೇಕೆ

ವಿಶೇಷ ಪ್ರಯತ್ನವನ್ನು ನಡೆಸಬೇಕು? ಏಕೆಂದರೆ ಅದು ನಮಗಿಂತಲೂ ಭಿನ್ನವಾದ ಮತ್ತು ಹೊಸದಾಗಿ ಪಡೆದುಕೊಳ್ಳಬೇಕಾದ ವಸ್ತುವಲ್ಲ. ಒಬ್ಬನು ತನ್ನ ಚಿನ್ನದ ಸರವನ್ನು ಹುಡುಕುತ್ತಿರುವಾಗ, ಆತನ ಪಾಡನ್ನು ನೋಡಲಾಗದ ಆತನ ಹಿತೈಷಿಯೊಬ್ಬನು ಸರವು ಆತನ ಕೊರಳಿನಲ್ಲೇ ಇರುವುದನ್ನು ತೋರಿಸುತ್ತಾನೆ. ಆಗ ಅವನಿಗೆ ಹೊಸ ಸರವನ್ನು ಕಂಡಷ್ಟೇ ಸಂತೋಷವಾಗುತ್ತದೆ. ಹಾಗೆಯೇ ಮೂಲತಃ ಆತ್ಮವು ನಾವೇ ಆಗಿದ್ದರೂ, ನಮಗೆ ನಮ್ಮ ನೈಜಸ್ವರೂಪವು ತಿಳಿದಿರುವುದಿಲ್ಲ. ಈ ಅವಿದ್ಯೆ ಅಥವಾ ಅಜ್ಞಾನವನ್ನು ನಾಶ ಮಾಡುವುದಕ್ಕಾದರೂ ಪ್ರಯತ್ನವು ಅಗತ್ಯ. ಈ ಪ್ರಯತ್ನವು ಪೂರ್ಣವಾದಾಗ ದೈವಾನುಗ್ರಹದಿಂದ ಸದ್ಗುರುವು ನಮಗೆ ದೊರೆತು, ಆತನ ಮೂಲಕ ನಮಗೆ ನಮ್ಮ ನಿಜವಾದ ಸ್ವರೂಪವು ತಿಳಿಯುತ್ತದೆ. ಆಗ ನಮಗೆ ನಮ್ಮನ್ನೇ ಹೊಸದಾಗಿ ಕಂಡುಕೊಂಡಷ್ಟು ಆನಂದವಾಗುತ್ತದೆ.

ಹೀಗೆ ಶ್ರೀ ಶಂಕರರು ನಿತ್ಯ ಜೀವನದಲ್ಲಿ ವೇದಾಂತ ತತ್ತ್ವಗಳನ್ನು ಹೇಗೆ ಅಳವಡಿಸಿಕೊಳ್ಳಬೇಕೆಂಬುದನ್ನು ಸಾಧನಪಂಚಕದ ಮೊದಲನೆಯ ಶ್ಲೋಕದಲ್ಲೇ ಚೆನ್ನಾಗಿ ತಿಳಿಸಿರುತ್ತಾರೆ.

◆

ಆಧುನಿಕತೆ – ಆಧ್ಯಾತ್ಮಿಕತೆ

– ವಿದ್ಯಾವಾರಿಧಿ ಡಾ. ವಾಗೀಶ್ವರೀ ಶಿವರಾಮ್, ಮಂಗಳೂರು
ಅಧ್ಯಕ್ಷರು ವಾಗೀಶ್ವರೀ ಪ್ರಕಾಶನ, ೯೯೮೬೨೦೦೭೩೬

ಭೀಮಸೇನ, ದ್ರೌಪದಿಯ ಇಚ್ಛೆಯಂತೆ ಸೌಗಂಧಿಕಾಪುಷ್ಪವನ್ನು ತರಲು, ಅರಣ್ಯಪ್ರವೇಶಿಸಿ, ಮಾರ್ಗದಲ್ಲಿನ ಗಿಡ–ಮರಗಳನ್ನು, ಬೆಟ್ಟ–ಪರ್ವತಗಳನ್ನು, ಎಲ್ಲಾ ಅಡೆತಡೆಗಳನ್ನು ಪುಡಿ ಗುಟ್ಟುತ್ತಾ ಮುಂದೆ–ಮುಂದೆ ಹೋಗುತ್ತಿದ್ದಾನೆ. ದಾರಿಯಲ್ಲಿ ನಿದ್ರಿಸುತ್ತಿದ್ದ ಒಂದು ಕಪಿಯ ಬಾಲ ಅಡ್ಡವಾಗಿ ಬಿದ್ದಿದೆ. ಭೀಮ ಅಬ್ಬರಿಸಿ ಹೇಳಿದ–"ಏ ಕಪಿ! ನಿನ್ನ ಬಾಲ ಬದಿಗೆ ಸರಿಸು". ಕಪಿ ಸ್ವಲ್ಪ ಕಣ್ತೆರೆದು– "ಅಯ್ಯಾ! ನನ್ನ ನಿದ್ರೆಗೆ ಭಂಗ ಮಾಡಬೇಡ. ನೀನೇ ನನ್ನ ಬಾಲವನ್ನು ಪಕ್ಕಕ್ಕೆ ಸರಿಸಿ, ಮುಂದೆ ಹೋಗಯ್ಯಾ" ಎಂದಿತು. ಭೀಮ, ತಿರಸ್ಕಾರದಿಂದ, ಆ ಬಾಲವನ್ನು ಒಂದು ಬೆರಳಿನಿಂದ ಪಕ್ಕಕ್ಕೆ ಸರಿಸಲು ಹೋದ. ಸಾಧ್ಯವಾಗಲಿಲ್ಲ. ಎರಡೂ ಕೈಗಳಿಂದ ಪ್ರಯತ್ನಿಸಿದ. ಅಸಾಧ್ಯವಾಯಿತು, ಹಲ್ಲುಮಿಡಿ ಕಚ್ಚಿ, ಉಸಿರು ಬಿಗಿ ಹಿಡಿದು, ಎಲ್ಲಾ ಶಕ್ತಿ ಬಳಸಿ ತನ್ನ ಗದೆಯಿಂದ, ಬಾಲ ಸರಿಸಲು ಪ್ರಯತ್ನಿಸಿದ. ಎಲ್ಲವೂ ವ್ಯರ್ಥ. ಆಗ ಸೋತು ಸುಣ್ಣವಾದ ಭೀಮ, –"ಅಯ್ಯಾ! ಮಹಾತ್ಮ! ನೀನು ಯಾರು? ಏಕೆ ಇಲ್ಲಿ ಮಲಗಿರುವಿ?" ಎಂದು ವಿನಯದಿಂದ ತಲೆಬಾಗಿ ಪ್ರಶ್ನಿಸಿದ. ಆಗ ಮಲಗಿದ್ದ ಆಂಜನೇಯ ಸ್ವಾಮಿ, "ರಾಮನ ಬಂಟ ಹನುಮಂತ ನಾನೇ" ಎಂದು ತನ್ನನ್ನು ಪರಿಚಯಿಸಿಕೊಂಡ. ಬಂದಿರುವವನು ತನ್ನ ಸಹೋದರನೇ ಆದ ಭೀಮ ಸೇನನೆಂದು ತಿಳಿದು, ಬರಸೆಳೆದು ಆಲಂಗಿಸಿದ. ಸೌಗಂಧಿಕಾಪುಷ್ಪ ದೊರೆಯುವ ಸ್ಥಳವನ್ನೂ ತಿಳಿಸಿದ.

ಮಹಾಭಾರತದ ಈ ದೃಷ್ಟಾಂತ ಕತೆಯಲ್ಲಿ, ಮಹಾ ಬಲಶಾಲಿಯಾದ ಭೀಮಸೇನ ಆಧುನಿಕತೆಯನ್ನು ಪ್ರತಿನಿಧಿಸಿದರೆ, "ಹನುಮಂತನ ಬಾಲ" ಆಧ್ಯಾತಿಕತೆಯನ್ನು ಸಂಕೇತಿಸುತ್ತದೆ. ಆಧುನಿಕತೆ ಭೀಮಸೇನನಂತೆ ಎಗ್ಗು–ಮುಗ್ಗಿಲ್ಲದೇ ಎಲ್ಲವನ್ನೂ ಧ್ವಂಸಗೊಳಿಸುತ್ತಾ ಮುಂದೆ ಮುಂದೆ ಧಾವಿಸುತ್ತಿದೆ. ಆಧ್ಯಾತ್ಮಿಕತೆ ಆಂಜನೇಯನ ಬಾಲದಂತೆ ಕ್ಷೀಣವಾಗಿ ಬಿದ್ದು ಕೊಂಡಿದೆ. ಆದರೆ; ವೈಜ್ಞಾನಿಕತೆ–ತಾಂತ್ರಿಕತೆಯ ಭಯಂಕರವಾದ ಬೆಳವಣಿಗೆಯಿಂದಾದ ಆಧುನಿಕತೆ – ಆಧ್ಯಾತ್ಮಿಕತೆಗಳು ಪರಸ್ಪರ ಆಲಂಗಿಸಿಕೊಂಡಾಗಲೇ, ಬದುಕೆಂಬ ಸೌಗಂಧಿಕಾಪುಷ್ಪ ಅರಳುತ್ತದೆ. ಶಾಂತಿ, ನೆಮ್ಮದಿ, ಆನಂದಗಳ ಸುಗಂಧವನ್ನು ಆಘ್ರಾಣಿಸಲು ಸಾಧಿಸುವುದೇ ಪ್ರತಿಯೊಬ್ಬನ ಕರ್ತವ್ಯವಾದಾಗಲೇ ಶಾಂತಿಯು ಎಲ್ಲೆಡೆ ವಿಜೃಂಭಿಸುತ್ತದೆ.

*** ಆಧ್ಯಾತ್ಮಿಕ ಜೀವನ – ಏನು? ಏಕೆ? ಹೇಗೆ? :**

ಭಾ– ಕಾಂತಿ, ರತ– ಮಗ್ನನಾದವನು. ಅಂದರೆ "ಆತ್ಮಜ್ಯೋತಿಯ" ಅನ್ವೇಷಣೆಯಲ್ಲಿ ಮಗ್ನರಾದ ಜನಾಂಗವುಳ್ಳ ದೇಶವೇ "ಭಾರತ" ಆತ್ಮಜ್ಯೋತಿಯನ್ನು, ಪರಮಾತ್ಮನನ್ನು ಕೇಂದ್ರವಾಗಿ ಇಟ್ಟುಕೊಂಡು ಬದುಕಿ–ಬಾಳಿದ ಋಷಿ–ಮುನಿಗಳು, ಸಾಧು–ಸಂತರು, ಮಹಾತ್ಮರು, ಅವಧೂತರು, ಸಂನ್ಯಾಸಿಗಳು ಈ ಭಾರತಭೂಮಿಯಲ್ಲಿ ಜನ್ಮತಾಳಿದಷ್ಟು, ಇತರ ದೇಶಗಳಲ್ಲಿ ಜನಿಸಿಲ್ಲ. ಭಾರತದಲ್ಲಿ ಅಂತರಂಗದ ಅನ್ವೇಷಕರಾದ Saints (ಸಂತರು) ಅಸಂಖ್ಯಾತರಾಗಿದ್ದಾರೆ. ವಿದೇಶಗಳಲ್ಲಿ ಭೌತಪ್ರಪಂಚದ ಅನ್ವೇಷಕರಾದ Scientists (ವಿಜ್ಞಾನಿಗಳು) ಇದ್ದಾರೆ.

"ಈ ಶರೀರ, ಬುದ್ಧಿ, ಮನಸ್ಸು, ಚಿತ್ತ, ಪಂಚ ಜ್ಞಾನೇಂದ್ರಿನುಗಳು, (ಕಣ್ಣು, ಕಿವಿ, ಮೂಗು, ನಾಲಿಗೆ, ಚರ್ಮ), ಪಂಚಕೋಶಗಳು, (ಅನ್ನ ಮಯ, ಪ್ರಾಣ ಮಯ, ಮನೋ ಮಯ, ವಿಜ್ಞಾನ ಮಯ, ಆನಂದ ಮಯ)... ಇವು ಯಾವೂದೂ "ನಾನು" ಅಲ್ಲ. ಇವುಗಳನ್ನೆಲ್ಲವನ್ನೂ, ಬಾಹ್ಯ ಪ್ರಪಂಚವನ್ನೂ ಬೆಳಗುತ್ತಿರುವ, ಶುದ್ಧ ಜ್ಞಾನಸ್ವರೂಪದ "ಚೇತನವೇ" ನಾನು. ಅದೇ "ಆತ್ಮ". ಈ ಆತ್ಮ ಅವಿನಾಶಿ, ಆನಂದದ ಘನ, ಅದ್ವಿತೀಯ. ಈ ಆತ್ಮದ ಅರಿವಾದಾಗ, ಜಗತ್ತಿನಲ್ಲಿ ಇರುವ ಎಲ್ಲಾ ಚರ -ಅಚರಗಳ ಆತ್ಮ ತಾನೇ ಎಂಬ ದಿವ್ಯದರ್ಶನದ ಅನುಭೂತಿ ಆಗುತ್ತದೆ. ಈ ಆತ್ಮತತ್ವವನ್ನು ಅರಿಯಲು ಶಮ, ದಮ, ಉಪರತಿ, ತಿತಿಕ್ಷೆ, ಶ್ರದ್ಧೆ, ಸಮಾಧಾನಗಳೆಂಬ ಆರು ಗುಣಸಂಪತ್ತನ್ನು ಮೈಗೂಡಿಸಿಕೊಂಡು, ಇದೇ ಪರಮಾನಂದದ ದಾರಿ ಎಂದು ದೃಢವಾಗಿ ನಂಬಿ ಬದುಕುವುದೇ **"ಆಧ್ಯಾತ್ಮಿಕಜೀವನ."** (ಅಧಿ+ಆತ್ಮ=ಅಧ್ಯಾತ್ಮ, ಅಧ್ಯಾತ್ಮಕ್ಕೆ ಸಂಬಂಧಿಸಿದ್ದೆ ಆಧ್ಯಾತ್ಮ.)

ಸ್ವಾತಂತ್ರ್ಯಪೂರ್ವದಲ್ಲಿ ಆತ್ಮದಲ್ಲಿನ, ಅಚಲಶ್ರದ್ದೆಯಿಂದ ಅತ್ಯಂತ ಆತ್ಮವಿಶ್ವಾಸದಿಂದ, ಧೀರರಾಗಿ ಬಾಳಿ ಬದುಕಿದ ಅಸಂಖ್ಯಾತ ಪುರುಷರಿದ್ದರು. ಅವರಿಗೆ ಶರೀರ ನಾಶವಾದರೂ, ಆತ್ಮ ಅಮರ ಎಂಬ ಗೀತಾವಾಣಿ ಧ್ಯೇಯವಾಕ್ಯವಾಗಿತ್ತು:

"ವಾಸಾಂಸಿ ಜೀರ್ಣಾನಿ ಯಥಾ ವಿಹಾಯ
ನವಾನಿ ಗೃಹ್ಣಾತಿ ನರೋಽಪ ರಾಣಿ।
ತಥಾ ಶರೀರಾಣಿ ವಿಹಾಯ ಜೀರ್ಣಾನಿ
ಅನ್ಯಾನಿ ಸಂಯಾತಿ ನವಾನಿ ದೇಹೀ ॥" (ಭಗವದ್‌ಗೀತೆ ೨–೨೨)

"ಮನುಷ್ಯನು ಹಳೆಯ ವಸ್ತ್ರವನ್ನು ತ್ಯಜಿಸಿ, ಹೊಸವಸ್ತ್ರವನ್ನು ಧರಿಸುವಂತೆ, "ಆತ್ಮನು" ತನ್ನ ಹಳೆಯ ಶರೀರವನ್ನು ಬಿಟ್ಟು ಹೊಸ ಶರೀರಗಳನ್ನು ಹೊಂದುತ್ತಾನೆ." – ಈ ಮಾತಿನಲ್ಲಿ ದೃಢ ವಿಶ್ವಾಸವಿದ್ದ ಯೋಧರೂ, ನಗು–ನಗುತ್ತಾ ಸ್ವಾತಂತ್ರ್ಯ ಯುದ್ಧದಲ್ಲಿ

ಬಲಿದಾನ ಮಾಡಿದ ದೃಷ್ಟಾಂತಗಳಿವೆ. ಆಂಗ್ಲರ ಸುದೀರ್ಘ ಆಳ್ವಿಕೆ, ಭಾರತೀಯರ ವಿಶ್ವಾಸಗಳನ್ನು ನಷ್ಟಮಾಡಿ, ಆಲಸ್ಯ, ಇಂದ್ರಿಯಗಳ ದಾಸ್ಯವನ್ನು ಹೆಚ್ಚಿಸಿದೆ.

"ಈಶಾವಾಸ್ಯಂ ಜಗತ್‌ಸರ್ವಂ ಯತ್ಕಿಂಚ ಜಗತ್ಯಾಂ"

"ಈ ಜಗತ್ತಿನಲ್ಲಿ ಇರುವುದೆಲ್ಲಾ ಭಗವಂತನಿಂದ (ಆತ್ಮದಿಂದ) ಆವೃತವಾಗಿದೆ"– ಎನ್ನುವ ಈಶಾವಾಸ್ಯ ಉಪನಿಷತ್ತಿನ, ಆತ್ಮತತ್ವದ ಚಿಂತನೆಯ ಹಿನ್ನೆಲೆಯಲ್ಲಿ ವ್ಯಷ್ಟಿಯ (ವ್ಯಕ್ತಿಯ) ಹಾಗೂ ಸಮಷ್ಟಿಯ (ಸಮೂಹದ) ಸರ್ವತೋಮುಖ ಅಭಿವೃದ್ಧಿಯ ಸಾಧನೆ ಸುಲಭ ಸಾಧ್ಯವಾಗುತ್ತದೆ. ವೇದಗಳು, ಉಪನಿಷತ್, ರಾಮಾಯಣ, ಮಹಾಭಾರತ, ಪುರಾಣಗಳೇ ಮೊದಲಾದ ಎಲ್ಲಾ ವಾಙ್ಮಯಗಳು, ಪ್ರಸ್ಥಾನ ತ್ರಯಗಳಾದ ಭಗವದ್‌ಗೀತೆ, ಉಪನಿಷತ್, ಬ್ರಹ್ಮಸೂತ್ರಗಳು ಆತ್ಮಜ್ಞಾನ ವಿಷಯವನ್ನೇ ಬೋಧಿಸುತ್ತಾ ಆಧ್ಯಾತ್ಮಿಕ ಬದುಕಿನ ದಾರಿ ದೀಪಗಳಾಗಿವೆ. ರಾಮಕೃಷ್ಣ ಆಶ್ರಮ, ಚಿನ್ಮಯಮಿಷನ್ ನಂತಹ ಹಲವಾರು ಸಂಸ್ಥೆಗಳು ವೇದಾಂತದ ಪ್ರಚಾರದ ಮೂಲಕ ಆಧ್ಯಾತ್ಮಿಕ ಬದುಕನ್ನು ರೂಪಿಸಿಕೊಳ್ಳಲು ಪ್ರೇರಣೆ – ಸ್ಫೂರ್ತಿಗಳನ್ನು ನೀಡುತ್ತಿವೆ.

ನಮ್ಮ ಎಲ್ಲಾ ಉತ್ಸವಗಳೂ, ಹಬ್ಬ – ಹರಿದಿನಗಳೂ, ಹಿಂದೂ ಧರ್ಮದ ಷೋಡಶಸಂಸ್ಕಾರಗಳೂ ಈ ಆತ್ಮದ ವಿಕಾಸಕ್ಕಾಗಿಯೇ ಇವೆ. ಅವುಗಳನ್ನು ತಿಳಿಯಲು ವಿವೇಕ ಬೇಕು. ವಿವೇಕ ಬರಲು ಶಾಸ್ತ್ರಗಳ ಜ್ಞಾನ ಬೇಕು. ಶಾಸ್ತ್ರಗಳನ್ನು ಅವುಗಳ ಸಾರವನ್ನೂ ತಿಳಿಯಲು ಗುರು ಬೇಕು. ಆದರೆ ತಿರುಳನ್ನು ಬಿಟ್ಟು, ಸಿಪ್ಪೆಯನ್ನೇ ಅಪ್ಪಿಕೊಂಡಿರುವ ಮೂಢರ ಸಂತೆ ನಡೆಯುತ್ತಿದೆ. ಈ ಮೌಢ್ಯ ಸ್ವಯಂಕೃತ ಅಪರಾಧ.

ಎಲ್ಲಾ ಜೀವಕೋಟಿಗಳಲ್ಲಿ, ಸೃಷ್ಟಿಯಲ್ಲಿರುವ ಪ್ರತಿಯೊಂದರಲ್ಲಿ ಪರಮಾತ್ಮ (ಆತ್ಮ) ಇದ್ದಾನೆ ಎಂಬ ಅರಿವಾದರೆ; ದ್ವೇಷ, ಅಸೂಯೆ, ಕೋಪ ಇವೇ ಮೊದಲಾದ ವಿಕಾರಗಳಿಗೆ ಅವಕಾಶವಾದರೂ ಎಲ್ಲಿದೆ? ಆಧ್ಯಾತ್ಮಿಕ ಜೀವನವೆಂಬುದು ಅಮೃತತತ್ವದ ಪಥ. ಜ್ಞಾನ, ಭಕ್ತಿ, ವೈರಾಗ್ಯಗಳ ಸಂಪಾದನೆಯೇ ಈ ಜೀವನದ ಪರಮ ಗುರಿ. ಶಾಂತಿಯ, ನೆಮ್ಮದಿಯ, ಆನಂದದ ಬದುಕನ್ನು ಬಯಸುವ ಪ್ರತಿಯೊಬ್ಬನೂ ಆಧ್ಯಾತ್ಮಿಕತೆಗೆ ಶರಣುಹೋಗದೇ ಅನ್ಯಮಾರ್ಗವಿಲ್ಲ. ಒಂದಲ್ಲ ಒಂದು ದಿನ ಈ ಬದುಕಿನತ್ತ ಹೆಜ್ಜೆಹಾಕಿ ನಡೆಯ ಬೇಕಾದುದು ಪ್ರಕೃತಿಯ ರಹಸ್ಯ, ಭಗವಂತನ ಮಾಯೆ.

ವ್ಯಕ್ತಿಯ ಬದುಕಿನಲ್ಲಿ ಆಧುನಿಕತೆಯ ಅಮಲಿನ ಪರಿಣಾಮ :

ಸಹಜವಾಗಿಯೇ ತಮೋಗುಣದಿಂದಾದ ಆವರಣಶಕ್ತಿ (ಸತ್ಯವನ್ನು ಮುಚ್ಚಿಡುವುದು) ರಜೋಗುಣದಿಂದಾದ ವಿಕ್ಷೇಪಶಕ್ತಿ (ಅಸತ್ಯವನ್ನು ತೋರಿಸುವುದು), "ಆತ್ಮನನ್ನು" ಮುಚ್ಚಿವೆ. ಇವುಗಳ ಜೊತೆಗೆ ಆಧುನಿಕತೆಯಿಂದಾದ ಸುಖ–ಭೋಗಗಳ

ಸಾಮಗ್ರಿಗಳು ಪ್ರತಿಯೊಬ್ಬನನ್ನು ದಾರಿತಪ್ಪಿ ನಡೆಯುವಂತೆ ಮಾಡಿವೆ. ಆಧುನಿಕತೆಯ ಕಬಂಧ ಬಾಹುವಿನ ಪರಿಣಾಮಗಳನ್ನು ನಾವು ಕುಟುಂಬಗಳಲ್ಲಿ, ಸಮಾಜದಲ್ಲಿ, ಸಾಂಸ್ಕೃತಿಕ ಬದುಕಿನಲ್ಲಿ, ಭೌಗೋಳಿಕ ಪರಿಸರಗಳಲ್ಲಿ ಎಲ್ಲೆಡೆ ಕಾಣಬಹುದು. ಇಂದು ಮನುಷ್ಯ – ಮನುಷ್ಯನಂತೆ ಬಾಳಲಾರದ ಸ್ಥಿತಿ ತಲುಪುತ್ತಿದ್ದಾನೆ.

ಇಂದು ಅವಿಭಾಜ್ಯ ಕುಟುಂಬಗಳು ಕಣ್ಮರೆಯಾಗಿ, ವಿಭಜಿತ ಕುಟುಂಬಗಳು ಹೆಚ್ಚಿವೆ. ದುಡಿಮೆಯಲ್ಲೇ ಮುಳುಗಿದ ಅಪ್ಪ–ಅಮ್ಮಂದಿರಿಗೆ ತಮ್ಮ ಮಕ್ಕಳೊಡನೆ ಕುಳಿತು ಮಾತನಾಡಲು ಸಮಯವೂ ಇಲ್ಲ, ಸಹನೆಯೂ ಇಲ್ಲ. ಮನೆ ಮನೆಯೂ ಚಿತ್ರಮಂದಿರವಾಗಿದೆ. ಕಂಪ್ಯೂಟರ್ ಆಟ ಸಾಮಗ್ರಿಗಳು ಹೆಚ್ಚಿವೆ. ಪರಿಣಾಮವಾಗಿ ಹಿಡಿತಕ್ಕೆ ಸಿಗದ ಮಕ್ಕಳು, ಸಣ್ಣಪುಟ್ಟ ಕಾರಣಕ್ಕೂ ಆತ್ಮಹತ್ಯೆ ಮಾಡಿಕೊಳ್ಳುವವರ ಸಂಖ್ಯೆಯೂ ಹೆಚ್ಚಿದೆ. ಬಾಲಾಪರಾಧಿಗಳ ಸಂಖ್ಯೆಯೂ ಹೆಚ್ಚಾಗುತ್ತಿದೆ.

ಆಹಾರ – ವಿಹಾರ, ಬದಲಾಗಿದೆ. ಪೌಷ್ಟಿಕತೆಗಿಂತ ನಾಲಿಗೆಯ ಚಪಲತೆಗೇ ಮನ್ನಣೆ. ಉಡುಗೆ–ತೊಡುಗೆ ಭೋಗ ಸಾಮಗ್ರಿಗಳು ಹೆಚ್ಚಿವೆ, ಜೊತೆಜೊತೆಗೆ ರೋಗಗಳೂ ಅಧಿಕವಾಗಿವೆ. ಇಂದು ಭಾರತ ಮಧುಮೇಹಿರೋಗಿಗಳ (Diabetes) ಸಂಖ್ಯೆಯಲ್ಲಿ ಎರಡನೆಯ ಸ್ಥಾನ ತಲುಪಿದೆ. ಸಂಕ್ಷೇಪವಾಗಿ ಹೇಳುವುದಾದರೆ "Fast Food – Fast Life – Fast Death" ಕಾಣುತ್ತಿದ್ದೇವೆ. ಖಾವೋ, ಪೀವೋ, ಮಜಾ ಉಡಾವೋ (Drink, Dine, Die) ಇವುಗಳೇ ತರುಣರ ಗುರಿಗಳಾಗುತ್ತಿವೆ. ಅರ್ಥ (ಹಣ) ಸಂಪಾದನೆಯೆ ಜೀವನದ ಪರಮೈಕ ಗುರಿಯಾಗುತ್ತಿದೆ.

ಭೌದ್ಧಿಕತೆ ಹೆಚ್ಚಿದೆ, ಭಾವನಾತ್ಮಕತೆ ಕುಸಿದಿದೆ. ಪರಸ್ಪರ ನಂಬಿಕೆ, ವಿಶ್ವಾಸ, ಸಂಬಂಧಗಳು ಕುಸಿಯುತ್ತಿವೆ. ವ್ಯಾವಹಾರಿಕವಾದ ವೈಯಕ್ತಿಕವಾದ ಲಾಭ – ನಷ್ಟದ ದೃಷ್ಟಿ ಹೆಚ್ಚಾಗುತ್ತಿದೆ. ಆಂತರಿಕ ಸೌಂದರ್ಯವನ್ನು (ಸದ್ಗುಣಗಳನ್ನು) ನೋಡುವ ದೃಷ್ಟಿ ಬದಲಾಗಿದೆ. ಹೊರಗಿನ ಬಣ್ಣ, ತೂಕ, ಥಳಕು – ಬಳುಕಿನ ಮೈಮಾಟಗಳೇ ಪ್ರಧಾನವಾಗುತ್ತಿವೆ. ಇಡ್ಲಿ, ವಡೆ, ಜಿಲೇಬಿ, ಐಸ್ಕ್ರೀಮ್ ತಿನ್ನುವ ಸ್ಪರ್ಧೆಗಳು, ಕೋಕಾಕೋಲ, ಬೀರು ಕುಡಿಯುವ ಸ್ಪರ್ಧೆಗಳು, ಹನ್ನೆರಡು ಜನರು ಆಡುವ ಆಟದ ಹುಚ್ಚು, ಪ್ರಾಣಿಗಳಂತೆ ಗುದ್ದಾಡುವ ಸ್ಪರ್ಧೆಗಳು, ಕೆಲಸಕ್ಕೆ ಬಾರದ ಸಾಹಸಗಳನ್ನು ಮಾಡಿ ಗಿನ್ನಿಸ್ ದಾಖಲೆಯ ಹುಚ್ಚು .... ಹೀಗೆ ಪರಿಣಾಮಗಳ ಪಟ್ಟಿ ಹನುಮಂತನ ಬಾಲದಂತೆ ಆದೀತು.

ಅರ್ಥ, ಕಾಮಗಳನ್ನು ಮಾತ್ರ ಗುರಿಯಾಗಿ ಹೊಂದಿರುವ ಆಧುನಿಕತೆಯ ಬದುಕಿನ ಪರಿಣಾಮವಾಗಿ ಜೀವನೋತ್ಸಾಹ (Zeal) ಉಡುಗಿದೆ. ಚಿಂತೆ, ಕ್ರೋಧ, ಭಯ, ಉದ್ವೇಗ

(Anxiety), ಮಾನಸಿಕ ಖಿನ್ನತೆ (Dipression), ನಿರಾಶೆ (Frustration), ದುರಾಶೆಗಳು ಹೆಚ್ಚಿ; ಆತ್ಮಹತ್ಯೆ, ಕೊಲೆ, ಸುಲಿಗೆ, ದರೋಡೆ, ಪೈಪೋಟಿ, ಸ್ಪರ್ಧೆಗಳು, ಆಲಸ್ಯ–ಅಪರಾಧಗಳು, ಅಶಾಂತಿ–ಅತೃಪ್ತಿಗಳೂ ಹೆಚ್ಚುತ್ತಿವೆ. ಬಿಂದುರೂಪದಲ್ಲಿರುವ ಈ ಎಲ್ಲಾ ಸಂಗತಿಗಳೂ ಸಿಂಧುವಿನಷ್ಟು ಬೃಹತ್ತಾಗಿ, ಚಿಂತನೀಯವಾಗಿವೆ.

ಆಧ್ಯಾತ್ಮಿಕತೆ ಬೇಕೋ, ಆಧುನಿಕತೆ ಬೇಕೋ ಎನ್ನುವ ವಿವೇಚನೆ ವ್ಯಕ್ತಿಗತವಾದದ್ದು, ಆದರೂ ಇವೆರಡರ ಸಮನ್ವಯವೇ "ಜೀವನದ ಯಶಸ್ಸಿನ ರಹಸ್ಯ" ಎನ್ನುವುದು ಅನುಭಾವಿಗಳ ಮಾತು.

"ಮೂರು ಸಾಗರ ನೂರು ಮಂದಿರ ದೈವಸಾಸಿರವಿದ್ದರೆ
ಗಂಗೆಯಿದ್ದರೆ ಸಿಂಧುವಿದ್ದರೆ ಗಿರಿ ಹಿಮಾಲಯವಿದ್ದರೆ
ವೇದವಿದ್ದರೆ ಭೂಮಿಯಿದ್ದರೆ ಘನಪರಂಪರೆಯಿದ್ದರೆ
ಏನು ಸಾರ್ಥಕ ಮನೆಯ ಜನರೇ ಮಲಗಿ ನಿದ್ರಿಸುತ್ತಿದ್ದರೆ."

ಹಿರಿಯ ಕವಿಯೊಬ್ಬರ ಈ ಸಾಲುಗಳು ಮನನೀಯವಾಗಿವೆ.

ವೇದಗಳ ಬೆಳಕಿನಲ್ಲಿ ಸತ್ಸಂತಾನ

– ಶ್ರೀಮತಿ ಸತ್ಯವತಿ ರಾಮನಾಥ, ಬೆಂಗಳೂರು
ಅಧ್ಯಾಪಕರು, ೯೩೪೮೧೨೨೯೮೪೨

ವೇದಗಳು; ಸಮಸ್ತ ಸತ್ಯವಿದ್ಯೆಗಳ ಭಂಡಾರವೂ, ಜೀವನವನ್ನು ಸಾರ್ಥಕವನ್ನಾಗಿಸಿಕೊಳ್ಳಲು, ಪ್ರೇರಣಾದಾಯಕವೂ ಆಗಿವೆ.

ಮನುಷ್ಯಜನ್ಮ ಪಡೆದ ಮೇಲೆ ಅದನ್ನು ಸಾರ್ಥಕಗೊಳಿಸಿಕೊಳ್ಳಲು, ಮನುಷ್ಯನ ಜೀವನ ಕ್ರಮವನ್ನು ನಾಲ್ಕು ಪುರುಷಾರ್ಥಗಳನ್ನಾಗಿ ವಿಂಗಡಿಸಿ, ಮೋಕ್ಷವೇ ಜೀವನದ ಪರಮಗುರಿ ಎಂದು ಸಾರಿದ್ದಾರೆ. ಮೋಕ್ಷವನ್ನು ಪಡೆಯುವ ಮಾರ್ಗದಲ್ಲಿ ಧರ್ಮವೇ ಮೊದಲು. ಧರ್ಮಮಾರ್ಗದಿಂದ ಸಂಪತ್ತನ್ನು ಗಳಿಸಿ, ಧರ್ಮದಿಂದಲೇ ತನ್ನ ಕಾಮನೆಗಳನ್ನು ತೀರಿಸಿಕೊಳ್ಳುವುದನ್ನು ವಿಧಿಸಲಾಗಿದೆ. ಈ ಕಾರಣಕ್ಕಾಗಿ ವರ್ಣಾಶ್ರಮಗಳ (ಬ್ರಹ್ಮಚರ್ಯ, ಗಾರ್ಹಸ್ಥ, ವಾನಪ್ರಸ್ಥ, ಸಂನ್ಯಾಸ) ವ್ಯವಸ್ಥೆ ಏರ್ಪಟ್ಟಿದೆ. ಈ ನಾಲ್ಕು ಆಶ್ರಮಗಳಲ್ಲಿ, ವೈದಿಕ ಪರಂಪರೆಯಲ್ಲಿ ಗೃಹಸ್ಥಾಶ್ರಮಕ್ಕೆ ಅತ್ಯಂತ ಮಹತ್ತ್ವವಿದೆ. ಗೃಹಸ್ಥಾಶ್ರಮವು ಇಹಲೋಕ ಪರಲೋಕಗಳನ್ನು ಪಡೆದುಕೊಳ್ಳಲು ಮಾರ್ಗವಾಗಿದೆ. ಪ್ರಾಚೀನ ಇತಿಹಾಸ ತಿಳಿಸುವಂತೆ ಋಷಿಮುನಿಗಳು ಗೃಹಸ್ಥಾಶ್ರಮದಲ್ಲಿದ್ದುಕೊಂಡೇ ಮಾರ್ಗದರ್ಶನ ಮಾಡುತ್ತಿದ್ದರು.

ಭಾರತದೇಶವು ಸನಾತನಧರ್ಮಕ್ಕೂ, ಸಂಪ್ರದಾಯಕ್ಕೂ ಸಂಸ್ಕೃತಿಗೂ ಹೆಸರಾಗಿದೆ. ಇವುಗಳ ಉಳಿವಿಕೆಗಾಗಿ ಕುಟುಂಬ ವ್ಯವಸ್ಥೆಗೆ ಪ್ರಾಧಾನ್ಯತೆ ನೀಡಲಾಗಿದೆ. ಕುಟುಂಬಕ್ಕೆ ಪತಿ-ಪತ್ನಿಯರ ಕೊಡುಗೆ ಅಪಾರವಾದುದು ಹಾಗೂ ಜವಾಬ್ದಾರಿಯುತವಾದುದು. ಆದ್ದರಿಂದಲೇ ನಮ್ಮಲ್ಲಿ ಷೋಡಶ ಸಂಸ್ಕಾರಗಳಲ್ಲಿ (ಗರ್ಭಾದಾನ, ಪುಂಸವನ, ಸೀಮಂತೋನ್ನಯನ, ಜಾತಕರ್ಮ, ನಾಮಕರಣ, ನಿಷ್ಕ್ರಮಣ, ಅನ್ನಪ್ರಾಶನ, ಚೂಡಾಕರ್ಮ, ಕರ್ಣವೇಧ, ಉಪನಯನ, ವೇದಾರಂಭ, ಸಮಾವರ್ತನ, ವಿವಾಹ, ವಾನಪ್ರಸ್ಥ, ಸನ್ಯಾಸ ಹಾಗೂ ಅಂತ್ಯೇಷ್ಟಿ) ವಿವಾಹವು ಅತ್ಯಂತ ಪವಿತ್ರವಾದ ಹಾಗೂ ಶ್ರೇಷ್ಠವಾದ ಸಂಸ್ಕಾರವೆನ್ನಿಸಿಕೊಂಡಿದೆ.

ಕುಟುಂಬದಲ್ಲಿ ಪತಿ-ಪತ್ನಿಯರು ಪರಸ್ಪರ ಪ್ರೀತಿ ಹೊಂದಾಣಿಕೆಗಾಗಿ ಒಬ್ಬರು ಇನ್ನೊಬ್ಬರ ಕೈ ಹಿಡಿಯುತ್ತಾರೆ ಎಂಬುದನ್ನು ಋಗ್ವೇದದ ಈ ಮಂತ್ರ ಸ್ಪಷ್ಟ ಪಡಿಸುತ್ತದೆ:

ಓಂ ಗೃಭ್ಣಾಮಿ ತೇ ಸೌಭಗತ್ವಾಯ ಹಸ್ತಂ ಮಯಾ ಪತ್ಯಾ ಜರ ದಷ್ಟಿರ್ಯಥಾಸಃ । ಭಗೋ ಅರ್ಹಮಾ ಸವಿತಾ ಪುರಂಧಿರ್ಮಹ್ಯಂ ತ್ವಾ ದುರ್ಗಾರ್ಹ ಪತ್ಯಾಯ ದೇವಾಃ । [ಋಕ್. ೧೦.೮೫.೩೬]

"ಹೇ ವರಾನನೇ ! ಹೇಗೆ ನಾನು ಸತ್ಸಂತಾನ ಸೌಭಾಗ್ಯವೃದ್ಧಿಗಾಗಿ ನಿನ್ನ ಕೈಯನ್ನು ಹಿಡಿಯುತ್ತೇನೆಯೋ, ನೀನೂ ಸಹ ಪತಿಯಾದ ನನ್ನ ಜೊತೆ ವೃದ್ಧಾವಸ್ಥೆಯನ್ನು ಹೊಂದಿ ಸುಖವಾಗಿರು" ವರನು ಈ ಮಾತನ್ನು ಹೇಳಿದರೆ ವಧುವು "ನಾನು ಸೌಭಾಗ್ಯ ವೃದ್ಧಿಗಾಗಿ ನಿಮ್ಮ ಕೈಯನ್ನು ಹಿಡಿಯುವೆನು. ನಿಮಗೆ ನಾನು, ನನಗೆ ನೀವು ಇಂದಿನಿಂದ ಪತಿ-ಪತ್ನೀ ಭಾವನೆಯಲ್ಲಿ ಸೇರಿದ್ದೇವೆ. ಎಂದಿಗೂ ಅಪ್ರಿಯಾಚರಣೆ ಮಾಡದಿರೋಣ" ಎಂದು ಹೇಳುತ್ತಾಳೆ.

ಅಥರ್ವವೇದವು ಒಂದು ಮಂತ್ರದಲ್ಲಿ ಪತಿ-ಪತ್ನಿಯರ ಬಾಂಧವ್ಯದ ಒಂದು ಸುಂದರ ಚಿತ್ರಣವನ್ನು ನಮ್ಮ ಮುಂದಿಟ್ಟಿದೆ.

ಓಂ ಭಗಸ್ತೇ ಹಸ್ತಮಗ್ರಭೀತ್ ಸವಿತಾ ಹಸ್ತಮಗ್ರಭೀತ್ ।
ಪತ್ನೀ ತ್ವಮಸಿ ಧರ್ಮಣಾಹಂ ಗೃಹಪತಿಸ್ತವ । (ಅಥರ್ವ ೧೪.೧.೫೧]

"ನೀನು ಧರ್ಮದಿಂದ ನನ್ನ ಪತ್ನಿಯಾಗಿದ್ದೀಯೆ. ನಾನು ಧರ್ಮದಿಂದ ನಿನ್ನ ಗೃಹಪತಿಯಾಗಿದ್ದೇನೆ. ನಾವಿಬ್ಬರೂ ಸೇರಿ ಗೃಹಕೃತ್ಯಗಳನ್ನು ನೆರವೇರಿಸಿಕೊಳ್ಳೋಣ ಮತ್ತು ಇಬ್ಬರಿಗೂ ಸಾಧುವಲ್ಲದ ವ್ಯಭಿಚಾರವನ್ನು ಮಾಡದಿರೋಣ".

ವಿವಾಹದ ಮುಖ್ಯ ಉದ್ದೇಶ ಸಂತಾನೋತ್ಪತ್ತಿ. ವಿವಾಹದ ಸಂದರ್ಭದಲ್ಲಿ ವಧು-ವರರು ಸಪ್ತಪದಿ ತುಳಿಯುವಾಗ - "**ಪ್ರಜಾಭ್ಯಃ ಪಂಚಪದೀಭವ**" - "ಮಕ್ಕಳನ್ನು ಪಡೆಯುವುದಕ್ಕೋಸ್ಕರ ಐದನೇ ರಾಶಿಯನ್ನು ತುಳಿಯುವವಳಾಗು" ಎಂಬ ಮಂತ್ರವಿದೆ. ಈ ಉದ್ದೇಶ ಸಫಲವಾಗಬೇಕಾದರೆ ವಿವಾಹಕ್ಕೆ ಮುನ್ನ ಕನ್ಯೆ, ಕುಮಾರರ ಇತಿಹಾಸವನ್ನು ಎಂದರೆ ಗುಣ – ಕರ್ಮ – ಸ್ವಭಾವಗಳನ್ನು – ಚೆನ್ನಾಗಿ ಪರಿಶೀಲಿಸಿ ನೋಡಬೇಕು. ಯಾರ – ಯಾರ ರೂಪ ಹೊಂದಿಕೊಳ್ಳುವುದೋ, ಗುಣ – ಕರ್ಮ – ಸ್ವಭಾವ ಯಾವಾಗ ಹೊಂದಿಕೊಳ್ಳುವುದೋ ಆಗ ವಿವಾಹವನ್ನು ನಿಶ್ಚಯಿಸಬೇಕು.

ಯಾವಾಗ ವಿವಾಹವಾಗುವುದಕ್ಕೆ ವಧು-ವರರಿಗೆ ದೃಢ ಪ್ರೇಮವುಂಟಾಗುವುದೋ ಅಂದಿನಿಂದ ಮೊದಲ್ಗೊಂಡು ಬ್ರಹ್ಮಚರ್ಯಯಿಂದಲೂ, ವೇದಾಧ್ಯಯನದಿಂದಲೂ, ತಪಃಶ್ಚರ್ಯೆಯಿಂದಲೂ ಕಾಲವನ್ನು ಕಳೆಯಬೇಕು. ಸಾತ್ತ್ವಿಕ ಆಹಾರದಿಂದ ಆರೋಗ್ಯವನ್ನ ವರ್ಧಿಸಬೇಕು. ವರನು ಆರೋಗ್ಯವಂತನಾಗಿಯೂ, ದೃಢಕಾಯನಾಗಿಯೂ ಇರಬೇಕು. ಕನ್ಯೆಯು ರಜಸ್ವಲೆಯಾಗಿ, ಯಾವಾಗ ಶುದ್ಧಳಾಗುತ್ತಾಳೋ ಆಗ ಸುಗಂಧ ಯುಕ್ತವಾದ ದ್ರವ್ಯಗಳ ಮತ್ತು ತುಪ್ಪ ಮೊದಲಾದುವುಗಳ ಹೋಮವನ್ನು ಮಾಡಿ, ವಿದ್ವಾಂಸರನ್ನು, ಸ್ತ್ರೀಯರನ್ನು ಯೋಗ್ಯ ರೀತಿಯಲ್ಲಿ ಸತ್ಕರಿಸಬೇಕು. ವಿವಾಹವನ್ನು ಸಜ್ಜನರ ಸಭೆಯಲ್ಲಿ ನೆರವೇರಿಸಬೇಕು. ವಿವಾಹ ವಿಧಿಯ ನಂತರ ಏಕಾಂತ ಸೇವನೆ ಮಾಡಬೇಕು.

ಯಾವಾಗ ಪತಿ-ಪತ್ನಿಯರು ಸಂತಾನವನ್ನು ಬಯಸುತ್ತಾರೋ ಆಗ ಅವರು ಪ್ರಸನ್ನ ಚಿತ್ತರಾಗಿರಬೇಕು. ಈ ಕಾರಣಕ್ಕಾಗಿ ನಮ್ಮ ಪೂರ್ವಜರು ತಿಥಿ, ವಾರ, ನಕ್ಷತ್ರ ಎಂದು

ಶುಭದಿನವನ್ನೇ ನಿಷ್ಕರ್ಷೆಮಾಡುತ್ತಿದ್ದರು. ಸಮಾಗಮದ ನಂತರ ಶುಂಠಿ, ಕೇಸರಿ, ಅಶ್ವಗಂಧಿ, ಏಲಕ್ಕಿ ಮತ್ತು ಕೆಂಪು ಕಲ್ಲು-ಸಕ್ಕರೆಯನ್ನು ಹಾಲಿಗೆ ಹಾಕಿ ಕುಡಿದು ಬೇರೆ ಬೇರೆಯೇ ಮಲಗುವುದು ಆರೋಗ್ಯಕರ. ಯಾವಾಗ ಗರ್ಭಸ್ಥಿತಿಯು ನಿಶ್ಚಯವಾಗುವುದೋ ಅಂದಿನಿಂದ ಒಂದು ವರ್ಷದವರೆಗೆ ಸಮಾಗಮವಾಗಲೇಬಾರದು. ಇದರಿಂದ ಸತ್ಸಂತಾನವಾಗುವುದು. ವೈದಿಕ ವಿಚಾರಧಾರೆಯಲ್ಲಿ ಗರ್ಭಾಧಾನ ಸಂಸ್ಕಾರವನ್ನು ಪವಿತ್ರ ಸಂಸ್ಕಾರವೆಂದು ಪರಿಗಣಿಸಲಾಗಿದೆ. ಬೃಹದಾರಣ್ಯಕ ಉಪನಿಷತ್ತಿನಲ್ಲಿ ಈ ಸಂಸ್ಕಾರದ ಉಲ್ಲೇಖವಿದೆ.

ಪತಿ-ಪತ್ನಿಯರ ಸಮಾಗಮದಿಂದ ಪುತ್ರ ಅಥವಾ ಪುತ್ರಿಯನ್ನು ಪಡೆಯಬಹುದು ಎಂಬುದನ್ನು ಮನುಸ್ಮೃತಿಯ ಈ ಕೆಳಗಿನ ಶ್ಲೋಕ ತಿಳಿಸುತ್ತದೆ:

ಯುಗ್ಮಾಸು ಪುತ್ರಾಃ ಜಾಯಂತೇ ಸ್ತ್ರೀಯೋಽಯುಗ್ಮಾಸು ರಾತ್ರಿಷು ।

ತಸ್ಮಾತ್ ಯುಗ್ಮಾಸು ಪುತ್ರಾರ್ಥೀ ಸಂವಿಶೇದಾರ್ತವೇ ಸ್ತ್ರೀಯಾ ॥

"ಸಮಸಂಖ್ಯೆಯ ರಾತ್ರಿಗಳಲ್ಲಿ ಗರ್ಭಾಧಾನವಾದಲ್ಲಿ ಪುತ್ರನೂ, ಬೆಸಸಂಖ್ಯೆಯ ರಾತ್ರಿಯಲ್ಲಿ ಪುತ್ರಿಯೂ ಜನಿಸಬಹುದು".

ಋತುಸ್ರಾವದ ದಿನದಿಂದ ಆರನೇ, ಎಂಟನೇ, ಹತ್ತನೇ, ಹನ್ನೆರಡನೇ, ಹದಿನಾಲ್ಕನೇ ಮತ್ತು ಹದಿನಾರನೇ ರಾತ್ರಿಗಳಲ್ಲಿ ಗರ್ಭಾಧಾನವಾದಲ್ಲಿ ಪುತ್ರನೆಂದೂ, ಐದನೇ, ಏಳನೇ, ಒಂಭತ್ತನೇ ಮತ್ತು ಹದಿನೈದನೇ ರಾತ್ರಿಗಳಲ್ಲಿ ಪುತ್ರಿ ಎಂದೂ ಸಂಸ್ಕಾರ ವಿಧಿಗಳಲ್ಲಿ ವಿವರಣೆ ಇದೆ.

ಗರ್ಭಾಧಾನ ಸಂಸ್ಕಾರ ಒಂದು ಧಾರ್ಮಿಕ ಸಂಸ್ಕಾರ. ಈ ಕ್ರಿಯೆ ಮನಸ್ಸಿನ ಪರಿಶುದ್ಧತೆ, ಪತಿ - ಪತ್ನಿಯರ ಮನೋಬಯಕೆಗಳು ಒಂದೇ ಆಗಿದ್ದರೆ, ಉತ್ತಮ ಸಂಸ್ಕಾರವುಳ್ಳ ಮಗುವೇ ಜನಿಸುತ್ತದೆ ಎಂಬುದು ಸ್ಮೃತಿಗಳ ಅಭಿಪ್ರಾಯ.

ಉತ್ತಮ ಸಂತಾನ ಔಷಧಿ ಹಾಗೂ ಆಹಾರದ ಮೇಲೆ ನಿರ್ಭರವಾಗಿದೆ. "**ಆಹಾರ ಶುದ್ಧೌ ಸತ್ವಶುದ್ಧಿಃ ಸತ್ಯಶುದ್ಧೌ ಧೃವಾ ಸ್ಮೃತಿಃ**" - ಇದು ಛಾಂದೋಗ್ಯ ಉಪನಿಷತ್ತಿನ ವಚನ [೭.೨೬.೨]

ಸತ್ಸಂತಾನವು ಉಂಟಾಗಲಿ ಎಂದು ಭಗವಂತನನ್ನು ಪ್ರಾರ್ಥಿಸುವ ಮಂತ್ರವನ್ನು ಯಜುರ್ವೇದದಲ್ಲಿ ನೋಡಬಹುದು.

ಓಂ ಆದಿತ್ಯಂ ಗರ್ಭಂ ಪಯಸಾ ಸಮಙ್ಗ್ಧಿ ಸಹಸ್ರಸ್ಯ ಪ್ರತಿಮಾಂ ವಿಶ್ವರೂಪಮ್ । ಪರಿವೃಙ್ಧಿ ಹರಸಾ ಮಾಭಿಮಂಸ್ಥಾಃ ಶತಾಯುಷಂ ಕೃಣುಹಿ ಚೀಯಮಾನಃ (ಯಜು. ೧೩.೪೧)

"ಹೇ ಈಶ್ವರ ! ಅಸಂಖ್ಯ ಜೀವಕಣಗಳ ಪ್ರತಿನಿಧಿಯಾದ, ನಾನಾ ಪ್ರಕಾರದ ರೂಪಗುಣಗಳನ್ನುಳ್ಳ, ಸೂರ್ಯನಂತೆ ತೇಜಸ್ಸಿಯಾದ ಈ ಗರ್ಭವನ್ನು ಕ್ಷೀರ ಫಲಾದಿ ರಸಗಳಿಂದ ಪುಷ್ಟಿಯಾಗುವಂತೆ ಮಾಡು. ದುಷ್ಟ ಶಕ್ತಿಗಳಿಂದ ರಕ್ಷಿಸು. ಈ ಗರ್ಭದ ಉಪೇಕ್ಷೆ ಮಾಡಬೇಡ. ಪ್ರತಿದಿನ ವೃದ್ಧಿ ಹೊಂದುತ್ತಿರುವ ಗರ್ಭಸ್ಥ ಶಿಶುವು ನೂರು ವರ್ಷಗಳವರೆಗೆ ಜೀವಿಸುವಂತೆ ಮಾಡು".

ಓಂ ಸೂರ್ಯೋ ನೋ ದಿವಸ್ಪಾತು ವಾತು ಅಂತರಿಕ್ಷಾತ್।
ಅಗ್ನಿರ್ನಃ ಪಾರ್ಥಿವೇಭ್ಯಃ॥ (ಋಕ್. ೧೦.೧೫೮.೧)

ಋಗ್ವೇದದ ಈ ಮಂತ್ರದಲ್ಲಿ ಗರ್ಭಕ್ಕೆ ಎಲ್ಲ ಉಪದ್ರವಗಳಿಂದ ರಕ್ಷಣೆ ದೊರಕಲಿ ಎಂದು ಪ್ರಾರ್ಥಿಸಲಾಗಿದೆ.

ಗರ್ಭ ಸ್ಥಿರವಾದ ಮೂರನೇ ಅಥವಾ ನಾಲ್ಕನೇ ತಿಂಗಳು "**ಪುಂಸವನ**" ಸಂಸ್ಕಾರ ನೆರವೇರಿಸಬೇಕೆಂದು ಚರಕಸಂಹಿತೆಯಲ್ಲಿ ತಿಳಿಸಿದೆ. ತೃತೀಯ ಮಾಸದಲ್ಲಿ ಅಂಗ ಪ್ರತ್ಯಂಗಗಳು ರೂಪುಗೊಳ್ಳುವ ಸಮಯ. ಮಗುವಿನ ಶಾರೀರಿಕ ಹಾಗೂ ಮಾನಸಿಕ ವಿಕಾಸಕ್ಕೆ ಮಾಡಬೇಕಾದ ವಿಧಿವಿಧಾನಗಳು ಇದರ ಮುಖ್ಯ ಉದ್ದೇಶ. ತಾಯಿಯ ನಿರ್ಲಕ್ಷ್ಯದಿಂದ ಗರ್ಭಪಾತವಾಗುವುದು ಹಾಗೂ ತಾಯಿಯ ಸ್ವಾಸ್ಥ್ಯ ಕಾರಣದಿಂದ ಶಿಶುವಿನ ಬೆಳವಣಿಗೆ ಕುಂಠಿತವಾಗುವುದನ್ನು ನಿವಾರಿಸುವುದೂ ಆಗಿದೆ.

ಗರ್ಭಿಣಿ ಸ್ತ್ರೀ ಹೇಗಿರಬೇಕೆಂದು **ಚರಕ ಸಂಹಿತೆಯಲ್ಲಿ** ತಿಳಿಸಿದೆ. ಗರ್ಭವತಿ ಸ್ತ್ರೀ ಪ್ರಥಮ ದಿನದಿಂದಲೇ ಪ್ರತಿದಿನ ಸಂತೋಷದಿಂದಿರಬೇಕು. ತನಗೆ ಇಷ್ಟವಾದ ವಸ್ತ್ರಾಭರಣಗಳನ್ನು ತೊಡಬೇಕು. ವಿದ್ವಾಂಸರ, ಬ್ರಾಹ್ಮಣರ ಹಾಗೂ ಗುರುಗಳ ಸೇವೆ ಮಾಡಬೇಕು, ಕೆಟ್ಟ ದೃಶ್ಯಗಳನ್ನು ನೋಡಬಾರದು. ಗಾಬರಿ ಹುಟ್ಟಿಸುವ ಮಾತುಗಳನ್ನು ಕೇಳಬಾರದು (ಇದು ಗರ್ಭಪಾತಕ್ಕೆ ಕಾರಣವಾಗಬಹುದು), ಖಾಲಿ ಮನೆಗೆ, ಶ್ಮಶಾನ, ವಧಾಸ್ಥಾನ – ಇವುಗಳಿಗೆ ಹೋಗಬಾರದು. ಮರದ ಕೆಳಗೆ ನಿಲ್ಲುವುದು, ಕೋಪಗೊಳ್ಳುವುದು, ಕೆಟ್ಟದ್ದನ್ನು ಮಾಡುವುದು ಇವು ಸರ್ವಥಾ ವರ್ಜನೀಯ.

ಎಲ್ಲಿಯವರೆಗೆ ಶಿಶು ಮಾತೆಯ ಗರ್ಭದಲ್ಲಿರುವುದೋ ಅಲ್ಲಿಯವರೆಗೆ ಶಾಂತ ಚಿತ್ತಳಾಗಿ, ಸಾತ್ತ್ವಿಕ ಆಹಾರ ಸೇವನೆ, ಆಚಾರ – ವಿಚಾರಗಳ ಕಡೆ ಹೆಚ್ಚು ಹೆಚ್ಚು ಗಮನಹರಿಸಬೇಕು. ಶಿಶುವಿನ ಮೇಲೆ ಯಾವುದೇ ದುಷ್ಪರಿಣಾಮ ಆಗದಂತೆ ಎಚ್ಚರಿಕೆ ವಹಿಸಬೇಕು. ಈ ಕಾರಣಕ್ಕಾಗಿಯೇ ನಮ್ಮ ಪೂರ್ವಜರು, ವಿಷ್ಣು ಸಹಸ್ರನಾಮಪಾರಾಯಣ, ರಾಮಾಯಣದ ಸುಂದರಕಾಂಡ ಪಾರಾಯಣ, ಮಾಡುತ್ತಿದ್ದರು. ಸುಮಧುರವಾದ ಸಂಗೀತ, ಸಚ್ಚಿಂತನೆ, ಧ್ಯಾನ, ಮಹಾತ್ಮರ ಜೀವನ ಚರಿತ್ರೆ ಓದುವುದು ಹೀಗೆ ಮನಸ್ಸನ್ನು ನೆಮ್ಮದಿಯಾಗಿರಿಸುವ ಚಟುವಟಿಕೆಗಳಲ್ಲಿ ತೊಡಗಿಕೊಂಡಾಗ ನರಗಳ ಮೇಲೆ ಹಿತಕರವಾದ

ಪ್ರಭಾವ ಉಂಟಾಗುತ್ತದೆ. ಗರ್ಭಿಣಿ ಸ್ತ್ರೀಯರನ್ನು ಪತಿ ಮತ್ತು ಕುಟುಂಬದ ಇತರ ಸದಸ್ಯರು ಪ್ರೀತಿಯಿಂದ ನೋಡಿಕೊಳ್ಳಬೇಕಾದ್ದು ಅತ್ಯಾವಶ್ಯಕ. ಈ ಕಾರಣದಿಂದಲೇ ಗರ್ಭಿಣಿಗೆ ಹಸಿರು ಬಳೆ, ಹಸಿರು ಸೀರೆ ತಂದು ಆರತಿ ಮಾಡಿ ಅವಳು ಬಯಸಿದ ತಿಂಡಿ ಮಾಡಿಕೊಡುವುದ ಸಂಪ್ರದಾಯ. ಹಸಿರು ಬಣ್ಣ ಶಾಂತಿ ಸಮೃದ್ಧಿಯ ಸಂಕೇತ.

ಮಾತೆಯ ಮನೋವೃತ್ತಿ ಶಿಶುವಿನ ಮೇಲೆ ಪ್ರಭಾವ ಬೀರುತ್ತದೆಂಬುದನ್ನು ಭಾಗವತ, ಮಹಾಭಾರತದ ಕತೆಗಳಿಂದ ತಿಳಿಯಬಹುದು.

ಪ್ರಹ್ಲಾದನ ತಾಯಿ ಕಯಾದು ಗರ್ಭಿಣಿಯಾಗಿರುವಾಗ ಋಷಿಮುನಿಗಳ ಆಶ್ರಮದಲ್ಲಿದ್ದುಕೊಂಡು ಸಾತ್ತ್ವಿಕಆಹಾರ, ಸಚ್ಚಿಂತನೆ ನಡೆ-ನುಡಿಯಲ್ಲಿ ವಿನಯ ಇವುಗಳನ್ನು ಅನುಸರಿಸುತ್ತಿದ್ದಳಾದ್ದರಿಂದ, ಪ್ರಹ್ಲಾದನು ರಾಕ್ಷಸನ ಮನೆಯಲ್ಲಿ ಜನ್ಮ ತಾಳಿದರೂ ಭಗವದ್ಭಕ್ತನಾಗಿದ್ದನು. ಅಭಿಮನ್ಯುವು ತಾಯಿ ಸುಭದ್ರೆಯು ಗರ್ಭದಲ್ಲಿರುವಾಗಲೇ ಚಕ್ರವ್ಯೂಹವನ್ನು ಭೇದಿಸುವ ಕಲೆಯನ್ನು ಕಲಿತಿದ್ದನೆಂದು ಹೇಳಲಾಗಿದೆ.

ಸಾಧಾರಣವಾಗಿ ಎಂಟನೇ ತಿಂಗಳಲ್ಲಿ "ಸೀಮಂತೋನ್ನಯನ" ಸಂಸ್ಕಾರವನ್ನು ನೆರವೇರಿಸಬೇಕೆಂದು ಸುಶ್ರುತ ಸಂಹಿತೆ ತಿಳಿಸುತ್ತದೆ. ಏಕೆಂದರೆ ಮಗುವಿನ ಮಿದುಳಿನ ಬೆಳವಣಿಗೆ ಈ ಕಾಲದಲ್ಲಿ ಆಗುತ್ತದೆ. ಆದ್ದರಿಂದ ಮಾತೆಯು ಶಿಶುವಿನ ಕಡೆಗೆ ತನ್ನ ಮನಸ್ಸನ್ನು ಕೇಂದ್ರೀಕರಿಸಿಕೊಳ್ಳಬೇಕು. ತಾಯಿಯ ಸಂಸ್ಕಾರ ಮಗುವಿನ ಮೇಲೂ ಪ್ರಭಾವ ಬೀರುತ್ತದೆ. ಸೀಮಂತೋನ್ನಯನ ಸಂಸ್ಕಾರ ಕು ಸಂಸ್ಕಾರವನ್ನು ತೊಡೆದು ಹಾಕಿ, ಸುಸಂಸ್ಕಾರವನ್ನು ಹೆಚ್ಚಿಸುತ್ತದೆ. ಮಾತೆಯು ತನ್ನ ಹೃದಯದ ಭಾವವನ್ನು ಶಿಶುವಿನ ಹೃದಯದ ಮೇಲೆ ಬೀಳುವಂತೆ ಮಾಡುವುದೇ ಈ ಸಂಸ್ಕಾರದ ಮಹತ್ತ್ವ

ಇಂದಿನ ಮಕ್ಕಳು ರಾಕ್ಷಸೀ ಪ್ರವೃತ್ತಿಯನ್ನು ಬೆಳೆಸಿಕೊಂಡು, ಸಮಾಜ ಘಾತಕರಾಗಿ ಬೆಳೆಯುತ್ತಿರುವುದು ಗಾಬರಿಗೆ ಕಾರಣವಾಗಿದೆ. ವೇದಗಳ ಆಶಯವಾದ ಅವಿಭಕ್ತ ಕುಟುಂಬ ನಾಶವಾಗಿ, ಮಕ್ಕಳು ಸ್ವಾರ್ಥ ಭಾವನೆ ಬೆಳಸಿಕೊಳ್ಳುತ್ತಿದ್ದಾರೆ. ಇದರಿಂದ ವೃದ್ಧಾಶ್ರಮಗಳು ತಲೆಯೆತ್ತುತ್ತಿವೆ. ಶಾಲಾಕಾಲೇಜುಗಳಲ್ಲಿ ಸಾಮಾಜಿಕ, ನೈತಿಕ, ಆಧ್ಯಾತ್ಮಿಕ ಪಠ್ಯಗಳನ್ನು ಅಳವಡಿಸಿ, ಮಕ್ಕಳಲ್ಲಿ ಮಾನವೀಯ ಮೌಲ್ಯಗಳನ್ನು ಬೋಧನೆ ಮಾಡಲು ಅವಕಾಶವಿಲ್ಲ. ದೇಶವಿದೇಶಗಳ ವ್ಯವಹಾರದಿಂದ ಲೌಕಿಕ ಸುಖೋಪಭೋಗಗಳತ್ತ ಮನಸ್ಸು ಹರಿಯುತ್ತಿದೆ. ಸ್ತ್ರೀಯರು ಮಕ್ಕಳ ಲಾಲನೆ ಪೋಷಣೆಗಳಲ್ಲಿ ತಮ್ಮನ್ನು ಪೂರ್ತಿಯಾಗಿ ತೊಡಗಿಸಿಕೊಂಡಿಲ್ಲ. ನಮ್ಮ ಪೂರ್ವಿಕರು ಅನುಸರಿಸುತ್ತಿದ್ದ ವಿಧಿ ವಿಧಾನಗಳನ್ನು ಆಚರಣೆಗೆ ತಂದಾಗ ಸತ್ಸಂತಾನ, ಸಮೃದ್ಧ, ಸುಖಮಯಜೀವನವನ್ನು ಮತ್ತೆ ಕಾಣಬಹುದಾಗಿದೆ. ಆ ದಾರಿಯಲ್ಲಿ ನಾವು ಕ್ರಮಿಸುವುದೇ ನಾವು ನಮ್ಮ ಹಿರಿಯರಿಗೆ ಸಲ್ಲಿಸುವ ಕೃತಜ್ಞತೆ.

◆

ಶ್ರೀಮದ್ ಭಗವದ್ ಗೀತೆ ಒಂದು ನೋಟ

– ಶ್ರೀ ಮು.ಸಾ. ಲಕ್ಷ್ಮೀನರಸಿಂಹಭಟ್ಟ, ಕ್ಯಾತ್ಸಂದ್ರ
ನಿವೃತ್ತ ವ್ಯಾಕರಣ ಪಂಡಿತರು, ೦೮೧೬-೨೨೮೧೧೬೮

ಹಿನ್ನೆಲೆ,

ಪುರಾಣ ನ್ಯಾಯಮೀಮಾಂಸಾ ಧರ್ಮಶಾಸ್ತ್ರಾಂಗ ಮಿಶ್ರಿತಾಃ ।
ವೇದಾಃ ಸ್ಥಾನಾನಿ ವಿದ್ಯಾನಾಂ ಧರ್ಮಸ್ಯ ಚ ಚತುರ್ದಶ ॥

ಇದರಂತೆ ನಮ್ಮ ಭಾರತೀಯರ ಯಜ್ಞವಲ್ಕ್ಯ ಸ್ಮೃತಿ ೧-೩, (ಹಿಂದೂಗಳು ಎನ್ನಬಹುದು) ಎಲ್ಲ ಆಗುಹೋಗುಗಳಿಗೂ ಆಧಾರವಾಗಿ – ಪುರಾಣ (೧೮) ನ್ಯಾಯಶಾಸ್ತ್ರ ಮೀಮಾಂಸಾಶಾಸ್ತ್ರ (ಪೂರ್ವಾ ಹಾಗೂ ಉತ್ತರಮೀಮಾಂಸಾ) ಧರ್ಮಶಾಸ್ತ್ರ, ಶಿಕ್ಷಾ, ವ್ಯಾಕರಣ, ಛಂದಸ್, ನಿರುಕ್ತ, ಜ್ಯೋತಿಷ ಮತ್ತು ಕಲ್ಪ ಈ ಅಂಗಗಳಿಂದ ಕೂಡಿದ, ಋಕ್, ಯಜುಸ್, ಸಾಮ ಹಾಗೂ ಅಥರ್ವಣ ಈ ವೇದಗಳು ಹೀಗೆ ಹದಿನಾಲ್ಕು ವಿದ್ಯಾಸ್ಥಾನಗಳು ವಿಜೃಂಭಿಸುತ್ತಿವೆ.

ನಮ್ಮ ಧರ್ಮಕ್ಕೆ ಮೂಲಸ್ತಂಭಗಳೇ ಇವುಗಳು ಎಂದು ಹೇಳಿದಂತಾಯಿತು.

ಇದರಲ್ಲಿ 'ಉತ್ತರಮೀಮಾಂಸಾ' – ಎಂಬುದಕ್ಕೆ ವೇದಾಂತ ಎಂದು ಹೇಳಲಾಗಿದೆ, ಇದು ಆತ್ಮತತ್ತ್ವದ ವಿಚಾರವನ್ನು ಕೂಲಂಕಷವಾಗಿ ವಿಮರ್ಶೆಮಾಡುವುದರಿಂದ ಅಧ್ಯಾತ್ಮ ವಿದ್ಯೆಯೂ ಆಗಿದೆ.

ಈ ವೇದಾಂತಕ್ಕೆ ವೇದಗಳ ಸಾರವಾದ ಭಾಗವಾಗಿರುವ ಉಪನಿಷತ್ತುಗಳೇ ಮೊಟ್ಟಮೊದಲನೆಯ ಆಧಾರ, ನಂತರ ಶ್ರೀಮದ್ ಭಗವದ್ ಗೀತೆ, ಬಳಿಕ ವ್ಯಾಸರಚಿತ ಬ್ರಹ್ಮಸೂತ್ರಗ್ರಂಥ. ಕ್ರಮವಾಗಿ ಈ ಮೂರಕ್ಕೆ ಶ್ರುತಿಪ್ರಸ್ಥಾನ, ಸ್ಮೃತಿಪ್ರಸ್ಥಾನ, ಸೂತ್ರಪ್ರಸ್ಥಾನ ಎಂದು ಕರೆಯಲಾಗಿದೆ.

ವೇದವ್ಯಾಸ ರಚಿತವಾದ ಹದಿನೆಂಟು ಪರ್ವಗಳ ಮಹಾಭಾರತದಲ್ಲಿನ ಭೀಷ್ಮ ಪರ್ವದ ಇಪ್ಪತ್ತೈದನೇ ಅಧ್ಯಾಯದಿಂದ ನಲವತ್ತೆರಡನೇ ಅಧ್ಯಾಯಪೂರ್ತಿ ಹದಿನೆಂಟು ಅಧ್ಯಾಯಗಳಿಂದ ಕೂಡಿರುವ ಗ್ರಂಥವೇ "ಶ್ರೀಮದ್ ಭಗವದ್‌ಗೀತೆ" ಎಂಬುದು. ಇದು ಮಹಾಭಾರತದ ಒಂದು ಭಾಗವಾಗಿ ಹೊರಹೊಮ್ಮಿದ್ದರೂ ಮಹಾಭಾರತದಷ್ಟೇ ಅಥವ (ತನ್ನ ಅರ್ಥ ನಿರೂಪಣೆ ದೃಷ್ಟಿಯಿಂದ) ಇನ್ನೂ ಹೆಚ್ಚು ಮಹತ್ತ್ವವನ್ನು ಪಡೆದಿದೆ. ಅಷ್ಟೇ ಅಲ್ಲ ಈ ಮಹಾಭಾರತದಲ್ಲಿ ಹೇಳಹೋಗಿರುವ ಸೂಕ್ಷ್ಮತತ್ತ್ವವು ಭಗವದ್ ಗೀತೆಯಲ್ಲಿ ಪ್ರತಿಬಿಂಬಿತವಾಗಿದೆ. ಆದ್ದರಿಂದಲೇ ಇದು ಒಂದು ಸ್ವತಂತ್ರ ಗ್ರಂಥದ ರೂಪದಲ್ಲಿ ಪ್ರಸಿದ್ಧವಾಗಿದೆ. ಆಳವಾದ ಸಮುದ್ರದಲ್ಲಿರುವ ಅಮೂಲ್ಯ ರತ್ನಗಳಂತೆ ಉಜ್ವಲವಾಗಿ

ಬೆಳಗುತ್ತಿರುವ ಗಂಭೀರ ಪದ - ಪದಾರ್ಥಗಳಿಂದ ಅಲಂಕೃತವಾದ ಗೀತೆಯ ಅರ್ಥವನ್ನು ಸಂಕ್ಷಿಪ್ತವಾಗಿ ನಿರೂಪಿಸುತ್ತೇನೆ.

ಗೀತೆಯ ಒಳನೋಟ

ಭಗವದ್‌ಗೀತೆಯು ಈಗ ನಮಗೆ ದೊರಕಿರುವುದು ಪದ್ಯಗಳ ರೂಪದಲ್ಲಷ್ಟೇ. ಆದರೆ ಅರ್ಜುನ-ಶ್ರೀಕೃಷ್ಣರ ಸಂವಾದರೂಪವಾದ ಈ ಸಾಹಿತ್ಯವನ್ನು ವೇದವ್ಯಾಸ ಮಹರ್ಷಿಗಳು ಸರಳವಾಗಿ ಪದ್ಯರೂಪದಲ್ಲಿ ಮಾಡಿದ್ದಾರೆ. ಇದು ಹದಿನೆಂಟು ಅಧ್ಯಾಯಗಳ ಒಂದು ಗ್ರಂಥ. ಇದರಲ್ಲಿ ಮೊದಲನೆಯ ಆರು ಅಧ್ಯಾಯಗಳನ್ನು "ಕರ್ಮಕಾಂಡ" ವೆಂತಲೂ ಎರಡನೆಯ ಆರು ಅಧ್ಯಾಯಗಳನ್ನು "ಉಪಾಸನಾಕಾಂಡ"ವೆಂತಲೂ ಕಡೆಯ ಆದಿಅಧ್ಯಾಯಗಳನ್ನು "ಜ್ಞಾನಕಾಂಡ" ಎಂತಲೂ ನಿರ್ಣಯಿಸಲಾಗಿದೆ. ಅಂದರೆ ಆತ್ಮಜ್ಞಾನವನ್ನು ಪಡೆಯಲು 'ಕರ್ಮ' (ಕರ್ಮಯೋಗ) ಎಂಬ ಮೊದಲ ಹಂತ ಹಾಗೂ 'ಉಪಾಸನಾ' ಎಂಬ ಎರಡನೆಯ ಹಂತ ಇವುಗಳು ಆವಶ್ಯಕವೆಂದು ಅಭಿಪ್ರಾಯ. ಇದನ್ನೇ ದೃಷ್ಟಿಯಲ್ಲಿಟ್ಟುಕೊಂಡು ಈ ಕಾಂಡಗಳಲ್ಲಿ ಎಳೆ-ಎಳೆಯಾಗಿ ಹತ್ತಿ ಬಿಡಿಸಿದಂತೆ ಮನದಟ್ಟಾಗುವ ಸರಳ ರೀತಿಯಲ್ಲಿ ವಿಚಾರಗಳನ್ನು ನಿರೂಪಿಸಲಾಗಿದೆ. ಇಲ್ಲಿ ಒಂದು ವಿಶೇಷವೆಂದರೆ ಮೊದಲನೆಯ ಆರು ಅಧ್ಯಾಯಗಳ ಪೈಕಿ ಒಂದನೆಯ ಅಧ್ಯಾಯವು ಆಧ್ಯಾತ್ಮಿಕ ವಿಚಾರವನ್ನು ಹೇಳುವುದಿಲ್ಲ. ಬದಲಾಗಿ ಎರಡೂ ಕಡೆಯವರ ಯುದ್ಧ ಸಿದ್ಧತೆ ಹಾಗೂ ಅರ್ಜುನನ ಯುದ್ಧ ವಿರೋಧಿ ಅಸಹಜ ವೈರಾಗ್ಯ. ಅವನ ಶಸ್ತ್ರತ್ಯಾಗ ಇವುಗಳು ಹೇಳಲ್ಪಟ್ಟವೆ. ಮುಂದಿನ ಆಳವಾದ ಆಧ್ಯಾತ್ಮಿಕ ವಿಚಾರಕ್ಕೆ ತಳಹದಿಯಂತಿರುವ ಈ ಪ್ರಸಂಗವೂ ಗ್ರಂಥದ ಭಾಗವಾಗಿದೆ. ಎಲ್ಲ ಈ ಅಧ್ಯಾಯಗಳಿಗೆ ಅವುಗಳು ಪ್ರತಿಪಾದಿಸುವ ವಿಚಾರದ ಕೊನೆಯಲ್ಲಿ 'ಯೋಗ' ಎಂಬ ಶಬ್ದವನ್ನು ಬಳಸಿದ್ದಾರೆ. ಈ 'ಯೋಗ' ಶಬ್ದಕ್ಕೆ ಕೋಶದಲ್ಲಿ ಉಪಾಯ, ಯುಕ್ತಿ ಹಾಗೂ ಧ್ಯಾನ ಮುಂತಾದ ಅನೇಕ ಅರ್ಥಗಳನ್ನು ಹೇಳಿದ್ದಾರೆ.

ಇಲ್ಲಿ ಗೀತೆಯ ಆಧಾರದ ಮೇಲೆ - 'ಯೋಗ ಶಬ್ದಕ್ಕೆ' 'ನಿಷ್ಕಾಮಕರ್ಮ' ಎಂಬುದಾಗಿ ಮುಖ್ಯವಾಗಿ ಅರ್ಥ ಮಾಡಲಾಗಿದೆ. ಏಕೆಂದರೆ ಕ್ಷತ್ರಿಯರ ಧರ್ಮವಾದ ಯುದ್ಧದಿಂದ ವಿಮುಖವಾದ ಅರ್ಜುನನನ್ನು ಯುದ್ಧ ಮಾಡುವಂತೆ ಅಂದರೆ ಅವನ ಕರ್ತವ್ಯ - ಕರ್ಮವನ್ನು ಫಲಾಪ್ರೇಕ್ಷೆಯಿಲ್ಲದೆ ಮಾಡುವಂತೆ ಶ್ರೀಕೃಷ್ಣನು ನಾನಾ ರೀತಿಯ ಉಪಾಯಗಳಿಂದ ಪ್ರೇರೇಪಿಸಿರುವುದರಿಂದ ಯೋಗ' - ಶಬ್ದವು 'ನಿಷ್ಕಾಮ ಕರ್ಮ'ಕ್ಕೆ ಹೊಂದಿಕೊಳ್ಳುತ್ತದೆ. ಇನ್ನೂ ಇಡೀ ಗೀತೆಯ ಅರ್ಥವನ್ನು ಮನಸ್ಸಿನಲ್ಲಿ ದೃಢವಾಗಿ ನಿಲ್ಲಿಸಿಕೊಳ್ಳುವುದೂ ಒಂದು ಮುಖ್ಯ ಉದ್ದೇಶವಾಗಿದೆ. ಇದು 'ಧ್ಯಾನ' ಎಂಬ ಅರ್ಥಕ್ಕೆ 'ಯೋಗ' ಶಬ್ದವನ್ನು ಹೇಳಬಹುದು. ಆತ್ಮಸಾಧನೆಯನ್ನು ಮಾಡುವ ಸಾಧಕರಿಗೆ ಈ ಗೀತೆಯ ಪ್ರತಿಯೊಂದು ಅಂಶವು ದಾರಿದೀಪವಾಗಿರುವುದರಿಂದ 'ಉಪಾಯ' ಅಂದರೆ 'ಸಾಧನ' ಎಂದು ಅರ್ಥವನ್ನು ಹೇಳಬಹುದು.

ಅಧ್ಯಾಯಗಳ ವಿಷಯ ನಿರೂಪಣೆ

- ಎರಡನೇ ಅಧ್ಯಾಯದಲ್ಲಿ ನಾಲ್ಕು ಅಂಶಗಳು ಹೇಳಲ್ಪಟ್ಟಿವೆ.
  - ೧ ಅರ್ಜುನನಿಗೆ ಛೀಮಾರಿ ಹಾಕುವ ರೀತಿಯಲ್ಲಿ ಶ್ರೀಕೃಷ್ಣನು ಬುದ್ಧಿವಾದವನ್ನು ಹೇಳುವುದು.
  - ೨ ಆತ್ಮ ತತ್ತ್ವದ ಕಾರ್ಯವಿಧಾನ ಸ್ವರೂಪಗಳ ವಿವರಣೆ
  - ೩ ಕರ್ಮಯೋಗ ಅಥವಾ ನಿಷ್ಕಾಯ ಕರ್ಮ
  - ೪ ಜ್ಞಾನದ ಪರಾಕಾಷ್ಠಿಯಾದ ಆತ್ಮಜ್ಞಾನವನ್ನು ಪಡೆದವರ ಲಕ್ಷಣ – ನಡೆ ನುಡಿ ಇವುಗಳು ಈ ರೀತಿ ಈ ಅಧ್ಯಾಯದಲ್ಲೂ ಮುಂದಿನ ಹದಿನಾರು ಅಧ್ಯಾಯಗಳಲ್ಲಿ ವಿವರವಾಗಿ ಹೇಳಲಾಗುವ ವಿಷಯವನ್ನೇ ಸಂಕ್ಷೇಪವಾಗಿ ಹೇಳಲಾಗಿದೆ.

- ಮೂರನೇ ಅಧ್ಯಾಯದಲ್ಲಿ ಕರ್ಮಯೋಗ – ಜ್ಞಾನಯೋಗಗಳಿಗೆ ಯಾರು ಅರ್ಹರು, ಹಾಗೂ ಕರ್ಮಯೋಗದ ಪರಿಚಯ ಹೇಳಲಾಗಿದೆ.

- ನಾಲ್ಕನೇ ಅಧ್ಯಾಯದಲ್ಲಿ ಈ ಅಧ್ಯಾಯಕ್ಕೆ "ಜ್ಞಾನ – ಕರ್ಮ ಸನ್ಯಾಸಯೋಗ" ಎಂದು ಹೆಸರಿದೆಯಷ್ಟೆ. ಅದರಂತೆ ಮೊದಲು ಕರ್ಮಯೋಗವನ್ನು ವಿವರಿಸಿ ಕಡೆಗೆ 'ಜ್ಞಾನಯೋಗವೇ ಶ್ರೇಷ್ಠ ಎಂದು (ಶ್ರೇಯಾನ್ ದ್ರವ್ಯಮಯಾದ್ಯಜ್ಞಾದ್ ಜ್ಞಾನಯಜ್ಞಃ ಪರಂತಪ; ಸರ್ವಂ ಕರ್ಮಾಃ ಪಾರ್ಥ ಜ್ಞಾದೇ ಪರಿಸಮಾಪ್ಯತೇ) ಈ ಪದ್ಯದ ಮೂಲಕ ಹೇಳಿ ಅದನ್ನು ಪೂರ್ಣಗೊಳಿಸುತ್ತಾ ನಹಿ ಜ್ಞಾನೇನ ಸದೃಶಂ ಪವಿತ್ರಮಿಹ ವಿದ್ಯತೇ (೪–೩೮) ಎಂಬ ಪದ್ಯದ ಜ್ಞಾನದ ಮಹಿಮೆಯನ್ನು ಶ್ರೀಕೃಷ್ಣನು ಹೇಳಿರುತ್ತಾನೆ.

- ಐದನೆಯ ಅಧ್ಯಾಯದಲ್ಲಿ– ಇದ್ದಕ್ಕಿದ್ದಂತೆ ಅರ್ಧಮರ್ಧ ವೈರಾಗ್ಯವನ್ನು ಹೊಂದಿ ಕರ್ಮವನ್ನೇ ಮಾಡದ / ಕರ್ಮಸನ್ಯಾಸವು ಯಾತಕ್ಕೂ ಬರುವುದಿಲ್ಲ. ಇದರ ಬದಲಾಗಿ ನಿಷ್ಕಾಮ ಕರ್ಮವನ್ನೇ ಮಾಡಿ – ಮಾಡಿ ಅದರಲ್ಲಿ ಸಿದ್ಧಿ ಬಂದರೆ ಕರ್ಮ ಸನ್ಯಾಸ ತಾನೇ ತಾನಾಗಿ ಸಿದ್ಧಿಸುತ್ತದೆ ಎಂಬ ಅಂಶವು ಹೇಳಲಾಗಿದೆ. ಈ ಕರ್ಮಯೋಗವನ್ನು ಆಚರಿಸುವವರು ತನ್ನ ಅಂತಃಕರಣವನ್ನು ನಿರ್ಮಲಮಾಡಿಕೊಂಡು, ಜಿತೇಂದ್ರಿಯನಾಗಿ ಸಾಧನೆ ಮಾಡಿದರೆ ಇಂತಹ ಕರ್ಮಯೋಗಿಯು ಏನೇ ಕರ್ಮಮಾಡಿದರೂ ಅದರ ಫಲಾಫಲಗಳಿಗೆ ಅಂಟಿಕೊಳ್ಳುವುದಿಲ್ಲ ಇತ್ಯಾದಿಯಾಗಿ ಕರ್ಮಯೋಗ – ಕರ್ಮ ಸನ್ಯಾಸಗಳ ವಿಸ್ತಾರವಾದ ಪರಿಚಯ ಈ ಅಧ್ಯಾಯದಲ್ಲಿ ಹೇಳಲಾಗಿದೆ.

- ಆರನೆಯ ಅಧ್ಯಾಯ – ತನ್ನ ಮನಸ್ಸನ್ನು ಹೇಗೆ ವಶದಲ್ಲಿಟ್ಟುಕೊಳ್ಳಬೇಕು. ಇದಕ್ಕಾಗಿ ಏನು ಮಾಡಬೇಕು ಎಂಬ ಬಗ್ಗೆ "ಯಮ – ನಿಯಮ – ಆಸನ ಅಷ್ಟಾಂಗಯೋಗ"

ಎಂಬುದಾಗಿ ಯೋಗಶಾಸ್ತ್ರದಲ್ಲಿ ಹೇಳಿರುವ ವಿಧಾನವನ್ನೇ ಸರಳವಾಗಿ ನಿರೂಪಿಸಲಾಗಿದೆ. ಇಲ್ಲಿಗೆ "ಕರ್ಮಕಾಂಡ" ವೆಂಬ ಅಂಶವು ಮುಗಿದು ಮುಂದೆ 'ಉಪಾಸನಾಕಾಂಡವು' ಬರುತ್ತದೆ.

- ಏಳನೆಯ ಅಧ್ಯಾಯದಲ್ಲಿ ದೈವ ಭಕ್ತಿಯ ರೂಪರೇಖೆಗಳು ವಿವರಿಸಲ್ಪಟ್ಟಿವೆ. ದೇವರನ್ನು (ಈ ಅಧ್ಯಾಯದಲ್ಲಿ ತಾನೇ ಪರಮಾತ್ಮ ಎಂದು ಶ್ರೀ ಕೃಷ್ಣನು ಹೇಳಿ ಬಿಟ್ಟಿದ್ದಾನೆ) ಭಜಿಸುವವರು ಯಾರು ಯಾರು? ಎಂಬುದಾಗಿ ೧೬ ನೇ ಈ ಪದ್ಯದಲ್ಲಿ ಸ್ಪಷ್ಟಪಡಿಸಲಾಗಿದೆ. "ಚತುರ್ವಿಧಾ ಭಜಂತೇ ಮಾಂಜನಾಃ ಸುಕೃತಿನೆಂದರ್ಜುನ. ... ಜಿಜ್ಞಾಸುರರ್ಥಾರ್ಥೀ ಜ್ಞಾನೀ ಚ ಭರತರ್ಷಭ" ಅಂದರೆ – ಶ್ರೀ ಕೃಷ್ಣ ಹೇಳಿದುದು – ಯಾರು ಯಾವುದಾದರೂ ಖಾಯಿಲೆ – ಕಸಾಲೆಗೆ ಇನ್ನಾವುದಾದರೂ ದುರಂತಕ್ಕೋ, ಕಷ್ಟಕ್ಕೋ ಸಿಕ್ಕಿದವರು ನನ್ನನ್ನು ಭಜಿಸಿ ಅದರಿಂದ ಪಾರಾಗಲು ಕೋರುತ್ತಾರೆ. ಇವರು ಮೊದಲನೆಯವರು, ಎರಡನೆಯವರು ಆತ್ಮ ತತ್ತ್ವವನ್ನು ತಿಳಿಯಲು ತೀವ್ರವಾದ ಅಪೇಕ್ಷೆಯುಳ್ಳವರು. ಮೂರನೆಯವರು ಹಣ, ಐಶ್ವರ್ಯಗಳನ್ನು ಬಯಸುವವರು, ನಾಲ್ಕನೆಯವರು – ಜ್ಞಾನಿಗಳು. ಹೀಗೆ "ಸಂಕಟಬಂದಾಗ – ವೆಂಕಟರಮಣ" ಎಂಬಂತೆ ನಾನಾ ರೀತಿ ಆಸೆ–ಆಕಾಂಕ್ಷೆ, ಕಷ್ಟಕಾರ್ಪಣ್ಯವುಳ್ಳವರು ದೇವರನ್ನು ಭಜಿಸುತ್ತಾರೆ ಎಂದು ಹೇಳಲಾಗಿದೆ. ಆದರೆ ಮೇಲಿನ ಮೊದಲು ಮೂವರಿಗಿಂತ ನಾಲ್ಕನೆಯವನಾದ ಜ್ಞಾನಿಯೇ ಉತ್ತಮ ಭಕ್ತ. ಅವನು ಏನನ್ನೂ ಬಯಸದೆ ಭಗವಂತನನ್ನು ಭಜಿಸುವವನಾದ್ದರಿಂದ ಇವನೇ ಅತ್ಯಂತ ಶ್ರೇಷ್ಠ ಭಕ್ತ ಎಂದು ಶ್ರೀಕೃಷ್ಣನು ಅಪ್ಪಣೆ ಕೊಡಿಸಿದ್ದಾನೆ. ಹೀಗೆ ಈ ಅಧ್ಯಾಯದಲ್ಲಿ ಭಕಿಯ/ಉಪಾಸನೆಯ ಪೀಠಿಕೆ ಬರುತ್ತದೆ.

- ಎಂಟನೇ ಅಧ್ಯಾಯದಲ್ಲಿ – 'ಅಕ್ಷರ ಬ್ರಹ್ಮಯೋಗ' ಎಂಬ ಹೆಸರಿಗೆ ಅನುಗುಣವಾಗಿ ಬ್ರಹ್ಮಪದದಿಂದ ಹೇಳಲಾಗುವ ಪರಮಾತ್ಮನ ನಾನಾ ರೀತಿಯ ಉಪಾಸನೆಯು ಹೇಳಲಾಗಿದೆ. ಕೊನೆಗೆ ಯೋಗಿಗಳು ದೇಹತ್ಯಾಗ ಮಾಡಿದಾಗ ಯಾವ ಯಾವ ಸಮಯವಿರುವುದೋ ಅದಕ್ಕೆ ತಕ್ಕಂತೆ ಅವರು ಸ್ಥಾನವನ್ನು ಪಡೆಯುತ್ತಾರೆ' ಎಂದು ಹೇಳಲಾಗಿದೆ.

- ಒಂಭತ್ತನೆಯ ಅಧ್ಯಾಯದಲ್ಲಿ ಶ್ರೀಕೃಷ್ಣನು ತನ್ನಿಂದಲೇ ಎಲ್ಲ ಪ್ರಪಂಚವೂ ಸ್ಥಿತಿಯನ್ನು ಹೊಂದಿದೆ. ಪ್ರಕೃತಿಯ ಆಧಾರದಿಂದ ಸಮಸ್ತ ಚರಾಚರ ವಸ್ತುಗಳನ್ನು ಸೃಷ್ಟಿಮಾಡುತ್ತೇನೆ. ಕಲ್ಪಾಂತ್ಯದಲ್ಲಿ ಅವುಗಳನ್ನೆಲ್ಲ ನನ್ನ ಪ್ರಕೃತಿಯಲ್ಲಿ ಲೀನಗೊಳಿಸುತ್ತೇನೆ. ಹೀಗೆ ತನ್ನ ಅದ್ಭುತ ಅಚಿಂತ್ಯ ಸ್ವರೂಪವನ್ನು ಶ್ರೀಕೃಷ್ಣನು ಹೇಳಿರುತ್ತಾನೆ.

- ಹತ್ತನೆಯ ಅಧ್ಯಾಯದಲ್ಲಿ – ಪರಮಾತ್ಮನು (ಶ್ರೀಕೃಷ್ಣನು) ಜಗತ್ತಿನ ಯಾವ ಯಾವ ವಸ್ತು ಅಥವಾ ಜೀವಿಗಳಲ್ಲಿ ಅಡಗಿರುತ್ತಾನೆ ಎಂಬುದಾಗಿ ವಿಸ್ತಾರವಾಗಿ ಹೇಳಲಾಗಿದೆ.

- ಹನ್ನೊಂದನೆಯ ಅಧ್ಯಾಯದಲ್ಲಿ – ಇದರಲ್ಲಿ ಅರ್ಜುನನ ಕೋರಿಕೆಯಂತೆ ಅವನಿಗೆ ಶ್ರೀಕೃಷ್ಣನು ತನ್ನ ವಿಶ್ವರೂಪದರ್ಶನವನ್ನು ಮಾಡಿಸುತ್ತಾನೆ.

- ಹನ್ನೆರಡನೆಯ ಅಧ್ಯಾಯದಲ್ಲಿ – ಈ ಅಧ್ಯಾಯವು ಭಕ್ತಿಯೋಗ ಎಂಬ ಹೆಸರಿನಿಂದಿದೆಯಷ್ಟೆ । ಈ ಅಧ್ಯಾಯಕ್ಕೆ ಉಪಾಸನಾಕಾಂಡವು ಮುಗಿಯುವುದರಿಂದ ಇದರಲ್ಲಿ ಸಾಕಾರ – ನಿರಾಕಾರ ಈ ಎರಡು ರೀತಿಯ ಭಕ್ತಿ ಭಾವವನ್ನು ಹೇಳಲಾಗಿದೆ. ಶ್ರೀಕೃಷ್ಣನ ಅಭಿಪ್ರಾಯದಂತೆ ನಿರಾಕಾರ ಭಕ್ತಿ ಬಹಳ ಕಠಿಣವಾದ್ದರಿಂದ ಸಾಕಾರ ಭಕ್ತಿಯೇ ಉತ್ತಮ ಎನ್ನಲಾಗಿದೆ. ಆದ್ದರಿಂದಲೇ ಸಾಮಾನ್ಯ ಜನರಿಗೆ ವಿಗ್ರಹಾರಾಧನೆಯ ನಾನಾ ಪ್ರಕಾರಗಳು ಶಾಸ್ತ್ರಗಳಿಂದ ನಿರೂಪಿಸಲ್ಪಟ್ಟು ಈಗ ಚಾಲ್ತಿಯಲ್ಲಿದೆ.

- ಹದಿನಾರನೆಯ ಅಧ್ಯಾಯದಲ್ಲಿ ಈ ಅಧ್ಯಾಯದಿಂದ ಮೊದಲುಗೊಂಡು ಹದಿನೆಂಟನೆಯ ಅಧ್ಯಾಯ ಪೂರ್ತಿ 'ಜ್ಞಾನ ಕಾಂಡ' ಎಂದೆನಿಸುವುದರಿಂದ 'ಜ್ಞಾನ' ಎಂಬುದಕ್ಕೆ ಹೊಂದಿಕೊಳ್ಳುವ ನಾನಾ ಪ್ರಕಾರಗಳು ಹತ್ತಿಯನ್ನು ಬಿಡಿಸಿದಂತೆ ಬಿಡಿಸಿ ಬಿಡಿಸಿ ವಿವರಿಸಲಾಗಿದೆ. ಇದರಲ್ಲಿ – ಈ ಮಾನವ ಶರೀರವನ್ನು 'ಕ್ಷೇತ್ರ' ಎಂತಲೂ ಈ ಕ್ಷೇತ್ರಗಳಲ್ಲಿರುವ ಜೀವಾತ್ಮನು ನಾನೇ ಆಗಿದ್ದೇನೆ. ಎಂದು ಶ್ರೀಕೃಷ್ಣನು ಹೇಳಿ, ಬಹಳ ಗಂಭೀರವಾದ ವೇದಾಂತ ತತ್ತ್ವ ವಿಚಾರವನ್ನು ವಿವರಿಸುತ್ತಾನೆ. ಪ್ರಾಯಃ ಈ ಹಿಂದಿನ ಅಧ್ಯಾಯಗಳಲ್ಲಿ ಹೇಳಲಾಗಿರುವ ಕರ್ಮಯೋಗ – ಭಕ್ತಿಯೋಗಗಳಿಗಿಂತ ಈ ಮುಂದಿನ ಆರು ಅಧ್ಯಾಯಗಳಲ್ಲಿನ ವಿಚಾರಗಳು ಬಹಳ ಆಳವಾಗಿದ್ದು ಆತ್ಮಸಾಧಕರು ಚಿತ್ತಸ್ಥೈರ್ಯವನ್ನು ಹೊಂದಿ ಅರ್ಥಮಾಡಿಕೊಳ್ಳಬೇಕಾಗುತ್ತದೆ. ಆದರೆ ಇಲ್ಲಿ ಹೇಳಲಾಗುವ ಕೆಲವು ವಿಚಾರಗಳು ಮಾನವ ಜೀವನಕ್ಕೆ ಬಹಳ ನಿಕಟ ಸಂಬಂಧವನ್ನು ಸೂಚಿಸುತ್ತವೆಯಾದ್ದರಿಂದ ಅವುಗಳು ಭೂತ – ಭವಿಷ್ಯದ್ ವರ್ತಮಾನದಲ್ಲಿ ಮಾನವನಿಗೆ ದಿಕ್ಸೂಚಿಯಾಗಿವೆಯೆಂದು ಹೇಳಬಹುದು.

- ಹದಿನಾಲ್ಕನೇ ಅಧ್ಯಾಯದಲ್ಲಿ – ರಜಸ್ ಹಾಗೂ ತಮಸ್ ಎಂಬ ಜೀವಿಗಳ ಸ್ವಾಭಾವಿಕ ಗುಣಗಳನ್ನು ವಿಸ್ತಾರವಾಗಿ ಇಲ್ಲಿ ವಿವರಿಸಲಾಗಿದೆ.

- ಹದಿನೈದನೆಯ ಅಧ್ಯಾಯದಲ್ಲಿ – ಪರಮಾತ್ಮ ಪ್ರಪಂಚ ಇವುಗಳ ಸಂಬಂಧವನ್ನು ಅತ್ಯಂತ ರೋಚಕವಾದ ಹಾಗೂ ಕಾವ್ಯದ ರೀತಿಯಿಂದ ಹೇಳಲಾಗಿದೆ. ಈ 'ಜಗತ್ತು' ಎಂಬುದು ಒಂದು ಅಶ್ವತ್ಥವೃಕ್ಷವೂ, ಇದರ ಬೇರುಗಳು ಕೆಳಭಾಗದಲ್ಲಿರದೆ ಮೇಲ್ಭಾಗದಲ್ಲಿ ಅಂದರೆ ಪರಮಾತ್ಮನ ರೂಪದಲ್ಲಿರುವುವೆಂದೂ ಹೇಳಲಾಗಿದೆ. ಈ ಮರದ ಎಲೆಗಳು ವೇದಗಳೇ ಆಗಿರುತ್ತವೆ. ಯಾರಿಗೆ ಆತ್ಮ ತತ್ತ್ವದ ಪಿಪಾಸೆ ಇರುವುದೋ ಅಂತಹ ಸಾಧಕರು, ಸಂಪೂರ್ಣ ಸಂಸಾರ ಸುಖ – ದುಃಖಗಳನ್ನು ತ್ಯಾಗ ಮಾಡಿ ಸನ್ಯಾಸಿಗಳಾಗಿರುತ್ತಾರೋ ಅವರು ಅಹಂಕಾರ – ಮಮಕಾರ – ದಾಸರೂಪಿಯಾದ ಜಗತ್ತಿನ (ಕೆಳಗಿನ) ಬೇರನ್ನು ಕತ್ತರಿಸಿದರೆ ಅವರಿಗೆ ಆತ್ಮ ತತ್ತ್ವದ

ಅರಿವಾಗಿ ಉತ್ತಮವಾದ – ಶಾಶ್ವತವಾದ ಸ್ಥಾನವನ್ನು ಪಡೆಯುತ್ತಾರೆ ಮುಂತಾಗಿ ವಿವರಿಸಲಾಗಿದೆ.

- ಹದಿನಾರನೆಯ ಅಧ್ಯಾಯದಲ್ಲಿ – ಈ ಅಧ್ಯಾಯದಲ್ಲಿ ಹೇಳಲಾಗಿರುವ ವಿಚಾರಗಳು ಈವತ್ತಿನ ಪ್ರಪಂಚದ / ಜನತೆಯ ಜೀವನ ವಿಧಾನ, ಹಾಗೂ ನಡೆ ನುಡಿಗಳಿಗೆ ಹಿಡಿದ ದೊಡ್ಡ ಕನ್ನಡಿಯಾಗಿದೆಯೆಂದು ಧಾರಾಳವಾಗಿ ಹೇಳಬಹುದು.

ಇದಕ್ಕೆ "ದೈವಾಸುರ – ಪಂಚದ್ ವಿಭಾಗಯೋಗ" – ಎಂದು ಹೆಸರಿದೆಯಷ್ಟೆ, ಆದ್ದರಿಂದ ಇಲ್ಲಿ ದೈವೀ ಸಂಪತ್ ಅಂದರೇನು? ಆಸುರೀ (ರಾಕ್ಷಸರ) ಸಂಪತ್ ಅಂದರೇನು ಎಂಬುದಾಗಿ ವಿಶದಪಡಿಸಲಾಗಿದೆ.

ಈಗ ಆರಂಭದ ಮೂರು ಪದ್ಯಗಳನ್ನು ಬರೆದು ಅವುಗಳ ತಾತ್ಪರ್ಯವನ್ನೂ ಹಾಗೂ ಮುಂದಿನ ಪದ್ಯಗಳ ಕೇವಲ ತಾತ್ಪರ್ಯವನ್ನೂ ಬರೆಯುತ್ತೇನೆ.

ಅಭಯಂ, ಸತ್ತ್ವ ಪರಿಶುದ್ಧಿಃ ಜ್ಞಾನಯೋಗ ವ್ಯವಸ್ಥಿತಿಃ ।
ದಾನಂ ದಮಶ್ಚ ಯಜ್ಞಶ್ಚ ಸ್ವಾಧ್ಯಾಯಸ್ತಪ ಆರ್ಜವಮ್ ॥ (೧)
ಅಹಿಂಸಾ ಸತ್ಯಮಕ್ರೋಧಃ ತ್ಯಾಗಃ ಶಾಂತಿರಪೈಶುನಮ್ ।
ದಯಾ ಭೂತೇಷ್ವಲೋಲುಪ್ತ್ತ್ವಮಾರ್ದವಂ ಹ್ರೀರಚಾಪಲಮ್ ॥ (೨)
ತೇಜಃ ಕ್ಷಮಾ ಧೃತಿಃ ಶೌಚಮದ್ರೋಹೋ ನಾತಿಮಾನಿತಾ ।
ಭವಂತಿ ಸಂಪದಂ ದೈವೀಮಭಿಜಾತಸ್ಯ ಪಾಂಡವ ॥ (೩)

ತನ್ನ ಕರ್ತವ್ಯ ಪಾಲನೆಯಲ್ಲಿ ಯಾವ ರೀತಿಯಲ್ಲೂ ಭಯಪಡದೆ ಇರುವುದು, ಮನಸ್ಸಿನ ಪರಿಶುದ್ಧಿ, ಪರಮಾತ್ಮನ ಧ್ಯಾನದಲ್ಲಿ ತಲ್ಲೀನನಾಗಿರುವುದು, ಸತ್ಪಾತ್ರರಿಗೆ ದಾನ ಮಾಡುವುದು, ಇಂದ್ರಿಯಗಳನ್ನು ವಶದಲ್ಲಿಟ್ಟುಕೊಳ್ಳುವುದು, ಯಜ್ಞ – ಯಾಗಾದಿ ದೇವತಾಕಾರ್ಯ ಮಾಡುವುದು, ಸದ್ವಿದ್ಯೆಯ ಅಧ್ಯಯನ, ಶರೀರ – ವಾಕ್, ಹಾಗೂ ಮನಸ್ಸುಗಳಿಂದ ತಪಸ್ಸು ಮಾಡುವುದು, ಸರಳತೆ, ಹಿಂಸೆಯನ್ನು ಬಿಡುವುದು, ಸತ್ಯ ವಚನ, ಕೋಪಗೊಳ್ಳದಿರುವುದು, ಐಹಿಕ ಸುಖಗಳ ಸಾಕಷ್ಟು ತ್ಯಾಗ, ಮನಶ್ಶಾಂತಿ, ಚಾಡಿ ಹೇಳದಿರುವುದು, ಪ್ರಾಣಿದಯೆ, ಚಪಲತೆ ಇಲ್ಲದಿರುವುದು, ಮೃದು ಸ್ವಭಾವ (ಒರಟುತನ ಬಿಡುವುದು) ಶಾಸ್ತ್ರ ಹಾಗೂ ಲೌಕಿಕವಾಗಿ ಮಾಡಬಾರದ ಆಚರಣೆ ಮಾಡಲು ನಾಚುವುದು (ಇದನ್ನು ಮಾಡದಿರುವುದು). ಚಂಚು ಸ್ವಭಾವವನ್ನು ಬಿಡುವುದು, ತೇಜಸ್ಸು ಅಂದರೆ ಜನತೆಯ ಮೇಲೆ ತನ್ನ ಪೂರ್ಣ ಪ್ರಭಾವವನ್ನು ಬೀರುವ ಅಸಾಧಾರಣ ಶಕ್ತಿ, ಕ್ಷಮಾಗುಣ, ಧೈರ್ಯ (ದಿಟ್ಟತನ) ಶುಚಿತ್ವ, ದ್ರೋಹ ಮಾಡದಿರುವುದು, ನ್ಯಾಯ ಸಮ್ಮತವಾದ ಸ್ವಾಭಿಮಾನ ಹೊರತಾಗಿ ಅತಿ ಅಹಂಕಾರ ಪಡದಿರುವುದು. ಇವು ಯಾರಲ್ಲಿರುವುವೋ ಅಂತಹವರು ದೈವೀ ಸಂಪತ್ತಿನಿಂದ ಕೂಡಿದವರು ಎಂದಾಗುತ್ತಾರೆ. ಈ ಸಂಪತ್ತಿದ್ದರೆ ಸದ್‌ಗತಿ (ಮೋಕ್ಷ) ಪ್ರಾಪ್ತಿಯಾಗುತ್ತದೆ.

ಇನ್ನು ಆಸುರೀ (ರಾಕ್ಷಸ) ಸಂಪತ್ತನ್ನು ನೋಡೋಣ, ಡಂಭಾಚಾರ, ದರ್ಪ, ದುರಭಿಮಾನ, ನಿಷ್ಕಾರಣವಾಗಿ ಕೋಪಗೊಳ್ಳುವುದು, ಕಠೋರತೆ, ಆಳವಾದ ಶಾಸ್ತ್ರ ಹಾಗೂ ಲೋಕಾನುಭವದ ತಿಳಿವಳಿಕೆಯಿಲ್ಲದಿರುವುದು. ಇವುಗಳು ಆಸುರೀ ಸಂಪತ್ತಿನಲ್ಲಿ ಹುಟ್ಟಿದವನ ಲಕ್ಷಣವಾಗಿರುತ್ತದೆ. ದೈವೀ ಸಂಪತ್ ಮೋಕ್ಷಕ್ಕೆ ಕಾರಣವಾದರೆ ಆಸುರೀ ಸಂಪತ್ತು ಸಂಸಾರದ ಬಂಧನಕ್ಕೆ ಕಾರಣವಾಗುತ್ತದೆ.

ಈ ಎರಡು ಸಂಪತ್ತನ್ನೂ ಕೇಳಿದ ಅರ್ಜುನನಿಗೆ "ತಾನು ಈ ಎರಡರಲ್ಲಿ ಯಾವುದಕ್ಕೆ ಸೇರಿರಬಹುದು?" ಎಂದು ಸಂದೇಹ ಮೂಡುತ್ತದೆ. ಇದನ್ನರಿತ ಶ್ರೀಕೃಷ್ಣನು ತಕ್ಷಣ "ಅರ್ಜುನ ಸಂಶಯ ಪಡಬೇಡ ನೀನು ದೈವೀ ಸಂಪತ್ತಿನಲ್ಲಿ ಹುಟ್ಟಿರುವೆ" ಎಂದು ಧೈರ್ಯ ಕೊಡುತ್ತಾನೆ. ಮನುಷ್ಯ ವರ್ಗದಲ್ಲಿ ದೈವೀ, ಆಸುರೀ ಎಂಬ ಎರಡು ವಿಭಾಗವಿರುತ್ತದೆ. ಮುಂದೆ ಆಸುರೀ ಸಂಪತ್ತಿನ ವಿಸ್ತಾರವಾದ ವರ್ಣನೆ ಬರುತ್ತದೆ.

ಆಸುರೀ ಪ್ರಕೃತಿಯವರು ಶಾಸ್ತ್ರದಲ್ಲಿ "ಹೀಗೆ ಮಾಡಬೇಕು" ಎಂದು ವಿಧಿಯನ್ನೂ "ಹೀಗೆ ಮಾಡಬಾರದು" ಎಂಬ ನಿಷೇಧವನ್ನೂ ಅರಿಯರು. ಅವರಲ್ಲಿ ಶೌಚ, ಸದಾಚಾರ, ಸತ್ಯ ಇವುಗಳ ಗಂಧವೂ ಇರುವುದಿಲ್ಲ – ಅವರು ಹೇಳುವುದೇನೆಂದರೆ ಯಾವ ಪರಮಾತ್ಮನೂ / ದೇವರೂ ಇಲ್ಲ. ಜಗತ್ತಿನ ಸೃಷ್ಟಿಯು ಸ್ತ್ರೀ ಪುರುಷರ ಪರಸ್ಪರ ಸೇರುವಿಕೆಯಿಂದ ಆಗುತ್ತದೆ ಅಷ್ಟೆ. ಈ ಸೇರುವಿಕೆಗೆ 'ಕಾಮ'ವೇ ಕಾರಣ. ಈ ಅಭಿಪ್ರಾಯವನ್ನು ಹೊಂದಿದ ಇವರು ಕ್ರೂರಕಾರ್ಯಗಳನ್ನು ಮಾಡುತ್ತಾ ಜಗತ್ತಿಗೆ ಕಾರಣರಾಗುತ್ತಾರೆ. ದಂಭಾಚಾರ, ಮದ, ದುರಹಂಕಾರಗಳಿಂದ ತುಂಬಿದವರಾಗಿ ಅಜ್ಞಾನ ವಶದಿಂದ ಮಿಥ್ಯಾ ಸಿದ್ಧಾಂತವನ್ನು ಪ್ರತಿಪಾದಿಸುತ್ತಾ ಈ ಲೋಕದಲ್ಲಿ ವ್ಯವಹಾರ ಮಾಡುತ್ತಾರೆ. ಬೆಟ್ಟದಷ್ಟು ಆಸೆಯೆಂಬ ಪಾಶಕ್ಕೆ ಸಿಕ್ಕಿ ಕಾಮ ಕ್ರೋಧಗಳಲ್ಲಿ ಅದ್ದಿ ಮುಳುಗುತ್ತಾ ಅನ್ಯಾಯಮಾರ್ಗ (ಭ್ರಷ್ಟಾಚಾರ]ದಿಂದ ಹಣವನ್ನು ಗಳಿಸಿ ತಮ್ಮ ಅನೈತಿಕ ಕಾಮ–ಭೋಗಗಳನ್ನು ಅನುಭವಿಸಲು ತವಕ ಪಡುತ್ತಿರುತ್ತಾನೆ. ಅವರ ಅನಿಸಿಕೆ ಹೀಗಿದೆ "ನಾನು ಈ ಸಂಪತ್ತನ್ನು ಗಳಿಸಿದೆ. ಇದರಿಂದ ನನ್ನ ಇಚ್ಛೆಯನ್ನು ಈಡೇರಿಸಿಕೊಳ್ಳುತ್ತೇನೆ. ನನ್ನ ಬಳಿ ಬೇಕಾದಷ್ಟು ಹಣವಿದೆ. ಅಷ್ಟೇ ಅಲ್ಲ ಇದೇ ರೀತಿ ಇನ್ನೂ ಹೆಚ್ಚು ಹೆಚ್ಚು ಹಣವನ್ನು ಗಳಿಸುತ್ತೇನೆ. ನನ್ನ ಈ ಕಾರ್ಯಕ್ಕೆ ಅಡ್ಡಿ ಮಾಡಿದ ಶತ್ರುವನ್ನು ಯಮಲೋಕಕ್ಕೆ ಕಳುಹಿಸಿದ್ದೇನೆ. ಇನ್ನು ಎಷ್ಟು ಜನ ಬಂದು ನನಗೆ ಅಡ್ಡಗಾಲು ಹಾಕಿದರೆ ಅವರನ್ನೂ ಮುಗಿಸುತ್ತೇನೆ. ನಾನೇ ಎಲ್ಲ ಐಶ್ವರ್ಯಕ್ಕೂ ಒಡೆಯ. ಅಷ್ಟೇತಕೆ? 'ಪರಮಾತ್ಮ' ಅನ್ನುವ ಈಶ್ವರನೂ ನಾನೇ, ಎಲ್ಲ ಸುಖಭೋಗಗಳನ್ನು ಅನುಭವಿಸುತ್ತೇನೆ ಎಲ್ಲ ಸಿದ್ಧಿಗಳೂ ನನ್ನಲ್ಲಿವೆ. ಯಾವುದೇ ಬಲದಲ್ಲಿ ನಾನು ಕಡಿಮೆಯಿಲ್ಲ. ನಾನು ಒಳ್ಳೆ ಉತ್ತಮ ಕುಲದಲ್ಲಿ ಹುಟ್ಟಿದ್ದೇನೆ. ಹೀಗಿರುವಾಗ ನನಗೆ ಸಮಾನರು ಯಾರಿದ್ದಾರೆ? ನಾನು ಬೇಕಾದಷ್ಟು ಯಜ್ಞ – ಯಾಗಗಳನ್ನು ಮಾಡುತ್ತೇನೆ. ದಾನ – ಧರ್ಮಗಳನ್ನು ಸಮೃದ್ಧಿಯಾಗಿ ಮಾಡುತ್ತೇನೆ. ಸುಖ – ಸಂತೋಷದಿಂದ ಇರುತ್ತೇನೆ". ಎಂಬ ಈ ತೆರನಾದ ಅನಿಸಿಕೆಯಿಂದ ಬೀಗುವ ಅವರು ಸ್ಥಿರವಾದ ಬುದ್ಧಿಯಿಲ್ಲದೆ ಅಜ್ಞಾನದ ಮೋಹಕ್ಕೆ ಸಿಕ್ಕಿ ಯಾವ ನೀತಿಯುತವಾದ ನಡೆ–

ನುಡಿಯನ್ನು ಹೊಂದದೆ. ಕಾಮ – ಭೋಗಗಳಲ್ಲೇ ಅದ್ದಿ ಮುಳುಗುತ್ತಾ ಅಶುಚಿಯಾದ ನರಕದಲ್ಲಿ ಬೀಳುತ್ತಾರೆ.

ಇಷ್ಟೇ ಅಲ್ಲದೆ, ಅಹಂಕಾರ, ಬಲ, ದರ್ಪ, ಕಾಮ – ಕ್ರೋಧ ಇವುಗಳಿಂದ ಕೂಡಿದವರಾಗಿ ಎಲ್ಲ ಜೀವಿಗಳಲ್ಲಿಯೂ ನೆಲೆಸಿರುವ ಹಾಗೂ ತಮ್ಮ ಶರೀರದಲ್ಲೂ ಇರುವ ಜೀವಾತ್ಮ ರೂಪವಾದ ನನ್ನನ್ನು (ಶ್ರೀ ಕೃಷ್ಣನಲ್ಲಿ) ಅಸೂಯೆ ಪಡುತ್ತಾ ಸಾಕಷ್ಟು ದ್ವೇಷಿಸುತ್ತಾರೆ. ಇಷ್ಟೆಲ್ಲ ಆಸುರೀ ಪ್ರಕೃತಿಯವರನ್ನು ಹೇಳಿ ಶ್ರೀ ಕೃಷ್ಣನು ಹೇಳುತ್ತಾನೆ. "ನಾನು ಇಂತಹ ದ್ವೇಷಿಗಳನ್ನು ಸುಮ್ಮನೆ ಬಿಡುವುದಿಲ್ಲ. ಕ್ರೂರಿಗಳೂ, ನರಾಧಮರೂ ಆದ ಇವರನ್ನು ಪುನಃ ಪುನಃ ಆಸುರೀ ಪ್ರಕೃತಿಯವರಲ್ಲಿಯೇ ಹುಟ್ಟಿ ಹುಟ್ಟಿ ಬರುವಂತೆ ಮಾಡುತ್ತೇನೆ.

ಆದ್ದರಿಂದ ಆತ್ಮ ನಾಶಮಾಡುವ ಕಾಮ, ಕ್ರೋಧ, ಲೋಭಗಳು ನರಕಕ್ಕೆ ಹೆಬ್ಬಾಗಿಲಾಗಿವೆ. ಇವುಗಳನ್ನು ಬಿಡುವುದು ಒಳ್ಳೆಯದು. ಇವುಗಳಿಂದ ದೂರಹೋದರೆ ಪ್ರಶಸ್ತವಾದ ಆಚರಣೆಯನ್ನು ಮಾಡಿ ಪರಮಗತಿಯನ್ನು ಹೊಂದುತ್ತಾನೆ. ಶ್ರೀ ಕೃಷ್ಣನು ಇಷ್ಟು ಹೇಳಿದ ಬಳಿಕ. ಹಾಗಾದರೆ ಉತ್ತಮಗತಿಯನ್ನು ಪಡೆಯಲು ಹಾಗೂ ಈ ಲೋಕದಲ್ಲೂ ಉತ್ತಮನಾಗಿರಲು ಮಾಡಬೇಕಾದ ಕಾರ್ಯ ಯಾವುದು? ಎನ್ನುವುದಕ್ಕೆ ಉತ್ತರ ಕೊಡುತ್ತಾ. "ಶಾಸ್ತ್ರ ವಿಧಿಯನ್ನು ಅನುಸರಿಸಬೇಕು ಮನಸ್ಸಿಗೆ ಬಂದಂತೆ ಆಚರಣೆ ಮಾಡಬಾರದು. ಹೀಗೆ ಮನಬಂದಂತೆ ಮಾಡಿದರೆ ನಿಜವಾದ ಸುಖ ಹಾಗೂ ಸದ್‌ಗತಿ ಇವು ಸಿಕ್ಕುವುದಿಲ್ಲ. ಏನು ಮಾಡಬೇಕು? ಏನು ಮಾಡಬಾರದು ಎಂದು ತಿಳಿಯಲು ಶಾಸ್ತ್ರವೇ (ವೇದ, ಧರ್ಮಶಾಸ್ತ್ರ, ಪುರಾಣ ಇತ್ಯಾದಿ) ಪರಮ ಪ್ರಮಾಣವಾದ್ದರಿಂದ ಆ ಶಾಸ್ತ್ರದ ವಚನಗಳನ್ನು ತಿಳಿದುಕೊಂಡು ಮನನ ಮಾಡಿ ಕಾರ್ಯಗಳನ್ನು ಮಾಡಬೇಕು" ಎಂದು ಶ್ರೀಕೃಷ್ಣನು ಅಪ್ಪಣೆಕೊಟ್ಟಿದ್ದಾನೆ.

- ಹದಿನೇಳನೆಯ ಅಧ್ಯಾಯದಲ್ಲಿ – ಈ ಅಧ್ಯಾಯದಲ್ಲೂ ಹದಿನಾಲ್ಕನೇ ಅಧ್ಯಾಯದಲ್ಲಿ ಹೇಳಿರುವಂತೆ ಸತ್ತ್ವರಜಸ್ತಮೋ ಗುಣಗಳ ಕಾರ್ಯ–ಸ್ವಭಾವಾದಿಗಳನ್ನು ವರ್ಣಿಸಲಾಗಿದೆ. ಅಂದರೆ ಇವುಗಳನ್ನು ಶ್ರದ್ಧೆಯ ಆಧಾರದ ಮೇಲೆ ವಿವರಿಸಲಾಗಿದೆ. ಅಧ್ಯಾಯದ ಕೊನೆಯಲ್ಲಿ "ಶ್ರದ್ಧೆಯಿಂದ ಸಾತ್ತ್ವಿಕ ಕರ್ಮಗಳನ್ನು ಮಾಡಿದ ಮೇಲೆ "ಓಂ ತತ್ ಸತ್" – ಎಂದು ಹೇಳಿ ಪರಮಾತ್ಮನಿಗೆ ಅದನ್ನು ಅರ್ಪಿಸಬೇಕು. ಈ ಮೂರೂ ಪದಗಳು ಸಾಕ್ಷಾತ್ ಪರಬ್ರಹ್ಮನ ಹೆಸರುಗಳಾಗಿವೆ. ಆದ್ದರಿಂದ ಯಾವುದೇ ಕಾರ್ಯವನ್ನು ಅಶ್ರದ್ಧೆಯಿಂದ ಮಾಡಬಾರದು.

- ಹದಿನೆಂಟನೆಯ ಅಧ್ಯಾಯದಲ್ಲಿ – ಈ ಅಧ್ಯಾಯದ ವಾಕ್ಯಗಳು ಮುಗಿದ ಕೂಡಲೇ ಅರ್ಜುನನು ತನ್ನ ಭ್ರಾಂತಿಯನ್ನು ಕಳೆದುಕೊಂಡು ಶ್ರೀಕೃಷ್ಣನಿಗೆ "ಅಚ್ಯುತ ನಿನ್ನ ಕೃಪೆಯಿಂದ ನನ್ನ ಅನುಮಾನಗಳೆಲ್ಲವೂ ಬಗಹರಿದವು. ಈಗ ಯಾವ ಸಂಶಯವೂ ಇಲ್ಲದೆ ಸ್ಥಿರಬುದ್ಧಿಯನ್ನು ಹೊಂದಿದ್ದೇನೆ. ನಿನ್ನ ಅಪ್ಪಣೆಯನ್ನು (ಯುದ್ಧ

ಕಾರ್ಯವನ್ನು) ಆಚರಿಸುತ್ತೇನೆ ಎಂದು ಹೇಳುತ್ತಾನೆ ಆದ್ದರಿಂದ ಈ ಅಧ್ಯಾಯವು ಬಹಳ ಮಹತ್ತ್ವವನ್ನು ಪಡೆದಿದೆಯೆಂದು ಹೇಳಬಹುದು. ಏಕೆಂದರೆ ಈ ಹಿಂದಿನ ಅಧ್ಯಾಯಗಳಲ್ಲಿ ಶ್ರೀಕೃಷ್ಣನು ಏನು ಹೇಳಿದರೂ ಅದಕ್ಕೆ ಪುನಃ ಪುನಃ ಪ್ರಶ್ನೆ ಮಾಡುತ್ತಿರುತ್ತಾನೆ. ಇಲ್ಲಿಯಾದರೋ ಪ್ರಶ್ನೆಯನ್ನೇ ಮಾಡದೆ ಶ್ರೀ ಕೃಷ್ಣನ ಉಪದೇಶಾಮೃತವನ್ನು (ಪಾನಮಾಡಿ) ಒಪ್ಪಿಕೊಂಡು ಯುದ್ಧಕ್ಕೆ ಸಿದ್ಧನಾಗುತ್ತಾನೆ.

ಈ ಹಿಂದೆ ಹದಿನಾರನೇ ಅಧ್ಯಾಯದಲ್ಲಿ ದೈವೀ ಸಂಪತ್‌ನ ಗುಣಗಳನ್ನು ವರ್ಣಿಸುವಾಗ 'ತ್ಯಾಗ' ಎಂಬ ಪದ ಬಂದಿದೆಯಷ್ಟೆ ಇದರ ಹಾಗೂ ಹಿಂದೆ ಅನೇಕ ಬಾರಿ ಬಂದಿರುವ 'ಸನ್ಯಾಸ' ಪದಕ್ಕೂ ನಿಷ್ಕೃಷ್ಟವಾದ ಅರ್ಥವೇನು? ಎಂದು ಅರ್ಜುನನು (ಮೊದಲನೆಯ ಪದ್ಯದಲ್ಲಿ) ಕೇಳುತ್ತಾನೆ. ಶ್ರೀ ಕೃಷ್ಣನು ಅದಕ್ಕೆ ಉತ್ತರವನ್ನು ವಿಸ್ತಾರವಾಗಿ ಸತ್ತ್ವ, ರಜಸ್ ಹಾಗೂ ತಮಸ್ ಈ ಮೂರು ಗುಣಗಳ ಆಧಾರದಿಂದ ಅವುಗಳ ಶ್ರೇಷ್ಠತೆ ನಿಕೃಷ್ಟತೆಗಳನ್ನು ಹೇಳುತ್ತಾನೆ. ಇದೇ ಪ್ರಸಂಗದಲ್ಲಿ, ಜ್ಞಾನ, ಕರ್ಮ, ಕರ್ತಾ, ಬುದ್ಧಿ, ಧೃತಿ, ಸುಖ ಇವುಗಳಿಗೂ ಮೂರು ಗುಣಗಳ ಆಧಾರದಿಂದ ಉತ್ಕೃಷ್ಟ ನಿಕೃಷ್ಟ ರೂಪವನ್ನು ವರ್ಣಿಸುತ್ತಾನೆ. ಇನ್ನು ಅನೇಕ ಉಪದೇಶ ವಾಕ್ಯಗಳನ್ನು ಹೇಳುತ್ತಾ. ಶಾಸ್ತ್ರಗಳಲ್ಲಿ ಯಾರು ಯಾರಿಗೆ ಎಂತೆಂತಹ ಕರ್ತವ್ಯಗಳು ಹೇಳಲ್ಪಟ್ಟಿವೆಯೋ ಅವುಗಳು ಅವರವರಿಗೆ "ಸ್ವಧರ್ಮ" ವೆನಿಸುತ್ತದೆ. ಯಾವುದೇ ಕಾರಣದಿಂದ ಈ ಸ್ವಧರ್ಮವನ್ನು ಬಿಡಬಾರದು ಹಾಗೂ ತಮ್ಮ ಧರ್ಮಕ್ಕಿಂತ ಮತ್ತೊಬ್ಬರ ಧರ್ಮವು ಚೆನ್ನಾಗಿದೆಯೆಂದು ಭಾವಿಸಿ ಆ ಧರ್ಮವನ್ನು ಖಂಡಿತ ಮಾಡಬಾರದು ಎಂದು ನಿಷ್ಕೃಷ್ಟವಾಗಿ ಹೇಳುತ್ತಾನೆ.

ಕಡೆಯಲ್ಲಿ "ಎಲ್ಲ ಧರ್ಮಗಳನ್ನು ಬಿಟ್ಟು ನನ್ನನ್ನೇ ಆಶ್ರಯಿಸು, ನಾನು ನಿನ್ನ ಎಲ್ಲ ಪಾಪಗಳನ್ನು ಹೋಗಲಾಡಿಸುತ್ತೇನೆ". ಎಂದು ಅರ್ಜುನನಿಗೆ ಹೇಳುವ ವಿಚಾರ ಎಷ್ಟು ಆಳವಾದ, ಅದ್ಭುತವಾದ ಅರ್ಥಗರ್ಭಿತವಾಗಿದೆಯೆಂದು ನಾವು ಊಹಿಸಬಹುದು.

ಕಡೆಯ ಈ ಪದ್ಯ ಸಂಜಯನಿಂದ ಹೇಳಲ್ಪಟ್ಟಿದೆ

ಯತ್ರ ಯೋಗೇಶ್ವರಃ ಕೃಷ್ಣೋ ಯತ್ರ ಪಾರ್ಥೋ ಧನುರ್ಧರಃ

ತತ್ರ ಶ್ರೀರ್ವಿಜಯೋ ಭೂತಿಃ ಧ್ರುವಾ ನೀತಿರ್ಮತಿರ್ಮಮ ॥

ಅಂದರೆ ಶ್ರೀ ಕೃಷ್ಣ ಹಾಗೂ ಅರ್ಜುನರಿಬ್ಬರೂ ಎಲ್ಲಿರುತ್ತಾರೋ ಅಲ್ಲಿ ವಿಜಯ, ಐಶ್ವರ್ಯ ಶಾಶ್ವತವಾಗಿ ಯಾವ ಕುಂದೂ ಇಲ್ಲದೆ ರಾರಾಜಿಸುವ 'ನೀತಿ' ತತ್ತ್ವವು ವಿಜೃಂಭಿಸುತ್ತದೆಯೆಂದು ನಾನು ಭಾವಿಸುತ್ತೇನೆ' ಎಂದು ಧೃತರಾಷ್ಟ್ರನಿಗೆ ಸಂಜಯ ಹೇಳುವುದರೊಂದಿಗೆ ಶ್ರೀಮದ್ ಭಗವದ್‌ಗೀತೆಯು ಮುಕ್ತಾಯವಾಗುತ್ತದೆ.

ಸಿಂಹಾವಲೋಕನ

ಭಗವದ್ ಗೀತೆಯಲ್ಲಿ ಬರುವ ಬಹಳ ಮುಖ್ಯವಾದ ಹಾಗೂ ಎಲ್ಲರೂ ಮನನ ಮಾಡಬೇಕಾದ ಕೆಲವು ವಿಚಾರಗಳನ್ನು ಪರಾಮರ್ಶಿಸೋಣ:

- 'ಗೀತಾ' ಎಂಬ ಪದದಲ್ಲಿರುವ ಅಕ್ಷರಗಳನ್ನು ಹಿಂದೆ ಮುಂದೆ ಮಾಡಿದರೆ "ತಾಗಿ" ಆಗುತ್ತದೆ. 'ತಾ' ಎಂಬುದಕ್ಕೆ 'ಯ' ವತ್ತನ್ನು ಕೊಟ್ಟರೆ 'ತ್ಯಾಗಿ' ಎಂದಾಗುತ್ತದೆ. ಇದೇ ಗೀತೆಯು ನಮಗೆ ಬೋಧಿಸಿರುವ ಪ್ರಮುಖ ಸಂದೇಶ" – ಎಂದು ವಿನೋಬಾ ಭಾವೆ ಹೇಳಿದ್ದಾರೆ.

- ಗೀತೆಯಲ್ಲಿ ಧೃತರಾಷ್ಟ್ರ ಹೇಳುವ ಮೊದಲನೆಯ ಶ್ಲೋಕ ಹೀಗಿದೆ :

  ಧರ್ಮಕ್ಷೇತ್ರೇ ಕುರುಕ್ಷೇತ್ರೇ ಸಮವೇತಾ ಯುಯುತ್ಸವಃ।

  ಮಾಮಕಾಃ ಪಾಂಡವಾಶ್ಚೈವ ಕಿಮಕುರ್ವತ ಸಂಜಯ ॥

  ಇದರಲ್ಲಿನ "ಧರ್ಮಕ್ಷೇತ್ರೇ" ಎಂಬ ಪದವನ್ನೂ

  ಗೀತೆಯ ಕೊನೆಯಲ್ಲಿ ಸಂಜಯ ಹೇಳುವ

  ಯತ್ರ ಯೋಗೇಶ್ವರಃ ಕೃಷ್ಣೋ ಯತ್ರ ಪಾರ್ಥೋ ಧನುರ್ಧರಃ।

  ತತ್ರ ಶ್ರೀರ್ವಿಜಯೋ ಭೂತಿರ್ಧ್ರುವಾ ನೀತಿರ್ಮತಿರ್ಮಮ ॥ ಗೀತೆ - ೧೮ - ೭೮ ॥

ಎಂಬ ಶ್ಲೋಕದ "ಮತಿರ್ಮಮ" ಎಂಬ ಎರಡು ಪದಗಳನ್ನೂ ಜೋಡಿಸಿದರೆ **"ಧರ್ಮಕ್ಷೇತ್ರೇ ಮತಿರ್ಮಮ'** ಎಂದಾಗುತ್ತದೆ. ಅಂದರೆ ಭಗವದ್ ಗೀತೆಯನ್ನು ಭಕ್ತಿಭಾವದಿಂದ ಓದುವ ಯಾರಾದರೂ ಆಗಲಿ ಅವರು ಈ ಗೀತೆಯ ಅತ್ಯಂತ ಸಾರಭೂತವಾದ ಅಂಶವನ್ನು ತಿಳಿಸುವ ಈ ಮೂರು ಪದಗಳ ವಾಕ್ಯದ ಅರ್ಥವನ್ನು – "ನನ್ನ ಮನಸ್ಸು – ಬುದ್ಧಿಗಳು ಎಂದೆಂದಿಗೂ ಧರ್ಮದಲ್ಲೇ – ಧರ್ಮದ ಆಚರಣೆಯಲ್ಲಿಯೇ – ಸ್ಥಿರವಾಗಿ ನಿಲ್ಲುವಂತೆ ಮಾಡುತ್ತೇನೆ" ಎಂದು ಧೃಡವಾಗಿ ನಿಶ್ಚಯಿಸಬೇಕು. ಅದೆಂದರೆ, ಮಹಾಭಾರತದ ಸಮಗ್ರ ಕಥಾಭಾಗದಲ್ಲಿ ಧರ್ಮ ಅಧರ್ಮಗಳ ಹೋರಾಟವೇ ಅಡಗಿದೆ. ಅದರಲ್ಲಿ ಎಷ್ಟೇ ಕಷ್ಟ ನಿಷ್ಠುರಗಳನ್ನು ಅನುಭವಿಸಿದರೂ ಪಾಂಡವರು ಧರ್ಮದ ಎಲ್ಲೆಯನ್ನು ಮೀರದೇ ನಡೆದಿದ್ದಾರೆ. ಮಹಾಭಾರತದ ಒಂದು ಭಾಗವೇ ಆಗಿರುವ ಗೀತೆಯ ಧರ್ಮಾನುಷ್ಠಾನ, ಅಧರ್ಮ ಪರಿತ್ಯಾಗವನ್ನು ಹೇಳಿರುವುದರಲ್ಲಿ ಔಚಿತ್ಯವು ಅಡಗಿದೆ.

- ಈ ಸಂಸಾರದಲ್ಲಿ ಸಿಲುಕಿರುವ ನಾವೆಲ್ಲ ಹೇಗಿರಬೇಕು ಎಂಬುದನ್ನು ಈ ವಾಕ್ಯವು ಬೋಧಿಸುತ್ತದೆ. "**ಕ್ಷುದ್ರಂ ಹೃದಯ ದೌರ್ಬಲ್ಯಂ ತ್ಯಕ್ತ್ವೋತ್ತಿಷ್ಠ... ಪರಂತಪ** ॥ (ಗೀತೆ ೨– ೩) ಎಂತಹ ಕಷ್ಟ – ಕೋಟಲೆಗಳು ಎದುರಾಗಲೀ ಮನೋ ದೌರ್ಬಲ್ಯವನ್ನು ಬಿಡಬೇಕು ॥

- **ಉದ್ಧರೇದಾತ್ಮನಾತ್ಮಾನಂ ನಾತ್ಮಾನಮವಸೀದಯೇತ್** ॥ (ಗೀತೆ ೬–೫) ಈ ಸಂಸಾರ ಸಾಗರದಿಂದ ತನ್ನನ್ನು ತಾನೇ ಉದ್ಧಾರ ಮಾಡಿಕೊಳ್ಳಬೇಕು ॥ ಹೀಗೆ ಮಾಡಿದರೆ ತನ್ನ ಆತ್ಮ ಬಂಧುವಂತೆಯೂ ಮಾಡದಿದ್ದರೆ ಶತ್ರುವಂತೆಯೂ ಆಗುತ್ತದೆ.

- **ತಸ್ಮಾತ್ ಸರ್ವೇಷು ಕಾಲೇಷು ಮಾಮನುಸ್ಮರ** (೮–೭) ಮರಣ ಕಾಲದಲ್ಲಿ ಮನಸ್ಸನ್ನು ಯಾವುದರಲ್ಲಿ ಇಟ್ಟಿರುತ್ತಾನೋ (ಅದರಲ್ಲಿರುವಂತೆ) ಅದನ್ನೇ ಮುಂದೆ ಪಡೆಯುತ್ತಾನಾದ್ದರಿಂದ "ಯಾವಾಗಲೂ ನನ್ನನ್ನೇ (ಶ್ರೀ ಕೃಷ್ಣನನ್ನೇ) ಸ್ಮರಿಸುತ್ತಿರು"

- **ಅನನ್ಯಾಶ್ಚಿಂತಯಂತೋಮಾಂ ಯೇಜನಾಃ ಪರ್ಯುಪಾಸತೇ । ತೇಷಾಂ ನಿತ್ಯಾಭಿಯುಕ್ತಾನಾಂ ಯೋಗಕ್ಷೇಮಂ ವಹಾಮ್ಯಹಂ ॥** (೯ – ೨೨) ಬೇರೆ ಯಾರನ್ನು ಚಿಂತಸದೆ ಯಾರು ನನ್ನನ್ನೇ – (ಶ್ರೀ ಕೃಷ್ಣನನ್ನೇ) ಭಜಿಸುತ್ತಾರೋ ಅವರ ಯೋಗ – ಕ್ಷೇಮಗಳನ್ನು ನಾನೇ ನಿರ್ವಹಿಸುತ್ತೇನೆ.

- **ನಿಮಿತ್ತ ಮಾತ್ರಂ ಭವ ಸವ್ಯ ಸಾಚಿನ್ ॥** (೧೧ – ೩೩) ಶ್ರೀಕೃಷ್ಣನು ಹೇಳುತ್ತಾನೆ – "ಅರ್ಜುನ ! ಯುದ್ಧದಲ್ಲಿ ಎಲ್ಲರನ್ನೂ ನಾನು ಕೊಂದಿದ್ದೇನೆ, ನೀನು ಕೇವಲ ನೆಪಮಾತ್ರವಾಗು" ಎಂದು ಇದು ನಮ್ಮೆಲ್ಲರಿಗೂ ಅನ್ವಯಿಸುತ್ತದೆ.

- **ಈಶ್ವರಃ ಸರ್ವಭೂತಾನಾಂ ಹೃದ್ದೇಶೇಽರ್ಜುನ ತಿಷ್ಠತಿ । ಭ್ರಾಮಯನ್ ಸರ್ವಭೂತಾನಿ ಯಂತ್ರಾರೂಢಾನಿ ಮಾಯಾ ॥** (೧೮ – ೬೧) **ತಮೇವ ಶರಣಂ ಗಚ್ಛ ಸರ್ವಭಾವೇನ ಭಾರತ । ತತ್ ಪ್ರಸಾದಾತ್ ಪರಾಂಶಾಂತಿಂಸ್ಥಾನಂ ಪ್ರಾಪ್ಯಸಿ ಶಾಶ್ವತಮ್ ॥** ೧೮ – ೭೨ ।

ಶ್ರೀಕೃಷ್ಣನು ಹೇಳುತ್ತಾನೆ : ಅರ್ಜುನ ! ಪರಮಾತ್ಮನು, ಎಲ್ಲ ಪ್ರಾಣಿಗಳ ಹೃದಯದಲ್ಲಿಡಗಿರುತ್ತಾನೆ. ಆ ಪ್ರಾಣಿಗಳನ್ನು ಗಿರಿಗಿಟ್ಲೆ ಚಕ್ರದಂತೆ ತಿರುಗಿಸುತ್ತಿರುತ್ತಾನೆ. ಆದ್ದರಿಂದ ಅವನನ್ನೇ ನಂಬಿ ಅವನಲ್ಲಿ ಶರಣಾಗತನಾಗು, ಅವನ ಅನುಗ್ರಹದಿಂದ ಮನಶ್ಶಾಂತಿಯನ್ನೂ ಸದ್ಗತಿಯನ್ನೂ ಪಡೆಯುವೆ" – ಇದೂ ನಮ್ಮೆಲ್ಲರಿಗೂ ಮಾಡಿರುವ ಉಪದೇಶವೇ ಆಗಿದೆ.

◆

ಜೈನಸಂಪ್ರದಾಯದ ಒಂದು ರಾಮಾಯಣ ಕಥೆ

– ಡಾ. ಟಿ.ವಿ.ವೆಂಕಟಾಚಲ ಶಾಸ್ತ್ರೀ, ಮೈಸೂರು
ನಿವೃತ್ತ ಪ್ರಾಧ್ಯಾಪಕರು, ಸಾಹಿತಿಗಳು
೦೮೨೧-೨೫೧೨೪೯೦

ಶ್ರವಣಬೆಳಗೊಳದ ಗೊಮ್ಮಟಶಿಲ್ಪದ ಪ್ರತಿಷ್ಠೆಗೆ ಕಾರಣನಾದ ಚಾವುಂಡರಾಯನು **'ತ್ರಿಷಷ್ಟಿ ಲಕ್ಷಣ ಮಹಾಪುರಾಣಂ'** ಎಂಬ ಒಂದು ಗದ್ಯ ಸಹ ರಚಿಸಿ (ಕ್ರಿ. ಶ. ೯೭೮) ಪ್ರಸಿದ್ಧನಾಗಿದ್ದಾನೆ. ಈ ಕೃತಿಯನ್ನು ರೂಢಿಯಲ್ಲಿ ಚಾವುಂಡರಾಯನ ಹೆಸರಿನಿಂದ **'ಚಾವುಂಡರಾಯ ಪುರಾಣ'** ಎಂದೇ ಸಾಹಿತ್ಯ ಚರಿತ್ರಕಾರರು ವ್ಯವಹಾರಿಸುತ್ತಾರೆ. ಜೈನಸಂಪ್ರದಾಯದ ರಾಮಾಯಣಕಥೆಯ ಮೊದಲ ನಿರೂಪಣೆ ದೊರೆಯುವುದು ಇಲ್ಲಿಯೇ.

ರಾವಣನು ಒಂದು ಸಲ, ಅಳಕಪುರ ಅರಸುದಂಪತಿಗಳಾದ ವಿದ್ಯಾಧರ – ಅಮಿತವೇಗೆಯರಿಗೆ ಮಗಳೆನಿಸಿದ ಮಣಿಮತಿ ವಿದ್ಯಾಸಾಧನೆಯಲ್ಲಿರುತ್ತಿದ್ದಾಗ ಅವಳನ್ನು ನೋಡಿ ಮೋಹಗೊಂಡನು. ಅವಳ ಸಾಧನೆಗೆ ವಿಘ್ನವನ್ನೊಡ್ಡಿದನು. ಅವಳಿಗೆ ಕೋಪ ಬಂದಿತು; ಮುಂದೆ ತಾನು ಅವನಿಗೇ ಮಗಳಾಗಿ ಜನಿಸಿ ಅವನನ್ನು ವಧಿಸುವುದಾಗಿ ತಿಳಿಸಿ, ಸಂಕಲ್ಪಮಾಡಿ ಸತ್ತಳು. ಹಾಗೆಯೇ ಕಾಲಾನಂತರದಲ್ಲಿ ಮಂಡೋದರಿಯ ಗರ್ಭದಲ್ಲಿ ಜನಿಸಿದಳು. ಆಗ ಉತ್ಪಾತಗಳಾದವು. ಹುಟ್ಟಿದ ಮಗುವಿನಿಂದ ರಾವಣನಿಗೆ ಕೇಡು ಎಂಬ ಆದೇಶವನ್ನು ತಿಳಿಯುತ್ತಲೂ ಅವನು ಮಾರೀಚನನ್ನು ಬರಮಾಡಿ ಆ ಕೂಸನ್ನು ಎಸೆದು ಬರುವಂತೆ ಆಜ್ಞೆ ಮಾಡಿದನು. ಪತ್ನಿ ಮಂಡೋದರಿ ರಾಜಾಜ್ಞೆಗೆ ಪ್ರತಿ ಹೇಳಲಾರದೆ, ಕೂಸನ್ನು ಹೇರಳವಾದ ಭೂಷಣಗಳು ಮತ್ತು ಅವತಾರಪತ್ರಗಳೊಂದಿಗೆ ಪೆಟ್ಟಿಗೆಯಲ್ಲಿರಿಸಿ ಮಾರೀಚನ ಕೈಗೆ ಒಪ್ಪಿಸಿದಳು. ಅವನು ಮಿಥಿಲೆಯ ಉದ್ಯಾನವನದ ಬಳಿಯ ಪ್ರೇತವನದಲ್ಲಿ ಮಗುವಿದ್ದ ಆ ಪೆಟ್ಟಿಗೆಯನ್ನು ಭೂಮಿಯಲ್ಲಿ ಹೂತಿಟ್ಟು ಹೊರಟುಹೋದನು.

ಇತ್ತ ಜನಕನ ಆಜ್ಞೆಯಂತೆ ಯಜ್ಞಾರ್ಥವಾಗಿ ಭೂಶೋಧನೆಯನ್ನು ಮಾಡುತ್ತಿರುವಾಗ ನೇಗಿಲಮೊನೆ ತಾಗಿ ಪೆಟ್ಟಿಗೆ ಮೇಲೆದ್ದಿತು. ಅದನ್ನು ಪರಿಚಾರಕರು ಎತ್ತಿ ತಂದು ಜನಕನಿಗೆ ತೋರಿಸಿದರು; ಅದನ್ನು ತೆಗೆದು ನೋಡಲಾಗಿ ಮಗು ಕಂಡಿತು. ಜೊತೆಗಿದ್ದ ಅವತಾರಲೇಖವನ್ನು ಓದಿಕೊಂಡು, ಪತ್ನಿ ವಸುಧಾದೇವಿಗೆ ಮಗುವನ್ನು ಒಪ್ಪಿಸಿದನು. ಮಗುವಿಗೆ ಸೀತೆಯೆಂದು ಹೆಸರು ಕೊಟ್ಟರು.

ಸೀತೆ ಬೆಳೆದು ದೊಡ್ಡವಳಾದಳು; ಸಕಲಕಲಾಪ್ರವೀಣೆಯೂ ಆದಳು. ಜನಕ ಆಚರಿಸುವ ಯಜ್ಞಪ್ರಪಂಚವನ್ನು ತಿಳಿದು, ದಶಗ್ರೀವನು ಬರುವುದರೊಳಗೆ ರಾಮನು

ಸೀತೆಯನ್ನು ವರಿಸುವುದು ಸಾಧ್ಯವಾಗುವಂತೆ, ಜ್ಯೋತಿಷಿಗಳ ವಚನದಂತೆ, ದಶರಥನು ರಾಮಲಕ್ಷ್ಮಣರನ್ನು ಚತುರಂಗಬಲದೊಂದಿಗೆ ಮಿಥಿಳೆಗೆ ಕಳಿಸಿಕೊಟ್ಟನು. ಹಾಗೆಯೇ ಜನಕ ಅವರನ್ನು ಇದಿರುಗೊಂಡು ಪಟ್ಟಣಕ್ಕೆ ಬಂದು, ರಾಮನ ರೂಪ ವಿನಯಾದಿ ಸದ್ಗುಣಗಳಿಗೆ ಮೆಚ್ಚಿ ಸೀತಾ ರಾಮರ ವಿವಾಹವನ್ನು ವೈಭವದಿಂದ ನೆರವೇರಿಸಿದನು. ಬಳಿಕ "ನಿಮ್ಮಯ್ಯನಪ್ಪೊಡೆ ನಿಮ್ಮನಿನಿತುಕಾಲಂ ಅಗಲ್ದಿರಂ; ಅದಱಿಂ ಕಾಲಹರಣಂಗೆಯ್ಯದೆ ಪೋಪುದು" ಎಂದು ಹೇಳಿ, ಅವರನ್ನು ಅಯೋಧ್ಯೆಗೆ ಕಳಿಸಿಕೊಟ್ಟನು.

ತಕ್ಕ ಕಾಲದಲ್ಲಿ ವಸಂತಮಾಸ ಕಾಲಿಟ್ಟಿತು. ರಾಮನಿಗೆ ಈಗ ಇನ್ನೂ ಎಂಟು ಜನ ಪತ್ನಿಯರೂ ಲಕ್ಷ್ಮಣನಿಗೆ ಪೃಥ್ವೀದೇವಿ ಮುಂತಾಗಿ ಹದಿನಾರು ಮಂದಿ ಪತ್ನಿಯರೂ ಆದರು. ಒಮ್ಮೆ ತಮ್ಮ ಪೂರ್ವಜನ್ಮಸ್ಥಾನವಾದ ಕಾಶೀವಿಷಯದ ವಾರಣಾಸಿ ನಗರವನ್ನು ಕಂಡುಬರಬೇಕೆಂಬ ತಮ್ಮ ಆಸೆಯನ್ನು ಇಬ್ಬರೂ ತಂದೆಗೆ ಅರಿಕೆ ಮಾಡಿದರು. ದಶರಥನಿಗೆ ಅವರನ್ನು ಬಿಟ್ಟಿರಲು ಮನಸ್ಸಾಗಲಿಲ್ಲ. ತಮ್ಮ ವಂಶದ ಭರತಾದಿಗಳೆಲ್ಲರೂ ಅಯೋಧ್ಯೆಯಲ್ಲಿಯೇ ಇದ್ದು ರಾಜ್ಯವಾಳಿದರೆಂದೂ ತಾವೂ ಅಲ್ಲಿಯೇ ಇರುವುದು ತನ್ನ ಅಪೇಕ್ಷೆಯೆಂದೂ ಅವರಿಗೆ ತಿಳಿಯ ಹೇಳಿದನು. ಆಗ ರಾಮಲಕ್ಷ್ಮಣರು, ರಾಜಪುತ್ರರಾದ ತಾವು ಉದ್ಯೋಗಶೀಲರಾಗಿರುವುದನ್ನು ಬಯಸುವುದಾಗಿ ತಿಳಿಸಿದರು. ಕಡೆಗೆ ದಶರಥ ಒಪ್ಪಿ, ರಾಮನಿಗೆ ಅಧಿರಾಜಪಟ್ಟವನ್ನೂ, ಲಕ್ಷ್ಮಣನಿಗೆ ಯುವರಾಜಪಟ್ಟವನ್ನೂ ಕಟ್ಟಿ ಅವರನ್ನು ವಾರಣಾಸಿಗೆ ಕಳಿಸಿಕೊಟ್ಟನು. ಅವರು ಅಲ್ಲಿಯೇ ನೆಲಸಿ ರಾಜ್ಯವಾಳತೊಡಗಿದರು.

ಇತ್ತ ಕಡೆ, ದಶಗ್ರೀವನಾದ ರಾವಣನು ಲಂಕೆಯಲ್ಲಿ ಆಳುತ್ತಿದ್ದು, ಒಂದು ದಿನ ನಾರದನು ಅವನ ಆಸ್ಥಾನಮಂಟಪಕ್ಕೆ ಬಂದನು. ಕುಶಲಪ್ರಶ್ನೆಯಾದ ಮೇಲೆ, ನಾರದನು ತಾನು ಸಾಕೇತದಿಂದ ಬಂದುದಾಗಿಯೂ, ಜನಕನು ಯಜ್ಞದ ನೆವದಿಂದ ಸೀತೆಯನ್ನು ರಾಮನಿಗೆ ಮದುವೆ ಮಾಡಿಕೊಟ್ಟುದಾಗಿಯೂ ಹೀಗೆ ಮಾಡಿ ರಾವಣನನ್ನು ಅಲಕ್ಷಿಸಿದುದಾಗಿಯೂ ಆಕೆಯಾದರೋ ರಾವಣನಿಗೇ ತಕ್ಕವಳೆಂಬುದಾಗಿಯೂ ಹೇಳಿ, ರಾವಣನ ಮನಸ್ಸಿನಲ್ಲಿ ಕ್ಷೋಭೆಯನ್ನುಂಟುಮಾಡಿದನು. ರಾವಣನಾದರೋ, "ಭೂಮಿಗೋಚರನಾದವನಿಗೆ ಸ್ತ್ರೀರತ್ನದಿಂದ ಏನು ಪ್ರಯೋಜನ, ನಾನು ಆ ರತ್ನವನ್ನು ಸೆಳೆದುಕೊಳ್ಳುತ್ತೇನೆ" ಎಂಬುದಾಗಿ ಆಸ್ಫೋಟಿಸಿದನು. ನಾರದನು, "ಅವರಿಗೆ ಈಗ ಅತಿವೃದ್ಧಿಯ ಕಾಲ, ಅವರೊಂದಿಗೆ ಯುದ್ಧ ನಿನಗೆ ಒಳ್ಳೆಯದಲ್ಲ" ಎಂದು ಮುಂತಾಗಿ ಆಡಿ, ಅವನು ಇನ್ನೂ ಚಡಪಡಿಸುವಂತೆ ಮಾಡಿದನು.

ರಾವಣನು ಮಾರೀಚನನ್ನು ಮಂತ್ರಶಾಲೆಗೆ ಬರಿಸಿ, ಸೀತೆಯನ್ನು ತರುವ ಉಪಾಯ ಯಾವುದೆಂದು ಪ್ರಶ್ನಿಸಿದನು. ಮಾರೀಚನು, "ನೀನು ಯೋಚಿಸಿರುವ ಕೆಲಸ ನಿನಗೆ ಪಾಪ ಅಪಕೀರ್ತಿಗಳಿಗೆ ಕಾರಣವಾಗುತ್ತದೆ; ಅದನ್ನು ಮಾಡಬೇಡ" ಎಂಬುದಾಗಿ ತಿಳಿವಳಿಕೆ ಹೇಳಿದನು. ಆದರೆ ರಾವಣ ಅದಕ್ಕೆ ಕಿವಿಗೊಡಲಿಲ್ಲ. ಆಗ ರಾವಣನನ್ನು ಕುರಿತು ಆ

ಮಾರೀಚನು, "ಅಯ್ಯ, ಸೀತೆ ನಿನ್ನಲ್ಲಿ ಅನುರಕ್ತೆಯೇ, ವಿರಕ್ತೆಯೇ ಎಂಬುದನ್ನು ದೂತರ ಮುಖದಿಂದ ಮೊದಲು ತಿಳಿದುಕೋ. ಅನುರಕ್ತೆಯೆಂದಾದರೆ ಉಪಾಯಾಂತರದಿಂದ ಇಲ್ಲವೆ ವಿರಕ್ತೆಯಾದರೆ ಪೌರುಷದಿಂದ, ತರುವುದನ್ನು ಆಮೇಲೆ ನೋಡೋಣ" ಎಂಬುದಾಗಿ ಸಲಹೆ ಮಾಡಿದನು.

ರಾವಣ ಶೂರ್ಪನಖಿಯನ್ನು ವಾರಣಾಸಿಗೆ ಕಳುಹಿಸಿದನು. ಅವಳು ವಾರಣಾಸಿಯ ಚಿತ್ರಕೂಟವೆಂಬ ಉದ್ಯಾನಕ್ಕೆ ರಾಮಲಕ್ಷ್ಮಣರು ಬಂದಿರುವುದನ್ನು ತಿಳಿದು ಅಲ್ಲಿಗೇ ಬಂದುಸೇರಿದಳು. ರಾಮ ಪತ್ನಿಯರೊಂದಿಗೆ ವನವಿಹಾರಾರ್ಥವಾಗಿ ಅಲ್ಲಿಗೆ ಬಂದಿದ್ದು ಜಲಕ್ರೀಡೆಯಲ್ಲಿರುತ್ತಿದ್ದ ವೇಳೆ, ಶೂರ್ಪನಖಿ ಲಕ್ಷ್ಮಣನನ್ನು ಕಂಡು ಅವನಲ್ಲಿ ಅನುರಕ್ತೆಯಾದಳು. ಹಾಗೆಯೇ ಅಶೋಕವೃಕ್ಷದ ಬುಡದಲ್ಲಿ ಸೀತೆಯನ್ನೂ ನೋಡಿದಳು. ಮುದುಕಿಯ ವೇಷವನ್ನು ಧರಿಸಿ ಹತ್ತಿರ ಹೋದಳು. ಅಕ್ಕಪಕ್ಕದ ಹೆಂಗಸರಿಗೆ, ತಾನು ವನಪಾಲಕಿಯೆಂದೂ ರಾಮಲಕ್ಷ್ಮಣರಂಥವರ ಸಹವಾಸದ ಸೌಖ್ಯವನ್ನು ಅವರ ಹಾಗೆಯೇ ತಾನು ಸಹ ಬಯಸುವುದಾಗಿಯೂ ಹೇಳಿದಳು. ಅವರು "ಎಳೆಯ ಮನಸ್ಸು, ಮುದಿಯಾದ ದೇಹ" ಎಂಬುದಾಗಿ ಹೇಳಿಕೊಂಡು ಚಪ್ಪಾಳೆತಟ್ಟಿ ನಕ್ಕರು. ಮುದುಕಿ ಶೂರ್ಪನಖಿ ಮತ್ತೆ ಒತ್ತಾಯ ಮಾಡಿದಳು. ಆಗ ಅವರು, "ಪ್ರಿಯನ ಸಹವಾಸವೇ ನಿನಗೆ ಜೀವನದ ಸಫಲತೆ ಎನ್ನುವುದಾದರೆ, ನಮ್ಮ ಸ್ವಾಮಿ ಅದನ್ನು ಚೆನ್ನಾಗಿಯೇ ನಡೆಸಿಕೊಡುತ್ತಾನೆ; ನಾವು ಯಾರೊಬ್ಬರೂ ಅದಕ್ಕೆ ಅಡ್ಡಬರುವುದಿಲ್ಲ; ನಮ್ಮ ಸ್ವಾಮಿಗೆ ನೀನು ಮಹಾದೇವಿಯಾಗು" ಎಂಬುದಾಗಿ ಮತ್ತೆ ಹಾಸ್ಯ ಮಾಡಿದರು. ಆಗ ಸೀತೆ ಮಾತ್ರ ಆಕೆಗೆ ಕರುಣೆದೋರಿ, ಸ್ತ್ರೀಜನ್ಮದ ಕ್ಲೇಶಗಳನ್ನೆಲ್ಲ ಅವಳಿಗೆ ವಿವರವಾಗಿ ನಿರೂಪಿಸಿದಳು. ಅದನ್ನು ಕೇಳಿದ ಮೇಲೆ ವೃದ್ಧೆಯ ವೇಷದಲ್ಲಿದ್ದ ಶೂರ್ಪನಖಿ ಸೀತೆಯು ಶೀಲವತಿಯೆಂದೂ ಅವಳ ಮನಸ್ಸು ಅಚಂಚಲವಾದುದೆಂದೂ ಚಿಂತಿಸಿ, ರಾವಣನಲ್ಲಿಗೆ ಹಿಂದಿರುಗಿದಳು. ನಡೆದುದನ್ನು ವರದಿ ಮಾಡಿ, ಸೀತೆಯನ್ನು ಒಲಿಸುವುದು ದೂತರಿಂದ ಆಗದ ಕೆಲಸವೆಂದು ತಿಳಿಸಿದಳು.

ಈಗ ರಾವಣನು ಮಾರೀಚನೊಂದಿಗೆ ತಾನೇ ಚಿತ್ರಕೂಟವನಕ್ಕೆ ಪುಷ್ಪಕವಿಮಾನವನ್ನೇರಿ ಬಂದನು. ಮಾರೀಚನು ಮಣಿಹರಿಣವಾಗಿ ಸೀತೆಯ ಮುಂದೆ ಸುಳಿದು ಅವಳನ್ನು ಆಕರ್ಷಿಸಿದನು. ಆ ವಿಚಿತ್ರವರ್ಣಮೃಗವನ್ನು ಸೀತೆ ತನಗಾಗಿ ಬಯಸಿದಳು. ರಾಮ ಅ ಮೃಗವನ್ನು ಬೆನ್ನಟ್ಟಿ ಹೋದನಾದರೂ, ಅದನ್ನು ಹಿಡಿಯಲಾಗದೆ ಮರಳಿದನು. ಆದರೆ ಅಷ್ಟರಲ್ಲಿ ರಾಮನ ವೇಷವನ್ನು ಧರಿಸಿದ ರಾವಣನು ಸೀತೆಯಲ್ಲಿಗೆ ಬಂದು, "ಜಿಂಕೆಯನ್ನು ಹಿಡಿದು ಪಟ್ಟಣಕ್ಕೆ ಕಳಿಸಿದ್ದಾಯಿತು, ಇನ್ನು ಹಿಂದಿರುಗೋಣ" ಎಂಬುದಾಗಿ ಛದ್ಮೋಕ್ತಿಗಳನ್ನಾಡಿ, ಅವಳನ್ನು ಪುಷ್ಪಕಕ್ಕೆ ಹತ್ತಿಸಿ, ತಾನು ಕುದುರೆಯೇರಿ ಬರುವವನ ಹಾಗೆ ಮಾಯೆಯಿಂದ ತೋರಿಸಿ, ಲಂಕೆಗೆ ಹೋಗಿಬಿಟ್ಟನು.

ಸೀತೆಯನ್ನು ಪಟ್ಟಣದ ಹೊರಭಾಗದಲ್ಲಿರಿಸಿ, ಈಗ ರಾವಣನು ಸ್ವಸ್ವರೂಪದಲ್ಲಿ ಅವಳಿಗೆ ಕಾಣಿಸಿಕೊಂಡನು. ಸೀತೆ ಅವನನ್ನು ನೋಡಿ ಹೆದರಿದಳು, ಮೂರ್ಛೆ ಹೋದಳು. ಆಕೆಯನ್ನು ತಾನೇ ಮುಟ್ಟಿದರೆ ತನ್ನ ಆಕಾಶಗಾಮಿನೀವಿದ್ಯೆ ಹಾಳಾಗುವುದಲ್ಲ ಎಂದು ಹೆದರಿದ ರಾವಣನು, ವಿದ್ಯಾಧರಿಯರ ಮೂಲಕ ಶೈತ್ಯೋಪಚಾರ ಮಾಡಿಸಿದನು. ಎಚ್ಚರವಾದ ಮೇಲೆ ಸೀತೆಗೆ, ತಾನಿರುವುದು ಲಂಕೆಯೆಂದೂ ರಾವಣನು ಅವಳನ್ನು ಅಲ್ಲಿಗೆ ತಂದನೆಂದೂ ಅವನ ಮಹಾದೇವಿಯಾಗಿ ಸುಖವಾಗಿರಬಹುದೆಂದೂ ಆ ವಿದ್ಯಾಧರಿಯರು ತಿಳಿಸಿದರು. ಸೀತೆಯಾದರೋ ತನ್ನ ಶೀಲವನ್ನು ಎತ್ತಿಹಿಡಿದು, ರಾಮನನ್ನು ಕಾಣುವವರೆಗೆ ತಾನು ಉಪವಾಸವಿರುವುದಾಗಿ, ಮೌನವ್ರತ ಹಿಡಿಯುವುದಾಗಿ ನಿಶ್ಚಯಮಾಡಿದಳು. ಲಂಕೆಯಲ್ಲಿ ಉತ್ಪಾತಗಳಾದುವು. ಪುರೋಹಿತಾದಿಗಳು ಸೀತೆಯನ್ನು ಒಪ್ಪಿಸಿಬಿಡಬೇಕೆಂದು ಸಲಹೆ ಮಾಡಿದರು. ಪ್ರತಿಯಾಗಿ ರಾವಣನು, ಸೀತೆಯನ್ನು, ಹಾಗೆ ತಂದುದರಿಂದ ತನ್ನ ಭಾಗ್ಯ ಬೆಳೆದಿದೆ ಎಂದನು. ಅವರು ಸುಮ್ಮನಾದರು.

ಈ ಕಡೆ, ರಾಮನು ಸೀತೆಯ ವಿಯೋಗದಿಂದ ಕಂಗೆಟ್ಟನು. ಬಿದಿರಿನ ಹೊದರಿಗೆ ಸಿಕ್ಕಿಕೊಂಡಿದ್ದ ಸೀತೆಯ ವಸ್ತ್ರದ ಸೆರಗನ್ನು ಪರಿಚಾರಕರು ತಂದು ತೋರಿಸಿದರು. ಆ ವೇಳೆಗೆ ದಶರಥನ ದೂತನು ಅವನಿರುವೆಡೆಗೆ ಬಂದು, ಅಂದು ರಾತ್ರಿ ದಶರಥನು ಕಂಡ ಕನಸುಗಳ ಫಲವನ್ನು ಪುರೋಹಿತ ವಿವರಿಸಿದ ಹಾಗೆ ಸೀತಾಪಹರಣ ಮತ್ತು ರಾಮನ ವನಭ್ರಮಣಗಳು ತಿಳಿದಿರುವುದಾಗಿ ಅರಿಕೆ ಮಾಡಿದನು. ನಡೆದುದೆಲ್ಲವೂ ಲೇಖಪತ್ರದಲ್ಲಿಯೂ ಇದ್ದಿತು. ಅದನ್ನು ಓದಿಕೊಂಡ ರಾಮನು ಸೀತೆಯನ್ನು ಕರೆತರಲು ಸಹಾಯಕರನ್ನು ಹುಡುಕಬೇಕು ಎಂದಿರುವಾಗ, ಸುಗ್ರೀವ ಮತ್ತು ಅಣುವಂತರೆಂಬ ಇಬ್ಬರು ವಿದ್ಯಾಧರರು ಬಂದು ತಮ್ಮ ಪರಿಚಯವನ್ನು ಹೇಳಿಕೊಂಡರು. ಸುಗ್ರೀವನು ತನ್ನ ಅಣ್ಣ ಬಾಲಿ ತನ್ನನ್ನು ರಾಜ್ಯದಿಂದ ಓಡಿಸಿರುವುದಾಗಿಯೂ ತಾನು ರಾಮಲಕ್ಷ್ಮಣರ ಕಾರ್ಯದಲ್ಲಿ ಸಹಾಯವಾದರೆ, ತನಗೆ ಮುನ್ನಿನ ತನ್ನ ನೆಲೆಯಲ್ಲಿ ನಿಲ್ಲುವುದು ಸಾಧ್ಯವೆಂದು ನಾರದನಿಂದ ತಿಳಿದು ಬಂದಿರುವುದಾಗಿಯೂ ಅರಿಕೆ ಮಾಡಿದನು.

ರಾಮನು ಅಣುವಂತನ ಬೇಡಿಕೆಯಂತೆ ತನ್ನ ನಾಮಮುದ್ರಿಕೆಯನ್ನು ಅವನಿಗೆ ಕೊಟ್ಟು, ಸೀತೆಯ ಶರೀರಲಕ್ಷಣಗಳು ಹೀಗೆ ಎಂಬುದಾಗಿ ಅವನಿಗೆ ಸೂಚಿಸಿ, ಅವನನ್ನು ಲಂಕೆಗೆ ಕಳುಹಿಸಿದನು. ಅಣುವನು ತನ್ನ ಗಗನಗಾಮಿನಿಯೆಂಬ ವಿದ್ಯಾಬಲದಿಂದ ಸಮುದ್ರಾಂತರದ ಲಂಕೆಯನ್ನು ಹೊಕ್ಕನು. ಕಾಮರೂಪವಿದ್ಯೆಯ ಬಲದಿಂದ ಒಂದು ದುಂಬಿಯಾಗಿ ರಾವಣನ ಸಭಾಗೃಹವನ್ನೂ ಇಂದ್ರಜಿತುವಿನ ಅಂತಃಪುರವನ್ನೂ ಪ್ರವೇಶಿಸಿದನು. ಆದರೆ ಅವನಿಗೆ ಅಲ್ಲಿ ಎಲ್ಲಿಯೂ ಸೀತೆ ಕಾಣಲಿಲ್ಲ. ಬಳಿಕ ಪಟ್ಟಣದ ಪಶ್ಚಿಮ ಗೋಪುರವನ್ನು ಏರಿಹೋಗಿ ನೋಡಲು, ಸಾರ್ವರ್ತುಕೋದ್ಯಾನದಲ್ಲಿ ಶಿಂಶುಪವೃಕ್ಷದ ಅಡಿಯಲ್ಲಿ ಸೀತೆಯಿರುವುದು ಅವನಿಗೆ ಗೋಚರವಾಯಿತು. ಅವಳಿಗೆ ತನ್ನ ಆಗಮನವನ್ನು ಸೂಚಿಸಬೇಕೆಂದು ಯೋಚಿಸುತ್ತಿರುವಾಗ, ಏಳನೆಯ ಆ ದಿನದ ರಾತ್ರಿ ರಾವಣ ಸೀತೆಯ

ಸ್ಥಿತಿಯನ್ನು ತಿಳಿದುಕೊಳ್ಳಲು ಅಂತಃಪುರದೊಂದಿಗೆ, ಅಲ್ಲಿಗೆ ಹೊರಟುಬಂದನು. ಅವನಿಗೆ ಆಕೆಯ ಪಾತಿವ್ರತ್ಯಗುಣ ಆಶ್ಚರ್ಯತಂದಿತು. ಮಂಜರಿಕೆಯೆಂಬ ದೂತಿಯನ್ನು ಅವಳಲ್ಲಿಗೆ ಕಳುಹಿಸಿದನು. ರಾವಣನಿಗೆ ಮಹಾದೇವಿಯಾಗುವಂತೆ ಅವಳು ಹೇಳಿದಳಲ್ಲದೆ, ರಾಮ ಅಲ್ಲಿಗೆ ಬಂದು ರಾವಣನನ್ನು ಗೆದ್ದು ಅವಳನ್ನು ಬಿಡಿಸಿಕೊಂಡು ಹೋಗುವುದು ಶಕ್ಯವಿಲ್ಲ ಎಂದೂ ಹೇಳಿದಳು. ಸೀತೆ ಜಗ್ಗಲಿಲ್ಲ. ರಾವಣ ಸ್ವತಃ ಸಾಮಾದಿ ಉಪಾಯಗಳಿಂದ ಬೆದರಿಸಿ ನೋಡಿದನು. ಮಂಡೋದರಿ, ಸೀತೆಯನ್ನು ಅವನು ಮುಟ್ಟದಿರುವಂತೆ ಎಚ್ಚರಿಸಿದಳು. ರಾವಣ ಮರುಮಾತು ಆಡದೆ ಮರಳಿದನು.

ಮಂಡೋದರಿ ಸೀತೆಯನ್ನು ತಾನು ಹಿಂದೆ ತೊರೆದ ಮಗಳೆಂದೇ ತಿಳಿದುಕೊಂಡಳು; ಸೀತೆಗಾದರೋ ಮಂಡೋದರಿ ತನ್ನ ತಾಯಿಗಿಂತ ಹೆಚ್ಚು ಎಂದು ಕಂಡಿತು. ಪರಸ್ಪರರು ಸುಖಾರ್ದ್ರಭಾವದಲ್ಲಿ ಕರಗಿಹೋದರು.

ಇತ್ತ ಅಣುವನು ತನ್ನ ಪ್ಲವಗವಿದ್ಯೆಯಿಂದ ಸೀತೆಯೆದುರಿನಲ್ಲಿ ಕಪಿಯಾಗಿ ಕಾಣಿಸಿಕೊಂಡನು. ರಾಮ ತಿಳಿಸಿದ್ದ ಅಭಿಜ್ಞಾನಗಳನ್ನೂ ಲೇಖಪತ್ರವನ್ನೂ ಒಪ್ಪಿಸಿದನು. ಸೀತೆಗೆ ನಂಬಿಕೆ ಹುಟ್ಟಿತು. ಅವಳು ನಡೆದುದೆಲ್ಲ ರಾವಣನ ಮಾಯಾಪ್ರಪಂಚವೆಂದು ಅರಿತಳು; ರಾಮನ ನಾಮಾಕ್ಷರವಿದ್ದ, ಶ್ರೀವತ್ಸಲಾಂಛನದಿಂದ ಕೂಡಿದ ರತ್ನದ ಉಂಗುರವನ್ನು ತನ್ನ ತಲೆಯ ಮೇಲಿಟ್ಟುಕೊಂಡು, ಲೇಖಪತ್ರದ ವಿವರಗಳನ್ನು ಓದಿಕೊಂಡಳು. ಅಣುವನು ತಾನೇ ಸೀತೆಯನ್ನು ಉದ್ದೇಶಿಸಿ, "ನಿಮ್ಮನ್ನು ಕರೆದೊಯ್ಯುವ ಸಾಮರ್ಥ್ಯ ನನಗೆ ಉಂಟು; ಆದರೆ ಅರಸನ ಅಪ್ಪಣೆಯಿಲ್ಲದ ಕಾರಣ ಹಾಗೆ ಮಾಡುವಂತಿಲ್ಲ. ಅರಸನಾದ ರಾಮನು ನನಗೆ 'ರಾವಣ ಕದ್ದು ತಂದ ಹಾಗೆ ನೀನು ತರಬೇಡ, ರಾವಣನನ್ನು ಕೊಂದು ಲಂಕೆಯನ್ನು ವಶಪಡಿಸಿಕೊಂಡು, ಸೀತೆಯನ್ನು ನಾನು ಕರೆದೊಯ್ಯುತ್ತೇನೆ' ಎಂಬುದಾಗಿ ಅಪ್ಪಣೆ ಮಾಡಿರುತ್ತಾನೆ. ಆದ್ದರಿಂದ ಚತುರಂಗಬಲ ಸಹಿತನಾಗಿ ಅರಸ ಬರುವವರೆಗೆ ಶರೀರಸ್ಥಿತಿ ನಿಮಿತ್ತವಾಗಿ ಆಹಾರಸ್ವೀಕಾರ ಮಾಡಿಕೊಂಡಿರು, ದುಃಖಪಡಬೇಡ" ಎಂಬುದಾಗಿ ವಿವರಿಸಿದನು. ಅವಳಿಂದ ಬೀಳ್ಕೊಂಡು ಮರಳಿದನು.

ಮಾರನೆಯ ಬೆಳಗ್ಗೆ ಅಣುವನು ರಾಮನನ್ನು ಕಂಡು ಲಂಕೆಯಲ್ಲಿ ನಡೆದುದನ್ನು ಅವನಿಗೆ ಅರಿಕೆ ಮಾಡಿದನು. ಸುಗ್ರೀವನಿಗೆ ಅಧಿರಾಜಪಟ್ಟವೂ ಅಣುವನಿಗೆ ಸೇನಾಪತಿ ಪಟ್ಟವೂ ಅದುವು. ಅಂಗದನು ಸಲಹೆ ಮಾಡಲಾಗಿ, ವಿಭೀಷಣನನ್ನು ಒಲಿಸಿಕೊಳ್ಳಲು ಅಣುವನು ಹೊರಟನು, ವಿಭೀಷಣನು ಅಣುವನ ಮಾತನ್ನು ಆಲಿಸಿ ಒಪ್ಪಿ ಸೀತೆಯನ್ನು ಬಿಡಿಸುವಲ್ಲಿ ನೆರವಾಗಲು ಅವನನ್ನು ರಾಣನಲ್ಲಿಗೆ ಕರೆದೊಯ್ದನು. "ತಿಳಿಯದೆ ಸೀತೆಯನ್ನು ತಂದರೆ ಏನಾಯಿತು? ಈಗಲಾದರೂ ಒಪ್ಪಿಸುವುದಾಗಲಿ. ವಿನಮಿಕುಲಕ್ಕೆ ಭೂಷಣಪ್ರಾಯವಾದ ತನ್ನ ಮಹಿಮೆಗೆ ಇದು ತಕ್ಕುದಲ್ಲ" ಎಂಬುದಾಗಿ ಕೆಲಸವನ್ನು ಸೂಚಿಸಿದ್ದ ರಾಮನ ಲೇಖಪತ್ರವನ್ನು ರಾವಣನು ಓದಿಕೊಂಡನಾದರೂ, ತನ್ನ

ಪಟ್ಟುಬಿಡುವ ಸ್ಥಿತಿಯಲ್ಲಿ ಇರಲಿಲ್ಲ. "ಸೀತೆಯನ್ನು ತಿಳಿಯದೆ ತಂದವನಲ್ಲ, ನಾನು; ಪರೀಕ್ಷಿಸಿಯೇ ತಂದೆನು. ಅವಳನ್ನು ನಾನು ಕನಸಿನಲ್ಲಾದರೂ ಇನ್ನೂ ಬಿಡುವವನಲ್ಲ. ಸಾಮರ್ಥ್ಯ ಇದ್ದವನಾದರೆ, ಅದನ್ನು ರಾಮಪ್ರದರ್ಶಿಸಲಿ" ಎಂಬುದಾಗಿ ಸೊಕ್ಕಿ ನುಡಿದನು. ಹೀಗೆಯೇ ರಾವಣನಿಗೂ ಅಣುವನಿಗೂ ಸಂವಾದ ಬೆಳೆಯಿತು.

ಈಗ ಯುದ್ಧ ಅನಿವಾರ್ಯವಾಯಿತು. ರಾಮನು ಸಸೈನ್ಯವಾಗಿ ಬಂದು ಚಿತ್ರಕೂಟೋದ್ಯಾನದಲ್ಲಿ ವರ್ಷಾಕಾಲವನ್ನು ಕಳೆದನು. ಆಗ ಬಾಲಿಯ ದೂತನು ಬಂದು, "ಸುಗ್ರೀವನೂ ಅಣುವನೂ ತುಂಬಾ ಸಾಮಾನ್ಯರು, ಅವರನ್ನು ಬಿಟ್ಟು ದೇವರು ತನ್ನ ಸಹಾಯವನ್ನು ಪಡೆದು ಚಿತ್ರಕೂಟದಲ್ಲಿರುವುದಾಗಲಿ, ತಾನೇ ಹೋಗಿ ರಾವಣನನ್ನು ಸೋಲಿಸಿ ಸೀತಾದೇವಿಯನ್ನು ಕರೆತರುವುದಾಗುತ್ತದೆ ಎಂದು ನಮ್ಮ ಸ್ವಾಮಿ ಬಾಲಿ ವಿಜ್ಞಾಪಿಸಿದ್ದಾನೆ" ಎಂಬುದಾಗಿ ಅರಿಕೆ ಮಾಡಿದನು. ಆಗ ಅಂಗದನು ನೀಡಿದ ಸಲಹೆಯಂತೆ ರಾಮನು ಬಾಲಿಯನ್ನು ಮೊದಲು ನಿಗ್ರಹಿಸಲು ಯೋಚಿಸಿದನು; ಗಂಧಗಜವನ್ನು ಒಪ್ಪಿಸುವ ನೆವ ಮಾಡಿಕೊಂಡು ಬಾಲಿಯೊಂದಿಗೆ ಕಲಹತೆಗೆದು ಖದಿರವನವನ್ನು ಹೊಕ್ಕು ಅವನ ಸೇನೆಯೊಂದಿಗೆ ಕಾದಿದನು. ಲಕ್ಷ್ಮಣನ ಬಾಣದ ಪೆಟ್ಟಿಗೆ ಬಾಲಿ ಸತ್ತನು. ಆತನ ರಾಜ್ಯವನ್ನು ಸುಗ್ರೀವನೂ ಅಣುವನೂ ಸೇರಿ ಅನುಭವಿಸುವಂತೆ ಹಂಚಿಕೊಟ್ಟು, ಲಕ್ಷ್ಮಣನು ರಾಮನನ್ನು ಬಂದು ಸೇರಿದನು. ಸ್ವಲ್ಪ ಕಾಲದ ಮೇಲೆ ರಾಮಲಕ್ಷ್ಮಣರು ಸುಗ್ರೀವಾದಿಗಳೊಂದಿಗೆ ಕಿಷ್ಕಿಂಧೆಯಿಂದ ಹೊರಟು ಲಂಕೆಯ ಕಡೆಗೆ ಪ್ರಯಾಣ ಬೆಳೆಸಿದರು. ಅವರು ಹದಿನಾಲ್ಕು ಅಕ್ಷೌಹಿಣಿ ಭೂಮಿಗೋಚರ ಬಲದಿಂದ ಸನ್ನದ್ಧರಾಗಿದ್ದರು.

ಇತ್ತ ಕುಂಭಕರ್ಣ ಇಂದಗಿಯರೂ ಪೌರರೂ ಪರಸ್ತ್ರೀಯಾದ ಸೀತೆಯನ್ನು ರಾಮನಿಗೆ ಒಪ್ಪಿಸುವುದು ಒಳ್ಳೆಯದೆಂದು ರಾವಣನಿಗೆ ಸಲಹೆ ಮಾಡಿದರು. "ಹುಲು ಮನುಷ್ಯನಿಗೆ ಹೆದರಿ ನಾನು ಸೀತೆಯನ್ನು ಒಪ್ಪಿಸುವವನಲ್ಲ" ಎಂದು ರಾವಣ ಹಠ ಹಿಡಿದನು. ಆಗ ವಿಭೀಷಣನು "ರಾಮ ಹುಲುಮನುಷ್ಯನಲ್ಲ, ಇಕ್ಷ್ವಾಕುಕುಲತಿಲಕನಾದವನು" ಎಂದು ಎಚ್ಚರಿಸಿದನು. ಆಗ ರಾವಣ ಕೆರಳಿ, "ನೀನು ಮೊದಲೊಮ್ಮೆ ರಾಮದೂತನೊಬ್ಬರ ಜೊತೆಯಲ್ಲಿ ಬಂದು ನನ್ನನ್ನು ನುಡಿಸಿದೆ. ಈಗ ಮತ್ತೆ ಈ ಸಭೆಯಲ್ಲಿ ಹೀಗೆ ಮಾತಾಡುತ್ತಿರುವೆ" ಎಂದಾಡಿದನು. ಅಲ್ಲದೆ, "ನಿನಗೆ ನಾನು ಇನ್ನೇನೂ ಮಾಡಲಾರೆ, ನಮ್ಮ ನಾಡಿನಿಂದ ಹೊರಟುಹೋಗು" ಎಂದನು. ವಿಭೀಷಣನಾದರೋ, "ಈ ಕೆಟ್ಟ ನಡತೆಯಿಂದ ಇವನು ಹಾಳಾಗುವುದು ತಪ್ಪದು" ಎಂದುಕೊಂಡು, ರಾಮನ ಪಕ್ಷವನ್ನು ಹೋಗಿ ಸೇರಿಕೊಂಡನು. ರಾಮನೂ ಅವನನ್ನು ಮನ್ನಿಸಿ, ಕೆಲವು ದಿವಸಗಳವರೆಗೆ ಸಮುದ್ರ ತಟದಲ್ಲಿ ಬೀಡು ಬಿಟ್ಟದ್ದನು.

ಅಣುವನು ರಾವಣನನ್ನು ಹೊರಹೊರಡಿಸಲು ರಾಮನ ಅನುಜ್ಞೆಯಂತೆ ವನಭಂಗವನ್ನೂ ಲಂಕಾದಹನಕಾರ್ಯವನ್ನೂ ವಾನರವಿದ್ಯಾಬಲದಿಂದ ಕೈಕೊಂಡನು. ಆದರೆ ರಾವಣ ಹೊರಬಲಿಲ್ಲ. ಆಗ ವಿಭೀಷಣನು ರಾವಣನು ಲಂಕೆಯಲ್ಲಿರುತ್ತಿಲ್ಲವೆಂದೂ ಬಾಲಿಯ ಮೃತಿ ಹಾಗೂ ಸುಗ್ರೀವ, ಅಣುವರ ವಿದ್ಯಾಬಲಗಳನ್ನು ಕೇಳಿ ತಿಳಿದು, ಆದಿತ್ಯ ಪಾದಗಿರಿಯಲ್ಲಿ ಮಹಾವಿದ್ಯೆಗಳ ಸಾಧನೆಯಲ್ಲಿರುತ್ತಿರುವನೆಂದೂ ಅದಕ್ಕೆ ವಿಘ್ನವನ್ನು ಒಡ್ಡುವುದೇ ತತ್ಕಾಲದ ಕೆಲಸವೆಂದೂ ಸಲಹೆ ಮಾಡಿದನು. ಸುಗ್ರೀವ ಅಣುವರು ರಾಮಲಕ್ಷ್ಮಣರಿಗೆ ಸಿಂಹವಾಹಿನಿ ಗರುಡವಾಹಿನಿ ಮುಂತಾದ ಸಾಧಿತ ವಿದ್ಯೆಗಳನ್ನು ದೊರಕಿಸಿಕೊಡಲು, ಪ್ರಜ್ಞಪ್ತಿವಿದ್ಯಾಬಲದಿಂದ ವಿಮಾನ ಪ್ರಯಾಣ ಮಾಡಿ ಲಂಕಾಸಮೀಪಕ್ಕೆ ಬಂದು ತಲುಪಿ, ಅಲ್ಲಿ ಬೀಡುಬಿಟ್ಟರು.

ಹೀಗೆ ವಿದ್ಯಾಧರಕುಮಾರರಾದ ಆ ಸುಗ್ರೀವ ಅಣುವರು ಆದಿತ್ಯಪಾದಗಿರಿಗೆ ಬಂದು, ಅಲ್ಲಿ ಇಂದಗಿಯೊಂದಿಗೆ ಯುದ್ಧವನ್ನಾರಂಭಿಸಿದರು. ಆಗ ವಿದ್ಯಾದೇವತೆಗಳು ರಾವಣನಲ್ಲಿಗೆ ಬಂದು,"ನಿನ್ನ ಪುಣ್ಯಬಲದಿಂದ ಇಷ್ಟು ಕಾಲ ನೀನು ಚಿಂತಿಸಿದ ಕಾರ್ಯಗಳನ್ನೆಲ್ಲ ನಾವು ಪೂರೈಸುತ್ತಿದ್ದೆವು. ಈಗ ನಿನಗೆ ಪುಣ್ಯಪರಿಪಾಕದ ಹಾನಿಯಾಗಿರುವುದರಿಂದ ನಾವು ಏನು ಮಾಡಲೂ ಅಸಮರ್ಥರಾಗಿದ್ದೇವೆ" ಎಂಬುದಾಗಿ ಹೇಳಿ ಅವನನ್ನು ತೊರೆದು ಹೊರಟುಹೋದುವು. ಆಗ ರಾವಣ ಸ್ವಕೀಯ ಪೌರುಷವನ್ನೇ ನಚ್ಚಿ ಕಾದುವ ಪ್ರತಿಜ್ಞೆ ಮಾಡಿ, ಚಕ್ರರತ್ನ ಪುರಸ್ಸರವಾಗಿ ರಾಮಲಕ್ಷ್ಮಣರನ್ನು ಎದುರಿಸಿದನು.

ಯುದ್ಧವಾಯಿತು. ರಾವಣ ತನ್ನ ವಿದ್ಯಾಬಲದಿಂದ ಸೀತೆಯ ಶಿರಸ್ಸನ್ನು ಕತ್ತರಿಸಿ ತಂದು ರಾಮನಿಗೆ ತೋರಿಸಿದನು. ರಾಮ ತೀವ್ರವಾಗಿ ಕಳವಳಿಸಿದನು. ಆಗ ವಿಭೀಷಣ, ಅದು ಕೃತ್ರಿಮವೆಂದು ಹೇಳಿ ಅವನಲ್ಲಿ ಧೈರ್ಯವನ್ನು ತುಂಬಿದನು. ಬಳಿಕ ಉಭಯ ಪಕ್ಷಗಳೂ ಕಾದಾಡಿದುವು ತನ್ನ ಚಕ್ರದ ಸಹಾಯದಿಂದ ಕೊಲ್ಲಲೆಂದು ಅಂತಿಮವಾಗಿ ನಿಶ್ಚಯಿಸಿ, ಅವನ ಮೇಲೆ ತನ್ನ ಚಕ್ರರತ್ನವನ್ನು ರಾವಣನು ಪ್ರಯೋಗಿಸಿದನು. ಆದರೆ ಪುಣ್ಯಪುರುಷನಾದ ಲಕ್ಷ್ಮಣನನ್ನು ಆ ಚಕ್ರ ಕೊಲ್ಲಲಿಲ್ಲ; ಅವನಿಗೇ ಪ್ರದಕ್ಷಿಣೆಹಾಕಿ, ಅವನ ಹತ್ತಿರ ನಿಂತಿತು. ಅದೇ ಚಕ್ರವನ್ನು ಈಗ ಲಕ್ಷ್ಮಣ ಪ್ರಯೋಗಿಸಿ ರಾವಣನನ್ನು ಕೊಂದನು. ರಾವಣನ ಕಡೆಯ ಸಾಮಂತರು, ಅಮಾತ್ಯರು ಮೊದಲಾದವರೆಲ್ಲ ರಾಮಲಕ್ಷ್ಮಣರಲ್ಲಿಗೆ ಬಂದು, ಅವರನ್ನು ಕಂಡರು. ದುಃಖತಪ್ತರಾದ ಮಂಡೋದರಿ ಮೊದಲಾದ ದೇವಿಯರು ವಿಭೀಷಣನಿಗೆ ರಾಜ್ಯದ ಪಟ್ಟವನ್ನು ಕಟ್ಟಿದರು. ಮಹೋತ್ಸವದಿಂದ ಸೀತಾದೇವಿಯನ್ನು ಬರಮಾಡಿಕೊಳ್ಳಲಾಯಿತು.

ಬಳಿಕ ರಾಮಲಕ್ಷ್ಮಣರು ದಿಗ್ವಿಜಯಕ್ಕೆ ತೆರಳಿ, ಭರತಪತಿಗಳಾದರು. ರಾಮನು ಸೀತೆ ಮುಂತಾಗಿ ಎಂಟು ಸಾವಿರ ಪತ್ನಿಯರನ್ನೂ ಲಕ್ಷ್ಮಣನು ಪೃಥ್ವೀಸುಂದರಿ ಮುಂತಾಗಿ

ಹದಿನಾರು ಸಾವಿರ ಪತ್ನಿಯರನ್ನೂ ಒಡಗೊಂಡು ದೇವದತ್ತಗಳಾದ ದಿವ್ಯಾಸ್ತ್ರಗಳೊಂದಿಗೆ ಬಹುಕಾಲ ಅಯೋಧ್ಯೆಯಲ್ಲಿ ರಾಜ್ಯವಾಳುತ್ತಿದ್ದರು.

ಒಮ್ಮೆ ರಾಮಲಕ್ಷ್ಮಣರು ಮನೋಹರವೆಂಬ ಉದ್ಯಾನದಲ್ಲಿದ್ದ ಶಿವಗುಪ್ತರೆಂಬ ಕೇವಲಿಗಳಲ್ಲಿ ಶ್ರಾವಕಧರ್ಮವನ್ನು ಸ್ವೀಕರಿಸಿದರು. ಕೆಲಕಾಲದ ಮೇಲೆ ಭರತ ಶತ್ರುಘ್ನರನ್ನು ಸಾಕೇತದಲ್ಲಿ ನಿಲ್ಲಿಸಿ, ತಾವು ವಾರಣಾಸಿಗೆ ತೆರಳಿದರು. ಅಲ್ಲಿ ಪುತ್ರಪೌತ್ರಾದಿಗಳೊಂದಿಗೆ ಇರುತ್ತಿರುವಲ್ಲಿ, ಒಮ್ಮೆ ಲಕ್ಷ್ಮಣನಿಗೆ ಕೆಲವು ದುಃಸ್ವಪ್ನಗಳಾದುವು. ಪುರೋಹಿತನು ಅವುಗಳ ಫಲವನ್ನು ವಿಶದಪಡಿಸಿದನು. ಆ ಪ್ರಕಾರ ರಾಮನಿಗೆ ತಪೋವನಗಮನವೂ ಲಕ್ಷ್ಮಣನು ವ್ಯಾಧಿಗ್ರಸ್ತನಾಗಿ ಸತ್ತು ಪಂಕಪ್ರಭೆಯೆಂಬ ನರಕದಲ್ಲಿ ಹುಟ್ಟುವುದೂ ಘಟಿಸಿದುವು. ಲಕ್ಷ್ಮಣ-ಪೃಥ್ವೀಸುಂದರಿಯರ ಪುತ್ರ ಪೃಥ್ವೀಚಂದ್ರನಿಗೆ ರಾಜ್ಯಾಭಿಷೇಕ ಆಯಿತು. ರಾಮ-ಸೀತೆಯರ ಕಿರಿಯಮಗ ಅಜಿತಂಜಯನಿಗೆ ಯುವರಾಜಪಟ್ಟವಾಯಿತು. ಸೀತೆ ಪೃಥ್ವೀಸುಂದರಿ ಆದಿಯಾದ ಅಂತಃಪುರ ವನಿತೆಯರು ಶ್ರುತಮತಿಯರೆಂಬ ಕಂತಿಯರಲ್ಲಿ ದೀಕ್ಷೆಯನ್ನು ತಳೆದರು.

ಕಾಲಕ್ರಮದಲ್ಲಿ ರಾಮ ಅಣುವರು ಶ್ರುತಕೇವಲಿಗಳಾದರು; ಸಮ್ಮೇದಗಿರಿಯಲ್ಲಿ ಮುಕ್ತಿಗೆ ಸಂದರು. ವಿಭೀಷಣಾದ್ಯರು ಅನುದಿಶೆಯೆಂಬ ಮೇಲಿನ ಲೋಕದಲ್ಲಿ ಜನ್ಮ ತಳೆದರು. ಕಾಲಾಂತರದಲ್ಲಿ ಸೀತೆ ಪೃಥ್ವೀಸುಂದರಿಯರು ಅಚ್ಯುತ ಕಲ್ಪಗಳಾದರು. ಲಕ್ಷ್ಮಣನು ಸಹ ನರಕದಿಂದ ಬಿಡುಗಡೆಗೊಂಡು ಮುಂದೆ ಮೋಕ್ಷಗಾಮಿಯಾಗುವ ಜೀವಿಯೇ ಆದನು.

◆

ಆದಿಪುರಾಣಂ

– ಪ್ರೊ. ನರಹಳ್ಳಿ ಬಾಲಸುಬ್ರಹ್ಮಣ್ಯ, ಬೆಂಗಳೂರು,
ನಿವೃತ್ತ ಪ್ರಾಚಾರ್ಯರು, ಸಾಹಿತಿಗಳು
೯೯೦೨೬೧೧೬೬೬

ಪಂಪನ 'ಆದಿಪುರಾಣ' ಈವರೆಗೆ ದೊರೆತಿರುವ ಕನ್ನಡ ಕಾವ್ಯಕೃತಿಗಳಲ್ಲಿ ಮೊದಲನೆಯದು. ಕ್ರಿ.ಶ. ೯೪೧ರಲ್ಲಿ ರಚಿತವಾದ ಈ ಗ್ರಂಥ ಸಾವಿರ ವರ್ಷಗಳಿಗೂ ಮಿಕ್ಕು ಕಾವ್ಯಾಸಕ್ತರ ಆಸಕ್ತಿ ಉಳಿಸಿಕೊಂಡು ಬಂದಿದೆ. ೧೯೦೦ ರಲ್ಲಿ ಎಸ್.ಜಿ. ನರಸಿಂಹಾಚಾರ್ ಅವರು 'ಆದಿಪುರಾಣ'ವನ್ನು ಸಂಪಾದಿಸಿ ಮೊದಲಿಗೆ ಪ್ರಕಟಿಸಿದರು. ಈಗ ಈ ಶತಮಾನದ ಕಡೆಯಲ್ಲಿ ಮತ್ತೆ ಅದರ ಪರಿಷ್ಕೃತರೂಪ ಪ್ರಕಟವಾಗಿದೆ.

* * *

ಆದಿಪುರಾಣದಲ್ಲಿ ಪಂಪ, ಎರಡು ಕತೆಗಳನ್ನು ಹೇಳುತ್ತಾನೆ. ಮೊದಲನೆಯದು **ಆದಿನಾಥ ಪುರುದೇವನ** ಕತೆ. ಒಂದು ಜೀವ ಇಹದ ಬದುಕನ್ನು ಉತ್ಕಟವಾಗಿ ಅನುಭವಿಸುತ್ತ ಆ ಅನುಭವಗಳ ತುದಿಯಲ್ಲಿ 'ಅರಿವು' ಪಡೆಯುವ ವ್ಯಕ್ತಿತ್ವವಿಕಾಸದ ಕತೆಯೇ ತೀರ್ಥಂಕರನ ಕತೆ. ಅಂದರೆ 'ಭೋಗದ ತುತ್ತತುದಿ ವೈರಾಗ್ಯ' ವೆಂಬುದನ್ನು ಆದಿತೀರ್ಥಂಕರನ ಕತೆಯ ಮೂಲಕ ಪಂಪ ಪ್ರತಿಪಾದಿಸುತ್ತಾನೆ. ಮತ್ತೊಂದು ಕತೆ **ಭರತ ಚಕ್ರವರ್ತಿಯ ದಿಗ್ವಿಜಯದ ಕತೆ,** ಅಧಿಕಾರದ ಹಂಬಲದ ಕತೆ. ಜಗತ್ತನ್ನೇ ಗೆದ್ದು ಬಂದ ಭರತ ಕಡೆಗೆ ತನ್ನ ತಮ್ಮ ಬಾಹುಬಲಿಯನ್ನು ಗೆಲ್ಲುವ ಸೆಣಸಿನಲ್ಲಿ ಸೋಲುತ್ತಾನೆ. ಗೆದ್ದ ಬಾಹುಬಲಿ ಎಲ್ಲವನ್ನೂ ಅಣ್ಣನಿಗೊಪ್ಪಿಸಿ ವಿರಾಗಿಯಾಗುತ್ತಾನೆ. **'ವೈಭವದ ತುತ್ತತುದಿಯಲ್ಲಿ ತ್ಯಾಗ'**ವೆಂಬುದನ್ನು ಈ ಕತೆಯ ಮೂಲಕ ಪಂಪ ಹೇಳುತ್ತಿದ್ದಾನೆ. ಭೋಗದ ತುತ್ತತುದಿ ವೈರಾಗ್ಯ, ವೈಭವದ ಕೊನೆಯಲ್ಲಿ ತ್ಯಾಗ ಎಂಬುದು ಜೈನಧರ್ಮ ದರ್ಶನದ ತಿರುಳು. ಈ ದರ್ಶನವನ್ನು ನಿರೂಪಿಸಲು ಪಂಪ ಪುರುದೇವ, ಭರತ–ಬಾಹುಬಲಿಯರ ಕತೆಗಳನ್ನು ಆರಿಸಿಕೊಂಡಿದ್ದಾನೆಂಬುದು ಈಗಾಗಲೇ ಕನ್ನಡ ವಿಮರ್ಶೆ ಚರ್ಚಿಸಿರುವ ಸಂಗತಿ.

ಆದರೆ ಈ ಕತೆಗಳ ಮೂಲಕ ಪಂಪ ಮನುಷ್ಯನ ಮೂಲಭೂತ ಪ್ರವೃತ್ತಿಗಳಲ್ಲಿ ಅತ್ಯಂತ ಪ್ರಬಲ ಶಕ್ತಿಗಳಾದ ಭೋಗ (sex) ಮತ್ತು ಅಧಿಕಾರ (Power)ಗಳ ಬಗ್ಗೆ ವಿಶ್ಲೇಷಿಸುತ್ತಿದ್ದಾನೆಂಬುದು ನಾವು ಗಮನಿಸಬೇಕಾದ ಸಂಗತಿ. ಪುರುದೇವನ ಕತೆಯ ನಿರೂಪಣೆ ಭೋಗದ ತುದಿಯಲ್ಲಿ ವೈರಾಗ್ಯವನ್ನು ನಿರೂಪಿಸುವ ಕಥನವಾದರೂ ಕತೆಯನ್ನು ಕಟ್ಟುವ ಕ್ರಮದಲ್ಲಿ ಪಂಪ 'ಭೋಗ (sex)ದ ಶಕ್ತಿ–ಆಕರ್ಷಣೆಗಳನ್ನು ನಮಗೆ ಸಮರ್ಥವಾಗಿ ಪರಿಚಯ ಮಾಡಿಕೊಡುತ್ತಾನೆ. ಗಂಡು–ಹೆಣ್ಣಿನ ಸಂಬಂಧದ ಆಕರ್ಷಣೆ

ಎಷ್ಟು ಪ್ರಬಲವಾದುದು ಎಂಬುದು, ಮನುಷ್ಯನನ್ನು ಹೇಗೆ ಅದು ತಲ್ಲಣಕ್ಕೊಳಗುಮಾಡುತ್ತದೆಂಬುದು ಭವಾವಳಿಯ ಉದ್ದಕ್ಕೂ ಪ್ರತಿಪಾದಿತವಾಗುವ ಕಾವ್ಯಸತ್ಯ.

'ವನಿತಾಕಟಾಕ್ಷ ಕುವಲಯವನ ಚಂದ್ರ' ನಾದ ಪಂಪನದು ರಸಿಕ ಮನಸ್ಸು. ಕೇರಳ, ಮಲಯ, ಆಂಧ್ರ ಮೊದಲಾದ ನಾಡುಗಳ ಸುಂದರಿಯರು ತನಗೆ ಪ್ರಿಯೆಯರಾಗಿದ್ದುದನ್ನು ಆತ ಪ್ರಸ್ತಾಪಿಸುತ್ತಾನೆ. ಸ್ತ್ರೀರೂಪದ ಮೋಹಕತೆಯನ್ನು ಪಂಪ ಅರಿತಂಥವನು. ಸ್ವಯಂಪ್ರಭೆಯ ರೂಪವನ್ನು ಆತ ವರ್ಣಿಸುವುದನ್ನು ನೋಡಿ:

ನೆಗಳ್ದ ಅಮರಾಂಗನಾಜನದ ರೂಪುಗಳೆಲ್ಲಂ ಅದು ಈಕೆಯೊಂದು ದೇ
ಸೆಗೆ, ನಿಮಿರ್ವೊಂದು ಪುರ್ವಿನ ನಯಕ್ಕೆ, ಅದುರ್ವೊಂದಗುಂತಿಗೆ ಒಂದು
ಭಂಗಿಗೆ, ನೆಗಳ್ಬೊಂದಾ ಮೆಲ್ಪಿನ ತೊದಳ್ನುಡಿಗಪ್ಪೊಡಂ ಎಯ್ದೆವಾರವು ಏ
ಸೊಗಸುಗಮೆಂದು ತಳ್ತು ಅಗಲನ್ ಆಕೆಯನಾ ಲಲಿತಾಂಗವಲ್ಲಭಂ

ಇಂಥ ಸ್ವಯಂಪ್ರಭೆಯ ಸಾನ್ನಿಧ್ಯದಿಂದ ತನ್ನ ಜನ್ಮ ಸಫಲವಾಯಿತೆಂದು ಲಲಿತಾಂಗ ಭಾವಿಸುತ್ತಾನೆ. ಆದರೆ ಈ ಸುಖ ಎಷ್ಟು ದಿನ? ಅಗಲಲೇಬೇಕಾಗುತ್ತದೆ.

ಮುಂದೆ ಇವರಿಬ್ಬರೂ ಮುಂದಿನ ಭವದಲ್ಲಿ ವಜ್ರಜಂಘ–ಶ್ರೀಮತಿಯರಾಗಿ ಜನಿಸುತ್ತಾರೆ. ಎಲ್ಲ ರೀತಿಯ ಸುಖವನ್ನೂ ಅನುಭವಿಸುತ್ತಾರೆ. ಒಂದು ರಾತ್ರಿ ಶಯನಗೃಹದಲ್ಲಿ ಮಲಗಿರುವಾಗ ಸೆಜ್ಜೆವಳ ಕೇಶಸಂಸ್ಕಾರಕ್ಕೆಂದು ಅಗಿಷ್ಟಿಕೆಯಲ್ಲಿ ಸುವಾಸನೆಯ ಧೂಪದ್ರವ್ಯಗಳನ್ನು ಹಾಕಿ ಗವಾಕ್ಷಿಗಳನ್ನು ತೆರೆಯುವುದನ್ನು ಮರೆತುಬಿಟ್ಟನು. ಇದರಿಂದಾಗಿ ಅವರು ಹೊಗೆ ಸುತ್ತಿ ಉಸಿರುಕಟ್ಟಿ ಸಾಯುತ್ತಾರೆ. ಭೋಗ ಸಾಮಗ್ರಿಯಾದ ಧೂಪಧೂಮವು ಭೋಗಿಗಳನ್ನು ಆಹುತಿ ತೆಗೆದುಕೊಳ್ಳುವಲ್ಲಿನ ದುರಂತವ್ಯಂಗ್ಯವನ್ನು ಪಂಪ ಚಿತ್ರಿಸಿರುವ ಬಗೆ ಅನನ್ಯವಾದುದು. ಪಂಪ ಹೇಳುತ್ತಾನೆ –

ಬಿಡದೆ ಪೊಗೆ ಸುತ್ತೆ, ತೋಳಂ
ಸಡಿಲಸದಾ ಪ್ರಾಣವಲ್ಲಭರ್ ಪ್ರಾಣಮನ್ –ಅಂ
ದು ಒಡಗಳೆದರ್–ಓಪರ್ ಓಪರೊಳ್
ಒಡಸಾಯಲ್ ಪಡೆದರ್ ಇನ್ನವೇಂ ಸೈಪೊಳವೇ !

ಆ ಪ್ರೇಮಿಗಳು ಬಿಗಿದ ತೋಳುಗಳನು ಸಡಲಿಸದೆ ಒಟ್ಟಿಗೇ ಪ್ರಾಣಬಿಟ್ಟರು. ಒಡಗೂಡಿ ಬಾಳಿದ ಪ್ರಿಯರು ಒಡನೇ ಸಾಯುವಂಥ ಪುಣ್ಯಕ್ಕೆ ಎಣೆಯುಂಟೇ ಎಂದು ಪಂಪ ಕೇಳುತ್ತಾನೆ.

ಇಂಥ ಪ್ರಸಂಗಗಳು ಭೋಗ (sex)ದ ಶಕ್ತಿಯನ್ನು ಹೇಳುತ್ತವೆ. ಲಲಿತಾಂಗನ ಅಗಲಿಕೆಯ ನೋವಂತೂ ಯಾರ ಮನಸ್ಸನ್ನಾದರೂ ಕರಗಿಸುವಂಥದು:

ಸಂತಸದಂತನೆಯ್ದಿ ಸುರತಾಮೃತದೊಳ್ ತಣಿದಳ್ಕರಿಂ ಜಗಿ
ಲ್ತಂತಿರೆ ಪತ್ತಿ ಮೆಯ್ಗಳೆರಡಾದೊಡಮೇನಸುವೊಂದೆ ನೋಳ್ಪೊಡೆಂ
ಬಂತಿದೆ ಕೂಡಿ ನಿನ್ನೊಡನೆ ಭೋಗಿಸಲೀಯದೆ ಕೆಮ್ಮನೆನ್ನನು
ಯ್ವಂತಕನೆಂಬ ಬೂತನೆಲೆ ಮಾಣಿಸಲಾಗದೆ ಪೇಳ್ ಸ್ವಯಂಪ್ರಭೇ

ಈ ಸುಖದ ಮಿತಿಯ ಅದ್ಭುತ ಪ್ರತಿಮೆಯನ್ನು ಪಂಪ 'ನೀಲಾಂಜನೆ' ಯ ಪಾತ್ರದಲ್ಲಿ ಸೃಷ್ಟಿಸುತ್ತಾನೆ. ಅಪ್ರತಿಮ ಚೆಲುವಿನ ಅಸಾಮಾನ್ಯ ಕಲಾವಿದೆ ನೀಲಾಂಜನೆ. ಇಂದ್ರನ ಸಭೆಯಲ್ಲಿ ಪುರುದೇವನಿಗಾಗಿ ಅವಳ ನರ್ತನ ಏರ್ಪಡುತ್ತದೆ.

ನಿಲ್ತುವು ರಸಂಗಳಿಲ್ಲಿ ಮ
ಡಲ್ತೆನೆ ಭಂಗಿಯೊಳನಂಗ ಜಂಗಮಲತೆವೊಲ್
ನಿಲ್ತು ಜವನಿಕೆಯ ಮರೆಯೊಳ್
ಪೋಲ್ತಳವಳ್ ಮುಗಿಲ ಮರೆಯವಿದ್ಯುಲ್ಲತೆಯಂ

ಇಂಥ 'ನೀಲಾಂಜನೆ' ಪುರುದೇವನಿಗೆ ಭೋಗದ ಮಿತಿಯನ್ನು ಸೂಚಿಸುವ, ಅರಿವು ಮೂಡಿಸುವ ಸಾಧನವಾಗುತ್ತಾಳೆ. ನೃತ್ಯದ ಮಧ್ಯದಲ್ಲಿಯೇ ಅವಳ ಆಯಸ್ಸು ಮುಗಿದು ಅವಳು ಮರೆಯಾಗುತ್ತಾಳೆ. ಇಂದ್ರ ರಸಭಂಗವಾಗಬಾರದೆಂದು ಅವಳಂತೆಯೇ ಇರುವ ಬೇರೊಂದು ಪಾತ್ರವನ್ನು ಸೃಷ್ಟಿಸಿ ನೃತ್ಯ ಮುಂದುವರೆಸುತ್ತಾನೆ. ಉಳಿದ ಯಾರಿಗೂ ಇಂದ್ರನ ಈ ಕೈಚಳಕ ತಿಳಿಯುವುದಿಲ್ಲ; ಆದರೆ ಪುರುದೇವಿಗೆ ತಿಳಿಯುತ್ತದೆ. ಆತನಿಗೆ 'ಅರಿವು' ಮೂಡುತ್ತದೆ

ನಾರೀ ರೂಪದ ಯಂತ್ರಂ
ಚಾರುತರಂ ನೋಡೆ ನೋಡೆ ಕರಗಿದುದೀ ಸಂ
ಸಾರದನಿತ್ಯತೆ ಮನದೊಳ್
ಬೇರೂರಿದುದು ಈಗಳಿಂತಿದಂ ಕಡೆಗಣಿಪೆಂ

ಪಂಪನಿಗೆ ಭೋಗದ ಶಕ್ತಿ, ಸೆಳೆತಗಳ ಅನುಭವವಿದೆ. ಅದು ಮನುಷ್ಯನನ್ನು ಆಕ್ರಮಿಸಿ ಆಳುವ ಬಗೆಯೂ ತಿಳಿದಿದೆ. ಅತಿಶಯಭೋಗ, ಅದರಿಂದುಂಟಾಗುವ ನೋವು, ಅದರ ಕ್ಷಣಿಕತೆ ಇವುಗಳನ್ನೂ ಆತ ಬಲ್ಲ. ಇವೆಲ್ಲವುಗಳ ಸೇರಿಯೇ ಬದುಕು ರೂಪುಗೊಳ್ಳುವುದು. ಆದ್ದರಿಂದಲೇ ಆತ ಹೇಳುತ್ತಾನೆ –

ಧರ್ಮಂ ಪ್ರಧಾನಂ, ಅರ್ಥಂ

ಧರ್ಮಾಶ್ರಿಪ ಫಳಂ, ಅದರ್ಕೆ ರಸಮದು ಕಾಮಂ

ಧರ್ಮ ವಿರುದ್ಧವಲ್ಲದ ಕಾಮದ ಸವಿ ಅರ್ಥಪೂರ್ಣವಾದುದೆಂದು ಪಂಪ ಭಾವಿಸುತ್ತಾನೆ. ಆದಿಪುರಾಣದ ತೀರ್ಥಂಕರನ ಕತೆ ಹೀಗೆ ಭೋಗ (sex)ದ ಶಕ್ತಿ-ಮಿತಿಗಳನ್ನು ಪರಿಚಯ ಮಾಡಿಕೊಡುವ ಕಥನವಾಗುವುದರಿಂದಲೇ ಇದು 'ಪುರಾಣ'ವಾಗದೇ 'ಕಾವ್ಯ'ದ ಅನುಭವವಾಗುತ್ತದೆ.

* * *

ಪುರುದೇವನ ಕತೆಯಲ್ಲಿ 'ಭೋಗ'ದ ವಿಶ್ಲೇಷಣೆಯಿದ್ದರೆ, ಭರತ ಬಾಹುಬಲಿಯರ ಕತೆ ಅಧಿಕಾರ (power)ದ ಹಂಬಲ, ಅದರ ಪರಿಣಾಮಗಳನ್ನು ಹೇಳುವ ಕತೆ. ಅಧಿಕಾರದ ಆಸೆ ಮನುಷ್ಯನನ್ನು ಯಾವ ನೆಲೆಗಾದರೂ ಒಯ್ಯಬಲ್ಲುದು ಎಂಬುದನ್ನು ಪಂಪ ಈ ಪ್ರಸಂಗದಲ್ಲಿ ಸಮರ್ಥವಾಗಿ ನಿರೂಪಿಸುತ್ತಾನೆ. ಭರತ ದಿಗ್ವಿಜಯ ಮುಗಿಸಿ ಬಂದಾಗ ಚಕ್ರರತ್ನ ಪುರಪ್ರವೇಶ ಮಾಡದೆ ಊರ ಬಾಗಿಲಲ್ಲೇ ನಿಲ್ಲುತ್ತದೆ. ತನ್ನ ತಮ್ಮಂದಿರು ಶರಣಾಗಿಲ್ಲ ಎಂಬುದನ್ನು ಅದು ಸೂಚಿಸುತ್ತದೆಂಬುದನ್ನು ತಿಳಿದ ಭರತ ಅವರಿಗೆ ನಿರೂಪವೊಂದನ್ನು ಕಳಿಸುತ್ತಾನೆ:

ಎನಗೊರ್ವಂಗುಪಭೋಗಮಲ್ತು ವಸುಧಾ ಸಾಮ್ರಾಜ್ಯಂ ಓರಂತೆ ನಿ
ಮ್ಮನಿಬರ್ಗಂ ಪಿರಿಯಣ್ಣನೇಂ ಜನಕನೇನೆಂಬೊಂದು ಕೊಂಡಾಟದಿಂ
ವಿನಯಂ ಸಲ್ವುದು ತಾಮುಂ ಆಮುಂ ಒಡನಿರ್ಪಂ ಬರ್ಪುದು ಎಂಬೀಶ ಶಾ
ಸನಮಂ ನೆತ್ತಿಯೊಳಾಂತು ಬನ್ನಿಂ ಎರಗಿಂ ಚಕ್ರೇಶ ಪಾದಾಜ್ಜದೊಳ್

ಭಾವನಾತ್ಮಕ ಸಂಬಂಧ ವ್ಯಾವಹಾರಿಕವಾಗಿ ಪರಿವರ್ತಿತವಾಗಿಬಿಡುವ ದುರಂತವನ್ನು ಈ ಪದ್ಯ ಸೊಗಸಾಗಿ ನಿರೂಪಿಸುತ್ತದೆ. ನಮಗೆಲ್ಲರಿಗೂ ಎರಡು ಜಗತ್ತುಗಳಿವೆ. ಒಂದು ಭಾವನಾಜಗತ್ತು, ಮತ್ತೊಂದು ವ್ಯಾವಹಾರಿಕ ಪ್ರಪಂಚ. ಇವೆರಡರ ನಡುವೆ ಹೊಂದಾಣಿಕೆ ಅಷ್ಟು ಸುಲಭವಲ್ಲ. ವ್ಯಾವಹಾರಿಕ ಜಗತ್ತಿನ ಕ್ರೌರ್ಯ, ನಿಷ್ಕರುಣೆಯನ್ನು ತಾಳಿಕೊಳ್ಳಲು ನಾವು ·ಕೆಲವೊಮ್ಮೆ ಭಾವನಾಜಗತ್ತಿನ ಆಶ್ರಯ ಪಡೆಯುತ್ತೇವೆ. ಆದರೆ ವ್ಯಾವಹಾರಿಕ ಜಗತ್ತು ನಮ್ಮ ಭಾವಪ್ರಪಂಚವನ್ನು ಅಲುಗಾಡಿಸುವ, ಅಲ್ಲೋಲಕಲ್ಲೋಲಗೊಳಿಸುವ ಪ್ರಯತ್ನ ಮಾಡುತ್ತಲೇ ಇರುತ್ತದೆ.

ಇಲ್ಲಿ ಭರತ ಹೇಳುವ "ಈ ಸಾಮ್ರಾಜ್ಯ ನನಗೊಬ್ಬನಿಗೇ ಅಲ್ಲ, ನಿಮ್ಮೆಲ್ಲರಿಗೂ ಸೇರಿದ್ದು, ನಾವು ನೀವು ಒಡಗೂಡಿ ಅನುಭವಿಸುವ ಬನ್ನಿ" ಎಂಬ ಮಾತುಗಳು ಸಹಜ ಭ್ರಾತೃವಾತ್ಸಲ್ಯವನ್ನು ಸೂಚಿಸುವಂಥವು. ಆದರೆ ಈ ಪದ್ಯದ ಕಡೆಯ ಸಾಲು ಈ

'ವಾತ್ಸಲ್ಯ'ವನ್ನು 'ವ್ಯವಹಾರ'ವನ್ನಾಗಿ ಪರಿವರ್ತಿಸಿ 'ಅಧಿಕಾರ'ವನ್ನು ಸ್ಥಾಪಿಸಲು ಪ್ರಯತ್ನಿಸುತ್ತದೆ. "ಈ ರಾಜಾಜ್ಞೆಯನ್ನ ಒಪ್ಪಿ, ಸ್ವೀಕರಿಸಿ ಬಂದು ಚಕ್ರವರ್ತಿಯ ಪಾದಗಳಿಗೆ ನಮಸ್ಕರಿಸಿ" ಎಂಬ ಮಾತುಗಳು ಅಧಿಕಾರ (power)ದ ಆದೇಶ. ಎರಿಕ್‌ಫ್ರಾಮ್ ಪ್ರೀತಿ ಹಕ್ಕಾಗಿ ಪರಿವರ್ತಿತವಾಗಿಬಿಡುವ ಪರಿಯನ್ನು ಮನೋವೈಜ್ಞಾನಿಕ ನೆಲೆಯಲ್ಲಿ ವಿವರಿಸುತ್ತಾನೆ. ಇಲ್ಲಿ ಪ್ರೀತಿ 'ಅಧಿಕಾರ'ವಾಗಿ ಪರಿವರ್ತಿತವಾಗುವ ಪ್ರಕ್ರಿಯೆಯನ್ನು ಪಂಪ ಪದ್ಯವೊಂದರ ಚೌಕಟ್ಟಿನಲ್ಲಿ ಹಿಡಿದಿಡಲು ಪ್ರಯತ್ನಿಸುತ್ತಿದ್ದಾನೆ.

ಬಾಹುಬಲಿಗೆ ಭರತನ ಈ ಅಧಿಕಾರದ ಅಹಂ ಅರ್ಥವಾಗುತ್ತದೆ. ಪ್ರೀತಿ, ವಾತ್ಸಲ್ಯಗಳ ನೆಪದಲ್ಲಿ ಅಧಿಕಾರ ಸ್ಥಾಪಿಸಬಯಸುವ ಆತನ ಹುನ್ನಾರವನ್ನು ಆತ ಬಲ್ಲ. ಆದ್ದರಿಂದಲೇ ಆತ ಹೇಳುತ್ತಾನೆ:

ಪಿರಿಯಣ್ಣಂಗೆರಗುವುದೇಂ
ಪರಿಭವಮೇ ಕೀಳಿ ನೆತ್ತಿಯೊಳ್ ಬಾಳಂ ನಿ
ರ್ನೆರಮೂರಿ ಚಲದಿನ್ ಎರಗಿಸ
ಲಿರೆ ಭರತಂಗೆರಗುವೆರಕಂ ಅಂಜಮೆಯಲ್ತೇ

ಅಣ್ಣನೆಂದು ಭರತನಿಗೆ ಬಾಹುಬಲಿ ನಮಸ್ಕರಿಸಲು ಸಿದ್ಧ. ಆದರೆ ನೆತ್ತಿಯ ಮೇಲೆ ಕತ್ತಿ ಊರಿ ಬಲವಂತವಾಗಿ ಎರಗಿಸುವಂತೆ ಮಾಡುವ ಭರತನ ಆದೇಶ, ಆಳ್ ಅರಸ ಎಂಬ ಭೇದ ಚಃ ಕಷ್ಟವಲ್ಲವೇ? ಇದಕ್ಕೆ ಬಾಹುಬಲಿ ಸಿದ್ಧನಿಲ್ಲ. ಅಣ್ಣತಮ್ಮಂದಿರ ಅನ್ಯೋನ್ಯ ಸಂಬಂಧ ಸಾಮಾಜಿಕವಾದ ಆಸ್ತಿಯ ಪ್ರಶ್ನೆ ಬಂದಾಗ ಒಡೆದುಹೋಗುವ ದುರಂತವನ್ನು ಪಂಪ ಇಲ್ಲಿ ಚಿತ್ರಿಸುತ್ತಿದ್ದಾನೆ. ಆದ್ದರಿಂದಲೇ ಬಾಹುಬಲಿ ಹೇಳುತ್ತಾನೆ:

ಸೋದರರೊಳ್ ಸೋದರರಂ
ಕಾದಿಸುವುದು ಸುತನ ತಂದೆಯೆಡೆಯೊಳ್ ಬಿಡದು
ತ್ಪಾದಿಸುವುದು ಕೋಪಮನಗಳ
ವೀ ದೊರೆತೆನೆ ತೊಡರ್ವುದೆಂದು ರಾಜ್ಯಶ್ರೀಯೊಳ್

ಅಣ್ಣ ತಮ್ಮಂದಿರ ವೈಯಕ್ತಿಕ ಸಂಬಂಧ 'ಅಧಿಕಾರ' (power)ದ ಹಂಬಲದಿಂದಾಗಿ ಹೇಗೆ ಒಡೆದುಹೋಗುತ್ತದೆಂಬ ಈ ಅಂಶವೇ 'ವಿಕ್ರಮಾರ್ಜುನ ವಿಜಯ'ದಲ್ಲಿ ಇನ್ನೂ ಹೆಚ್ಚು ವಿಸ್ತೃತವಾಗಿ ಒಡಮೂಡಿದೆ. ಭರತ-ಬಾಹುಬಲಿಯರ ಕತೆಯ ಮುಂದುವರಿಕೆಯೇ ಕೌರವ-ಪಾಂಡವರ ಕತೆ.

◆

ಲಕ್ಷ್ಮೀಶನ ಜೈಮಿನಿ ಭಾರತದಲ್ಲಿ ಅಲಂಕಾರ ವೈಭವ

– ಡಾ। ಡಿ.ಆರ್. ಪಾಂಡುರಂಗ, ಬೆಂಗಳೂರು
ನಿವೃತ್ತ ಪ್ರಾಧ್ಯಾಪಕರು, ೯೯೦೦೬೮೪೯೫೭

ಕವಿ ಲಕ್ಷ್ಮೀಶನಿಗೆ ಕವಿಚೂತವನಚೈತ್ರ, ಉಪಮಾಲೋಲ, ನಾದಲೋಲ ಮುಂತಾದ ಬಿರುದುಗಳಿದ್ದು, ಅವು ಕಾವ್ಯಕ್ಕೆ ಶೋಭೆ ತರುವಂತಿವೆ. **‘ಕಾವ್ಯ ಶೋಭಾಕರಾನ್ ಧರ್ಮಾನ್ ಅಲಂಕಾರಂ ಪ್ರಚಕ್ಷ್ಯತೆ’** ಎಂಬ ಮಾತು ಕಾವ್ಯಕ್ಕೆ ಅನ್ವಯವಾಗುವಂತಹದು. ಅಲಂಕಾರಗಳು ಕಾವ್ಯಕ್ಕೆ ಹೊರೆಯಾಗದೆ; ಅವು ಸಹಜ, ಸುಂದರ ಹಾಗೂ ಔಚಿತ್ಯಯುತವಾಗಿ ಮೂಡಿ ಬರಬೇಕು. ‘ಕಾವ್ಯಂ ಗ್ರಾಹ್ಯಂ ಅಲಂಕಾರಾತ್’ ಕಾವ್ಯ ಗ್ರಾಹ್ಯವಾಗುವುದೇ ಅಲಂಕಾರದಿಂದ ಎಂಬುದು ಆಲಂಕಾರಿಕರ ಅಭಿಪ್ರಾಯ. ಕವಿ ಲಕ್ಷ್ಮೀಶನಲ್ಲಿ ಔಪಮ್ಯಮೂಲವೆನಿಸುವ ೩೪೧ ಅಲಂಕಾರಗಳು, ಅದರಲ್ಲಿ ೧೦೨ ಉಪಮಾಲಂಕಾರ, ೪೨ ರೂಪಕಗಳು ೧೪೦ ಉತ್ಪ್ರೇಕ್ಷೆ, ೧೩ ಅರ್ಥಾಂತರನ್ಯಾಸ ಕಾವ್ಯಕ್ಕೆ ಹೊರೆಯಾಗದೆ ಸಹಜವಾಗಿ ಮೂಡಿಬಂದಿವೆ.

ಪ್ರಾರಂಭದಲ್ಲಿ ‘ದೇವಪುರ ನಿಲಯ ಲಕ್ಷ್ಮೀರಮಣನ್ಯಾಸಚಂದ್ರನು’ ಎಂಬ ರೂಪಕದಿಂದಲೇ ಕಾವ್ಯ ಪ್ರಾರಂಭವಾಗುತ್ತದೆ. ಈತನ ಕಾವ್ಯದಲ್ಲಿ ಉಪಮೆಗಳು ತುಂಬಾ ಆಕರ್ಷಣೀಯವೆನಿಸಿ, ಕಾವ್ಯದ ಸೌಂದರ್ಯಕ್ಕೆ ವಿಶೇಷ ಮೆರಗು ನೀಡುತ್ತವೆ. ಕವಿ ದುಃಖತಪ್ತನಾದ ಧರ್ಮರಾಯನನ್ನು ಕುರಿತು “ಉರಿವ ಕಡುವೇಸಿಗೆಯ ಬಿಸಿಲಿಂದೆ ಬಸವಳಿದ ಕೋಮಲ ರಸಾಲದಂತೆ, ಚಂದ್ರಹಾಸ ಕಟುಕರ ಕೈಗೆ ಸಿಕ್ಕಾಗ 'ಪಾಪಿಗಳ ಒಡಲೊಳಿಹ ಪರಮಾತ್ಮನಂತೆ, ಯಮದೂತರೆಳೆತಂದ ಅಜಾಮಿಳನಂತೆ, ಕಾಕಸಂಘಾತದೊಳ್ ಸಿಕ್ಕಿರ್ದ ಕೋಗಿಲೆಯ ಮರಿಯಂತೆ, ನಲುಗಿ ಕತ್ತಲೆಯೊಳಿರ್ದ ಶೀತಲ ಮರೀಚಲಾಂಛನದಂತೆ, ಪಶುಘಾತಕಿಗಳೆತ್ತಿ ಕೊಂಡೊಯ್ವ ಬಾಲಕನಿರ್ದನು ಬಾಲಕ ಚಂದ್ರಹಾಸನ ಪರಿಸ್ಥಿತಿಯನ್ನು ಈ ಉಪಮಾಲಂಕಾರಗಳು ಕರುಣೆ ಉಕ್ಕುವಂತೆ ಮನದಟ್ಟು ಮಾಡಿಕೊಡುತ್ತವೆ. ತಾಮ್ರಧ್ವಜನ ಮೇಲೆ ಯುದ್ಧ ಮಾಡಿದ ಕೃಷ್ಣಾರ್ಜುನರು– ‘ಅಂಜನಾದ್ರಿಯ ಮೇಲೆ ಸಿಡಿಲೆರಗಿದಂತೆ ದನುಜಾರಿ ಮೈಮರೆದನು. ಕವಿಯು ನಿಸರ್ಗಕ್ಕೆ ಪೂರಕವಾದ ಉಪಮೆಗಳನ್ನು ಸಹಜವಾಗಿ ಬಳಸುತ್ತಾನೆ. 'ಭಾನುರಶ್ಮಿಗೆ ಕಂದೆರೆಯದ ಗೋಗೆಯವೋಲ್', ಹಾಗೆಯೇ 'ಸಲೆ ಬತ್ತಿದ ಸರೋವರಕ್ಕೆ ನವ ಜಲ ಒದಗಿದಂತೆ'. ಈ ಉಪಮೆಗಳು ಆ ಸಂದರ್ಭಕ್ಕೆ ಕನ್ನಡಿ ಹಿಡಿಯುತ್ತವೆ.

ಮಾಲೋಪಮಾಲಂಕಾರದ ಮೂಲಕ ಕೊಳ ಅಥವಾ ಸರೋವರದ ವರ್ಣನೆ ಮಾಡಿದರೂ ವಿಷ್ಣುವಿನ ವರ್ಣನೆ ಹೂಮಾಲೆ ಕಟ್ಟುವ ರೀತಿಯಲ್ಲೇ ಮನೋಹರವಾಗಿದೆ:

ವನಮಾಲಿಯಂದದಿಂ ಪದ್ಮಿಪದ್ಮಿಯವೊಲ್‌ಭು
ವನಕುಕ್ಷಿ ಭುವನ ಕುಕ್ಷಿಯ ತೆರೆದೆ ಹಂಸಲೋ
ಚನ ಶೋಭಿ ಹಂಸಲೋಚನ ಶೋಭಿಯಂತೆವರಚಕ್ರ ವರಚಕ್ರಿಯವೊಲು
ಅನಿಮಿಷಾಶ್ರಯಮೂರ್ತಿ ಅನಿಮಿಷಾಶ್ರಯಮೂರ್ತಿ
ಯೆನೆ ಕುವಲಯಧಾರಿ ಕುವಲಯ ಧಾರಿಯವೋಲ್
ವರಮಾಲಿಯೆನಿಸಿ ರಂಜಿಸುವ ಕಾಸಾರಮಂ ಸರ್ವಮಂಗಳೆಕಂಡಳು

ಇದಕ್ಕೆ ಬೆಳಗೆರೆ ಕೃಷ್ಣಶಾಸ್ತ್ರಿಗಳು ಅರ್ಥ ಬರೆಯುತ್ತಾ "ವನಮಾಲಿ ಎಂದರೆ ಕಮಲಹಾರಗಳನ್ನು ಧರಿಸಿರುವ ವಿಷ್ಣು, ಅಂತೆಯೇ ಕಮಲ ಪುಷ್ಪಗಳಿದ ಶೋಭಿಸುತ್ತಿರುವ ಸರೋವರ; ಭುವನವನ್ನು ತನ್ನ ಹೊಟ್ಟೆಯಲ್ಲಿ ಅಡಗಿಸಿಕೊಂಡವನು, ಅಂತೆಯೇ ನೀರನ್ನು ತನ್ನ ಒಡಲಿನಲ್ಲಿ ಹೊಂದಿರುವ ಸರೋವರ; ಹಂಸದಂತೆ ಕಣ್ಣುಳ್ಳ ವಿಷ್ಣು, ಹಂಸಪಕ್ಷಿಗಳಿಂದ ಶೋಭಿಸುತ್ತಿರುವ ಸರೋವರ; ವರಚಕ್ರಿ; ಚಕ್ರವಾಕಪಕ್ಷಿಗಳಿಗೆ ಆಶ್ರಯವಾಗಿರುವಂಥ ಸರೋವರ; ಅನಿಮಿಷರಿಗೆ ಆಶ್ರಯದಾತನಾದ ವಿಷ್ಣು, ಮೀನುಗಳ ಆಶ್ರಯವಾದ ಸರೋವರ; ಭೂಮಂಡಲಕ್ಕೆ ಆಧಾರವಾದ ಕುವಲಯವಿಷ್ಣು, ನೀರಿನಿಂದ ಕೂಡಿರುವಂಥಹ ಸರೋವರ ಹೀಗೆ ಮಾಲೆಯಂತೆ ಅಲಂಕಾರಗಳು ಚಮತ್ಕಾರಿಕವಾಗಿ ಬಳಕೆಗೊಂಡಿವೆ.

ಕವಿ ಅನುಪ್ರಾಸಾಲಂಕಾರದ ಮೂಲಕ ಉದ್ಯಾನವನ್ನು ವರ್ಣಿಸಿರುವ ಬಗೆ ಹೀಗಿದೆ:

ಸಾಲ ಸಾಲಂಗಳಿಂ ಬಕುಳಕುಳದಿಂದೆ ಹಿಂ
ತಾಲ ತಾಲಂಗಳಿಂ ಮಾದಲದಲರ್ಗಳಿರ

ಇವೆಲ್ಲ ಸಾಲುಗಳು ಗುಂಪುಗುಂಪಾದ ಮರಗಳನ್ನು ಕಣ್ಣಿಗೆ ಕಟ್ಟುವಂತೆ ಚಿತ್ರಿಸುತ್ತವೆ.

ಕವಿಯು ಭೀಭತ್ಸ ಹಾಗೂ ಉತ್ಪ್ರೇಕ್ಷೆಗಳನ್ನು ರಣರಂಗಕ್ಕೆ ಅನ್ವಯವಾಗುವಂತೆ ವರ್ಣಿಸುತ್ತಾನೆ. ಇಲ್ಲಿ ಅನುಪ್ರಾಸವೂ ದಟ್ಟವಾಗಿದೆ.

ಎತ್ತಿ ಬಹ ಸತ್ತಿಗೆಯ ಮೊತ್ತಂಗಳೆತ್ತಲುಂ
ಕತ್ತಲಿಸೆ ಪೊತ್ತ ಮಸೆವೆತ್ತ ಬಲ್ಲತ್ತಿಗಳ
ಕಿತ್ತು ಭಟರೆತ್ತಿ ಬಡಿಯುತ್ತಿರಲ್ಕತ್ತ ಬೆಳಗಿತ್ತುವವು ಮತ್ತೆ ಬಲಕೆ

"ಎರಡೂ ಕಡೆಯ ಸೈನಿಕರು ನುಗ್ಗಿದಾಗ ಅವರಿಗೆ ಹಿಡಿದ ಛತ್ರಿಗಳಿಂದ ರಣರಂಗವು ಕತ್ತಲಾಗಿ ಹೋಯಿತು. ಶತ್ರುಗಳು ಕತ್ತರಿಸಲೋಸುಗ ಹಿಡಿದ ಕತ್ತಿಗಳು ತಾಗಿ ಉಂಟಾದ ಬೆಳಕಿನಿಂದ ಕತ್ತಲೆಯು ದೂರವಾಗುತ್ತಿತ್ತು". ಇಂಥ ಅನುಪ್ರಾಸಾಲಂಕಾರದ ಮೂಲಕ ರಣರಂಗದ ಉತ್ಸಾಹವೂ ಇಮ್ಮಡಿಗೊಳ್ಳುವಂತೆ ವರ್ಣಿಸಲಾಗಿದೆ.

ರಾಮನು ಅಪವಾದವನ್ನು ಸಹಿಸಲಾರದೆ ಸೀತಾಮಾತೆಯನ್ನು ಕಾಡಿಗೆ ಕಳಿಸುವಾಗಿನ ಭಾವಾವಿಷ್ಟ ಸನ್ನಿವೇಶವನ್ನು ಕವಿ ಹೀಗೆ ವರ್ಣಿಸಿದ್ದಾನೆ.

......ವೈದೇಹಿಯಂ ಕೊಂಡು
ತೆರಳುವ ರಥಾಗ್ರದೊಳ್ ಚಲಿಸುವ ಪತಾಕೆ ರಘು
ವರನಂಗನೆಯನುಳಿದನಹಹಯೆಂದಡಿಗಡಿಗೆ ತಲೆಗೊಡುಹುವಂತಿವೆ

ಸೀತೆ, ಲಕ್ಷ್ಮಣನು ಹೇಳಿದ ಮಾತನ್ನು ಕೇಳಿ ಮೂರ್ಛಾಗತಳಾದ ಸನ್ನಿವೇಶವನ್ನು ಉಪಮೆಯ ಮೂಲಕ ವರ್ಣಿಸುವ ಬಗೆ ಹೀಗಿದೆ:

ಬಿರುಗಾಳಿ ಪೊಡಯಲ್ಕೆ ಕಂಪಿಸಿ ಫಲಿತ ಕದಳಿ
ಮುರಿದಿಳೆಗೊರಗುವಂತೆ ಲಕ್ಷ್ಮಣನ ಮಾತು ಕಿವಿ
ದೆರೆಗೆ ಬೀಳದ ಮುನ್ನ ಹಮ್ಮೈಸಿ ಬಿದ್ದಳಂಗನೆ ಧರೆಗೆ ನಡುನಡುಗುತ

ಬ್ರಾಹ್ಮಣರಿಗೆ ಭೂರಿ ಭೋಜನವನ್ನು ಮಾಡಿಸಿದ ನಂತರ ಹೊರಗಡೆ ಆಟವಾಡುತ್ತಿದ್ದ ಚಾರುಲಕ್ಷಣದ ಶಿಶುವನ್ನು ಕಂಡು, ಈ ಬಾಲಕ ಮುಂದೆ ಕುಂತಳಕ್ಕೆ ಅರಸನಾಗುತ್ತಾನೆಂದು ಸಂರಕ್ಷಿಸುವಂತೆ ಹೇಳಿದಾಗ ಮಂತ್ರಿ ದುಷ್ಟಬುದ್ಧಿ ಆ ಮಗುವನ್ನು ಕೊಲ್ಲಲು ಯೋಚಿಸುವಾಗಿನ ಅವನ ಮನೋಸ್ಥಿತಿಯನ್ನು ಹೀಗೆ ವರ್ಣಿಸಿದ್ದಾನೆ:

ಕ್ರೂರನಕ್ರಾಕುಲದೊಳಿಡಿದಿರ್ದ ಪೆರ್ಮಡುಗ
ಭೀರ ನಿರ್ಮಲ ಜಲದೊಳೆಸೆವಂತೆ ಮನದೊಳ್ ಕ
ಠೋರತರಭಾವಮಂ ತಳೆದು ಬಹಿರಂಗದೊಳ್ ವಿನಯ ಮುಳ್ಳಾತನಾಗಿ

ಇದು ಗೋಮುಖ ವ್ಯಾಘ್ರಭಾವದ ಜನರ ವ್ಯಕ್ತಿತ್ವಕ್ಕೆ ಪೂರಕವಾಗಿದೆ.ಉದ್ದಾಲಕ ಎಂಬ ಬ್ರಾಹ್ಮಣನು ಚಂಡಿ ಎಂಬುವವಳನ್ನು ವಿವಾಹವಾದ ನಂತರ ಆಕೆ ಆತನ ಯಾವ ಮಾತನ್ನೂ ಮನ್ನಿಸದೆ, ವಿರೋಧಿಸುವ ಸಂದರ್ಭದಲ್ಲಿ ಬ್ರಾಹ್ಮಣನ ಸ್ಥಿತಿಯನ್ನು ಹೇಳುವ ಬಗೆ ಹೀಗಿದೆ:

ಪರಿಚರ‍್ಯೆ ಮನೆವಾಳ್ತೆಯೆಂದೆಂಬ
ತಳ್ಳಿಯವಳಲ್ಲ ನೀನೆಂದುದಂ ಮಾಡೆನೆಂದಾ ಚಂಡಿ ಚಂಡಿಯೊಳೆ
ಮುಳ್ಳಿಡಿದ ಮರನೇರಿದಂತಾದುದು !

ಆತನ ನೋವಿನ ತೀವ್ರತೆಯನ್ನು ಈ ಉಪಮೆ ಮನದಟ್ಟು ಮಾಡಿ ಕೊಡುತ್ತದೆ.
ಹಂಸಧ್ವಜನು ತನ್ನ ಮಗನಿಗೆ ಹರಿಯನ್ನು ಕಟ್ಟಿ ಯುದ್ಧದಲ್ಲಿ
ಪಾರ್ಥನಂ ಜಯಿಸಿ ಶ್ರೀಹರಿಯನ್ನು ಹಿಡಿಯುವ ಬುದ್ಧಿಯನೆ ಮಾಡು
ಎಂದು ಹೇಳುತ್ತಾ 'ಕರುವನೆಳಗುಂದಿ ತಾನರಸಿಕೊಂಡೈತರ್ಪ
ತೆರದಿಂದೆ ಬಂದಪರಿ ಮುರಹರಂ ಪಾರ್ಥನ ಕಡೆಗೆ

ಶ್ರೀಕೃಷ್ಣನ ವರ್ಣನೆಯನ್ನು ಯೌವನಾಶ್ವ ಮಾಡುವಾಗಿನ ಉಪಮೆಯಂತೆಯೇ ಅನುಪ್ರಾಸವೂ ಸೇರಿ ವರ್ಣನೆಗೊಂಡು ರಮ್ಯತೆಯ ಮೆರುಗನ್ನು ತಂದುಕೊಟ್ಟಿದೆ.

ಕಮಲದಳ ನಯನ, ಕಾಳಿಯ ಮಥನ ಕಿಸಲಯೋ
ಪಮಚರಣ ಕೇಶಪತಿಸೇವ್ಯ ಕುಜಹರಕೂರ್ಮ
ಸಮಸತ್ಕಪೋಲ ಕೇಯೂರಧರ ಕೈರವಶ್ಯಾಮಕೋಕನದ ಗೃಹೇಯಿ
ರಮಣ ಕೌಸ್ತುಭಶೋಭ ಕಂಬು ಚಕ್ರ ಗದಾಬ್ಜ
ವಿಮಲಕರ ಕಸ್ತೂರಿಕಾತಿಲಕ ಕಾವುದೆಂ
ದಮಿತ ಪ್ರಭಾಮೂರ್ತಿಯಂ ನುತಿಸಲಾತನಂ ಹರಿ ನೆಗಪಿದಂ ಕೃಪೆಯೊಳು

"ಹೇ ಕೃಷ್ಣ ನೀನು ಕಮಲದಳಗಳಂತಿರುವ ಕಣ್ಣುಳ್ಳವನು, ಕಾಳೀಯನನ್ನು ಮರ್ದಿಸಿದವನು, ಚಿಗುರಿನಂತೆ ಅರುಣವರ್ಣದ ಪಾದಗಳುಳ್ಳವನು, ಕಪೀಶನಿಂದ ಸೇವಿತನಾದವನು, ಪಾರಿಜಾತ ವೃಕ್ಷವನ್ನಪಹರಿಸಿದವನು, ಕೂರ್ಮದಂತೆ ಕಪೋಲವನ್ನುಳ್ಳವನು ಭುಜಕೀರ್ತಿಗಳಿಂದ ಅಲಂಕೃತನಾದವನು". ಈ ಸ್ತುತಿಯು ಪೂರ್ಣ ಅಲಂಕಾರಗಳ ಮೆರಗಿನಿಂದ ಶೋಭೆಗೊಂಡಿದೆ.

ಸಮುದ್ರದ ವರ್ಣನೆಯ ಸಂದರ್ಭದಲ್ಲಿ ಅದು ಅನೇಕ ಜೀವಿಗಳ ಆಶ್ರಯ ಹಾಗೂ ಪವಿತ್ರವಾದುದು ಎಂಬುದನ್ನು ಕವಿ ಚಮತ್ಕಾರದಿಂದ ವರ್ಣಿಸುತ್ತಾನೆ:

ಶಿವನಂತೆ ಗಂಗಾಹಿಮಕರಾವಹಂ ರಮಾ
ಧವನಂತೆ ಗೋತ್ರೈಕಪಾಲಕಂ ಪಂಕರುಹ
ಭವನಂತೆ ಸಕಲಭುವನಾಶ್ರಯಂ ಶಕ್ರನಂತನಿಮಿಷನಿಕರಕಾಂತನು
ದಿವಸಾಧಿಪತಿಯಂತನಂತರತ್ನಂ ರಾಜ
ನಿವಹದಂತಪರಿಮಿತವಾಹಿನೀ ಸಂಗತನು
ಪವನಾಳಿಯಂತೆ ವಿದ್ರುಮಲತಾಶೋಭಿತಂ ತಾನೆಂದು ದಧಿ ಮೆರೆದುದು

ಗಂಗೆಯನ್ನು ಮಲಿನ ಎಂದು ಜರೆದು, ಅವಳನ್ನು ಸೋಂಕದಂತೆ ಆಚೆಗೆ ಸರಿಸಿ ಎಂದು ಜ್ವಾಲೆ ಹೇಳಿದಾಗ ಜ್ವಾಲೆಯ ಮಾತಿಗೆ ಬೆದರಿದ ಗಂಗೆ ಮೈತಾಳಿ ಬರುತ್ತಾಳೆ. ಆಗ ಕವಿ 'ತ್ರೈಜಗದೊಳಪವಾದಕಂಜದವರಾರಲಾ ಎಂಬ ಅರ್ಥಾಂತರನ್ಯಾಸ' ಅಲಂಕಾರವನ್ನು ಬಳಸುತ್ತಾನೆ.

ಹೀಗೆ ಲಕ್ಷ್ಮೀಶ ಯಮಕ, ದೀಪಕ, ಉತ್ಪ್ರೇಕ್ಷೆ ಮುಂತಾದ ಅಲಂಕಾರಗಳನ್ನು ಸಾಕಷ್ಟು ಬಳಸಿದ್ದಾನೆ.

ಹರಿಯಲೋಚಮಜಂ ಕುಳ್ಳಿರ್ಪತಾಣಮಿಂ
ದಿರೆಯನಿಳಯಂ ದಿವಾಕರನಕೆಳೆ ಮನ್ಮಥನ
ಸರಸಾರಡಿಗಳಿಕ್ಕೆ ಪರಿಮಳದಬೀಡೆನಿಸಿಕೊಂಡು ಸಂಪೂರ್ಣತೆಯೊಳು
ಪರಿಶೋಭಿಸಿದುವಲ್ಲಿ ನೆರೆದಿಂಗಳಂ ಪೋಲ್ವ
ತರುಣಿಯರ ಚೆಲ್ವೆ ನಗೆಮೊಗದ ಮುಂದೀಗ ತಾ
ವರೆಯಾದುವೆಂಬಂತೆ ಪೆಣ್ಗಳಾಸ್ಯಕೆ ಸೋಲ್ದವು ಆ ಕೊಳದ ಕಮಲಂಗಳು
ಇದರಲ್ಲಿ ಉತ್ಪ್ರೇಕ್ಷಾಲಂಕಾರಗಳು ಸಾಕಷ್ಟಿವೆ.

ಕವಿ ಸಮಯವೂ ಅಲ್ಲಲ್ಲಿ ಬಳಕೆಗೊಂಡು ಇಡೀ ಕಾವ್ಯವನ್ನು ಅವಲೋಕಿಸಿದರೆ ಜೈಮಿನಿ ಭಾರತ, ಅಲಂಕಾರಗಳಿಂದ ಕೂಡಿ ಕಾವ್ಯದ ಪ್ರೌಢತೆಗೆ ಸಾಕ್ಷಿಯಾಗಿದೆ.

ಕುಮಾರವ್ಯಾಸ ಭಾರತದಲ್ಲಿ ಮಂತ್ರಿಜನಕ್ಕೆ ಬುದ್ಧಿಗುಣ

– ಕೃ. ರಾಮಚಂದ್ರ, ಮೈಸೂರು
ಗಮಕ ಕಲಾವಿದರು, ೯೯೮೬೯೦೯೧೯೯

'ವೀರ ನಾರಾಯಣನೆ ಕವಿ ಲಿಪಿಕಾರ ಕುವರವ್ಯಾಸ' ಎಂಬುದು ವಿನೀತ ಕವಿ ನಾರಣಪ್ಪನ ನುಡಿ. 'ಮಗನೆಂದೊಲಿದು ಕರುಣದಿ ವರವನಿತ್ತನು ದೇವ ವೇದವ್ಯಾಸ ಗುರುರಾಯ' ಎಂಬ ದೃಢನಂಬಿಕೆ ಅವನದು. ಕೃಷ್ಣಕಥೆಯನು ಕೃಷ್ಣ ಮೆಚ್ಚಲಿಕೆ ತಿಳಿಯ ಹೇಳುವೆ ಪಂಚಮ ಶ್ರುತಿಯ ಎಂದು ಹೇಳಿದ ಕುಮಾರವ್ಯಾಸ, ತನ್ನ ಕಾವ್ಯದಲ್ಲಿ 'ಪದುಮನಾಭನ ಮಹಿಮೆ ಧರ್ಮವಿಚಾರ ಮಾತ್ರವನು' ನೋಳ್ಪುದೆಂದು ತಿಳಿಸುತ್ತಾನೆ. ಕಾವ್ಯಕೆ ಗುರುವೆನಲು ರಚಿಸಿದ ಕುಮಾರವ್ಯಾಸ ಭಾರತದಲ್ಲಿ ವಿವಿಧ ವರ್ಣದವರಿಗೆ, ವಿವಿಧ ಪ್ರವೃತ್ತಿಯವರಿಗೆ ಬೇಕಾದ ಮೌಲ್ಯಗಳು ಒಗ್ಗೂಡಿವೆ ಎಂದು ತಿಳಿಸುತ್ತ ಪೀಠಿಕಾಸಂಧಿಯ ಪದ್ಯ ೧೯ರಲ್ಲಿ ಹೀಗೆ ಸ್ಪಷ್ಟಪಡಿಸುತ್ತಾನೆ.

ಅರಸುಗಳಿಗಿದು ವೀರ ದ್ವಿಜರಿಗೆ
ಪರಮವೇದದ ಸಾರ ಯೋಗೀ
ಶ್ವರರ ತತ್ವವಿಚಾರ ಮಂತ್ರಿಜನಕ್ಕೆ ಬುದ್ಧಿಗುಣ
ವಿರಹಿಗಳ ಶೃಂಗಾರ ವಿದ್ಯಾ
ಪರಿಣತರಲಂಕಾರ ಕಾವ್ಯಕೆ
ಗುರುವೆನಲು ರಚಿಸಿದ ಕುಮಾರವ್ಯಾಸ ಭಾರತವ

ಕುಮಾರವ್ಯಾಸನ ಕಾವ್ಯದಲ್ಲಿ ಮಂತ್ರಿಗಳ ಲಕ್ಷಣ, ನೀತಿ, ಕರ್ತವ್ಯ ಇತ್ಯಾದಿ ವಿಷಯಗಳು ಪ್ರಮುಖವಾಗಿ ಮೂರು ನೀತಿ ಪ್ರಕರಣಗಳಲ್ಲಿ ಕಾಣಬರುತ್ತವೆ:

೧. ಶಕುನಿ ನೀತಿ (ಆದಿ ಪರ್ವದಲ್ಲಿ)
೨. ರಾಜಸೂಯಯಾಗಕ್ಕೆ ಪ್ರೇರೇಪಿಸುವ ನಾರದರು ಯುಧಿಷ್ಠಿರನಿಗೆ ಮಾಡುವ ರಾಜನೀತಿಯ ಉಪದೇಶ ಸಭಾಪರ್ವದಲ್ಲಿ
೩. ನಿದ್ರೆ ಬಾರದ ಧೃತರಾಷ್ಟ್ರನಿಗೆ ಹೇಳುವ ವಿದುರ ನೀತಿ ಉದ್ಯೋಗಪರ್ವದಲ್ಲಿ.

ಮೇಲಿನ ಪ್ರಕರಣಗಳಲ್ಲಿ, ರಾಜ, ಅಮಾತ್ಯನನ್ನೊಳಗೊಂಡ ಅವನ ಸಪ್ತಾಂಗಗಳು, ಪುರೋಹಿತ, ಸೇನಾಪತಿ, ಮಾವಂತ, ರಾವುತ, ರಥಿಕರಲ್ಲದೆ ಆಸ್ಥಾನದಲ್ಲಿನ ವಿದ್ವಾಂಸ, ಗಾಯಕ ಇತ್ಯಾದಿ ರಾಜಪ್ರಭುತ್ವದಲ್ಲಿನ ಹಲವು ವರ್ಗಗಳವರ ಬಗ್ಗೆ ವಿವರಣೆ ಬರುತ್ತವೆ.

ಇಂದಿನ ಪ್ರಜಾಪ್ರಭುತ್ವದಲ್ಲಿನ ಮಂತ್ರಿವರ್ಗ ಅವಶ್ಯವಾಗಿ ಗಮನಿಸಬೇಕಾದ ಮಂತ್ರಿಗಳ ಲಕ್ಷಣ, ನೀತಿ, ಕರ್ತವ್ಯಗಳು ಸಾಕಷ್ಟು ಕಾವ್ಯದಲ್ಲಿ ಪ್ರಸ್ತಾಪಿಸಲ್ಪಟ್ಟಿವೆ. ಅವನ್ನು ಮನದಟ್ಟು ಮಾಡಿಕೊಂಡು ತಮ್ಮ ಕಾರ್ಯನಿರ್ವಹಣೆಯಲ್ಲಿ ಅನುಷ್ಠಾನಕ್ಕೆ ತಂದರೆ ಸ್ವಚ್ಛ ಆಡಳಿತ ತರುವುದರಲ್ಲಿ ಯಶಸ್ವಿಯಾಗಬಹುದು.

ಮಂತ್ರಿಯ ಲಕ್ಷಣಗಳು

ಯುಧಿಷ್ಠಿರನಿಗೆ ನಾರದರ ಉಪದೇಶದಲ್ಲಿ (ಸ. ೧-೭೧, ೭೨) ಮತ್ತು ಧೃತರಾಷ್ಟ್ರನಿಗೆ ಹೇಳಿದ ವಿದುರ ನೀತಿ (ಉ. ३-೮೭) ಯಲ್ಲಿ ಮಂತ್ರಿಯ ಲಕ್ಷಣಗಳಿವೆ. ಆ ಪ್ರಕಾರ ಮಂತ್ರಿಯು ಶೂರ, ಧೀರ, ಉದಾರನಾಗಿರುವುದಲ್ಲದೆ ಧರ್ಮವನ್ನು ಎತ್ತಿ ಹಿಡಿಯುವವನಾಗಿರಬೇಕು; ಸಮಸ್ತ ವಿಚಾರಗಳನ್ನರಿತವನಾಗಿರಬೇಕು; ಸಜ್ಜನರಿಗೆ ಆಧಾರನಾಗಿರಬೇಕು; ಶತ್ರುಗಳನ್ನು ನಿಗ್ರಹಿಸುವ ಸಾಮರ್ಥ್ಯ ಹೊಂದಿರಬೇಕು; ಸಾಮ, ದಾನ, ಭೇದ, ದಂಡಗಳೆಂಬ ಚತುರೋಪಾಯಗಳನ್ನು ಬಲ್ಲವನಾಗಿರಬೇಕು; ಮಂತ್ರಾಲೋಚನೆಯಲ್ಲಿ ಸಾರವತ್ತಾದುದನ್ನು ತಿಳಿದವನಾಗಿರಬೇಕು; ತಿಳಿದವರು, ಬುದ್ಧಿವಂತರು, ಭಾಷೆ ಲಿಪಿಗಳನ್ನರಿತವರು, ಮಾಂಡಲಿಕರು, ಸಾಮಂತರು ಇವರೆಲ್ಲರ ಇಂಗಿತವನ್ನರಿತು ತನಗೆ ಬೇಕಾದಾಗ ಅವರನ್ನು ಕರೆಸುವ, ಕಳಿಸುವ, ನಿಲ್ಲಿಸುವ ಶಕ್ತಿಯುಳ್ಳವನಾಗಿರಬೇಕು; ಪುಣ್ಯ ಪಾಪ ಕಾರ್ಯಗಳನ್ನರಿತವನಾಗಿರಬೇಕು; ಸಂಭವಿಸುವ ಪರಿಸ್ಥಿತಿಗೆ ಸೂಕ್ಷ್ಮ, ಸ್ಥೂಲ, ಕಾರಣಗಳೇನೆಂಬುದನ್ನು ಅರಿಯಬಲ್ಲವನಾಗಿರಬೇಕು; ಕೋಪವಿಲ್ಲದವನಾಗಿರಬೇಕು; ಕೆಲಸ ಮಾಡುವುದರಲ್ಲಿ ವೃಥಾ ಕಾಲಹರಣ ಮಾಡದಿರುವವನಾಗಿರಬೇಕು; ಒಟ್ಟಿನಲ್ಲಿ ಮಂತ್ರಿಯು ಕುಶಲಮತಿಯಾಗಿರಬೇಕು, ದೂರದೃಷ್ಟಿಯುಳ್ಳವನಾಗಿರಬೇಕು; ಸಂದರ್ಭ, ಪರಿಸ್ಥಿತಿಗಳನ್ನು ದಿಟ್ಟತನದಿಂದ ಎದುರಿಸುವ ಸಾಮರ್ಥ್ಯ ಹೊಂದಿರಬೇಕು. ಈ ಎಲ್ಲ ಲಕ್ಷಣಗಳನ್ನು ಹೊಂದಿರುವ ಮಂತ್ರಿಯು ಪ್ರಜಾಪ್ರಭುತ್ವದಲ್ಲಿನ ರಾಜ್ಯದ ಸುವ್ಯವಸ್ಥೆಯ, ಸುಭದ್ರತೆಯ ಆಡಳಿತ ನಿರ್ವಹಣೆಗೆ ಅತ್ಯವಶ್ಯ. ಕುಮಾರವ್ಯಾಸನು ನೀತಿ ಪ್ರಕರಣಗಳಲ್ಲಿ ಪ್ರಸ್ತಾಪಿಸಿರುವ ಅಂಶಗಳನ್ನು ಪರಾಮರ್ಶಿಸೋಣ:

೧. ತೆರಿಗೆ ವಿಧಿಸುವ ಬಗೆ:

ಹೂವಿನ ಮಕರಂದವನ್ನು ಕಾಯಿ ಹಣ್ಣುಗಳಾಗುವುದನ್ನು ತಪ್ಪಿಸದೆ ಹೀರುವ ದುಂಬಿಯಂತೆ, ತೆರಿಗೆಯ ಹಣವನ್ನು ಪ್ರಜೆಗಳನ್ನು ನೋಯಿಸದಂತೆ ಸಂಗ್ರಹಿಸಬೇಕು (ಸ. ೧-೫೩)

ಹೂವಾಡಿಗನು ಹೂವನ್ನು ಬಿಡಿಸಿಕೊಂಡು ಗಿಡವನ್ನು ರಕ್ಷಿಸುವಂತೆ, ದುಂಬಿಯು ಮಕರಂದವನ್ನು ಮಾತ್ರ ಹೀರಿ ಹೂವನ್ನು ಹಾಗೆಯೇ ಉಳಿಸುವಂತೆ, ಪಶುಪಾಲಕನು

ಗೋವನ್ನು ಚೆನ್ನಾಗಿ ಸಾಕಿ ಹಾಲನ್ನು ಕರೆದುಕೊಳ್ಳುವಂತೆ ಪ್ರಜೆಗಳನ್ನು ರಕ್ಷಿಸಿ ತೆರಿಗೆಯನ್ನು ಸಂಗ್ರಹಿಸಬೇಕು ಎನ್ನುವುದು ಧನಾತ್ಮಕ ನೀತಿಯೆನಿಸಿದರೆ, ಇದ್ದಿಲು ಮಾರುವವನು ಗಿಡವನ್ನೇ ಕಡಿದು ಸುಡುವಂತೆ, ಕಡಿ ಜೀರಗೆ ಹುಳವು ಹೂವನ್ನೇ ಛಿದ್ರಿಸುವಂತೆ, ಹುಲಿಯು ಹಸುವನ್ನೇ ಕೊಲ್ಲುವಂತೆ ಪ್ರಜೆಗಳಿಂದ ತೆರಿಗೆಯನ್ನು ಸಂಗ್ರಹಿಸಬಾರದೆಂಬುದು ಋಣಾತ್ಮಕ ನೀತಿಯೆನ್ನಿಸುತ್ತದೆ. (ಉ. ೩-೨೯)

೨. ಕೃಷಿಯ ಪ್ರಾಮುಖ್ಯತೆ :

ಕೃಷಿ ಮೊದಲು ಸರ್ವಕ್ಕೆ, ಕೃಷಿಯಿಂ
ಪಸರಿಸುವುದಾಕೃಷಿಯನುದ್ಯೋ
ಗಿಸುವ ಜನವನು ಪಾಲಿಸುವುದಾ ಜನಪದದ ಜನದಿ
ವಸು ತೆರಳುವುದು ವಸುವಿನಿಂ ಸಾ
ಧಿಸುವಡಾವುದಸಾಧ್ಯವದರಿಂ
ಕೃಷಿ ವಿಹೀನನ ದೇಶವದು ದುರ್ದೇಶ ಕೇಳೆಂದ(ಸ. ೧-೬೪)

ಸುಮಾರು ೧೪-೧೫ನೇ ಶತಮಾನದಲ್ಲೇ ಕವಿಯು ಕೃಷಿ ಹಾಗೂ ಕೃಷಿಕರ ಬಗ್ಗೆ ಚಿಂತನೆ ಮಾಡಿರುವುದು ಅಚ್ಚರಿಯೆನಿಸುತ್ತದೆ. ಇದು ಇಂದಿಗೂ ಅತ್ಯಂತ ಪ್ರಸ್ತುತವಾದ ವಿಷಯವಾಗಿದೆ. ಭಾರತದ ಬೆನ್ನೆಲುಬೆನಿಸಿರುವ ಕೃಷಿ ಹಾಗೂ ಕೃಷಿಕರು ದೇಶದ ಅಭಿವೃದ್ಧಿಗೆ ಮುಖ್ಯ, ಕೃಷಿಕರ ಪಾಲನೆಯ ಅವಶ್ಯಕತೆ, ಕೃಷಿಯು ಇಲ್ಲದ ದೇಶವು ದುರ್ದೇಶ ಮೊದಲಾದ ಪದ್ಯದಲ್ಲಿನ ಅಂಶಗಳನ್ನು ಇಂದಿನ ಮಂತ್ರಿಗಳೂ ವಿಶೇಷವಾಗಿ ಗಮನಿಸಬೇಕಾಗಿದೆ.

೩. ಯೋಜನೆಯ ನಿರ್ವಹಣೆ:

ತಿಳಿದು ನಾಲ್ವರೊಳೊರೆದ ಕಾರ್ಯವ
ನುಳಿವುದಿಬ್ಬರನಿಬ್ಬರೊಳು ಮ
ತ್ತುಳಿವುದೊಬ್ಬನನೊಬ್ಬನಿಂ ನಿಶ್ಚಯಿಸಿ ಬಳಿಕವನ
ಕಳೆದು ತಾನೇ ತನ್ನೊಳಗೆ ಬಗೆ
ಗೊಳೆ ವಿಚಾರಿಸಿ ಮಾಳ್ಪ ಕಾರ್ಯಕೆ
ಹಳಿವು ಹೊರುವುದೆ ರಾಯ ಚಿತ್ತೈಸಂದನಾ ವಿದುರ(ಉ. ೩-೩೨)

ಯಾವುದಾದರೂ ಹೊಸ ಯೋಜನೆಯೊಂದನ್ನು ರೂಪಿಸುವಾಗ, ಅದರ ಬಗ್ಗೆ ಆಯಾ ಕ್ಷೇತ್ರದಲ್ಲಿನ ಪರಿಣತರಲ್ಲಿ ಕೂಲಂಕಷವಾಗಿ ಚರ್ಚಿಸಬೇಕಾದ್ದು, ಆಳವಾದ ಅಧ್ಯಯನ ನಡೆಸುವುದು ಅತ್ಯವಶ್ಯಕ ಎನ್ನುವುದನ್ನು ಮೇಲಿನ ಪದ್ಯದಲ್ಲಿ ಸೂಚಿಸಲಾಗಿದೆ.

ಯಾರೆಲ್ಲರೊಂದಿಗೆ ಚರ್ಚಿಸಿದರೂ, 'ತಾನೇ ತನ್ನೊಳಗೆ ಬಗೆಗೊಳೆ ವಿಚಾರಿಸಿ' ಕಾರ್ಯವನ್ನು ಕೈಗೊಂಡರೆ ಅದಕ್ಕೆ ಎಂದಿಗೂ ಚ್ಯುತಿ ಇಲ್ಲವೆನ್ನುತ್ತದೆ. ಈ ದಿಶೆಯಲ್ಲಿ ಇಂದಿನ ಮಂತ್ರಿಗಳು, 'Think Tank' ಅಂಥ ಸಮಿತಿಗಳನ್ನು ನಿಯೋಜಿಸಿ, ಸಮರ್ಪಕವಾಗಿ ಪರಾಮರ್ಶಿಸಿ, ಯೋಜನೆಗಳನ್ನು ಕೈಗೆತ್ತಿಕೊಳ್ಳುವುದರಲ್ಲಿ ಕಾರ್ಯೋನ್ಮುಖರಾಗುವುದು ಸೂಕ್ತವೆನಿಸುತ್ತದೆ.

ಹಾಗೆಯೇ, ನಾರದರು ಯುಧಿಷ್ಠಿರನಿಗೆ ಉಪದೇಶಿಸುವಾಗ, ಯಾವುದೇ ಒಂದು ಕೆಲಸವನ್ನು ಕೈಗೊಳ್ಳುವಾಗ, ಅದನ್ನು ಕುರಿತು ಏನು ಮಾಡಬೇಕೆಂಬ ನಿಶ್ಚಯವಿಲ್ಲದಿರುವ ಮಂತ್ರಿಯು, ಬೇರೆ ಹಲವರಲ್ಲೋ, ಜಡಸ್ವಭಾವದರಲ್ಲೋ, ಮತಿಯಲ್ಲದವರಲ್ಲೋ, ಬರಡು ಮನಸ್ಸಿನವರಲ್ಲೋ ಅಥವಾ ಸೇವಕರಲ್ಲೋ ಬಾಯಿಬಿಟ್ಟು ಮಂತ್ರಾಲೋಚನೆಯನ್ನು ಹಲವು ಕಡೆ ಹರಡಿ ಹಾಳುಮಾಡಬಾರದೆಂಬ ಸೂಚನೆಗಳನ್ನು ಕೊಡುತ್ತಾರೆ (ಸ. ೧–೪೦)

೪. ಶತ್ರುವಿನೊಡನೆ ವ್ಯವಹಾರ

ಶತ್ರುಗಳೊಡನೆ ಸರಿಯಾದ ಕಾಲದಲ್ಲಿ ಸಂಧಿ ಮಾಡಿಕೊಳ್ಳಬೇಕು. ಯುದ್ಧವೊದಗಿದರೆ ಅವರನ್ನು ದಂಡಿಸಬೇಕು. ಇದು ರಾಜನೀತಿ. ಶತ್ರುಗಳ ಚಲನವಲನ, ಅವರ ಸೈನ್ಯದ ಬಲಾಬಲಗಳನ್ನು ಅರಿತಿರಬೇಕು. (ಸ. ೧–೩೮)

ಹಾಗೆಯೇ, ಶತ್ರುವಿನ ಮೇಲೆ ದಂಡೆತ್ತಿ ಹೋಗಬೇಕಾದರೆ ವಿಚಾರ ಮಾಡಬೇಕಾದ ಅಂಶಗಳನ್ನು ವಿದುರ ನೀತಿಯಲ್ಲಿ ಕಾಣಬಹುದಾಗಿದೆ. ತನ್ನ ಬಲದ ಸಾಮರ್ಥ್ಯ, ಅಸ್ತ್ರಶಸ್ತ್ರಗಳ ಲಭ್ಯತೆ, ಸೈನ್ಯಕ್ಕೆ ಅವಶ್ಯದ ಆಹಾರ ಸಾಮಗ್ರಿ ಹಾಗೂ ನೀರು ಇವೆಲ್ಲದರ ಕಡೆ ಗಮನಹರಿಸಿ, ಶತ್ರು ಸೈನ್ಯದ ಮೇಲೆ ದಾಳಿ ಮಾಡಿದರೆ ಗೆಲುವು ನಿಶ್ಚಿತ. (ಉ. ೩–೨೮)

೫. ಭಂಡಾರದ ರಕ್ಷಣೆ

ಸರ್ಪವು ನಿಧಿಯನ್ನು ಕಾಯುವಂತೆ, ತನ್ನ ವಶಕ್ಕೆ ಬಂದ ಹಣವು ಕ್ಷಯಿಸದಂತೆಯೂ, ತಾನು ಬಳಸದಂತೆಯೂ, ಹಣವನ್ನು ರಕ್ಷಿಸುತ್ತಿರಬೇಕು; ಸುಳ್ಳು ಹೇಳದ, ವಿಶ್ವಾಸಿಯಾದ ಆಪ್ತನಾದವನನ್ನು ಭಂಡಾರದ ರಕ್ಷಕನನ್ನಾಗಿ ನಿಯಮಿಸಬೇಕು. (ಉ. ೩–೬೦)

೬. ಜೀವನ ನಿರ್ವಹಣೆಯಲ್ಲಿ ನೀತಿಯ ಪರಿಪಾಲನೆ

ವಿದುರ ನೀತಿಯಲ್ಲಿ ಸಂಖ್ಯೆಗಳನ್ನೊಳಗೊಂಡ ಒಗಟಿನಂತಿರುವ ಪದ್ಯವೊಂದು ಹೀಗಿದೆ:

ಒಂದರಿಂದೆರಡಹುದನರಿ ಮೂ
ರಂದವನು ತಿಳಿ ನಾಲ್ಕರಲಿ ಮನ
ಗುಂದದಿರದ್ದೈದರಲಿ ವರ್ಜಿಪುದಾರ ನೇರಳಲಿ
ಒಂದಿಸದಿರೆಂಟನು ವಿಚಾರಿಸಿ
ಮುಂದುವರಿವೊಂಬತ್ತರಲಿ ಮನ
ಗುಂದಿಸದಿರೀರೈದರಲಿ ಭೂಪಾಲ ಕೇಳೆಂದ(ಉ. ೩-೪)

ಒಂದೇ ಅದ್ವಿತೀಯ ವಸ್ತುವಿನಿಂದ ದ್ವಂದ್ವವಾಗಿ ತೋರುವ ಈ ಜಗತ್ತು ಹುಟ್ಟಿತೆಂದು ತಿಳಿದು, ಸತ್ತ್ವ, ರಜೋ, ತಮೋ-ತ್ರಿಗುಣಗಳ ಸ್ವರೂಪವನ್ನರಿತು, ಧರ್ಮ, ಅರ್ಥ, ಕಾಮ, ಮೋಕ್ಷ - ಈ ನಾಲ್ಕು ಪುರುಷಾರ್ಥಗಳಲ್ಲಿ ನಿಷ್ಠೆಯಿಂದಿದ್ದು, ಪಂಚೇಂದ್ರಿಯಗಳಲ್ಲಿ (ಕಣ್ಣು, ಕಿವಿ, ಮೂಗು, ನಾಲಗೆ, ಧರ್ಮ) ಆಸಕ್ತನಾಗದೆ, ಅರಿಷಡ್ವರ್ಗಗಳಾದ ಕಾಮ, ಕ್ರೋಧ, ಲೋಭ, ಮೋಹ, ಮದ, ಮತ್ಸರಗಳನ್ನು ಗೆದ್ದು, ಸಪ್ತವ್ಯಸನಗಳಾದ ಮದ್ಯಪಾನ, ಜೂಜು, ಸ್ತ್ರೀ, ಬೇಟೆ, ವಾಕ್ಪಾರುಷ್ಯ, ಅರ್ಥದೂಷಣ ಮತ್ತು ದಂಡಪಾರುಷ್ಯಗಳನ್ನು ತ್ಯಜಿಸಿ, ಅಷ್ಟಾಂಗಯೋಗ - (ಯಮ, ನಿಯಮ, ಆಸನ, ಪ್ರಾಣಾಯಾಮ, ಪ್ರತ್ಯಾಹಾರ, ಧ್ಯಾನ, ಧಾರಣ) ಸಮಾಧಿಯನ್ನು ಶ್ರದ್ಧೆಯಿಂದ ಆಚರಿಸಿ, ಭಕ್ತಿ ಮಾರ್ಗ (ಶ್ರವಣ, ಸ್ಮರಣ, ಕೀರ್ತನ, ವಂದನ, ಅರ್ಚನ, ಪಾದಸೇವನ, ಸಖ್ಯ, ದಾಸ್ಯ, ಆತ್ಮನಿವೇದನೆ - ಒಂಬತ್ತು ಬಗೆಯ ಭಕ್ತಿ ಮಾರ್ಗಗಳು) ದಲ್ಲಿ ಮುಂದುವರೆದು, ಹತ್ತು ಬಗೆಯ ಸಾಮಾನ್ಯ ಧರ್ಮ (ಸಂತೋಷ, ತಾಳ್ಮೆ, ಮನೋನಿಗ್ರಹ, ಪರದ್ರವ್ಯದಲ್ಲಿ ಅನಪೇಕ್ಷೆ, ಶುಚಿತ್ವ, ಇಂದ್ರಿಯ ನಿಗ್ರಹ, ಶಾಸ್ತ್ರವಿಚಾರ, ಆತ್ಮಜ್ಞಾನ, ಸತ್ಯ, ಕೋಪಿಸಿಕೊಳ್ಳದಿರುವುದು) ಗಳನ್ನು ಉಪೇಕ್ಷಿಸದೆ ಜೀವನ ನಿರ್ವಹಿಸಿದರೆ ಜೀವನದ ಅಂತಿಮಗುರಿಯನ್ನು ಮುಟ್ಟುವುದು ಸಾಧ್ಯ.

೭. ಆಡಳಿತದ ವೈಪರೀತ್ಯ

ಆಡಳಿತ ವೈಭವವನ್ನು ವರ್ಣಿಸುವಂತೆ, ಅದರ ಹುಳುಕುಗಳನ್ನು ಕವಿ ಬಿಚ್ಚಿ ತೋರಿಸುತ್ತಾನೆ. ಕಟುವಾದ ವಿಡಂಬನೆ, ನೇರ ಸಹಜೋಕ್ತಿಯ ಈ ಕೆಳಗಿನ ಪ್ರಸಿದ್ಧ ಪದ್ಯವನ್ನು ಗಮನಿಸಬಹುದಾಗಿದೆ:

ಅರಸು ರಾಕ್ಷಸ ಮಂತ್ರಿಯೆಂಬುವ
ಮೊರೆವ ಹುಲಿ ಪರಿವಾರ ಹದ್ದಿನ
ನೆರವಿ ಬಡವರ ಬಿನ್ನಪವನಿನ್ನಾರು ಕೇಳುವರು
ಉರಿವುರಿವುತಿದೆ ದೇಶ ನಾವಿ

ನ್ನಿರಲು ಬಾರದೆನುತ್ತ ಜನ ಬೇ
ಸರಿನ ಬೇಗೆಯಲಿರದಲೇ ಭೂಪಾಲ ಕೇಳೆಂದ(ಸ. ೧-೬೨)

೮. ಕಂಟಕ ನಿವಾರಣೆ

ದುರ್ಯೋಧನನ ಜನನದ ಸಂದರ್ಭದಲ್ಲಿ 'ಭೂಮಿನಡುಗಿತು, ದೆಸೆಗೆ ಹರಿದವು ಧೂಮಕೇತುಗಳೊದರಿದವು ಬಳಿಕಾ ಮಹಾನಗರದಲಿ ಭರದಲಿ ಭೂರಿ ಗೋಮಾಯು'. ದ್ವಿಜರುಫಲಗತಿಯನ್ನು ತಿಳಿಸಿ ಇವನಿಂದಲೇ ವಂಶದ ಅಂತ್ಯವೆಂದಾಗ, ವಿದುರ, ಧೃತರಾಷ್ಟ್ರನನ್ನು ಕುರಿತು ಹೇಳುವ ಪದ್ಯವನ್ನೂ ಗಮನಿಸಬಹುದಾಗಿದೆ:

ಕುಲಕೆ ಕಂಟಕನಾದಡೊಬ್ಬನ
ಕಳೆವುದೂರಳಿವಿನಲಿ ಕಳೆವುದು
ಕುಲವನೊಂದನು ದೇಶದಳಿವಿನಲೂರ ಕೆಡಿಸುವುದು
ಇಳೆಯ ನಖಿಳವ ಬಿಸುಡುವುದು ತ
ನ್ನುಳಿವ ಮಾಡುವುದೆಂಬ ವಚನವ
ತಿಳಿವುದೀತನ ಬಿಸುಟು ಕಳೆ ನೀನೆಂದನಾ ವಿದುರ (ಆ. ೪-೫೨)

೯. ಶಕುನಿಯ ಕುಟಿಲ ನೀತಿ

ಇದರಲ್ಲೂ ಅನೇಕ ಗ್ರಾಹ್ಯ ಅಂಶಗಳಿವೆ. ಅವುಗಳಲ್ಲಿ ಕೆಲವನ್ನು ಉಲ್ಲೇಖಿಸಬಹುದಾಗಿದೆ:

"ಮೊಳೆಯಲೇ ಮುರುಡಿಸಲುಬೇಹುದು
ಬಲಿದ ಬಳಿಕದು ನಿನಗೆ ಹವಣೇ....."(ಆ. ೮-೧೮)
"ಇರುಬಿನಲಿ ಸಿಕ್ಕಿರ್ದ ಹುಲಿಯನು
ಮುರಿದು ಕಳೆಯದೆ ತಳಪಟಕೆ ಬಿ
ಟ್ಟರಿಯಬಹುದೇ ಕೊಂದು ಕೂಗದೆ ಬಿಡುವುದೇ ಬಳಿಕ"(ಆ. ೮-೨೧)
"ಶತ್ರುಶೇಷವಿದಲ್ಲವೆಂದಳು
ಹುತ್ತ ಬರಲಾಗದು ಕಣಾ....."(ಆ. ೮-೨೭)
"ವಿಷವನಣುವೆಂದಳು ಕದುಪಭೋ
ಗಿಸಲು ಕೊಲ್ಲದೇ ಬಿಡುವುದೇ......"(ಆ. ೮-೨೮)

ಮೇಲಿನ ಉಕ್ತಿಗಳು ಶತ್ರುಗಳ ಬಗ್ಗೆ ಬಹು ಎಚ್ಚರವಾಗಿರಬೇಕೆಂಬುದನ್ನು ತಿಳಿಸುವುದಲ್ಲದೆ, ಅಲಕ್ಷಿಸಬಾರದೆಂಬ ಎಚ್ಚರಿಕೆಯನ್ನು ಸೂಚಿಸುತ್ತದೆ.

ನೀತಿ ಪ್ರಕರಣಗಳಲ್ಲದೆ, ಇತರ ಸಂದರ್ಭಗಳಲ್ಲೂ ಅಲ್ಲಲ್ಲೇ ರಾಜನೀತಿಯನ್ನು ನಿರೂಪಿಸುವ ಉಕ್ತಿಗಳನ್ನು ಕವಿ ತನ್ನ ಕಾವ್ಯದಲ್ಲಿ ಅಳವಡಿಸಿದ್ದಾನೆ. ಈ ಸಂದರ್ಭದಲ್ಲಿ ಕೆಲವನ್ನು ಪರಾಮರ್ಶಿಸಬಹುದಾಗಿದೆ.

೧) **"ಅರಸುತನ ತನಗಧಿಕವಾಗುತ**
ಬರಬರಲು ಕಣ್ಣಾಲಿಗಳು ತರ
ಹರಿಸಿ ಕಾಣವು ವರ್ತಮಾನದ ನೃಪರ ಬಳಕೆಯಿದು....(ಉ. ೯–೨)

ಇದು ಅಧಿಕಾರಕ್ಕೆ ಸಾಮಾನ್ಯವಾಗಿ ಹತ್ತುವ ರೋಗ. ಇಲ್ಲಿ ಲಾರ್ಡ್ ಆಕ್ಟರ್‌ನ ಸೂತ್ರಮಯವಾಕ್ಯಗಳು ನೆನಪಾಗುತ್ತವೆ.

"Power corrupts, absolute power absolutely, All greatmen are bad" ರಾಜಪ್ರಭುತ್ವವೇ (Monarchy) ಕಾವ್ಯದಲ್ಲಿ ಮುಖ್ಯವಾಗಿ ಕಂಡರೂ ರಾಜರು ಲೋಕಹಿತ ದಕ್ಷರಾಗಿದ್ದರು.

೨) **ತಗರೆರಡ ಖತಿಗೊಳಿಸಿ ಬಲುಗಾ**
ಳಗವ ನೋಡುವರಂತೆ ನಿಮ್ಮನು
ತೆಗೆತೆಗೆದು ಕಲಿಮಾಡಿ ಬಿಡುವರು ಖುಲ್ಲರಾದವರು(ಉ. ೧–೩೦)

ಇದು ಇಂದಿಗೂ ಕಠೋರ ಸತ್ಯ. ಬಲಾಢ್ಯ ರಾಷ್ಟ್ರಗಳು (Super Powers) ಎರಡು ಮೂರ್ಖದೇಶಗಳ ನಡುವೆ ಬಡಿದಾಟ ಹೂಡಿ ತಮ್ಮ ಸ್ವಾರ್ಥ ಸಾಧಿಸುವ ಘಾತಕ ನೀತಿ ಇನ್ನೂ ನಿಂತಿಲ್ಲ.

೩) **'ಸಾಮ'ದ ಬಗ್ಗೆ ಅಲ್ಲೇ ಪ್ರಸ್ತಾಪವಿರುವುದನ್ನು ಕಾಣಬಹುದು.**
"ಕಳುಹುವುದು ಶಿಷ್ಟರನು ಧರಣೀ

ತಳವ ಬೇಡಿಸುವಲ್ಲಿ ಸಾಮವ

ಬಳಸುವುದು...(ಉ. ೧–೫)

"ದೂತನ ವಿನಯದಲಿ ಕಳುಹುವುದು

ಸಾಮವ ಬೆಳೆಸಿ ನೋಡುವುದು(ಉ. ೧–೧೦)

"ಸಾಮವೆಂಬುದು ರಾಜನೀತಿಗೆ
ತಾಮನೋಹರ ರೂಪು ಬದುಕುವ
ಭೂಮಿಪಾಲರನಂತ ವಿಭವಕೆ ಬೀಜಮಂತ್ರವಿದು(ಉ. ೯–೫)

ಇಲ್ಲಿ ಸಾಮನೀತಿಯ ಮಹತ್ತ್ವವಿದೆ. ಶತ್ರುಗಳನ್ನು ಸಾಮದಲ್ಲಿ ಮುರಿಯಬೇಕೆಂಬ ಸೂಚನೆಯಿದೆ.

೪) ಮತ್ತೆ ಕೆಲವು ನೀತಿಗಳನ್ನು ನೋಡಬಹುದಾಗಿದೆ

ಹಗೆಯನೊಳಗಿಡಲಾಗದದು ವೈ
ರಿಗಳ ನಿಲಯದಲನ್ನ ಪಾನಾ
ದಿಗಳನುಣಲಾಗದು ನಿಧಾನಿಸೆ ರಾಜನೀತಿಯಿದು (ಉ. ೮–೭೦)
"ಇದು ರಾಜತಂತ್ರಜ್ಞತೆ
"ದೂತರನು ಕಟ್ಟುವುದು ರಾಯರಿ
ಗೇತರುಚಿತವು...(ಉ. ೯–೪೬)

'ದೂತರು' – ಇಂದಿನ ಪರಿಸ್ಥಿತಿಯಲ್ಲಿ Ambassadors (ರಾಯಭಾರಿಗಳು)
"ಆಪತ್ತೆಸಗಿದಾಗಲೆ ಹಗೆಯ ಗೆಲುವುದು ವಸುಮತೀಶರ ನೀತಿ"(ಕ. ೨೬–೧೯)
"ಬರೆದ ಬಳಿಕದು ವಿಧಿಯ ಸೀಮೆಯ
ಬರಹ ನಿಜ ಕಾರ್ಯಾರ್ಥ ಲಾಭವು
ದೊರಕಿದೊಡೆ ಪತಿಯರ್ಥ ನೀರಲಿ ಬರೆದ ಲಿಪಿಯಂತೆ
ಕರಗು ಪಿತಲೋಲುಪರು ಲಂಚದ
ಪರಮಜೀವನ ಜಾಣರಾ ಸಿರಿ
ಕರಣದವರೊಪ್ಪಿದರು ಭೂಪಾಲಕನ ಸಭೆಯೊಳಗೆ(ಉ. ೮–೪೦)

ಕೌರವನ ಆಸ್ಥಾನದಲ್ಲಿ ಇದ್ದ ಕರಣಿಕರು (ಲೆಕ್ಕ ಬರೆಯುವವರು) ಲಂಚ ಪರಮಜೀವನ ಜಾಣರಾಗಿದ್ದುದನ್ನು ಮೇಲೆ ವರ್ಣಿಸಿದೆ. ಇಂದು ಇದು ಸರ್ವೇಸಾಮಾನ್ಯವಾಗಿರುವುದನ್ನು ನೋಡಬಹುದಾಗಿದೆ.

ಹೀಗೆ, ಕುಮಾರವ್ಯಾಸ ಭಾರತದಲ್ಲಿ ಇಂದಿನ ಮಂತ್ರಿಗಳಿಗೂ ಮಾರ್ಗದರ್ಶನ ನೀಡುವ ರಾಜನೀತಿಯ ಪ್ರಸ್ತಾಪ ಸಾಕಷ್ಟಿದೆ. ಇದರ ಅವಲೋಕನ ಇಂದಿನ ಮಂತ್ರಿಗಳಿಗೆ ಅವಶ್ಯವಾಗಿದೆ. ರಾಜ್ಯದ ಆಡಳಿತದ ಸುವ್ಯವಸ್ಥೆಗೆ, ಸುಭದ್ರತೆಗೆ ಕುಮಾರವ್ಯಾಸನ 'ಮಂತ್ರಿಜನಕ್ಕೆ ಬುದ್ಧಿಗುಣ' ಮಂತ್ರಿಗಳು ಅವಶ್ಯವಾಗಿ ಅವಲೋಕಿಸಬೇಕಾಗಿದೆ.

ಮಂಕುತಿಮ್ಮನ ಕಗ್ಗದಲ್ಲಿ ರಾಮಾಯಣದ ಪಾತ್ರಗಳು

– **ಪ್ರೊ. ಜಿ ಅಶ್ವತ್ಥನಾರಾಯಣ**, ಬೆಂಗಳೂರು
ನಿವೃತ್ತ ಪ್ರಾಧ್ಯಾಪಕರು, ಸಾಹಿತಿಗಳು
೦೮೦–೨೬೬೩೭೭೮೩

ಡಿ.ವಿ.ಜಿ.ಯವರ ಮಂಕುತಿಮ್ಮನಕಗ್ಗ ಕನ್ನಡದ ಭಗವದ್ಗೀತೆ. ಸಾಮಾನ್ಯನಿಗೆ ಜೀವನ ವಿಶ್ವಕೋಶ, ಬದುಕಿನ ಮನುಸ್ಮೃತಿ. ಕನ್ನಡ ಸುಭಾಷಿತ ಸಾಹಿತ್ಯದಲ್ಲೇ ಮೇರುಕೃತಿ, ಸರ್ವಜ್ಞ ವಚನಗಳು, ಸೋಮೇಶ್ವರ ಶತಕ ಮೊದಲಾದ ಸುಭಾಷಿತ ಸಾಹಿತ್ಯಗಳ ಸಾಲಿಗೆ ಸೇರುವ ಅಜರಾಮರ ಕೃತಿ. ಕಗ್ಗದ ಬಗ್ಗೆ ನಾನಾ ಬಗೆಯಲ್ಲಿ ಅರ್ಥೈಸಿದ ಅನುವಾದ ಟೀಕಾ ಗ್ರಂಥಗಳು ಬಂದಿವೆ. ಆದರೆ ವಿವಿಧ ವಿಷಯಗಳ ದೃಷ್ಟಿಯಲ್ಲಿ ವಿವೇಚನೆ ಆಗಿರುವುದು ಕಡಿಮೆ. ಈ ಪ್ರಬಂಧದಲ್ಲಿ ರಾಮಾಯಣಕ್ಕೆ ಸಂಬಂಧಿಸಿದ ಪಾತ್ರಗಳ ಉಲ್ಲೇಖ ದೃಷ್ಟಾಂತಗಳ ತಾತ್ವಿಕ ಹಿನ್ನೆಲೆಯಲ್ಲಿ ಕೆಲವು ಸಂಗತಿಗಳನ್ನು ಗಮನಿಸೋಣ:

ವಾಲ್ಮೀಕಿಯ ಗಾನ:

ಲೋಕದಲ್ಲಿ ನಿಜವಾದ ಕಾವ್ಯಗಳು ಮೂರೇ – ರಾಮಾಯಣ, ಭಾರತ, ಗೀತೆ:

ಪ್ರೀತಿ ಮಹಿಮೆಯಚಿತ್ರ ರೀತಿಯಂ ವಾಲ್ಮೀಕಿ
ನೀತಿ ಸೂಕ್ಷ್ಮದ ಗಹನಮಾರ್ಗಮಂ ವ್ಯಾಸರ್
ಗೀತೆಯಲಿ ವಿಶ್ವಜೀವನ ರಹಸ್ಯವನವರ್
ಖ್ಯಾತಿಸಿಹರದು ಕಾವ್ಯ – ಮಂಕುತಿಮ್ಮ (೪೬೨)

ಎಚ್ಚೆತ್ತ ಚೈತನ್ಯದ ಮಹಾಕವಿ ವಾಲ್ಮೀಕಿ:

ನಿನಗಿರದ ಕಣ್‌ಬಾಯ್ ವಾಲ್ಮೀಕಿಗೆಂತಾಯ್ತು?
ಮುನಿಕವಿತೆಗೆಂತು ನಿನ್ನೆದೆಯೊಳೆಡೆಯಾಯ್ತು?
ಘನಮಹಿಮನೊಳ್ ಜ್ವಲಿಸುತದರೊಳು ನಿದ್ರಿಸುತೆ
ಅನಲನೆಲ್ಲರೊಳಿಹನು – ಮಂಕುತಿಮ್ಮ (೫೭೧)

ವಾಲ್ಮೀಕಿ ರಾಮಾಯಣದ ಗಾನ ವೈಖರಿ, ಅಂತರಂಗದಲ್ಲಿ ಯೋಗ ಪುಲಕಾಂಕುರವನ್ನು ಏಳಿಸುತ್ತದೆ. ಅದು ತ್ಯಾಗರಾಜರ ಗಾನದಂತೆ, ಆಗುಂಬೆಯ ಅಸ್ತಮಾನದಂತೆ ದ್ರೋಣ ಪರ್ವತದ ಉದಯದಂತೆ ಉಲ್ಲಾಸ, ಉತ್ಸಾಹ, ವಿಸ್ಮಯ, ಆನಂದಗಳನ್ನು ನಮ್ಮಲ್ಲಿ ಮೂಡಿಸುತ್ತದೆ ಎಂದು ಸೊಬಗಿನ ಸ್ಫೂರ್ತಿಯ ಪ್ರಕೃತಿ ವ್ಯಾಪಾರಗಳಿಗೆ ವಾಲ್ಮೀಕಿಯ ನಾದ ಮಾಧುರ್ಯ ಸೌಂದರ್ಯಗಳನ್ನು ಡಿವಿಜಿ ನಿರೂಪಿಸಿದ್ದಾರೆ (೫೭).

ವಾಲ್ಮೀಕಿ ಮಹಾಕವಿ ಏಕೆಂದರೆ ಅವರಲ್ಲಿ ಪ್ರತಿಭೆ ಇದೆ. ಸಾಗರದೊಳಗಿನ ಬೆಂಕಿಯಂತೆ ಅವರಲ್ಲಿ ಅಡಗಿದೆ. ಹೊರನೋಟದಿಂದ ನೋಡಿದರೆ ನಮಗೂ ವಾಲ್ಮೀಕಿಗೂ ಏನು ವ್ಯತ್ಯಾಸವಿಲ್ಲ ನಮಗಿದ್ದಂತೆಯೇ ಕಣ್ಣು ಬಾಯಿ ಇತ್ಯಾದಿ ಇದೆ. ಆದರೆ ಮಹಾಕಾವ್ಯ ಅವರಿಂದ ಹೊರಗೆ ಬಂತು ನಮ್ಮಲ್ಲಿ ಬಂದಿಲ್ಲ. ಏಕೆಂದರೆ ಅದು ಹೊರಬರಲು ಪ್ರತಿಭೆ ನಮ್ಮಲ್ಲಿಲ್ಲ ಹೀಗಾಗಿ ವಾಲ್ಮೀಕಿ ಎಚ್ಚೆತ್ತ ಚೈತನ್ಯದ ಮಹಾಕವಿ ಆಗಿದ್ದಾನೆ.

೨. ಶ್ರೀರಾಮ:

ಶ್ರೀರಾಮ ಆದರ್ಶ ಪುರುಷ. ಆತನು ತಾನು ಭೀಮಬಲ ಹೊಂದಿದ್ದರೂ, ಕ್ರೂರಿ ಆಗದೆ, ಕರುಣಾಮಯಿಯಾಗಿ ಅಭಯರಾಮನಾಗಿದ್ದಾನೆ. ಮಾನವನಿಗೆ ದೈತ್ಯಶಕ್ತಿ ಇದ್ದರೆ ಚಿಂತಿಲ್ಲ, ಆದರೆ ದಯಾಮಯನಾಗಿರಬೇಕು ಎಂಬ ಸಂದೇಶವನ್ನು ರಾಮನ ಗುಣದ್ವಯಗಳು ಸಾರುತ್ತಿವೆ.

ರಾಮಣೀಯಕದಿ ನಲಿವಕ್ಷಿಯೊಡನಚಲಮನ
ಪ್ರೇಮಮಯ ಮನದೊಡನೆ ಮೋಹಬಡದಾತ್ಮ
ಭೀಮಬಲದೊಡನೆ ರಾಮನ ಅಭಯನಿಯಮವಿರೆ
ಯಾಮಳ ವರಂಗಳವು – ಮಂಕುತಿಮ್ಮ (೪೩೫)

ಶ್ರೀರಾಮಪರೀಕ್ಷಣ ಕಾವ್ಯವನ್ನು ಬರೆದು ವಿಸ್ತಾರವಾಗಿ ಡಿವಿಜಿ ಶ್ರೀರಾಮನ ವ್ಯಕ್ತಿತ್ವವನ್ನು ವಿವರಿಸಿದ್ದಾರೆ. ರಂಗನಾಥಶರ್ಮರ ವಾಲ್ಮೀಕಿ ರಾಮಾಯಣದ ಗದ್ಯಾನುವಾದದ ಸಂಪುಟಗಳಿಗೆ ಅನುಪಮ ಮುನ್ನುಡಿಗಳಲ್ಲಿ ರಾಮನ ವ್ಯಕ್ತಿತ್ವವನ್ನು ಅದ್ಭುತವಾಗಿ ಚಿತ್ರಿಸಿದ್ದಾರೆ. ಕಗ್ಗದಲ್ಲಿ ಅವನ ಒಂದೆರಡು ಗುಣಗಳನ್ನಷ್ಟೆ ಪ್ರಸ್ತಾಪಿಸಿದ್ದಾರೆ. ಶ್ರೀರಾಮನಿಗಿಂತ ಭರತನಿಗೆ ಕಗ್ಗದಲ್ಲಿ ಹೆಚ್ಚು ಪ್ರಾಶಸ್ತ್ಯಕೊಟ್ಟಿದ್ದಾರೆ ಎನ್ನಬಹುದು. ೬ ಪದ್ಯಗಳು ಅವನಿಗಾಗಿಯೇ ಮೀಸಲಾಗಿವೆ. (೪೬೧, ೭೦೬ ರಿಂದ ೭೧೧).

ಧರೆಯೇ ಕೋಸಲ, ಪರಬ್ರಹ್ಮನೇ ರಘುವರನು
ಭರತನವೊಲನು ಪಾಲನಕ್ರಿಯರು ನಾವು
ಅರಸನೂಳಿಗ ನಮ್ಮ ಸಂಸಾರದಾಡಳಿತ
ಹರುಷದಿಂ ಸೇವಿಸೆಲೊ – ಮಂಕುತಿಮ್ಮ (೭೧೧)

೩. ಹನುಮಂತ:

ಲೋಕದಲ್ಲಿ ಪರ–ವಿರೋಧಗಳ ಸೃಷ್ಟಿ ಇರುವುದು ಸಹಜ, ಪ್ರಕೃತಿಯಲ್ಲಿ ಮಾವು ಬೆಳೆಯುತ್ತದೆ, ಬೇವು ಬೆಳೆಯುತ್ತದೆ. ರಾಮನಿದ್ದಾಗ ರಾವಣನಿದ್ದನು, ಭೀಮನಿದ್ದಾಗ ದುಶ್ಶಾಸನನಿದ್ದ, ಹೀಗೆ ಸಜ್ಜನರಿದ್ದಾಗಲೆಲ್ಲ ದುರ್ಜನರಿರುವುದು ಕಂಡು ಬರುತ್ತದೆ. ಎಲ್ಲ ಕಾಲದಲ್ಲೂ ಇತಿಹಾಸ ಹೀಗೆಯೇ ಇದೆ. ಇದಿಲ್ಲದ ಕಾಲ ಎಲ್ಲಿದೆ? ಅದಕ್ಕೆ ಡಿವಿಜಿ "ಈ ಮಹಿಯೊಳು ಅನ್ಯಾಯಕಾರಿ ಇಲ್ಲದುದು ಎಂದು?" ಎಂದು ಪ್ರಶ್ನಿಸಿದ್ದಾರೆ. ಹಾಗಾದರೆ

ನಾವೇನು ಮಾಡಬೇಕು? ಅಂಥಾ ಮಹಾಮಹಿಮರ ಎದುರಿಗೆ ಇರುವ ದುಷ್ಟನನ್ನು ನಾವು ಎದುರಿಸಲು ಆದೀತೇ? ಎಂದಾಗ ಡಿವಿಜಿ ಹೇಳುತ್ತಾರೆ–ನೀನು ರಾಮಭಂಟ ಹನುಮನಾಗು. ಹನುಮಂತ ಧರ್ಮಮಾರ್ಗ ಬಿಡಲಿಲ್ಲ ರಾಮಸೇವೆ ಬಿಡಲಿಲ್ಲ, ರಾವಣನನ್ನು ಎದುರಿಸಲು ರಾಮಭಂಟನಾದನೇ ಹೊರತು ಅವನೇ ರಾಮನಾಗಲು ಹೋಗಲಿಲ್ಲ. ನಾವು ದೊಡ್ಡವರ ಮಾರ್ಗದಲ್ಲಿ ಧರ್ಮಾನುಸಾರ ನಡೆಯಬೇಕು ಎನ್ನುತ್ತಾರೆ ಡಿವಿಜಿ. ಹನುಮಂತನನ್ನು ಆದರ್ಶ ಭಕ್ತನನ್ನಾಗಿ ಚಿತ್ರಿಸಿದ್ದಾರೆ.

ರಾಮನಿರ್ದಂದು ರಾವಣನೊಬ್ಬ ನಿರ್ದನಲ
ಭೀಮನಿರ್ದಂದು ದುಶ್ಶಾಸನದೊರ್ವನ್
ಈ ಮಹಿಮೆಯೊಳನ್ಯಾಯಕಾರಿಯಿಲ್ಲದುದೆಂದು?
ರಾಮಭಟನಾಗು ನೀಂ – ಮಂಕುತಿಮ್ಮ (೨೮೮)

ಹನುಮಂತನ ಭಕ್ತಿ ಸಂದೇಶವನ್ನು ರಾಮಭಂಟನಾಗಿ ಲೋಕಕ್ಕೆ ನೀಡಿರುವುದನ್ನು ಕುರಿತು ಡಿವಿಜಿ ಹೇಳುವ ಮಾತಿದು. ಆದರ್ಶಪ್ರಾಯ ಆಧ್ಯಾತ್ಮ ತತ್ತ್ವಕ್ಕೆ ಶರಣಾಗತಿ ತತ್ತ್ವಕ್ಕೆ ಸೋತು ಹಗಲು ರಾತ್ರಿ ಮತ್ತೇನನ್ನೂ ನೆನೆಯದೆ ಜೀವನದ ಸುಖದುಃಖಗಳನ್ನೆಲ್ಲ ಶ್ರೀರಾಮನಿಗೆ ಒಪ್ಪಿಸಿ, ಆತನ ಸೇವೆ – ಧ್ಯಾನದಲ್ಲಿ ಬಾಳನ್ನು ಸವೆಸಿದನು. ಆದರ್ಶ ತತ್ತ್ವಕ್ಕೆ ಶರಣಾಗಿ, ಮಹಾತ್ಮರ ಸೇವೆಗೆ ಬದ್ಧನಾಗಿ ನಿಷ್ಠಾವಂತನಾಗಿ ಬಾಳನ್ನು ಭಕ್ತನಾಗಿ, ದಾಸನಾಗಿ, ಸವೆಯಬೇಕು ಎಂಬುದೇ ಹನುಮಂತನ ಉಪದೇಶ ಎಂದು ಹನುಮ ಜೀವನದ ಸಾರಸರ್ವಸ್ವವನ್ನು ಒಂದೇ ಮಾತಿನಲ್ಲಿ ಹೇಳಿದ್ದಾರೆ:

ಘನ ತತ್ತ್ವವೊಂದಕ್ಕೆ ದಿನರಾತ್ರಿ ಮನಸೋತು
ನೆನೆಯದಿನ್ನೊಂದನೆಲ್ಲವ ನೀಡುತದರ
ಅನುಸಂಧಿಯಲಿ ಜೀವಭಾರವನು ಮರೆಯುವುದು
ಹನುಮಂತನುಪದೇಶ – ಮಂಕುತಿಮ್ಮ ॥ ೭೬೬ ॥

೪. **ಭರತ (೭೦೬, ೭೦೭, ೭೦೮, ೭೦೯, ೭೧೦, ೭೧೧)**

ಭರತನು "ಧರೆಯೆ ಕೋಸಲ, ಪರಬ್ರಹ್ಮನೇ ರಾಮ, ತಾನು ಅನುಪಾಲಕ ಎಂದು ತಿಳಿದು ಸಂತೋಷದಿಂದ ರಾಜ್ಯವಾಳಿದ. ಹಾಗೆಯೇ ನಾವು ಸಂಸಾರದಾಡಳಿತ ನಡೆಸಬೇಕು. ರಾಮನಪರ ರಾಜ್ಯವಾಳಿದ ಭರತ ಜಟಿಲ, ಕುಟಿಲ, ಕಠಿಣ ಸಮಸ್ಯೆಗಳು ಬಂದಾಗ ರಾಮ ಬಂದು ತೀರ್ಮಾನಿಸಲಿ, ನನಗೇಕೆ ಎಂದು ಜಾರಿ ಕೊಳ್ಳಲಿಲ್ಲ. ತಾನೇ ಹೊಣೆ ಹೊತ್ತು ನಿಭಾಯಿಸಿದನು. ಹಾಗೆಯೇ ನಾವು ಪರಬ್ರಹ್ಮನ ಅಧೀನರಾದರೂ ಕರ್ತವ್ಯ ನಿರ್ವಹಣೆಯಲ್ಲಿ ವಿಮುಖರಾಗಬಾರದು.

ಒಂದು ಕಡೆ ತಾನೇ ಅಧಿಕಾರಿಯಾಗಿ ಕಾರ್ಯನಿರ್ವಹಿಸಿದರೂ, ಇನ್ನೊಂದೆಡೆ ತಾನೇ ಪ್ರತಿನಿಧಿ ಎಂಬಂತೆ ವರ್ತಿಸುತ್ತಿದ್ದ ಭರತ ಕಡುಯೋಗಿಯೆನಿಸಿದ್ದನು. ನಾವು ಸಹ ಬದುಕಿನಲ್ಲಿ

ಎಲ್ಲದರ ಹೊಣೆಯನ್ನು ನಿರ್ವಹಿಸಬೇಕು, ನಿರ್ಲಿಪ್ತ ಭಾವವೂ ಇರಬೇಕು ಎನ್ನುತ್ತಾರೆ ಡಿವಿಜಿ. ಹೀಗೆ ಭರತನ ವ್ಯಕ್ತಿತ್ವ, ಆದರ್ಶಗಳು ರಾಮಾಯಣದಲ್ಲಿ ಹೇಗೆ ನಿರೂಪಿತವಾಗಿವೆ ಎಂಬುದನ್ನು ಡಿವಿಜ ತಮ್ಮದೇ ಆದ ಅನುಭವದ ಹಿನ್ನೆಲೆಯಲ್ಲಿ ವಿವರಿಸಿದ್ದಾರೆ. ಸಾಂಸಾರಿಕ, ಸಾಮಾಜಿಕ ಕಾರ್ಯಕರ್ತರಿಗೆ ಭರತ ಆದರ್ಶಪ್ರಾಯ ಹೇಗೆ ಎಂದು ಬಣ್ಣಿಸಿದ್ದಾರೆ. ಅದಕ್ಕೆ ಸಾಕ್ಷಿ ಈ ಪದ್ಯಗಳು:

ಅರಸಡವಿಗೈದಿದೊಡಂ, ಅವನಿತ್ತ ಪಾದುಕೆಗ
ಳೊರೆಯದೊಡಮೇನನುಂ, ತಾಂ ವರದಿಯೊರೆದು
ದೊರೆತನದ ಭಾರವನು ಹೊತ್ತು, ದೊರೆಯಾಗದಾ
ಭರತನವೊಲಿರು ನೀನು – ಮಂಕುತಿಮ್ಮ (೭೦೬)

ಒಡರಿಸುವನೆಲ್ಲವನ್, ಅದಾವುದುಂ ತನದಲ್ಲ
ಬಿಡನೊಂದನುಂ ರಾಜ್ಯ ತನದಲ್ಲವೆಂದು,
ನಡೆವಂ ಸ್ವತಂತ್ರದಲಿ ಸಲಿಸುತೆ ವಿಧೇಯತೆಯ
ಕಡುಯೋಗಿ ಭರತನಲ – ಮಂಕುತಿಮ್ಮ (೭೦೮)

(ಗಮನಿಸಿ – ಪದ್ಯಗಳು – ೭೦೭, ೭೦೯, ೭೧೦, ೭೧೧)

೫. ರಾವಣ:

ಪುರಾಣಪುರುಷರಲ್ಲಿ ಎಲ್ಲರಿಗೆ ಒಂದು ತಲೆ. ಆದರೆ ರಾವಣನಿಗೆ ಹತ್ತು ತಲೆ, ಆದ್ದರಿಂದ ಅವನು ಅತಿಶಯ ಪುರುಷನು ಎನ್ನುತ್ತಾರೆ. ಆದರೆ ಅದೇನು ವಿಶೇಷವಲ್ಲ. ಮಾನವ ರಾವಣನಿಗಿಂತ ಮಿಗಿಲಾದವನು. ನೂರು ತಲೆಯವನು (ಶತಶಿರ) ಎನ್ನುತ್ತಾರೆ. "ಸಾವಿರಾಸ್ಯಗಳನೊಂದರೊಳಗಿರಿಸಿಹನು" ಅವನಲ್ಲಿ ಇಲ್ಲದ ದುಷ್ಟಗುಣಗಳೇ ಇಲ್ಲ. ಹಾವಿನಂತೆ ಮತ್ಸರವನ್ನು, ಹುಲಿಯಂತೆ ಕ್ರೌರ್ಯವನ್ನು, ಕಪ್ಪೆಯಂತೆ ಕೂಪ ಮಂಡೂಕತನವನ್ನು, ಹುಲ್ಲೆಯಂತೆ ಸಾಧುತ್ವವನ್ನು, ಅಜ್ಞಾನವನ್ನು ಪ್ರದರ್ಶಿಸಬಲ್ಲ. ಹಾಗಾಗಿ ಭೂಮ್ಯಾಕಾಶಗಳಲ್ಲಿ ಅವನನ್ನು ಮೀರಿಸುವವರೇ ಇಲ್ಲ. ಅವನೇ ನಿಜವಾದ ಅತಿಶಯ ಪುರುಷ ಎಂದು ವಿಡಂಬನೆ ಮಾಡಿದ್ದಾರೆ ಡಿವಿಜಿ.

ಇದೇ ಭಾವವನ್ನು ವಿಸ್ತರಿಸಿ (ಪದ್ಯ ೨೦೩) ಒಂದೇ ತಲೆಯೊಳಗೆ ನೂರಾರು ತಲೆಗಳು ಮನುಷ್ಯನಲ್ಲಿ ಹೇಗೆ ಅಡಗಿದೆ ಎಂಬುದನ್ನು ಪ್ರಾಣಿ ರೂಪಕದಲ್ಲಿ ಹೇಳಿದ್ದಾರೆ. "**ತಲೆಯೊಳಗೆ ನೆರೆದಿಹವು ನೂರಾರು ಹಕ್ಕಿಗಳು ಗಿಳಿ ಗೂಗೆ ಕಾಗೆ ಕೋಗಿಲೆ ಹದ್ದು ನವಿಲು ಕಿಲಕಿಲನೆ ಗೊರಗೊರನೆ ಕಿರಚಿ ಕೂಗುತ್ತಿಹವು**" ಎಂದಿದ್ದಾರೆ.

ರಾವಣ ಮಾರೀಚನನ್ನು ಚಿನ್ನದ ಜಿಂಕೆಯಂತೆ ಕಾಣಿಸುವಂತೆ ಮಾಡಿ ಸೀತೆಯನ್ನು ರೂಪಾಕರ್ಷಣೆಗೆ ಬಲಿಯಾಗುವಂತೆ ಮಾಡಿದನು. ಆದರೆ ಅವನ ಪಾಲಿಗೆ ಸೀತೆಯೇ

ಮಾಯಾ ಜಿಂಕೆಯಾಗಿ ತಾನೇ ಹಳ್ಳಕ್ಕೆ ಬಿದ್ದನು. ಆಕರ್ಷಣೆಯ ಮಾಯೆ ಯಾರನ್ನೂ ಬಿಡುವುದಿಲ್ಲ. ಅದಕ್ಕೆ ರಾವಣ ಸೀತೆಯ ಹಾಗೆ ಇನ್ನೊಂದು ನಿದರ್ಶನ (ಪ ೨೮೩).

ರಾವಣನ ದಶಶಿರವದೇಂ? ನರನು ಶತಶಿರನು
ಸಾವಿರಾಸ್ಯಗಳನೊಂದರೊಳಣಗಿಸಿಹನು
ಹಾವಾಗಿ ಹುಲಿಯಾಗಿ ಕಪ್ಪೆ ಮಲ್ಲೆಯುಮಾಗಿ
ಭೂವ್ಯೋಮಕತಿಶಯನು – ಮಂಕುತಿಮ್ಮ (೨೦೨)

ರಾವಣ ಸೀತೆಗೆ ಮೋಹ ಗೊಂಡನೆಂದು ದೂಷಿಸಬೇಕಿಲ್ಲ, ಸೀತೆ ಕನಕಮೃಗಕ್ಕೆ ಆಸೆಪಡಲಿಲ್ಲವೇ? ಅವಳನ್ನು ದೂಷಿಸಬೇಕಲ್ಲವೆ. ಆದರೆ ಜನ ಆಕೆ ಬಗ್ಗೆ, ರಾವಣ ಮೋಸ ಮಾಡಿದ ಎಂದು ಕನಿಕರ ತೋರಿಸುತ್ತಾರೆ. ಇದು ಸರಿಯಲ್ಲ. ಚಂಚಲಮನ ದೃಢವಾಗಿರುವುದು ಕಷ್ಟ, ಇದಕ್ಕೆ ಹೆಣ್ಣು – ಗಂಡು ಎಂಬ ಭೇದವಿಲ್ಲ. ಆದ್ದರಿಂದ ರಾವಣನನ್ನು ದೂಷಿಸಬೇಕಿಲ್ಲ ಎನ್ನುತ್ತಾರೆ ಡಿವಿಜಿ.

೬. ಮಾರೀಚ:

ಇಂದ್ರಿಯನಿಗ್ರಹ ಆಗುವುದು ಅರ್ಥಾತ್ ಜಿತಮನಸ್ಕನಾಗುವುದು ಸುಲಭವಲ್ಲ. ಏಕೆಂದರೆ ಲೋಕದಲ್ಲಿ ಮನಸ್ಸನ್ನು ಸೆಳೆಯುವುದರಲ್ಲಿ ರೂಪಾಕರ್ಷಣೆ ದೊಡ್ಡದು. ಅದರಲ್ಲೂ ಹೊಂಬಣ್ಣದಾಕರ್ಷಣೆ ನಾರಿಯರಿಗೆ ಮೀಸಲು ಎನ್ನಬಹುದು. ಆ ಆಸೆ ಸಾಗರದಲ್ಲಿ ಅಡಗಿದ ಬೆಂಕಿಯಂತೆ ಸುಪ್ತವಾಗಿದ್ದು, ಭುಗಿಲ್ಲನೇ ಯಾವಾಗ ಏಳುವುದೋ ತಿಳಿಯದು. ಇದಕ್ಕೆ ಮಾರೀಚನ ಪ್ರಸಂಗವನ್ನು ಡಿವಿಜಿ ಅವರು ಉದಾಹರಿಸುತ್ತಾರೆ. ಮಾರೀಚ, ಚಿನ್ನದ ಜಿಂಕೆಯ ರೂಪದಲ್ಲಿ ಕಾಣಿಸಿಕೊಂಡಾಗ ರಾಮನೇ ಸರ್ವಸ್ವವೆಂದು ತಿಳಿದು ಲೋಕದಲ್ಲಿ ಮತ್ತೇನನ್ನೂ ಬಯಸದ ಮನೋದಾರ್ಢ್ಯೆ ಸೀತೆ, ಚಿನ್ನದ ಜಿಂಕೆಗೆ ಮಾರು ಹೋಗಿ ರಾಮಾಯಣಕ್ಕೆ ಕಾರಣಳಾದಳು. ಇಲ್ಲಿ ಮಾರೀಚ ಮಾಯಾರೂಪಿ ರಾಕ್ಷಸನಾಗಿರದೆ ಅತ್ಯಂತ ಪ್ರಬಲ ಆಕರ್ಷಣೆಯ ಶಕ್ತಿಯಾಗಿದ್ದಾನೆ.

ಧಾರುಣೀ ಸುತೆಯವೊಲು ದೃಢಮನಸ್ಕರದಾರು?
ಮಾರೀಚ ಹರಿಣವಡ್ಡಾಡಲೇನಾಯ್ತು?
ವಾರಿಧಿಯೊಳಡಗಿ ನಿದ್ರಿಪಬಾಡವವೊ ತೃಷ್ಣೆ
ಆರದನು ಕೆರಳಿಪರೋ – ಮಂಕುತಿಮ್ಮ (೨೭೭)

೭. ಕೈಕೇಯಿ:

ಕೈಕೇಯಿ, ಸತ್ಯಭಾಮೆಯರನ್ನು ಮತ್ಸರವತಿ, ಸದ್ಗುಣವತಿಯರು ಎಂದು (ಪದ್ಯ ೪೧೮ ಬಣ್ಣಿಸಿ, ಕೈಕೇಯಿ, ಸತ್ಯಭಾಮೆಯ ಹಾಗೆ ರೂಪವತಿ ಆಗಿದ್ದರೂ, ಗುಣವತಿ

ಆಗದೆ ಮತ್ಸರವತಿ ಆದಳು ಎಂದಿದ್ದಾರೆ. ಅದೇ ಮಾತನ್ನು ಮುಂದುವರೆಸಿ (ಪದ್ಯ ೬೦೮) ಕೈಕೇಯಿ ಭರತನ ತಾಯಿಯಾಗಿ, ಮತ್ಸರವತಿಯಾಗಿ ಪುತ್ರನ ಭಾಗ್ಯಕ್ಕಾಗಿ ಹಾಗೆ ವರ್ತಿಸಿದಳು. ಕೃಷ್ಣನ ಪಾಲಿಗೆ ಸತ್ಯಭಾಮೆ ಸತಿಯಾಗಿದ್ದಂತೆ ಕೈಕೇಯಿ ದಶರಥನಿಗೆ ಸತಿ ಆಗಿದ್ದಳು. ಲೋಕದಲ್ಲಿ ಮೋಹದ ಆವೇಶಗಳಿಂದ, ಮತ್ಸರ ಮಮತೆಗಳು ಅನಿವಾರ್ಯ. ಅದರ ಪ್ರತೀಕ ಕೈಕೇಯಿ ಎನ್ನುತ್ತಾರೆ ಡಿವಿಜಿ.

ಕೈಕಯಿಯವೊಲು ಮಾತೆ, ಸತ್ಯಭಾಮೆವೊಲು ಸತಿ
ಸಾಕಿ ಸಂತಸವೆರೆಯೆ ಸಂಸಾರಲೀಲೆ
ಬೇಕು ಮತ್ಸರ ಮಮತೆ ಮೋಹಗಳಾವೇಶ
ಲೋಕ ನಾಟಕಕಾಗ – ಮಂಕುತಿಮ್ಮ (೬೦೮)

ರಾಯ ಮುದಿದಶರಥನನಾಡಿಸುತ ಕೈಕೇಯಿ
ಸ್ವೀಯ ವಶದಲಿ ಕೋಸಲವನಾಳಿದಂತೆ
ಮಾಯೆ ಬೊಮ್ಮನ ಬಿನದವಡಿಸಿ ನಮ್ಮೀ ಜಗವ
ಕಾಯುವಳು ತನ್ನಿಚ್ಛೆ – ಮಂಕುತಿಮ್ಮ (೧೪೬)

೮. ಶೂರ್ಪನಖಿ:

ಲೋಕದಲ್ಲಿ ಶೃಂಗಾರರೂಪದ, ಸ್ತ್ರೀಸೌಂದರ್ಯ ಹೊರನೋಟದಲ್ಲಿ ಅತ್ಯಾಕರ್ಷಕ, ಲೋಕಮೋಹಕ ಆದರೆ ಒಳನೋಟದಲ್ಲಿ ನಶ್ವರ, ವಿಕಾರ, ವಂಚನೆ, ಪೈಶಾಚಿಕ ಸ್ವಭಾವ, ಇತ್ಯಾದಿಗಳು ಅಡಗಿರುತ್ತವೆ.

ಶೂರ್ಪನಖಿ ಕಾಮರೂಪಿಣಿಯಾಗಿ, ಮೋಹನಾಕಾರೆಯಾಗಿ, ಹೂವಿನಂಥ ಕೋಮಲ ಶರೀರೆಯಾಗಿ ರಾಮನ ಮುಂದೆ ಕಾಣಿಸಿಕೊಂಡಳು. ಆದರೆ ಅವಳು ರಾಕ್ಷಸಿ, ಘೋರ ರೂಪಿಣಿ. ಅದರರ್ಥ, ಮೈಬೆಡಗು (ದೇಹಸೌಂದರ್ಯ) ನಿಜವಲ್ಲ ಎನ್ನುತ್ತಾರೆ ಡಿವಿಜಿ.

ಬಾಹ್ಯ ಸೌಂದರ್ಯ, **"ಹೇಮಕುಂಭದಿ ಕೊಳಚೆರೊಚ್ಚು ನೀರ್ಗಳ ತುಂಬಿದಂತೆ"** (೪೧೭) ಎನ್ನುತ್ತಾರೆ. ವಿಕಟ ಪ್ರೇಮಕ್ಕೆ ಶೂರ್ಪನಖಿ ನಿದರ್ಶನವಾಗಿದ್ದಾಳೆ.

ಕುಸುಮಕೋಮಲಗಾತ್ರ ಶೂರ್ಪಣಖಿಗರಿದಾಯ್ತೆ?
ವಿಷದ ಪೂತನಿ ನಯನ ಪಕ್ಷದೊಳಗಿರಳೆ?
ಮುಸಿನಗುವಿನೊಳಗಿರಲಶಕ್ಯವೆ ಪಿಶಾಚಿಕೆಗೆ?
ಮೃಷೆಯೊ ಮೈಬೆಡಗೆಲ್ಲ – ಮಂಕುತಿಮ್ಮ (೪೧೬)

೯. ಅಹಲ್ಯೆ:

ರಾಮಾಯಣದ ಸ್ತ್ರೀ ಪಾತ್ರಗಳಲ್ಲಿ ಅವರು ಕೆಲವರನ್ನೇ ಕಗ್ಗದಲ್ಲಿ ಪ್ರಸ್ತಾಪಿಸಿದ್ದಾರೆ. ಆ ಪೈಕಿ ಅಹಲ್ಯೆ ಒಬ್ಬಳು. ಗೌತಮನ ಪತ್ನಿ ಇಂದ್ರನಿಗೆ ಮನಸೋತು ಭ್ರಷ್ಟೆಯಾದಾಗ, "ನೀನು ಕಲ್ಲಾಗಿ ನಿದ್ರಿಸುತ್ತಿರು" ಎಂದು ಶಾಪವಿತ್ತರು. ಶ್ರೀರಾಮ ಆಶ್ರಮದ ಮಾರ್ಗವಾಗಿ ಬಂದಾಗ ಆ ಬಂಡೆಯ ಮೇಲೆ ಕಾಲಿಟ್ಟಾಗ ಶಾಪವಿಮೋಚನೆಯಾಗಿ ರಾಮಪದ ಸ್ಪರ್ಶದ ಮಹಿಮೆಯಿಂದ ಜೀವತಳೆದು ಧನ್ಯಳಾದಳು. ಹಾಗೆ ಚಲಿಸಲಾಗದ ಜಡವಸ್ತುಗಳಿಗೆ ಯಾವುದೋ ಗಾಳಿ (ಅವ್ಯಕ್ತಶಕ್ತಿ) ಸ್ಪರ್ಶಿಸಿದಾಗ ಅದಕ್ಕೆ ಚೈತನ್ಯ ತುಂಬಿ ಜಡ ಚೇತನವಾಗುತ್ತದೆ. ಆದ್ದರಿಂದ ಜಡಜಡವಾಗಿಯೇ ಎಂದೆಂದೂ ಉಳಿಯಬೇಕಿಲ್ಲ ಒಂದಲ್ಲ ಒಂದು ದಿನ ಜಡ – ಜೀವವಾಗಬಲ್ಲದು. ಚೇತನವಾಗಬಲ್ಲದು ಎಂದು ಡಿವಿಜಿ ಆಶಾಭಾವಕ್ಕೆ ಅಹಲ್ಯೆಯ ನಿದರ್ಶನ ಬಳಸಿದ್ದಾರೆ.

ಶಿಲೆಯಾಗಿ ನಿದ್ರಿಸುತ್ತಿರ್ದಾಕೆ ರಾಮಪದ।
ತಲದ ಸಂಸ್ಪರ್ಶದಿಂದೆದ್ದು ನಿಂತಂತೆ ॥
ಚಲಿಸದೆನಿಸಿದ ಜಡವನಾವ ಗಾಳಿಯೊ ಸೋಕಿ
ಬಲ ತೀವಿ ಚಲಿಪುದದು – ಮಂಕುತಿಮ್ಮ (೧೧೯)

೧೦. ಶಬರಿ:

ರಾಮಾಯಣದಲ್ಲಿ ಬರುವ ಶಬರಿ ಒಂದು ವಿಶಿಷ್ಟ ಪಾತ್ರ. ಹನುಮಂತನಂತೆ ಶಬರಿಯೂ ರಾಮೋಪಾಸನೆಯಲ್ಲಿ ಬದುಕನ್ನು ಸವೆಸಿದಳು. ಶ್ರೀರಾಮನಾಗಮನ ಕೇಳಿ ಅವನಿಗೆ ಸತ್ಕಾರ ನೀಡಲು ವನದಲ್ಲಿದ್ದ ನೇರಿಳೆ ಹಣ್ಣುಗಳನ್ನು ಆಯ್ದಳು. ಮರದಿಂದ ಉದುರಿದ ಒಂದೊಂದು ಪಕ್ವಫಲವನ್ನೂ ರುಚಿ ನೋಡಿದಳು. ಅದು ಪಕ್ವಫಲ ಇರಬಹುದು. ಆದರೆ ಅದು ಹುಳಿಯೋ ಸಿಹಿಯೋ? ಎಂದು ತಿಳಿಯಬೇಕು. ಭಕ್ತಿ ಎಂಬುದು ಹುಳಿಯಾಗಿರಬಾರದು, ಸಿಹಿಯಾಗಿರಬೇಕು. ಆಗ ಭಗವದರ್ಪಣೆಗೆ ಯೋಗ್ಯವಾಗುತ್ತದೆ. ನಮ್ಮ ಬಾಳು ಕಾಯಿ, ದೋರೆಗಾಯಿ ಆಗಿ ಹುಳಿಯಾಗಿರಬಾರದು. ಸದ್ಗುಣ ಸದ್ವರ್ತನೆ, ಸದ್ಭಕ್ತಿಗಳಿಂದ ಸಿಹಿಯಾಗಿರಬೇಕು ಆಗ ಭಗವದರ್ಪಣೆ ಮಾಡಿದರೆ ಸಾರ್ಥಕ. ಶಬರಿ ಬಾಳೆಲ್ಲ ರಾಮಭಕ್ತಿಯಿಂದ ಹಣ್ಣಾಗಿತ್ತು. ರಾಮಧ್ಯಾನದ ಪಕ್ವತೆಯಿಂದ ಕೂಡಿತ್ತು. ಸಾಜದಾ ದೈವಾತ್ಮಭಾವದಲ್ಲಿ ರಾಮನನ್ನು ಕಂಡಾಗ ಆತಿಥ್ಯ ನೀಡಿ ಧನ್ಯಳಾದಳು. ಪತ್ರಂ ಪುಷ್ಪಂ ಫಲಂ ತೋಯಂ ಏನೇ ಇರಲಿ ಭಕ್ತಿಯಿಂದರ್ಪಿಸಿ ಮುಕ್ತಿ ಹೊಂದಿದವಳು ಶಬರಿ. ಗೀತೆಯ ಮಾತಿಗೆ ಆದರ್ಶ ನಿದರ್ಶನ ಶಬರಿ ಇಡೀ ಶಬರಿಯ ಬದುಕನ್ನು ಒಂದೇ ಪದ್ಯದಲ್ಲಿ ಸಾರವತ್ತಾಗಿ ಡಿವಿಜಿ ಚಿತ್ರಿಸಿದ ಬಗೆ ಹೀಗಿದೆ:

"ತನ್ನ ರುಚಿ ರಾಮರುಚಿ; ತನ್ನ ಸಂತುಷ್ಟಿ ಪರಿ
ಪೂರ್ಣವಪ್ಪುದು ರಾಮಸಂತುಷ್ಟಿಯಿಂದೆ

ಎನ್ನುವಾ ಸಾಜದಾ ದೈವಾತ್ಮಭಾವದಲಿ

ಧನ್ಯಳಾದಳು ಶಬರಿ – ಮಂಕುತಿಮ್ಮ (೭೬೫)

ವಶಿಷ್ಠ, ವಿಶ್ವಾಮಿತ್ರ ಪ್ರಸ್ತಾಪ ಬರುತ್ತದೆ. ಆದರೆ ರಾಮಾಯಣದ ಹಿನ್ನೆಲೆಯಲ್ಲಿ ಬರುವುದಿಲ್ಲ. (೩೦೭, ವಶಿಷ್ಠ – ವಿಶ್ವಾಮಿತ್ರ – ೬೯೯)

ರಾಮಾಯಣವನ್ನು ಅಧ್ಯಯನ ಮಾಡಿ, ಪಾರಾಯಣ ಮಾಡಿ ಅದರಲ್ಲಿ ಜೀವನಾದರ್ಶಗಳನ್ನು ಕಂಡುಕೊಂಡು ಆ ಬಗ್ಗೆ ಕೃತಿಗಳನ್ನು (ಶ್ರೀರಾಮಪರೀಕ್ಷಣ ಇತ್ಯಾದಿ) ರಚಿಸಿದವರು ಡಿವಿಜಿ. ರಾಮಾಯಣದ ಬಗ್ಗೆ ಇರುವ ಅಂತರ್ದೃಷ್ಟಿಗೆ ರಂಗನಾಥಶರ್ಮರ ರಾಮಾಯಣ ಗದ್ಯಾನುವಾದಕ್ಕೆ ಬರೆದ ಪ್ರಸ್ತಾವನೆಗಳು ಸಾಕ್ಷಿಯಾಗಿವೆ. ಕಗ್ಗದಲ್ಲಿ ರಾಮಾಯಣದ ಪಾತ್ರಗಳನ್ನು ಉಲ್ಲೇಖಿಸಿರುವುದು, ಅವರ ರಾಮಾಯಣ ಪ್ರೀತಿಗೆ ದ್ಯೋತಕವಾಗಿದೆ.

◆

ಕುವೆಂಪು ಅವರ ಭಾಷೆ

– ಪ್ರೊ. ಎಂ.ಎಚ್.ಕೃಷ್ಣಯ್ಯ, ಬೆಂಗಳೂರು
ನಿವೃತ್ತ ಪ್ರಾಧ್ಯಾಪಕರು, ಸಾಹಿತಿಗಳು
೦೮೦–೨೩೩೪೯೯೯೧

ಕುವೆಂಪು ಸಾಹಿತ್ಯ ವೈವಿಧ್ಯಪೂರ್ಣವಾದದ್ದು. ಕಥೆ, ಕಾದಂಬರಿ, ಪ್ರಬಂಧ, ನಾಟಕ, ಭಾವಗೀತೆ, ಕಥನಕವನ, ಮಹಾಕಾವ್ಯದವರೆಗಿನ ರೂಪವೈವಿಧ್ಯ ಉಳ್ಳದ್ದು. ಸಹಜವಾಗಿ, ಆಯಾ ಸಾಹಿತ್ಯ ರೂಪಗಳಲ್ಲಿ ಅವರ ಭಾವ, ಅನುಭವ, ಚಿಂತನೆ, ವಿಚಾರಗಳು, ಭಾಷೆಯಲ್ಲಿ ಮೈ ತಳೆಯುವ ಬಗೆಯೂ ಸ್ವಾರಸ್ಯಕರ, ವೈವಿಧ್ಯಮಯ.

ಭಾಷೆಯನ್ನು ಸಾಹಿತ್ಯದ ಮಾಧ್ಯಮ ಎನ್ನುತ್ತೇವೆ. ಮಾಧ್ಯಮ ಎಂದಾಗ ನಮ್ಮ ಆಲೋಚನೆಗಳನ್ನು ವ್ಯಕ್ತಪಡಿಸಲು ಬಳಸುವ, ಆಲೋಚನೆಯಿಂದ ಬೇರೆಯಾದ ಸಾಧನ ಎಂಬ ಇಂಗಿತ ಇರುತ್ತದೆ. ಭಾಷೆ ಮೂಲತಃ ಸಂಪರ್ಕ ಮಾಧ್ಯಮ, ದಿನನಿತ್ಯದಲ್ಲಿ ಪರಸ್ಪರ ವ್ಯವಹರಿಸಲು, ನಮ್ಮ ಅನಿಸಿಕೆಗಳನ್ನು ತಿಳಿಸಲು, ತಿಳಿಯಲು ಇರುವ ಒಂದು ಸಾಧನ ಅಥವಾ ಮಾಧ್ಯಮ ಎಂದೇ ರೂಢಿಯ ಅರ್ಥ. ಆದರೆ ವಾಸ್ತವವಾಗಿ ನಮ್ಮ ಆಲೋಚನೆ ಮತ್ತು ಅದು ಮೈತಳೆಯುವ ರೂಪ ಎರಡೂ ಅಭಿನ್ನವಾದುವು. ಅವುಗಳದು ಅವಿನಾಭಾವ ಸಂಬಂಧ. ನಾವು ಶಬ್ದಗಳ ಮೂಲಕವೇ ಆಲೋಚಿಸುತ್ತೇವೆ. ಶಬ್ದ ಬಳಸದೆ ಆಲೋಚನೆ ಕಷ್ಟ. ಅಸ್ಪಷ್ಟವಾದ ಭಾವ, ಅನಿಕೆಗಳು ಸ್ಪಷ್ಟರೂಪ ಪಡೆಯುವುದು, ಗ್ರಾಹ್ಯವಾಗುವುದು. ಮೂರ್ತರೂಪದಲ್ಲಿ ಚಿಂತನೆ ಭಾಷೆಯಲ್ಲಿ ಹರಳುಗಟ್ಟುತ್ತದೆ. ತೇವಾಂಶ ಆಕಾಶಕ್ಕೇರಿ ಮೋಡರೂಪ ತಳೆದಾಗಲೇ ಅದಕ್ಕೊಂದು ಆಕಾರ, ಸ್ಪಷ್ಟ ರೂಪ ಒದಗುತ್ತದೆ. ಆದ್ದರಿಂದ ನಮ್ಮ ಆಲೋಚನೆ ಭಾಷೆಯಿಂದ ರೂಪ ಪಡೆಯುತ್ತದೆ, ಭಾಷೆಯಿಂದಲೆ ನಮ್ಮ ಚಿಂತನೆಯೂ ವ್ಯಕ್ತವಾಗುತ್ತದೆ. ಎಂದರೆ ಭಾಷೆ ನಮ್ಮ ಚಿಂತನೆಯ ವಿಧಾನವೇ ಆಗುತ್ತದೆ. ಆದ್ದರಿಂದಲೇ ಪ್ರತಿಯೊಬ್ಬ ಕವಿಯ ಭಾಷೆಯೂ ವಿಶಿಷ್ಟ. ಕುವೆಂಪು ಅವರು ಭಾಷೆಯನ್ನು ಲೋಕೋಪಯೋಗಿ ಮತ್ತು ಭಾವೋಪಯೋಗಿ ಎಂದು ಕರೆದರು. ದಿನನಿತ್ಯದ ಸಂಪರ್ಕದ ಬಗೆ ಒಂದು, ಸಾಹಿತ್ಯದಲ್ಲಿ ಅಭಿವ್ಯಕ್ತಿಯ ಬಗೆ ಮತ್ತೊಂದು, ಅದು ಉಪಯೋಗದ ದೃಷ್ಟಿಯಿಂದ ಹೇಳಿದ ಮಾತು. ಸಾಹಿತ್ಯ ಭಾಷೆ, ಕಾವ್ಯ ಭಾಷೆ, ಕಲೆಯ ಭಾಷೆ ಎಂದಾಗ ಅಭಿವ್ಯಕ್ತಿಯ, ಸೃಜನಕ್ರಿಯೆಯ ವಿಶಿಷ್ಟ ಅವಸ್ಥೆಯನ್ನೂ, ಸಂಪ್ರದಾಯ ಶೈಲಿಯನ್ನೂ ವ್ಯಕ್ತಪಡಿಸುತ್ತದೆ. ಕವಿಯ ಆಳವಾದ ಅನುಭವ, ವಿಚಾರಗಳು ಅವನ ಮನೋಧರ್ಮಕ್ಕೆ ಅನುಸಾರಿಯಾಗಿ ಸ್ಪಷ್ಟರೂಪ ತಳೆಯುತ್ತ ಖಚಿತವಾಗುತ್ತ ಸೂಚ್ಯವಾಗುತ್ತ ಹೋಗುತ್ತವೆ. ಎಂದರೆ ಕಲ್ಪನೆಯ ನೆಲೆಯಿಂದಲೇ ತನಗೆ ತಕ್ಕ–ಯೋಗ್ಯ– ಸಹಜ ರೂಪಧಾರಣೆ

ಮಾಡುತ್ತದೆ. ಎಷ್ಟರ ಮಟ್ಟಿಗೆ ಕವಿ ಭಾಷೆಯಲ್ಲಿ ತನ್ನ ಸಂವೇದನೆಯನ್ನು, ವಿಚಾರಗಳನ್ನು ಸಂವಹನಿಸಬಲ್ಲನೋ ಅಷ್ಟರಮಟ್ಟಿಗೆ ಅವನ ರಚನೆ ಸಾರ್ಥಕವಾಗುತ್ತದೆ, ಸಫಲವಾಗುತ್ತದೆ. ಕುವೆಂಪು ಅವರ ಕವನಗಳಲ್ಲಿ ಇಂತಹ ಭಾಷಾ ವೈವಿಧ್ಯವನ್ನು ಕಾಣಬಹುದು.

ಕುವೆಂಪು ಅವರ ಮಕ್ಕಳ ಕವನಗಳನ್ನು ಗಮನಿಸಿ. ಮಕ್ಕಳ ಮನೋಧರ್ಮಕ್ಕೆ ಹೊಂದುವ ಸರಳ ಭಾವವು ಸರಳವಾದ ತಿಳಿಯಾದ ಕನ್ನಡದಲ್ಲಿ ವ್ಯಕ್ತವಾಗುತ್ತದೆ. ಮಕ್ಕಳಿಗೆ ಅನುಕರಣ ಶಬ್ದಗಳು, ಪ್ರಾಸಾನುಪ್ರಾಸಗಳು, ನಾದದ ಸೊಗಸು ಮತ್ತು ಲಯ ತುಂಬ ಪ್ರಿಯವಾಗುತ್ತವೆ. ಟುವ್ವಿ ಟುವ್ವಿ ಕವನ ಮಕ್ಕಳಿಗೆ ಪ್ರಿಯವಾದುದೆ. ಹಾಗೇ 'ಅರ್ಧಚಂದ್ರ' ಕವನದ ಭಾವ ಗಮನಿಸಿ. ಪ್ರಶ್ನೆಯಲ್ಲೇ ಉತ್ತರವೂ ಸೇರಿ ಹೋಗಿದೆ.

ದೇವರ ಪೆಪ್ಪರಮೆಂಟೇನಮ್ಮಾ
ಗಗನದೊಳಲೆಯುವ ಚಂದಿರನು?
ಎಷ್ಟೇ ತಿಂದರು ಖರ್ಚೇ ಆಗದ
ಬೆಳೆಯುವ ಪೆಪ್ಪರಮೆಂಟಮ್ಮಾ

ಕುವೆಂಪು ಅವರ ಮೊದಲ ಕವನ ಸಂಗ್ರಹ 'ಕೊಳಲು'. ಅಲ್ಲಿನ ಕವನಗಳಲ್ಲಿ ಬಳಕೆಯಾಗಿರುವ ಅಚ್ಚ ಕನ್ನಡ ಪದಗಳು, ಅವುಗಳು ನೀಡುವ ನರ್ತನದ ಅನುಭವ ವಿಶಿಷ್ಟ. 'ಸುಗ್ಗಿ ಬರುತಿದೆ' ಇದಕ್ಕೆ ಉತ್ತಮ ಉದಾಹರಣೆ. ಮೂರು ಮಾತ್ರೆಯ ಲಯ ಹಳ್ಳಿಯ ಕುಣಿತವನ್ನು ನೆನಪಿಸುತ್ತದೆ. ಇದು ಪ್ರಕೃತಿ ಗೀತೆಯಾದರೂ ನಿಸರ್ಗಕ್ಕೆ ಗ್ರಾಮೀಣ ಜನತೆ ಎಷ್ಟು ಹತ್ತಿರ.

ಅಡಿಯ ಗೆಜ್ಜೆ ನಡುಗೆ, ಹೆಜ್ಜೆಯಿಡುತ ಸುಗ್ಗಿ ಬರುತಿದೆ !
ಸುಗ್ಗಿ ಬರೆ ಹಿಗ್ಗೆ ತಿರೆ ಸಗ್ಗ ಸೊಗವ ತರುತಿದೆ

ಅದೇ 'ಆನಂದಮಯ ಈ ಜಗಹೃದಯ' ದಲ್ಲಿ ಒಂದು ಕಾಣ್ಕೆಯನ್ನು, ಒಂದು ತತ್ತ್ವವನ್ನು ವರ್ಣಿಸುವಲ್ಲಿ ಆ ಚಿಂತನೆಗೆ ತಕ್ಕ ಸರಳವಾದ ಸಂಸ್ಕೃತ ಶಬ್ದಗಳ ಬಳಕೆ ಕಾಣಬರುತ್ತದೆ.

ಆನಂದಮಯ ಈ ಜಗಹೃದಯ
ಏತಕೆ ಭಯ ಮಾಣೋ !
ಸೂರ್ಯೋದಯ ಚಂದ್ರೋದಯ
ದೇವರ ದಯೆ ಕಾಣೊ !

ಭಾಷೆ ಎಂದರೆ ಚಿಂತನೆಯ ರೀತಿ; ಚಿಂತನೆಯ ವೈಶಿಷ್ಟ್ಯವೇ ಸಂಸ್ಕೃತಿ. ಅಂತಿಮವಾಗಿ ಭಾಷೆಯೇ ಸಂಸ್ಕೃತಿಯ ಪ್ರತೀಕವೂ ಆಗುತ್ತದೆ. ಭಾಷೆಗೆ ಒಂದು

ಇತಿಹಾಸವೂ ಇರುತ್ತದೆ. ಕನ್ನಡ ಭಾಷೆ ಒಂದೂವರೆ ಸಾವಿರ ವರ್ಷದ ಇತಿಹಾಸವನ್ನು ಹೊಂದಿದೆ. ಸಂಸ್ಕೃತದ ಪ್ರಭಾವ ಕನ್ನಡದ ಮೇಲೆ ಸಾಕಷ್ಟು ಆಗಿದೆ. ಮುಂದೆ ಪಾರ್ಸಿ, ಅರಬ್ಬಿ ಭಾಷೆಗಳ ಪ್ರಭಾವವೂ, ರಾಜಕೀಯ ಕಾರಣಗಳಿಂದಾಗಿ ಆಯಿತು. ಸಂಸ್ಕೃತ ಸಾಹಿತ್ಯದಲ್ಲಿನ ಚಿಂತನೆ, ಮತ ಧರ್ಮ ತತ್ತ್ವ ಸಂಸ್ಕೃತಿ ವಿಚಾರಗಳು ಆಯಾ ಶಬ್ದಗಳ ಸಮೇತ ಕನ್ನಡಕ್ಕೆ ಬಂದು ಚಿಂತನೆಯ ಹಾಗೂ ಅಭಿವ್ಯಕ್ತಿಯ ಭಾಗವೇ ಆಗಿವೆ. ಕುವೆಂಪು ಅವರ ಕವನಗಳಲ್ಲಿ ಎಲ್ಲೆಲ್ಲಿ ಇಂತಹ ಸಂಸ್ಕೃತಿ ಪರಂಪರೆಯ ಚಿಂತನೆಗಳಿವೆಯೊ ಅಲ್ಲಿ ಸಂಸ್ಕೃತ ಸಮಾಸಗಳಿಂದ ಕೂಡಿದ ಕನ್ನಡ ಸಂಕೀರ್ಣವಾಗುತ್ತದೆ. 'ಬಾ ಫಾಲ್ಗುಣ ರವಿ ದರ್ಶನಕೆ' ಕವನದಲ್ಲಿ ಸೂರ್ಯೋದಯದ ಒಂದು ಚಿತ್ರ ಕಣ್ಣಿಗೆ ಕಟ್ಟುವಂತೆ ವರ್ಣಿತವಾಗಿದೆ. ಅಲ್ಲಿ ಶಿವಮಂದಿರ ಮತ್ತು ಯಜ್ಞದೃಶ್ಯದ ರೂಪಕದ ಮೂಲಕ ನಿಸರ್ಗದ ಆರಾಧನೆಯ ಅನುಭವವನ್ನು ಕಟ್ಟಿಕೊಡುತ್ತಾರೆ.

> ಶಿವಮಂದಿರಸಮ ವನಸುಂದರ ಸುಮಶೃಂಗಾರದ ಗಿರಿಶೃಂಗಕೆ ಬಾ
> ಬಾ ಫಾಲ್ಗುಣ ರವಿ ದರ್ಶನಕೆ.

ಈ ರೀತಿಯ ಸಂಸ್ಕೃತಮಯ ಭಾಷೆ, ಭಾವ–ಚಿಂತನೆಗೆ ಅನುಗುಣವಾಗಿ ಭಾವಗೀತೆಯಲ್ಲಿ ಮಾತ್ರವಲ್ಲ, ಶ್ರೀ ರಾಮಾಯಣ ದರ್ಶನಂ ಮಹಾಕಾವ್ಯದಲ್ಲೂ ಬರುತ್ತದೆ. ಯುದ್ಧವರ್ಣನೆ, ಯೋಗ, ಆಧ್ಯಾತ್ಮಿಕ ಅನುಭವಗಳ ಅಭಿವ್ಯಕ್ತಿಯಲ್ಲಿ ಆ ಭಾಷಾ ಶೈಲಿಯನ್ನು ಕಾಣಬಹುದು. ಆದರೆ ಅತ್ಯಂತ ಸರಳ, ಆಡುನುಡಿಯ ಸೊಬಗೂ ಇದೆ. ಸಂದರ್ಭ, ಸನ್ನಿವೇಶ, ಆಗಿನ ಪಾತ್ರಗಳು ಇವು ಮುಖ್ಯ. ಇದನ್ನೇ ಔಚಿತ್ಯ ಎನ್ನುವುದು. ಶಬರಿಯ ಪ್ರಸಂಗ ಗಮನಿಸಿ. ಒಳಗಿನ ನೋವು, ಹೊರಗಿನ ಸುತ್ತಾಟದ, ಸೀತೆಯನ್ನು ಹುಡುಕುವ ಬವಣೆಯಿಂದ ಬೆಂದು ಬಳಲಿದ್ದ ರಾಮ ಲಕ್ಷ್ಮಣರಿಗೆ, ಗುರುತು ಹಿಡಿಯಲಾಗದ ಶಬರಿಯ ಮಾತುಗಳು:

> "ಕಂಡವರ್ಗೆಲ್ಲ, ಬರ್ಪ ಬೇಡರ್ಗೆಲ್ಲಮ್ ಉಣಿಸಿತ್ತು ಬೀಡಿತ್ತು
> ಮೇಲ್ವಾಸನೀಯೆ ನಾನೇನು ಅಡಗೂಳಜ್ಜಿ ಅಲ್ಲ ಕಾಣಯ್ಯ"
> "ಬಡವಳಿದ್ದುದನೀವೆ; ಬನ್ನಿಂ"

ಅಥವಾ ವಾಲಿಯ ಮಾತುಗಳು. ತಮ್ಮನಾದ ಸುಗ್ರೀವನೊಡನೆ ಬಾಲ್ಯದಲ್ಲಿ ಆಡುತ್ತಿದ್ದ ಆಟದ ನೆನಪು:

> "ಅಣ್ಣ ಬಾರೆಂದು ಜೊಲ್ಲ ತೊದಳಿಂ ಚೀರ್ವ
> ಸಣ್ಣ ಸುಗ್ರೀವನಂ, ನೋಳ್ಪರಾಕಣ್ಮಣಿಯ
> ಚಿಣ್ಣನಂ,...... ಬೆನ್ನಿನೊಳ್ ಪೊತ್ತು, ತಾಯ್
> ಕಂದ ಬಾರೆನ್ನುತಿರೆ, 'ಉಪ್ಪು ಬೇಕೇ ಉಪ್ಪು'

ಎನುತೆ ತಾಂ ಪರಿದಾಡುತನಿಬರಂ ನಗಿಸಿದಾ
ಚಿಕ್ಕಂದಿನೊಂದು ಚಿತ್ರಂ ಸ್ಮೃತಿಗೆ ಮೈದೋರೆ"

ಶೂದ್ರತಪಸ್ವಿ, ಸ್ಮಶಾನ ಕುರುಕ್ಷೇತ್ರ, ಬೆರಳ್ಗೆ ಕೊರಳ್ ನಾಟಕಗಳಲ್ಲೂ, ಶ್ರೀ ರಾಮಾಯಣ ದರ್ಶನಂನಲ್ಲೂ ಹಳಗನ್ನಡ ಭಾಷಾ ಶೈಲಿ ಇದೆ. ಆದರೆ ಕುವೆಂಪು ಎಲ್ಲೂ ಅಗ್ರಾಹ್ಯವಾಗುವಂತೆ ರಚಿಸಿಲ್ಲ, ಔಚಿತ್ಯ ಗಮನಿಸುತ್ತಾರೆ. ಹಳಗನ್ನಡ, ನಡುಗನ್ನಡ, ಹೊಸಗನ್ನಡ ಎಂಬ ವಿಂಗಡನೆ ಭಾಷಾಚರಿತ್ರೆಯ ಅಧ್ಯಯನಕ್ಕೆ ಸಂಬಂಧಿಸಿದ್ದು. ಪ್ರತಿಯೊಂದು ಭಾಷೆಗೂ ಅದರದೇ ವಿಶಿಷ್ಟವಾದ ಲಯವಿರುತ್ತದೆ. ಅದು ಆ ಭಾಷೆಯ ಜಾಯಮಾನ, ನಾಡಿಯ ಮಿಡಿತ, ಭಾಷೆ ಬದಲಾವಣೆ ಕಂಡರೂ, ಬೆಳವಣಿಗೆ ಕಂಡರೂ ಅದರ ಮೂಲಲಯ ವಿನ್ಯಾಸ ಬದಲಾಗುವುದಿಲ್ಲ. ಲಯದ ಜೀವನಾಡಿ ಹಿಡಿದು ಕಾವ್ಯ ರಚಿಸಿದಾಗ ಭಾಷೆಯ ಸೊಗಸು ವ್ಯಕ್ತವಾಗುತ್ತದೆ, ಅರ್ಥ ಸುಲಭಗ್ರಾಹ್ಯವಾಗುತ್ತದೆ. ಕುವೆಂಪು ಅವರ ಭಾವಗೀತೆಗಳಲ್ಲಿ, ನಾಟಕಗಳಲ್ಲಿ, ಮಹಾಕಾವ್ಯದಲ್ಲಿ ಕನ್ನಡ ಭಾಷೆಯ ಪರಂಪರೆಯ ಸತ್ವ ಇದೆ. ಪಂಪನ ಬಿಗಿ, ದೇಸಿಯ ಬನಿ, ಧ್ವನಿಶಕ್ತಿಯೂ; ಹಾಗೇ ರನ್ನನ ಶಬ್ದಶಕ್ತಿ ನಾಟಕೀಯತೆಯೂ; ನಾರಣಪ್ಪನ ಭಾಷೆಯ ನರ್ತನವೂ; ಲಕ್ಷ್ಮೀಶನ ನಾದವೂ ಇವೆ. ಕಾನೂರು ಹೆಗ್ಗಡಿತಿ ಕಾದಂಬರಿಯನ್ನು ರಚಿಸಿದ ಪ್ರತಿಭೆಯೇ ಮಹಾಕಾವ್ಯವನ್ನೂ ರಚಿಸಿದೆ.

ನಾಟಕಗಳಲ್ಲಿನ ಭಾಷೆಯ ಬಿಗಿ, ಧ್ವನಿಶಕ್ತಿಯನ್ನು ಗಮನಿಸಬಹುದು.

ಶ್ರೀರಾಮ ಬ್ರಾಹ್ಮಣನ ಆಕ್ಷೇಪಣೆಗೆ, ದೂರಿಗೆ ಹೇಳುವ ಮಾತು –

"ಅರನ ಗೆಲ್ ಯಮನ ಸೋಲ್ !
ಬರ್ದುಕಲ್ ಧರ್ಮಂ ಬರ್ದುಕುವನ್ ನಿನ್ನಣುಗನ್ !" (ಶೂದ್ರತಪಸ್ವಿ)

ಯಮ ಮೃತ್ಯುವೂ ಅಹುದು, ಧರ್ಮನೂ ಅಹುದು. ಮೃತ್ಯುಗೆಲ್ಲುವುದಿಲ್ಲ, ಧರ್ಮಗೆಲ್ಲುತ್ತದೆ. 'ಸ್ಮಶಾನ ಕುರುಕ್ಷೇತ್ರ'ದಲ್ಲಿ ಕಲಿಯ ಮಾತು, ಸ್ವಾಪರನಿಗೆ –

"ಕುಬ್ಜರಾದೊಡಮೇನ್ ? ದೀರ್ಘದೇಹಿಗಳಪ್ಪ
ತಮ್ಮ ಪೂರ್ವಿಕರ ಭುಜವನ್ ಅಡರುವರ್ಹೈನೆ ?
ಸಾವಿನಲಿ ಹೊಸಬಾಳು ಹುದುಗಿಹುದು; ನಾಶದಲಿ
ನವಸೃಷ್ಟಿ ಪವಡಿಸಿದೆ"

ಕುವೆಂಪು ಅವರು ಕನ್ನಡ ಭಾಷೆಯ ನಾದ, ಲಯವನ್ನು ಕವನಗಳಲ್ಲಿ ಅದ್ಭುತವಾಗಿ ಬಳಸಿಕೊಂಡಿದ್ದಾರೆ. ಭಾಷೆಯ ಶಬ್ದಗಳ ನಾದದಿಂದಲೇ ಭಾವ ಅಭಿವ್ಯಕ್ತಿಯಾಗುವ ಬಗೆ. ಅವರು ಆಡಿಟರಿ ಇಮ್ಯಾಜಿನೇಷನ್ನನ್ನು 'ಶ್ರವಣ ಪ್ರತಿಭೆ' ಎಂದು ಕರೆದಿದ್ದಾರೆ. ಭಾಷೆಯ

ಸ್ವರ ವ್ಯಂಜನಗಳು, ಹ್ರಸ್ವ ದೀರ್ಘಗಳ, ದ್ವಿತ್ವ-ಸಂಯುಕ್ತಾಕ್ಷರಗಳ ಮೂಲಕವೇ ಕಣ್ಣಿಗೆ ಕಟ್ಟುವ ಚಿತ್ರ. ಇದನ್ನು ನಾವು ಶ್ರವ್ಯ ಪ್ರತಿಮೆ ಎನ್ನಬಹುದು, ದೃಶ್ಯ ಪ್ರತಿಮೆ ಎನ್ನುವ ಹಾಗೆ 'ಲತಾವಲಿ' ಕವನ ಹೀಗೆ ಪ್ರಾರಂಭವಾಗುತ್ತದೆ –

"ಫುಲ್ಲಕುಸುಮ ಫಣಾಜಟಿ
ಪವನಲೀಲಾಲೋಲ ಕಟಿ
ಕುಣಿಯುತಿಹಳದೊ ಲತಾನಟಿ
ಪ್ರೇಮಮಧೂನ್ಮಾದಿನಿ ?"

ಮುಂದೆ ಬರುವ ನುಡಿ ಹೀಗಿದೆ –

"ತೈತಕತ್ತೈ ತೈತಕತ್ತೈ
ನರ್ತಿಸುತಿರೆ ಹೂವಿನ ಕೈ
ನರ್ತಿಸುತಿದೆ ಹಸುರಿನ ಮೈ
ಚಲನ ಕಲೋನ್ಮಾದಿನಿ !"

ಶಬ್ದಗಳ ನಾದದ ನರ್ತನವೇ ಬಳ್ಳಿ ಎಂಬ ನಟಿಯ ಚಿತ್ರವನ್ನು ಕಟ್ಟಿಕೊಡುತ್ತದೆ. 'ದೋಣಿ ಸಾಗಲಿ', ಅಥವಾ 'ದೂರಾ ಬಹುದೂರಾ ಹೋಗುವ ಬಾರಾ' ಗೀತೆಗಳಲ್ಲಿ ದೀರ್ಘ ಸ್ವರಗಳಿರುವ ಶಬ್ದಗಳು ಅರ್ಥಪೂರ್ಣವಾಗುತ್ತವೆ. ಮಲೆನಾಡಿನ ಮಳೆಗಾಲದ ಅನುಭವ ಅದ್ಭುತ, ರೋಮಾಂಚಕ, ಭಯ ಮೂಡಿಸುವಂತಹುದೂ ಅಹುದು. ಆರು ಮಾತ್ರೆಯ ಲಯವುಳ್ಳ ಶಬ್ದಗಳು 'ವರ್ಷಭೈರವ' ಕವನದಲ್ಲಿ ಎಂತಹ ಅನುಭವ ನೀಡುತ್ತವೆ.

"ಕದ್ದಿಂಗಳು, ಕಗ್ಗತ್ತಲು;
ಕಾರ್ಗಾಲದ ರಾತ್ರಿ
ಸಿಡಿಲ್ಮಿಂಚಿಗೆ ನಡುಗುತ್ತಿದೆ
ಪರ್ವತವನ ಧಾತ್ರಿ !"

ದೀಕ್ಷೆ ಎಂಬುದು ಒಂದು ರಿಚುಯಲ್, ವಿಧಿಯಾಚರಣೆ, ಮಂತ್ರ ಸದೃಶ ಭಾಷೆಯಿಂದ ಆ ಪವಿತ್ರ ವಾತಾವರಣ ಸೃಷ್ಟಿಯಾಗುತ್ತದೆ. ಕುವೆಂಪು ಅವರು 'ಶ್ರೀ ಸಾಮಾನ್ಯನ ದೀಕ್ಷಾ ಗೀತೆ'ಯಲ್ಲಿ ಶ್ರೀ ಸಾಮಾನ್ಯನ ಅಂತಃಸತ್ವದ ಜಾಗೃತಿಗೆ ಮಂತ್ರೋಚ್ಚಾರಣೆಯ ನಾದವನ್ನು ಕೂಡಿಸಿ ಆಹ್ವಾನಿಸುತ್ತಾರೆ.

" 'ಶ್ರೀಸಾಮಾನ್ಯ'ವೆ ಭಗವನ್ ಮಾನ್ಯಂ
'ಶ್ರೀ ಸಾಮಾನ್ಯ'ನ್ ಭಗವದ್ ಧನ್ಯಂ !
ಸಾಮಾನ್ಯತೆ ಭಗವಂತನ ರೀತಿ
ಸಾಮಾನ್ಯವೆ ದಿಟ ಭಗವತ್ ಪ್ರೀತಿ !

ಸಾಮಾನ್ಯರೊ ನಾವು:
ಓ ಬನ್ನಿಂ ಓ ಬನ್ನಿಂ
ಸಾಮಾನ್ಯದ ಪೂಜೆಗೆ ದೀಕ್ಷೆಯ ಕೊಳ್ಳಿಂ ನೀವೂ !"
ಇಲ್ಲಿ ಓಂಕಾರ ಸಮೇತ ಮಂತ್ರೋಚ್ಚಾರಣೆಯ ನೆನಪು ಅನುರಣನವಾಗುತ್ತದೆ.

ಕುವೆಂಪು ಅವರ ಸಾಮಾಜಿಕ ಗೀತೆಗಳ ಬಗ್ಗೆ ಸಾಕಷ್ಟು ಚರ್ಚೆ ನಡೆದಿದೆ. ವಿಷಯ ಮತ್ತು ವಸ್ತು ನೇರವಾಗಿ ಸುಲಭವಾಗಿ ಅರ್ಥವಾಗುವಂತಹುದು. ಆದರೆ ಕೆಲವು ವಿಮರ್ಶಕರ ಪ್ರಕಾರ ಅವು ಹೇಳಿಕೆಗಳಂತೆ ಆಗಿ ಬಿಡುತ್ತವೆ. ಕವಿಯ ಆಶಯಕ್ಕೆ ತಕ್ಕಂತೆ ಭಾಷೆ, ನುಡಿಕಟ್ಟು ಮೈತಳೆಯುತ್ತದೆ ಎಂಬುದನ್ನು ಮರೆಯಬಾರದು. ಗದ್ಯಕ್ಕೆ, ಆಡುನುಡಿಗೆ ಹತ್ತಿರವಾದ ಭಾಷೆಯೂ ಕವಿಯ ಭಾವದ, ಅನುಭೂತಿಯ, ಅನುಭವದ ತೀವ್ರತೆಯಿಂದ ಕಾವ್ಯವಾಗುತ್ತದೆ. 'ಹೊಸಬಾಳಿನ ಗೀತೆ' ಯಲ್ಲಿ "ಸರ್ವರಿಗೆ ಸಮಬಾಳು ! ಸರ್ವರಿಗೆ ಸಮಪಾಲು" ಎಂದು ಪ್ರಾರಂಭವಾಗುವ ಕವನದಲ್ಲಿ ಕಾಲದ ವೈದೃಶ್ಯವನ್ನು, ಆಶಯವನ್ನು ಪುರಾಣಗಳ ರೂಢಿಗತ ಶಬ್ದಗಳಿಂದ ರೂಪಕವಾಗಿ ರಚಿಸುತ್ತಾರೆ. "ಇಂದ್ರ ಸಿಂಹಾಸನಕೆ ಬಂದಿಹುದು ಕೊನೆಗಾಲ" "ಮೋಹಿನಿಗೆ ಮರುಳಾಗಿ ಮೂರ್ಖ ದಾನವರೆಲ್ಲ" ಮುಂತಾದುವನ್ನು ಗಮನಿಸಬಹುದು. ಕಲ್ಕಿಯಂತಹ ಕವನದಲ್ಲಿ ಅದ್ಭುತ ಪ್ರತಿಮೆಗಳನ್ನು ಸೃಷ್ಟಿಸುವ ಕವಿಯೇ 'ಯಾವ ಕಾಲದ ಶಾಸ್ತ್ರವೇನು ಹೇಳಿದರೇನು' ಅಥವಾ 'ನೂರು ದೇವರನೆಲ್ಲ ನೂಕಾಚೆ ದೂರ' ಅಥವಾ 'ಗುಡಿ ಚರ್ಚು ಮಸಜೀದಿಗಳ ಬಿಟ್ಟು ಹೊರಬನ್ನಿ' ಇಂತಹ ಕವನಗಳಲ್ಲಿ ದಿನನಿತ್ಯದ ಸರಳನುಡಿಗಟ್ಟುಗಳಿಂದ ಆಶಯ ಪೂರೈಸುತ್ತಾರೆ.

ಕುವೆಂಪು ಅವರ ಕನ್ನಡಾಭಿಮಾನ ಎಲ್ಲರಿಗೂ ಪರಿಚಿತ. ಕುವೆಂಪು ವಿಶ್ವಮಾನ ಸಂದೇಶ ನೀಡಿದವರು. ಆದರೆ ಅವರಿಗೆ ಕರ್ನಾಟಕತ್ವ, ಭಾರತೀಯತ್ವ, ವಿಶ್ವಪ್ರಜ್ಞೆ ಎಂದೂ ಪರಸ್ಪರ ವೈರುಧ್ಯದಿಂದ ಕೂಡಿದ ವಿಚಾರವಲ್ಲ. ಬೇರುಗಳು ನಿಂತ ನೆಲದಲ್ಲಿ, ರೆಂಬೆಕೊಂಬೆ ಎಲೆಗಳು ಚಾಚುವುದು ಗಗನದಲ್ಲಿ, ಅವರಿಗೆ ಪ್ರದೇಶ ಕರ್ನಾಟಕ, ರಾಷ್ಟ್ರ ಮತ್ತು ಸಂಸ್ಕೃತಿ ಭಾರತ, ಅವರ ದರ್ಶನ – ಮನುಜಮತ, ವಿಶ್ವಪಥ, ವಿಶ್ವಮಾನದ ಪರಿಕಲ್ಪನೆ. "ನನ್ನ ಕರ್ನಾಟಕತ್ವ ಭಾರತೀಯತ್ವಕ್ಕೆ ಎಂದೂ ಎದುರುನಿಲ್ಲುವುದಿಲ್ಲ" ಎಂದು ಕುವೆಂಪು ಅವರೇ ಹೇಳಿದ್ದಾರೆ.

ಅಮೂರ್ತವಾದ ಆಧ್ಯಾತ್ಮಿಕ ಚಿಂತನೆಯನ್ನು ಒಂದು ಕಾಣ್ಕೆಯಾಗಿ, ಮನುಷ್ಯನ ಅಂತಿಮ ಗುರಿಯಾಗಿ ಪ್ರತಿಮಾ ಸೃಷ್ಟಿಯ ಮೂಲಕ 'ಅನಿಕೇತನ' ಕವನದಲ್ಲಿ ಹೇಳುತ್ತಾರೆ. ಅನಿಕೇತನ ಶಬ್ದವೇ ಎಲ್ಲ ಸ್ತರಗಳ ಧ್ವನಿಯನ್ನು ಹೇಳುತ್ತದೆ. ಆ ದರ್ಶನದತ್ತ ಸಾಗಲು ಈ ನೆಲವನ್ನು ಮರೆಯುವಂತಿಲ್ಲ. ಕನ್ನಡ, ಕರ್ನಾಟಕ ಕುರಿತ ಗೀತೆಗಳೂ ಅಮೂರ್ತ ವಿಚಾರಗಳನ್ನು ಸುಲಭಗ್ರಾಹ್ಯವಾಗುವಂತೆ ಮೂರ್ತವಾಗಿಸುವ ಬಗೆಯವೇ ಆಗಿವೆ. 'ಜೈ

ಭಾರತ ಜನನಿಯ ತನುಜಾತೆ, ಜಯ ಹೇ ಕರ್ನಾಟಕ ಮಾತೆ' ನಾಡಗೀತೆಯಲ್ಲಿ ಭಾರತ ಮತ್ತು ಕರ್ನಾಟಕದ ಲೌಕಿಕ ಹಾಗೂ ಸಾಂಸ್ಕೃತಿಕ ಇತಿಹಾಸ ಪರಂಪರೆಯನ್ನು ತಾಯಿ – ಮಗಳ ಸಂಬಂಧದ ಕಲ್ಪನೆಯ ಮೂಲಕ ವ್ಯಕ್ತಪಡಿಸುತ್ತಾರೆ. ನಿಂತ ನೆಲೆಯ ಮಹತ್ವವನ್ನು 'ಎಲ್ಲಾದರು ಇರು; ಎಂತಾದರು ಇರು' ಕವನ ಹೇಳುತ್ತದೆ. ಕಲೆ, ಸಾಹಿತ್ಯ ಪರಂಪರೆಯೇ ಕಣ್ಣಿಗೆ ಕಟ್ಟುತ್ತದೆ. 'ಬಾರಿಸು ಕನ್ನಡ ಡಿಂಡಿಮವ' ಡಮರು ಹಿಡಿದು ತಾಂಡವನೃತ್ಯವಾಡುತ್ತ ಇರುವ ಶಿವನ ಪ್ರತಿಮೆಯೊಂದಿಗೆ ಕನ್ನಡ ಜಾಗೃತಿಯ ಡಿಂಡಿಮ ಬಾರಿಸುವ ದೃಶ್ಯ ಸೇರಿ ಮೂರ್ತಕಲ್ಪನೆ ಪಡೆಯುತ್ತದೆ. ಇಲ್ಲಿ ಪುರಾಣದ ಶಿವ ಕರ್ನಾಟಕದ ಹೃದಯ ಶಿವನಾಗುತ್ತಾನೆ.

ಭಾಷೆಗೆ ಸಂಬಂಧಿಸಿದಂತೆ ಎಲಿಯಟ್ ಒಂದು ಕುತೂಹಲಕಾರಿ ಮಾತು ಹೇಳಿದ್ದಾನೆ. ಮಹಾಕವಿ ತನ್ನ ಭಾಷೆಯನ್ನು ಸೂರೆಗೊಳ್ಳುತ್ತಾನೆ; ಸಂಪದ್ಯುಕ್ತವಾದ ಭಾಷೆ ಮಹಾಕವಿಯನ್ನು ತಾನೇ ಸೃಷ್ಟಿಸಿಕೊಳ್ಳುತ್ತದೆ ಎಂಬ ಎಲಿಯಟ್ ಅಭಿಪ್ರಾಯ ಅತಿಶಯೋಕ್ತಿಯಲ್ಲ. ಕುವೆಂಪು ಅವರ ಸಮಗ್ರ ಸಾಹಿತ್ಯವನ್ನು ಗಮನಿಸಿದಾಗ ಕುವೆಂಪು ಅವರ ಪ್ರತಿಭೆಯಿಂದ ಕನ್ನಡ ಶ್ರೀಮಂತವಾಗಿದೆ ಎಂಬುದು ತಿಳಿಯುತ್ತದೆ.

◆

ಕರ್ನಾಟಕ ನಾಟಕದ ಪಿತಾಮಹ – 'ಶಾಂತಕವಿ'

– ಪ್ರೊ. ವಿ. ಗುಂಡಣ್ಣ, ಮೈಸೂರು
ನಿವೃತ್ತ ಪ್ರಾಚಾರ್ಯರು, ಸಾಹಿತಿಗಳು, ೯೪೪೯೧೮೩೨೦೯

ಕರ್ನಾಟಕದ ಉತ್ತರ ಭಾಗದಲ್ಲಿ ಕನ್ನಡ ಬಾವುಟವನ್ನು ಏರಿಸಿ ನಿಲ್ಲಿಸಲು ಪ್ರಯತ್ನಿಸಿದವರಲ್ಲಿ ಪ್ರಮುಖರು ಶಾಂತಕವಿಗಳು. ಶಾಂತಕವಿಗಳ ನಿಜನಾಮ ಸಕ್ಕರಿ ಬಾಳಾಚಾರ್ಯ. ಬಾಳಾಚಾರ್ಯರು ಹುಟ್ಟಿದ್ದು ೧೪-೦೧-೧೮೫೬ ರಂದು. ಸಕ್ಕರಿ ಮನೆತನದ ಮೂಲಸ್ಥಳವಾದ ಧಾರವಾಡ ಜಿಲ್ಲೆಯ ಸಾತೇನಹಳ್ಳಿಯಲ್ಲಿ ಗೋಪಾಲಾಚಾರ್ಯರ ಮಗನಾಗಿ ಹುಟ್ಟಿದರು. ಚಿಕ್ಕಂದಿನಿಂದಲೇ ಇವರಿಗೆ ಹಾಡು ಕುಣಿತಗಳ ಕಡೆ ಅಪಾರ ಒಲವು. ಆದ್ದರಿಂದ ಬಾಲ್ಯದಲ್ಲಿ ಶುರುವಾದ ಸಂಸ್ಕೃತ ವಿದ್ಯಾಭ್ಯಾಸದತ್ತ ಆಸಕ್ತಿ ಮೂಡಲಿಲ್ಲ. ಹಾಡು ಕುಣಿತಗಳು ಎಲ್ಲೇ ನಡೆಯಲಿ ಇವರು ಹಾಜರು. ಇವರ ಆಸಕ್ತಿ ಅಭಿರುಚಿಗಳು ದೊಡ್ಡವರ ಗಮನವನ್ನು ಸೆಳೆದವು. ಎಲ್ಲೇ ಭಾಗವತರಾಟ (ವಿದುಷಿಗಾನ) ನಡೆಯಲಿ ಇವರಿಗೆ ಒಂದು ಪಾತ್ರ ಮೀಸಲು. ಇವರು ಹಾಡುಗಳ ರಚನೆಗೂ ಕೈ ಹಾಕಿದರು. ದಾಸರ ಪದಗಳನ್ನನುಸರಿಸಿ ಹಾಡುಗಳನ್ನು ರಚಿಸಿ ಕವಿಯಾಗಲು ಪ್ರಯತ್ನಿಸಿದ್ದು ಉಂಟು. ಇವರ ಮನೆತನದ ಕುಲದೈವ ಶಾಂತೇಶ. ಶಾಂತೇಶನ ಹೆಸರನ್ನು ಇಟ್ಟುಕೊಂಡು ಸಕ್ಕರಿ ಬಾಳಾಚಾರ್ಯ ಶಾಂತಕವಿ ಆದರು. ಇದು ಅವರ ಮುಕುಂದ ನಾಮಾಮೃತವೆಂಬ ಕೀರ್ತನೆಯಿಂದ ತಿಳಿಯುತ್ತದೆ. ಕನ್ನಡದಲ್ಲಿ ಕೀರ್ತನೆಗಳಿಲ್ಲವೆಂಬ ಆಕ್ಷೇಪಣೆಯನ್ನು ಸಹಿಸಲಾರದೆ ರಚಿಸಿದ ಕೀರ್ತನೆಯದು. ಕನ್ನಡದ ಬಗೆಗಿನ ಕಾಳಜಿ ಅಂದಿನಿಂದಲೇ ಅವರಲ್ಲಿ ಕಾಣಲಾರಂಭಿಸಿತ್ತು. ಹಾಡು, ಕುಣಿತ, ಭಾಗವತರಾಟ, ದಾಸರ ಪದಗಳ ಅನುಕರಣೆ, ರಚನೆ ಇವು ಶಾಂತಕವಿಗಳಲ್ಲಿ ಬಾಲ್ಯದಿಂದಲೇ ಕನ್ನಡಾಭಿಮಾನವನ್ನು ಬೆಳಸಿಕೊಂಡುಬರಲು ಅನುವಾದುವು. ಯಾವಾಗ ಕನ್ನಡಾಭಿಮಾನ ಇವರಲ್ಲಿ ಜಾಗೃತವಾಯಿತೋ ಅಂದಿನಿಂದ ಕನ್ನಡಕ್ಕೆ ಸಿಗಬೇಕಾದ ಸ್ಥಾನಮಾನಗಳು ಸಿಕ್ಕಲಿಲ್ಲವೆಂಬ ಅರಿವು, ಅದಕ್ಕಾಗಿ ಪ್ರಯತ್ನವನ್ನೇ ಪಡದ ಕನ್ನಡಿಗರ ತೇಜೋಹೀನ ಸ್ಥಿತಿಗತಿಗಳು ಇವರಿಗೆ ಮನವರಿಕೆಯಾಗಿ ಕನ್ನಡಕ್ಕೆ ಹೋರಾಡಬೇಕೆಂಬ ಅಪೇಕ್ಷೆ ಮೊಳೆತು ಬೆಳೆಯಲಾರಂಭಿಸಿತು.

ನಮ್ಮ ಯಕ್ಷಗಾನದ ತಾಳಮದ್ದಲೆಗೆ ತೀರ ಹತ್ತಿರವಾದುದು ಕೀರ್ತನೆ. ವೇಷ, ಅಭಿನಯಗಳಿಲ್ಲದ ಕೀರ್ತನೆಯಲ್ಲಿ ಹಿಮ್ಮೇಳ, ಹಾಡು ಮತ್ತು ಸಂಭಾಷಣೆಯಿಂದೊಡಗೂಡಿದ ಕಥಾಪ್ರಸಂಗ ಕಂಡುಬರುತ್ತದೆ. ಒಬ್ಬ ಪಾತ್ರಧಾರಿ ಮಾತ್ರ ಕೀರ್ತನೆಯಲ್ಲಿರುತ್ತಾನೆ. ಈ ಕೀರ್ತನೆಯೇ ಶಾಂತಕವಿಗಳ ಗೀತೆಗಳ ಹಾಗೂ ನಾಟಕ ರಚನೆಗೆ ನಾಂದಿಯಾಯಿತು.

ಶಾಂತಕವಿಗಳ ಜೀವನದ ಆರಂಭಕಾಲ ಅಂದರೆ ೧೮೭೦ರ ಸುಮಾರಿನಲ್ಲಿ ಉತ್ತರ ಕರ್ನಾಟಕದ ಅನೇಕ ಭಾಗಗಳಲ್ಲಿ ಕನ್ನಡ ನಾಡು, ನುಡಿಗಳ ಮರ್ಯಾದೆಗೆ ಯಾರೂ ಅಷ್ಟಾಗಿ ಗಮನ ಕೊಡುತ್ತಿರಲಿಲ್ಲ. ಅದು ಆಳುತ್ತಿದ್ದ ಆಂಗ್ಲರ ಭಾಷೆ, ಸಂಸ್ಕೃತಿಗಳ ಪ್ರಭಾವಕ್ಕೆ ಮಾರು ಹೋದ ಕಾಲ. ಪರಕೀಯರು ಹೊರಸಿದ ಹೊರೆಯ ಅಡಿಯಲ್ಲಿ ಕನ್ನಡಿಗರ ಸಂಸ್ಕೃತಿ, ಲಲಿತ ಕಲೆಗಳ ವೈಶಿಷ್ಟ್ಯ ಯಾರಿಗೂ ಕಾಣದಂತಾಗಿತ್ತು. ಇಷ್ಟು ಸಾಲದೆಂಬಂತೆ ಕನ್ನಡ ಜಾನಪದ ಕಲೆಯಿಂದಲೇ ಪ್ರಚೋದನೆಗೊಂಡು ರೂಪುಗೊಂಡ ಮರಾಠಿ ವೃತ್ತಿ ರಂಗಭೂಮಿಯ ನಾಟಕಗಳ ಬಗೆಗೆ ಕನ್ನಡಿಗರೇ ಸಂಪೂರ್ಣವಾಗಿ ಆಕರ್ಷಿತರಾಗಿದ್ದರು. ಮರಾಠಿಗರ ನಾಟಕವನ್ನು ನೋಡಲು, ಮರಾಠಿ ಭಾಷೆಯನ್ನು ಕಲಿಯಲು ಕನ್ನಡಿಗರು ಅತ್ಯುತ್ಸುಕರಾಗಿದ್ದರು. ಕನ್ನಡದ ಪ್ರದೇಶಗಳಲ್ಲಿ ಹೆಸರುವಾಸಿಯಾಗಿದ್ದ ಭಾಗವತರಾಟದ ಮಾದರಿಯಲ್ಲಿ ತಮ್ಮ ರಂಗಭೂಮಿಯನ್ನು ರಚಿಸಿಕೊಂಡು ಮರಾಠಿಗರು ನಾಟಕಗಳನ್ನಾಡುತ್ತಿದ್ದರು. ಈ ನಾಟಕಗಳನ್ನು ನೋಡಲು ಜನ ದುಡ್ಡು ತೆತ್ತು ಹಿಂಡು ಹಿಂಡಾಗಿ ಹೋಗುತ್ತಿದ್ದರು. ಹೀಗಾಗಿ ಕನ್ನಡಿಗರು ತಮ್ಮ ಭಾಷೆಯನ್ನು, ಕಲೆಯನ್ನು ಮಾತ್ರವಲ್ಲದೆ ಕನ್ನಡತನವನ್ನು ಮರೆಯುವ ಸ್ಥಿತಿಗೆ ಬಂದು ತಲುಪಿದ್ದರು. ಕನ್ನಡಿಗರ ಪ್ರೋತ್ಸಾಹವೂ ಇಲ್ಲದೆ ಕನ್ನಡ ರಂಗಭೂಮಿ ತನ್ನ ಅವನತಿಯತ್ತ ಸಾಗಲಾರಂಭಿಸಿತು. ಇದು ಮೊದಲಿನಿಂದ ಕನ್ನಡ ರಂಗಭೂಮಿಯ ಉತ್ಕಟ ಉಪಾಸಕರಾದ ಶಾಂತಕವಿಗಳ ಮನಸ್ಸನ್ನು ಕಲಕಿತು.

ಕನ್ನಡ ರಂಗಭೂಮಿಯ ಜಾಗೃತಿಯನ್ನು ಕುರಿತು ಶಾಂತಕವಿಗಳು ಗಂಭೀರವಾಗಿ ಚಿಂತಿಸತೊಡಗಿದರು. ಅಂದಿನ ಕನ್ನಡ ಭಾಷೆ ಹಾಗೂ ರಂಗಭೂಮಿಯ ಪರಿಸ್ಥಿತಿಯು ಹೇಗಿತ್ತೆಂಬುದನ್ನು, ಉದ್ಧರಿಸಿ ಉತ್ತಮಗೊಳಿಸುವಲ್ಲಿ ತಾವು ಮಾಡಿದ ಕೆಲಸವನ್ನು ಕುರಿತು ೧೯೧೯ರಲ್ಲಿ ತಾವು ರಚಿಸಿದ **'ನಾಟಕ'** ಎಂಬ ಪದ್ಯ ಸಂಕಲನದಲ್ಲಿ ಸಾಕಷ್ಟು ವಿವರವಾಗಿ ಬಣ್ಣಿಸಿದ್ದಾರೆ.

ಕರ್ನಾಟಕ, ಮರಾಠಿಯರ ನಾಟಕಮಯವಾಗಿ ಹೋಗಿತ್ತೆಂಬ ಶಾಂತಕವಿಗಳ ಅಳಲನ್ನು ಯಾರು ಅರ್ಥಮಾಡಿಕೊಂಡರೋ ತಿಳಿದವರಾರು? ಆದರೆ ಕರ್ನಾಟಕದ ಧಾರವಾಡದ ಮಂದಿ ಸುಮ್ಮನೆ ಕೂರಲಿಲ್ಲ. ಇಂತಹ ಅಭಿಮಾನಿಗಳ ನೆರವಿನಿಂದ ಕನ್ನಡಿಗರಿಗಾಗಿ, ಕನ್ನಡದ ಉದ್ಧಾರಕ್ಕಾಗಿ, ಕನ್ನಡ ನಾಟಕದ ಏಳ್ಗೆಗಾಗಿ ಕರ್ನಾಟಕ ನಾಟಕ ಕಂಪನಿಯನ್ನು ಕಟ್ಟುವ, ಕನ್ನಡ ನಾಟಕಗಳನ್ನು ಬರೆದುಕೊಡುವ, ಕನ್ನಡ ಹಾಡುಗಳನ್ನು ರಚಿಸುವ, ಕನ್ನಡ ನಾಟಕಗಳನ್ನು ಕಲಿಸಿಕೊಡುವ, ಕನ್ನಡ ನಾಟಕಗಳನ್ನು ಪ್ರದರ್ಶಿಸುವ ಕೆಲಸ ಕೃತಪುರದಲ್ಲಿ (ಗದಗ) ಇವರಿಂದ ಆರಂಭವಾಯಿತು. ಅಂದು ಕನ್ನಡನಾಡು, ನುಡಿಗಳ ಬಗೆಗೆ ಒಲುಮೆಯನ್ನು ಮೂಡಿಸುವ ಕೀರ್ತನೆಗಳನ್ನು ರಚಿಸಿ, ಸಭೆಗಳಲ್ಲಿ ಹಾಡಿ ಜನಜಾಗೃತಿಯನ್ನು ಉಂಟುಮಾಡಿದರು.

ಕನ್ನಡ ನಾಟಕದ ಬಾವುಟವನ್ನು ಹಾರಿಸುವ ಹಿರಿದಾದ ಉದ್ದೇಶದಿಂದ ಕನ್ನಡ ನಾಡಿನಲ್ಲಿ ಕನ್ನಡ ನಾಟಕದ ಮೇಳವನ್ನು ಕಟ್ಟಿ, ನಾಟಕವಾಡಲು ತಮ್ಮ ೧೪ ನೆಯ ವಯಸ್ಸಿನಲ್ಲೇ **'ಉಷಾಹರಣ'** ನಾಟಕವನ್ನು ರಚಿಸಿ ಆಡಿಸಿದ್ದರಿಂದ ಇಂದಿಗೂ "ಕರ್ನಾಟಕ ನಾಟಕದ ಪ್ರಥಮ ಗುರು" ಎಂದು ಕರೆಯುವರೆಂದು ಶಾಂತಕವಿಗಳೇ ಹೇಳಿಕೊಂಡಿದ್ದಾರೆ.

ಹೀಗೆ ಗದುಗಿನ ಉತ್ಸಾಹಿ ತರುಣರ ನೆರವಿನೊಂದಿಗೆ **"ಕರ್ನಾಟಕ ನಾಟಕ ಕಂಪನಿ"**ಯನ್ನು ೧೮೭೪ರಲ್ಲಿ ಆರಂಭಿಸಿದರು. ಕಲೆಹಾಕಿದ ನಟರೊಡನೆ ನಾಟಕವಾಡಲು ನಾಟಕ ರಚಿಸಿ, ಗಾಯಕರಿಗೆ, ನಟರಿಗೆ ನಾಟ್ಯ ಶಿಕ್ಷಣವನ್ನು ಕೊಟ್ಟು 'ಕರ್ನಾಟಕ ನಾಟಕ ಪ್ರಥಮ ಗುರು' ಎಂಬ ಬಿರುದನ್ನು ಅರ್ಥಪೂರ್ಣವಾಗಿಸಿದರು. ಈ ರೀತಿ ಶಾಂತಕವಿಗಳು, **'ಕರ್ನಾಟಕ ನಾಟಕದ ಪಿತಾಮಹ'** ಎಂಬ ಗೌರವಕ್ಕೆ ಸಂಪೂರ್ಣವಾಗಿ ಅರ್ಹರಾದರು.

ವೃತ್ತಿಯಿಂದ ಶಾಂತಕವಿಗಳು ಅಧ್ಯಾಪಕರಾಗಿದ್ದರು. ಬಡತನದಿಂದ ಆಂಗ್ಲಭಾಷೆಯ ವಿದ್ಯೆಯನ್ನು ಅವರು ಕಲಿಯಲಾಗಲಿಲ್ಲ. ಅದರಿಂದಾಗಿ ಶಾಂತಕವಿಗಳು ಕನ್ನಡ ಶಾಲೆಯ ಅಧ್ಯಾಪಕರಾಗಿಯೇ ಉಳಿಯಬೇಕಾಯಿತು. ಕೇವಲ ೧೪ ವರ್ಷ ವಯಸ್ಸಿನಲ್ಲಿರುವಾಗಲೇ ಶಾಂತಕವಿಗಳು ರಾಣಿಬೆನ್ನೂರು ಕನ್ನಡ ಶಾಲೆಯ ಅಧ್ಯಾಪಕರಾಗಿ ಸೇರಿಕೊಂಡರು. ನಾಟಕ ಕಲೆ ಹುಟ್ಟಿನಿಂದಲೇ ಅವರಲ್ಲಿ ಬಂದಿತ್ತು. ಕನ್ನಡ ನಾಟಕದ ಬಗೆಗೆ ಅಪಾರವಾದ ಆಸಕ್ತಿ. ಆದರೆ ಕನ್ನಡ ನಾಟಕ ರಚನೆಗೆ ಸಾಕಷ್ಟು ಸಮಯ ದೊರಕದಿದ್ದಾಗ ಬಂಗಾರದಂತಹ ಹಗಲಿನ ಆಯುಷ್ಯವನ್ನು ಸಾಲಿಯ ವಿದ್ಯಾರ್ಥಿಗಳೊಡನೆ ತಲೆಕೆಡಿಸಿಕೊಳ್ಳುತ್ತ ಕಳೆಯುತ್ತಿರುವುದಾಗಿ ಒಂದೆಡೆ ಪೇಚಾಡಿಕೊಂಡಿರುವುದೂ ಉಂಟು. ಮೂರು ವರ್ಷಗಳ ಬಳಿಕ ಗದುಗಿಗೆ ಬಂದಾಗ ಇವರ ಕನ್ನಡ ಪ್ರೇಮ, ಕನ್ನಡ ನಾಟಕಗಳ ಬಗೆಗಿನ ಕಾಳಜಿ, ರಂಗ ಚಟುವಟಿಕೆಗಳ ಚಾತುರ್ಯ ಇವೆಲ್ಲಾ ಪುಟಿದ ಕಾರಂಜಿಯಂತಾಗಿ ಎಲ್ಲರನ್ನೂ ಆಕರ್ಷಿಸಿತು. ಇವರ ಕನ್ನಡ ಪ್ರೀತಿಯನ್ನು ಕಂಡು ಮರಾಠಿಗರು ಕರುಬಿದರು. ಒಬ್ಬ ಮರಾಠಿ ಶಾಲಾ ತನಿಖಾಧಿಕಾರಿಯಂತು ಶಾಂತ ಕವಿಗಳನ್ನು ಗದುಗಿನಿಂದ ಹೊಂಬಳಕ್ಕೆ ಹೊಟ್ಟೆಯ ಕಿಚ್ಚಿನಿಂದಾಗಿ ವರ್ಗಮಾಡಿದರು. ಉತ್ಸಾಹಿ ತರುಣರನ್ನು ಕಲೆಹಾಕಿ ಕೆಲಸವಾರಂಭಿಸಿದ್ದ ಶಾಂತಕವಿಗಳ ಉತ್ಸಾಹ ಕುಗ್ಗಲಿಲ್ಲ. ಶಾಲೆಯ ಕೆಲಸ ಮುಗಿಸಿದ ನಂತರ ಒಂಬತ್ತು ಹತ್ತು ಮೈಲಿ ದೂರದ ಗದುಗಿಗೆ ಎಮ್ಮೆಯ ಮೇಲೆ ಕುಳಿತು ಹೋಗಿ ನಟರನ್ನು ರಾತ್ರಿಯಲ್ಲಿ ತರಬೇತು ಮಾಡಿ ಬೆಳಗ್ಗೆ ಮತ್ತೆ ಎಮ್ಮೆಯ ಮೇಲೆ ಕುಳಿತು ಬಂದು ಸಕಾಲಕ್ಕೆ ಶಾಲೆಯ ಕರ್ತವ್ಯಕ್ಕೆ ಹಾಜರಾಗುತ್ತಿದ್ದರು. ಇವರ ಈ ಅಮಿತ ಉತ್ಸಾಹ ಆಸಕ್ತಿಗಳು ಕನ್ನಡ ರಂಗಭೂಮಿಗೆ ಭದ್ರವಾದ ಅಡಿಪಾಯವನ್ನು ಹಾಕಿದವು.

ಶಾಂತಕವಿಗಳ **ಉಷಾಹರಣವು** ಒಂದು ಸಂಗೀತ ನಾಟಕ. ಅವರೇ ತಿಳಿಸುವಂತೆ ಪ್ರದರ್ಶನಗೊಂಡ ಮೊದಲ ಕನ್ನಡ ನಾಟಕ. ಅಂದ ಮೇಲೆ ಕನ್ನಡ ನಾಟಕವೊಂದನ್ನು ಬರೆದು ರಂಗದ ಮೇಲೆ ಆಡಿಸಿದ ಮೊದಲ ಕೀರ್ತಿ ಶಾಂತಕವಿಗಳಿಗೇ ಸಲ್ಲುತ್ತದೆ. ಪ್ರದರ್ಶಿತ ನಾಟಕವನ್ನು, ನಾಟಕಕಾರನನ್ನು, ನಟರನ್ನು, ಹಾಡಿದ ಗೀತೆಗಳನ್ನು ಮೆಚ್ಚಿ ಎಲ್ಲರೂ

ಪ್ರಶಂಸಿಸಿದರು. ಇದರಿಂದ ಕರ್ನಾಟಕ ನಾಟಕ ಕಂಪನಿಯವರ ಉತ್ಸಾಹ ಗರಿಗೆದರಿತು. ಅವರು ಶಾಂತ ಕವಿಗಳನ್ನು ಇನ್ನೂ ಕೆಲವು ನಾಟಕಗಳನ್ನು ಬರೆದುಕೊಡುವಂತೆ ದುಂಬಾಲು ಬಿದ್ದರು. ಕರ್ನಾಟಕ ನಾಟಕ ಕಂಪನಿಗಾಗಿ ಶಾಂತಕವಿಗಳು **ಸಿರಿಯಾಳ ಸತ್ವ ಪರೀಕ್ಷೆ, ಸುಂದೋಪಸುಂದ ವಧೆ, ವತ್ಸಲಾಹರಣ, ಕೀಚಕವಧ, ಸುಧನ್ವ ವಧ, ಸೀತಾರಣ್ಯ ಪ್ರವೇಶ, ಪಾರ್ವತಿ ಪರಿಣಯ, ಮೇಘದೂತ, ಶಕುಂತಲೋತ್ಪತ್ತಿ, ಚಂದ್ರಾವಳಿ ಚರಿತ್ರೆ** ಮೊದಲಾದ ನಾಟಕಗಳನ್ನು ಬರೆದರು. ಕಾವ್ಯ, ನಾಟಕಗಳ ಜೊತೆಗೆ ಸ್ವಾತಂತ್ರ್ಯದ ಹೋರಾಟಕ್ಕೆ ಅಭಿವ್ಯಕ್ತಿಯನ್ನು ಕೊಡಲು ಹುಟ್ಟಿದ ಪತ್ರಿಕಾ ವ್ಯವಸಾಯದ ಫಲದಿಂದಾಗಿ ಕೆಲವು ಹಾಸ್ಯ ಪ್ರಬಂಧಗಳನ್ನು ರಚಿಸಿದರೆಂದು ತಿಳಿದು ಬರುತ್ತದೆ.

ಕನ್ನಡ ಭಾಷೆ, ಕನ್ನಡ ನಾಟಕಗಳು ಇಲ್ಲದಿರುವ ಪರಿಸ್ಥಿತಿ, ಕನ್ನಡ ರಂಗಭೂಮಿಯ ದುಃಸ್ಥಿತಿ, ಇವುಗಳ ಬಗೆಗೆ ಗಂಭೀರವಾದ ಚಿಂತನೆ ನಡೆಸಿ, ಕನ್ನಡ ನಾಟಕಗಳ ರಚನೆ, ಕನ್ನಡ ನಾಟಕಗಳ ಪ್ರದರ್ಶನ, ಕನ್ನಡ ನಾಟಕಗಳಲ್ಲಿ ಹಾಡುಗಳ ರಚನೆ, ಜನರಲ್ಲಿ ಕನ್ನಡ ನಾಟಕಗಳ ಬಗೆಗೆ ಹೊಸ ಅಭಿರುಚಿ ಮೂಡಿಸುವುದು ಇವುಗಳಿಗಾಗಿ ತಮ್ಮ ಬಾಳನ್ನೇ ಮುಡಿಪಿಟ್ಟು ಕನ್ನಡ ನಾಟಕ ಕ್ಷೇತ್ರದಲ್ಲಿನ ಕಾಯಕದಲ್ಲಿ ಮಾತ್ರ ತಮ್ಮ ಬಾಳಿನ ಸಾರ್ಥಕತೆಯನ್ನು ಕಂಡುಕೊಂಡ ಅಪ್ಪಟ ಕನ್ನಡ ಚೇತನ ಶಾಂತಕವಿಗಳದು.

ಕನ್ನಡಿಗರಿಗೆ ಕನ್ನಡ ಪ್ರಜ್ಞೆಯ ಅರಿವಿಲ್ಲದಿದ್ದ ಅಂದಿನ ದಿನಗಳಲ್ಲಿ ಕನ್ನಡಕ್ಕಾಗಿ, ಕನ್ನಡ ರಂಗಭೂಮಿಯ ಜಾಗೃತಿಗಾಗಿ, ವೃತ್ತಿರಂಗಭೂಮಿಯ ಏಳ್ಗೆಗಾಗಿ ದುಡಿದವರೆಂದರೆ ಶಾಂತಕವಿಗಳು. ಕನ್ನಡ ವೃತ್ತಿರಂಗಭೂಮಿಯು ಅಸ್ತಿತ್ವಕ್ಕೆ ಬಂದ ಮೊದಲ ಹಲವಾರು ವರ್ಷಗಳಲ್ಲಿ ರಂಗಸಾಹಿತ್ಯ ಹುಲುಸಾಗಿ ಬೆಳೆಯಲು ಕಾರಣರಾದವರಲ್ಲಿ ಶಾಂತಕವಿಗಳು ಪ್ರಮುಖರು. ಆದರೆ ಅವರ ಪೌರಾಣಿಕ ಪ್ರಸಂಗಗಳನ್ನಾಧರಿಸಿದ ಎಲ್ಲ ಸ್ವತಂತ್ರ ನಾಟಕಗಳೂ ರಂಗವನ್ನು ಏರಲಿಲ್ಲ. ಹಾಗಾಗಿ ಸಂಖ್ಯಾ ದೃಷ್ಟಿಯಿಂದ ಹೆಚ್ಚು ನಾಟಕಗಳನ್ನು ಬರೆದರೂ ರಂಗದ ಮೇಲೆ ಪ್ರಯೋಗವಾದ ಹಾಗೂ ಪ್ರಕಟವಾದ ನಾಟಕಗಳು ಕೆಲವು ಮಾತ್ರ. ಇದರಿಂದಾಗಿ ರಂಗ ಸಾಹಿತ್ಯ ದೃಷ್ಟಿಯಿಂದ ಅಪಾರ ನಷ್ಟ ಉಂಟಾಯಿತು ಮಾತ್ರವಲ್ಲ, ಶಾಂತ ಕವಿಗಳ ಮೂಲ ಉದ್ದೇಶ ಕನ್ನಡದ ಪ್ರಚಾರವಾಗಿತ್ತಾದ್ದರಿಂದ ಈ ನಾಟಕಗಳು ಸ್ವಯಂಪೂರ್ಣವಾಗಿ ಬರಲಿಲ್ಲವೆಂಬುದು ಗಮನಾರ್ಹ ಸಂಗತಿ. ಕನ್ನಡತನವೇ ಇಲ್ಲದಿದ್ದ ನಮ್ಮವರಲ್ಲಿ ಕನ್ನಡ ಪ್ರಜ್ಞೆ ಬೆಳೆಸುವ, ಕನ್ನಡ ವಾಚನಾಭಿರುಚಿಯನ್ನುಂಟು ಮಾಡುವ, ಕನ್ನಡ ನಾಟಕಗಳನ್ನಾಡುವ, ಕನ್ನಡ ನಾಟಕಗಳನ್ನು ನೋಡುವ ಪ್ರವೃತಿಯನ್ನು ಬೆಳೆಸಿ ನಮ್ಮವರನ್ನು ನಿಜವಾದ ಕನ್ನಡಿಗರಂತೆ ಮಾಡುವಲ್ಲಿ ಶಾಂತಕವಿಗಳ ಬರಹಗಳು ಅದ್ವಿತೀಯವಾಗಿವೆ.

ಕನ್ನಡಕ್ಕಾಗಿ ಇಳಿಯ ವಯಸ್ಸಿನವರೆಗೂ ಸಾಕಷ್ಟು ಶ್ರಮಿಸಿದ ಶಾಂತಕವಿಗಳು ತಮ್ಮ ಕೆಲಸ ಫಲಪ್ರದವಾದುದನ್ನು ಕಂಡು ಸಂತೋಷಿಸಿದರು. ಅದನ್ನು ಶಾಂತಕವಿಗಳ ಮಾತಿನಿಂದಲೇ ತಿಳಿಯೋಣ. 'ಈ ಕಾಲವಂ ನೋಡಬಯಸಿ ಮುದುಕನಾದೆನ್ನ

ಸಂಪ್ರಾರ್ಥನೆಗೆ ಪರಮಾತ್ಮನಿಂದೊಲಿದ' ಎಂಬ ಸಂತೃಪ್ತಿಯಿಂದಲೇ ಧರೆಯೊಳುದಯಿಸಿದ ಕಾರ್ಯ ಸಫಲವಾಯಿತು ಎಂಬ ಧನ್ಯತಾ ಭಾವದಿಂದಲೇ ೧೯೨೦ರಲ್ಲಿ ಈ ಲೋಕದಿಂದ ದೂರವಾದರು.

ಕನ್ನಡದ ಮೊದಲ ನಾಟಕದ ಸಿಂಗರಾರ್ಯನ (೧೬೮೦) ಮಿತ್ರವಿಂದಾ ಗೋವಿಂದ ಬಳಿಕ ಸುಮಾರು ಎರಡು ಶತಮಾನಗಳ ಕಾಲ ಅಂದರೆ ಶಾಂತಕವಿಗಳ (೧೮೭೭) ಉಷಾಹರಣ ರಚನೆಯಾಗುವವರೆಗೆ ಕನ್ನಡದಲ್ಲಿ ನಾಟಕಗಳ ರಚನೆಯ ಬಗೆಗೆ ಯಾವ ಮಾಹಿತಿಯು ದೊರಕುವುದಿಲ್ಲ. ಆದ್ದರಿಂದ ನಾಟಕರಚನೆಯಾಗಲಿ ಅದರೊಳಗಿನ ಹಾಡುಗಳ (ಗೀತಗಳ) ರಚನೆಯಾಗಲಿ ಶಾಂತಕವಿಗಳವರೆಗೂ ಆಗದಿರುವುದರಿಂದ ಶಾಂತಕವಿಗಳನ್ನೇ ಪ್ರದರ್ಶಿತ ನಾಟಕಗಳ ಆದ್ಯರೆಂದು ಭಾವಿಸಿದರೆ ತಪ್ಪಾಗಲಾರದು. ಅವರಿಂದ ಆರಂಭವಾದ ಗದುಗಿನ (ಕೃತಪುರ) ನಾಟಕ ಮಂಡಳಿಯು ಕನ್ನಡ ನಾಟಕ ಕ್ಷೇತ್ರದಲ್ಲಿ ಒಂದು ಹೊಸ ಹೆದ್ದಾರಿಯನ್ನು ನಿರ್ಮಾಣಮಾಡಿತು. ಆ ಹೆದ್ದಾರಿಯಲ್ಲಿ ಬಹುತೇಕ ವೃತ್ತಿ ನಾಟಕಗಳ ಚಟುವಟಿಕೆಗಳನ್ನು ಕಾಣುತ್ತೇವೆ. ಕಂಪನಿಯ ನಾಟಕಗಳಲ್ಲಿ ನೃತ್ಯ, ಹಾಡು ಹಾಗೂ ಅಭಿನಯಗಳಿಗೆ ಸಮಾನ ಅವಕಾಶವಿತ್ತಾದ್ದರಿಂದ ಅನಂತರ ಬಂದ ಕಂಪನಿಯ ವೃತ್ತಿ ನಾಟಕಗಳಿಗೆ ಹಾಡುಗಳನ್ನು (ಗೀತೆಗಳನ್ನು) ರಚಿಸುವುದು ಅನಿವಾರ್ಯವಾಯಿತು. ವೃತ್ತಿ ನಾಟಕ ಮಂಡಲಿಯ ಬಂಡವಾಳ ಸಂಗೀತವಾಯಿತು. ಉತ್ತರ ಕರ್ನಾಟಕ ಹಾಗೂ ಮೈಸೂರು ಸಂಸ್ಥಾನದಲ್ಲಿ ವೃತ್ತಿ ರಂಗದ ಬೆಳವಣಿಗೆಗಳು ಕಾಣತೊಡಗಿದುವು. ಮೈಸೂರಿನ ದೊರೆಗಳ ಕೃಪಾ ಪೋಷಿತ ನಾಟಕ ಮಂಡಲಿಗಳು ತಲೆ ಎತ್ತಿದುವು. ಚಾಮರಾಜಒಡೆಯರ ಆಶಯದಂತೆ ಮೈಸೂರಿನಲ್ಲಿ ಸ್ಥಾಪಿತವಾದ ಶ್ರೀ ಚಾಮರಾಜೇಂದ್ರ ಕರ್ನಾಟಕ ನಾಟಕ ಸಭಾದ ನಾಟಕಗಳಲ್ಲಿ ಬಿಡಾರಂ ಕೃಷ್ಣಪ್ಪನವರು ಸೊಗಸಾಗಿ ಹಾಡುತ್ತಿದ್ದರೆಂದು ತಿಳಿದು ಬರುತ್ತದೆ. ನಾಟಕ ಮತ್ತು ನಾಟಕ ಕಂಪನಿಗಳ ಹೆಸರಿನೊಂದಿಗೆ ಸಂಗೀತವೂ ಸೇರಿ ಮೆರೆಯಲಾರಂಭಿಸಿತು. 'ಶಾರದಾ ಸಂಗೀತ ನಾಟಕ ಮಂಡಲಿ', ಹಾಲಸಿದ್ದೇಶ್ವರ ಸಂಗೀತ ನಾಟಕ ಮಂಡಲಿ', 'ಸಂಗೀತ ಸುಭದ್ರ', 'ಸಂಗೀತ ಗುಣಶೋಧನ', ಸಂಗೀತ ಶಾಕುಂತಲ ಮೊದಲಾದುವುಗಳಲ್ಲಿ ಸಂಗೀತ ಬೆರೆತು ಹೋಗಿರುವುದನ್ನು ಕಾಣಬಹುದು.

ಅಂದಿನ ಸಂಸ್ಕೃತ ನಾಟಕಗಳಲ್ಲೂ ಹಾಡುಗಳೇ ಪ್ರಧಾನವಾಗಿದ್ದು ವಿಶೇಷವಾಗಿ 'ಅನುಷ್ಟುಪ್' ಛಂದಸ್ಸಿನಲ್ಲಿ ಅವನ್ನು ಹಾಡುತ್ತಿದ್ದರು. ಭರತನ ನಾಟ್ಯಶಾಸ್ತ್ರದಿಂದ ಪ್ರಧಾನವಾಗಿ ಸ್ತ್ರೀಯರ ಹಾಡುಗಳ ಮೂಲಕ ನಾಟಕ ಆಡಿಸುತ್ತಿದ್ದರೆಂದು ಗೊತ್ತಾಗುತ್ತದೆ.

ಮೊದಲು ಮರಾಠಿ ಹಾಡುಗಳಿಂದ ಅನಂತರ ಹಿಂದೂಸ್ಥಾನಿ ಹಾಡುಗಳಿಂದ ಪ್ರಭಾವಿತವಾದ ಕನ್ನಡ ರಂಗಗೀತೆಗಳು ಬಂದು ಕಾಲಕ್ರಮೇಣ ಕರ್ನಾಟಕ ಸಂಗೀತ ಪದ್ಧತಿಯ ಹಾಡುಗಳಿಂದ ಪ್ರಭಾವಿತವಾದ ರಂಗಗೀತೆಗಳು ಬಂದುವೆಂದು ತಿಳಿದು ಬರುತ್ತದೆ.

ಕೆಲವು ಕಂಪನಿಗಳು ಸಂಗೀತಮಯ ನಾಟಕಗಳ ಪ್ರದರ್ಶನವನ್ನೇ ಪ್ರಧಾನ ಗುರಿಯನ್ನಾಗಿ ಮಾಡಿಕೊಂಡಿದ್ದವು. ಹೀಗಾಗಿ ಪಾತ್ರಧಾರಿಯು ಅಭಿನಯ ಹಾಡುಗಾರಿಕೆಗಳೆರಡರಲ್ಲೂ ಸಮರ್ಥನಾಗಿರಬೇಕಾದುದು ಅನಿವಾರ್ಯವಾಗಿತ್ತು. ಆರಂಭದಲ್ಲಿ ಪೌರಾಣಿಕ, ಐತಿಹಾಸಿಕ ನಾಟಕಗಳಲ್ಲಿ ಕಾಣಿಸಿಕೊಳ್ಳುತ್ತಿದ್ದ ರಂಗಗೀತೆಗಳು ಕಾಲಕ್ರಮೇಣ ಸಾಮಾಜಿಕ ನಾಟಕಗಳಿಗೂ ನುಸುಳಿರುವುದನ್ನು ಗಮನಿಸಬಹುದು. ವೃತ್ತಿ ರಂಗಭೂಮಿಯ ರಂಗಗೀತೆಗಳನ್ನು ವರ್ಣನೆಯ ಗೀತೆಗಳು, ಭಕ್ತಿಗೀತೆಗಳು, ಪ್ರಣಯ ಗೀತೆಗಳು, ವಿರಹಗೀತೆಗಳು, ದ್ವಂದ್ವಗೀತೆಗಳು, ವಿನೋದಗೀತೆಗಳು, ವಿಡಂಬನಗೀತೆಗಳು, ಪ್ರಾರ್ಥನಾಗೀತೆಗಳು, ಮಂಗಳಗೀತೆಗಳು – ಹೀಗೆ ಅನೇಕ ವಿಧಗಳಲ್ಲಿ ಅವುಗಳನ್ನು ಗುರುತಿಸಬಹುದು. ತಿರುಮಲೆ ಶ್ರೀನಿವಾಸ ಅಯ್ಯಂಗಾರ್, ಬೆಳ್ಳಾವೆ ನರಹರಿಶಾಸ್ತ್ರಿ, ವರದಾಚಾರ್ಯರು, ಬಸವಪ್ಪಶಾಸ್ತ್ರಿ, ಶ್ರೀಕಂಠೇಶಗೌಡ, ಬಿ.ಪುಟ್ಟಸ್ವಾಮಯ್ಯ, ಎಚ್.ಕೆ. ಯೋಗಾನರಸಿಂಹ, ಮೈಸೂರಿನ ಶಾರದಾವಿಲಾಸ ಕಾಲೇಜಿನ ಪ್ರಾಂಶುಪಾಲರಾಗಿದ್ದ ಎಂ.ಎಸ್. ರಾಮಸ್ವಾಮಿ, ತೋರಣಗರ್ ರಾಜಾರಾವ್, ನಂಜನಗೂಡು ಶ್ರೀಕಂಠಶಾಸ್ತ್ರಿ, ಗಿರಿಭಟ್ಟರತಮ್ಮಯ್ಯ, ಕು.ರಾ. ಸೀತಾರಾಮಶಾಸ್ತ್ರಿ, ಕೆ. ಹಿರಣ್ಣಯ್ಯ, ಶಿರಹಟ್ಟಿ ವೆಂಕೋಬರಾಯರು, ವಿದ್ವಾನ್ ವೆಂಕಟಾಚಾರ್, ವಾಮನ ಮಾಸ್ತರು, ಬಿ.ಜಿ. ಹೆಗಡೆ, ಕಂದಗಲ್ ಹನುಮಂತರಾಯರು, ನಲವಡಿ ಶ್ರೀಕಂಠಶಾಸ್ತ್ರಿ, ಕೆರೂರು ವಾಸುದೇವಾಚಾರ್ಯ ಮೊದಲಾದವರ ಕೊಡುಗೆ ವೃತ್ತಿರಂಗಭೂಮಿಯಲ್ಲಿ ಸ್ಮರಣೀಯವಾದುದು. ಇವರಲ್ಲಿ ಅನೇಕರು ನಾಟಕ ರಚನಾಕಾರರು ಮಾತ್ರವಲ್ಲ, ಗೀತರಚನಾಕಾರರು ಹಾಗೂ ಗಾಯಕರೂ ಆಗಿದ್ದರು. ಶಾಂತಕವಿಗಳು ನಿರ್ಮಿಸಿದ ಹೆದ್ದಾರಿಯಲ್ಲಿ ನಾಟಕ ಸಂಸ್ಥೆಗಳನ್ನು ಕಟ್ಟಿದ ಕಂಪನಿ ಮಾಲೀಕರೆಲ್ಲ ವೃತ್ತಿ ನಾಟಕ ಮಂಡಲಿಯ ಜೀವಾಳ ಸಂಗೀತವೆಂಬುದನ್ನು ಕಂಡುಕೊಂಡರು.

ಕರ್ನಾಟಕ ವೃತ್ತಿರಂಗಭೂಮಿಯ ರಂಗಸಂಗೀತ ಕೆಲವು ಬದಲಾವಣೆಗಳನ್ನು ಕಂಡದ್ದು ೨೦ನೆಯ ಶತಮಾನದ ಆರಂಭದಲ್ಲಿ. ವರದಾಚಾರ್ಯರಂಥ ಗಾಯಕ ನಟರಿಂದ ಬದಲಾವಣೆ ಹೊಂದಿದ ರಂಗಸಂಗೀತ ಉಚ್ಛ್ರಾಯಸ್ಥಿತಿಗೆ ಬಂದಿರುವುದನ್ನು ಗುರುತಿಸಬಹುದು. ಬದಲಾವಣೆಹೊಂದಿದ ರಂಗಸಂಗೀತ ಪ್ರೇಕ್ಷಕರಿಗೆ ಹತ್ತಿರವಾಗಿ ಭಾವರಸಗಳ ಔಚಿತ್ಯಕ್ಕೆ ತಕ್ಕಂತೆ ಹಿತಮಿತವಾದುವು. ಪ್ರೇಕ್ಷಕರು ಹುಚ್ಚೆದ್ದು ಕುಣಿಯುವ ಮಟ್ಟಕ್ಕೆ ರಂಗಗೀತೆಗಳು ಅವರ ಹೃದಯಗಳಲ್ಲಿ ಮನೆ ಮಾಡಿದುವು. ಕೇವಲ ಮನರಂಜನೆ ಮಾತ್ರವಲ್ಲದೆ ಭಕ್ತಿಪ್ರಚಾರ, ನೀತಿಬೋಧೆ, ಧರ್ಮನಿಷ್ಠೆ, ಸ್ವಾಮಿಭಕ್ತಿ, ದೇಶಪ್ರೇಮ, ಜೀವನಕ್ಕೆ ಅತ್ಯಂತ ಅಗತ್ಯವಾದ ಮಾನವೀಯತೆ ಇವುಗಳನ್ನು ತೋರಿಸುವಲ್ಲಿ ರಂಗಭೂಮಿಯ ರಂಗಸಂಗೀತ ಯಶಸ್ವಿಯಾಯಿತು. ಕೆಲವು ರಂಗಸಂಗೀತದ ಹಾಡುಗಳು ಜನಮಾನಸದಲ್ಲಿ ನೆಲಸಿ ಆಗಾಗ ಗುನುಗುವಷ್ಟು ಪ್ರಭಾವ ಬೀರಿದುವು. ಅಂತಹ ಅಭೂತಪೂರ್ವ ರಂಗಗೀತೆಗಳ ಸುವರ್ಣಯುಗದ ವೈಭವ, ಪ್ರಭಾವ ಅವರೊಂದಿಗೆ ಕಣ್ಮರೆಯಾಯಿತೆಂದು ಹೇಳಿದರೆ ತಪ್ಪಾಗಲಾರದು.

ಸಾಂಪ್ರದಾಯಿಕ ಮಾರ್ಗವನ್ನು ಬಿಟ್ಟು ಹೊಸ ಆವಿಷ್ಕಾರದ ಮಾರ್ಗದಲ್ಲಿ ಮುನ್ನುಗ್ಗಿದವರಲ್ಲಿ ಹಿರಣ್ಣಯ್ಯ ಮಿತ್ರ ಮಂಡಲಿಯ ಕೆ. ಹಿರಣ್ಣಯ್ಯನವರು ಮುಖ್ಯರು. ಸಾಮಾಜಿಕ ಸಮಸ್ಯೆಗಳನ್ನು ರಂಗದ ಮೇಲೆ ತಂದು ಅದಕ್ಕೆ ತಕ್ಕ ರಂಗಗೀತೆಗಳನ್ನು ಕೆಲವು ಪ್ರಧಾನ ಘಟ್ಟಗಳಲ್ಲಿ, ಸೂಕ್ತವಾದ ಕಡೆಗಳಲ್ಲಿ ಮಾತ್ರ ಬಳಸಿದರು. ಆ ಮೂಲಕ ಪ್ರೇಕ್ಷಕರನ್ನು ರಂಜಿಸಿ ಆಕರ್ಷಿಸಿದರು. ಅವರಮಗ ಮಾಸ್ಟರ್‌ಹಿರಣ್ಣಯ್ಯ (ನರಸಿಂಹ ಮೂರ್ತಿ)ನವರ ಹೊತ್ತಿಗಾಗಲೆ ರಂಗಸಂಗೀತ ಇಳಿಮುಖವಾಗಿತ್ತು. ಅಂತಹ ಸಮಯದಲ್ಲೂ ಮಾಸ್ಟರ್ ಹಿರಣ್ಣಯ್ಯನವರ ಕಂಪನಿಯಲ್ಲಿ ಆರ್.ಪರಮಶಿವನ್, ಸುಭದ್ರಾ ಮನ್ಸೂರ್, ಮುಸುರಿ ಕೃಷ್ಣಮೂರ್ತಿ ಮೊದಲಾದವರು ರಂಗ ಸಂಗೀತವನ್ನು ಒದಗಿಸಿದುದು ಉಲ್ಲೇಖಾರ್ಹ.

ವೃತ್ತಿನಾಟಕ ಮಂಡಲಿಗಳ ಈ ರಂಗಗೀತೆಗಳು ಒಂದೆಡೆ ಜನಪ್ರಿಯವಾದಂತೆ ಇನ್ನೊಂದೆಡೆ ಔಚಿತ್ಯವರಿಯದೆ ತರುತ್ತಿದ್ದ ಗೀತೆಗಳು ಕೈಲಾಸಂ, ಶ್ರೀರಂಗರಂಥವರ ವಿಡಂಬನೆಗೂ ಕಾರಣವಾದುವು. ಕೈಲಾಸಂ ಅವರು ಈ ವಿಡಂಬನೆಗಾಗಿ 'ನಂಕಪ್ನಿ' ನಾಟಕವನ್ನು ರಚಿಸಿರುವುದು ಗಮನಾರ್ಹ. ಇದರಿಂದ ಅವರಿಗೆ ರಂಗಗೀತೆಗಳ ಬಗೆಗೆ ಅನಾದರವಿತ್ತೆಂದು ಹೇಳಲಾಗುವುದಿಲ್ಲ. ಸುಶಿಕ್ಷಿತರ (ವರದಾಚಾರ್ಯ, ಗುಬ್ಬಿ ವೀರಣ್ಣ) ನಾಟಕಗಳಲ್ಲಿನ ರಂಗಗೀತೆಗಳ ಬಗೆಗೆ ಅವರಿಗೆ ಗೌರವವಿತ್ತು. ಆದರೆ ಅನೇಕ ನಾಟಕಗಳಲ್ಲಿನ ಅವ್ಯವಸ್ಥೆ, ಉಚ್ಚಾರಣೆ, ಅಭಿನಯದ ಅತಿರೇಕಗಳನ್ನು ಗೇಲಿ ಮಾಡಿ ಇದನ್ನು ಸರಿಪಡಿಸಿಕೊಳ್ಳುವುದರೆಡೆಗೆ ಗಮನ ಸೆಳೆದಿರುವರು.

ಇತ್ತೀಚಿನವರೆಗೂ ರಂಗಗೀತೆಗಳನ್ನು ರಚಿಸುವಲ್ಲಿ ಕ್ರಿಯಾಶೀಲರಾಗಿದ್ದವರಲ್ಲಿ ಎಚ್.ಕೆ. ಯೋಗಾನರಸಿಂಹ ಪ್ರಮುಖರು. ವೃತ್ತಿ ರಂಗಭೂಮಿಯ ನಾಟಕಗಳಿಗೆ ಮಾತ್ರವಲ್ಲದೆ ಮೈಸೂರಿನ ಹವ್ಯಾಸಿ ನಾಟಕ ಸಂಘ, ಅಮರ ಕಲಾಸಂಘಕ್ಕೆ ಪ್ರಾರ್ಥನೆ ಹಾಗೂ ಮಂಗಳಗೀತೆಗಳನ್ನು ರಚಿಸಿಕೊಟ್ಟಿರುವರು. ಅಮರ ಕಲಾಸಂಘದವರು ಈಗಲೂ ನಾಟಕವಾಡುವಾಗ ತಪ್ಪದೆ ಅವುಗಳನ್ನು ಹಾಡುತ್ತಿರುವುದು ಗಮನಾರ್ಹ.

ಪ್ರಾರ್ಥನೆ:

ದಯತೋರೆ ಹೇ ಕಲಾಭಾರತಿ ।
ಅನವರತವು ನೀಡೆಮಗೆ ಶುಭಮತಿ ॥
ನೀನೇ ನಮ್ಮ ಉಕ್ತಿಯು ನೀನೇ ನಮ್ಮ ಯುಕ್ತಿಯು ।
ನೀನೇ ರಂಗ ನೀನೇ ಅಂಗ ನೀನೇ ಸಕಲ ಶಕ್ತಿಯು ॥

ಮಂಗಳ:

ವಂದನಂ ವಂದನಂ ಕಲಾಭಿಮಾನಿ ಜನಕೆ ।
ಮಂಗಳಂ ಮಂಗಳಂ ರಂಗಾಭಿಮಾನಿ ಜನಕೆ ।
ಉತ್ಸಾಹಭರಿತರಲ್ಲಿ ಲೋಪದೋಷ ಸಹಜ ।

ಪ್ರೋತ್ಸಾಹಿಗಳು ನೀವು ಎಮಗೆ ಕ್ಷಮಾ ಕಣಜ ॥
ಪ್ರೀತಿಯಿರಲಿ ಅಮರ ಕಲಾ ಸಂಘದೇಳ್ಗೆ ನಿಮದು ।
ರೀತಿಯರಿತು ಕಲಾರಾಧನೆಗೈವುದು ನಮದು ॥

ರಂಗಗೀತೆಗಳ ರಚನೆ ಎಷ್ಟು ಮುಖ್ಯವೊ, ಅವುಗಳ ರಕ್ಷಣೆ ಅಷ್ಟೇ ಮುಖ್ಯ. ರಚನೆ ಮತ್ತು ರಕ್ಷಣೆ ಈ ಕ್ಷೇತ್ರದಲ್ಲಿ ಆಳವಾದ ಸಂಶೋಧನೆಯ ಅಗತ್ಯವಿದೆ. ನಮಗೆ ದೊರಕದ ಎಷ್ಟೋ ರಂಗಗೀತೆಗಳನ್ನು ಹೆಕ್ಕಿ ತೆಗೆಯುವ ಅವಕಾಶವಿದೆ. ಬರೆದಿರುವ ಎಲ್ಲಾ ರಂಗಗೀತೆಗಳೂ ನಮಗೆ ಸಂಪೂರ್ಣವಾಗಿ ಲಭ್ಯವಾಗಿಲ್ಲ. ವೈಯಕ್ತಿಕವಾಗಿ, ಪ್ರಾಂತೀಯವಾಗಿ ಹಲವು ಸಂಕಲನಗಳು ಪ್ರಕಟವಾಗಿರಬಹುದು. ಅವರ ಸಂಪೂರ್ಣ ಮಾಹಿತಿ ಒಂದೆಡೆ ಸಿಗುವಂತೆ ಮಾಡುವ ಅಗತ್ಯ ಬಹಳವಿದೆ. ಆದರೂ ಕೆಲವು ಆಸಕ್ತ ವ್ಯಕ್ತಿಗಳು, ಸಂಘ ಸಂಸ್ಥೆಗಳು ಈ ಕೆಲಸ ಮಾಡಿ ಸ್ತುತ್ಯರಾಗಿದ್ದಾರೆ. ಬರವಣಿಗೆಯಲ್ಲಿ ಹಾಗೂ ಧ್ವನಿ ಸುರುಳಿಗಳೆರಡರಲ್ಲೂ ಸಂಗ್ರಹ ಕಾರ್ಯ ಆಗಿರುವುದು ತಿಳಿದು ಬರುತ್ತದೆ. ಅದನ್ನು ಈ ಕೆಳಗಿನ ರಕ್ಷಾ ವೃಕ್ಷಗಳ ಚಿತ್ರಗಳಲ್ಲಿ ನೋಡಬಹುದು.

ಧ್ವನಿಸುರುಳಿ ರಂಗ ಗೀತೆಗಳ ರಕ್ಷಾವೃಕ್ಷ

ಶ್ರೀನಿವಾಸ ಜ.ಕಪ್ಪಣ್ಣ ಅವರ ಪರಿಕಲ್ಪನೆ ಬಣ್ಣದ ಬದುಕಿನ ಚಿನ್ನದ ಹಾಡುಗಳು	ಎಚ್.ಎಸ್.ಗೋವಿಂದಗೌಡ ೧೩ ಪೌರಾಣಿಕ ನಾಟಕಗಳ ರಂಗ ಸಂಗೀತದ ಧ್ವನಿಸುರುಳಿ
ಕನ್ನಡ ಸಂಸ್ಕೃತಿ ಇಲಾಖೆ ಕ್ಯಾಸೆಟ್ಟುಗಳು	ಸಿಂಧುವಳ್ಳಿ ಅನಂತಮೂರ್ತಿ ಸಮತೇಂತೋ ರಂಗಗೀತೆ ಧ್ವನಿಸುರುಳಿ
ಹ.ವೆಂ.ಸೀತಾರಾಮಯ್ಯನವರ ರಂಗಗೀತೆಗಳು ಸಂಗ್ರಹಕಾರರು : ರಂಗ ವೈಭವ	ವಜ್ರಪ್ಪನವರ ಸಂಗೀತ ನಿರ್ದೇಶನ ರಾಮಾಯಣ, ಮಹಾಭಾರತ
	ಗುರುರಾಜಲು ನಾಯ್ಡು ರಂಗ ಸೌರಭ ಧ್ವನಿಸುರುಳಿ ಕಾನಿಕಾನಹಳ್ಳಿ ಗೋ ನಿರ್ದೇಶನ

ರಂಗಗೀತೆಗಳ ರಕ್ಷಾವೃಕ್ಷ

೨೦೧೧ ರಂಗಗೀತೆಗಳು ಭಾಗ ೩ ಆರ್.ಪರಮಶಿವನ್ ಮತ್ತು ಎಚ್.ಎಸ್.ಗೋವಿಂದಗೌಡ	೨೦೦೯ ರಂಗಗೀತೆಗಳು ಭಾಗ ೧ ಮತ್ತು ೨ ಆರ್.ಪರಮಶಿವನ್ ಮತ್ತು ಎಚ್.ಎಸ್.ಗೋವಿಂದಗೌಡ, ಹಸ್ಯಾಳು ಪ್ರಕಾಶನ
೨೦೦೨ ರಂಗಗೀತೆಗಳು (ಪೌರಾಣಿಕ) ಎಚ್.ಎಸ್. ಗೋವಿಂದಗೌಡ ಹಸ್ಯಾಳು ಪ್ರಕಾಶನ, ಮೈಸೂರು	೧೯೯೦ ಉತ್ತರ ಕರ್ನಾಟಕದ ರಂಗಗೀತೆಗಳು ಡಾ॥ ಬಸವರಾಜ ಮಲ್ಲ ಶೆಟ್ಟಿ ನಾಟಕ ಅಕಾಡೆಮಿ
೧೯೮೯ ರಂಗ ಸಂಗೀತ (ಸ್ವರ ಪ್ರಸಾರದೊಂದಿಗೆ) ಎಚ್.ಕೆ.ಯೋಗಾನರಸಿಂಹ ನಾಟಕ ಅಕಾಡೆಮಿ	೧೯೮೧ ರಂಗಗೀತೆಗಳು ಕೆ.ವಿ. ಆಚಾರ್ (ಸಂ) ಕನ್ನಡ ಸಾಹಿತ್ಯ ಪರಿಷತ್ತು

ಗಮಕಕಲೆಯ ಇತಿಹಾಸ ಹಾಗೂ ಸ್ವರೂಪ

– ಬೆಳವಾಡಿ ಮಂಜುನಾಥ, ಚಿಕ್ಕಮಗಳೂರು

ಉಪನ್ಯಾಸಕರು, ೯೪೪೯೦೩೭೭೦೫

ಕನ್ನಡ ಸಾಹಿತ್ಯ ಸುಮಾರು ಎರಡು ಸಾವಿರ ವರ್ಷಗಳಿಂದ ಅಖಂಡವಾಗಿ ಬೆಳೆದು ಬಂದಿದೆ. ಅದು ಶ್ರೀಮಂತವೂ, ವೈವಿಧ್ಯಪೂರ್ಣವೂ ಆಗಿದೆ. ದೀರ್ಘಕಾಲದ ಸಾಹಿತ್ಯವನ್ನು ವಿಕಾಸ ಹಂತವನ್ನು ಆಧರಿಸಿ ಅಧ್ಯಯನದ ಅನುಕೂಲಕ್ಕಾಗಿ ವಿವಿಧ ರೀತಿಯಲ್ಲಿ ವಿಭಾಗಿಸಲಾಗಿದೆ. ಆದರೆ ಗಮಕ ಮತ್ತು ಸಾಹಿತ್ಯದ ವಿಚಾರವನ್ನು ಕುರಿತು ಬರೆಯುವ ಸಂದರ್ಭದಲ್ಲಿ ಛಂದೋಶ್ಶೈಲಿಯ ವಿಭಾಗಕ್ರಮವನ್ನು ಆಧರಿಸುವುದು ಅರ್ಥಪೂರ್ಣ. ಚಂಪೂ, ವಚನ, ರಗಳೆ, ಷಟ್ಪದಿ ದೇಸಿ ಹಾಗೂ ಮುಕ್ತ ಛಂದಸ್ಸಿನ ಸಾಹಿತ್ಯವೆಂದು ಸ್ಥೂಲವಾಗಿ ವರ್ಗೀಕರಿಸಲಾಗಿದೆ. ಇದು ಕೇವಲ ಛಂದೋಬದ್ಧತೆಯನ್ನು ಅನುಸರಿಸಿದ್ದೇ ವಿನಾ ಗದ್ಯಮಾದರಿಯನ್ನಾಗಲಿ, ಇತರ ಸೂಕ್ಷ್ಮ ಅಂಶಗಳನ್ನಾಗಲಿ ಪರಿಗಣಿಸಿದಂತೆ ತೋರುವುದಿಲ್ಲ. ಆದರೆ ಇದು ಗಮಕ ವಾಚನಕ್ಕೆ ಸೂಕ್ತ ಕ್ರಮವಾಗಿದೆ !

ಕರ್ನಾಟಕದ ಶಾಸನಗಳಿಂದ ಗಮಕದ ಉಲ್ಲೇಖ ಲಭ್ಯವಿದೆ. ಕ್ರಿ.ಶ. ಸುಮಾರು ೭೦೦ರ ಬಾದಾಮಿ ಶಾಸನದಲ್ಲಿ ಉಲ್ಲೇಖಿತ ಪದ್ಯಗಳು ವಾಚನಯೋಗ್ಯವಾಗಿವೆಯಾದರೂ ಗಮಕದ ಹಿನ್ನೆಲೆಯಿಂದ ರಚನೆಯಾದಂತಿಲ್ಲ. ಅದರಲ್ಲಿ ಗಮಕದ ಬಗ್ಗೆ ಯಾವುದೇ ಪ್ರಸ್ತಾಪವಿಲ್ಲ ! ದೇಸಿ ಛಂದಸ್ಸಿನ ತ್ರಿಪದಿಗಳನ್ನು ಜನಪದ ಗೀತೆಗಳ ರೂಪದಲ್ಲಿ ವಾಚಿಸಬಹುದೇ ವಿನಾ ಗಮಕದ ರೂಪದಿಂದಲ್ಲ. ಕೇವಲ ರಾಗಬದ್ಧವಾಗಿ ಹಾಡುವುದೇ ಗಮಕವಲ್ಲ. ಅದಕ್ಕೊಂದು ಕಥನರೂಪದ; ಕಾವ್ಯ, ನಾಟಕೀಯ ಭಾಗ, ಲಯಬದ್ಧತೆ, ಛಂದೋಬದ್ಧತೆ, ರಸವತ್ತಾದ ಸನ್ನಿವೇಶ ಅಗತ್ಯ.

ಕ್ರಿ.ಶ. ೧೦೬೮ರ ಒಂದು ಶಾಸನದಲ್ಲಿ ಮಹಾಮಂಡಳೇಶ್ವರ ಗಂಗರಸನನ್ನು ಕವಿ, ಗಮಕಿ, ವಾಗ್ಮಿಪ್ರಿಯಂ ಎಂದು ಕರೆದ ಉಲ್ಲೇಖವಿದೆ. ಪ್ರಾಯಃ ಕನ್ನಡದಲ್ಲಿ ಗಮಕಿ ಶಬ್ದದ ಪ್ರಯೋಗ ಶಾಸನದಲ್ಲಿ ಇದೇ ಮೊದನೆಯದು. ಇದೊಂದು ಬಿರುದಾವಳಿಯಾಗಿದ್ದು ರಾಜ, ಕಾವ್ಯಪ್ರಿಯನಾಗಿದ್ದನೆಂಬ ಅಂಶ ಸ್ಪಷ್ಟವಾಗುತ್ತದೆ. ಸ್ವತಃ ಕವಿಯೇ ಕಾವ್ಯವನ್ನು ವಾಚಿಸಿ, ಪುರಸ್ಕಾರ ಪಡೆದು ಅರಸನಿಗೆ ಈ ಅಭಿದಾನ ಲಭ್ಯವಾಗಿತ್ತೋ? ಅಥವಾ ಪ್ರತ್ಯೇಕ ಗಮಕಿಗಳೇ ಇದ್ದರೋ? ಎಂಬುದು ತಿಳಿಯದು. ಮಂಗರಾಜ (ಕ್ರಿ.ಶ. ಸುಮಾರು ೧೦೬೮) ತನ್ನ ನಿಘಂಟಿನಲ್ಲಿ ಲಿಪಿಯನೋದುವವ ವಾಚಕ ಎಂದಿದ್ದಾನೆ. ಆದರೆ ೧೨೫೫ ರ ಶಾಸನವೊಂದರಲ್ಲಿ

ಕವಿತ್ವೇ ಗಮಕಿತ್ವೇ ಚ ವಾದಿತ್ವೇ ಚ ವಾಗ್ಮಿ ತಾ ಜಯೋ
ತ್ರೈವಿದ್ಯಾ ಬಾಳಚಂದ್ರಸ್ಯ ಸದೃಕ್ಷೋ ನಾಸ್ತಿ ನಾಸ್ತಿ॥

ಎಂಬ ವರ್ಣನೆಯಿದೆ. **ತ್ರೈವಿದ್ಯಾ** ಎಂಬುದು ಬಾಳಚಂದ್ರನೆಂಬುವನಿಗೆ ದೊರೆತ ಬಿರುದಾಗಿರಬೇಕು. ಈತ ಪ್ರಖರ ಪಂಡಿತನಾಗಿದ್ದು ಕವಿ, ಗಮಕಿ, ವಾದಿ, ವಾಗ್ಮಿಯಾಗಿದ್ದನೆಂದು ತಿಳಿದುಬರುತ್ತದೆ. ಈ ಅವಧಿಯಲ್ಲಿ ಶಾಸನಗಳಲ್ಲಿ ದಾಖಲಿಸುವಷ್ಟರ ಮಟ್ಟಿಗೆ ಗಮಕ ಪ್ರಚಾರದಲ್ಲಿತ್ತೆಂಬುದನ್ನು ನೆನೆಯಬೇಕು. ದೇವಾಲಯಗಳಲ್ಲಿ ಪುರಾಣಕಾವ್ಯಗಳನ್ನು ವಾಚಿಸಲು ದತ್ತಿಯನ್ನು ಕೊಟ್ಟ ಉಲ್ಲೇಖ ಹಲವು ಶಾಸನಗಳಲ್ಲಿ ದಾಖಲಾಗಿವೆ. ತಾಳಗುಂದ ದೇವಾಲಯದ ಒಂದು ಶಾಸನದಲ್ಲಿ ಪುರಾಣ ಹೇಳುವವರಿಗೆ ದತ್ತಿಬಿಟ್ಟ ಚಿತ್ರಣವಿದೆ.

ತಿರುಮಲಮ್ಮ ಎಂಬ ಮಹಿಳೆ ಕವಯಿತ್ರಿಯಾಗುವುದರೊಂದಿಗೆ ಶ್ರೇಷ್ಠ ಗಮಕಿಯಾಗಿ ಸುವಿಖ್ಯಾತಳಾಗಿದ್ದಳೆಂದು ೧೫೩೩ ರ ಶಾಸನದಲ್ಲಿ ಹೇಳಿದೆ. ಅಚ್ಯುತರಾಯನ ಈ ಶಾಸನದಲ್ಲಿ ಕಾವ್ಯ, ಗಮಕದ ಬಗ್ಗೆ ಹಲವು ಅಂಶಗಳು ಸ್ಪಷ್ಟವಾಗಿ ನಮೂದಿಸಿದೆ. ಋಷಿ, ಮುನಿಗಳು ಪುರಾಣವನ್ನು ಶ್ರೋತೃವರ್ಗಕ್ಕೆ ಮುಟ್ಟಿಸುವಾಗ ಕಾವ್ಯಭಾಗಕ್ಕೆ ರಾಗಸಂಯೋಜನೆ ಮಾಡಿ ವಾಚಿಸಿದ್ದನ್ನು ಚರಿತ್ರೆಯೇ ಸಾರಿ ಹೇಳಿದೆ.

ಕಾವ್ಯಗಳಲ್ಲಿ ಗಮಕವನ್ನು ಕುರಿತಂತೆ ಸಮೃದ್ಧವಾದ ಉಲ್ಲೇಖಗಳು ದೊರೆಯುತ್ತವೆ. ಕನ್ನಡದ ಪ್ರಾಚೀನ ಗ್ರಂಥವಾದ ಕವಿರಾಜಮಾರ್ಗದಲ್ಲಿ (ಕ್ರಿ.ಶ. ೮೧೫-೭೭) ಕಾವ್ಯದಲ್ಲಿ ರಸೋತ್ಪತ್ತಿಯನ್ನುಂಟುಮಾಡುವುದೇ ಗಮಕ ಲಕ್ಷಣವೆಂದು ಹೇಳಿದೆ. ಇದೊಂದು ಆಲಂಕಾರಿಕ ಗ್ರಂಥವಾಗಿದ್ದು ವಿವಿಧ ರಸಗಳ ನಿಷ್ಪನ್ನವನ್ನು ಹೇಳುತ್ತಾ ಕಾವ್ಯ ಮತ್ತು ಗಮಕದ ಅನನ್ಯತೆಯನ್ನು ಸಾರಿದೆ.

ವೀರರಸಂ ಸ್ಫುಟೋಕ್ತಿಯಿನುದಾರತಮಂ ಕರುಣಾರಸಂ ಮೃದೂ
ಚ್ಚಾರಣೆಯಿಂದ ಮದ್ಭುತರಸಂ ನಿಬಿಡೋಕ್ತಿಗಳಿಂದ ಮಲ್ತೆ ಶೃಂ
ಗಾರರಸಂ ಸಮಂತು ಸುಕುಮಾರತರೋಕ್ತಿಗಳಿಂದಂ ಪ್ರಸನ್ನಗಂ
ಭೀರತರೋಕ್ತಿಯಿಂ ಪ್ರಕಟಮಕ್ಕೆ ರಸಂ ಸತತಂ ಪ್ರಶಾಂತದಿಂ

ಎಂಬುದು ಗಮಕದ ಧ್ಯೇಯ ಹಾಗೂ ಲಕ್ಷ್ಯದ ಪ್ರಾಚೀನತೆಯನ್ನು ತಿಳಿಸಿಕೊಡುತ್ತದೆ.

ಆದಿಮಹಾಕವಿ ಪಂಪನ ವಿಕ್ರಮಾರ್ಜುನ ವಿಜಯ (ಕ್ರಿ.ಶ. ೯೪೧) ದಲ್ಲಿ ಗಮಕಿಗೆ ನೀಡುತ್ತಿದ್ದ ಸ್ಥಾನ-ಮಾನವನ್ನು ಕುರಿತು ಹೇಳಲಾಗಿದೆ. ಕವಿ, ಗಮಕಿ, ವಾದಿ, ವಾಗ್ಮಿ ಇವರುಗಳಿಗೆ ಅರಿಕೇಸರಿಯ ಆಸ್ಥಾನದಲ್ಲಿ ವಿಶೇಷ ಮಾನ್ಯತೆಯಿತ್ತು ಎಂದು ಹೇಳಲಾಗಿದೆ.

ಕವಿ ಗಮಕಿ ವಾದಿ ವಾಗ್ಮಿ
ಪ್ರವರರ ಪಂಡಿತರ ನೆಗಟ್ದ ಮಾತಱಿವರಸ
ಬ್ಬವದರೊಡನೆಂತೊಸೆದ
ನ್ನವಾಸದೋಲಗದೊಳಿರ್ಪನಾಗಳ್ ಹರಿಗಂ

ಎಂಬ ಕಾವ್ಯಭಾಗ ಅರಿಕೇಸರಿಯ ಆಸ್ಥಾನದಲ್ಲಿ ಗಮಕಿ ವಿರಾಜಿಸುತ್ತಿದ್ದುದಕ್ಕೆ ಆಧಾರವಾಗಿದೆ. ಪಂಪನ ತಮ್ಮನಾದ ಜಿನವಲ್ಲಭನು ಶ್ರೇಷ್ಠ ಗಮಕಿಯಾಗಿದ್ದನೆಂಬ ಸೂಚನೆಯಿದೆ. ಆದಿಪುರಾಣದಲ್ಲಿ ಕೂಡ ಗಮಕದ ಪ್ರಸ್ತಾಪ ಬಂದಿದೆ. ಪಂಪನ ಎರಡೂ ಮಹಾಕಾವ್ಯಗಳು ಚಂಪೂ ಶೈಲಿಯಲ್ಲಿದ್ದು ಗಮಕವಾಚನಕ್ಕೆ ಒಳಗಾಗಿದ್ದವೆಂದು ತಿಳಿದುಬರುತ್ತದೆ. ಗಮಕದ ಇತಿಹಾಸ ಕನ್ನಡ ಸಾಹಿತ್ಯ ಚರಿತ್ರೆಯೊಂದಿಗೇ ಬೆಸೆದುಕೊಂಡಿದ್ದು ಶಾಸನ, ಕವಿರಾಜಮಾರ್ಗದ ಕಾಲಕ್ಕೇ ಗುರುತಿಸಿಕೊಂಡರೂ ಪಂಪನ ಕಾಲಕ್ಕೆ ಸ್ಪಷ್ಟವಾಗಿ ದಾಖಲಿಸಬಹುದಾಗಿದೆ. ಪಂಪನ ಎರಡೂ ಕಾವ್ಯಗಳು ಗಮಕಕ್ಕೆ ಅಳವಟ್ಟಿವೆ. ಇಂದಿಗೂ ವಾಚಿಸುವ ಕ್ರಮವಿದೆ.

ಪೊನ್ನ ಮಹಾಕವಿ (ಕ್ರಿ.ಶ. ೯೫೦) ತನ್ನ ಶಾಂತಿಪುರಾಣದಲ್ಲಿ ಆತ್ಮಪ್ರಶಂಸೆಯ ಮಾತುಗಳನ್ನು ಬರೆಯುತ್ತಾ ತಾನು ಗಮಕಿಯೂ ಆಗದ್ದನೆಂದು ಹೆಮ್ಮೆಯಿಂದ ಹೇಳಿಕೊಂಡಿದ್ದಾನೆ.

ಇದರ್ಗೆ ಬರೆ ಪೊನ್ನಿಗಂ ಕಿಡಿ
ಸದಿರಂ ಕವಿ ಗಮಕಿ ವಾದಿ ವಾಗ್ಮಿಗಳ ಕವಿ
ತ್ವದ ಗಮಕತ್ವದ ವಾದಿ
ತ್ವದ ವಾಗ್ಮಿತ್ವದ ಪೊಡುರ್ಪುಮಂ ದರ್ಪಮುಮಂ

ಇದು ಪೊನ್ನನ ಆತ್ಮಪ್ರತ್ಯಯದ ಮಾತಾದರೂ ಗಮಕ ಪಾಂಡಿತ್ಯದ ಬಗ್ಗೆ ಮಾಹಿತಿ ಲಭಿಸುತ್ತದೆ. ಕೆಲವೊಮ್ಮೆ ಕವಿಯೇ ಗಮಕಿಯಾಗಿಯೂ ಮಾನ್ಯವಾಗಿದ್ದುದಕ್ಕೆ ಪೊನ್ನ ಸಾಕ್ಷಿಯೆನ್ನಿಸಿದ್ದಾನೆ.

ದುರ್ಗಸಿಂಹನ 'ಪಂಚತಂತ್ರ', ರುದ್ರಭಟ್ಟನ 'ಜಗನ್ನಾಥವಿಜಯ', ಹರಿಹರನ 'ನಂಬಿಯಣ್ಣನ ರಗಳೆ', ಕನಕದಾಸರ 'ಮೋಹನತರಂಗಿಣಿ', ಕುಮಾರವ್ಯಾಸನ 'ಕರ್ಣಾಟಭಾರತ ಕಥಾಮಂಜರಿ', ಲಕ್ಷ್ಮೀಶನ 'ಜೈಮಿನಿ ಭಾರತ', ರಾಘವಾಂಕನ 'ಹರಿಶ್ಚಂದ್ರ ಕಾವ್ಯ', ನಿಜಗುಣಶಿವಯೋಗಿಯ 'ವಿವೇಕ ಚಿಂತಾಮಣಿ', ದೇವರಾಜನ 'ಸೊಬಗಿನ ಸೋನೆ', ಚಾಮರಸನ 'ಪ್ರಭುಲಿಂಗಲೀಲೆ', ಹರಿಹರನ 'ಗಿರಿಜಾಕಲ್ಯಾಣ', ರತ್ನಾಕರವರ್ಣಿಯ 'ಭರತೇಶವೈಭವ', ಶಾಂತಿನಾಥನ 'ಸುಕುಮಾರಚರಿತೆ', ಗೋವಿಂದವೈದ್ಯನ 'ಕಂಠೀರವ ನರಸರಾಜ ವಿಜಯ', ಗುಣವರ್ಮನ 'ಪುಷ್ಪದಂತಪುರಾಣ' ಮೊದಲಾದ ಕಾವ್ಯಗಳಲ್ಲಿ ಗಮಕದ ಪ್ರಸ್ತಾಪವಿದೆ. ಗಮಕಕ್ಕೆ ನೀಡಿದ ಮಾನ್ಯತೆ, ಅದರ ಉದ್ದೇಶ ಹಾಗೂ ಸಾಧನಾ ಪಾಂಡಿತ್ಯವನ್ನು ಕುರಿತು ವರ್ಣಿಸಲಾಗಿದೆ. ಇವು ಗಮಕದ ಲಕ್ಷ್ಯಗ್ರಂಥಗಳೂ ಆಗಿವೆ !

ಗಮಕದ ಹಲವು ಕಾವ್ಯಗಳು ಗಮಕ ವಾಚನದ ಬಗ್ಗೆ ಹೇಳಿವೆ. ಅಂತೆಯೇ ಉತ್ತಮ ಪಾಠಕನ ಗುಣಲಕ್ಷಣಗಳನ್ನು, ಗಮಕಿಗಳ ಮಾರ್ಗಸೂಚಿಯನ್ನು ಮನಮುಟ್ಟುವಂತೆ ಹೇಳಿರುವುದನ್ನು ಕಾಣಬಹುದು. ಹರಿಹರನಂಥ ಕವಿ

ಬಾಲೆಯರೊಳ್ ಮಹಾಕವಿಗಳೊಳ್ ಗಮಕಿತ್ವದ
ವಾಗ್ಮಿವೃಂದದೊಳ್ ಲೀಲೆಮಿಗಲ್ಕೆ ಪಾಡಿಸುತ
ವಾಡಿಸುತಂ...........

ಎಂದು ಗೇಯಗೋಷ್ಠಿಯ ಬಗ್ಗೆ ಹೇಳಿದ್ದಾನೆ. ಗಮಕದ ಪಾರಿಭಾಷಿಕ ವಿವರಣೆಯನ್ನು ನೀಡಿದ ಹರಿಹರ, ಗಿರಿಜಾಕಲ್ಯಾಣದಲ್ಲಿ ಗದ್ಯ ಪದ್ಯ ಕಾವ್ಯ ಕಳಾಪ್ರೌಢಿಮೆ **ರೂಢಿವಡೆಯೆ ಮೆರೆದಿರ್ಪ ಸರಸಕವಿಗಳ ಸಂದಣಿಯೊಳ್. . . . . . .ಕೌತುಕರಸದೊಳ್ ಕರುವಿಟ್ಟಂತಿರಿಸುವ ಸಾಮರ್ಥ್ಯಮನೊಳಕೊಂಡು ಕುಳ್ಳಿರ್ಪ ಗಮಕಿ ತಂಡದೊಳ್** ಎಂದು ಸಹೃದಯ ರಸಧಾರೆಯ ಸೊಬಗನ್ನು ಹೇಳಿದ್ದಾನೆ.

ಚೂಡಾರತ್ನ ಎಂಬ ಅಂಕಿತದ ಪ್ರಾಚೀನ ಕವಿಯೊಬ್ಬ ಗಮಕಿಯ ಲಕ್ಷಣದ ಬಗ್ಗೆ ಹೇಳಿದ್ದಾನೆ.

ಉಕ್ಕದೆ ಬಿಕ್ಕದೆ ಲಿಪಿಯಂ
ನಕ್ಕದೆ ತಡವರಿಸದೆಡಹದುಡುಹದೆ ಪದವಿ
ಟ್ಟಕ್ಕರ ಬಣಿತೆಯೊಳೋದು
ದಕ್ಕರಿಗರ ಮಾರ್ಗವಲ್ತೆ ಚೂಡಾರತ್ನ

ಈ ಮಾತಿಗೆ ಪುಷ್ಟಿಕೊಡುವಂತೆ ನೀತಿಸಾರದಲ್ಲಿ ಗಮಕವನ್ನು ಹಾಡುವುದರ ಬಗ್ಗೆ ಹೇಳಿದೆ.

ಎಡರದೆ ತಡೆಯದೆ ತಲೆಯಂ
ಕೊಡಹದೆ ಕಡುವಹಿಲಜಾಡ್ಯವೆನಿಸದೆ ರಸಮಂ
ಕೆಡಸದೆ ಸರ್ವರ ಚಿತ್ತ
ಕ್ಕೊಡಂಬಡಲೋದುವನೆ ಗಮಕಿ ಕನ್ನಡ ಜಾಣಾ

ಎಂದು ಪಠಣದ ಉತ್ಕೃಷ್ಟತೆಯನ್ನು ಹೇಳಲಾಗಿದೆ. ಷಡಕ್ಷರಕವಿಯು "ಕವಿವಿದ್ವಾಂಸರ ಕಿವಿಗಳಲ್ಲಿ ನವರಸಗಳು ಸೂಸುವಂತೆ ಮಾಡಿ, ತನುಮನಗಳನ್ನು ತನ್ಮಯಗೊಳಿಸಿ, ಆನಂದ ಬಾಷ್ಪ ಉಕ್ಕುವಂತೆ ಕೃತಿಯನ್ನು ವಾಚಿಸಬೇಕು" ಎಂದು ಸಲಹೆ ಮಾಡಿದ್ದಾನೆ.

ಸೂಕ್ಷ್ಮಪದಗತಿ, ಸರಸದನಿ, ವರ್ಣನೆಯ ಸೊಬಗು, ಸುಶ್ರಾವ್ಯಗಾನ, ರಂಜನೀಯ ಶ್ರುತಿ, ವಿಶೇಷ ಅರ್ಥದಿಂದೊಡಗೂಡಿ ನಿತ್ಯನೂತನವಾದ ಪ್ರೌಢ ಸುಬಂಧದಂತೆ ಹಾಡಬೇಕೆಂಬುದು ಲಕ್ಷ್ಮೀಶ ಕವಿಯ ಅಭಿಮತ. ಗಮಕದ ಲಕ್ಷಣ ರೂಪವನ್ನೇ ಹೇಳಿದ್ದಾನೆ. ಅಲ್ಲದೆ ಅದೇ ಬಗೆಯ ಕಾವ್ಯವನ್ನೂ ರಚಿಸಿ ನಾದಲೋಲ ಎನ್ನಿಸಿಕೊಂಡಿದ್ದಾನೆ. ಇದರಿಂದ ಜೈಮಿನಿಭಾರತ ಗಮಕದ ಲಕ್ಷ್ಯ–ಲಕ್ಷಣ ಕಾವ್ಯ ಎನ್ನಿಸಿದೆ.

ಸೋಮರಾಜನ 'ಉದ್ಭಟಕಾವ್ಯ'ದಲ್ಲಿ ಗಮಕ, ಅಮೃತಧಾರೆಯಾಗಬೇಕೆಂಬ ಆಶಯವಿದೆ. ಬಲ್ಲರ ಕಿವಿಗಳ್ಗೆ ಮಾಣಿಕದ ಮಂಜರಿಯಾಗೆ ಪಳಂಚದೋದುವಕ್ಕರಿಗರ ಜಿಹ್ವೆಗೆ ಇಂಪಮರ್ದನೂತ್ನತ ರಾಮಾಮೃತಧಾರೆ ಎಂದು ತನ್ನ ಅಭಿಮತವನ್ನು ಸೂಚಿಸಿದ್ದಾನೆ. ಇದೇ ಬಗೆಯಲ್ಲಿ ಗೋವಿಂದ ವೈದ್ಯನ 'ಕಂಠೀರವನರಸರಾಜ ವಿಜಯ'ದಲ್ಲಿ ಗಮಕಿಗಳು ಭಾರತ, ರಾಮಾಯಣದ ಸಂಗೀತಸಾರದೊಳಗೆ ನಲಿದು ಓದಿ ವೈಭವದಿಂದ ಸಭೆಗೆ ಮುದನೀಡಿ ರಂಜಿಸಿದರೆಂದು ಹೇಳಿದೆ.

ಗಮಕದ ಕಲೆ ವಿಸ್ತೃತವಾಕ್ಯವನ್ನು ಹೊಂದಿದೆ. ವೃತ್ತ, ಕಂದ, ವಚನ, ಕೀರ್ತನೆ, ಷಟ್ಪದಿ, ಸಾಂಗತ್ಯ, ತ್ರಿಪದಿ, ದ್ವಿಪದಿಗಳೊಂದಿಗೆ ಆಧುನಿಕ ಕಾವ್ಯಗಳನ್ನು ಗಮಕ ರೂಪದಲ್ಲಿ ಹಾಡಲಾಗುತ್ತದೆ. ಆದರೆ ಷಟ್ಪದಿ ಮತ್ತು ಸಾಂಗತ್ಯದ ಕಾವ್ಯಗಳು ಗಮಕದಿಂದ ಜನಪ್ರಿಯತೆಯನ್ನು ಸಾಧಿಸಿವೆ. ಅವುಗಳ ಛಂದೋಬಂಧ ಗಮಕಗತಿಗೆ ಹೊಂದಿಕೆಯಾಗಿದೆ. ಇತರ ಪ್ರಕಾರಗಳು ಗಮಕಿಗಳನ್ನು ಅಷ್ಟಾಗಿ ಆಕರ್ಷಿಸಿದಂತೆ ತೋರುವುದಿಲ್ಲ. ಇದರಲ್ಲಿ ಕುಮಾರವ್ಯಾಸಭಾರತ, ಜೈಮಿನಿ ಭಾರತ, ಹರಿಶ್ಚಂದ್ರಕಾವ್ಯ, ಗಿರಿಜಾ ಕಲ್ಯಾಣ ಆಧುನಿಕ ಕಾವ್ಯಗಳಲ್ಲಿ ಶ್ರೀರಾಮಾಯಣದರ್ಶನಂ ಹಾಗೂ ಶ್ರೀ ಹರಿಚರಿತೆ ಹೆಚ್ಚು ಜನಪ್ರಿಯತೆಯನ್ನು ಸಾಧಿಸಿವೆ. ಯಾವುದೇ ಬಗೆಯ ಛಂದೋಶೈಲಿಯ ಕಾವ್ಯವನ್ನು ಅತ್ಯಂತ ಸಮರ್ಥವಾಗಿ ವಾಚಿಸುವ ನಿಷ್ಣಾತ ಗಮಕಿಗಳಿದ್ದಾರೆ ಎಂಬುದು ಅಷ್ಟೇ ಮಹತ್ವದ ಸಂಗತಿ.

ಕನ್ನಡ ರಂಗಭೂಮಿ ಗಮಕದ ಪ್ರಭಾವದಿಂದ ತನ್ನ ಹಿರಿಮೆ, ವರ್ಚಸ್ಸನ್ನು ಹೆಚ್ಚಿಸಿಕೊಂಡಿದ್ದನ್ನು ಮರೆಯುವಂತಿಲ್ಲ. ಇಲ್ಲಿಯ ಲಯಗಾರಿಕೆ ಸ್ವಚ್ಛಂದ ರೂಪವನ್ನು ಪಡೆದಿರುವುದು ಗಮಕಕ್ಕೆ ಆನುಷಂಗಿಕವಾಗಿ ಪ್ರವಹಿಸಿರುವುದನ್ನು ಮನಗಾಣಬೇಕು. ರಂಗಭೂಮಿಯಲ್ಲಿ ರಸಭಾವ ಸನ್ನಿವೇಶಗಳಿಗನುಗುಣವಾಗಿ ವಾಚಿಸುವುದೇ ಗಮಕದ ಪ್ರತಿರೂಪವಾಗಿ ಮಿಳಿತಗೊಂಡಿದೆ. ಗಮಕದಿಂದಲೇ ಗ್ರಾಮೀಣ ಪ್ರದೇಶದಲ್ಲಿ ಮಹಾಕಾವ್ಯಗಳು ಚಾಲ್ತಿಗೆ ಬಂದು ಜನಪ್ರಿಯವಾದವು. ಗಮಕ ಶ್ರವ್ಯರೂಪದಲ್ಲೇ ಹೆಚ್ಚು ಪ್ರಚಾರದಲ್ಲಿದೆ. ಅಪರೂಪವೆಂಬಂತೆ ದೃಶ್ಯ ಮಾದರಿಯನ್ನು ಕಾಣಬಹುದು. ನಾಟಕೀಯ ಸನ್ನಿವೇಶವನ್ನು ಆಯ್ದು ಪೂರಕ ವೇಷಭೂಷಣಗಳೊಂದಿಗೆ ಸಾದರ ಪಡಿಸುವ ದೃಶ್ಯ

ಗಮಕ ರೂಪಕವಾಗಿ ಕಂಡುಬರುತ್ತದೆ. ಕಾವ್ಯವನ್ನು ಸುಶ್ರಾವ್ಯ ವಾಚನದ ನೆಲೆಯಲ್ಲೇ ಗಮಕ ವಿವೇಚಿಸುವುದರಿಂದ ಅದಕ್ಕೆ ಕಾವ್ಯಾಭಿಲಾಷೆಯ ಮಹತ್ವವಿದೆ.

ಸ್ವರೂಪ

ಸಾಹಿತ್ಯ ಮತ್ತು ಸಂಗೀತದ ಪರಿಕಲ್ಪನೆ ಸಾಪೇಕ್ಷವಾದುದು. ಇವೆರಡೂ ಸಾಂಸ್ಕೃತಿಕ ವಿಕಾಸದಲ್ಲಿ ಅರಳಿದ ರಸಾನಂದ ಕಲಾಮಾಧ್ಯಮಗಳು. ಕವಿಕಲ್ಪನೆ ಮತ್ತು ಅನುಭವದಿಂದ ಕೂಡಿದ ಕಾವ್ಯ, ಕೇವಲ ಜ್ಞಾನಾರ್ಜನೆಯ ಸಾಧನವಾಗಿ ಉಳಿಯಲಿಲ್ಲ ! ಅದು ಕರ್ಣರಸಾಯನವಾಗ ಬಯಸಿತು ! ಸಂಗೀತವನ್ನು ತನ್ನ ತೆಕ್ಕೆಗೆ ತೆಗೆದುಕೊಂಡು ಸಹೃದಯರಿಗೆ ದಿವ್ಯಪ್ರಭೆಯಾಗಿ ಸೂಸಿತು. ಸಾಹಿತ್ಯ ಸಂಗೀತ ಸಮ್ಮಿಲನಗೊಂಡು ಸಮನ್ವಯ ಸಾಧಿಸಿದಾಗ ಗಮಕ ಸೃಷ್ಟಿಯಾದಂತೆ ತೋರುತ್ತದೆ. ಕಾವ್ಯವನ್ನು ಜನರಿಗೆ ಮುಟ್ಟಿಸುವಲ್ಲಿ ಗಮಕ ಪ್ರಭಾವಶಾಲಿ ಮಾಧ್ಯಮ. ಉತ್ಕೃಷ್ಟ ಕಾವ್ಯವನ್ನು ರಚಿಸಿದ ಕವಿ ಅದನ್ನು ಮಂಡಿಸುವ ಸಂದರ್ಭದಲ್ಲಿ ಆಕರ್ಷಣೆಗಾಗಿ ಸಂಗೀತವನ್ನು ಆಶ್ರಯಿಸುವುದು ಅನಿವಾರ್ಯವಾಯಿತು.

ಕಾವ್ಯಗಳ ವಿವಿಧ ಛಂದೋಶೈಲಿಯ ಜಾಡನ್ನು ಹಿಡಿದು, ಕಥಾನಕ ರೀತಿಯನ್ನಾಧರಿಸಿ ರಮ್ಯವಾಗಿ, ರಸವತ್ತಾಗಿ ವಾಚಿಸುವುದೇ ಗಮಕ. ಕಾವ್ಯದ ಅರ್ಥ, ಭಾವಗಳನ್ನು ಸಹೃದಯರಿಗೆ ಮನದಟ್ಟು ಮಾಡುವ ಕಲೆ. ಕಾವ್ಯದ ರಸಘಟ್ಟಗಳನ್ನು ಅರಿತು ಅದಕ್ಕೆ ಸೂಕ್ತವಾದ ರಾಗವನ್ನು ಸಂಯೋಜಿಸಿ ಹಾಡಿದಾಗ ಮಾತ್ರ ಗಮಕ ಯಶಸ್ವಿಯಾಗುತ್ತದೆ. ಸಾಹಿತ್ಯ-ಸಂಗೀತವನ್ನು ಬೆಸೆಯುವ ಕೆಲಸವನ್ನು ಗಮಕ ಮಾಡುತ್ತದೆ. ಸಂಗೀತದ ನೆರವಿರದೆ ಗಮಕ ಸಾಧ್ಯವಿಲ್ಲ. ಆದರೆ ಇಲ್ಲಿ ಸಾಹಿತ್ಯ ಪ್ರಭಾವವೇ ಹೊರತು ಸಂಗೀತವಲ್ಲ ! ಸಾಹಿತ್ಯದ ಸೌಂದರ್ಯವನ್ನು ಬೆಳಗಿಸಲು ಪೂರಕವಾಗುವಷ್ಟು ಸಂಗೀತ ಅಗತ್ಯ. ಗಮಕದಿಂದ ಕಾವ್ಯಕ್ಕೆ ನಾದರೂಪ ಬರುತ್ತದೆ. ಸಾಹಿತ್ಯದ ಬಹುಮುಖ್ಯ ಭಾಗವು ಸಹೃದಯನ ಮನವನ್ನು ಮುಟ್ಟತ್ತದೆ. ಅದರಲ್ಲಿ ಸಂಗೀತದ ಸವಿದನಿ, ಸಾಹಿತ್ಯದ ಪದ ಸೌರಭ ಸಮನ್ವಯಗೊಂಡಾಗ ರಸಾನಂದ ಸೂಸುತ್ತದೆ. ಕಾವ್ಯದ ಉದ್ದೇಶ ಸಾರ್ಥಕವಾಗುತ್ತದೆ.

ಕನ್ನಡ ಸಂಸ್ಕೃತಿಯಲ್ಲಿ ಗಮಕ ಮತ್ತು ಸಾಹಿತ್ಯದ ನಂಟು ಅನನ್ಯವಾದುದು. ಅತ್ಯಂತ ಪ್ರಾಚೀನವಾದುದು. ಕನ್ನಡ ಸಾಹಿತ್ಯ ಹಾಗೂ ದಕ್ಷಿಣಾದಿ ಸಂಗೀತದ ಪರಿಪಾಕದಲ್ಲಿ ಗಮಕವನ್ನು ಪರಿಭಾವಿಸಿದಾಗ ಅದು ಕನ್ನಡ ಸಂಸ್ಕೃತಿಯ ಪ್ರಾತಿನಿಧಿಕ ರೂಪವಾಗಿ ಮೈವೆತ್ತಿರುವುದು ಅರಿವಾಗುತ್ತದೆ. ಇದನ್ನು ಸೈದ್ಧಾಂತಿಕವಾಗಿ ದೃಢಪಡಿಸಿ ಸ್ಪಷ್ಟೀಕರಿಸುವುದು ಸುಲಭವಲ್ಲವಾದರೂ ತಾತ್ತ್ವಿಕವಾಗಿ ಬೆಸೆದುಕೊಂಡಿರುವುದನ್ನು ಅತ್ಯಂತ ಗಂಭೀರವಾಗಿ ಗಮನಿಸಬೇಕು. ಕನ್ನಡ ಸಂಸ್ಕೃತಿಯ ನಿರಂತರ ಪ್ರಕ್ರಿಯೆಯಲ್ಲಿ ಕಾವ್ಯ-ಗಮಕಗಳೆರಡೂ

ಅವಿಭಾಜ್ಯಗೊಂಡಿರುವುದು ವಾಸ್ತವವೆನ್ನಿಸುತ್ತದೆ. ಗಮಕವು, ಸಾಹಿತ್ಯಕ್ಕೆ ಬರೀ ಕಲಾಮಾಧ್ಯಮವಾಗಲಿಲ್ಲ. ಅದು ಜನಪ್ರಿಯತೆಯ ಪೋಷಕವೂ ಆಗಿದೆ.

ಗಮಕದ ಪ್ರಾಚೀನತೆಯನ್ನು ವಾಲ್ಮೀಕಿಯ ರಾಮಾಯಣದಲ್ಲೇ ಗುರುತಿಸಿ. ಕುಶ–ಲವರು ರಾಮಾಯಣವನ್ನು ಗಮಕರೂಪದಲ್ಲಿ ಹಾಡಿದರೆಂದೂ, ಇವರೇ ಆದಿಗಮಕಿಗಳೆಂದೂ ಹೇಳಲಾಗಿದೆ. ಆದರೂ ಇದಕ್ಕೆ ಆಧಾರವಿಲ್ಲ ! ರಾಮಾಯಣವನ್ನು ಕುಶ–ಲವರು ಗಮಕದ ಸ್ವರೂಪವನ್ನು ಅರಿತು ವಾಚಿಸಿದರೆಂದು ಹೇಳಲಾಗದು. ಅಂದಿನ ದಿನಗಳಲ್ಲಿ ಗಮಕಕಲೆ ಅಸ್ತಿತ್ವದಲ್ಲಿದ್ದುದನ್ನು ಸಾಕ್ಷೀಕರಿಸುವಂತಿಲ್ಲ. ಒಂದೊಮ್ಮೆ ಇದ್ದರೂ ಸಹ ಅದು ಸಂಸ್ಕೃದ್ದಾಗಿರುತ್ತದೆ. ಆದರೆ ದಕ್ಷಿಣ ಭಾರತದಲ್ಲಿ ಗಮಕದ ವಿಚಾರ ಸ್ಪಷ್ಟಗೊಂಡಿದೆ. ದಕ್ಷಿಣಾದಿ ಸಂಗೀತ ಹಾಗೂ ಗಮಕಕ್ಕೆ ಅವಿನಾಭಾವ ಸಂಬಂಧವಿರುವುದು ಗೋಚರವಾಗುತ್ತದೆ. ಗಮಕದ ಭದ್ರನೆಲೆ ಕರ್ನಾಟಕ, ಕನ್ನಡ ಕಾವ್ಯವೇ ಅದಕ್ಕೆ ಆಧಾರವಾಗಿರುವುದು ಮಹತ್ವದ ಸಂಗತಿ.

ಕನ್ನಡದ ಪ್ರಾಚೀನ ಶಾಸನ, ಕಾವ್ಯಗಳಿಂದ ಮೊದಲ್ಗೊಂಡು ಆಧುನಿಕ ಕಾವ್ಯಗಳವರೆಗೆ ಗಮಕ ಮತ್ತು ಗಮಕಿಯ ಬಗ್ಗೆ ಖಚಿತವಾದ ಸಂಗತಿಗಳು ಲಭ್ಯವಿದೆ. ಇಡೀ ಕಾವ್ಯಗಳನ್ನು ಕಂಠಸ್ಥವಾಗಿ ವಾಚಿಸುವ ಪರಿಣತಿ ಪಡೆದವರನ್ನು ಗುರುತಿಸಲಾಗಿದೆ. ಕೆಲವೊಮ್ಮೆ ಕವಿಗಳೇ ಗಮಕಿಗಳಾಗಿದ್ದು ಮಾನ್ಯತೆ ಪಡೆದರಂತೆ, ಗಮಕಿಗಳಿಗೂ ರಾಜಾಸ್ಥಾನದಲ್ಲಿ ಪ್ರಮುಖ ಸ್ಥಾನವಿದ್ದುದು ಆಧಾರಸಹಿತವಾಗಿ ತಿಳಿದುಬಂದಿದೆ.

ಬೋಧಕ ಹಾಗೂ ಸಹಜಸ್ವರ ಎಂಬ ಅರ್ಥವನ್ನು ಹೊಂದಿರುವ ಗಮಕ, ಸಾಹಿತ್ಯವನ್ನು ವಿಶೇಷವಾಗಿ ಕಾವ್ಯವನ್ನು ಬೋಧಿಸುವ ಸಾಧನವಾಗಿದೆ. ನಿರಕ್ಷರಸ್ಥ ಶ್ರೀಸಾಮಾನ್ಯರೂ ಗಮಕರೂಪದಲ್ಲಿ ಕಾವ್ಯವನ್ನು ಕಂಠಸ್ಥವಾಗಿ ಕಲಿತ ನಿದರ್ಶನಗಳಿವೆ. ಗ್ರಾಮೀಣ ಪ್ರದೇಶದಲ್ಲಿ ಮನರಂಜನೆ ಮತ್ತು ಭಕ್ತಿಯ ಮಾಧ್ಯಮವಾಗಿ ಕಾವ್ಯ ಸ್ವೀಕೃತವಾಗಿ ಜನಪ್ರಿಯತೆಯನ್ನು ಸಾಧಿಸಿದ್ದು ಗಮಕದಿಂದಲೇ ಎಂಬುದನ್ನು ಮರೆಯುವಂತಿಲ್ಲ. ಪಠನಕಲೆಯಾಗಿ, ಕಥಾಕಾಲಕ್ಷೇಪವಾಗಿ ಕಾವ್ಯ ಬಳಕೆಗೊಂಡಿದ್ದು ಗಮಕ ರೂಪದಿಂದಲೇ ಎಂದು ಹೇಳಬೇಕು. ಯಕ್ಷಗಾನ, ಭಾಗವತ ಹಾಗೂ ಗಮಕಕ್ಕೂ ಸಾಮ್ಯವಿದೆ. ಈ ಎಲ್ಲ ಅಂಶಗಳು ಗಮಕದ ಜನಪ್ರಿಯತೆ, ವಿಸ್ತಾರ ಹಾಗೂ ಕನ್ನಡ ಸಂಸ್ಕೃತಿಯೊಳಗಿನ ಅನನ್ಯ ಬಂಧವನ್ನು ಸೂಚಿಸುತ್ತದೆ.

ಗಮಕಕ್ಕೆ ವ್ಯಾಖ್ಯಾನ ಬೇಕೆ? ಬೇಡವೆ? ಅಥವಾ ಗಮಕಿ ಮತ್ತು ವ್ಯಾಖ್ಯಾನಕಾರ ಒಬ್ಬನೇ ಇರಬೇಕೆ? ಅಥವಾ ಬೇರೆ ಬೇರೆ ಇದ್ದರೆ ಒಳಿತೆ? ಎಂಬ ವಿಷಯದಲ್ಲಿ ಭಿನ್ನಾಭಿಪ್ರಾಯವಿದೆ. ಇದು ಶ್ರೋತೃವರ್ಗವನ್ನು, ಗಮಕಿಯನ್ನು ಆಧರಿಸಿರುತ್ತದೆ. ಸ್ವರಭಾರ ಯುಕ್ತವಾಗಿ, ರಸಭಾವದೊಂದಿಗೆ ಅರ್ಥಪೂರ್ಣವಾಗಿ ವಾಚಿಸಿದಾಗ ವ್ಯಾಖ್ಯಾನದ

ಅಗತ್ಯವಿರದು. ಅರ್ಥಸಂವಹನದ ಕೊರತೆ ಹಾಗೂ ಕ್ಲಿಷ್ಟತೆಯಿಂದ ಉಂಟಾಗಬಹುದಾದ ಲೋಪವನ್ನು ತುಂಬಲು ವ್ಯಾಖ್ಯಾನಬೇಕು. ಜನಪ್ರಿಯ ಕಥನ ರೂಪದ ಕಾವ್ಯವಾದಾಗ ವ್ಯಾಖ್ಯಾನದ ಶ್ರಮ ಕಡಿಮೆ. ಕಾವ್ಯ ಹಾಗೂ ವಾಚನವೇ ಅದನ್ನು ನಿರ್ವಹಿಸುತ್ತದೆ. ಆದರೆ ಗಮಕವಾಚನ ಹಾಗೂ ವ್ಯಾಖ್ಯಾನದ ನಂಟು ಅನನ್ಯವಾದುದು. ಗಮಕಿಯೇ ವ್ಯಾಖ್ಯಾನಕಾರನಾಗಿದ್ದಾಗ ರಸಘಟ್ಟಗಳನ್ನು, ಧ್ವನಿಪೂರ್ಣ ಭಾಗಗಳನ್ನು ವಿಸ್ತೃತವಾಗಿ ಹೇಳಲು ಸಾಧ್ಯ. ಆದರೆ ಶ್ರಮ ಹಾಗೂ ಮುಂದಿನ ಸಿದ್ಧತೆಗೆ ಕಾಲಾವಕಾಶದ ದೃಷ್ಟಿಯಿಂದ ಬೇರೆ ಇರುವುದು ಉತ್ತಮ. ಮಿಗಿಲಾಗಿ ವಾಚನ–ವ್ಯಾಖ್ಯಾನದ ಕಲೆಗಳೆರಡೂ ಬೇರೆಯಾದವು. ಅನೇಕ ಸಂದರ್ಭಗಳಲ್ಲಿ ಅತ್ಯುತ್ತಮ ವ್ಯಾಖ್ಯಾನಕಾರ ವಾಚಕನಾಗಿರುವುದಿಲ್ಲ. ಅದೇ ರೀತಿ ಒಳ್ಳೆಯ ಗಮಕಿ ಸಮರ್ಥವಾಗಿ ವ್ಯಾಖ್ಯಾನ ಮಾಡಲು ಸಾಧ್ಯವಾಗದಿರಬಹುದು. ಇದರಿಂದ ಈ ವ್ಯವಸ್ಥೆಯನ್ನು ನಿಖರವಾಗಿ ಸೂತ್ರೀಕರಿಸಿ ನಿಗದಿಗೊಳಿಸಲಾಗದು. ಸಂದರ್ಭ, ಅನುಕೂಲ, ಶ್ರೋತೃವರ್ಗ, ವ್ಯವಸ್ಥೆಯನ್ನು ಅವಲಂಬಿಸಿ ಹೊಂದಿಸಿಕೊಳ್ಳುವುದು ಸೂಕ್ತ.

ಕನ್ನಡ ಸಂಸ್ಕೃತಿಯಲ್ಲಿ ಕಾವ್ಯ–ಗಮಕ ಎರಡೂ ಒಂದಕ್ಕೊಂದು ಪೂರಕ. ಒಂದರ ಅಂತಃಸ್ವರೂಪ ಮತ್ತೊಂದರಲ್ಲಿ ಬಿಂಬಿತವಾಗುವಂತೆ ಹೆಣೆದುಕೊಂಡಿದೆ. ಗಮಕದಿಂದ ಕಾವ್ಯಕ್ಕೆ ಕಳೆಕಟ್ಟುತ್ತದೆ. ಮೆರಗು ಬರುತ್ತದೆ. ಕಾವ್ಯಶಕ್ತಿಯ ಮಿಡಿತ ಅದರ ಅಭಿವ್ಯಕ್ತಿಯಲ್ಲಿದ್ದು, ಕಾವ್ಯಾಸಕ್ತಿ ಬೆಳೆಯಲು ಗಮಕದ ನೆರವು ಅಗತ್ಯವಾಗಿದೆ. ಕರ್ಣಾನಂದದಿಂದ ಕಾವ್ಯ ಪರಮಾನಂದವನ್ನು ಸಾಧಿಸಲು ಅನುವಾಗುತ್ತದೆ. ಅದು ನವನವೋನ್ಮೇಷಶಾಲಿನಿಯಾಗಿ ಸ್ವೀಕೃತಗೊಳ್ಳಲು ಸಾಧನವಾಗುತ್ತದೆ. ಇದೊಂದು ಶಾಸ್ತ್ರೀಯ ಕಲೆಯಾಗಿ ಕನ್ನಡ ಕಾವ್ಯ ಸಂಸ್ಕೃತಿಯ ಅಂತಃಸ್ಸಂಬಂಧದ ಪ್ರತಿಚ್ಛಾಯೆಯಾಗಿ ಮೊಳಗಿದೆ. ಗಮಕವನ್ನು ಉಳಿಸಿ, ಸಂರಕ್ಷಿಸಿ, ಪೋಷಿಸಿ ನವೀಕರಿಸಿ ಪ್ರಚಾರ ಪಡಿಸುವುದು ಈ ಹೊತ್ತಿನ ಅನಿವಾರ್ಯ ಕರ್ತವ್ಯವೂ ಆಗಿದೆ! ಹಾಗಾದಾಗಲೇ ಗಮಕ ಸಂಸ್ಕೃತಿಗೆ ಮೆರಗು ಬರುತ್ತದೆ.

ಸಂಗೀತ ಹಾಗೂ ಮಾನಸಿಕ ಔನ್ನತ್ಯ

– **ವಿದುಷಿ ಡಾ। ಜ್ಯೋತಿಶಂಕರ್,** ಮೈಸೂರು
ಸಹಾಯಕ ಪ್ರಾಧ್ಯಾಪಕರು, ಕರಾಮುವಿವಿ,
೯೪೪೮೬೦೩೧೫೯, jsmysore@gmail.com

ಭಾರತೀಯ ಪರಂಪರೆಯಲ್ಲಿ ಸಂಗೀತಕ್ಕಿರುವ ಸ್ಥಾನ ಅತ್ಯಂತ ಮಹತ್ವದ್ದಾಗಿದೆ. ಲಲಿತ ಕಲೆಗಳಲ್ಲೂ ಸಂಗೀತಕ್ಕೆ ವಿಶೇಷವಾದ ಸ್ಥಾನವನ್ನು ನೀಡಲಾಗಿದೆ. ಪ್ರದರ್ಶಕ ಕಲೆಗಳಲ್ಲಿ ಒಂದಾದ ಸಂಗೀತಕ್ಕೇ ಇಂತಹ ಮಹತ್ವವಾದ ಸ್ಥಾನವೇಕೆ? ಎನ್ನುವ ಪ್ರಶ್ನೆ ಬಂದೊಡನೆಯೇ, ವ್ಯಕ್ತಿಯೊಬ್ಬನ ಜೀವನದಲ್ಲಿ ಸಂಗೀತವು ನಿರ್ವಹಿಸುವ ಮಹತ್ವದ ಪಾತ್ರದ ಅರಿವೂ ಕಣ್ಮುಂದೆ ಹಾದುಹೋಗುವುದರಲ್ಲಿ ಯಾವ ಸಂದೇಹವೂ ಇಲ್ಲ. ಕಲಾನುಭವ ಆನಂದ – ರಸಾನುಭೂತಿಯಂತಹ ಮಹತ್ವದ ಘನೀಕೃತ ವಿಶೇಷಗಳ ಜೊತೆಯಲ್ಲಿ ಸಂಗೀತ ಇನ್ನೂ ಹಲವು ಜವಾಬ್ದಾರಿಯನ್ನು ಪರಂಪರೆಯ ಭಾಗವಾಗಿ ನಿರ್ವಹಿಸುತ್ತಲೇ ಬಂದಿದೆ.

ಸಂಗೀತವೆಂದರೆ 'ನಾದ' ವಿದ್ಯೆ. ಆದರೆ ನಾದ, ಕಣ್ಣಿಗೆ ಕಾಣಿಸದೇ, ಮನಸ್ಸು – ಬುದ್ಧಿ – ಭಾವ – ಇಂದ್ರಿಯಗಳ ಮೂಲಕ ಅನುಭವಕ್ಕೆ ಬರುವಂತಹುದು. ಶ್ರವ್ಯದ ಮೂಲಕವೇ ದೃಶ್ಯವನ್ನು ಕಲ್ಪಿಸಿಕೊಡುವಂತಹ ಮಹತ್ತರವಾದ ಅನುಭೂತಿಯ ಶಕ್ತಿ ಇರುವ ಕಲೆ ಸಂಗೀತ. ಸಂಗೀತಕ್ಕೆ ಮೂಲ ಸಾಮವೇದ. ಪ್ರಪಂಚವನ್ನು ಆವರಿಸಿರುವ ಪ್ರಣವ 'ಓಂ' ಕಾರದ ಶಕ್ತಿಯ ಚೈತನ್ಯ ನಾದದ ಮೂಲಕ ವಿಶ್ವವನ್ನು ಆವರಿಸಿದೆ. **"ಸಂಗೀತ ರತ್ನಾಕರ"** ದಲ್ಲಿ **"ಶಾರ್ಙ್ಗದೇವ"**.

**ಚೈತನ್ಯಂ ಸರ್ವಭೂತಾನಾಂ ನಿರ್ವೃತ್ತಿಂ ಜಗದಾತ್ಮನಾ
ನಾದಬ್ರಹ್ಮ ತದಾನಂದಮದ್ವಿತೀಯಮುಪಾಸ್ಮಹೇ**

ಎಂದು ನಾದಬ್ರಹ್ಮನನ್ನು ವಂದಿಸಿದ್ದಾರೆ. ಇಲ್ಲಿ ಚೈತನ್ಯ ಮತ್ತು ಅದರಿಂದ ಬರುವ ಸುಖ ಹಾಗೂ ಆನಂದ ಅತ್ಯಂತ ಮೇಲ್ಮಟ್ಟದ್ದಾಗಿದೆ. ಎಲ್ಲಿ ಇಂತಹ ಆನಂದವನ್ನು ವ್ಯಕ್ತಿ ಅನುಭವಿಸಬಲ್ಲನೋ ಅಲ್ಲಿ ಆತನ ಮಾನಸಿಕ ಆರೋಗ್ಯ ಸದೃಢವಾಗಿದೆಯೆನ್ನುವುದು ಅರಿವಾಗಿ ಬಿಡುತ್ತದೆ. ಸಂಗೀತಕ್ಕೂ ಮಾನಸಿಕ ಔನ್ನತ್ಯಕ್ಕೂ ಇರುವ ನಂಟು ಇದೇ. ಸಂಗೀತವನ್ನು ಅಭ್ಯಾಸ ಮಾಡಲು ಆರಂಭಿಸಿದಾಗಲೇ ಮಗುವೊಂದು ದೈಹಿಕವಾಗಿ ಒಂದೆಡೆ ಕೂರುವ ಆಲೋಚನೆ ಮಾಡುತ್ತದೆ. ಇದು ಅನಗತ್ಯ ದೈಹಿಕ ಚಟುವಟಿಕೆಯನ್ನು

ನಿಯಂತ್ರಿಸುವ ಮನಸ್ಥಿತಿಯನ್ನು ತರುತ್ತದೆ. ಕಲಿತ ಹಂತದಿಂದಲೂ, ಕೊನೆಯವರೆಗೂ ಅತ್ಯಂತ ಸೂಕ್ಷ್ಮವಾಗಿ ಕೇಳುವ ತಾಳ್ಮೆ, ಕೇಳಿದ್ದನ್ನು ಜೀರ್ಣಿಸಿಕೊಳ್ಳುವ, ಮನನ ಮಾಡಿಕೊಳ್ಳುವ ರೀತಿ ಬೆಳೆದುಬರುತ್ತದೆ. ಇದು ಸಂಗೀತದಿಂದ ಬಂದು ಉಳಿದ ಕ್ಷೇತ್ರಗಳಿಗೂ ಅನ್ವಯಿಸುವುದರಿಂದ ಸಂಗೀತಾಭ್ಯಾಸಿಗಳ ಕೇಳ್ಮೆಯ ಶಕ್ತಿಯೂ ಅಷ್ಟೇ ಪರಿಣಾಮಕಾರಿಯಾಗಿ ಮುಂದುವರೆಯುತ್ತಲೇ ಹೋಗುತ್ತದೆ.

ಸಂಗೀತದ ಸಾಧನೆ ಸಾಧ್ಯವಾಗುವುದು ಸೂಕ್ಷ್ಮಗ್ರಹಣಶಕ್ತಿ, ಏಕಾಗ್ರತೆ, ಶ್ರದ್ಧೆ ಮತ್ತು ಅಭ್ಯಾಸದಿಂದ. ಈ ಗುಣಗಳು ಸಂಗೀತ ವಿದ್ಯಾರ್ಥಿಯ ಮಾನಸಿಕ ಪರಿಪಕ್ವತೆಯನ್ನು ಹೆಚ್ಚಿಸುತ್ತಲೇ ಹೋಗುತ್ತದೆ. ಇದು ಜೀವನದ ಎಲ್ಲ ರಂಗಕ್ಕೂ ಅನ್ವಯವಾಗುವುದರಿಂದ ಸಂಗೀತದ ಜೊತೆಯಲ್ಲಿ ಕಲಿಯುವ, ಅಭ್ಯಾಸ ಮಾಡುವ ಎಲ್ಲ ವಿಷಯಗಳಲ್ಲೂ ಅದೇ ಮಟ್ಟದ ತಾದಾತ್ಮ್ಯತೆಯನ್ನು ಕಾಪಾಡಿಕೊಂಡು ಬರಲು ಸುಲಭವಾಗಿ ಸಾಧ್ಯವಾಗುತ್ತದೆ.

ಮಾನಸಿಕ ಸಂಸ್ಕಾರ ಒಂದು ಹಂತಕ್ಕೆ ಬಂದು ಸಂಗೀತವನ್ನು ಅಭಿವ್ಯಕ್ತಿಮಾಡುವಾಗಲೂ ಬುದ್ಧಿ-ತಾಳ್ಮೆ-ಆಯಾಕಾಲಮಾನಕ್ಕೆ ತಕ್ಕಂತೆ ಅಭಿವ್ಯಕ್ತಿಯನ್ನು ಹೇಗೆ ಪರಿಣಾಮಕಾರಿಯಾಗಿ ಮಾಡಬಹುದೆನ್ನುವ ತರ್ಕ ಮಾನಸಿಕವಾಗಿ ವ್ಯಕ್ತಿಯನ್ನು ಗಟ್ಟಿಗೊಳಿಸುತ್ತಾ ಹೋಗುತ್ತದೆ. ಶ್ರೋತೃಗಳ ಪ್ರತಿಕ್ರಿಯೆಯನ್ನು ಅಲ್ಲಿಯೇ ಅರ್ಥೈಸಿಕೊಂಡು, ರಾಗ-ಲಯದಲ್ಲಿ ಅಗತ್ಯವಿರುವ ಬದಲಾವಣೆಗಳನ್ನೂ ಮಾಡಿಕೊಂಡು, ಮನೋಧರ್ಮವನ್ನು ಉಳಿಸಿಕೊಂಡು ಪಕ್ಕವಾದ್ಯದವರೊಂದಿಗೆ ಸೂಕ್ತ ಸಹಕಾರ ನೀಡುತ್ತಾ ಹಾಗೂ ಪಡೆಯುತ್ತಾ ಅಭಿವ್ಯಕ್ತಿ ಪೂರ್ಣಗೊಳ್ಳುವವರೆಗೆ ಅತ್ಯಂತ ಜಾಗೃತಿ ಸ್ಥಿತಿಯಲ್ಲಿ ಬುದ್ಧಿಯನ್ನು ಮತ್ತು ಭಾವನೆಯನ್ನು ಸಂಗೀತಗಾರ ಹಿಡಿತದಲ್ಲಿ ಇರಿಸಿಕೊಂಡಿರಲೇಬೇಕು. ಇವೆಲ್ಲ ಸಂಗೀತದ ಪರಿಭಾಷೆಗಳು ಮಾತ್ರವಲ್ಲ, ಜೀವನದಲ್ಲಿ ಯಾವುದೇ ಕೆಲಸವನ್ನು ನಿರ್ವಹಿಸಬೇಕಾದರೂ ಅಗತ್ಯವಾಗಿ ಬೇಕಿರುವಂತಹ ಅಂಶಗಳೇ. ಮನಸ್ಸು ಮತ್ತು ಬುದ್ಧಿ; ಭಾವೋದ್ರೇಕವಿಲ್ಲದೆ, ಚಂಚಲತೆಯಿಲ್ಲದೆ, ಜೀವನವನ್ನು ನಿರ್ವಹಿಸುವಂತ ಉತ್ತಮ ಮಾನಸಿಕ ಸದೃಢತೆ ಸಂಗೀತದ ಅಭ್ಯಾಸದಿಂದ ಸಾಧ್ಯವಾಗುತ್ತದೆ. ಕಲಾವಿದ ಒಂದು ಸಂಗೀತ ಕಾರ್ಯಕ್ರಮವನ್ನು ಮೇಲಿನ ಎಲ್ಲಾ ಅಂಶಗಳೊಡನೆ ಹೇಗೆ ನಿರ್ವಹಿಸಿ ವ್ಯವಹರಿಸಬಲ್ಲನೋ, ಅಷ್ಟೇ ಸರಿಯಾಗಿ ಜೀವನದ ಇನ್ನಿತರ ಕ್ಷೇತ್ರಗಳಲ್ಲೂ ತೊಡಗಿಸಿಕೊಳ್ಳುವುದು ಸಾಧ್ಯವಾಗುತ್ತದೆ.

'ಮನಸ್ಸು' ಅತ್ಯಂತ ವಿಚಿತ್ರವಾದದ್ದು. ಮಾನವನ ಏಳು, ಬೀಳು, ವಿಕೃತಿ, ಶಾಂತಿ, ಬಂಧ-ಮೋಕ್ಷ ಎಲ್ಲವೂ ಚಿಗುರೊಡೆದು ಹೆಮ್ಮರವಾಗಿ ಬೆಳೆಯುತ್ತದೆ. ಮನಸ್ಸು ಬಹಳ ಸಂಕೀರ್ಣವಾದದ್ದು. ಅತ್ಯಂತ ಸಮಸ್ಯಾತ್ಮಕವೂ, ಚಂಚಲವೂ ಹಾಗೆಯೇ

ಸಮಾಧಾನಕರವೂ ಆಗಬಲ್ಲದು. ಸಂಗೀತದ ಸಂಸ್ಕೃತಿಯಲ್ಲಿ ಬರುವ ರಚನೆಗಳು ಮನಸ್ಸಿನ ಭಾವಗಳನ್ನು ತಿದ್ದುವಲ್ಲಿ ಅತ್ಯಂತ ಪ್ರಮುಖಪಾತ್ರವನ್ನು ವಹಿಸುತ್ತವೆ. "ಭಗವಂತನ ಸರ್ವಶಕ್ತತೆ, ವ್ಯಾಪಕತೆ, ನೀತಿ, ಜೀವನದಲ್ಲಿ ಅಳವಡಿಸಿಕೊಳ್ಳಬೇಕಾದ ಮೌಲ್ಯಗಳು, ಸಮಾಜದ ರೀತಿ-ನೀತಿ, ಸನ್ಮಾರ್ಗ ಇತ್ಯಾದಿಗಳನ್ನೆಲ್ಲ ಒಳಗೊಂಡಿರುವ ಸಂಗೀತದ ರಚನೆಗಳು, ಅಭ್ಯಾಸ ಮಾಡುತ್ತಲೇ ರಾಗ-ತಾಳಗಳ ಜೊತೆಯಲ್ಲಿ ಜೀವನಕ್ಕೆ ಬೇಕಾಗಿರುವ ಚೌಕಟ್ಟನ್ನೂ ತೋರಿಸಿ, ಎಚ್ಚರಿಸಿ, ಜ್ಞಾನ, ಚಿಂತನೆಯ ಜೊತೆಯಲ್ಲಿ ಸಾಮಾನ್ಯತೆಯಿಂದ ಸಾಧನಾಪಥಕ್ಕೇ ಕರೆದೊಯ್ದು, ಮನಸ್ಸನ್ನು ನಿಯಂತ್ರಣದಲ್ಲಿರಿಸುತ್ತದೆ. ಮಾನವೀಯತೆ - ಸುಸಂಸ್ಕೃತಿ ಎರಡೂ ಸಂಗೀತದಿಂದ ಸಾಧ್ಯವಾಗುತ್ತದೆ.

ಸದಾ ಒತ್ತಡವನ್ನೇ ಎದುರಿಸುತ್ತಾ ಇರುವ ಜೀವನಕ್ರಮ ನಮ್ಮದಾಗಿದೆ. ಕ್ರೌರ್ಯ, ಅಮಾನವೀಯ ಚಿಂತನೆಗಳು, ಅಸಮಾಧಾನ, ಅನೈತಿಕತೆ, ಅಶಾಂತಿ – ಇಂತಹ ಸಮಸ್ಯೆಗಳಿಗೆ ಸೂಕ್ತ ಉತ್ತರವನ್ನು ಸಂಗೀತ ಮಾತ್ರ ನೀಡಬಲ್ಲುದು ಮಾನಸಿಕ ಬೆಳವಣಿಗೆಯೆನ್ನುವುದು, ಅಳತೆಯಿಂದ ಇಂಚುಗಳಲ್ಲೋ ಅಡಿಗಳಲ್ಲೋ ಹೇಳುವುದಲ್ಲ. ಎಲ್ಲಿ ಸಮಾಧಾನ, ಶಾಂತಿ, ಋಜು ಮಾರ್ಗಗಳಿರುತ್ತವೋ ಅಲ್ಲೆಲ್ಲಾ ಸುಂದರ – ಸುಸಂಸ್ಕೃತ ಮನಸ್ಸುಗಳಿರುತ್ತವೆ. ಸಂಗೀತದ ಬಹುದೊಡ್ಡ ಪ್ರಯೋಜನವಿದು. **'ನಾದಚಿಕಿತ್ಸೆ'**, ಭೌತಿಕ ರೋಗಗಳಿಂದಲೂ ಹಾಗೂ ಮಾನಸಿಕ ರೋಗಗಳಿಂದಲೂ ಮುಕ್ತಿಗೊಳಿಸುತ್ತದೆ.

ರಾಡಿಯಾಗಿರುವ ಮನಸ್ಸನ್ನು ತಿಳಿಗೊಳಿಸುವುದು ಸಂಗೀತಕ್ಕೆ ಸಾಧ್ಯ. ನಾದೋಪಾಸನೆಯಿಂದ ಮನಸ್ಸಿಗೆ ಶಾಂತಿ, ಸಮಾಧಾನ, ಆನಂದ, ಭಗವದ್ಭಕ್ತಿ, ಮೋಕ್ಷ ಎಲ್ಲವೂ ದೊರೆಯುತ್ತದೆ. Man is not permanent but humanity is permanent ಮನುಷ್ಯ ಅಶಾಶ್ವತ, ಆ ಮಾನವೀಯತೆ ಶಾಶ್ವತವಾದದ್ದು.

ಮಾನವೀಯತೆ ಸದಾ ಸ್ಥಾಯಿಯಾಗಿರುವಾಗ, ಮುಂದಿನ ಜನಾಂಗಕ್ಕೆ ಉತ್ಕೃಷ್ಟವಾದದ್ದನ್ನು ಹಿಂದಿನವರೆಲ್ಲಾ ತಿಳಿಸುತ್ತಲೇ ಬಂದಿದ್ದಾರೆ. ಮುಂದಿನ ಜನಾಂಗ ಇರುವ ಒತ್ತಡದಿಂದ ಮುಕ್ತವಾಗಿ ಸುಂದರ ಪರಿಸರದಲ್ಲಿ ಜೀವಿಸಲು ಬೇಕಾಗಿರುವುದೇ ಸಂಗೀತ. ಸಂಗೀತವೆಂದರೆ ಅದು ಮನಸ್ಸನ್ನು ಭಾವನೆಯನ್ನು ಅರಿತು ಕೊನೆಗೆ ತನ್ನನ್ನು ತಾನೇ ಪೂರ್ಣವಾಗಿ ಅರಿಯುವ ಪ್ರಯತ್ನ. ತನ್ನನ್ನು ತಾನು ಅರಿತಾಗ – ಮತ್ತೊಬ್ಬರನ್ನು ತಿಳಿಯುವುದೂ ಸುಲಭವಾಗಿ, ಮಾನವೀಯತೆ ಎಲ್ಲೆಲ್ಲೂ ಕಾಣುತ್ತದೆ. ಸಂಗೀತವೆಂದರೆ ನಾದೋಪಾಸನೆ. ಇದರಿಂದ ಆಗುವ ಬಹುಮುಖ್ಯ ಪ್ರಯೋಜನವೆಂದರೆ

ಚಿತ್ತಶುದ್ಧಿಯನ್ನುಂಟುಮಾಡುವುದು. ಮನಸ್ಸಿಗೆ, ಅಂತಃಕರಣಕ್ಕೆ ಹತ್ತಿಕೊಂಡಿರುವ ವಿಷಯವಾಸನೆಯನ್ನು, ಕುಕಾಮನೆಗಳನ್ನು ಸಂಗೀತದಿಂದ ನಿವಾರಿಸುತ್ತಾ ಹೋದಂತೆಲ್ಲಾ ದುರ್ವಿಷಯಗಳು, ದುರ್ವಾಸನೆಗಳು ಕರಗಿ, ಪ್ರೇಮ, ಶಾಂತಿ, ಸಹನೆ, ಮಾನವೀಯತೆ, ಭಗವದ್ಭಕ್ತಿ – ಇವೆಲ್ಲವೂ ಉದ್ದೀಪನಗೊಳ್ಳುತ್ತವೆ. ಅಂತರಂಗ ಶುದ್ಧಿಯಾದಾಗ, ಬಹಿರಂಗವೂ ತಾನೇ ತಾನಾಗಿ ಶುದ್ಧವಾಗಿರುತ್ತದೆ. ಅಂತರಂಗ – ಬಹಿರಂಗಗಳೆರಡೂ ಶುದ್ಧವಾಗಿದ್ದಾಗ, ಪ್ರೇಮ, ಶಾಂತಿ, ಸಮಾಧಾನ ತಾನೇ ತಾನಾಗಿ ಉಂಟಾಗುತ್ತದೆ. ಸಂಗೀತ, ಇವೆಲ್ಲಕ್ಕೂ ಜೀವ ಜಲವಾಗಿ, ಅಂದಿನಿಂದ ಇಂದಿನವರೆಗೂ ಪ್ರವಹಿಸುತ್ತಲೇ ಬಂದಿದೆ. ಸಂಗೀತಗಂಗೆಯಲ್ಲಿ ಮಿಂದು ನಾವೂ ಮಾನಸಿಕ ಔನ್ನತ್ಯವನ್ನು ತಂದುಕೊಳ್ಳೋಣ.

◆

ಸುಗಮ ಸಂಗೀತ ವಿಕಾಸದಲ್ಲಿ ಸಂಘ-ಸಂಸ್ಥೆಗಳ ಪಾತ್ರ

- ವೈ.ಕೆ. ಮುದ್ದುಕೃಷ್ಣ, ಬೆಂಗಳೂರು
ಗಾಯಕರು, ಅಧ್ಯಕ್ಷರು ಕರ್ನಾಟಕ ಸುಗಮ ಸಂಗೀತ ಪರಿಷತ್ತು
೦೮೦-೨೬೬೩೧೧೪೫, ykmuddu@yahoo.co.in

ಸುಗಮಸಂಗೀತ ಬೇರೆ ಬೇರೆ ಸಂಗೀತ ಪದ್ಧತಿಗಳೊಂದಿಗೆ ಹೋಲಿಸಿದಾಗ ಅದಕ್ಕೆ ಅಂತಹ ದೀರ್ಘವಾದ ಇತಿಹಾಸವಿಲ್ಲ. ಸ್ಥೂಲವಾಗಿ ಸುಗಮ ಸಂಗೀತ ಎನ್ನುವುದು ಕನ್ನಡ ಕವಿತೆಗಳನ್ನು ಸಂಗೀತದ ಮೂಲಕ ಅರ್ಥೈಸುವ ಈ ಶತಮಾನದ ಒಂದು ವಿಶಿಷ್ಟ ಶೈಲಿ. ಹಿಂದಿನ ಗಮಕ ಪದ್ಧತಿಯೋ, ದಾಸರ ಪದಗಳನ್ನು ಹಾಡುವ ಶೈಲಿಯೋ ಇಲ್ಲಿ ಸರಿ ಅಲ್ಲವೆನಿಸಿದಾಗ ಭಾವಗೀತೆಗಳನ್ನು ಹಾಡುವ ಹೊಸಶೈಲಿಂತೊಂದು ಉದ್ಭವಿಸಲೆಬೇಕಾಯಿತು. ಈ ಕಾರಣದಿಂದಾಗಿ ಸುಗಮಸಂಗೀತ ಎಂಬ ಹೆಸರಿನಲ್ಲಿ ಬೆಳೆದಿರುವ ಕಾವ್ಯಗಾಯನಕ್ಕೆ ಸಂಗೀತ ಕಲಾವಲಯದಲ್ಲಿ ತನ್ನದೇ ಆದ ವಿಶಿಷ್ಠ ಸ್ಥಾನವಿದೆ. ಕನ್ನಡಕ್ಕೆ ಶಿಖರಪ್ರಾಯರಾದ ಕವಿ ಶ್ರೇಷ್ಠರ ರಚನೆಗಳನ್ನು ಕನ್ನಡಿಗರ ಮನೆ ಮನಗಳಿಗೆ ತಲಪಿಸುವಲ್ಲಿ ಸುಗಮ ಸಂಗೀತದ ಪಾತ್ರ ಮಹತ್ತರವಾದುದು. ಕಾವ್ಯ ಮತ್ತು ಶೋತೃಗಳ ಸೇತುವಾಗಿ, ಕಾವ್ಯ ಪ್ರಚಾರದಲ್ಲಿ ಅಮೃತ ವಾಹಿನಿಯಾಗಿದೆ ಸುಗಮ ಸಂಗೀತ.

ಸುಗಮ ಸಂಗೀತ ಪಿತಾಮಹರೆನಿಸಿದ ಹುಕ್ಕೇರಿ ಬಾಳಪ್ಪ ಹಾಗೂ ಪಿ.ಕಾಳಿಂಗರಾಯರುಗಳು ತಮ್ಮ ಮಧುರ ಕಂಠದಲ್ಲಿ ಗೀತೆಗಳನ್ನು ಹಾಡಿ ಕನ್ನಡದ ಬಾವುಟವನ್ನು ನಭಕ್ಕೇರಿಸಿದರು. ಅಂತೆಯೆ ಸುಗಮ ಸಂಗೀತದ ದೊರೆಯಾಗಿ ಮೆರೆದ ಮೈಸೂರು ಅನಂತಸ್ವಾಮಿಯವರು ನೀರೆರದು ಪೋಷಿಸಿದರು. ಅನಂತಸ್ವಾಮಿಯವರ ಜೊತೆ ಜೊತೆಯಲ್ಲೇ ಸುಗಮಸಂಗೀತ ವೃಕ್ಷವನ್ನು ಸಮೃದ್ಧವಾಗಿ ತಮ್ಮ ವಿಶಿಷ್ಟ ಸಂಯೋಜನೆಗಳ ಮೂಲಕ ಬೆಳೆಸಿದವರು ಸಿ.ಅಶ್ವಥ್ ಮತ್ತಿತರರು ಹಾಗೂ ಈ ಮಹನೀಯರುಗಳಿಗೆ ಬೆಂಬಲವಾಗಿ ನಿಂತು ಅವರುಗಳ ಉತ್ಕೃಷ್ಟ ಸಂಯೋಜನೆಗಳನ್ನು ಶ್ರೇಷ್ಟ ಮಟ್ಟದ ಗಾಯನದ ಮೂಲಕ ತಲುಪಿಸಿದ್ದು ಗಾಯಕ ಪಡೆ. ಸುಗಮಸಂಗೀತ ಬೆಳವಣಿಗೆಯಲ್ಲಿ ಆಕಾಶವಾಣಿಯ ಪಾತ್ರ ಮಹತ್ವವಾದುದು. ಮುಂಬೈ ಆಕಾಶವಾಣಿಯಲ್ಲಿ ಪ್ರಸಾರವಾಗುತ್ತಿದ್ದ ಸೀತಾಮುಲ್ಕಿ ಅವರು ಹಾಡಿದ ಎನ್.ಕೆ ಅವರ ಗೀತೆಗಳಾಗಲಿ, ಜಯವಂತಿದೇವಿ ಹಿರೇಬೇಟ್ ಅವರು ಹಾಡಿದ ಕೆ.ಎಸ್.ನರಸಿಂಹಸ್ವಾಮಿಯವರ ಗೀತೆಯಾಗಲಿ ಕನ್ನಡಿಗರಲ್ಲಿ ಪುಳಕ ಉಂಟುಮಾಡುತ್ತಿತ್ತು. ಕಾವ್ಯ ಗಾಯನ ಪರಂಪರೆಯ ಉತ್ಕರ್ಷಕ್ಕೆ ಇದು ನಾಂದಿಯಾಯಿತು. ಜೊತೆಗೆ ಬೆಂಗಳೂರು ಆಕಾಶವಾಣಿಯ ಮೇರು

ಪ್ರತಿಭೆಗಳಾದ ಎಂ.ಡಿ.ಪಾರ್ಥಸಾರಥಿ, ಡಾ.ವಿ.ದೊರೆಸ್ವಾಮಿ ಅಯ್ಯಾಂಗಾರ್, ಎಸ್.ಕೃಷ್ಣಮೂರ್ತಿ, ಪದ್ಮಚರಣ್ ಹಾಗೂ ಹೆಚ್.ಕೆ.ನಾರಾಯಣ ಅವರ ಸಂಯೋಜನೆಗಳು ಪ್ರತಿನಿತ್ಯ ಬಾನುಲಿಯಲ್ಲಿ ಬೆಳಗಿ ಕನ್ನಡಿಗರಲ್ಲಿ ಕವಿ ಗೀತ ಗಾಯನದ ಅಭಿರುಚಿಯನ್ನು ಹೆಚ್ಚಿಸಿದವು. ಶಾಸ್ತ್ರೀಯ ಸಂಗೀತ ದಿಗ್ಗಜರುಗಳಾದ ಸಂಗೀತ ಕಲಾನಿಧಿ ಆರ್.ಕೆ.ಶ್ರೀಕಂಠನ್, ಪಂಡಿತ್ ಭೀಮಸೇನಜೋಷಿ ಅವರುಗಳು ಕವಿಗೀತೆಗಳನ್ನು ಆಕಾಶವಾಣಿಯಲ್ಲಿ ಹಾಡಿರುವುದನ್ನು ಸ್ಮರಿಸಬೇಕು.

ಸುಮಾರು ಏಳು ದಶಕಗಳ ಇತಿಹಾಸವನ್ನು ಹೊಂದಿದೆಯೆಂದು ಗುರುತಿಸಿಕೊಂಡಿರುವ ಸುಗಮಸಂಗೀತ ಕ್ಷೇತ್ರದ ಸಮಗ್ರ ಬೇಳವಣಿಗೆಗೆ ಸೈದ್ಧಾಂತಿಕ ನೆಲೆಯೊದಗಿಸಿ, ಭವ್ಯವಾಗಿ ಬೆಳೆಯಲು ಕಾರಣರಾದವರು ಹಲವಾರು ಸಂಗೀತ ಸಂಯೋಜಕರು ಹಾಗೂ ಕಲಾವಿದರುಗಳು. ಹಾಗೆಯೇ ಸುಗಮ ಸಂಗೀತ ಸಂಸ್ಥೆಗಳು ಮತ್ತು ಸಂಘ-ಸಂಸ್ಥೆಗಳ ಪಾತ್ರವೂ ಅತ್ಯಂತ ಮಹತ್ವದ್ದೆಂದೆ ಹೇಳಬೇಕು. ಇವುಗಳಲ್ಲಿ ಪ್ರಮುಖವಾದ ಕೆಲವು ಸುಗಮ ಸಂಗೀತ ಶಾಲೆಗಳು ಮತ್ತು ಸಂಸ್ಥೆಗಳ ಕಿರಪರಿಚಯವನ್ನು ಮಾಡಲು ಪ್ರಯತ್ನಿಸಲಾಗಿದೆ. ಈ ನಿಟ್ಟಿನಲ್ಲಿ ಕೆಲಸ ಮಾಡುತ್ತಾ ಬಂದಿರುವ ಸಂಘ ಸಂಸ್ಥೆಗಳನ್ನು ನಾಲ್ಕು ವಿಧವಾಗಿ ಗುರುತಿಸಬಹುದಾಗಿದೆ.

೧. **ಸುಗಮ ಸಂಗೀತ ಶಾಲೆಗಳು.**
೨. **ಸುಗಮ ಸಂಗೀತ ಸಂಸ್ಥೆಗಳು.**
೩. **ಮಾಧ್ಯಮಗಳು.**
೪. **ಕನ್ನಡಪರ ಸಂಘಸಂಸ್ಥೆಗಳು ಹಾಗೂ ಉದ್ದಿಮೆಗಳು.**

ಸುಗಮ ಸಂಗೀತ ಶಾಲೆಗಳು

ಶಾಸ್ತ್ರೀಯ ಸಂಗೀತಕ್ಕಿದ್ದಂತೆ ಯಾವುದೇ ಪಾರಂಪರಿಕ ಗುರುಕುಲ ಅಭ್ಯಾಸ ಸುಗಮ ಸಂಗೀತಕ್ಕೆ ಇಲ್ಲದ್ದಿದ್ದರೂ ಸಹ ಅತ್ಯಂತ ಕ್ಷಿಪ್ರಗತಿಯಲ್ಲಿ ಬೆಳವಣಿಗೆ ಮತ್ತು ಜನಪ್ರಿಯತೆಯನ್ನು ಪಡೆದುಕೊಂಡಿರುವ ಈ ಕ್ಷೇತ್ರದಲ್ಲಿ ಕಳೆದ ಎರಡು ದಶಕಗಳಲ್ಲಿ ಹಲವಾರು ಸುಗಮ ಸಂಗೀತ ಶಾಲೆಗಳು ಸ್ಥಾಪಿತವಾಗಿ ಕೆಲಸಮಾಡುತ್ತಾ ಬಂದಿವೆ.

೧) **ಸುಗಮ ಸಂಗೀತ ಅಕಾಡೆಮಿ, ಮೈಸೂರು:** ೧೯೮೫ ರಲ್ಲಿ ಕರ್ನಾಟಕದಲ್ಲಿ ಮೊಟ್ಟ ಮೊದಲನೆಯದಾಗಿ ಜನ್ಮತಳೆದ ಸಂಸ್ಥೆ ಇದಾಗಿದೆ. ನಾಡಿನ ಹೆಸರಾಂತ ಕಲಾವಿದೆ ಹಾಗು ಸಂತ ಶಿಶುನಾಳ ಷರೀಫ್ ಪ್ರಶಸ್ತಿ ಪುರಸ್ಕೃತರಾದ ಶ್ರೀಮತಿ ಎಚ್.ಆರ್.ಲೀಲಾವತಿಯವರ ಕನಸಿನ ಕೂಸಾದ ಈ ಅಕಾಡೆಮಿ ಅವರ ಪತಿ ಗಾಯಕ ಎಸ್.ಜಿ.ರಘುರಾಂ ಮತ್ತು ಕೆ.ವಿ.ಮೂರ್ತಿಯವರ ಸಹಕಾರದೊಂದಿಗೆ ನೂರಾರು ಯುವ

ಪ್ರತಿಭೆಗಳಿಗೆ ಸುಗಮ ಸಂಗೀತ ಗಾಯನದಲ್ಲಿ ತರಬೇತಿ ನೀಡಿ, ಅವರಿಗೆ ಹಲವಾರು ವೇದಿಕೆಗಳನ್ನು ಕಲ್ಪಿಸಿಕೊಟ್ಟಿದೆ. ರಾಜ್ಯ, ಹೊರರಾಜ್ಯ ಹಾಗೂ ಹೊರದೇಶಗಳಲ್ಲಿ ಕಾರ್ಯಕ್ರಮಗಳನ್ನು ನೀಡಿರುವುದರ ಜೊತೆಗೆ, ಹಲವು ಭಾವಗೀತೆಗಳ ಧ್ವನಿಸುರುಳಿಗಳನ್ನು ಕೂಡ ಹೊರ ತಂದಿದೆ. ಸುಗಮ ಸಂಗೀತ ಕ್ಷೇತ್ರದ ಜನಪ್ರಿಯ ಗಾಯಕಿ ಶ್ರೀಮತಿ ಡಾ। ರೋಹಿಣಿಮೋಹನ್ ಅವರು ಈ ಅಕಾಡೆಮಿಯಿಂದಲೇ ತಯಾರಾದವರು. ಇವರು ಅಮೇರಿಕಾ ಇಂಗ್ಲೆಂಡ್ ದೇಶಗಳ ಪ್ರವಾಸ ಮಾಡಿ ಕಾರ್ಯಕ್ರಮಗಳನ್ನು ನೀಡಿರುತ್ತಾರೆ. ಇಂದಿಗೂ ಅತ್ಯಂತ ಕ್ರಿಯಾಶೀಲವಾಗಿ ಸುಗಮ ಸಂಗೀತ ಕ್ಷೇತ್ರಕ್ಕೆ ದುಡಿಯುತ್ತಿರುವ ಸಂಸ್ಥೆ ಇದಾಗಿದೆ.

೨) **ಸಾಧನಾ ಸಂಗೀತ ಶಾಲೆ, ಬೆಂಗಳೂರು:** ೨೧-೫-೧೯೯೧ ರಲ್ಲಿ ಬೆಂಗಳೂರಿನ ಗವಿಪುರಂ ಬಡಾವಣೆಯಲ್ಲಿ, ನಾಡಿನ ಪ್ರಖ್ಯಾತ ಸುಗಮ ಸಂಗೀತ ಹಾಗೂ ಹಿನ್ನಲೆ ಗಾಯಕಿ ಮಂಜುಳಾ ಗುರುರಾಜ್ ಮತ್ತು ಅವರ ಪತಿ ಗಾಯಕ ಗುರುರಾಜ್ ಅವರಿಂದ ಸ್ಥಾಪಿತವಾದ ಸಂಸ್ಥೆ "**ಸಾಧನಾ ಸ್ಕೂಲ್ ಆಫ್ ಮ್ಯೂಸಿಕ್**". ದಕ್ಷಿಣ ಭಾರತದ ಖ್ಯಾತ ಹಿನ್ನಲೆ ಗಾಯಕಿ ಎಸ್.ಜಾನಕಿಯವರಿಂದ ಈ ಸಂಸ್ಥೆ ಉದ್ಘಾಟನೆಗೊಂಡಿತು. ಸುಗಮ ಸಂಗೀತವನ್ನಲ್ಲದೆ, ಶಾಸ್ತ್ರೀಯ ಸಂಗೀತ, ಚಲನಚಿತ್ರ ಸಂಗೀತ, ವಾದ್ಯ ಸಂಗೀತ ಹಾಗೂ ನೃತ್ಯ ತರಬೇತಿ ನಿಡುತ್ತಾ ಬಂದಿರುವ ಈ ಸಂಸ್ಥೆ ಪ್ರತಿ ವರ್ಷವೂ ಆಕರ್ಷಕವಾದ ವಾರ್ಷಿಕೋತ್ಸವ ನಡೆಸುವುದರ ಮೂಲಕ ಯುವ ಪ್ರತಿಭೆಗಳಿಗೆ ವೇದಿಕೆ ಕಲ್ಪಿಸಿಕೊಂಡು ಬರುತ್ತಿದೆ. ಚಿಕ್ಕವಯಸ್ಸಿನಲ್ಲೇ ಅತ್ಯಂತ ಜನಪ್ರಿಯತೆಯನ್ನು ಗಳಿಸಿಕೊಂಡಿದ್ದ ಗಾಯಕ ಸಂಗೀತ ನಿರ್ದೇಶಕ ದಿ. ಜಿ.ವಿ.ಅತ್ರಿಯವರು ಈ ಶಾಲೆಯ ಸಂಗೀತ ಶಿಕ್ಷಕರು ಹಾಗು ಪ್ರಾಂಶುಪಾಲರು ಆಗಿದ್ದರೆಂಬುದು ಉಲ್ಲೇಖಾರ್ಹ.

೩) **ಸಂಗೀತ ಗಂಗಾ, ಬೆಂಗಳೂರು:** ಸಾಧನಾ ಸಂಗೀತ ಶಾಲೆಯ ಅನುಭವದ ಹಿನ್ನಲೆಯಲ್ಲಿ, ಯುವ ಗಾಯಕ ಸಂಗೀತ ನಿರ್ದೇಶಕ ಜಿ.ವಿ ಅತ್ರಿಯವರ ಸಾರಥ್ಯದಲ್ಲಿ ದಿನಾಂಕ ೨೭-೮-೧೯೯೩ ರಲ್ಲಿ ಖ್ಯಾತ ಹಿನ್ನಲೆ ಗಾಯಕ ಪಿ.ಬಿ.ಶ್ರೀನಿವಾಸ್ ರವರಿಂದ ಉದ್ಘಾಟನೆಗೊಂಡ ಸಂಸ್ಥೆಯೇ "**ಸಂಗೀತ ಗಂಗಾ**" ಇದರ ಬೆಳವಣಿಗೆಗೆ ಕೈಜೋಡಿಸಿದವರು ಎಚ್.ಫಲ್ಗುಣ, ಜೆ.ಮೋಹನ್, ಕಿಕ್ಕೇರಿಕೃಷ್ಣಮೂರ್ತಿ ಮುಂತಾದ ಕಲಾವಿದ ಗೆಳೆಯರು. ಸುಗಮ ಸಂಗೀತ, ಶಾಸ್ತ್ರೀಯ ಸಂಗೀತ ಹಾಗೂ ವಾದ್ಯ ಸಂಗೀತದಲ್ಲಿ ನೂರಾರು ಯುವ ಪ್ರತಿಭೆಗಳಿಗೆ ತರಬೇತಿ ನೀಡಿರುವ ಕೀರ್ತಿ ಈ ಸಂಸ್ಥೆಗೆ ಸಲ್ಲುತ್ತದೆ. ನಾಡಿನ ಖ್ಯಾತ ಕವಿಗಳ ಗೀತೆಗಳನ್ನೊಳಗೊಂಡ "**ಗೀತ ಸಂಪದ**" ಎಂಬ ಪುಸ್ತಕ ಮತ್ತು ಅದೇ ಹೆಸರಿನ ಧ್ವನಿಸುರುಳಿಯನ್ನು ಈ ಸಂಸ್ಥೆ ಹೊರ ತಂದಿದೆ. ಅಲ್ಲದೆ ಬೆಂಗಳೂರು, ಧಾರವಾಡ, ಗುಲ್ಬರ್ಗಾ ಹಾಗೂ ಚಿಕ್ಕಮಗಳೂರಿನಲ್ಲಿ ಒಟ್ಟು ಐದು **ಕನ್ನಡ ಸಂಗೀತ ಸಮ್ಮೇಳನ** ಗಳನ್ನು

ನಡೆಸಿರುವ ಸಂಗೀತ ಗಂಗಾ ೧೯೯೯ ರಲ್ಲಿ ಬೆಂಗಳೂರಿನ ಕೇಂದ್ರ ಕಾರಾಗೃಹದಲ್ಲಿ ಖೈದಿಗಳಿಗಾಗಿ ನಡೆಸಿಕೊಟ್ಟ "ಕಲಾವಿಕಾಸ" ಸಂಗೀತ ಕಮ್ಮಟ ಅತ್ಯಂತ ವಿಶಿಷ್ಟವಾದುದು. ಇವೆಲ್ಲದರ ಜೊತೆಗೆ ಉದಯೋನ್ಮುಖ ಕಲಾವಿದರಿಗಾಗಿ ರಾಜ್ಯ ಮಟ್ಟದ ಸಂಗೀತ ಸ್ಪರ್ಧೆಗಳನ್ನು ನಡೆಸಿದೆ. "ಸಂಗೀತ ಗಂಗಾ ವಾರ್ಷಿಕ ಪ್ರಶಸ್ತಿ"ಯನ್ನು ಸ್ಥಾಪಿಸಿ ಪು.ತಿ.ನ, ಆರ್.ಕೆ ಶ್ರೀಕಂಠನ್, ಪಿ.ಬಿ ಶ್ರೀನಿವಾಸ್, ವಿಜಯಭಾಸ್ಕರ್, ಜಿ.ಎಸ್.ಶಿವರುದ್ರಪ್ಪ, ಎಸ್.ಪಿ.ಬಾಲಸುಬ್ರಹ್ಮಣ್ಯ ಮುಂತಾದವರನ್ನು ಪುರಸ್ಕರಿಸಿದೆ. ಜಿ.ವಿ.ಅತ್ರಿಯವರ ಅಕಾಲಿಕ ಮರಣದ ನಂತರ ಅವರ ಸೋದರಿ ಗಾಯಕಿ ಹೇಮಾಪ್ರಸಾದ್ ಅವರು ಬೇರೆ ಬೇರೆ ಕಡೆ ಸಂಗೀತ ಗಂಗಾ ಸಂಸ್ಥೆಯ ಘಟಕಗಳನ್ನು ಪ್ರಾರಂಭಿಸಿ ಈ ಸಂಸ್ಥೆಯ ಚಟುವಟಿಕೆಗಳನ್ನು ಮುಂದುವರೆಸಿಕೊಂಡು ಹೋಗುತ್ತಿದ್ದಾರೆ.

೪) **ಆದರ್ಶ ಸುಗಮ ಸಂಗೀತ ಅಕಾಡೆಮಿ:** ಸಂಗೀತ ಗಂಗಾ ಸಂಸ್ಥೆಯಿಂದ ಕಾರಣಾಂತರದಿಂದ ಹೊರಬಂದ ಗಾಯಕ ಕಿಕ್ಕೇರಿಕೃಷ್ಣಮೂರ್ತಿ ಅವರ ಅಧ್ಯಕ್ಷತೆಯಲ್ಲಿ ೨೫-೮-೧೯೯೭ ರಲ್ಲಿ ಬೆಂಗಳೂರಿನ ಬಸವನಗುಡಿಯಲ್ಲಿ ಪ್ರಾರಂಭವಾದ ಸಂಸ್ಥೆಯೇ **"ಆದರ್ಶ ಸುಗಮ ಸಂಗೀತ ಅಕಾಡೆಮಿ"**. ಉದಯೋನ್ಮುಖ ಪ್ರತಿಭೆಗಳಿಗೆ ಸುಗಮ ಸಂಗೀತ ಗಾಯನ ಮತ್ತು ವಾದ್ಯ ವಾದನದಲ್ಲಿ ತರಬೇತಿ ನೀಡುತ್ತಾ ಬಂದಿದ್ದು, ಪ್ರತಿ ವರ್ಷ ಕನಿಷ್ಠ ೧೫೦ ರಿಂದ ೨೦೦ ಯುವ ಪ್ರತಿಭೆಗಳನ್ನು ಸಿದ್ಧಮಾಡುವ ಕೆಲಸವನ್ನು ಈ ಅಕಾಡೆಮಿ ಮಾಡುತ್ತಾ ಬಂದಿದೆ. ವಿಶೇಷವಾಗಿ ಪರಿಶಿಷ್ಟಜಾತಿ, ಪರಿಶಿಷ್ಟ ವರ್ಗ ಹಾಗೂ ಅಂಗ ವಿಕಲ ವಿದ್ಯಾರ್ಥಿಗಳಿಗೆ ಸುಗಮ ಸಂಗೀತದಲ್ಲಿ ಉಚಿತ ತರಬೇತಿ ನೀಡುವುದರ ಜೊತೆಗೆ ಉಚಿತವಾಗಿ ವಾದ್ಯ ಪರಿಕರಗಳನ್ನೂ ಕೂಡ ನೀಡುತ್ತಾ ಬಂದಿದೆ. ಇದರ ಜೊತೆಗೆ ಖ್ಯಾತ ಕವಿಗಳ ೧೭೫ ಭಾವಗೀತೆಗಳನ್ನೊಳಗೊಂಡ "ಗೀತಾಂಜಲಿ" ಸಂಕಲನದ ಪ್ರಕಟಣೆ ಮಾಡಿದೆ. ಡಾ.ಎಸ್.ಕೆ.ಕರೀಂಖಾನ್ ಅವರ ಹೆಸರಿನಲ್ಲಿ "ಜಾನಪದ ಶ್ರೀ" ಪ್ರಶಸ್ತಿಯೊಂದನ್ನು ಸ್ಥಾಪಿಸಿ ಎಚ್.ಆರ್.ಲೀಲಾವತಿ, ವೈ.ಕೆ.ಮುದ್ದುಕೃಷ್ಣ ಹಾಗೂ ಕವಿ ಡಾ.ಎನ್.ಎಸ್.ಲಕ್ಷ್ಮೀನಾರಾಯಣ ಭಟ್ಟ ಇವರನ್ನು ಪುರಸ್ಕರಿಸುವ ಕೆಲಸವನ್ನು ಕೂಡ ಈ ಸಂಸ್ಥೆ ಮಾಡಿದೆ. ಅಲ್ಲದೆ ಪ್ರತಿ ವರ್ಷ ಹಮ್ಮಿಕೊಳ್ಳುವ ವಾರ್ಷಿಕೋತ್ಸವ ಸಂದರ್ಭದಲ್ಲಿ ತರಬೇತಿ ಪಡೆದ ಕಲಾವಿದರಿಂದ ಕಾರ್ಯಕ್ರಮ ಏರ್ಪಡಿಸುವುದರ ಜೊತೆಗೆ ವಿವಿಧ ಕ್ಷೇತ್ರಗಳಲ್ಲಿ ಅನನ್ಯ ಸೇವೆ ಸಲ್ಲಿಸಿರುವ ಗಣ್ಯರಿಗೆ "ಆದರ್ಶ ಸಂಗೀತ ರತ್ನ" "ಆದರ್ಶ ಸಾಹಿತ್ಯ ರತ್ನ" ಆದರ್ಶ ಸಮಾಜ ರತ್ನ" ಆದರ್ಶ ಕಲಾ ರತ್ನ" ಪ್ರಶಸ್ತಿಗಳನ್ನು ನೀಡಿ ಗೌರವಿಸುತ್ತಾ ಬಂದಿದೆ. ಗಾಯಕಿ ವೃಂದಾ ಎಸ್.ರಾವ್, ಮ್ಯಾಂಡಲಿನ್ ವಾದಕ ಸತೀಶ್, ಡಿ.ರವಿ, ಸುರೇಶ್ ಮುಂತಾದವರ ದೊಡ್ಡ ಪಡೆಯೇ ಈ ಸಂಸ್ಥೆಯ ಬೆನ್ನಲುಬಾಗಿ ಕೆಲಸ ಮಾಡುತ್ತಿರವುದು ಉಲ್ಲೇಖಾರ್ಹ.

೫) ಉಪಾಸನಾ, ಬೆಂಗಳೂರು: ಸುಗಮ ಸಂಗೀತ ಕ್ಷೇತ್ರಕ್ಕೆ ಮತ್ತೊಂದು ಕೊಡುಗೆ "**ಉಪಾಸನಾ**" ಸುಗಮ ಸಂಗೀತ ಸಂಸ್ಥೆ. ಗಾಯಕ ಜೆ.ಮೋಹನ್ ಅವರು ಇದರ ಸ್ಥಾಪಕ ಅಧ್ಯಕ್ಷರು. ೧೯೯೯ ರ ಸುಮಾರಿನಲ್ಲಿ ಆರಂಭವಾದ ಈ ಸಂಸ್ಥೆ ಉದಯೋನ್ಮುಖ ಪ್ರತಿಭೆಗಳಿಗೆ ಸುಗಮ ಸಂಗೀತ ಗಾಯನ ಹಾಗೂ ವಾದ್ಯ ವಾದನದಲ್ಲಿ ತರಬೇತಿ ನೀಡುತ್ತಾ ಬಂದಿದೆ. ವಿಶೇಷವಾಗಿ ಕಾವ್ಯಗಾಯನ ಕ್ಷೇತ್ರಕ್ಕೆ ಮಕ್ಕಳನ್ನು ಪರಿಚಯಿಸಿ ಕೊಡುವ ಉತ್ತಮವಾದ ಕೆಲಸವನ್ನು ಉಪಾಸನಾ ಸಂಸ್ಥೆ ಮಾಡುತ್ತಾ ಬಂದಿರುವುದು ಶ್ಲಾಘನೀಯ. ನೂರಾರು ಮಕ್ಕಳಿಗೆ ತರಬೇತಿ ನೀಡಿ ವೇದಿಕೆ ಒದಗಿಸಿಕೊಡುವಂತಹ ಮಹತ್ವದ ಕೆಲಸವನ್ನು ಈ ಸಂಸ್ಥೆ ಮಾಡಿದೆ. ಬೆಂಗಳೂರಿನ ವಿವಿಧ ಬಡಾವಣೆ ಹಾಗೂ ಮಂಡ್ಯ ನಗರದಲ್ಲಿ ಈ ಸಂಸ್ಥೆ ನಡೆಸಿ ಕೊಂಡು ಬರುತ್ತಿರುವ "**ಮನೆಯಂಗಳದಲ್ಲಿ ಸುಗಮ ಸಂಗೀತ**" ಎಂಬ ಕಾರ್ಯಕ್ರಮ ನಿಜವಾಗಿಯೂ ಮನೆಮಾತಾಗಿದೆ. ಹಲವಾರು ಹಿರಿಯ ಹಾಗೂ ಕಿರಿಯ ಸುಗಮ ಸಂಗೀತ ಕಲಾವಿದರ ಮೂಲಕ ಮನೆಮನೆಗೆ ಸುಗಮ ಸಂಗೀತವನ್ನು ಕೊಂಡೊಯ್ಯುತ್ತಿರುವ ಕೀರ್ತಿ ಈ ಸಂಸ್ಥೆಗೆ ಸಲ್ಲುತ್ತದೆ. ಇದರ ಜೊತೆಗೆ ದಿ.ಜಿ.ವಿ.ಅತ್ರಿಯವರ ಹೆಸರಿನಲ್ಲಿ ಪ್ರಶಸ್ತಿಯೊಂದನ್ನು ಸ್ಥಾಪಿಸಿ ಯುವ ಸಂಗೀತ ನಿರ್ದೇಶಕರು ಮತ್ತು ಯುವ ಗಾಯಕ ಗಾಯಕಿಯನ್ನು ಗೌರವಿಸುತ್ತಿದೆ.

೬) ಆರಾಧನಾ ಸಂಗೀತ ಶಾಲೆ: ಖ್ಯಾತ ಸುಗಮ ಸಂಗೀತ, ಜಾನಪದ ಮತ್ತು ಚಲನ ಚಿತ್ರ ಹಿನ್ನಲೆ ಗಾಯಕಿ ಬಿ.ಕೆ.ಸುಮಿತ್ರ ಅವರಿಂದ ಸ್ಥಾಪಿತವಾದ ಸಂಸ್ಥೆ "**ಆರಾಧನಾ ಸಂಗೀತ ಶಾಲೆ**". ಕಳೆದ ಹಲವು ವರ್ಷಗಳಿಂದ ಚಿಕ್ಕಮಕ್ಕಳಿಂದ ಹಿಡಿದು ದೊಡ್ಡವರವರೆಗೆ ಸುಗಮ ಸಂಗೀತ ಮತ್ತು ಜಾನಪದ ಗಾಯನವನ್ನು ಅತ್ಯಂತ ಶಿಸ್ತುಬದ್ಧವಾಗಿ ಕಲಿಸಲಾಗುತ್ತಿದೆ. ಅಲ್ಲದೆ ಶ್ರೀಮತಿ.ಬಿ.ಕೆ.ಸುಮಿತ್ರ ಅವರು ಬೇರೆಬೇರೆ ಜಿಲ್ಲೆಗಳಲ್ಲಿ ಸುಗಮ ಸಂಗೀತ ತರಬೇತಿ ಶಿಬಿರಗಳನ್ನು ನಡೆಸಿ ಯುವ ಪ್ರತಿಭೆಗಳಿಗೆ ಪ್ರೋತ್ಸಾಹ ನೀಡುತ್ತಾ ಬಂದಿದ್ದಾರೆ. ಆರಾಧನಾ ಶಾಲೆಯಲ್ಲಿ ತರಬೇತಿ ಪಡೆದ ಪ್ರತಿಭೆಗಳು ಈಟಿವಿ ಯವರು ನಡೆಸುತ್ತಿರುವ "**ಎದೆ ತುಂಬಿ ಹಾಡುವೆನು**" ಹಾಗೂ ಝೀ ಕನ್ನಡ ನಡೆಸುತ್ತಿರುವ ಸಂಗೀತ ಸ್ಪರ್ಧೆಗಳಲ್ಲೂ ಕೂಡ ಭಾಗವಹಿಸಿರುವುದು ಒಂದು ವೈಶಿಷ್ಟ್ಯ.

೭) ಗಾನಸುಧಾ: ಗಾಯಕ ಸಂಯೋಜಕ ಎಸ್.ಸೋಮಸುಂದರಂ ಅವರಿಂದ ಸ್ಥಾಪಿತಗೊಂಡಿರುವ ಈ ಸಂಸ್ಥೆ ಕೆಲವು ವರ್ಷಗಳಿಂದ ಗಾಯನ ತರಬೇತಿಯನ್ನು ನೀಡುತ್ತಾ ಬಂದಿದೆ. ಸಮೂಹ ಗಾಯನದ ಕಾರ್ಯಕ್ರಮಗಳನ್ನು ಕೂಡ ಈ ಸಂಸ್ಥೆಯು ತನ್ನ ವಾರ್ಷಿಕೋತ್ಸವ ಸಂದರ್ಭದಲ್ಲಿ ತರಬೇತಿ ಪಡೆದ ಮಕ್ಕಳಿಂದ ಹಮ್ಮಿಕೊಳ್ಳುವ ಪರಿಪಾಠವನ್ನು ಇಟ್ಟುಕೊಂಡಿದೆ.

೮) **ವಿಕಸನ:** ಆಕಾಶವಾಣಿ ಕಲಾವಿದೆ ಹಾಗೂ ಖ್ಯಾತ ಸುಗಮ ಸಂಗೀತ ಗಾಯಕಿ ಮಾಲತಿ ಶರ್ಮಾ, ಡಾ.ಸುಧೀಂದ್ರಶರ್ಮಾ ಹಾಗೂ ಆರ್.ಟಿ.ಕುಲಕರ್ಣಿಯವರ ಸಮರ್ಥ ನೇತೃತ್ವದಲ್ಲಿ ಸ್ಥಾಪಿತವಾದ "ವಿಕಸನ" ಸಂಸ್ಥೆ ಸುಗಮ ಸಂಗೀತ ಕ್ಷೇತ್ರದಲ್ಲಿ ವಿನೂತನ ಹಾಗೂ ಮಹತ್ವದ ಕೆಲಸವನ್ನು ಮಾಡುತ್ತಾ ಬಂದಿದೆ. ಯುವ ಪ್ರತಿಭೆಗಳಿಗೆ ಸುಗಮ ಸಂಗೀತ ತರಬೇತಿ ನೀಡಿ ನಗರದ ವಿವಿಧ ಬಡಾವಣೆಗಳಲ್ಲಿ ತರಬೇತಿ ಹೊಂದಿದ ಪ್ರತಿಭೆಗಳಿಂದ ಗಾಯನ ಕಾರ್ಯಕ್ರಮ ಹಮ್ಮಿಕೊಳ್ಳುವ ಅಪರೂಪದ ಕೆಲಸವನ್ನು ಈ ಸಂಸ್ಥೆ ಮಾಡುತ್ತಾ ಬಂದಿದೆ. ಈ ಮೂಲಕ ಕಾವ್ಯಗಾಯನದ ಸದಭಿರುಚಿಯನ್ನು ಸಂಗೀತಾಭಿಮಾನಿಗಳಿಗೆ ಪರಿಚಯ ಮಾಡಿಕೊಡಲಾಗುತ್ತಿದೆ.

೯) **ಮೈಸೂರು ಅನಂತಸ್ವಾಮಿ ಸುಗಮ ಸಂಗೀತ ಅಕಾಡೆಮಿ, ಮೈಸೂರು:** ಸುಗಮ ಸಂಗೀತ ಕ್ಷೇತ್ರಕ್ಕೆ ಹೊಸ ಭಾಷ್ಯವನ್ನು ಬರೆದ ಸುಗಮ ಸಂಗೀತ ದೊರೆ, ಪಿತಾಮಹರುಗಳಲ್ಲಿ ಒಬ್ಬರೆನಿಸಿಕೊಂಡಿರುವ ದಿ। ಮೈಸೂರು ಅನಂತಸ್ವಾಮಿಯವರ ಹೆಸರಿನಲ್ಲಿ ಅವರ ಪುತ್ರ ಜನಪ್ರಿಯ ಗಾಯಕ ಸಂಯೋಜಕ ರಾಜು ಅನಂತಸ್ವಾಮಿಯವರು ಸ್ಥಾಪಿಸಿರುವ ಈ ಸಂಸ್ಥೆಯು ಯುವಪ್ರತಿಭೆಗಳಿಗೆ ತರಬೇತಿ ನೀಡಿ ನೂರಾರು ಗಾಯಕ ಗಾಯಕಿಯರಿಗೆ ವೇದಿಕೆಯನ್ನು ಕಲ್ಪಿಸಿಕೊಡುತ್ತಿದೆ. ಹಲವು ಹಿರಿಯ ಸಂಗೀತ ನಿರ್ದೇಶಕರುಗಳನ್ನು ಬರಮಾಡಿಕೊಂಡು ಅವರ ಮೂಲಕ ತರಬೇತಿ ಶಿಬಿರಗಳನ್ನು ಕೂಡ ಇಲ್ಲಿ ನಡೆಸಲಾಗುತ್ತಿದೆ. ಈ ನಿಟ್ಟಿನಲ್ಲಿ ಅನಂತಸ್ವಾಮಿಯವರ ಪರಂಪರೆಯನ್ನು ಮುಂದುವರೆಸಿಕೊಂಡು ಹೋಗುತ್ತಿದೆ.

೧೦) **ಸಂಗೀತ ಧಾಮ, ಬೆಂಗಳೂರು:** ಆಧುನಿಕ ಯುಗದ ಆಸಕ್ತ ಸಂಗೀತಾಭಿಮಾನಿಗಳ ಅವಶ್ಯಕತೆಯನ್ನು ಗಮನದಲ್ಲಿಟ್ಟುಕೊಂಡು ಕಲಾವಿದ ಮೃತ್ಯುಂಜಯ ದೊಡ್ಡವಾಡರವರು ಏಪ್ರಿಲ್ ೩, ೨೦೦೩ರಲ್ಲಿ **"ಸಂಗೀತಧಾಮ"** ಸಂಸ್ಥೆಯನ್ನು ಸ್ಥಾಪಿಸಿದರು. ವಿವಿಧ ಸಂಗೀತ ಪ್ರಕಾರಗಳನ್ನು ಗಮನದಲ್ಲಿಟ್ಟುಕೊಂಡು ಸುಗಮ ಸಂಗೀತ ಕಲಿಕೆಗೆ ಅನುಕೂಲವಾಗುವಂತೆ ಪಠ್ಯಕ್ರಮವನ್ನು ಸಿದ್ಧಪಡಿಸಿ ಶಿಸ್ತುಬದ್ಧವಾದ ತರಬೇತಿ ನೀಡುತ್ತಿರುವ ಏಕೈಕ ಸಂಸ್ಥೆಯೆಂದೆ ಹೇಳಬಹುದು. ಸುಗಮ ಸಂಗೀತ ಗಾಯನಕ್ಕೆ ಪೂರಕವಾಗಿ ಗಾಯನದ ಜೊತೆಗೆ ಕೀಬೋರ್ಡ್, ತಬಲ, ಕೊಳಲು, ರಿದಮ್ ಪ್ಯಾಡ್, ಪಿಟೀಲು ಹಾಗೂ ವೀಣಾ ವಾದನದಲ್ಲಿ ತರಬೇತಿ ನೀಡಲಾಗುತ್ತಿದೆ. ಅಲ್ಲದೆ ತರಬೇತಿ ಪಡೆದ ವಿದ್ಯಾರ್ಥಿಗಳಿಗೆ ಸೂಕ್ತ ವೇದಿಕೆ, ಸ್ಪರ್ಧೆಗಳು ಹಾಗೂ ತನ್ನದೇ ತಂಡವನ್ನು ಕಟ್ಟಿಕೊಂಡು "ಭಾವ ಗಾನ ವೈಭವ" ಎಂಬ ಕಾರ್ಯಕ್ರಮದಡಿ ಸುಗಮ ಸಂಗೀತ ಅಭಿಯಾನವನ್ನು ಆರಂಭಿಸಿ ರಾಜ್ಯ ಮತ್ತು ಹೊರ ರಾಜ್ಯಗಳಲ್ಲಿ ಕಾರ್ಯಕ್ರಮಗಳನ್ನು ನೀಡುತ್ತಾ ಬಂದಿದೆ. ಜೊತೆಗೆ ಸಂಗೀತ ಕ್ಷೇತ್ರದ ಸಾಧಕರಿಗೆ **"ಸಂಗೀತ ಕಲಾ ಕೌಸ್ತುಭ"** ಎಂಬ ಬಿರುದನ್ನು ನೀಡುವ ಸಂಪ್ರದಾಯವನ್ನು ಕೂಡ ಹಾಕಿಕೊಂಡಿದೆ.

ಬೆಂಗಳೂರಿನಲ್ಲಿರುವ ಸುಗಮ ಸಂಗೀತ ಕೇಂದ್ರ, ಎಸ್.ಬಾಲಿಯವರ ರಮ್ಯ ಕಲ್ಚರಲ್ ಅಕಾಡೆಮಿ, ಗಾಯಕ ಎಚ್. ಫಲ್ಗುಣರಿಂದ ಸ್ಥಾಪನೆಯಾದ (೧೯೯೫ರಲ್ಲಿ) ಹೊಂಬಾಳೆ ಪ್ರತಿಭಾರಂಗ, ಗಾಯಕ ಶ್ರೀಧರ್ ಅಯ್ಯರ್‌ರಿಂದ ಆರಂಭವಾದ (೨೦೦೪ರಲ್ಲಿ) "ಸ್ವರಸುರಭಿ" – ಈ ಎಲ್ಲಾ ಸುಗಮಸಂಗೀತ ಸಂಸ್ಥೆಗಳು ಶ್ಲಾಘನೀಯವಾದ ಕಾರ್ಯವನ್ನು ನಿರ್ವಹಿಸತ್ತಿವೆ.

ಈ ಮೇಲಿನ ಸಂಸ್ಥೆಗಳಲ್ಲದೆ ಇನ್ನೂ ಹಲವಾರು ಸುಗಮ ಸಂಗೀತ ಕ್ಷೇತ್ರದ ಪ್ರಮುಖರು ಸುಗಮ ಸಂಗೀತ ಕ್ಷೇತ್ರದ ಬೆಳವಣಿಗೆಗಾಗಿ ಶ್ರಮಿಸಿರುತ್ತಾರೆ. ಮೈಸೂರಿನಲ್ಲಿ ಖ್ಯಾತ ಗಾಯಕಿ ಎಸ್.ಕೆ. ವಸುಮತಿ, ದಿ. ಮಡಿಕೇರಿ ನಾಗೇಂದ್ರ, ಬೆಳಗಾವಿಯಲ್ಲಿ ಶಿರೀಷ್ ಜೋಷಿಯವರು, ಧಾರವಾಡದಲ್ಲಿ ಈಶ್ವರಪ್ಪ ಮಿಣಜಿಯವರು, ಬೆಂಗಳೂರಿನಲ್ಲಿ ಖ್ಯಾತ ಗಾಯಕಿ ಶೀಮತಿ ರತ್ನಮಾಲಾ ಪ್ರಕಾಶ್, ಶಂಕರ್ ಶಾನುಭಾಗ್ ಇನ್ನೂ ಮುಂತಾದವರು ತರಬೇತಿಗಳನ್ನು ನಡೆಸುವುದರ ಮೂಲಕ ಸುಗಮ ಸಂಗೀತ ಕ್ಷೇತ್ರಕ್ಕೆ ನೂರಾರು ಪ್ರತಿಭೆಗಳನ್ನು ಪರಿಚಯಿಸುವ ಕೆಲಸ ಮಾಡುತ್ತಾ ಇದ್ದಾರೆ.

◆

ಡಾ। ಗಿರಿಧರಶಾಸ್ತ್ರಿಗಳ ಪ್ರೌಢ ಪ್ರಬಂಧ ಒಂದು ಅವಲೋಕನ

– ಸ.ಗಿರಿಜಾಶಂಕರ, ಚಿಕ್ಕಮಗಳೂರು
ಪತ್ರಕರ್ತರು, ೯೪೪೮೧೩೨೭೯೬ sargur51@gmail.com

ಮೊಗಲರ ನಂತರ ಬ್ರಿಟಿಷರ ಧಾಳಿಯಿಂದ ಭಾರತೀಯ ಸಮಾಜದಲ್ಲಾದ ಬದಲಾವಣೆ, ದೇಶದಲ್ಲಾದ ರಾಷ್ಟ್ರೀಯ ಚಳುವಳಿ, ನಗರೀಕರಣ, ಪಾಶ್ಚಿಮಾತ್ಯೀಕರಣ ಮತ್ತು ಸಾಂಸ್ಕೃತಿಕತೆಗಳ ಹಿನ್ನೆಲೆಯಲ್ಲಿ ಆದ ಪರಿವರ್ತನೆಗಳನ್ನು ಅನೇಕ ಕನ್ನಡ ಕಾದಂಬರಿಗಳು ಚಿತ್ರಿಸಿವೆ. ವಸಾಹತುಶಾಹಿ ತಂದ ಈ ಬದಲಾವಣೆ, ಅದರಿಂದ ಉಂಟಾದ ಸಾಮಾಜಿಕ ಪಲ್ಲಟಗಳನ್ನು ಹಿಡಿದಿಟ್ಟಿವೆ. ಈ ಹಿನ್ನೆಲೆಯಲ್ಲಿ ಶೃಂಗೇರಿ ಶ್ರೀ ಜೆ.ಸಿ.ಬಿ.ಎಂ.ಕಾಲೇಜಿನ ಆಂಗ್ಲಭಾಷಾ ಪ್ರಾಧ್ಯಾಪಕ ಡಾ.ಸಿ.ವಿ.ಗಿರಿಧರ ಶಾಸ್ತ್ರಿಗಳು ತಮ್ಮ ಪಿ.ಹೆಚ್.ಡಿ ಪ್ರೌಢ ಪ್ರಬಂಧ "ಕನ್ನಡ ಕಾದಂಬರಿಗಳಲ್ಲಿ ಪೆಡಸುತನ ಮತ್ತು ವೇದನೆ" ಮೂಲಕ ಆಗಿನ ಸಮಾಜದಲ್ಲಾದ ಬದಲಾವಣೆಗಳನ್ನು ಅತ್ಯುತ್ತಮವಾಗಿ ವಿಶ್ಲೇಷಣೆ ಮತ್ತು ಸಂಶ್ಲೇಷಣೆಗಳ ಮೂಲಕ ಗುರುತಿಸಿದ್ದಾರೆ.

ಡಾ.ಗಿರಿಧರ ಶಾಸ್ತ್ರಿಗಳು ತಮ್ಮ ಡಾಕ್ಟರೇಟ್ ಪ್ರಬಂಧದಲ್ಲಿ ಕನ್ನಡದ ಆರು ಪ್ರಮುಖ ಕಾದಂಬರಿಗಳನ್ನು ಆಯ್ಕೆ ಮಾಡಿಕೊಂಡು ಮುಖ್ಯವಾಗಿ "ಪೆಡಸುತನ ಮತ್ತು ವೇದನೆ"ಯ ಹಿನ್ನೆಲೆಯಲ್ಲಿ ಪೆಡಸುಗಟ್ಟಿದ ಸಮಾಜದಲ್ಲಾಗುವ ನೋವು, ಆನಂತರ ಬಿಡುಗಡೆಯ ದಾರಿ ಕಂಡುಕೊಳ್ಳುವುದಕ್ಕೆ ನಡೆಯುವ ಪ್ರಯತ್ನಗಳನ್ನು ವಿಶ್ಲೇಷಿಸಿದ್ದಾರೆ. ಕುವೆಂಪು ಅವರ **"ಕಾನೂರು ಹೆಗ್ಗಡತಿ"**, ಶಿವರಾಮ ಕಾರಂತರ **"ಮರಳಿ ಮಣ್ಣಿಗೆ"**, ಮತ್ತು **"ಕುಡಿಯರ ಕೂಸು"**, ರಾವ್ ಬಹದ್ದೂರರ **"ಗ್ರಾಮಾಯಣ"**, ಯು.ಆರ್. ಅನಂತಮೂರ್ತಿ ಅವರ **"ಭಾರತೀಪುರ"** ಹಾಗೂ ಆಲನಹಳ್ಳಿ ಕೃಷ್ಣ ಅವರ **"ಭುಜಂಗಯ್ಯನ ದಶಾವತಾರ"** (ಎಲ್ಲವೂ ಇಂಗ್ಲೀಷ್ ಅನುವಾದದಲ್ಲಿ) ಕಾದಂಬರಿಗಳನ್ನು ಶಾಸ್ತ್ರಿಗಳು "The Sclerosis and Suffering: A Study of Select Kannada Novels in English Translation" ಎಂಬ ಶೀರ್ಷಿಕೆಯನ್ನು ತಮ್ಮ ಅಧ್ಯಯನಕ್ಕೆ ಆರಿಸಿಕೊಂಡಿದ್ದಾರೆ.

ಸಂಶೋಧನೆಗೆ ಆಯ್ದುಕೊಂಡ ಕೃತಿಗಳಲ್ಲಿ ಪೆಡಸುತನ ಮತ್ತು ವೇದನೆಗಳು ಯಾವ ರೀತಿ ಬದಲಾವಣೆಗೆ ಪಥ ನಿರ್ಮಿಸುತ್ತವೆ, ಪೆಡಸುಗಟ್ಟಲು ಪ್ರಧಾನ ಅಂಶವಾದ

ಅತ್ಯಂತ ಸಮೃದ್ಧ ಸಂಸ್ಕೃತಿ ಮತ್ತು ಪರಂಪರೆ ಹಾಗೂ ಸಮಾಜದ ಹಲವು ಸಮುದಾಯದ ನಡುವೆ ಎದ್ದ ಕಂದಕ ಮತ್ತು ಸಂಸ್ಕೃತಿ-ಸಂಪ್ರದಾಯಗಳನ್ನು ತಿರುಚಿ ವಿಶ್ಲೇಷಿಸಿದ್ದನ್ನು ಈ ಕೃತಿಗಳು ಸ್ಪಷ್ಟಪಡಿಸಿ ನಿಚ್ಚಳವಾಗಿಸುವುದು ಈ ಪ್ರಬಂಧದ ಉದ್ದೇಶವಾಗಿದೆ, ಹಾಗೆಯೇ ಈ ಕೃತಿಗಳು ಕೆಲವು ಮಾನವೀಯ ಮೌಲ್ಯಗಳು ನಿರಂತರ ಬದಲಾವಣೆಯ ಪ್ರಕ್ರಿಯೆಯಲ್ಲೂ ಬದಲಾಗದೆ ಸ್ಥಾಯಿಯಾಗಿ ಉಳಿಯುವುದನ್ನು ಎತ್ತಿ ಹೇಳುತ್ತವೆ.

ಡಾಕ್ಟರೇಟ್ ಪ್ರಬಂಧಕ್ಕೆ ಆಯ್ಕೆ ಮಾಡಿಕೊಂಡಿರುವ ಐದು ಜನ ಸಾಹಿತಿಗಳ ಕೃತಿಗಳಲ್ಲಿ ನಾಲ್ಕು ಸ್ವಾತ್ರಂತ್ಯಪೂರ್ವದ ಸಾಮಾಜಿಕ ಪರಿಸ್ಥಿತಿಯತ್ತ ಬೆಳಕು ಚೆಲ್ಲಿದರೆ, ಆಲನಹಳ್ಳಿ ಅವರ ಕೃತಿ ಸ್ವಾತ್ರಂತ್ಯದ ನಂತರದ್ದಾಗಿದೆ. ಅಕ್ಷರಕ್ಕೆ ಮೊದಲ ಬಾರಿಗೆ ಮುಖಾಮುಖಿಯಾದ ಬಹುಸಂಖ್ಯಾತರಲ್ಲಿ ಮೂಡಿದ ಅರಿವಿನ ಸ್ಫೋಟ, ಆ ಮೂಲಕ ಆವರೆಗೆ ಪ್ರಚಲಿತವಾಗಿದ್ದ ರೂಢಿಗತ ಮೌಲ್ಯಗಳನ್ನು ಪ್ರಶ್ನಿಸುವ ಅಥವಾ ಅನುಮಾನಿಸುವ ಮನಸ್ಸುಗಳು ರೂಪುಗೊಳ್ಳುತ್ತಾ ಸಮಾಜಕ್ಕಂಟಿದ ಪೆಡಸುತನವನ್ನು ನಿವಾರಿಸುವ ಪ್ರಕ್ರಿಯೆಗೆ ಚಾಲನೆ ದೊರಕಲು ಆರಂಭವಾಗಿರುವುದರ ವಿಶ್ಲೇಷಣೆ ಇಲ್ಲಿ ಮುಖ್ಯವಾಗಿದೆ.

"ಪೆಡಸುತನ"ವನ್ನು ವಿಶ್ಲೇಷಿಸುವಾಗ ಗಿರಿಧರಶಾಸ್ತ್ರಿಗಳು ಅದನ್ನು ವಿವರಿಸುತ್ತಾ, ದೇಹಕ್ಕೆ ಪೆಡಸುತನ ಬಡಿದಾಗ ಅತ್ಯಂತ ಕ್ರಿಯಾಶೀಲವಾಗಿದ್ದ ಜೀವಕೋಶ ಕಠಿಣವಾಗುತ್ತದೆ, ರಕ್ತನಾಳಗಳು ಕಟ್ಟಿಕೊಳ್ಳುತ್ತವೆ, ಆ ಮೂಲಕ ದೇಹ ಯಾತನೆ ಅನುಭವಿಸುವುದು ಅನಿವಾರ್ಯವಾಗುತ್ತದೆ. ಆದರೆ ಕೆಲವು ಸಂಪ್ರದಾಯ, ಆಚರಣೆಗಳಿಂದ ಸಮಾಜ ಜಡ್ಡುಗಟ್ಟಿದರೆ, ನಿಂತ ನೀರಾದರೆ, ಈ ಪೆಡಸುತನವನ್ನು ನಿವಾರಿಸಿ, ಮೃದುವಾಗಿಸಲು ಆ ಜಡ್ಡುಗಟ್ಟಿದ ವ್ಯವಸ್ಥೆಯಲ್ಲೇ ಒಂದು ಹೊಸದಾರಿ ಅಥವಾ ಒಬ್ಬ ವ್ಯಕ್ತಿ ಇದಕ್ಕೆ ಮುಂದಾಗಬೇಕಾಗುತ್ತದೆ. ಈ ರೀತಿ ಜಡ್ಡು ಹಿಡಿದ ಬದಲಾವಣೆಯ ದಾರಿಗಳು ಮುಚ್ಚಿತು ಎನಿಸಿದಾಗ ಹೊಸತೊಂದು ಮಾರ್ಗನಿರ್ಮಾಪಕರ ಆಗಮನ ಆಗಲೇ ಬೇಕು. ಇದು ಎಲ್ಲಾ ಕಾಲದಲ್ಲೂ ಆಗಿದೆ. ಈ ರೀತಿ ಆರೋಗ್ಯಕರ ಪಥವನ್ನು ಮುಚ್ಚುವ-ಬಿಚ್ಚುವ ಕೆಲಸ ಆಗಾಗ ವ್ಯಕ್ತಿಯಿಂದ, ಆಂದೋಲನಗಳಿಂದ ನಡೆಯುತ್ತಲೇ ಬಂದಿದೆ ಎಂದು ವಿಶ್ಲೇಷಿಸುತ್ತಾರೆ. ಈ ಆರು ಕಾದಂಬರಿಗಳಲ್ಲಿ ಪೆಡಸುತನ ಕರಗಿಸುವ ಪ್ರಕ್ರಿಯೆಗೆ ಚಾಲನೆ ಕೊಡುವ ಸಹಜ ಪಾತ್ರಗಳು ಕಂಡು ಬರುತ್ತವೆ. ಕಾನೂರು ಹೆಗ್ಗಡತಿಯ ಹೂವಯ್ಯ, ಮರಳಿಮಣ್ಣಿಗೆಯ ರಾಮ, ಭಾರತೀಪುರದ ಜಗನ್ನಾಥ, ಗ್ರಾಮಾಯಣದ ದಾದಾ ಆ ರೀತಿ ಬದಲಾವಣೆ ಬಯಸುವವರಾಗಿ ಕಂಡು ಬಂದರೆ, ಆಧುನಿಕ ಬದುಕಿನಲ್ಲೂ ಮೌಢ್ಯದ ಸ್ಥಿತಿಯಲ್ಲಿರುವ ಗ್ರಾಮಕ್ಕೆ ಹೊಸತನ್ನು ಪರಿಚಯಿಸಿ ಪಾಲಿಸುವವನಾಗಿ ಭುಜಂಗಯ್ಯ **ಭುಜಂಗಯ್ಯನ ದಶಾವತಾರದಲ್ಲಿ** ಕಂಡು ಬರುತ್ತಾನೆ. ಈ ಆರು

ಕಾದಂಬರಿಗಳು ಗ್ರಾಮ ಬದುಕಿನತ್ತ ಬೀಸಿದ ಬದಲಾವಣೆಯ ಮೇಲೆ ಬೆಳಕು ಚೆಲ್ಲಿದರೆ, **ಕುಡಿಯರಕೂಸು**ವಿನಲ್ಲಿ ಗಿರಿಜನರ ಬದುಕಿನಲ್ಲಾಗುವ ಪಲ್ಲಟಗಳ ಮಧ್ಯೆ ಪಟ್ಟಭದ್ರಹಿತಾಸಕ್ತಿಗಳಿಂದ ಹಾಡಿಯನ್ನು ರಕ್ಷಿಸುವಲ್ಲಿ ಕರಿಯನ ಪಾತ್ರ ಮುಖ್ಯವಾಗಿದೆ.

"ಪೆಡಸುತನ ಮತ್ತು ವೇದನೆ" ಎಲ್ಲಾ ಕಾಲಘಟ್ಟದಲ್ಲೂ ನುಸುಳುತ್ತವೆ. ಒಂದು ಸಮಾಜದಲ್ಲಿ ಬದಲಾವಣೆ ಬರುವಾಗ ಇದೊಂದು ರೀತಿ ಅನಿವಾರ್ಯ ಸ್ಥಿತಿಯೂ ಆಗಬಹುದು. ಶಾಸ್ತ್ರಿಗಳು ತಮ್ಮ ಪ್ರಬಂಧದಲ್ಲಿ ಹೇಳುವಂತೆ ಮನುಷ್ಯ ಸಮಾಜದ ಒಂದು ಸ್ವಾಭಾವಿಕ ಗುಣ ಈ "ಪೆಡಸುತನ". ಭಾರತೀಯ ಸಮಾಜದ ಸಂಕೀರ್ಣತೆ ಮತ್ತು ನಿಹಾರಿಕಾ ಪ್ರವೃತ್ತಿಯನ್ನು ನೋಡಿದಾಗ ಸಾಮಾಜಿಕ ಬದಲಾವಣೆ ಎಂಬುದನ್ನು ನಿರ್ದಿಷ್ಟವಾಗಿ ವಿವರಿಸಲು ಕಷ್ಟಸಾಧ್ಯ ಎನ್ನುತ್ತಾರೆ. ಪ್ರಬಂಧದಲ್ಲಿ ವಿವಿಧ ರೀತಿ ಸಾಮಾಜಿಕ ಬದಲಾವಣೆ ತರುವ ತಜ್ಞರ ಆಲೋಚನೆಗಳನ್ನು ಹೇಳಲಾಗಿದೆ. ಜ್ಞಾನವನ್ನು ಸಾರ್ವತ್ರಿಕವಾಗಿಸುವ ಮೂಲಕ, ಆರ್ಥಿಕ ಕಾರಣದಿಂದ ಒಮ್ಮೆ ಬದಲಾವಣೆಯ ತುರಿಯಾವಸ್ಥೆ ಮುಟ್ಟಿ ನಂತರ ಆರಂಭವಾಗುವ ಇಳಿಮುಖ, ನಿಧಾನ ಬದಲಾವಣೆಗಳ ಉಲ್ಲೇಖವಿದೆ. ಆದರೆ ಗಿರಿಧರಶಾಸ್ತ್ರಿಗಳ ಪ್ರಕಾರ ಭಾರತೀಯರ ಯುಗ ಸಿದ್ಧಾಂತ ಒಂದು ರೀತಿಯ ಚಕ್ರೀಯ ಬದಲಾವಣೆಯನ್ನು ವಿವರಿಸುತ್ತದೆ. ಕಾಲಚಕ್ರ ಸದಾ ತಿರುಗುತ್ತದೆ. ಯುಗ ಸಿದ್ಧಾಂತದ ಪ್ರಕಾರ ಬದಲಾವಣೆ ಹಂತ ಹಂತಗಳಲ್ಲಾಗುತ್ತದೆ. ಚಕ್ರ ಮೇಲಕ್ಕೆ ಹೋಗಿ ಕೆಳಕ್ಕೆ ಬರುತ್ತದೆ. ಶಾಸ್ತ್ರಿಗಳು ಇದಕ್ಕೆ ಸತ್ಯ, ತ್ರೇತಾ, ದ್ವಾಪರ ಮತ್ತು ಪ್ರಸ್ತುತ ಕಲಿಯುಗದ ಉದಾಹರಣೆ ನೀಡುತ್ತಾರೆ. ಸತ್ಯ ಯುಗದ ಮಹತ್ತರ ಬದುಕು ನಂತರದ ಯುಗಗಳಲ್ಲಿ ಅಧೋಮುಖವಾಗುತ್ತಾ ಬಂದು ಕಲಿಯುಗದಲ್ಲಿ ತೀರಾ ಕುಸಿತ ಕಾಣುತ್ತಿರುವುದನ್ನು ಮುಂದಿಡುತ್ತಾರೆ. ಟಾಯನ್ಬಿ ಮತ್ತು ಪಿತ್ರಿಮ್ ಸೋರೆಕಿನ್ ಹೇಳುವಂತೆ, ನಾಗರಿಕತೆ ವಿವಿಧ ಹಂತಗಳಲ್ಲಿ ಬೆಳೆದು, ಮುಂದುವರೆದು ಪಕ್ವವಾಗಿ ನಂತರ ಅದರ ಇಳಿತ ಆರಂಭವಾಗುವುದನ್ನು ವಿವರಿಸಿ, ತಮ್ಮ ಪ್ರಬಂಧದ ವಸ್ತು ಮತ್ತು ವಿಷಯವನ್ನು ಪುಷ್ಟೀಕರಿಸುತ್ತಾರೆ.

ಪ್ರಬಂಧಕ್ಕೆ ಆಯ್ಕೆ ಮಾಡಿಕೊಂಡಿರುವ ಎಲ್ಲಾ ಕಾದಂಬರಿಗಳಲ್ಲೂ ಪಾಶ್ಚಿಮಾತ್ಯ ಆಕರ್ಷಣೆಗೆ ಒಳಗಾಗಿ ಮೊದಲು ದೇಶೀಯ ಸಂಸ್ಕೃತಿ, ಸಂಪ್ರದಾಯಗಳನ್ನು ತಿರಸ್ಕರಿಸುವ ಮತ್ತೆ ವಿಮರ್ಶೆ, ವಿಶ್ಲೇಷಣೆಗಳಿಂದ ದೇಶೀಯ ಚಿಂತನೆ, ಮೌಲ್ಯಗಳ ಪುನರ್‌ಶೋಧಕ್ಕೆ ಹೊರಡುವುದನ್ನು ಕಾಣುತ್ತೇವೆ. ಬಹುಶಃ ಸಮಾಜದಲ್ಲಿ ಇದೊಂದು ಸಹಜ ಕ್ರಿಯೆ, ಏಕೆಂದರೆ ಸಮಾಜವೇ ಒಂದು ರೀತಿ ಸಾವಯವ ಮತ್ತು ಕ್ರಿಯಾಶೀಲ. ಅದು ಸದಾ ಬದಲಾವಣೆ ಬಯಸುತ್ತದೆ ಎಂಬ ಶಾಸ್ತ್ರಿಗಳ ಅಭಿಪ್ರಾಯ ಒಪ್ಪುವಂತಹದ್ದು.

ಡಾ. ಶಾಸ್ತ್ರಿ ಅವರು ಆಯ್ಕೆ ಮಾಡಿಕೊಂಡಿರುವ ಆರು ಕಾದಂಬರಿಗಳಲ್ಲಿ ಹಲವಾರು ರೀತಿಯ ಸಾಮ್ಯತೆಗಳಿವೆ. ಒಂದು ನಿರ್ದಿಷ್ಟ ಕಾಲ ಮತ್ತು ದೇಶ ಸಮಾಜವನ್ನು ಕಟ್ಟಿ ಕೊಡುತ್ತವೆ. ಈ ಅಂಶವನ್ನು ಪ್ರಮುಖವಾಗಿಸಿಕೊಂಡೇ ಮಹಾ ಪ್ರಬಂಧ ರಚಿಸಲಾಗಿದೆ. ಈ ಆರೂ ಕಾದಂಬರಿಗಳಲ್ಲಿ ಚಿತ್ರಿತವಾಗಿರುವುದು ಗ್ರಾಮೀಣ ಸಮಾಜ, ಅದರ ಸ್ಥಿತ್ಯಂತರ. ಗ್ರಾಮ ಭೂಯಿಷ್ಠ ಭಾರತದಲ್ಲಿ ಬದಲಾವಣೆ ಮಂದಗತಿಯಲ್ಲೇ ಸಾಗುತ್ತದೆ, ಮನ್ವಂತರದ ಸ್ಥಿತಿಯನ್ನೂ ಕಾಣಬಹುದು. ಹೊಸದಕ್ಕೆ ಒಡ್ಡಿಕೊಳ್ಳುತ್ತಾ ಹಳೆಯದನ್ನು ಪೂರ್ಣವಾಗಿ ನಿರಾಕರಿಸಲೊಪ್ಪದ ಸಂದಿಗ್ಧತೆಗಳನ್ನು ಪ್ರಬಂಧ ಸ್ಪಷ್ಟವಾಗಿ ದಾಖಲಿಸಿದೆ.

ಗ್ರಾಮೀಣ ಸಮಾಜದ ಲಕ್ಷಣಗಳಾದ ಪರಿಸರ, ಸಾಂಪ್ರದಾಯಕತೆ, ಸಾಂಸ್ಕೃತಿಕ ನಿರ್ದಿಷ್ಟತೆಗಳ ವಿಶ್ಲೇಷಣೆ ಅರ್ಥಪೂರ್ಣವಾಗಿದೆ. ಮಲೆನಾಡು, ಕರಾವಳಿ, ಬಯಲುಸೀಮೆ ಈ ರೀತಿ ಭಿನ್ನ ಪ್ರಾದೇಶಿಕತೆಯ ಸೊಗಡಿನ ಭೂಮಿಕೆಯಲ್ಲಿ ನಡೆಯುವ ವಿದ್ಯಮಾನಗಳು, ಆಯಾ ಪ್ರದೇಶದಲ್ಲಿರುವ ಸಾಮಾಜಿಕ, ಆರ್ಥಿಕಸ್ಥಿತಿ, ಸಂಕಷ್ಟ ಪೆಡಸುಗಟ್ಟಿದ ಆ ಸಮಾಜಗಳೊಳಗೆ ನುಸುಳಿದ ಹೊಸಗಾಳಿಗೆ ನಿಧಾನವಾಗಿ ತೆರೆದುಕೊಳ್ಳುವ ಮನಸ್ಸುಗಳು, ಹೊರಗಿನ ಶಕ್ತಿಗಳ ಪ್ರವೇಶ, ಅವು ಉಂಟು ಮಾಡುವ ಪಲ್ಲಟಗಳನ್ನು ಪ್ರಬಂಧದಲ್ಲಿ ಅತ್ಯಂತ ಸಂಕೀರ್ಣವಾಗಿ ವಿಶ್ಲೇಷಿಸಲಾಗಿದೆ. ವಿಶೇಷವೆಂದರೆ ಈ ಎಲ್ಲಾ ಕಾದಂಬರಿಗಳಲ್ಲೂ ಬದಲಾವಣೆ ಬಯಸುವ ಪಾತ್ರಗಳು ತಮ್ಮ ಬೇರುಗಳನ್ನು ತಡಕಲು ತಮ್ಮ ಮೂಲ ಪರಿಸರಕ್ಕೆ ಹಿಂತಿರುಗುವುದು. **ಕಾನೂರು ಹೆಗ್ಗಡತಿಯ** ಹೂವಯ್ಯ, **ಮರಳಿ ಮಣ್ಣಿಗೆಯ** ರಾಮು, **ಕುಡಿಯರ ಕೂಸಿನ** ಕರಿಯ, **ಭಾರತೀಪುರದ** ಜಗನ್ನಾಥ, **ಗ್ರಾಮಾಯಣದ** ದಾದ, **ಭುಜಂಗಯ್ಯನ ದಶಾವತಾರದ** ಭುಜಂಗಯ್ಯ ಈ ರೀತಿ ಈ ಎಲ್ಲಾ ಪಾತ್ರಗಳು ಜಡ್ಡುಗಟ್ಟಿದ ಸಮಾಜದಲ್ಲಿ ಮತ್ತೆ ಹೊಸರಕ್ತ ಹರಿಸುವ ಯತ್ನಕ್ಕೆ ಮುಂದಾಗುತ್ತವೆ. ಇದೇ ಪ್ರಬಂಧದ ಮುಖ್ಯ ಆಶಯ ಸಹ.

ಪ್ರಬಂಧದ ಮೂರನೆ ಭಾಗದಲ್ಲಿ ಯಾವುದೇ ಸ್ಥಿತಿಯಲ್ಲೂ ಬದಲಾವಣೆ ಅನಿವಾರ್ಯ. ಪ್ರತಿ ಸಮಾಜ, ಪರಿಸ್ಥಿತಿಗಳ ಸ್ಥಾಯಿಭಾವವದು ಎಂಬುದನ್ನು ವಿವಿಧ ಸಿದ್ಧಾಂತಗಳ ಮೂಲಕ ಸೋದಾಹರಣವಾಗಿ ವಿಶ್ಲೇಷಿಸಲಾಗಿದೆ. ಬದಲಾವಣೆಯ ಪರಿಕಲ್ಪನೆ ಅತ್ಯಂತ ಪುರಾತನ ಎಂದು ಹೇಳುವ ಶಾಸ್ತ್ರಗಳು, ಗ್ರೀಕ್ ತತ್ವಜ್ಞಾನಿ–ಹಿರಾಕ್ಲಿಟಸ್, ಬೌದ್ಧ ತತ್ವಗಳಲ್ಲೂ ಬದಲಾವಣೆ ಹೇಗೆ ಅನಿವಾರ್ಯ ಎಂಬುದನ್ನು ಪ್ರತಿಪಾದಿಸಲಾಗಿದೆ ಎಂದು ವಿವರಿಸುತ್ತಾರೆ. 'ಬದುಕು ಉಂಟಾಗುವ ಹಾಗು ನಾಶವಾಗುವ ಅಭಿವ್ಯಕ್ತಿಯೇ ಹೊರತು ಇನ್ನೇನು ಅಲ್ಲ...... ಎಲ್ಲಾ ವಸ್ತು ಬದಲಾಗುತ್ತದೆ.... ಒಂದು ಪ್ರಜ್ಞಾವಂತ ಬದುಕಿನ ಲಕ್ಷಣವೇ ಅಡೆತಡೆಯಿಲ್ಲದ ಬದಲಾವಣೆ' ಎಂದು ಬೌದ್ಧ ತತ್ತ್ವ ಹೇಳಿರುವುದನ್ನು ಉಲ್ಲೇಖಿಸುತ್ತಲೇ, ವೇದಾಂತದ 'ಈ ವಿಶ್ವ ಸದಾ ಬದಲಾಗುತ್ತಿರುತ್ತದೆ, ಆದರೆ ಆತ್ಯಂತಿಕ

ಸತ್ಯವಾದ ಬ್ರಹ್ಮತತ್ವ ಮಾತ್ರ ಬದಲಾಗದು' ಎಂಬಸಿದ್ಧಾಂತವನ್ನು ಉಲ್ಲೇಖಿಸುತ್ತಾರೆ. 'ಎಲ್ಲಾ ವಸ್ತುಗಳು ಬದಲಾಗುವ ಸ್ಥಿತಿಯಲ್ಲಿವೆ' ಎಂಬ ಹಿರಾಕ್ಲಿಟಸ್‌ನ ಮಾತನ್ನು ಹೇಳುವ ಮೂಲಕ ಯಾವುದೇ ಸಮಾಜದಲ್ಲಿ ಪೆಡಸುತನ ಮಿತಿಮೀರಿದಾಗ ಒಂದು ಹೊರದಾರಿ ನಿರ್ಮಾಣವಾಗಿ ಸಮಾಜದ ದಿಕ್ಕನ್ನೂ ಬದಲಿಸುತ್ತದೆ ಎಂಬುದನ್ನು ಆರೂ ಕಾದಂಬರಿಗಳ ಮೂಲಕ ವಿಷದಪಡಿಸುತ್ತಾರೆ. ಬದಲಾವಣೆ ಒಂದು ಕ್ರಾಂತಿಗೋ ಅಥವಾ ವಿಕಾಸಕ್ಕೋ ಎಂಬ ಪ್ರಶ್ನೆ ಮುಂದಿಟ್ಟು ಬದಲಾವಣೆ ಎಂದರೆ ವಿಕಾಸವೇ ಹೊರತು ಕ್ರಾಂತಿಯಲ್ಲ ಎಂಬುದರ ಪ್ರತಿಪಾದನೆ ಮಾಡಿ, ಈ ಆರೂ ಕಾದಂಬರಿಗಳಲ್ಲಿ ಚಿತ್ರಿತವಾಗಿರುವಂತೆ ವಿಕಾಸಪಥದಲ್ಲಿ ಸಾಗುವ ಸಮಾಜ ಹೊಸತನ್ನು ಒಪ್ಪಿಕೊಳ್ಳುತ್ತವಾದರೂ ಕೆಲವು ಮೌಲ್ಯಗಳು ಸ್ಥಾಯಿಯಾಗಿಯೇ ಉಳಿಯುವುದನ್ನು ಅಲ್ಲಿ ನಡೆಯುವ ವಿದ್ಯಮಾನಗಳ ಮೂಲಕ ಹೇಳುತ್ತಾ ನೀಡಿರುವ ಪೆಡಸುತನ ಹಾಗೂ ಆ ಮೂಲಕ ಉಂಟಾಗುವ ವೇದನೆ ಮತ್ತು ಅದರ ಪರಿಹಾರದ ವಿವರಣೆ ಅರ್ಥವತ್ತಾಗಿದೆ.

ಭಾರತೀಯ ಚಿಂತನೆಯಲ್ಲಿ ಬದಲಾವಣೆ ಅನಿವಾರ್ಯ ಎಂದು ಭಾವಿಸಲಾಗಿದೆ. ಸ್ಮೃತಿ, ಪುರಾಣಗಳ ಮೂಲಕ ಕಲಿಯುಗದಲ್ಲಿ ಆಗಿರುವ ಬದಲಾವಣೆ, ಅದು ವ್ಯಷ್ಟಿ-ಸಮಷ್ಟಿಯ ಮೇಲೆ ಬೀರಿರುವ ಪರಿಣಾಮ, ಕೆಲವು ಬದಲಾವಣೆಗಳನ್ನು 'ಯುಗಧರ್ಮ'ವೆಂದು ಒಪ್ಪಿಕೊಂಡಿರುವುದರ ವಿವರಣೆ ಇದೆ. ಅಧ್ಯಯನಕ್ಕೆ ಆರಿಸಿರುವ ಆರು ಕಾದಂಬರಿಗಳಲ್ಲೂ ಆದ ಬದಲಾವಣೆ, ಕೆಲವು ಸ್ಥಾಯಿಯಾಗಿಯೇ ಉಳಿದ ಅಂಶಗಳನ್ನು ಅತ್ಯಂತ ಸೂಕ್ಷ್ಮವಾಗಿ ಗುರುತಿಸಲಾಗಿದೆ.

ವಸಾಹತುಶಾಹಿಯು ಐರೋಪ್ಯ ಸಂಸ್ಕೃತಿಯನ್ನು ಬಿಂಬಿಸಲು ಹೊರಟಾಗ ಅದು ರಾಷ್ಟ್ರೀಯವಾದಕ್ಕೇ ಪುಷ್ಟಿ ನೀಡಿ ಮತ್ತೆ ಪುನರ್ ಮನನವಾದುದನ್ನು ಶಾಸ್ತ್ರಿಗಳು ಕಾದಂಬರಿಗಳ ವಿಶ್ಲೇಷಣೆ ಮೂಲಕ ಹೊರತಂದು ಸ್ಪಷ್ಟಗೊಳಿಸುತ್ತಾರೆ. ಕಾನೂರು ಹೆಗ್ಗಡತಿ ಕೃತಿಯಲ್ಲಿ ಬದಲಾವಣೆಯ ಹರಿಕಾರನಾಗಿ ಬರುವ ಹೂವಯ್ಯ ಆಂಗ್ಲ ಭಾಷಾ ಶಿಕ್ಷಣಕ್ಕೆ ಒಳಗಾದವನಾದರೂ, ಭಾರತೀಯ ಪರಂಪರೆ, ಸಂಸ್ಕೃತಿಯ ನೆಲೆಗಟ್ಟಿನ ಮೇಲೆ ನಿಂತು ಮಾತನಾಡುತ್ತಾನೆ. ಇದೇ ರೀತಿ ಶಿಕ್ಷಣ ಪಡೆದ ರಾಮಯ್ಯನಲ್ಲಿ ಈ ಪ್ರಜ್ಞೆ ಕಂಡು ಬರುವುದಿಲ್ಲ. ತಂದೆಯ ಪ್ರಭಾವ ವಲಯದಿಂದ ಹೊರಬರಲಾರದೆ, ಬದುಕನ್ನು ದಿಟ್ಟವಾಗಿ ಎದುರಿಸಲಾರದೆ ಆತ್ಮಹತ್ಯೆಗೆ ಶರಣಾಗುತ್ತಾನೆ. ಇದನ್ನು ಉಲ್ಲೇಖಿಸುತ್ತಾ, ಕೇವಲ ಶಿಕ್ಷಣದಿಂದ ವ್ಯಕ್ತಿಯ ಸದ್ಗುಣ ಅರಳುವುದಿಲ್ಲ ಎಂಬುದನ್ನು ಗುರುತಿಸಲಾಗಿದೆ. ಜಡ್ಡುಗಟ್ಟಿದ ಮಲೆನಾಡಿನ ಬದುಕನ್ನು ಹೂವಯ್ಯ ತನ್ನ ಮನೆಯಿಂದಲೇ ಮೃದುಗೊಳಿಸಿ ಬದಲಾವಣೆ ತರುತ್ತಾನೆ. ಮೌಢ್ಯವನ್ನು ಶಾಶ್ವತಗೊಳಿಸಲೆತ್ನಿಸುವ ವೆಂಕಪ್ಪ ಜೋಯಿಸರಿಗೆ ಎದುರಾಳಿಯಂತೆ ಹೂವಯ್ಯ ಕಂಡರೂ, ಅವನಲ್ಲಿ ಮನುಷ್ಯ ಪ್ರೀತಿ ಇದೆ. ಮೌಢ್ಯಕ್ಕೆ

ವಿರೋಧವೇ ಹೊರತು ಅದು ವ್ಯಕ್ತಿಗತವಲ್ಲ. ಈ ಕೃತಿಯಲ್ಲಿ ಕುವೆಂಪು ತಲತಲಾಂತರದಿಂದ ಮಡುಗಟ್ಟಿದ ಮೌಢ್ಯವನ್ನು ಹೂವಯ್ಯನ ಪಾತ್ರದ ಮೂಲಕ ವಿರೋಧಿಸುತ್ತಲೇ ಒಂದು ರೀತಿ ವಸಾಹತು ವಿಮೋಚನೆಯನ್ನು ಮಾಡುತ್ತಾರೆ. ಮೇಕೆ ಬಲಿ ತಪ್ಪಿಸುವುದು, ಸೀತೆಯ ಮನಸ್ಸಿಗೆ ನೀಡುವ ನೆಮ್ಮದಿ, ಬಾಲಕ ಗಂಗ ಬಾಳೆಹಣ್ಣು ಕದ್ದಾಗ ಹೂವಯ್ಯ ತಳೆಯುವ ನಿರ್ಧಾರ, ಭೈರ ಮತ್ತು ಸಿದ್ದ ನೇಗಿಲು ಮುರಿದಾಗ ಅವರ ಮನೆಗೆ ಹೋಗಿ ದಿನಗೂಲಿ ನೀಡಬರುವುದು, ಈ ರೀತಿ ಹೂವಯ್ಯ ಬದಲಾವಣೆಯ ವಿಕಾಸ ಯಾತ್ರೆಯನ್ನು ಕೈಗೊಳ್ಳುವ ಮೂಲಕ ನಂಬಿಕೆಗಳ ಬುಡವನ್ನು ಅಲುಗಿಸುತ್ತಾ ಹೋಗಿ ಪೆಡಸುತನ ತಂದ ವೇದನೆಗೆ ನೋವು ನಿವಾರಕನಾಗುತ್ತಾನೆ. ಪ್ರಬಂಧದಲ್ಲಿ ಪ್ರಮುಖ ಪಾತ್ರಗಳಾದ ಚಂದ್ರಯ್ಯಗೌಡ, ಸಿಂಗಪ್ಪಗೌಡ ಹಾಗು ಶಾಮಯ್ಯಗೌಡರ ಸಂಸ್ಕೃತೀಕರಣದ ವಿಭಿನ್ನ ಹಾದಿಗಳ ವಿಶ್ಲೇಷಣೆ ಅರ್ಥವತ್ತಾಗಿದೆ. ವೆಂಕಪ್ಪ ಜೋಯಿಸರ ಮಾರ್ಗದರ್ಶನದಲ್ಲಿ ಚಂದ್ರಯ್ಯಗೌಡರು ತಮ್ಮ ಹಣದ ಬಲ ಹಾಗು ಊಳಿಗ ಮಾನ್ಯ ಮನಸ್ಥಿತಿ ಬೆಳೆಸಿಕೊಂಡರೆ, ಶಾಮಯ್ಯಗೌಡ ಬ್ರಾಹ್ಮಣೀಕರಣದ ಹಾದಿ ತುಳಿಯುತ್ತಾರೆ. ಸಿಂಗಪ್ಪಗೌಡ ಸಾಹಿತ್ಯವನ್ನು ಸಂಸ್ಕೃತೀಕರಣದ ಮಾಧ್ಯಮ ಮಾಡಿಕೊಳ್ಳುತ್ತಾರೆ.

ಶಿವರಾಮ ಕಾರಂತರ "ಮರಳಿಮಣ್ಣಿಗೆ" ಕಾದಂಬರಿ ಸಹ ಭಾರತ ಬ್ರಿಟಿಷರ ವಸಾಹತುವಾಗಿದ್ದ ಕಾಲದ ಚಿತ್ರಣವನ್ನು ಮೂರು ತಲೆಮಾರುಗಳ ಮೂಲಕ ನೀಡುತ್ತ ಆಗಿನ ಸ್ಥಿತಿಯನ್ನು ವಿವರಿಸುತ್ತದೆ. ಬ್ರಾಹ್ಮಣ ಸಮಾಜದ ನಂಬಿಕೆ, ಸಂಪ್ರದಾಯಗಳು ಹೇಗೆ ರಾಮ ಐತಾಳರ ಕಾಲದಿಂದ ಬದಲಾಗುತ್ತಾ ಬಂದು ಮಗ ಲಚ್ಚನ ಕಾಲದಲ್ಲಿ ಮತ್ತಷ್ಟು ಬದಲಾಗಿ, ರಾಮನ ಕಾಲಕ್ಕೆ ಇನ್ನಷ್ಟು ಹೊಸನೀರು ಬಂದರೂ, ರಾಮ ಮತ್ತೆ ತನ್ನ ಬೇರನ್ನೇ ತಡವಿ, ಅಲ್ಲಿಗೆ ಬರುವುದರೊಂದಿಗೆ ಮುಕ್ತಾಯವಾಗುತ್ತದೆ. ಹಲವು ರೀತಿಯ ಹಳೆಯ ನಂಬಿಕೆಗಳಿಗೆ ಜೋತು ಬಿದ್ದ ಬ್ರಾಹ್ಮಣ ಸಮಾಜ ಕ್ರಮೇಣ ಆಂಗ್ಲ ಶಿಕ್ಷಣದ ಪ್ರಭಾವದಿಂದ, ಬದುಕಿಗಾಗಿ ಹೊಸದಾರಿಯ ಅನ್ವೇಷಣೆಯ ಪ್ರಕ್ರಿಯೆಯಲ್ಲಿ ಹಳೆಯದೆಲ್ಲವನ್ನೂ ತಿರಸ್ಕರಿಸಿ ಪಶ್ಚಿಮದ ಆಕರ್ಷಣೆಗೆ ಒಳಗಾದಾಗ ಬದುಕಿನಲ್ಲಾಗುವ ಇಬ್ಬಂದಿ ಸ್ಥಿತಿಯನ್ನು ವಿವರಿಸುತ್ತಲೇ ಪರಂಪರಾಗತ ಮೌಲ್ಯದಲ್ಲೂ ಬದುಕುವ ಬೆಳಕಿದೆ, ಪುನರ್ ಮೌಲ್ಯೀಕರಣಕ್ಕೊಳಪಡಿಸಿ ಜಡ್ಡುಗಟ್ಟಿದ್ದನ್ನು ಬಿಟ್ಟು ಪ್ರಸ್ತುತವಾದುದನ್ನು ಪಡೆದುಕೊಳ್ಳಬೇಕೆಂಬುದನ್ನು ಕಾರಂತರು ಪಾತ್ರಗಳ ಮೂಲಕ ಸ್ಪಷ್ಟಪಡಿಸಿರುವುದರ ವಿಶ್ಲೇಷಣೆ ಪ್ರಬಂಧದ ಪ್ರಮುಖ ಉದ್ದೇಶ. ವೈದಿಕ ವೃತ್ತಿಗೆ ಅಂಟಿಕೊಂಡ ರಾಮ ಐತಾಳರಲ್ಲೂ ಮಗ ಲಚ್ಚ ಆಂಗ್ಲ ವಿದ್ಯಾಭ್ಯಾಸಕ್ಕೊಳಗಾಗಿ ಅಧಿಕಾರಿಯಾಗ ಬೇಕೆಂಬ ಆಲೋಚನೆ ಮನಸ್ಸಿನಲ್ಲಿ ಚಿಗುರೊಡೆದಿದೆ. ಬದುಕಿನ ಏಕತಾನತೆಯಿಂದ ಬಿಡಿಸಿಕೊಳ್ಳುವ ಹೊಳಹು ಕಾಣತೊಡಗಿದೆ, ಲಚ್ಚ ಆ ಶಿಕ್ಷಣ ಪಡೆದರೂ, ತನ್ನ ಬದುಕಿನ ಮೂಲಬೇರಿನಿಂದ

ಬೇರ್ಪಟ್ಟು ತನ್ನ ಜೀವನವನ್ನೇ ಮೂರಾಬಟ್ಟೆಯಾಗಿಸಿಕೊಳ್ಳುತ್ತಾನೆ. ಕೋಟಾ ಬ್ರಾಹ್ಮಣ ಸಮಾಜದಲ್ಲೂ ವೈದಿಕ ವೃತ್ತಿಯ ಆಕರ್ಷಣೆ ಅಳಿದು, ನಗರದತ್ತ ವಲಸೆ ಹೋಗುವ ತವಕ ಆರಂಭವಾಗಿದೆ. ಹೋಟೆಲ್ ಉದ್ಯಮವನ್ನು ಆರಂಭಿಸುವ ಮೂಲಕ, ಅನ್ನ ಮಾರಬಾರದೆಂಬ ನಂಬಿಕೆಯಿಂದ ಹೊರಬಂದು ಬದುಕಿಗಾಗಿ ಹೊಸದಾರಿ ತುಳಿಯಲು ಹೊಸ ಪೀಳಿಗೆ ಹೊರಟರೆ, ಹಿರಿಯರ ಪರೋಕ್ಷ ಪೋಷಣೆಯೂ ಇದಕ್ಕೆ ಸಿಕ್ಕಿದೆ. ಸಮಾಜದಲ್ಲಾಗುತ್ತಿರುವ ಸ್ಥಿತ್ಯಂತರಗಳು ಕಾದಂಬರಿಯಲ್ಲಿ ಹಾಸುಹೊಕ್ಕಾಗಿದೆ. ಅವುಗಳನ್ನು ವಿಶ್ಲೇಷಣೆ ಮಾಡುತ್ತಲೇ ಈ ಬದಲಾವಣೆಯೇ ಅತ್ಯಂತಿಕ ಸತ್ಯವಲ್ಲ, ನೆಮ್ಮದಿಯ ಬದುಕಿಗೆ ಹಳೆಯ ಮೌಲ್ಯಗಳನ್ನು ಮತ್ತಷ್ಟು ಗಾಢವಾಗಿ ಅರ್ಥ ಮಾಡಿಕೊಳ್ಳಬೇಕೆಂದು ರಾಮ ಮತ್ತೆ ತನ್ನ ಹಳ್ಳಿಗೆ ಹಿಂದಿರುಗುವ ಮೂಲಕ ತನ್ನ ಬದುಕನ್ನು ಇನ್ನಷ್ಟು ಅರ್ಥಪೂರ್ಣವಾಗಿಸಬಹುದೆಂದು ಹೇಳುವುದರೊಂದಿಗೆ ಹಳೆಯ ಮತ್ತು ಹೊಸ ಮೌಲ್ಯಗಳ ಮುಖಾಮುಖಿಯಲ್ಲಿ ಹಳೆಯದರ ಪುನರ್‌ವ್ಯಾಖ್ಯಾನ ಮಾಡಿ, ಬದುಕಿಗೆ ಅದನ್ನು ಆಧಾರವಾಗಿಸಿಕೊಳ್ಳುವುದನ್ನು ವಿವರಿಸಿ, ಪೆಡಸುತನ ಮತ್ತು ವೇದನೆಯಲ್ಲೂ ಮತ್ತೆ ಹಳೆಯ ಮೌಲ್ಯಗಳ ಪುನರ್‌ಶೋಧನೆ ಮಾಡಿರುವುದನ್ನು ಗಿರಿಧರ ಶಾಸ್ತ್ರಿಗಳು ತಮ್ಮ ಪ್ರಬಂಧದಲ್ಲಿ ಅರ್ಥಪೂರ್ಣವಾಗಿ ಹಿಂಜಿ ಹೇಳಿದ್ದಾರೆ.

ಕಾರಂತರ ಇನ್ನೊಂದು ಕಾದಂಬರಿ "ಕುಡಿಯರ ಕೂಸು" ವಿನಲ್ಲೂ ಮತ್ತೆ ಬೇರನ್ನರಸಿ ಬರುವ ಸನ್ನಿವೇಶವೇ ಇದೆ. ಕಾಡನ್ನೇ ಮನೆ, ದೇಗುಲ, ಜೀವನದ ಆಡೊಂಬಲವಾಗಿಸಿಕೊಂಡಿದ್ದ ಗಿರಿಜನ ಮಲೆಕುಡಿಯರ ಬದುಕಿಗೆ ವಸಾಹತು ವ್ಯವಸ್ಥೆ ತರುವ ಸಂದಿಗ್ಧತೆ, ಅವರ ಪುರಾತನ ನಂಬಿಕೆಗಳಿಗೆ ಆಗುವ ಆಘಾತ, ಯಾವುದನ್ನು ನಿಷಿದ್ಧವೆಂದು ನಂಬಿದ್ದರೋ ಅದೇ ಅನಿವಾರ್ಯವಾಗಿ ಜರುಗುವುದು, ಇವುಗಳನ್ನು ಸೂಕ್ಷ್ಮವಾಗಿ ಅವಲೋಕಿಸಿದ್ದಾರೆ ಶಾಸ್ತ್ರಿಗಳು. ಸಂತೃಪ್ತ ಬದುಕಿಗೆ ಒಗ್ಗಿಕೊಂಡಿದ್ದ, ನಿಸರ್ಗದೊಂದಿಗೆ ತಮ್ಮ ಬದುಕನ್ನು ತಳಕು ಹಾಕಿಕೊಂಡು ನೈಸರ್ಗಿಕ ವಿಕೋಪಗಳನ್ನು ತಮ್ಮ ಸಾಂಪ್ರದಾಯಿಕ ಜ್ಞಾನ ಮತ್ತು ವಿಧಾನಗಳಿಂದ ನಿವಾರಿಸಿಕೊಳ್ಳುತ್ತಿದ್ದ ಮಲೆಕುಡಿಯರಿಗೆ ಆಧುನಿಕತೆಯ ಪ್ರವೇಶ ಒಂದು ರೀತಿಯ ಇಬ್ಬಂದಿ ಸ್ಥಿತಿಯನ್ನು ತರುತ್ತದೆ. ನರಹಂತಕ ಹುಲಿಯೊಂದರ ಉಪಟಳದ ಸನ್ನಿವೇಶವನ್ನು ಕಟ್ಟಿಕೊಡುವ ಮೂಲಕ ಕಾರಂತರು, ಆಧುನಿಕತೆ ಮತ್ತು ಸಂಪ್ರದಾಯದ ಮುಖಾಮುಖಿ ಕಲ್ಪಿಸಿ, ಭೂಒಡೆಯನಾಗಿ ಬಂದ ತಿರುಮಲ ಭಟ್ಟ, ಗಿರಿಜನರ ಕೆಲವು ನಂಬಿಕೆಗಳನ್ನೇ ಬುಡಮೇಲು ಮಾಡಿ, ಶುದ್ಧ ಮನಸ್ಸಿನ ಗಿರಿಜನರಲ್ಲಿ ಮಾಲಿನ್ಯದ ಬೀಜಬಿತ್ತುವುದಕ್ಕೆ 'ಹುಲಿಯ'ನ್ನು ಸಂಕೇತವಾಗಿ ಬಳೆಸಿದ್ದಾರೆ. ತನ್ನ ಹಾಡಿಗೆ ಹಿಂದಿರುಗುವ ಕರಿಯ ಆ ಹುಲಿಯನ್ನು ಆಧುನಿಕ ಶಸ್ತ್ರಾಸ್ತ್ರ ಬಳೆಸಿ ಕೊಂದು ಅದರ ಉಪಟಳಕ್ಕೆ ಅಂತ್ಯ ಹಾಡುತ್ತಾನೆ. ಆ ಮೂಲಕ

ಕಾರಂತರು ಆಧುನಿಕತೆಯನ್ನು ಹಿಂದಿನ ಸಂಪ್ರದಾಯದೊಂದಿಗೆ ಮಿಶ್ರಣಗೊಳಿಸುತ್ತಾರ. ಇದು ಶಾಸ್ತ್ರಿಗಳ ವಿಶ್ಲೇಷಣೆಯಲ್ಲಿ ಸೂಕ್ತವಾಗಿ ಅಡಕವಾಗಿದೆ.

ಅನಂತಮೂರ್ತಿಯವರ **ಭಾರತೀಪುರದಲ್ಲಿ** ಹೊರದೇಶದಿಂದ ಮತ್ತೆ ತನ್ನ ಮೂಲಕ್ಕೆ ಹಿಂತಿರುಗುವ ಜಗನ್ನಾಥ, ಮಂಜುನಾಥ ಸ್ವಾಮಿಯ ಹಿಡಿತದಲ್ಲಿರುವ ಭಾರತೀಪುರವನ್ನು ಬದಲಾಯಿಸಲು ಪ್ರಯತ್ನಿಸಿ, ವಿಫಲತೆ ಅನುಭವಿಸಿದರೂ, ಕೇವಲ ಭೋಜನ, ಮೈಥುನ, ಮತ್ತು ಅವಸಾನದಲ್ಲೇ ಕಾಲಕಳೆಯುತ್ತಿದ್ದ ಸಮಾಜ ತನ್ನ ಶ್ರೇಣೀಕೃತ ವ್ಯವಸ್ಥೆಯಿಂದ ಚಲನಶೀಲತೆಯನ್ನೇ ಕಳೆದುಕೊಂಡಿರುವುದಕ್ಕೆ ಮತ್ತೆ ಹೊಸನೀರು ಹರಿಸುವ ಒಂದು ಪ್ರಯತ್ನವನ್ನಂತೂ ಮಾಡುತ್ತಾನೆ. ಮಂಜುನಾಥನ ದೇವಾಲಯದ ಒಳಪ್ರವೇಶವನ್ನು ತಮ್ಮ ಬದುಕಿನಲ್ಲಿ ಎಂದೂ ಮಾಡದಿರುವ ಅಸ್ಪೃಶ್ಯರನ್ನು ದೇವಾಲಯದೊಳಕ್ಕೆ ಕರೆದುಕೊಂಡು ಹೋಗುವ ಮೂಲಕ ಯಥಾಸ್ಥಿತಿವಾದಿಗಳಿಗೆ ಆಘಾತ ನೀಡುವ ದ್ವಾರಾ ಒಂದು ಸಾಮಾಜಿಕ ಬದಲಾವಣೆ ತರಲು ಜಗನ್ನಾಥ ಯತ್ನಿಸುವುದು ಕಾದಂಬರಿಯ ತಿರುಳು. ದೇವಾಲಯ ಪ್ರವೇಶದ ವೇಳೆಗೆ ಅರ್ಚಕರ ಮಗ ಗಣೇಶ ಲಿಂಗರೂಪಿ ಮಂಜುನಾಥನನ್ನೇ ಕಿತ್ತು ನದಿಯಲ್ಲಿ ಮುಳುಗಿಸಿರುತ್ತಾನೆ. ಇಲ್ಲಿ ಜಗನ್ನಾಥನ ಅಮೂರ್ತ ಯತ್ನಗಳು ವಿಫಲವಾದರೂ, ಗಣೇಶ ತನ್ನ ಕ್ರಿಯೆಯಿಂದ ಸಹಜವಾದ ಒಂದು ಭೌತಿಕ ಹಿನ್ನೆಲೆ ಒದಗಿಸುತ್ತಾನೆ. ಕ್ರಾಂತಿ ವಿಫಲವಾದರೂ, ಅಸ್ಪೃಶ್ಯರಲ್ಲಿ ಒಂದು ಜಾಗೃತಿ ಬೆಳೆಯುವ ಬೆಳಕಿನ ಕಿರಣಗಳಂತೂ ಕಂಡುಬರುತ್ತದೆ. **ಭಾರತೀಪುರದ** ನಾಯಕ, ತಾನು ಹುಟ್ಟಿ ಬೆಳೆದ ಸಮಾಜದ ಒಳಪದರಗಳನ್ನು ಸರಿಯಾಗಿ ಅರ್ಥಮಾಡಿಕೊಳ್ಳದೆ, ತನ್ನ ಪರಿಸರಕ್ಕೆ ಹೊರಗಿನವನಾಗೇ ಉಳಿದು ವಿಫಲತೆ ಅನುಭವಿಸುತ್ತಾನೆ, ಕಾನೂರು ಹೆಗ್ಗಡತಿಯ ಹೂವಯ್ಯ ಒಳವಿಮರ್ಶಕನಾಗಿ ಸಫಲನಾಗುತ್ತಾನೆ. ಈ ವಿರೋಧಾಭಾಸವನ್ನು ಶಾಸ್ತ್ರಿಗಳು ಚೆನ್ನಾಗಿ ಗುರುತಿಸಿದ್ದಾರೆ.

ಆಲನಹಳ್ಳಿ ಕೃಷ್ಣ ಅವರ **"ಭುಜಂಗಯ್ಯನ ದಶಾವತಾರ"** ಒಂದು ಮನ್ವಂತರ ಕಾಲದ ಕಾದಂಬರಿ. ನಗರದಲ್ಲಾಗಿರುವ ಬದಲಾವಣೆ ಮಾದಿಹಳ್ಳಿಯಲ್ಲಾಗಿಲ್ಲ. ಆದರೆ ಭುಜಂಗಯ್ಯ ಈ ಬದಲಾವಣೆಯ ರೂವಾರಿಯಾಗುತ್ತಾನೆ. ನಿಸರ್ಗದ ರೂಪಸಿ ಮತ್ತು ರಾಕ್ಷಸಿ ಸ್ವಭಾವದ ಹಿನ್ನೆಲೆಯಲ್ಲಿ ಕಥೆ ಸಾಗುತ್ತದೆ. ಹೊಸತನ್ನು ಸದಾ ನಿರೀಕ್ಷಿಸುವ ಭುಜಂಗಯ್ಯ ಕೃಷಿಯನ್ನು ಮಾತ್ರ ಅವಲಂಬಿಸದೆ, ಮೊದಲ ಬಾರಿಗೆ ಹೋಟೆಲ್ ಆರಂಭಿಸುವ ಮೂಲಕ ಬದಲಾವಣೆಯ ಗಾಳಿ ಬೀಸಿ ಮಡುಗಟ್ಟಿದ ಸಮಾಜಕ್ಕೆ ಚಲನಶೀಲತೆ ಒದಗುವಂತೆ ಮಾಡುತ್ತಾನೆ. ಅದಕ್ಕೆ ಜನ ಒಗ್ಗಿಕೊಳ್ಳುತ್ತಿದ್ದಂತೆಯೇ ಅಸ್ಪೃಶ್ಯರನ್ನು ಹೋಟೆಲ್ ಒಳಗೆ ಸೇರಿಸುವ ಪ್ರಕ್ರಿಯೆಯಿಂದ ಅದು ಭಸ್ಮವಾದಾಗ, ಗುತ್ತಿಗೆ ಉಸ್ತುವಾರಿ ವಹಿಸಿಕೊಂಡು ನಂತರ ಗುತ್ತಿಗೆದಾರನಾಗಿ, ಕೇವಲ ಕೆರೆ ನೀರು, ಒಂದು ಬಾವಿಯನ್ನು ಅವಲಂಬಿಸಿದ್ದ

ಮಾದಿಹಳ್ಳಿಯಲ್ಲಿ ಬಾವಿ ತೆಗೆಸುವ ಮೂಲಕ ಜಮೀನುಗಳಿಗೆ ನೀರುಣಿಸುವ ಹೊಸ ಆಲೋಚನೆಗೆ ಮುಂದಾಗುತ್ತಾನೆ. ಇದಕ್ಕೆ ಮೊದಮೊದಲು ಅಪಸ್ವರ ಬಂದರೂ ನಂತರ ಶೃತಿ ಸೇರುತ್ತದೆ. ವೈಯಕ್ತಿಕ ಬದುಕಿನಲ್ಲೂ ಅನ್ಯ ಜಾತಿಯ ಸ್ತ್ರೀಯನ್ನು ವಿವಾಹವಾಗುವ ಮೂಲಕ ಸಂಪ್ರದಾಯಸ್ಥರ ನಂಬಿಕೆಯನ್ನು ಅಲ್ಲಾಡಿಸುತ್ತಾನೆ. ಭುಜಂಗಯ್ಯನ ಪ್ರವಾಹದ ಎದುರೀಜು ಸ್ಥಗಿತ ಸಮಾಜದಲ್ಲಿ ಒಂದು ರೀತಿಯ ಹೊಸ ಅಲೆಗಳನ್ನೆಬ್ಬಿಸುತ್ತದೆ. ವಿರೋಧಿಸುತ್ತಾ, ಒಪ್ಪಿಕೊಳ್ಳುತ್ತಾ ಸಮಾಜ ಮುಂದುವರೆಯುತ್ತದೆ. ಕೃತಿಯ ಪ್ರಮುಖ ಉದ್ದೇಶವನ್ನು ಈ ಪ್ರಬಂಧದಲ್ಲಿ ಅಚ್ಚುಕಟ್ಟಾಗಿ ಹಿಡಿದಿಡುವ ಶಾಸ್ತ್ರಿಗಳು, ಭುಜಂಗಯ್ಯನ ಜೀವನದಲ್ಲಿ ನಡೆಯುವ ಪ್ರತಿ ಘಟನೆಗೂ ಮುನ್ಸೂಚನೆಯಾಗಿ ಅಥವಾ ಸಂವಾದಿಯಾಗಿ ಕೃತಿಕಾರರು ನಿಸರ್ಗದಲ್ಲಾಗುವ ಬದಲಾವಣೆಗಳನ್ನು ಹಿನ್ನೆಲೆಯಾಗಿ ನೀಡುವ ಮೂಲಕ ಭುಜಂಗಯ್ಯನ ಜೀವನದ ಏರಿಳಿತಗಳನ್ನು ದಾಖಲಿಸುವುದನ್ನು ವಿವರವಾಗಿ ಪರಿಶೀಲಿಸಿದ್ದಾರೆ.

ರಾವ್‌ಬಹದ್ದೂರರ 'ಗ್ರಾಮಾಯಣ' ಒಂದು ಸಾವಯವ ಸಮಾಜದ ವಿಘಟನೆಯ ಸನ್ನಿವೇಶಗಳನ್ನು ಹಿಡಿದಿಟ್ಟ ಕೃತಿ. ಆಂಗ್ಲರ ಆಡಳಿತದ ಕಾಲದಲ್ಲಿ ಪಾದಳ್ಳಿಯಲ್ಲಿ ನಡೆಯುವ ಘಟನೆಗಳನ್ನು ಒಟ್ಟಾಗಿಸಿ, ಒಂದು ಸಮಾಜದ ನೈತಿಕ ಅಧಃಪತನ, ಅದು ತಂದೊಡ್ಡುವ ಸಮಸ್ಯೆಗಳ ಚಿತ್ರಣ ಅತ್ಯಂತ ನೈಜವಾಗಿ ಮೂಡಿಬಂದಿದೆ. ಗ್ರಾಮದ ಯುವತಿ ಚಿಮಣಾಳ ಮೇಲಿನ ಅತ್ಯಾಚಾರ ಹಾಗು ಆಕೆಯ ತಂದೆ ನಾನಾನ ಅಸಹಜ ಸಾವಿನ ಮೂಲಕ ಸಮಾಜ ಅವನತಿಯತ್ತ ಸಾಗುವುದು ಬಿಚ್ಚಿಕೊಳ್ಳುತ್ತಾ ಹೋಗುತ್ತದೆ. ಉಳಿದ ಕೃತಿಗಳಿಗಿಂತ ಈ ಕೃತಿಯಲ್ಲಿ ಗ್ರಾಮ ಮುಖ್ಯವಾಗಿ, ಅಲ್ಲಿ ಬರುವ ಪಾತ್ರಗಳು ಒಂದು ರೀತಿಯಲ್ಲಿ ಮುಖ್ಯವಾಗದೆ, ಒಂದು ಸಮಾಜವನ್ನು ಒಟ್ಟಾಗಿ ಹಿಡಿದಿಡುವ ಧಾರ್ಮಿಕ ಸಂಸ್ಥೆ, ನ್ಯಾಯದಾನ ಪದ್ಧತಿ, ಊರ ಪ್ರಮುಖರು ಹಾದಿ ತಪ್ಪುವುದು ಅಥವಾ ಒಂದು ರೀತಿಯ ಮೌನ, ಹೇಗೆ ಸಮಾಜದ ಸಾವಯವತೆಯನ್ನು ದುರ್ಬಲಗೊಳಿಸಿ ಅವನತಿಯತ್ತ ದೂಡುತ್ತದೆ ಎಂಬುದನ್ನು ಅತ್ಯಂತ ವಿಷದವಾಗಿ ಮನದಟ್ಟು ಮಾಡಿಸಿದೆ. ಪಾದಳ್ಳಿಯ ಧಾರ್ಮಿಕ ಮಠ ಒಂದು ಖಾರಾಸ್ಥಾನವಾಗಿ ಮಾರ್ಪಟ್ಟರೆ, ನ್ಯಾಯ ನೀಡುವ ದೈವ ಭ್ರಷ್ಟವಾಗುತ್ತದೆ, ಊರಿನ ಹಿತ ಕಾಪಾಡಬೇಕಾದ, ಮಾರ್ಗದರ್ಶನ ನೀಡಬೇಕಾದ ಪುರೋಹಿತ ನಿಸ್ಸಹಾಯಕನಾಗುತ್ತಾನೆ. ಸಮಾಜವೆಂಬ ಸರಪಳಿಯ ದೃಢತೆ ದುರ್ಬಲವಾಗಿ ತುಂಡಾಗಿ ಅವನತಿಯತ್ತ ಸಮಾಜ ಹೆಜ್ಜೆ ಹಾಕುತ್ತದೆ. ಒಳಗಿನ ಸಾಮಾಜಿಕ ವ್ಯವಸ್ಥೆಗಳು ಶಿಥಿಲವಾಗುವುದು ಒಂದು ಕಡೆಯಾದರೆ, ಹೊರಗಿನ ಶಕ್ತಿಗಳು ಒಳ ನುಸುಳಿ ಮಾಡುವ ದಾಂಧಲೆ, ಗುಂಪುಗಾರಿಕೆಯಿಂದ ಇಡೀ ಹಳ್ಳಿ ನಿಂತ ನೀರಾಗಿ, ಚಲನಶೀಲತೆ ಕಳೆದುಕೊಂಡು ನಾಶವಾಗುವ ಹಂತ ತಲುಪುತ್ತದೆ. ಮನುಷ್ಯ ನಿರ್ಮಿತ ಅಪಾಯಗಳು

ಒಂದು ಕಡೆಯಾದರೆ, ನೈಸರ್ಗಿಕವಾಗಿ ಪ್ಲೇಗ್, ಕಾಲರಾ, ಪ್ರವಾಹ ಮತ್ತಪ್ಪು ಈ ಗ್ರಾಮವನ್ನು ಅಧೋಗತಿಗೆ ತಳ್ಳುತ್ತದೆ. ಆದರೆ ಈ ವಿನಾಶದಿಂದ ಹಳ್ಳಿ ನಿರ್ನಾಮವಾಗುವ ಬದಲು, ಮತ್ತೆ ಪುನರ್‌ನಿರ್ಮಾಣವಾಗುವ ಸಂಕೇತಗಳು ದಾದಾ ಪಾದಳ್ಳಿಗೆ ಹಿಂತಿರುಗುವ ಮೂಲಕ ಕಂಡು ಬರುತ್ತವೆ.

ಪೆಡಸುತನ ಮತ್ತು ವೇದನೆಯಿಂದ ತನ್ನ ಆಂತರ್ಯದ ದಾವಾಗ್ನಿಯಲ್ಲೆ ಪಾದಳ್ಳಿ ಬೆಂದರೂ ಮತ್ತೆ ಚಿಗುರೊಡೆದು ವಸಂತದ ಸೊಬಗು ಮೂಡುವುದೆಂಬ ಸೂಚನೆಯೊಂದಿಗೆ ಕಾದಂಬರಿ ಮುಕ್ತಾಯವಾಗುತ್ತದೆ. ಕಾದಂಬರಿಯಲ್ಲಿ ನಡೆಯುವ ಪ್ರಮುಖ ಘಟನೆಗಳನ್ನು ಶಾಸ್ತ್ರಿಗಳು ಉತ್ತಮವಾಗಿ ವಿಶ್ಲೇಷಿಸಿದ್ದಾರೆ. ವ್ಯಕ್ತಿ ಪ್ರಾಮುಖ್ಯತೆಗಿಂತ, ಗ್ರಾಮದ ಒಟ್ಟು ವ್ಯವಸ್ಥೆಯಲ್ಲಿ ಕಾಣಿಸಿಕೊಂಡ ದೌರ್ಬಲ್ಯ, ಅದನ್ನೇ ಆಧರಿಸಿ ತಮ್ಮ ಬೆಳವಣಿಗೆ, ಅಧಿಕಾರ, ಅಂತಸ್ತನ್ನು ಪಡೆದು ಸಮಾಜವನ್ನು ಹದ್ದುಬಸ್ತಿನಲ್ಲಿಟ್ಟುಕೊಳ್ಳಲು ಮುಂದಾಗುವ ಶಕ್ತಿಗಳು ಹೇಗೆ ಸಮಾಜದ ಅವನತಿಗೆ ಕಾರಣವಾಗುತ್ತವೆಂಬುದರ ವಿವರಣೆ ಅರ್ಥವತ್ತಾಗಿದೆ. ಈ ಕೃತಿಯಲ್ಲೂ ಮನುಷ್ಯ-ನಿಸರ್ಗದ ಸಂಬಂಧದ ಉತ್ತಮ ವಿಶ್ಲೇಷಣೆಯತ್ತ ಒತ್ತು ನೀಡಲಾಗಿದೆ. ಜಿನ್ನಪ್ಪ, ಶೇಷಪ್ಪ, ದಾದಾ ತಾಲ್ಲೂಕು ಕೇಂದ್ರದಿಂದ ವಾಪಸ್ಸಾಗುವಾಗ, ಪಾದಳ್ಳಿಯ ಅವನತಿ ಸೂಚಿಸುವಂತೆ ಬರುವ ಬಿರುಗಾಳಿ, ಧೂಳು, ಭಾರಿ ಮಳೆ ಒಂದು ಕಡೆಯಾದರೆ, ಊರಿಗೆ ಬಂದಾಕ್ಷಣ ಜಿನ್ನಪ್ಪನ ಬಣವೆಗಳು ಪಡದಪ್ಪ ಮತ್ತಿತರರ ಪ್ರಚೋದನೆಯಿಂದ ಭಸ್ಮವಾಗಿರುವುದು ಹಳ್ಳಿಯ ಅವನತಿಯ ಮುನ್ಸೂಚನೆಯಾಗಿದೆ. ಈ ರೀತಿ ಮುಂದೆ ಬರುವ ಅವನತಿಯ ಸಂಕೇತವಾಗಿ ನಿಸರ್ಗದ ಬದಲಾವಣೆಗಳನ್ನು ಇಲ್ಲಿ ಬಳಸಿಕೊಳ್ಳಲಾಗಿದೆ. ಈ ರೀತಿಯಲ್ಲಿ ಹಳ್ಳಿಯಲ್ಲಾಗುತ್ತಿರುವ ದುಷ್ಟತನಗಳ ಸೂಚಕವಾಗಿ ಕಾದಂಬರಿಕಾರರು ಕೊಡುವ ನಿಸರ್ಗದಲ್ಲಾಗುವ ಬದಲಾವಣೆಗಳನ್ನು ಸೂಕ್ತವಾಗಿ ಶಾಸ್ತ್ರಿಗಳು ಅವಲೋಕಿಸಿ, ವಿವರಿಸಿದ್ದಾರೆ.

ಗಿರಿಧರ ಶಾಸ್ತ್ರಿಗಳು ತಮ್ಮ ಪ್ರೌಢ ಪ್ರಬಂಧಕ್ಕೆ ಕ್ಲಿಷ್ಟವೆನಿಸಿದರೂ, ಹೊಸಬೆಳಕು ಚೆಲ್ಲುವ ವಿಷಯವನ್ನೇ ಆರಿಸಿಕೊಂಡಿದ್ದಾರೆ, ವಿಶ್ಲೇಷಣೆಯನ್ನು ಅತ್ಯಂತ ಸಂಕೀರ್ಣವಾಗಿಸಿಯೇ ನೀಡಿದ್ದಾರೆ.

ಕನ್ನಡಕ್ಕೆ ಶಾಸ್ತ್ರೀಯ ಸ್ಥಾನ – ಮುಂದೇನು?

– ಡಾ। ನಾ. ಗೀತಾಚಾರ್ಯ, ಬೆಂಗಳೂರು
ಉಪನ್ಯಾಸಕರು, ೯೪೪೮೬೭೧೦೪೯
geethacharya123@gmail.com

೨೦೦೪ ಅಕ್ಟೋಬರ್ ೧೨ರಂದು ತಮಿಳಿಗೆ ಶಾಸ್ತ್ರೀಯಭಾಷೆ ಸ್ಥಾನದ ಗೆಜೆಟ್ ಪ್ರಕಟಣೆ ಆದ ನಂತರದಿಂದ ನಿರಂತರವಾಗಿ ಕನ್ನಡ – ತೆಲುಗರ ಹೋರಾಟಗಳು ನಡೆಯುತ್ತಲೇ ಇದ್ದರೂ (ತಜ್ಞರ ವರದಿಗಳು, ಗಣ್ಯರ ಧರಣಿ, ಸತ್ಯಾಗ್ರಹ, ಪತ್ರಿಕಾ ಹೇಳಿಕೆಗಳು, ಪ್ರತಿಭಟನೆಗಳು; ಕನ್ನಡ ಸಂಘ ಸಂಸ್ಥೆಗಳ ಹೋರಾಟಗಳು, ಹಕ್ಕೊತ್ತಾಯಗಳು – ಸಾಹಿತ್ಯ ಸಮ್ಮೇಳನದ ನಿರ್ಣಯದ ಒತ್ತಾಯಗಳು ನಡೆಯುತ್ತಲೇ ಇದ್ದವು) ಕೇಂದ್ರ ಮತ್ತು ರಾಜ್ಯಗಳಲ್ಲಿ ಕಾಂಗ್ರೆಸ್ ಸರ್ಕಾರಗಳೇ ಇದ್ದರೂ ರಾಜ್ಯದ ಕಾಂಗ್ರೆಸ್ ನಾಯಕರು ಕನ್ನಡಕ್ಕೆ ಶಾಸ್ತ್ರೀಯಸ್ಥಾನ ಘೋಷಿಸುವ ಪ್ರಯತ್ನದಲ್ಲಿ ನಿಷ್ಕ್ರಿಯರಾಗಿದ್ದರು. ಒಬ್ಬಿಬ್ಬರ ಪ್ರಯತ್ನಗಳನ್ನು ಬಿಟ್ಟರೆ ಒಕ್ಕೊರಲಿನ ರಾಜಕೀಯ ಒತ್ತಡ ಸಾಧ್ಯವಾಗಲೇ ಇಲ್ಲ. ರಾಜ್ಯಾದ್ಯಂತ ಹೋರಾಟ ತೀವ್ರವಾಗಿದ್ದರೂ ಕನ್ನಡ ಸಂಘಟನೆಗಳು ದೆಹಲಿಯಲ್ಲೇ ಧರಣಿ ಮೆರವಣಿಗೆ ಪ್ರತಿಭಟನೆ ನಡೆಸಿದರೂ ರಾಜ್ಯದ ನಾಯಕರಿಗೆ ಕನ್ನಡಿಗರ ಹಿತಾಸಕ್ತಿ ಮುಖ್ಯವಾಗಲೇ ಇಲ್ಲ.

೨೦೦೮ರಲ್ಲಿ ರಾಜ್ಯಕ್ಕೆ ಚುನಾವಣೆ ಎದುರಾಗಿ ಬಿಜೆಪಿ ಪಕ್ಷ ಮೇಲುಗೈ ಸಾಧಿಸಿ ಯಡಿಯೂರಪ್ಪ ಮುಖ್ಯಮಂತ್ರಿಯಾಗಿ ಆಯ್ಕೆಯಾದರು. ಇವರು ಅಧಿಕಾರ ವಹಿಸಿ ಕೊಂಡ ಆರಂಭದಲ್ಲೇ ಶಾಸ್ತ್ರೀಯ ಭಾಷೆಯ ಘೋಷಣೆಯ ಅಸ್ತ್ರವನ್ನು ಬಳಸಿಕೊಂಡು ೨೦೦೮ ಜುಲೈನಲ್ಲಿ ಪಾರ್ಲಿಮೆಂಟಿನ ಎದುರು ರಾಜ್ಯದ ಸಂಸದರು ಶಾಸಕರ ಧರಣಿಯನ್ನು ಘೋಷಿಸಿದರು. ಮುಂದಿನ ಲೋಕಸಭೆ ಚುನಾವಣೆಯನ್ನು ದೃಷ್ಟಿಯಲ್ಲಿಟ್ಟುಕೊಂಡು ಈ ಶಾಸ್ತ್ರೀಯ ಸ್ಥಾನದ ಹೋರಾಟ ರಾಜಕೀಯ ತಿರುವನ್ನು ಪಡೆಯಿತು.

ಯಡಿಯೂರಪ್ಪನವರ ಧರಣಿ ಘೋಷಣೆಯ ನಂತರ ಕಾಂಗ್ರೆಸ್ ನಾಯಕರಿಗೆ ಇದರ ರಾಜಕೀಯ ಲಾಭದ ಅರಿವಾಗಿ ಕೇಂದ್ರದ ಮೇಲೆ ಒತ್ತಡ ಹಾಕಲು ಮುಂದಾದರು. ಈ ರಾಜಕೀಯ ಹುನ್ನಾರದ ಫಲವಾಗಿ ಕನ್ನಡಿಗರಿಗೆ ಕೇಂದ್ರ ಸರ್ಕಾರ ರಾಜ್ಯೋತ್ಸವದ ಕೊಡುಗೆ ಎಂಬಂತೆ ಅಕ್ಟೋಬರ್, ೩೧, ೨೦೦೮ರಂದು ಕನ್ನಡ – ತೆಲುಗುಗಳಿಗೆ ಶಾಸ್ತ್ರೀಯ ಭಾಷೆಯ ಸ್ಥಾನ ಕಲ್ಪಿಸಿರುವ ಅಧಿಕೃತ ಘೋಷಣೆ ಮಾಡಲಾಯಿತು. ಕೊನೆಗೂ ಸಮಸ್ತ ಕನ್ನಡಿಗರ ಹೋರಾಟದ ಫಲವಾಗಿ ದಕ್ಕಿದ ಶಾಸ್ತ್ರೀಯ ಭಾಷಾ ಸ್ಥಾನದ ಘೋಷಣೆ

ರಾಜಕೀಯ ಘೋಷಣೆಯಾದದ್ದು ವಿಪರ್ಯಾಸವೇ ಸರಿ. 'ಅಂತೂ ಇಂತೂ ಕುಂತಿ ಮಕ್ಕಳಿಗೆ ರಾಜ್ಯವಿಲ್ಲಾ' ಎಂಬಂತೆ ಕೇಂದ್ರ ಸರ್ಕಾರ ಘೋಷಣೆಯನ್ನಷ್ಟೇ ಮಾಡಿ ಸುಮ್ಮನಾಯಿತು. ಚುನಾವಣಾ ಗಿಮಿಕ್‌ಗಾಗಿ ಕನ್ನಡಿಗರನ್ನು ವಂಚಿಸಿತು. ಬಿಜೆಪಿಯ ಪಾಲಾಗುತ್ತಿದ್ದ ಈ ರಾಜಕೀಯ ಲಾಭವನ್ನು ಕಾಂಗ್ರೆಸ್ ತನ್ನದನ್ನಾಗಿಸಿಕೊಂಡರೂ ಅದನ್ನು ಘೋಷಣೆಗಷ್ಟೇ ಸೀಮಿತಗೊಳಿಸಿ ತನ್ನ ಸ್ವಹಿತಾಸಕ್ತಿಯನ್ನು ಪ್ರದರ್ಶಿಸಿತು.

ಅನುದಾನ ಬಿಡುಗಡೆಗೆ ಹೋರಾಟ

ಕನ್ನಡಕ್ಕೆ ಶಾಸ್ತ್ರೀಯ ಸ್ಥಾನದ ಕಿರೀಟ ಲಭಿಸಿದರೂ ಕನ್ನಡಿಗರ ಹೋರಾಟ ನಿಲ್ಲಲಿಲ್ಲ. ಗೆಜೆಟ್ ಪ್ರಕಟನೆಗೆ, ಬಜೆಟ್ ಮಂಜೂರಾತಿಗೆ ಒತ್ತಾಯ ಮಾಡುವ ಹೋರಾಟವಾಗಿ ಮುಂದುವರಿಯಿತು. ತಮಿಳುನಾಡಿನ 'ಗಾಂಧಿ' ಎಂಬ ವ್ಯಕ್ತಿಯ ಸಾರ್ವಜನಿಕ ಹಿತಾಸಕ್ತಿ ಕೇಸಿನ ನೆಪಮಾಡಿಕೊಂಡು ಕೇಂದ್ರ ಸರ್ಕಾರ ತಟಸ್ಥವಾಯಿತು. ಇದರ ಹಿಂದೆ ತಮಿಳು ನಾಡಿನ ಒತ್ತಡವಿತ್ತೆಂಬ ರಾಜಕೀಯ ಕುತಂತ್ರದ ವಾಸನೆ ಬಡಿಯುತ್ತಿತ್ತು. ಆದರೂ ರಾಜ್ಯದ ಸಂಸದರಾಗಲಿ ಕಾಂಗ್ರೆಸ್ ನಾಯಕರಾಗಲಿ ತಮ್ಮ ರಾಜ್ಯ ಹಿತಾಸಕ್ತಿಯ ಬದ್ಧತೆಯನ್ನು ತೋರಿಸಲಿಲ್ಲ. ಕನ್ನಡಿಗರ ಹೋರಾಟ ಮೊದಲಿನಷ್ಟು ತೀವ್ರವಾಗಲಿಲ್ಲ. ಸಂಘಟನೆಗಳಿಗೆ, ಸಾಮಾನ್ಯರಿಗೆ ಸ್ಥಾನ ಲಭಿಸಿದ ಮೇಲೆ ಇನ್ನೇಕೆ ಹೋರಾಟವೆಂಬ ಧೋರಣೆ, ಜೊತೆಗೆ ಪತ್ರಿಕೆ – ಟಿವಿ ಮಾಧ್ಯಮಗಳ ಅತಿರಂಜಿತ ವರದಿಗಳಿಂದ ಹೋರಾಟಕ್ಕೆ ಜಯ ಲಭಿಸಿತೆಂಬ ಭಾವ ಮೂಡಿತ್ತು. ಆದರೆ ಸಾಹಿತಿ–ಗಣ್ಯರಿಗೆ ಮಾತ್ರ ಇದು ಕೇವಲ ರಾಜಕೀಯ ಘೋಷಣೆ ಎಂಬ ಮನವರಿಕೆಯಾಗಿತ್ತು. ಹೀಗಾಗಿ ಇವರ ಹೋರಾಟಕ್ಕೆ ತೀಕ್ಷ್ಣವಾದ ಜನ ಬೆಂಬಲ ಸಿಕ್ಕಿರಲಿಲ್ಲ. ಕೇವಲ ಸಭೆ–ಸಮಾರಂಭ, ಪತ್ರಿಕಾ ಹೇಳಿಕೆಗಳಿಗೆ ಸೀಮಿತವಾಗಿತ್ತು.

ಮುಖ್ಯಮಂತ್ರಿ ಯಡಿಯೂರಪ್ಪ ಲೋಕಸಭೆ ಚುನಾವಣಾ ತಂತ್ರವಾಗಿ ಕೇಂದ್ರದಿಂದ 'ನಿಧಿ' ನೀಡದಿದ್ದರೇನಂತೆ ರಾಜ್ಯ ಸರ್ಕಾರವೇ ೨೫ ಕೋಟಿ ನೀಡುತ್ತದೆಂದು ಘೋಷಿಸಿ ರಾಜ್ಯದ ಎಲ್ಲ ವಿಶ್ವವಿದ್ಯಾಲಯ, ಪರಿಷತ್ತು ಅಕಾಡೆಮಿಗಳಿಗೆ ತಲಾ ಒಂದೊಂದು ಕೋಟಿಯಂತೆ ನೀಡಿತು. ಮರುವರ್ಷವೂ ಇನ್ನೂ ಒಂದೊಂದು ಕೋಟಿ ಬಿಡುಗಡೆ ಮಾಡಿತು. ಆದರೆ ಕೆಲವು ವಿಶ್ವವಿದ್ಯಾಲಯಗಳು ಈ ಯೋಜನೆಯ ಹಣವನ್ನು ಮನಸೋ ಇಚ್ಛೆ ಬಳಸಿ ವಿವಾದ – ತನಿಖೆಗೊಳಗಾಗಿ ಈ ರಾಜ್ಯ ಅನುದಾನವೂ ಸ್ಥಗಿತವಾಯಿತು. ಈ ಲೇಖನ ಬರೆಯುವ ಕಾಲಕ್ಕೂ (೨೦೧೩ ಸೆಪ್ಟೆಂಬರ್) ಇನ್ನೂ ಕೆಲವು ವಿಶ್ವವಿದ್ಯಾಲಯಗಳು ಏನೂ ಕಾರ್ಯ ಮಾಡಿಲ್ಲ. ಯಾವುದೇ ಯೋಜನೆ ರೂಪಿಸಿಲ್ಲ. ಕೆಲವು ಯೋಜನೆಗಳು ಆಮೆ ನಡಿಗೆಯಲ್ಲಿವೆ. ಕೇಂದ್ರ ಸರ್ಕಾರ ಕನ್ನಡ ಶಾಸ್ತ್ರೀಯ ಭಾಷಾ ಯೋಜನೆಯ ಬಗ್ಗೆ ಈವರೆಗೆ ರಾಜಕೀಯ ಘೋಷಣೆ ಬಿಟ್ಟರೆ ಇನ್ನಾವುದೇ ಅನುಕೂಲಗಳನ್ನು ಮಾಡಿಕೊಟ್ಟಿಲ್ಲ.

ಈಚೆಗಷ್ಟೇ ಕೇಂದ್ರ ಸರ್ಕಾರ ಮೈಸೂರಿನಲ್ಲಿರುವ ಕೇಂದ್ರ ಭಾಷಾ ಸಂಸ್ಥಾನಕ್ಕೆ ಅನುದಾನ ಬಿಡುಗಡೆ ಮಾಡಿದೆ. ಆದರೆ ಆ ಕೇಂದ್ರಕ್ಕೆ ಅದನ್ನು ಹೇಗೆ ನಿರ್ವಹಿಸಬೇಕೆಂದು ನಿರ್ದೇಶನವಾಗಲಿ, ಯೋಜನೆಗಳಾಗಲಿ ಉಸ್ತುವಾರಿಯಾಗಿ ಸೂಚಿಸಿಲ್ಲ. ರಾಜ್ಯ ಸರ್ಕಾರವೂ ಉನ್ನತ ಸಮಿತಿಯನ್ನು ರಚಿಸಿಲ್ಲ. ಏನೂ ಕೆಲಸ ಮಾಡಲಾಗದೆ, ಯಾವ ಯೋಜನೆಯನ್ನೂ ರೂಪಿಸಲಾಗದೆ ಅಥವಾ ತಾಂತ್ರಿಕ ಓಡಾಟದಲ್ಲೇ ಕಾಲ ಹರಣವಾಗುತ್ತಿದೆ.

ಕೇಂದ್ರ ಸರ್ಕಾರ ಪ್ರತಿವರ್ಷ ಇಂತಿಷ್ಟು ಎಂದು ನಿಗದಿತ ಮೊತ್ತವನ್ನು ಶಾಸ್ತ್ರೀಯ ಕನ್ನಡ ಯೋಜನೆಗೆ ಮೀಸಲಿಡಬೇಕು (ಈಗಾಗಲೆ ತಮಿಳಿಗೆ, ಸಂಸ್ಕೃತ ಭಾಷೆಗೆ ೧೩೦೦ ಕೋಟಿಗೂ ಹೆಚ್ಚು ಅನುದಾನವಿದೆ) 'ರಾಷ್ಟ್ರೀಯ ಉನ್ನತ ಅಧ್ಯಯನ ಸಮಿತಿ'ಯನ್ನು ರಚಿಸಬೇಕು. ವಿವಿಧ ಯೋಜನೆಗಳ ಶಾಸ್ತ್ರೀಯ ಭಾಷಾ ಅನುದಾನಕ್ಕೆ ಈ ಸಮಿತಿ ಮಂಜುರಾತಿ ನೀಡಿ ಮೇಲ್ವಿಚಾರಣೆ ಗಮನಿಸಬೇಕು. ಈ ಸಮಿತಿ ಕೇಂದ್ರ ಸರ್ಕಾರದ ಅಧೀನದಲ್ಲಿದ್ದು ತಜ್ಞ ಪರಿಣಿತರನ್ನು ಸರ್ಕಾರ ನೇಮಿಸಬೇಕು. ಈ ಅಧ್ಯಯನ ಕೇಂದ್ರ ರಾಜ್ಯದ ಪ್ರಮುಖ ಕೇಂದ್ರದಲ್ಲಿ ಕನ್ನಡಿಗರಿಗೆ ಸುಲಭವಾಗಿ ಭೇಟಿಮಾಡುವಂತಿರಬೇಕು. ಆದರೆ ಈವರೆಗೂ ಈ ಯಾವ ಪ್ರಯತ್ನವೂ ಆಗಿಲ್ಲ. ಈಚೆಗೆ ಮೈಸೂರಿನ CIILನಲ್ಲಿರುವ ಕನ್ನಡ ಶಾಸ್ತ್ರೀಯ ಭಾಷಾ ಕೇಂದ್ರವನ್ನು ಕನ್ನಡ ಸಂಸ್ಕೃತಿ ಇಲಾಖೆಯ ಮೂಲಕ ವ್ಯವಹರಿಸಿ ಬೆಂಗಳೂರಿಗೆ ತರುವ ಪ್ರಯತ್ನ ನಡೆಯುತ್ತಿದೆಯೆಂದು ಪತ್ರಿಕಾ ಹೇಳಿಕೆಯೊಂದು ಬಂದಿರುವುದನ್ನು ಬಿಟ್ಟರೆ ರಾಜ್ಯ ಸರ್ಕಾರದಿಂದಲೂ ಬೇರೇನೂ ಪ್ರಯತ್ನ ನಡೆದಂತೆ ಕಾಣುತ್ತಿಲ್ಲ.

ಮಾಡಬೇಕಾದ್ದೇನು?

ವಾಸ್ತವವಾಗಿ ರಾಜ್ಯ ಸರ್ಕಾರ ತಮಿಳು ಭಾಷೆಗೆ ಕೇಂದ್ರದಲ್ಲಿ ಆಗಿರುವ ಬೆಳವಣಿಗೆಗಳನ್ನು ಗಮನಿಸಿ ಅದೇ ರೀತಿಯಲ್ಲಿ ಪ್ರಯತ್ನ ಮಾಡಬೇಕು. ಸರ್ಕಾರಕ್ಕೆ ಕನ್ನಡ ಸಂಸ್ಕೃತಿ ಇಲಾಖೆ, ಕನ್ನಡ ಅಭಿವೃದ್ಧಿ ಪ್ರಾಧಿಕಾರ, ಸಾಹಿತ್ಯ ಅಕಾಡೆಮಿಗಳು ಸರಿಯಾದ ಮಾರ್ಗದರ್ಶನ ಮಾಡಬೇಕು. ಆ ಕೆಲಸ ಸಮರ್ಪಕವಾಗಿ ಆಗುವುದಕ್ಕೆ ವಿದ್ವಾಂಸರ ನೆರವು ಪಡೆಯಬೇಕು. ಈವರೆಗೂ ರಾಜ್ಯದಿಂದಾಗಲಿ ಕೇಂದ್ರದಿಂದಾಗಲಿ ಯಾವುದೇ ಬೆಳವಣಿಗೆಯೂ ನಡೆದಿಲ್ಲ ಎಂದೇ ಸದ್ಯಕ್ಕೆ ಭಾವಿಸಬೇಕಾಗಿದೆ. ತಮಿಳು ಭಾಷಾಭಿವೃದ್ಧಿಗೆ ಕೇಂದ್ರ ಸರ್ಕಾರ ಮಾನವ ಸಂಪನ್ಮೂಲ ಇಲಾಖೆಯ ಅಧೀನದಲ್ಲಿ ಒಂದು ಬೋರ್ಡನ್ನು ಸ್ಥಾಪಿಸಿದೆ. ಈ ಬೋರ್ಡು ತಮಿಳು ಭಾಷಾ ಅಭಿವೃದ್ಧಿಗೆ ಅಗತ್ಯ ಸಲಹೆ, ಮಾರ್ಗದರ್ಶನ ನೀಡುತ್ತದೆ. ಇದಕ್ಕೆ ಅಧ್ಯಕ್ಷರಾಗಿ ಶ್ರೇಷ್ಠ ವಿದ್ವಾಂಸರನ್ನು ಮಾನವ ಸಂಪನ್ಮೂಲ ಸಚಿವಾಲಯದಿಂದ ನೇಮಿಸಿ ಅವರ ಜೊತೆಗೆ ಹತ್ತು ಜನ ವಿದ್ವಾಂಸರನ್ನು ಪರಿಣಿತ

ಸದಸ್ಯರನ್ನಾಗಿ ನಾಮಕರಣ ಮಾಡಿದೆ. ಈ ಬೋರ್ಡಿನ ಸದಸ್ಯರ ಅವಧಿ ಮೂರು ವರ್ಷವಾಗಿರುತ್ತದೆ.

ರಾಜ್ಯದಲ್ಲಿ ಉನ್ನತ ಅಧ್ಯಯನ ಕೇಂದ್ರ : ಇದೇ ರೀತಿ ರಾಜ್ಯದಲ್ಲೂ ಒಂದು ಉನ್ನತ ಅಧ್ಯಯನ ಕೇಂದ್ರವನ್ನು ಕೇಂದ್ರ ಸರ್ಕಾರದ ಮಾನವ ಸಂಪನ್ಮೂಲ ಇಲಾಖೆ ಸ್ಥಾಪಿಸುತ್ತದೆ. ಇದಕ್ಕೆ ತಜ್ಞರೊಬ್ಬರನ್ನು ನಿರ್ದೇಶಕರನ್ನಾಗಿ ನೇಮಿಸಿ ಅವರಿಗೆ ಅಗತ್ಯವಾದ ಸಿಬ್ಬಂದಿ, ಕಚೇರಿ, ಸಂಪನ್ಮೂಲಗಳನ್ನು ಸಚಿವಾಲಯವೇ ಒದಗಿಸುತ್ತದೆ. ಅದಕ್ಕೆ ಸೂಕ್ತ ಸ್ಥಳಾವಕಾಶವನ್ನು ರಾಜ್ಯ ಸರಕಾರ ಒದಗಿಸಬೇಕಾಗಿದೆ.

ಈ ಉನ್ನತ ಅಧ್ಯಯನ ಕೇಂದ್ರ ಪ್ರತಿವರ್ಷವೂ ಕ್ರಿಯಾಯೋಜನೆಯನ್ನು ರೂಪಿಸಿ ಮಾನವ ಸಂಪನ್ಮೂಲ ಇಲಾಖೆಗೆ ಮತ್ತು ಬೋರ್ಡ್‌ಗೆ ಕಳುಹಿಸಬೇಕು. ಬೋರ್ಡ್ ಸೂಕ್ತ ಮಾರ್ಗದರ್ಶನವನ್ನು ಸಚಿವಾಲಯಕ್ಕೆ ನೀಡುತ್ತದೆ. ಅದರಂತೆ ಕೇಂದ್ರ ಸರ್ಕಾರ ಯೋಜನೆಗಳನ್ನು ಮಂಜೂರು ಮಾಡಿ ಹಣಬಿಡುಗಡೆ ಮಾಡುತ್ತದೆ.

ಇದು ಶಾಸ್ತ್ರೀಯ ಭಾಷಾ ಅಭಿವೃದ್ಧಿಗೆ ಕೇಂದ್ರ ಸರ್ಕಾರದಲ್ಲಿ ತಮಿಳಿಗೆ ಇರುವ ವ್ಯವಸ್ಥೆ. ಇದೇ ವ್ಯವಸ್ಥೆಯನ್ನು ಕನ್ನಡಕ್ಕೂ ಮಾಡಿಸಬೇಕಾದದ್ದು ರಾಜ್ಯ ಸರ್ಕಾರದ ಕೆಲಸ. ಆದರೆ ಸರ್ಕಾರದ ಯಾವ ಇಲಾಖೆಯಲ್ಲಿ ಈ ಕೆಲಸ ನಡೆಯುತ್ತಿದೆ? ತಜ್ಞರ ನೆರವನ್ನು ಸರ್ಕಾರ ಪಡೆದಿದೆಯೆ? ಅಥವಾ ಸಮಿತಿಯನ್ನು ರಚಿಸಿದೆಯೆ ಎಂಬ ಬಗ್ಗೆ ಸಾರ್ವಜನಿಕರಿಗೆ ಯಾವುದೇ ಮಾಹಿತಿಯಿಲ್ಲ. ವಿದ್ವಾಂಸರು, ತಜ್ಞರು, ಸಭೆ-ಸಮಾರಂಭಗಳಲ್ಲಿ 'ಏನೂ ಕೆಲಸ ಆಗುತ್ತಿಲ್ಲ. ಕೇಂದ್ರದಿಂದ ಇನ್ನೂ ಅನುದಾನ ಮಂಜೂರಾಗಿಲ್ಲ' ಎಂದು ಹೇಳುವುದಷ್ಟೆ ನಡೆಯುತ್ತಿದೆ.

ವಾಸ್ತವವಾಗಿ ಅನುದಾನ ಮಂಜೂರಾತಿಗೆ ರಾಜ್ಯ ಸರ್ಕಾರದಿಂದ ಯೋಜನೆ ಸಲ್ಲಿಸಬೇಕು. ಸಮಿತಿ (ಬೋರ್ಡ್) ರಚನೆಗೆ ಒತ್ತಾಯಿಸಲು ತಜ್ಞರಪಟ್ಟಿ ಸಲ್ಲಿಸಬೇಕು. 'ತಮಿಳು ಭಾಷಾಭಿವೃದ್ಧಿ ಯೋಜನೆ'ಯ ಮಾದರಿ ನಮ್ಮ ಮುಂದಿದ್ದರೂ ನಾವು ಅಂದರೆ ಸರ್ಕಾರ ಇನ್ನೂ ಏನೂ ಮಾಡಿಲ್ಲದಿರುವುದು ಅಥವಾ ಏನಾದರೂ ಪ್ರಯತ್ನ ಆಗಿದ್ದರೆ ಅದನ್ನು ಜನತೆಯ ಮುಂದಿಡದಿರುವುದು ವಿಷಾದನೀಯ. ತಮಿಳು ಭಾಷಾಭಿವೃದ್ಧಿ ಯೋಜನೆ ಹೀಗಿದೆ.

೧. ತಮಿಳು ಭಾಷೆಯನ್ನು, ಮಾತನಾಡುವ ಮತ್ತು ಮಾತನಾಡದ ಪ್ರದೇಶಗಳಲ್ಲಿ ಅಭಿವೃದ್ಧಿಗೊಳಿಸಿ ಪ್ರಚಾರ ಮಾಡಿ ಸಂರಕ್ಷಿಸುವುದು ಯೋಜನೆಯ ಮುಖ್ಯ ಆಶಯ.

೨. ಈ ಯೋಜನೆ ಪೂರ್ಣವಾಗಿ ಶಾಸ್ತ್ರೀಯ ತಮಿಳಿಗೆ ಅನ್ವಯಿಸುತ್ತದೆ. ಶಾಸ್ತ್ರೀಯ ತಮಿಳು ಎಂದರೆ ಯಾವುದು, ಯಾವ ಅವಧಿಯದು ಎಂಬುದನ್ನು ಅದು ಅಧಿಕೃತವಾಗಿ ಘೋಷಿಸಿದೆ (ನಮ್ಮಲ್ಲಿ ಈವರೆಗೂ ಈ ಕೆಲಸವೂ ಇನ್ನೂ ಆಗಿಲ್ಲ)

೩. ಶಾಸ್ತ್ರೀಯ ಭಾಷಾ ಅಧ್ಯಯನಕ್ಕೆ ಬಹುಶಾಸ್ತ್ರೀಯ ಸ್ವರೂಪವನ್ನು ತಮಿಳು ರೂಪಿಸಿದೆ. ಭಾಷಾವಿಜ್ಞಾನ, ಸಾಹಿತ್ಯ, ಇತಿಹಾಸ, ಸಂಶೋಧನೆ, ಪುರಾತತ್ವ, ಕಲೆ, ಶಾಸನ, ಹಸ್ತಪ್ರತಿ ಇತ್ಯಾದಿ ವಿವಿಧ ಕ್ಷೇತ್ರಗಳಿಗೆ ಅಧ್ಯಯನ ಪರಿಧಿಯನ್ನು ವಿಸ್ತರಿಸಿ ಆಯಾ ಕ್ಷೇತ್ರದ ತಜ್ಞರನ್ನು ಕಲೆ ಹಾಕಿ ಶಾಸ್ತ್ರೀಯ ತಮಿಳಿನ ವಿವಿಧ ಅಂಶಗಳ ಸಂಶೋಧನೆ ಅಧ್ಯಯನ, ಅನ್ವೇಷಣೆಯನ್ನು ಮಾಡಿಸುವುದಾಗಿದೆ.

೪. ತೌಲನಿಕ ಅಧ್ಯಯನವನ್ನು ಈ ಯೋಜನೆ ಒಳಗೊಂಡಿದೆ. ಇನ್ನಿತರ ದ್ರಾವಿಡ ಭಾಷೆಗಳ ಮೇಲೆ ಶಾಸ್ತ್ರೀಯ ತಮಿಳಿನ ಪ್ರಭಾವವನ್ನು ಅಧ್ಯಯನ ಮಾಡಿಸುವುದು.

೫. ಶಾಸ್ತ್ರೀಯ ತಮಿಳಿನ ಬಗ್ಗೆ ವಿಶಿಷ್ಟ ಅಧ್ಯಯನ, ಸಂಶೋಧನೆ ಮಾಡಿರುವ ವಿದ್ವಾಂಸರನ್ನು ಗುರುತಿಸಿ ಪ್ರಶಸ್ತಿ ಗೌರವಗಳನ್ನು ನೀಡುವುದು. ಈ ಪ್ರಶಸ್ತಿ ಗೌರವಗಳನ್ನು ವಿವಿಧ ವರ್ಗಗಳಲ್ಲಿ ಪಟ್ಟಿಮಾಡಿದೆ.

ಅ) ಎರಡು ಅಂತರರಾಷ್ಟ್ರೀಯ ಪ್ರಶಸ್ತಿಗಳು. ಇವುಗಳಲ್ಲಿ ಒಂದು ಭಾರತೀಯ ಪ್ರತಿಭೆಗೆ, ಇನ್ನೊಂದು ಅನಿವಾಸಿ ಭಾರತೀಯರಿಗೆ. ಇವುಗಳ ಮೊತ್ತ ತಲಾ ಒಂದು ಲಕ್ಷ ರೂಪಾಯಿ.

ಆ) ಒಂದು ರಾಷ್ಟ್ರೀಯ ಪ್ರಶಸ್ತಿ – ಒಂದು ಲಕ್ಷ.

ಇ) ಐದು ತರುಣ ವಿದ್ವಾಂಸ ಪ್ರಶಸ್ತಿ, ೪೦ ವರ್ಷದೊಳಗಿನವರಿಗೆ, ತಲಾ ಐವತ್ತು ಸಾವಿರ.

ಈ ಯೋಜನೆಯನ್ನು ಕೇಂದ್ರ ಸಚಿವಾಲಯ ಯಥಾವತ್ತಾಗಿ ಮಂಜೂರು ಮಾಡಿದೆ. ಇದರ ಜೊತೆಗೆ ಅಧ್ಯಯನ, ಸಂಶೋಧನೆ, ಶಿಕ್ಷಣ, ತರಬೇತಿ, ಪ್ರಚಾರ ಯೋಜನೆಗಳಿಗೆ ಕೇಳಿದಷ್ಟು ಹಣಕೊಡಲು ಸಿದ್ಧವಿದೆ. ಶಾಸ್ತ್ರೀಯ ಭಾಷಾ ಯೋಜನೆಗೆ ಹಣಕಾಸಿನ ಕೊರತೆಯೇ ಇಲ್ಲ.

ಈಚೆಗೆ ತಮಿಳುನಾಡು ಪ್ರಶಸ್ತಿ ಮೊತ್ತವನ್ನು ೫.೦ ಲಕ್ಷಕ್ಕೆ ಏರಿಸಿ, ಜ್ಞಾನಪೀಠಕ್ಕೆ ಸಮಾನ ಗೊಳಿಸಬೇಕೆಂಬ ಅದರ ಬೇಡಿಕೆಯನ್ನು ಕೇಂದ್ರ ಮಂಜೂರು ಮಾಡಿದೆ. ರಾಷ್ಟ್ರೀಯ ಪ್ರಶಸ್ತಿಗೆ 'ತಿರುವಳ್ಳುವರ್ ಪ್ರಶಸ್ತಿ' ಎಂದೂ ಅಂತರರಾಷ್ಟ್ರ ಪ್ರಶಸ್ತಿಗೆ 'ತೋಲ್ಕಾಪಿಯರ್ ಪ್ರಶಸ್ತಿ' ಎಂದೂ ನಾಮಕರಣಮಾಡಿದೆ. ಯಾವುದಾದರೂ ವರ್ಷದಲ್ಲಿ ಅಂತರರಾಷ್ಟ್ರ ಪ್ರಶಸ್ತಿಗೆ ತಮಿಳು ವಿದ್ವಾಂಸ (ಅಂತರರಾಷ್ಟ್ರಮಟ್ಟದಲ್ಲಿ ಶಾಸ್ತ್ರೀಯ ತಮಿಳು ಅಧ್ಯಯನ ಮಾಡಿರುವ – ಗ್ರಂಥ ಪ್ರಕಟಿಸಿರುವ ವಿದ್ವಾಂಸ) ದೊರಕದಿದ್ದಾಗ ಆ ವರ್ಷ ಎರಡು ರಾಷ್ಟ್ರೀಯ ಪ್ರಶಸ್ತಿಗಳನ್ನು ಘೋಷಿಸಬೇಕೆಂಬ ಕೋರಿಕೆಯನ್ನೂ ಕೇಂದ್ರ ಸರ್ಕಾರ ಒಪ್ಪಿದೆ.

ಕನ್ನಡವೂ ಇದೇ ನಿಟ್ಟಿನಲ್ಲಿ ಅಭಿವೃದ್ಧಿ ಯೋಜನೆ ಸಿದ್ಧಪಡಿಸಿ ಕೇಂದ್ರ ಮಾನವ ಸಂಪನ್ಮೂಲ ಇಲಾಖೆಗೆ ಕಳಿಸಬೇಕು, ಯಥಾವತ್ತಾಗಿ ಇದೇ ಯೋಜನೆಯನ್ನು ಅಳವಡಿಸಿಕೊಳ್ಳಬಹುದು.

ಶಾಸ್ತ್ರೀಯ ಕನ್ನಡದ ಅವಧಿ ನಿಗದಿ : ಶಾಸ್ತ್ರೀಯ ಕನ್ನಡದ ಅವಧಿಯನ್ನು ಈಗಾಗಲೇ ವಿದ್ವಾಂಸರು ಚರ್ಚಿಸಿರುವಂತೆ ಕ್ರಿ.ಶ. ೧೭೫೦ರ ವರೆಗೆ ಅಥವಾ ಆ ಶತಮಾನದ ಅಂತ್ಯ ಘಟ್ಟವಾದ ೧೮೦೦ರ ವರೆಗೂ ನಿಗದಿಗೊಳಿಸಬಹುದು. ಈ ಅವಧಿಯಲ್ಲಿ ಶಾಸ್ತ್ರೀಯ ಕನ್ನಡ ಹಲವು ಅವಸ್ಥಾಂತರಗಳನ್ನು ಪಡೆದಿದ್ದು ಆಯಾ ಅವಸ್ಥಾಂತರದ ಕಾಲದ ಸಾಹಿತ್ಯ – ಸಂಸ್ಕೃತಿಗಳೆಲ್ಲ ಭಿನ್ನ ಭಿನ್ನವಾದವುಗಳೇ ಆಗಿವೆ.

ಈ ಕಾಲಘಟ್ಟಗಳ ಭಾಷೆ – ಮೂಲ ಕನ್ನಡ, ಪೂರ್ವದ ಹಳಗನ್ನಡ, ಹಳಗನ್ನಡ ಪೂರ್ವದ ನಡುಗನ್ನಡ ನಡುಗನ್ನಡಗಳಾಗಿ ಭಿನ್ನವಾಗಿದ್ದರೆ, ಸಾಹಿತ್ಯ – ಚಂಪೂ, ರಗಳೆ, ವಚನ, ಕೀರ್ತನೆ, ಷಟ್ಪದಿ, ಸಾಂಗತ್ಯ ಗದ್ಯಗಳಾಗಿ ಭಿನ್ನವಾಗಿವೆ. ಹಾಗೆಯೇ ಇತಿಹಾಸದಲ್ಲಿ ಕದಂಬ, ಗಂಗ, ಚಾಲುಕ್ಯ, ರಾಷ್ಟ್ರಕೂಟ, ಹೊಯ್ಸಳ, ವಿಜಯನಗರ ಅರಸರ ಭಿನ್ನ ಆಳ್ವಿಕೆಗಳಲ್ಲಿದೆ.

ಸಂಸ್ಕೃತಿಗಳೂ ಆಯಾ ರಾಜರ ಕಾಲಕ್ಕೆ ಭಾಷೆಗೆ ಅನುಗುಣವಾಗಿ ಭಿನ್ನವಾಗಿ ದಾಖಲಾಗಿವೆ. ಇವುಗಳಲ್ಲಿ ಬರುವ ಮನುಷ್ಯ ಸ್ವಭಾವ, ಜೀವನ ಮೌಲ್ಯಗಳು, ಕಲೆ, ಸಂಗೀತ, ಜೀವನಶೈಲಿ, ಜಾನಪದ, ಆಡಳಿತಕ್ರಮ, ಶಿಕ್ಷಣ, ಸಂಶೋಧನೆ, ಹೊಸ ಹೊಸ ಕೌಶಲಗಳ ಶೋಧನೆ, ವಿಜ್ಞಾನ, ತಂತ್ರಜ್ಞಾನ, ವೈದ್ಯಪದ್ಧತಿ, ಧರ್ಮ, ವೈಚಾರಿಕತೆ, ಆರ್ಥಿಕತೆ, ರಾಜಕೀಯ ಬದಲಾವಣೆ, ವ್ಯಾಪಾರ, ವಾಣಿಜ್ಯ, ವ್ಯವಹಾರ, ಉಡುಪು, ಆಯುಧ, ಕೃಷಿ, ಪ್ರಾಣಿ ಸಾಕಣೆ ಇತ್ಯಾದಿ. ಜೀವನಾವಶ್ಯಕವಾದ ಎಲ್ಲ ಹಂತಗಳಲ್ಲೂ ಭಿನ್ನತೆ, ಬೆಳವಣಿಗೆ ದಾಖಲಾಗಿರುವುದನ್ನು ಕಾಣಬಹುದು.

ಈ ಎಲ್ಲವೂ ಶಾಸ್ತ್ರೀಯ ಕನ್ನಡದ ಅಧ್ಯಯನದ ವ್ಯಾಪ್ತಿಗೆ ಒಳಪಡುತ್ತದೆ. ಆದ್ದರಿಂದ ಕ್ರಿ.ಶ. ೧೮೦೦ರ ವರೆಗಿನ ಸಮಗ್ರ ಕನ್ನಡ–ಕನ್ನಡಿಗ–ಕರ್ನಾಟಕದ ಅಧ್ಯಯನವನ್ನು ಶಾಸ್ತ್ರೀಯ ಕನ್ನಡದ ಅಧ್ಯಯನ ಎಂದು ಘೋಷಿಸಬೇಕು. ಶಾಸ್ತ್ರೀಯ ಕನ್ನಡ ಎಂದರೆ ಕೇವಲ ಭಾಷೆ ಸಾಹಿತ್ಯಗಳಲ್ಲ, ಎಲ್ಲ ಬಗೆಯ ಜ್ಞಾನಶಿಸ್ತುಗಳು, ಜೀವನಶೈಲಿ ಎಂಬುದನ್ನು ಮೊದಲು ಮನವರಿಕೆ ಮಾಡಿಕೊಳ್ಳುವ ಅಗತ್ಯವಿದೆ. ಆಗ ಮಾತ್ರ ಶಾಸ್ತ್ರೀಯ ಕನ್ನಡದ ಅಧ್ಯಯನ ವಿಶಾಲ ಭಿತ್ತಿಯಲ್ಲಿ ತೆರೆದುಕೊಳ್ಳಲು ಸಾಧ್ಯ, ವ್ಯಾಪಕವಾಗಿ ಯೋಜನೆ ರೂಪಿಸಲು ಸಾಧ್ಯ. ಅಧ್ಯಯನ ಸಂಶೋಧನೆಗಳಿಗೆ ವಿಸ್ತಾರವಾದ ವ್ಯಾಪ್ತಿ ದೊರಕಲು ಸಾಧ್ಯ. ಹಾಗೆಯೇ ತರುಣರನ್ನು, ಆಸಕ್ತರ ದಂಡನ್ನು ಎಲ್ಲ ಕ್ಷೇತ್ರಗಳತ್ತಲೂ ಸೆಳೆಯಲು ಅವಕಾಶವಾಗುತ್ತದೆ.

ಈ ಮೂಲಕ ಶಾಸ್ತ್ರೀಯ ಯೋಜನೆಯ ಅವಕಾಶ ಬಳಸಿಕೊಂಡು ಕನ್ನಡವನ್ನು ಎಲ್ಲ ಆಯಾಮಗಳಲ್ಲೂ ಅಭಿವೃದ್ಧಿಪಡಿಸಲು ಕೇಂದ್ರದಿಂದ ಸಾವಿರ ಸಾವಿರ ಕೋಟಗಳಲ್ಲಿ

ಅನುದಾನ ಪಡೆಯಲು ಹೆಬ್ಬಾಗಿಲು ತೆರೆಯುತ್ತದೆ. ಕನ್ನಡದ ಸರ್ವಾಂಗೀಣ ಅಭಿವೃದ್ಧಿಗೆ, ಕೋಟಿ ಬೆಳವಣಿಗೆಗೆ ಅವಕಾಶವಾಗುತ್ತದೆ. ಶಾಸ್ತ್ರೀಯ ಕನ್ನಡದ ಮೂಲಕ ಸಮಕಾಲೀನ ಕರ್ನಾಟಕದ ಅಭಿವೃದ್ಧಿ ನಮ್ಮ ಮೂಲ ಮಂತ್ರವಾಗಬೇಕು. ಇಲ್ಲೊಂದು ಎಚ್ಚರವನ್ನು ನಾವು ಗಮನದಲ್ಲಿಟ್ಟಿರಬೇಕು. ಆಧುನಿಕ ಕನ್ನಡ-ಕರ್ನಾಟಕದ ಯೋಜನೆಗಳಿಗೆ ಇಲ್ಲಿ ಮಂಜೂರಾತಿ ದೊರೆಯುವುದಿಲ್ಲ.

ಈ ಯೋಜನೆ ಏನಿದ್ದರೂ ಶಾಸ್ತ್ರೀಯ ಕನ್ನಡಕ್ಕೆ ಸೀಮಿತ. ನಾವು ನಿಗದಿಗೊಳಿಸಿ ಕೇಂದ್ರದ ಅನುಮೋದನೆ ಪಡೆದ ಅವಧಿಯ ಒಳಗಿನ ಕನ್ನಡ-ಕನ್ನಡಿಗ-ಕರ್ನಾಟಕದ ಅಭಿವೃದ್ಧಿಯ ಯೋಜನೆಗಳಿಗೆ ಮಾತ್ರ ಅನುದಾನ ಬಿಡುಗಡೆಯಾಗುತ್ತದೆ. ಇದಕ್ಕೆ ಮಿತಿಯಿಲ್ಲ. ನಾವು ಹಾಕುವ ಯೋಜನೆಗಳ ಮೇಲೆ ಅದು ನಿರ್ಧಾರವಾಗುತ್ತದೆ.

ನಮ್ಮ ಈಗಿನ ಯಾವುದೇ ಅಭಿವೃದ್ಧಿ ಚಟುವಟಿಕೆಗಳಿಗೂ ಈ ಯೋಜನೆಯ ಮೂಲಕ ಕೇಂದ್ರದಿಂದ ನೇರವಾಗಿ ಅನುದಾನ ಪಡೆಯಬಹುದಾಗಿದೆ. ಇದಕ್ಕೆ ಯಾವುದೇ ಇಲಾಖೆಯ ಅನುಮೋದನೆಯಾಗಲಿ, ನೆರೆ ರಾಜ್ಯದ ಅನುಮತಿಯಾಗಲಿ, ಹಣಕಾಸು ಇಲಾಖೆಯ ಒಪ್ಪಿಗೆಯಾಗಲಿ ಬೇಕಾಗುವುದಿಲ್ಲ. ಆದರೆ, ಪ್ರಾಚೀನತೆಯ ಅಧ್ಯಯನದ ರೂಪದಲ್ಲಿ ಯೋಜನೆಯಿರಬೇಕು.

ಉದಾಹರಣೆಗೆ, ಕೆರೆಗಳ ಅಭಿವೃದ್ಧಿ ಯೋಜನೆ ಆಗಬೇಕು. "ಪ್ರಾಚೀನ ಕರ್ನಾಟಕ ದಲ್ಲಿ ಕೆರೆಗಳು ಮತ್ತು ಅವುಗಳ ಅಭಿವೃದ್ಧಿ-ಸಂರಕ್ಷಣೆ' ಎಂಬ ಹೆಸರಿನಲ್ಲಿ ಯೋಜನೆ ರೂಪಿಸಬೇಕು. ನಮಗೆ ಯಾವ ಕೆರೆಗಳ ಅಭಿವೃದ್ಧಿಯಾಗಬೇಕೋ ಆ ಕೆರೆಗಳ ಇತಿಹಾಸ ತೆಗೆಯಬೇಕು. ಅವುಗಳ ಹುಟ್ಟು, ಅವುಗಳನ್ನು ಕಟ್ಟಿದ ರಾಜಕೀಯ ಸಂದರ್ಭ ಸಾಂಸ್ಕೃತಿಕ ಮಹತ್ವ, ಅವುಗಳು ಜನತೆಗೆ ಪ್ರಯೋಜನವಾಗುತ್ತಿದ್ದ ಸ್ವರೂಪಗಳನ್ನು ಶಾಸನ, ಇತಿಹಾಸ ಗ್ರಂಥಗಳ ಉಲ್ಲೇಖಗಳಿಂದ ಹೊರತೆಗೆಯಬೇಕು. ಆ ಕೆರೆಗಳ ಫಲಾನುಭವಿ ಪ್ರದೇಶಗಳನ್ನು ಅಧ್ಯಯನ ಮಾಡಿ ಅವು, ಅವುಗಳಿಂದ ಸಂಪನ್ನವಾಗಿದ್ದ ಸಮಾಜವನ್ನು ಕಟ್ಟಿಕೊಡಬೇಕು. ನಂತರ ಅವುಗಳು ಅವನತಿ ಹೊಂದಲು ಕಾರಣವಾದ ಅಂಶಗಳನ್ನು ಪಟ್ಟಿ ಮಾಡಬೇಕು. ಅವುಗಳನ್ನು ಸಂರಕ್ಷಿಸಬೇಕಾದ ಮಹತ್ವವನ್ನು ಮನಗಾಣಿಸ ಬೇಕು. ಈ ಸಂರಕ್ಷಣೆಯ ಭಾಗವಾಗಿ ಅವುಗಳ ಅಭಿವೃದ್ಧಿಗೆ ಅಗತ್ಯವಾದ ಸುಧಾರಣೆಗಳನ್ನು ಸೂಚಿಸಬೇಕು. ಪ್ರತಿಯೊಂದು ಹಂತಕ್ಕೂ ವಿವರವಾದ ಮಾನವ ಸಂಪನ್ಮೂಲ, ಯಂತ್ರ ಸಂಪನ್ಮೂಲ ಇತ್ಯಾದಿಗಳನ್ನು ಅಂದಾಜಿಸಿ ಯೋಜನೆ ಸಿದ್ಧಪಡಿಸಿದರೆ ಇದು ಶಾಸ್ತ್ರೀಯ ಕನ್ನಡ ಅಭಿವೃದ್ಧಿ ಯೋಜನೆಯ ವ್ಯಾಪ್ತಿಯೊಳಗೇ ಬರುತ್ತದೆ. ನಮಗೆ ಬೇಕಾದ ಕೆರೆಗಳ ಅಭಿವೃದ್ಧಿ ಸರಾಗವಾಗಿ ಆಗುತ್ತದೆ. ಕೇಂದ್ರದಿಂದ ನಿಧಿ ಪಡೆಯಲು ಇದಕ್ಕಿಂತ ರಾಜಮಾರ್ಗ ಇನ್ನೊಂದಿಲ್ಲ.

ಆದರೆ ಇದನ್ನು ಯಶಸ್ವಿಗೊಳಿಸಿಕೊಳ್ಳಬೇಕಾದರೆ ತಮಿಳಿನಂತೆ ರಾಜ್ಯ ಸರ್ಕಾರ ತನ್ನ ಅಧೀನದಲ್ಲಿ ಭಾಷಾಭಿವೃದ್ಧಿ ಕೇಂದ್ರವನ್ನು ಮುನ್ನಡೆಸಬೇಕು. ತಜ್ಞರಿಂದ ಸೂಕ್ತ ಸಲಹೆ

ಮಾರ್ಗದರ್ಶನ ಪಡೆದು ಕ್ರಿಯಾಯೋಜನೆಯನ್ನು ರೂಪಿಸಬೇಕು. ಅದಕ್ಕಾಗಿಯೇ ರಾಜ್ಯ ಸರ್ಕಾರವೇ ಒಂದು ಸಲಹಾ ಸಮಿತಿಯನ್ನು ರಚಿಸಿ ಅದರ ಮಾರ್ಗದರ್ಶನದಲ್ಲಿ ಕೇಂದ್ರ ಮುನ್ನಡೆಯುವಂತೆ ವ್ಯವಸ್ಥೆ ಮಾಡಬಹುದು. ಅಥವಾ ಕೇಂದ್ರ ಸರ್ಕಾರ ರಚಿಸುವ ಬೋರ್ಡ್ ಸದಸ್ಯರ ಆಯ್ಕೆಯಲ್ಲಿಯೇ ತನ್ನ ಪಾತ್ರ ಬಳಸಿ ಅವರ ಮೂಲಕವೇ ಕೇಂದ್ರ ಕಾರ್ಯ ನಿರ್ವಹಿಸುವಂತೆಯೂ ಮಾಡಬಹುದು. ಒಟ್ಟಾರೆ ರಾಜ್ಯದ ಹಿತಾಸಕ್ತಿ ಮುಖ್ಯವಾಗಿರುವಂತೆ ನೋಡಿಕೊಳ್ಳಬೇಕು.

ಪ್ರಶಸ್ತಿಗಳಿಗೆ ಹೆಸರು

ತಮಿಳಿನಂತೆ ಕನ್ನಡವೂ ಶಾಸ್ತ್ರೀಯ ಭಾಷಾ ಪ್ರಶಸ್ತಿಗಳಿಗೆ ಸೂಕ್ತ ಹೆಸರನ್ನು ಇಡಬೇಕು. ಅದನ್ನು ಹೀಗೂ ಹೆಸರಿಸಬಹುದು. ಇದು ಸಲಹೆಯಷ್ಟೇ ಉನ್ನತ ಅಧ್ಯಯನ ಸಮಿತಿ ಈ ಬಗೆಗೆ ಚರ್ಚಿಸಿ ನಿರ್ಧರಿಸಿ ಕೇಂದ್ರದ ಅನುಮತಿ ಪಡೆಯಬೇಕು.

೧. ಅಂತರ ರಾಷ್ಟ್ರ ಪ್ರಶಸ್ತಿಗೆ 'ಕದಂಬಪ್ರಶಸ್ತಿ'

ಕದಂಬರು ಕರ್ನಾಟಕ ಕಟ್ಟಿದ ಪ್ರಥಮ ದೊರೆಗಳಾದ್ದರಿಂದ, ಆ ಕಾಲಕ್ಕೆ ವಿದೇಶೀಯರಾಗಿದ್ದ ಪಲ್ಲವರನ್ನು ಮೆಟ್ಟಿ ಕನ್ನಡ ದೇಶವನ್ನು ರಚಿಸಿದವರಾದ್ದರಿಂದ (ಪ್ರಾಚೀನ ಕಾಲದಲ್ಲಿ ಸ್ವಾತಂತ್ರ್ಯ ಪೂರ್ವದವರೆಗೂ ಭಾರತದ ಒಂದೆರಡು ರಾಜ್ಯಗಳೂ ಒಂದೊಂದು ಸ್ವತಂತ್ರ ದೇಶಗಳಾಗಿದ್ದವು. ಅವುಗಳ ನೆರೆ ರಾಜ್ಯಗಳೇ ಅವರಿಗೆ ಶತ್ರುದೇಶ ಗಳಾಗಿರುತ್ತಿದ್ದವು. ಅಂತಹ ದೇಶಗಳ ವಿರುದ್ಧ ಯುದ್ಧ ಮಾಡಿ ತಮ್ಮ ದೇಶದ ಗಡಿಯನ್ನು ವಿಸ್ತರಿಸಿ 'ವಿಶಾಲ ಸಾಮ್ರಾಜ್ಯ' ಮಾಡಿಕೊಳ್ಳುತ್ತಿದ್ದರು. ಕನ್ನಡ ಕಟ್ಟಿದ ಪ್ರಥಮ ರಾಜವಂಶ ಕದಂಬ ವಂಶ ಈ ಅಂತರರಾಷ್ಟ್ರೀಯ ಪ್ರಶಸ್ತಿಗೆ 'ಕದಂಬ' ರಾಜವಂಶದ ಹೆಸರಿರುವುದು ಸೂಕ್ತವಾಗಿದೆ.

೨. ರಾಷ್ಟ್ರೀಯ ಪ್ರಶಸ್ತಿಗೆ 'ಶ್ರೀವಿಜಯ ಪ್ರಶಸ್ತಿ'

ರಾಷ್ಟ್ರಮಟ್ಟದ ಶಾಸ್ತ್ರೀಯ ಭಾಷಾ ಪ್ರಶಸ್ತಿಗೆ ಆದ್ಯ ಶಾಸ್ತ್ರಕಾರನಾದ ಶ್ರೀವಿಜಯನ ಹೆಸರಿಡುವುದು ಬಹಳ ಉಚಿತವಾದುದು. ಈಗಾಗಲೇ ಪಂಪ–ನೃಪತುಂಗರ ಹೆಸರಿನಲ್ಲಿ ಪ್ರಮುಖ ಪ್ರಶಸ್ತಿಗಳಿರುವುದರಿಂದ ಮತ್ತೆ ಇವರ ಹೆಸರನ್ನಿಡುವುದರಿಂದ ಗೊಂದಲ ನಿರ್ಮಾಣವಾಗುತ್ತದೆ. ಆದ್ದರಿಂದ ಇವರಿಗಿಂತ ಶಾಸ್ತ್ರೀಯ ಕನ್ನಡವನ್ನು ಕಟ್ಟಿಕೊಟ್ಟ ಪಂಡಿತ ಶ್ರೀವಿಜಯನ ಹೆಸರೇ ಸೂಕ್ತವಾಗಿರುತ್ತದೆ.

೩. ಐದು ಯುವ 'ವಿದ್ವಾಂಸರ ಪ್ರಶಸ್ತಿ'

ಸೂಕ್ತ ಹೆಸರನ್ನು ಇಡಬಹುದಾಗಿದೆ. ಈ ಐದು ಪ್ರಶಸ್ತಿಗಳನ್ನು ಐದು ಬೇರೆ ಬೇರೆ ಕ್ಷೇತ್ರಗಳಿಗೆ ಮೀಸಲಿರಿಸಿ ಆಯಾ ಕ್ಷೇತ್ರಗಳ ಪ್ರಾಚೀನ ವಿದ್ವಾಂಸರ ರಾಜರ ಹೆಸರನ್ನು ಇಡಬೇಕು. ಈ ಪ್ರಶಸ್ತಿಗಳ ಕ್ಷೇತ್ರಗಳನ್ನು ಹೀಗೆ ವಿಭಾಗಿಸಬಹುದೆನಿಸುತ್ತದೆ.

೧. **ಶಾಸ್ತ್ರ ವಿಭಾಗ ಪ್ರಶಸ್ತಿ** : ಭಾಷೆ, ವ್ಯಾಕರಣ, ಅಲಂಕಾರ, ಛಂದಸ್ಸು, ನಿಘಂಟು ಕ್ಷೇತ್ರಗಳ ತಜ್ಞರಿಗೆ ಇದು ಮೀಸಲಾಗಿದೆ. ಇದಕ್ಕೆ ಆದ್ಯ ವೈಯಾಕರಣಿಯಾದ ಕೇಶಿರಾಜನ ಹೆಸರಿನಲ್ಲಿ **'ಕೇಶಿರಾಜ ಪ್ರಶಸ್ತಿ'** ಎನ್ನಬಹುದು.

೨. **ಸಂಶೋಧನ ವಿಭಾಗ ಪ್ರಶಸ್ತಿ** : ಶಾಸನ, ಗ್ರಂಥಸಂಪಾದನೆ, ಹಸ್ತಪ್ರತಿ ಅಧ್ಯಯನ, ಕವಿಕಾವ್ಯ ವಿಚಾರ ಶೋಧನೆ ಇತ್ಯಾದಿ ಸಂಶೋಧನಾ ಕ್ಷೇತ್ರಕ್ಕೆ ಇದನ್ನು ಮೀಸಲಾಗಿಸಬೇಕು. ಇದಕ್ಕೆ **'ಹರಿಹರ ಪ್ರಶಸ್ತಿ'** ಎಂದು ಹೆಸರಿಸಬಹುದು. ಮೊದಲ ಬಾರಿಗೆ ವಚನಕಾರರ ಜೀವನ ಸಂಗತಿಗಳನ್ನು ಶೋಧಿಸಿ ಕೃತಿ ರಚಿಸಿದ ಮೊದಲ ವಿದ್ವಾಂಸ ಹರಿಹರನಾಗಿರುವುದರಿಂದ ಇದು ಸೂಕ್ತವಾಗಿರುತ್ತದೆ.

೩. **ಸಮಾಜ ವಿಜ್ಞಾನ ವಿಭಾಗ ಪ್ರಶಸ್ತಿ** : ಸಮಾಜ, ಸಂಸ್ಕೃತಿ, ಕಲೆ, ಇತಿಹಾಸ, ರಾಜನೀತಿ, ವಾಣಿಜ್ಯ, ವ್ಯವಹಾರ, ನ್ಯಾಯ, ನೀತಿ, ಧರ್ಮ, ಜನಪದ, ಜೀವನ ಶೈಲಿ, ಜೀವನ ಮೌಲ್ಯಗಳ ಅಧ್ಯಯನಕ್ಕೆ ಇದನ್ನು ನಿಗದಿಗೊಳಿಸಿ ಕನ್ನಡಿಗರ ಜೀವನ ಶೈಲಿಯ ವಿವರವಾದ ಸಮಾಜದ ಚಿತ್ರಣವನ್ನು ವಡ್ಡಾರಾಧನೆಯ ಮೂಲಕ ಮೊದಲ ಬಾರಿಗೆ ದಾಖಲಿಸಿದ ಗದ್ಯಕಾರ ಭ್ರಾಜಿಷ್ಣುವಿನ ಹೆಸರಿನಲ್ಲಿ **'ಭ್ರಾಜಿಷ್ಣು ಪ್ರಶಸ್ತಿ'** ಎನ್ನಬಹುದು.

೪. **ವಿಜ್ಞಾನ ವಿಭಾಗ ಪ್ರಶಸ್ತಿ** : ವೈದ್ಯ, ಆಯುರ್ವೇದ, ಜ್ಯೋತಿಷ್ಯ, ಖಗೋಳ ಶಾಸ್ತ್ರ, ಗಣಿತ ಇತ್ಯಾದಿ ವಿಜ್ಞಾನ ಕ್ಷೇತ್ರಗಳ ಪ್ರಾಚೀನ ಸಂಗತಿಗಳನ್ನು ಆಧುನಿಕ ವೈಜ್ಞಾನಿಕ ಪದ್ಧತಿಯ ಮೂಲಕ ವಿಶ್ಲೇಷಿಸಿ ಅಧ್ಯಯನ ಮಾಡುವವರಿಗೆ ಈ ಪ್ರಶಸ್ತಿ ಮೀಸಲಿರಿಸಬೇಕು. 'ವಿಮಾನ ಶಾಸ್ತ್ರ'ವನ್ನು ರಚಿಸಿದ ಮೊದಲ ಕನ್ನಡಿಗ ವಿಜ್ಞಾನಿ 'ವಿಮಾನಶಾಸ್ತ್ರಿ' ಎನಿಸಿದ ಮಿತಾಕ್ಷರನ ಹೆಸರಿನಲ್ಲಿ **'ಮಿತಾಕ್ಷರ ಪ್ರಶಸ್ತಿ'** ಎಂದು ಇದನ್ನು ಹೆಸರಿಸುವುದು ಸೂಕ್ತವೆನಿಸುತ್ತದೆ.

೫. **ತಂತ್ರಜ್ಞಾನ ವಿಭಾಗ ಪ್ರಶಸ್ತಿ** : ವಾಸ್ತು, ಶಿಲ್ಪ ಕಲೆ, ಯಂತ್ರ ಇತ್ಯಾದಿ ಕುಶಲ ಕಲಾ ವಿಭಾಗದ ತಜ್ಞರಿಗೆ ಈ ಪ್ರಶಸ್ತಿ ಮೀಸಲಾಗಿರಬೇಕು. ಮೊದಲ ಶಿಲ್ಪದ ಮತ್ತು ವಿಶ್ವ ಶಿಲ್ಪ ವೈಭವದ ದಾಖಲೆಯಾಗಿ ಬಾದಾಮಿ, ಐಹೊಳೆ, ಪಟ್ಟದಕಲ್ಲು ಮುಂತಾದ ಭವ್ಯ ಚಾಲುಕ್ಯರ ಶಿಲ್ಪವಿರುವುದರಿಂದ ಇದನ್ನು 'ಸಾಧುಗೆ ಸಾಧು ಮಾಧುರ್ಯರಿಗೆ ಮಾಧುರ್ಯ ಬಾಧಿಪ ಕಲಿಗೆ ಕಲಿಯಾಗವಿಪರೀತ'ನೂ ಆಗಿದ್ದ ಚಾಲುಕ್ಯ ದೊರೆ ಪುಲಿಕೇಶಿಯ ಹೆಸರಿನಲ್ಲಿ **'ಪುಲಿಕೇಶಿ ಪ್ರಶಸ್ತಿ'** ಎಂದೇ ಕರೆಯಬಹುದು.

ಹೀಗೆ ಪ್ರಾಚೀನ ಕನಾ ಒಂದೆಡೆ ಕಲೆತು 'ಶಾಸ್ತ್ರೀಯ ಕನ್ನಡ ಯೋಜನೆ'ಗೆ ಒಂದು ನಿರ್ದಿಷ್ಟ ರೂಪ ನೀಡಿ ಕೇಂದ್ರ ಸರ್ಕಾರಕ್ಕೆ ಕಳುಹಿಸಿ ಮಂಜೂರು ಮಾಡಿಸಿ ಯೋಜನೆಯನ್ನು ಸಕ್ರಿಯಗೊಳಿಸುವತ್ತ ಪ್ರಯತ್ನ ಮಾಡುವಂತಾಗಲಿ ಎಂದು ಆಶಿಸುತ್ತೇನೆ.

ಕನ್ನಡ ಚಳುವಳಿಯ ಸ್ವರೂಪ

– ಪ್ರೊ. ಚಂದ್ರಶೇಖರ ಪಾಟೀಲ(ಚಂಪಾ), ಬೆಂಗಳೂರು
'ಸಂಕ್ರಮಣ' ಪ್ರಕಾಶಕರು, ಸಾಹಿತಿಗಳು
೯೪೪೯೦೬೯೩೪೪

"ಕನ್ನಡ ಚಳುವಳಿ" ಕೇವಲ 'ಭಾಷೆ'ಯ ಬಗೆಗಿನ ಚಳುವಳಿ ಆಗಿರದೆ, ಅದು ಭಾಷೆಯನ್ನು ಒಳಗೊಂಡಂತೆ, ಬದುಕಿನ ಎಲ್ಲ ವಲಯಗಳಿಗೂ ಸಂಬಂಧಪಟ್ಟ ಪ್ರಜ್ಞಾಪೂರ್ವಕ ಸಮಷ್ಟಿ ಪ್ರಯತ್ನವಾಗಿರುತ್ತದೆ. ಇಂದು ಇಂಡಿಯಾ ದೇಶದ ಅನೇಕ ಭಾಗಗಳಲ್ಲಿ (ಉದಾ: ಪಂಜಾಬ, ಜಾರಖಂಡ, ಆಸಾಮ, ತಮಿಳುನಾಡು ಮುಂ) ನಡೆದಿರುವ ಜನಾಂದೋಲನಗಳಿಗೆ ಆರ್ಥಿಕ, ಸಾಮಾಜಿಕ, ರಾಜಕೀಯ ಆಯಾಮಗಳಿಗಿರುವಂತೆ, ಅವಕ್ಕೆಲ್ಲ ಮೂಲ ಸೂತ್ರವೆಂಬಂತೆ ಭಾಷೆಯ ಆಯಾಮವೂ ಇದೆ.

ಅನೇಕ ಧರ್ಮಗಳು, ಮತಗಳು, ಬುಡಕಟ್ಟುಗಳು ಕೂಡಿ ಇರುವ ಇಂಡಿಯಾ ದೇಶಕ್ಕೆ 'ಏಶಿಯಾ ಉಪಖಂಡ' ಎಂಬ ಭೌಗೋಳಿಕ ಚೌಕಟ್ಟಿದ್ದರೂ ಈ ಭೂಭಾಗಕ್ಕೆ ಹೊರಗಿನಿಂದ ಬಂದ ಆರ್ಯರ ಒಂದು ಭಾಷೆಯಾದ (ಇಂಡೋ-ಯೂರೋಪಿಯನ್ ಕುಟುಂಬದ) "ಸಂಸ್ಕೃತ" ದ ಮೂಲಕ ಒಂದು "ಧಾರ್ಮಿಕ" ಚೌಕಟ್ಟು ಇತ್ತೆಂದು ಕೆಲವರು ವಾದಿಸಿದರೂ ಕೂಡ, ಅಂಥ ಕೃತ್ರಿಮ ಚೌಕಟ್ಟು ಭಗ್ನವಾಗಿ ಸಹಜವಾಗಿಯೇ ಆಯಾ ನೆಲಗಳ ಗಾಢವಾದ ನಂಟು ಹೊಂದಿದ ಜನ-ಭಾಷೆಗಳು ಇತಿಹಾಸದ ಬೇರೆ ಬೇರೆ ಕಾಲಘಟ್ಟಗಳಲ್ಲಿ ತಮಗೆ ನ್ಯಾಯವಾಗಿ ದಕ್ಕಬೇಕಾದ ಸ್ಥಾನಗಳನ್ನು ಹೋರಾಟದ ಮೂಲಕವೇ ಪಡೆದುಕೊಂಡಿವೆ, ಈ ದೃಷ್ಟಿಯಿಂದ 'ಇಂಡಿಯಾ' ಎಂಬುದು ಒಂದು ಏಕಮುಖ ಸಂಸ್ಕೃತಿಯ ನೆಲೆಯಾಗಿರದೆ ಅನೇಕ ಸಂಸ್ಕೃತಿಗಳ ಒಟ್ಟುಗೂಡುವಿಕೆ ಆಗಿದೆ. ಈ ಭೂಖಂಡಕ್ಕೆ ಸಂಬಂಧಿಸಿದ ಯಾವುದೇ ಸಮಸ್ಯೆಯ ಚರ್ಚೆ ಇದರ ಫೆಡರಲ್ ಸ್ವರೂಪದ ಬಹುಮುಖ್ಯ ಅಂಶವನ್ನು ಮರೆಯಲು ಅಥವಾ ಕಡೆಗಣಿಸಲು ಸಾಧ್ಯವಿಲ್ಲ.

ಜನಸಮುದಾಯದ ಅನೇಕ ಭಾಗಗಳು– (ಇಂಡಿಯಾದ ಸಂದರ್ಭದಲ್ಲಿ ವರ್ಗಗಳು ಮತ್ತು ಜಾತಿಗಳು) – ಎಚ್ಚರಗೊಂಡು ತಮ್ಮ ಸ್ವಾತಂತ್ರ್ಯಕ್ಕಾಗಿ, ಸ್ವಂತಿಕೆಗಾಗಿ ಹೋರಾಟ ಪ್ರಾರಂಭಿಸಿದಾಗ ಸಹಜವಾಗಿಯೇ ಜನಭಾಷೆಗಳೂ ಮಹತ್ವ ಪಡೆಯುತ್ತವೆ. ವೈದಿಕಶಾಹಿಯ ಮೂಲಪ್ರಚಾರ ಮಾಧ್ಯವಾಗಿದ್ದ ಸಂಸ್ಕೃತದ ವಿರುದ್ಧ ಸಿಡಿಯುತ್ತಲೇ ಇಂಡಿಯಾದ ಜನ-ಭಾಷೆಗಳು ನೂರಾರು ವರ್ಷಗಳಿಂದ ತಮ್ಮ ಸಂಸ್ಕೃತಿಯನ್ನು ಸಮೃದ್ಧವಾಗಿ ಬೆಳೆಸುತ್ತಲೇ ಬಂದವು. ಇತ್ತೀಚಿನ ಎರಡು ಶತಕಗಳಲ್ಲಿ ಬ್ರಿಟಿಶರ

ಆಗಮನದಿಂದಾಗಿ ಹಿಂದೆ ಎಂದೂ ಇಲ್ಲದಿದ್ದ 'ರಾಜನೈತಿಕ' ಮತ್ತು 'ಆಡಳಿತಾತ್ಮಕ' ಚೌಕಟ್ಟನ್ನು ಹೊಂದಿದ ಇಂಡಿಯಾದ ವಿಭಿನ್ನ ಭೂಭಾಗಗಳು ಪರಕೀಯ ಆಡಳಿತದಿಂದ ಬಿಡುಗಡೆ ಪಡೆಯಲು ಹೋರಾಟ ಸುರು ಮಾಡಿದಾಗ, ಆ ಹೋರಾಟದ ಅಂಗವಾಗಿಯೇ ತಮ್ಮ ತಮ್ಮ ನೆಲದ ಭಾಷೆಗಳ ಸುತ್ತ ತಮ್ಮ ವಿಶಿಷ್ಟ ಸಂಸ್ಕೃತಿಗಳಿಗೆ ಬಲವಾದ ಬೇರುಗಳನ್ನು ಹೊಂದುವ, ಆ ಮೂಲಕ ಆಕಾಶದಲ್ಲಿ ಟೊಂಗೆ ಅರಳಿಸುವ ಪ್ರಕ್ರಿಯೆಯಲ್ಲೂ ತೊಡಗಿದ್ದು, ಕರ್ನಾಟಕದ ಮಟ್ಟಿಗಂತೂ ಆ ಮಾತು ಸಂಪೂರ್ಣ ಅನ್ವಯವಾಗುವಂಥದು. ಮೊದಲು ೨೨ ಆಡಳಿತಗಳಲ್ಲಿ, ನಂತರ ೫ ಆಡಳಿತಗಳಲ್ಲಿ ಹಂಚಿಕೊಂಡಿದ್ದ ಕನ್ನಡ ಭಾಷಿಕ ನಾಡು 'ಕರ್ನಾಟಕ'ವಾಗಿ ಒಂದೇ ಆಡಳಿತ ಛತ್ರದಡಿಯಲ್ಲಿ ಬರಬೇಕೆಂದು ನಡೆಸಿದ ಏಕೀಕರಣದ ಹೋರಾಟ ಇಂಡಿಯಾದ ಸ್ವಾತಂತ್ರ್ಯದ ಒಂದು ಭಾಗವೇ ಆಗಿತ್ತು. ೧೯೪೭ರಲ್ಲಿ ರಾಜಕೀಯ ಸ್ವಾತಂತ್ರ್ಯ ಪಡೆದ ಇಂಡಿಯಾ, ಮುಂದೆ ಒಂಬತ್ತು ವರ್ಷಗಳಲ್ಲಿ (೧೯೫೬) ಭಾಷಾವಾರು ಪ್ರಾಂತ ರಚನೆ ಮಾಡಿಕೊಂಡದ್ದು ಅನಿವಾರ್ಯವಾದ, ಸಹಜವಾದ ಪ್ರಕ್ರಿಯೆಯ ಫಲವಾಗಿತ್ತು.

ಇಂಡಿಯಾದ ಫೆಡರಲ್ ಸ್ವರೂಪಕ್ಕೆ ತಕ್ಕುದಾದ ರೀತಿಯಲ್ಲಿಯೇ ಭಾಷಾವಾರು ಪ್ರಾಂತರಚನೆ ವಿಕೇಂದ್ರೀಕರಣದ ಪ್ರಥಮ, ನಿರ್ಣಾಯಕ ಹೆಜ್ಜೆಯಾಗಿತ್ತು. ಇದರಿಂದಾಗಿ ಆಯಾ ಭಾಷಾ–ರಾಜ್ಯಗಳು ಬಲಿಷ್ಠವಾಗಬೇಕು; ಮತ್ತು 'ಕೇಂದ್ರ' ಎಂಬುದು ಈ ಬಲಿಷ್ಠ ರಾಜ್ಯಗಳನ್ನು ಸಮತೋಲನದಿಂದ ಕಾಯುವ, ಪರಸ್ಪರ ಸಂಘರ್ಷಗಳನ್ನು ತಪ್ಪಿಸುವ, ಶೋಷಣೆಗಳನ್ನು ನಿಯಂತ್ರಿಸುವ ಒಂದು ವ್ಯವಸ್ಥೆಯಾಗಿರಬೇಕು – ಎಂಬುದು ಈ ಪ್ರಕ್ರಿಯೆಯ ಮುಂದಿನ ಗುರಿಯಾಗಬೇಕಿತ್ತು. ಈ ಗುರಿ ತಪ್ಪಿದ್ದರಿಂದಲೇ ಇಂದು ದೇಶದ ತುಂಬೆಲ್ಲ ಪ್ರಾದೇಶಿಕ ಅಸಮಾನತೆಯ ಕೂಗೆದ್ದು "ಪ್ರತ್ಯೇಕತೆಯ" ಅನ್ನುವಷ್ಟು ಮಟ್ಟಿಗಿನ ಜನಾಂದೋಲನಗಳು ಹುಟ್ಟಿ ವಾತಾವರಣ ಕೋಲಹಲಮಯವಾಗಿದೆ. ಇದರ ಜೊತೆಗೇ ಸಾವಿರಾರು ವರ್ಷಗಳಿಂದ ಆಳುತ್ತಲೇ ಬಂದಿರುವ ವೈದಿಕಶಾಹಿ ಶಕ್ತಿಗಳು "ರಾಜಕೀಯ" ವನ್ನು "ಧರ್ಮ"ದೊಂದಿಗೆ ತಳಕು ಹಾಕುತ್ತ, ಅನೇಕ ಸಂಸ್ಕೃತಿಗಳ ಸಂಗಮವಾಗಿರುವ ದೇಶವನ್ನು ಮತ್ತೆ ಏಕ–ಸಂಸ್ಕೃತಿಯ ಕಡೆಗೆ ಒಯ್ಯಲು ಪ್ರಯತ್ನಿಸುತ್ತ, ಜನತೆಯ ಭಾವನೆಗಳನ್ನು ಅಗ್ಗದ ರೀತಿಯಲ್ಲಿ ಕೆರಳಿಸುತ್ತ ಕೋಲಾಹಲವನ್ನು ಹೆಚ್ಚಿಸುತ್ತಿವೆ.

'ಶಕ್ತಿ' ಎಂಬುದು ಹರಡಿಕೊಂಡಾಗ ವಿರಳವಾಗುತ್ತದೆ; ಏಕೀಕೃತಗೊಂಡಾಗ ಬಲಿಷ್ಠವಾಗುತ್ತದೆ. ಈ ಸತ್ಯವನ್ನು ಬಲ್ಲ ನಮ್ಮ ದೇಶದ ಆಳುವ ವರ್ಗಗಳು ರಾಜಕೀಯ ಶಕ್ತಿಯನ್ನು ಕೇಂದ್ರೀಕರಿಸುವತ್ತ ಮಗ್ನವಾಗಿದ್ದರಿಂದಲೇ ಇಂದು, ಸ್ವಾತಂತ್ರ್ಯ ದೊರೆತು ನಾಲ್ಕು ದಶಕಗಳ ನಂತರ ಈ ಕೇಂದ್ರೀಕರಣದ ವಿರುದ್ಧಹೋರಾಟ ಸಾಗುತ್ತಿದೆ. ಈ ಹೋರಾಟದ ರಾಜಕೀಯ, ಸಾಮಾಜಿಕ ಸ್ವರೂಪ ಎಲ್ಲ ಭಾಷಾವಾರು ರಾಜ್ಯಗಳಲ್ಲಿ ಹೆಚ್ಚು

ಕಡಿಮೆ ಸಾಮಾನ್ಯವಾಗಿಯೇ ಇದ್ದರೂ ಆಯಾ ರಾಜ್ಯದ ಭಾಷೆಗಳನ್ನು ನೆಲೆಗೊಳಿಸುವ ವಿಷಯದಲ್ಲಿ ಮಾತ್ರ ಕತೆ ಬೇರೆ ಬೇರೆಯಾಗಿದೆ. ಉದಾ: ನಮ್ಮ ನೆರೆಯ ಮಹಾರಾಷ್ಟ್ರ, ಆಂಧ್ರಪ್ರದೇಶ, ಕೇರಳ, ತಮಿಳುನಾಡುಗಳಲ್ಲಿ ಕರ್ನಾಟಕದಲ್ಲಿ ಇರುವಂತೆ "ಕಾವಲು ಸಮಿತಿ"ಗಳಾಗಲಿ, "ಅಭಿವೃದ್ಧಿ ಪ್ರಾಧಿಕಾರ"ಗಳಾಗಲಿ ಒಡೆದು ಕಾಣುವ ಹಾಗೆ ಅಸ್ತಿತ್ವದಲ್ಲಿಲ್ಲ. ಅಲ್ಲಿ ಆಯಾ ಜನ-ಭಾಷೆಯ ಅನುಷ್ಠಾನ ಸರಕಾರಿ ಆಡಳಿತ ಯಂತ್ರದ ಸಹಜವಾದ ಶೈಲಿಯಾಗಿದೆ; ಮೇಲಾಗಿ ಅಲ್ಲಿಯ ಜನಸಮುದಾಯದ ಸಹಜ ಸಂಕಲ್ಪವಾಗಿದೆ. ಕನ್ನಡ ನಾಡಿನಲ್ಲಿ ಇಂಥ 'ಸಹಜ' ಸ್ಥಿತಿ ಇಲ್ಲದಿರುವುದಕ್ಕೆ ನಾವು ಕೇವಲ ಈ ನಾಡಿನ ಇತಿಹಾಸವನ್ನು (ಅಂದರೆ, ಅನೇಕ ಭೂಭಾಗಗಳಲ್ಲಿ ಚಿಂದಿಯಾಗಿ ಹೋಗಿದ್ದ ವಾಸ್ತವವನ್ನು) ಕಾರಣವಾಗಿ ಕೊಡಲು ಬರುವಂತಿಲ್ಲ. ಏಕೆಂದರೆ 'ಇತಿಹಾಸ' ಎಂಬುದು ಸಾರ್ವಕಾಲಿಕ ಮಾಡೆಲ್ ಆಗಬೇಕಾಗಿಲ್ಲ; ಇತಿಹಾಸವನ್ನು ನಾವು ಬದಲಿಸಲು ಸಾಧ್ಯ. ಉಳಿದ ರಾಜ್ಯಗಳಲ್ಲಿ ಸಾಧ್ಯವಾದದ್ದು ನಮ್ಮ ರಾಜ್ಯದಲ್ಲಿ ಸಾಧ್ಯವಾಗದೆ ಇರುವುದೇ ನಮ್ಮ ದುರಂತ.

ನಮ್ಮ ಬದುಕಿನ ಬಹುಮುಖ್ಯ ಭಾಗವನ್ನು ಅನೇಕ ನೆಲೆಗಳಲ್ಲಿ ನಿಯಂತ್ರಿಸಬಲ್ಲ, ರೂಪಿಸಬಲ್ಲ ಶಕ್ತಿ ಸರಕಾರಕ್ಕಿದೆ. ಪ್ರಜಾತಂತ್ರದಲ್ಲಿ ಈ ಸರಕಾರ ಜನರ ಆಶೋತ್ತರಗಳ, ಹಕ್ಕುಗಳ ಪ್ರತಿನಿಧಿಯಾಗಿರುತ್ತದೆ. ಆದರೆ ನಮ್ಮೆಲ್ಲರ 'ಮತ'ಗಳನ್ನು ಪಡೆದು, ನಮ್ಮ ಧ್ವನಿಗಳಾಗಿ ಶಾಸನಸಭೆ-ಲೋಕಸಭೆಗಳನ್ನು ಪ್ರವೇಶಿಸುವ, ರಾಜ್ಯದಲ್ಲಿ ಮಂತ್ರಿಮಂಡಲ ರಚಿಸುವ ಜನಕ್ಕೆ ಮಾತ್ರ ಕನ್ನಡದ ಬಗ್ಗೆ ದೃಢವಾದ ಸಂಕಲ್ಪವಿಲ್ಲ. ಇದಕ್ಕೆ ಕಾರಣ; ಹಳೇ ಮೈಸೂರು ಸಂಸ್ಥಾನದ ಕಾಲದಲ್ಲಿ ಹೊರನಾಡಿನಿಂದ ಕನ್ನಡ ನಾಡಿಗೆ ಬಂದವರು ಮತ್ತು ಏಕೀಕರಣದ ನಂತರ ಹೊರಗಡೆಯಿಂದ ಬಂದ ಅಧಿಕಾರಿಗಳು ಅಧಿಕಾರಶಾಹಿಯ ಕೇಂದ್ರಗಳನ್ನು ಆಕ್ರಮಿಸಿರುವುದು; ಮತ್ತು ಮಂತ್ರಿ-ಶಾಸಕರು ಈ ಅಧಿಕಾರಿ ವರ್ಗವನ್ನು ನಿಯಂತ್ರಿಸುವಲ್ಲಿ ಸೋತಿರುವುದು.

ಇಂಥ ಅನಿವಾರ್ಯ ಪ್ರಸಂಗದಲ್ಲಿ ಭಾಷೆಯನ್ನು ಬದುಕಿಸಬಲ್ಲದ್ದು ಜನಶಕ್ತಿ ಮಾತ್ರ. ಬೆಂಗಳೂರು ಹಾಗೂ ಸುತ್ತಮುತ್ತ ಅನಕೃ, ರಾಮಮೂರ್ತಿ ಮುಂತಾದವರು ಪ್ರಾರಂಭಿಸಿದ ಕನ್ನಡ ಚಳುವಳಿಯನ್ನು ತಮ್ಮದೇ ಆದ ರೀತಿಗಳಲ್ಲಿ, ಮಿತಿಗಳಲ್ಲಿ ವಾಟಾಳ ನಾಗರಾಜ, ನಾರಾಯಣ ಕುಮಾರ, ಜಿ. ನಾರಾಯಣ, ಸಿದ್ದಯ್ಯ ಪುರಾಣಿಕ, ಚಿದಾನಂದಮೂರ್ತಿ, ರಾಮಣ್ಣ ಕೋಡಿಹೊಸಳ್ಳಿ, ರಹಮಾನಖಾನ್ – ಮುಂತಾದವರು ಮುಂದುವರಿಸಿದ್ದಾರೆ. ಏಕೀಕರಣದ ನಂತರ ಕನ್ನಡ ಚಳುವಳಿಗೆ ಬೃಹತ್ತಾದ ವ್ಯಾಪಕವಾದ 'ಜನಾಂದೋಲನ'ದ ಸ್ವರೂಪ ಒದಗಿದ್ದ ೧೯೮೨-೮೩ರಲ್ಲಿ ಗುಂಡೂರಾವ್ ಸರಕಾರ, ಪ್ರೌಢಶಾಲೆಯಲ್ಲಿ ಸಂಸ್ಕೃತ ಸ್ಥಾನವನ್ನು ನಿರ್ಣಯಿಸಲು ಡಾ. ವಿ.ಕೃ. ಗೋಕಾಕರ ನೇತೃತ್ವದಲ್ಲಿ ಒಂದು ಸಮಿತಿ ರಚಿಸಿ, ಆ ಸಮಿತಿ ಕನ್ನಡಿಗರ ಒತ್ತಡಕ್ಕೆ ಮನ್ನಣೆ ಇತ್ತು ಕನ್ನಡಕ್ಕೆ

ಅಗ್ರಪಟ್ಟ ನೀಡಿ ಸಲ್ಲಿಸಿದ ವರದಿಯ ಅನುಷ್ಠಾನದ ಬಗ್ಗೆ ಹಿಂದೆ-ಮುಂದೆ ನೋಡಿದಾಗ ಭುಗಿಲೆದ್ದರು 'ಗೋಕಾಕ ಚಳುವಳಿ' ಮೂಲಕ. ಉತ್ತರ ಕರ್ನಾಟಕದ ಹಿರಿಯರಾದ ಶಂಬಾ ಜೋಶಿ, ಆರ್.ಸಿ. ಹಿರೇಮಠ, ಬಸವರಾಜ ಕಟ್ಟೀಮನಿ, ಪಾಟೀಲ ಪುಟ್ಟಪ್ಪ, ರಾ.ಯ. ಧಾರವಾಡಕರ ಮುಂತಾದವರನ್ನು ಮುಂದೆ ಮಾಡಿಕೊಂಡು ಕಿರಿಯ ಪೀಳಿಗೆಯ ಅನೇಕ ಸಾಹಿತಿಗಳು, ಕಲಾವಿದರು, ಪತ್ರಕರ್ತರು, ರೈತರು, ಕಾರ್ಮಿಕರು, ವಿದ್ಯಾರ್ಥಿಗಳ ಬೆಂಬಲದೊಂದಿಗೆ ಕನ್ನಡ ಕ್ರಿಯಾಸಮಿತಿ ಹೂಡಿದ ಈ ಚಳುವಳಿ, ಮುಂದೊಂದು ನಿರ್ಣಾಯಕ ಘಟ್ಟದಲ್ಲಿ ಡಾ. ರಾಜಕುಮಾರರೇ ಮೊದಲಾದ ಜನಪ್ರಿಯ ಚಿತ್ರ ತಾರೆಗಳನ್ನು ಒಳಗೊಂಡಾಗ ಇಡೀ ನಾಡಿನಲ್ಲಿ ಹಿಂದೆಂದೂ ಕಾಣದ ಚಳುವಳಿಯ ಬೆಂಕಿ, ಬೆಳಕು ಕಾಣಿಸಿಕೊಂಡಿತ್ತು. ಗೋಕಾಕ ಚಳುವಳಿ ಬಿಡುಗಡೆ ಮಾಡಿದ ಶಕ್ತಿ ತರಂಗಗಳೇ ಇಂದಿಗೂ ಕನ್ನಡಿಗರನ್ನು ನಿರಂತರ ಜಾಗೃತಿಯಲ್ಲಿ ಇಡುವ ಕಾಯಕದಲ್ಲಿ ನಿರತವಾಗಿವೆ; ಸರಕಾರದ ಮೇಲೆ ಒತ್ತಡ ತರುವಲ್ಲಿ ಯಶಸ್ವಿಯಾಗುತ್ತಿವೆ. "ಕನ್ನಡ ನಿಷ್ಠೆ" ಎಂಬುದು ಕೇವಲ ಕನ್ನಡ ಭುವನೇಶ್ವರಿಗೆ ಸಲ್ಲುವ ಸೇವೆಯಾಗಿರದೆ, ಅದು ಮತ ಗಳಿಸುವ ಪ್ರಬಲ ಚುಂಬಕ ಎಂಬ ವಾಸ್ತವದ ಅರಿವು ಹೆಚ್ಚತೊಡಗಿದಂತೆ ಸರಕಾರದ ಮೂಲಕ ಕನ್ನಡದ ಕೆಲಸಗಳು ಹೆಚ್ಚಾಗುವುದು ಸಹಜ.

ಕನ್ನಡ ಚಳುವಳಿ ಎಂಬುದು ನಮ್ಮ ನಾಡಿನಲ್ಲಿ ಒಂದು ನಿರಂತರ ಜಾಗೃತಿಯ ಪ್ರಕ್ರಿಯೆಯಾಗಿ ಉಳಿಯಬೇಕಾಗಿರುವ ಅನಿವಾರ್ಯ ಸ್ಥಿತಿಯಲ್ಲಿ ಇಂಥ ಚಳುವಳಿಗೆ ಆಂತರಿಕ ಸತ್ವವನ್ನು ನೀಡುವ ದೃಷ್ಟಿಯಿಂದ ಕೆಲ ಅಂಶಗಳತ್ತ ಗಮನ ಹರಿಸುವುದು ಒಳ್ಳೆಯದು.

'ಭಾಷೆ' ಎಂಬುದು ಭಾವನಾತ್ಮಕ ನೆಲೆಯಲ್ಲಿ ಪ್ರಮುಖವಾಗಿ ಕೆಲಸ ಮಾಡುತ್ತದೆ. ಭಾಷಾ ಚಳುವಳಿಯೊಂದನ್ನು ಮತಾಂಧ ಶಕ್ತಿಗಳು ತಮ್ಮ ಸ್ವಾರ್ಥಕ್ಕೆ ಬಳಸಲು ಅನುವಾಗದಂತೆ ರೂಪಿಸುವುದು ಎಲ್ಲರ ಜವಾಬ್ದಾರಿ.

ಈ ದೇಶದಲ್ಲಿ ಸಂಪನ್ಮೂಲಗಳುಮತ್ತುಉದ್ಯೋಗಾವಕಾಶಗಳು ಸಮ ಸಮವಾಗಿ ಹರಡಿಕೊಂಡಿಲ್ಲವಾದ್ದರಿಂದ ಒಂದು ಭಾಗದಿಂದ ಇನ್ನೊಂದು ಭಾಗಕ್ಕೆ ಜನರು ವಲಸೆ ಹೋಗುವುದು ಅನಿವಾರ್ಯ. ಇದು ಸಂವಿಧಾನದತ್ತವಾದ ಹಕ್ಕೂ ಆಗಿದೆ. ಹೀಗೆ ವಲಸೆ ಬರುವ ಜನರು ತಮ್ಮ ತಮ್ಮ "ಭಾಷೆ"ಗಳ ರಾಯಭಾರಿಗಳಾಗಿ ತಮ್ಮ ಭಾಷಾ-ಸಾಮ್ರಾಜ್ಯದ ಅಶ್ವಮೇಧ ಕುದುರೆಗಳಾಗಿ ಬಂದವರೇನೂ ಅಲ್ಲ; ಆದರೂ ಅವರಿಗೆ ತಮ್ಮ ಭಾಷೆಗಳ ಮೇಲೆ ಪ್ರೀತಿ, ಅವುಗಳನ್ನು ಉಳಿಸಿಕೊಳ್ಳಬೇಕೆಂಬ ಹಂಬಲ, ಇರುವುದು ಸಹಜವೇ. ಇಂಥ ಭಾಷಾ ಅಲ್ಪಸಂಖ್ಯಾತರ ಬಗ್ಗೆ ನಾವು ಅಂದರೆ ಕನ್ನಡ ಚಳುವಳಿಗಾರರು ತಳೆಯುವ ಧೋರಣೆ ಇಂಡಿಯಾದ ಒಟ್ಟು ಜನಸಮುದಾಯದ ಹಿತಕ್ಕೆ ಅನುಗುಣವಾಗಿ

ಆರೋಗ್ಯಪೂರ್ಣವಾಗಿ, ಇರಬೇಕಾಗುತ್ತದೆ. ಅವರು ನಮ್ಮ ರಾಜ್ಯದ ಭಾಷೆಯನ್ನು ಅನಿವಾರ್ಯವಾಗಿಯಾದರೂ, ಪ್ರೀತಿಯಿಂದ ಕಲಿಯುವಂಥ ವಾತಾವರಣ ನಿರ್ಮಿಸಬೇಕು. ಇಲ್ಲಿ ಉದ್ಯೋಗ ಬಯಸುವವರಿಗೆ ಇಲ್ಲಿಯ ಭಾಷೆಯ ಜ್ಞಾನ ಅನಿವಾರ್ಯ ಎಂಬ ಪರಿಸ್ಥಿತಿ ನಿರ್ಮಾಣವಾದಾಗ ಈ ಭಾಷಾ ಅಲ್ಪಸಂಖ್ಯಾತರು ಕನ್ನಡದ ಮುಖ್ಯಧಾರೆಯಲ್ಲಿ ತಮ್ಮ ಸ್ವಂತಿಕೆಯನ್ನು ಉಳಿಸಿಕೊಂಡೂ ಬೆರೆಯುವುದು ಸಾಧ್ಯವಾದೀತು. ಒಟ್ಟಿನಲ್ಲಿ ಭಾಷೆ ಎಂಬುದು ಹೃದಯಗಳನ್ನು ಬೆಸೆಯುವ ಕೊಂಡಿಯಾಗಬೇಕೇ ಹೊರತು, ಒಂದು ಭಾಷಾ ಸಮುದಾಯವನ್ನು "ರಾಜ್ಯದಿಂದ ಹೊರಗೆ ಓಡಿಸುವ" ಫ್ಯಾಶಿಸ್ಟ್ ಶಕ್ತಿಗಳ ಕೈಯೊಳಗಿನ ಕೊಡಲಿಯಾಗಬಾರದು.

ಕರ್ನಾಟಕದಲ್ಲಿ ಕನ್ನಡ ಬಹುಜನರ ಭಾಷೆ. ಈ ಭಾಷೆಯೇ ಇಲ್ಲಿಯ ಆಡಳಿತ, ಕಾನೂನು, ಶಿಕ್ಷಣಗಳಲ್ಲಿ ಅಗ್ರಮಾನ್ಯವಾಗಿರಬೇಕು. ಇದರ ಜೊತೆಗೇ ಈ ನಾಡಿನಲ್ಲಿ ಇರುವ ಇತರ ಭಾಷೆಗಳು (ತುಳು, ಕೊಡವ, ಕೊಂಕಣಿ ಮುಂ) ತಮ್ಮ ಸುತ್ತಲೂ ವಿಶಿಷ್ಟ ಉಪಸಂಸ್ಕೃತಿಗಳನ್ನು ಬೆಳೆಸಿಕೊಂಡಿರುತ್ತವೆ. ಕನ್ನಡ ಚಳುವಳಿ ಈ ಉಪಸಂಸ್ಕೃತಿಗಳ ವೈಶಿಷ್ಟ್ಯ ಕಾಪಾಡಲು ಪ್ರಯತ್ನಿಸುವುದರ ಮೂಲಕವೇ ಅವರು ಕನ್ನಡ ಸಂಸ್ಕೃತಿಗೆ ಪೂರಕವಾಗಿಯೇ ಬೆಳೆಯುವಂತೆ ಮಾಡಲು ಸಾಧ್ಯ.

ಇನ್ನೊಂದು ಮುಖ್ಯ ವಿಷಯ: ಕರ್ನಾಟಕ ರಾಜ್ಯ ಒಂದು ಪ್ರತ್ಯೇಕ 'ರಾಷ್ಟ್ರ'ವೇ ಆಗಿದ್ದರೆ ಆ ಮಾತೇ ಬೇರೆ. ಅದು ಇಂಡಿಯಾ ಒಕ್ಕೂಟದ ಒಂದು ಭಾಗವಾಗಿರುವುದರಿಂದ, ದೇಶದ ಎಲ್ಲ ರಾಜ್ಯಗಳ ನಡುವಿನ ಸಂಪರ್ಕ ಭಾಷೆಯಾಗಿ ಒಂದು ಭಾಷೆಯನ್ನು ನಾವೆಲ್ಲ ಒಪ್ಪಲೇಬೇಕಾಗುತ್ತದೆ. ಈ ವಿಷಯದಲ್ಲಿ ಕೆಲವರು ಇಂಡಿಯಾದ ರಾಜ್ಯ-ರಾಜ್ಯಗಳ ನಡುವೆ ಮತ್ತು ಇಂಡಿಯಾ ಹಾಗೂ ಹೊರರಾಷ್ಟ್ರಗಳ ನಡುವೆ ಹೀಗೆ ಎರಡೂ ನೆಲೆಗಳಲ್ಲಿ ಇಂಗ್ಲಿಷ್ ಭಾಷೆಯೇ ಯಾಕೆ ಇರಬಾರದು ಅಂತ ವಾದಿಸುತ್ತಾರೆ. ಆದರೆ, ಇಂಡಿಯಾದ ಒಳಗಡೆಯ ಸಂಪರ್ಕ ಭಾಷೆಯಾಗಿ ನಮ್ಮದೇ ಆದ ಯಾವುದಾದರೂ ಜನ-ಭಾಷೆ ಇರುವುದು ಮುಖ್ಯ. ಈಗಿನ ಸ್ಥಿತಿಯಲ್ಲಿ ಕನ್ನಡ - ಹಿಂದಿ - ಇಂಗ್ಲಿಷ್ ಎಂಬ ತ್ರಿಭಾಷಾ ಸೂತ್ರವೇ ಇಡೀ ದೇಶಕ್ಕೆ ತಾರಕ.

ಕೊನೆಯದಾಗಿ, ಯಾವುದೇ ಚಳುವಳಿ, 'ಚಳುವಳಿ' ಅನ್ನಿಸಿಕೊಳ್ಳಬೇಕಾದರೆ ಅದಕ್ಕೆ ಸೈದ್ಧಾಂತಿಕ ಚೌಕಟ್ಟು, ಸಂಘಟನಾತ್ಮಕ ಶಿಸ್ತು ಮತ್ತು ಗಟ್ಟಿಯಾದ ನಾಯಕತ್ವ ಬೇಕು. ಕರ್ನಾಟಕದಲ್ಲಿ ಅನೇಕ ಸಂಘಟಣೆಗಳಿವೆ. ಉದಾಃ : ಅ.ಕ. ಕೇಂದ್ರ ಕನ್ನಡ ಕ್ರಿಯಾಸಮಿತಿ; ರಾಜಕುಮಾರ್ ಅಭಿಮಾನಿಗಳ ಸಂಘ; ಕನ್ನಡ ಶಕ್ತಿ ಕೇಂದ್ರ, ಕನ್ನಡ ಚಳುವಳಿ ಕೇಂದ್ರ ಸಮಿತಿ; ಕನ್ನಡ ಸಂಘರ್ಷ ಸಮಿತಿ ಮುಂತಾದವು. ಎಲ್ಲ ಸಂಘಟನೆಗಳ 'ಒಕ್ಕೂಟ'ಕ್ಕಾಗಿ ಕೂಡ ಇತ್ತೀಚೆಗೆ ಪ್ರಯತ್ನ ನಡೆಯುತ್ತಿವೆ. ಒಂದು ಒಡೆದು ಕಾಣುವ ಮುಖ್ಯ ಕೊರತೆ

ಅಂದರೆ, 'ನಾಯಕ'ರು ಅನ್ನಿಸಿಕೊಂಡವರಲ್ಲಿ ಪ್ರಾಮಾಣಿಕತೆಯ ಅಭಾವ. ಅನೇಕ ನಾಯಕರಿಗೆ ಬೇರೆ ಬೇರೆ ರಾಜಕೀಯ ಪಕ್ಷಗಳ ಬಗ್ಗೆ ರಾಜಕೀಯ ವ್ಯಕ್ತಿಗಳ ಬಗ್ಗೆ ವೈಯಕ್ತಿಕ ವ್ಯಾಮೋಹ. ರಾಜಧಾನಿಯಲ್ಲಿ ವಿಧಾನಸೌಧದ ಸಮೀಪದಲ್ಲಿರುವ ನಾಯಕರಿಗೆ ಮೇಲಿಂದ ಮೇಲೆ ಮಂತ್ರಿಗಳನ್ನು ಕಾಣುವ ಚಪಲ; ಒಮ್ಮೊಮ್ಮೆ ಸರಕಾರದ 'ವಕ್ತಾರ'ರಾಗಿ ಅಪ್ಪಣೆ ಕೊಡಿಸುವ ಹುಚ್ಚು ಚಟ. ತಮ್ಮ ಮಕ್ಕಳನ್ನು ಇಂಗ್ಲಿಷ್ ಕಾನ್ವೆಂಟುಗಳಿಗೆ ಕಳಿಸುತ್ತಿದ್ದರೂ ಕನ್ನಡ ಮಾಧ್ಯಮದ ಬಗ್ಗೆ ಶಂಖ ಊದುವ ಹವ್ಯಾಸ ಹಲವರದು; ಮತ್ತೂ ಕೆಲವರದು, ಕನ್ನಡಕ್ಕಾಗಿ ಹೋರಾಟ ಮಾಡುತ್ತ ಯಾರೋ ಕಷ್ಟಪಟ್ಟು ತಯಾರಿಸಿದ ಹುತ್ತಗಳಲ್ಲಿ – (ಅಧಿಕಾರ ಸ್ಥಾನಗಳಲ್ಲಿ) – ಹೇಗೋ ಹಾವಾಗಿ ಸೇರಿಕೊಂಡು ಬಿಡುವ ಮಹತ್ವಾಕಾಂಕ್ಷೆ.

ಇಂಥ ಎಲ್ಲ ವೈರುಧ್ಯಗಳ ನಡುವೆಯೂ ಕನ್ನಡದ ಜನತೆ ಇಂದು ಕನ್ನಡ ಪ್ರಜ್ಞೆಯನ್ನು ಸ್ಪಷ್ಟವಾಗಿ ರೂಪಿಸಿಕೊಳ್ಳುತ್ತಿದೆ. ಕರ್ನಾಟಕದ ಅನೇಕ ಸಂಘಟನೆಗಳು ನಡೆಸುವ ಸಭೆ-ಸಮಾರಂಭಗಳು, ಮುಖ್ಯವಾಗಿ ಕ.ಸಾ. ಪರಿಷತ್ತು ಹಮ್ಮಿಕೊಳ್ಳುವ ಅಖಿಲ ಭಾರತ ಮಟ್ಟದ ಕನ್ನಡಸಾಹಿತ್ಯ ಸಮ್ಮೇಳನಗಳು ಕನ್ನಡಿಗರ ಕನ್ನಡತ್ವವನ್ನು ಕ್ರೋಢೀಕರಿಸುವ ರೀತಿಯಲ್ಲಿ ನಡೆಯುತ್ತಿರುವುದು ಆಶಾದಾಯಕ ಅಂಶ.

ಯಾವುದೇ ಚಳುವಳಿಯ ಮುಂದುವರಿಕೆಗೆ, ಎಲ್ಲ ಅರಕೆಗಳ ನಡುವೆಯೂ, ನಾಳೆಯ ಬಗ್ಗೆ ಇರುವ ಇಂಥ ಆಶಾಭಾವನೆಯೇ ಪ್ರಚೋದಕ ಶಕ್ತಿಯಾಗಿರುತ್ತದೆ.

◆

ಕನ್ನಡ ಮಾಧ್ಯಮದಲ್ಲಿ ಶಿಕ್ಷಣ – ಒಂದು ಚಿಂತನೆ

– ಬಿ.ಎಸ್.ಜಯಪ್ರಕಾಶ ನಾರಾಯಣ, ಬೆಂಗಳೂರು
ಪತ್ರಕರ್ತರು, ೯೩೭೯೫೨೪೯೯೧
jeepee.jayaprakash@gmail.com

ಶಿಕ್ಷಣ ಮಾಧ್ಯಮ ಯಾವ ಭಾಷೆಯಲ್ಲಿರಬೇಕು ಎಂಬ ಬಗ್ಗೆ ದೇಶದ ಸುಪ್ರೀಂಕೋರ್ಟ್ ತನ್ನ ವಿವಾದಾತ್ಮಕ ತೀರ್ಪನ್ನು ನೀಡಿ ಒಂದೆರಡು ತಿಂಗಳುಗಳೇ ಉರುಳಿವೆ. ಈ ತೀರ್ಪಿನಲ್ಲಿ ಅದು, ಶಿಕ್ಷಣ ಮಾಧ್ಯಮ ಯಾವ ಭಾಷೆಯಲ್ಲಿರಬೇಕು ಎಂದು ತೀರ್ಮಾನಿಸುವುದನ್ನು ಪೋಷಕರ ವಿವೇಚನೆಗೆ ಬಿಟ್ಟುಬಿಟ್ಟಿದೆ! ಜೊತೆಗೆ, 'ಮಾತೃಭಾಷೆ'ಯ ಹೆಸರಿನಲ್ಲಿ ಕನ್ನಡ ಭಾಷೆಯ ಶಿಕ್ಷಣ ಮಾಧ್ಯಮವನ್ನು (ಕರ್ನಾಟಕದಲ್ಲಾದರೆ ಕನ್ನಡ, ತಮಿಳುನಾಡಿನಲ್ಲಾದರೆ ತಮಿಳು, ಆಂಧ್ರ–ತೆಲಂಗಾಣಗಳಲ್ಲಾದರೆ ತೆಲುಗು, ಕೇರಳದಲ್ಲಾದರೆ ಮಲಯಾಳ.....) ಕಡ್ಡಾಯ ಮಾಡುವುದು ಸಂವಿಧಾನದ ಆಶಯಗಳಿಗೆ ವಿರುದ್ಧ ಎಂದೂ ಅದು ಹೇಳಿದೆ. ಈ ತೀರ್ಪು ಹೊರಬಿದ್ದ ಮೇಲೆ ಸಹಜವಾಗಿಯೇ ನಮ್ಮ ಸಾಹಿತಿಗಳು ಬೀದಿಗಿಳಿದರು. ಈ ಪ್ರತಿಭಟನೆಗಳ ಪೈಕಿ ಮೈಸೂರಿನಲ್ಲಿ ಖ್ಯಾತ ಕಾದಂಬರಿಕಾರ ಎಸ್ ಎಲ್ ಭೈರಪ್ಪನವರ ನೇತೃತ್ವದಲ್ಲಿ ನಡೆದ ಪ್ರತಿಭಟನೆ ಗಮನಾರ್ಹವಾದುದು. ಆ ಪ್ರತಿಭಟನಾ ಸಭೆಯಲ್ಲಿ ಮಾತನಾಡಿದ ಭೈರಪ್ಪನವರು, 'ಕರ್ನಾಟಕದಲ್ಲಿರುವ ಅನುದಾನರಹಿತ ಇಂಗ್ಲಿಷ್ ಶಾಲೆಗಳ ಒಕ್ಕೂಟ(ಕುಸ್ಮಾ)ದಲ್ಲಿ ಸದಸ್ಯರಾಗಿರುವ ರಾಜಕಾರಣಿಗಳು ಯಾರ್‍ಯಾರು, ಅವರು ನಡೆಸುತ್ತಿರುವ ಶಾಲೆಗಳು ಯಾವುವು ಎನ್ನುವುದನ್ನೆಲ್ಲ ಪತ್ತೆ ಹಚ್ಚಿ, ಶಿಕ್ಷಿಸಬೇಕು. ಇದೇ, ಈಗ ಸೃಷ್ಟಿಯಾಗಿರುವ ಸಮಸ್ಯೆಗೆ ಪರಿಹಾರ....' ಎಂದರು. ಅವರ ಮಾತುಗಳನ್ನು ಅಲ್ಲಗಳೆಯಲು ಸಾಧ್ಯವಿಲ್ಲ. ಏಕೆಂದರೆ, ಕನ್ನಡದ ಭವಿಷ್ಯಕ್ಕೆ ಸಂಬಂಧಪಟ್ಟಂತೆ ನ್ಯಾಯಾಂಗದ ದೃಷ್ಟಿ ಇಷ್ಟೊಂದು ಕ್ರೂರವಾಗಿರುವಾಗ ನಾವು ಅದನ್ನು ವಸ್ತುಸ್ಥಿತಿಯ ನೆಲೆಯಲ್ಲೇ ಮುಖಾಮುಖಿಯಾಗಬೇಕೇ ವಿನಾ ಭಾವುಕವಾಗಿ ಅಲ್ಲ ಎನ್ನುವುದು ಒಪ್ಪಬೇಕಾದ್ದೇ. ಇದರ ಜೊತೆಗೆ, ಭೈರಪ್ಪನವರ ಮಾತುಗಳಲ್ಲಿ ಇನ್ನೊಂದು ಸತ್ಯವೂ ಅಡಗಿದೆ. ಅದೇನೆಂದರೆ, ಕನ್ನಡ ಶಿಕ್ಷಣ ಮಾಧ್ಯಮಕ್ಕೆ ನಿಜವಾಗಿ ಕುತ್ತು ತಂದಿರುವವರೆಂದರೆ, ಈ ರಾಜಕಾರಣಿಗಳೇ! ಹಾಗೆ ನೋಡಿದರೆ, ನ್ಯಾಯಾಂಗದ ತೀರ್ಪೇನೋ ಈಗ ಹೊರಬಿದ್ದಿದೆಯಷ್ಟೆ. ಆದರೆ, ತಮ್ಮ ಅಕ್ರಮ ಸಂಪಾದನೆಗೆ ಸೇವೆಯ ಛದ್ಮವೇಷ ತೊಡಿಸುವ ರಾಜಕಾರಣಿಗಳಿಗೆ ತುಂಬಾ ಸುರಕ್ಷಿತ ಎನಿಸಿರುವ ಉಪಾಯವೆಂದರೆ, ಇಂಗ್ಲಿಷ್ ಮಾಧ್ಯಮದ ಶಾಲೆಗಳನ್ನು ತೆರೆದು ಬಿಡುವುದು! ಆದರೆ, ಈಗ ನ್ಯಾಯಾಂಗವೇ ಶಿಕ್ಷಣ ಮಾಧ್ಯಮ ಯಾವ ಭಾಷೆಯಲ್ಲಿರಬೇಕು ಎಂಬ ವಿಷಯದ ತೀರ್ಮಾನವನ್ನು ಸಂವಿಧಾನದ ಆಶಯಗಳ ಹೆಸರಿನಲ್ಲಿ ಪೋಷಕರ ತೀರ್ಮಾನಕ್ಕೆ ಬಿಟ್ಟಿರುವುದರಿಂದ, ಕನ್ನಡವೂ ಸೇರಿದಂತೆ ಉಳಿದೆಲ್ಲ ದೇಶಭಾಷೆಗಳ

(ತೆಲುಗು, ತಮಿಳು, ಮಲಯಾಳ, ಬಂಗಾಳಿ, ಒಡಿಶಾ, ಅಸ್ಸಾಮಿ, ಪಂಜಾಬಿ, ಗುಜರಾತಿ ಮುಂತಾದ ಭಾಷೆಗಳು ಇದರಲ್ಲಿ ಬರುತ್ತವೆ. ಹಿಂದಿಗೆ ಕೂಡ ಇಂಗ್ಲಿಷ್ ಮಾಧ್ಯಮದ ಎದುರು ಹೋರಾಡುವ ಶಕ್ತಿ ಇಲ್ಲ) ಮಾರಣಹೋಮ ನಡೆಸಲು ಅಧಿಕೃತ ಠಸ್ಸೆಯೇ ಬಿದ್ದಂತಾಗಿದೆ ಎನ್ನುವುದರಲ್ಲಿ ಅನುಮಾನವಿಲ್ಲ. ಈಗ ದೇಶಭಾಷೆಗಳ ಶಿಕ್ಷಣ ಮಾಧ್ಯಮ ಉಳಿಯಬೇಕೆಂದರೆ, ಜೊತೆಗೆ ಅದು ವ್ಯಾಪಕವಾಗಿ ಬೆಳೆಯಬೇಕೆಂದರೆ ಒಂದೋ, ಬೃಹತ್ ಆಂದೋಲನ ನಡೆಯಬೇಕು; ಇಲ್ಲವೇ, ಸೂಕ್ತವಾಗಿ ಸಂವಿಧಾನ ತಿದ್ದುಪಡಿ ಆಗಬೇಕು.

* * *

ಮಹಾತ್ಮ ಗಾಂಧೀಜಿಯವರ 'ಹಿಂದ್ ಸ್ವರಾಜ್' ಗ್ರಂಥ ಪ್ರಾಯಶಃ ಎಲ್ಲರಿಗೂ ಗೊತ್ತಿದೆ. ಅದು, ಮೊದಲಿಗೆ ಪ್ರಕಟವಾಗಿದ್ದು ಈಗ್ಗೆ ನೂರು ವರುಷಗಳಿಗೂ ಹಿಂದೆ. ಅದರಲ್ಲಿ ಗಾಂಧೀಜಿಯವರು ಶಿಕ್ಷಣ ವ್ಯವಸ್ಥೆಯ ಬಗ್ಗೆ ಸ್ಪಷ್ಟವಾಗಿ ಯೋಚಿಸಿದ್ದಾರೆ. 'ಹಿಂದ್ ಸ್ವರಾಜ್'ನಲ್ಲಿ ಅವರು, 'ಭಾಷೆಯ ವಿಚಾರದಲ್ಲಿ ನಾವು ಇಂಗ್ಲಿಷ್‌ನ ಗುಲಾಮರಾಗಿರುವುದಕ್ಕೆ ಇಂಗ್ಲೀಷರಿಗಿಂತ ಹೆಚ್ಚಾಗಿ ನಾವೇ ಕಾರಣ. ಇದಕ್ಕೆ ನಾವು ನಮ್ಮನ್ನೇ ದೂಷಿಸಿಕೊಳ್ಳಬೇಕು. ನಮ್ಮಲ್ಲಿ ಪ್ರತಿಯೊಬ್ಬ ಹಿಂದೂ ಪ್ರಜೆಯೂ ಸ್ಥಳೀಯ ಭಾಷೆಯೊಂದರ ಜೊತೆಗೆ ಸಂಸ್ಕೃತವನ್ನೂ ಪ್ರತಿಯೊಬ್ಬ ಮುಸ್ಲಿಮನೂ ಸ್ಥಳೀಯ ಭಾಷೆಯೊಂದರ ಜೊತೆಗೆ ಉರ್ದು ಇಲ್ಲವೇ ಅರೇಬಿಕ್ ಭಾಷೆಯನ್ನೂ ಕಲಿಯಬೇಕು. ಹೀಗಾಗಿದ್ದೇ ಆದರೆ ನಾವು ಇಂಗ್ಲೀಷಿಗೆ ಭಯಪಡಬೇಕಾದ ಅಗತ್ಯವೇ ಇಲ್ಲ' ಎನ್ನುತ್ತಾರೆ. ತುಂಬಾ ದೂರದರ್ಶಿತ್ವವೂ ಶ್ರೀಮಂತವೂ ಆಗಿರುವ ಚಿಂತನೆಯ ಲಹರಿ ಇದು. ಗಾಂಧೀಜಿ ಹೀಗೆ ಕೇವಲ ಹೇಳುತ್ತಿರಲಿಲ್ಲ. ಬದಲಿಗೆ ಏನನ್ನೇ ಬರೆಯಬೇಕಾಗಿ ಬಂದರೂ ಅವರು ಪ್ರಜ್ಞಾಪೂರ್ವಕವಾಗಿ ಬಳಸುತ್ತಿದ್ದುದು ಅವರ ಸ್ಥಳಿಯ ಭಾಷೆಯಾದ ಗುಜರಾತಿಯನ್ನೇ. ಆಮೇಲೆ ಮಹದೇವ ರಾನಡೆಯಂಥವರು ಗಾಂಧೀಜಿಯವರ ಆ ಬರಹಗಳನ್ನು ಇಂಗ್ಲೀಷಿಗೆ ಅನುವಾದಿಸುತ್ತಿದ್ದರು. ಒಟ್ಟಿನಲ್ಲಿ, ಗಾಂಧೀಜಿಯವರಿಗೆ ದೇಶದ ಸ್ವಾತಂತ್ರ್ಯ ಹೋರಾಟವೆಂದರೆ ಅದು ಕೇವಲ ರಾಜಕೀಯ ಸ್ವಾತಂತ್ರ್ಯವಷ್ಟೇ ಆಗಿರಲಿಲ್ಲ. ಬದಲಿಗೆ ಅವರ ಆ ಹೋರಾಟದ ಕಲ್ಪನೆಯು ಗುಡಿ ಕೈಗಾರಿಕೆ, ಚರಕ, ಖಾದಿ, ಅಹಿಂಸೆ, ಸತ್ಯಾಗ್ರಹ, ಹರಿಜನೋದ್ಧಾರಗಳ ಜೊತೆಗೆ ದೇಶಭಾಷೆಗಳನ್ನೂ ಒಳಗೊಂಡಿತ್ತು. ಇದಕ್ಕೆ ನಿದರ್ಶನವಾಗಿ ೧೯೨೪ರ ಆಗಸ್ಟ್ ೧ರಂದು ಅಹಮದಾಬಾದಿನಲ್ಲಿ ನಡೆದ ರಾಷ್ಟ್ರೀಯ ಶಿಕ್ಷಣ ಸಮ್ಮೇಳನದಲ್ಲಿ ಗಾಂಧೀಜಿಯವರು ಮಾಡಿದ ಅಧ್ಯಕ್ಷ ಭಾಷಣವನ್ನು ನೋಡಬಹುದು. ಆ ಭಾಷಣದಲ್ಲಿ ಗಾಂಧೀಜಿಯವರು ದೇಶಭಾಷೆಗಳಲ್ಲಿ ಶಿಕ್ಷಣ ಕೊಡಬೇಕಾದ ಅಗತ್ಯ ಎಷ್ಟೆಂದೂ ಈ ಬಗ್ಗೆ ದೇಶವಾಸಿಗಳು ಬೆಳೆಸಿಕೊಂಡಿರುವ ಕೀಳರಿಮೆ/ತಪ್ಪು ಕಲ್ಪನೆ ಎಷ್ಟೊಂದು ನಗೆಪಾಟಲಿಗೆ ತಕ್ಕದು ಎಂದೂ ಹೇಳಿದ್ದಾರೆ. ಅವರ ಆ ಮಾತುಗಳು ಹೀಗಿವೆ–

'ಪೋಷಕರು ನಮ್ಮ ಶಿಕ್ಷಣ ವ್ಯವಸ್ಥೆಯ ಬಗ್ಗೆ ಬೇಸತ್ತಿದ್ದಾರೆಂದು ನನಗೆ ತಿಳಿದಿದೆ. ಮಕ್ಕಳ ಶಿಕ್ಷಣ ತಾಯ್ನುಡಿಯಲ್ಲಿ ನಡೆಯುತ್ತಿದೆಯೆಂದು ಅವರಿಗೆ ಅಸಮಾಧಾನ! ಇದನ್ನು ಕೇಳಿ ನನಗೆ ನಗು ತಡೆಯಲಾಗಲಿಲ್ಲ. ಆನಂತರ, ನೋವಾಯಿತು; ತುಂಬ ದುಃಖವಾದಾಗ

ಬರುವುದಿಲ್ಲ, ನಗು ಬರುವುದು. ಇದೆಂತಹ ಅಧಃಪತನ ಎನಿಸಿತು. ಪೋಷಕರ ಆತಂಕ, ಮಕ್ಕಳು ಚೆನ್ನಾಗಿ ಇಂಗ್ಲಿಷ್ ಮಾತನಾಡದೆ ಹೋದಾರು ಎಂದು. ಅವರು ಕೆಟ್ಟ ಗುಜರಾತಿ ಮಾತನಾಡಿದರೆ ತೊಂದರೆ ಇಲ್ಲ. ತಮ್ಮ ಮಕ್ಕಳು ಗುಜರಾತಿಯಲ್ಲಿ ಕಲಿತರೆ ಮನೆಗೂ ಕೊಂಚ ವಿದ್ಯೆಯನ್ನು ತಂದಾರೆಂಬ ಅರಿವಿಲ್ಲ ಅವರಿಗೆ... ಮಾತೃಭಾಷೆಯ ಮೂಲಕ ಶಿಕ್ಷಣ ಕೊಡುವುದು ಅಸಹಕಾರ ಚಳವಳಿಯ ಅವಶ್ಯಕ ಕಾರ್ಯಕ್ರಮಗಳಲ್ಲಿ ಒಂದಲ್ಲ ಎಂಬುದು ನಿಜವೇ. ಕೆಲವು ತಂದೆ–ತಾಯಿಗಳು ತಮ್ಮ ಮಕ್ಕಳಿಗೆ ನೂಲುವುದು, ಸಂಗೀತ ಮುಂತಾದ ವಿಷಯಗಳ ಜೊತೆ ಒಳ್ಳೆಯ ಇಂಗ್ಲೀಷ್ ಭಾಷೆಯನ್ನೂ ಕಲಿಸಲು ಕೇಳಿದರೆ ನಾನು ಒಪ್ಪುಯೇನು. ನಾನು ಅಂತಹ ಮಕ್ಕಳಿಗೆ ನಾಲ್ಕು ಗಂಟೆ ಇಂಗ್ಲಿಷ್ ಬೋಧಿಸಿ ಮತ್ತೆ ನಾಲ್ಕು ಗಂಟೆ ನೂಲುವುದು ಮುಂತಾದವುಗಳನ್ನು ಹೇಳಿಕೊಡಬಲ್ಲೆ. ಇಂಗ್ಲಿಷ್ ಕಲಿಸುವಾಗಲೂ ಸಾಂದರ್ಭಿಕವಾಗಿ ಗುಜರಾತಿಯನ್ನೂ ಬೋಧಿಸಬಲ್ಲೆ. ನನಗೆ ಅದು ಸಾಧ್ಯ. ಅಷ್ಟರ ಮಟ್ಟಿಗೆ ನಾನು ಪೋಷಕರಿಗೆ ಮೋಸ ಮಾಡುತ್ತೇನೆ. ಏಕೆಂದರೆ, ನನ್ನ ಮನಸ್ಸಿನಲ್ಲಿ ಈಗ ಇರುವ ವ್ಯವಸ್ಥೆಯ ಬಗ್ಗೆ ಭಿನ್ನಮತವಿದೆ. ಇಂಗ್ಲಿಷ್‌ನಲ್ಲಿ ಎಂ.ಎ. ಪಾಸು ಮಾಡಿದವರೂ ಸಹ ತಪ್ಪಾಗಿ ಬರೆಯುತ್ತಾರೆ ಮತ್ತು ಇಂಗ್ಲಿಷ್ ಕಾಗುಣಿತದಲ್ಲಿ ತಪ್ಪು ಮಾಡುತ್ತಾರೆ' (ನೋಡಿ: ಮಹಾತ್ಮಗಾಂಧಿ ಕೃತಿ ಸಂಚಯ, ಸಂಪುಟ ೨೪, ಪುಟ: ೬೫೫–೬೫೬, ಪ್ರ: ಭಾರತೀಯ ವಿದ್ಯಾ ಭವನ, ಬೆಂಗಳೂರು. ಇಷ್ಟೇ ಅಲ್ಲ, ಇವೆಲ್ಲವನ್ನೂ ಗಾಂಧೀಜಿ ತಮ್ಮ ಮಾತೃಭಾಷೆಯಾದ ಗುಜರಾತಿಯಲ್ಲೇ ಬರೆದಿದ್ದಾರೆ. ಇದು ೧೯೨೪ರ ಆಗಸ್ಟ್ ೩ರ 'ನವಜೀವನ' ಪತ್ರಿಕೆಯಲ್ಲಿ ಪ್ರಕಟವೂ ಆಗಿತ್ತು).

* * *

ಭಾರತ ಸೃಷ್ಟಿಸಿದ ದಿವ್ಯಪ್ರತಿಭೆಗಳಲ್ಲಿ ಒಬ್ಬರಾದ ರವೀಂದ್ರನಾಥ ಟ್ಯಾಗೋರರಂತೂ ಸದ್ಯಕ್ಕೆ ನಮ್ಮಲ್ಲಿ ಚಾಲ್ತಿಯಲ್ಲಿರುವಂಥ ಶಿಕ್ಷಣ ವ್ಯವಸ್ಥೆಯನ್ನೇ ಒಪ್ಪದವರಲ್ಲ. ಜೊತೆಗೆ, ಅವರು ಕೂಡ ದೇಶಭಾಷೆಗಳ ಪರವಾಗಿ ನಿಂತವರು. ಟ್ಯಾಗೋರರಿಂದಾಗಿ ಅವರ ಮಾತೃಭಾಷೆಯಾದ ಬಂಗಾಳಿಗೆ ಹೊಸ ಎತ್ತರ–ಬಿತ್ತರಗಳು ಪ್ರಾಪ್ತವಾದವು. ವಾಸ್ತವವಾಗಿ ಇಪ್ಪತ್ತನೇ ಶತಮಾನದ ಮಧ್ಯಭಾಗದಲ್ಲಿ ಪರಿಣಾಮಕಾರಿಯಾಗಿ ನಡೆದ ಕನ್ನಡ ಚಳವಳಿಗೆ ಒದಗಿಬಂದ ಸ್ಫೂರ್ತಿಗಳಲ್ಲಿ ಟ್ಯಾಗೋರರು ಮತ್ತು ಬಂಗಾಳದ ಚಟುವಟಿಕೆಗಳೂ ಇದ್ದವು.

ಸರಿ, ಮತ್ತೆ ಮಾತೃಭಾಷೆಯಲ್ಲಿ ಶಿಕ್ಷಣ ಮಾಧ್ಯಮದ ಕಡೆಗೆ ಹೋಗೋಣ. ನಮ್ಮಲ್ಲಿ 'ಮಾತೃಭಾಷೆ' ಎನ್ನುವ ಪದ ಗೊಂದಲಮಯ ವ್ಯಾಖ್ಯಾನಗಳನ್ನು ಹುಟ್ಟಿಸಿದೆ. ಇದು ಇಂಗ್ಲೀಷಿನ 'ಮದರ್ ಟಂಗ್' ಎನ್ನುವ ಪದದ ತದ್ವತ್ ರೂಪವಾಗಿದೆ ಎನ್ನುವುದರಲ್ಲಿ ಅನುಮಾನವಿಲ್ಲ. ಏಕೆಂದರೆ, ಈ ಪದವನ್ನೇ ಹಿಡಿದುಕೊಂಡು ಶಿಕ್ಷಣ ಸಂಸ್ಥೆಗಳು ತುಂಬಾ ವರ್ಷ ಹಗ್ಗಜಗ್ಗಾಟ ನಡೆಸಿಕೊಂಡು ಬಂದಿವೆ. ಜೊತೆಗೆ, ಆ ಪದದಲ್ಲಿರುವ ಒಂದಿಷ್ಟು ಅಸಮರ್ಪಕತೆಯನ್ನೇ ತಮ್ಮ ಬಂಡವಾಳವನ್ನಾಗಿ ಮಾಡಿಕೊಂಡಿವೆ. ಹೀಗಾಗಿ, ಇದನ್ನು 'ಸ್ಥಳೀಯ ಭಾಷೆ' ಅಥವಾ 'ಪ್ರಾಂತ್ಯಭಾಷೆ' ಎಂದು ಬಳಸುವುದು, ಹಾಗೆಯೇ ದೃಢವಾಗಿ

ಪ್ರತಿಪಾದಿಸುವುದು ಮುಖ್ಯ. ಈಗ 'ಮಾತೃಭಾಷೆ' ಎಂದರೆ ಏನಾಗುತ್ತಿದೆ ಎಂದರೆ, 'ಕರ್ನಾಟಕದ ಮುಸ್ಲಿಮರ ಮಾತೃಭಾಷೆ ಯಾವುದು? ಕೊಡವರ ಮಾತೃಭಾಷೆ ಯಾವುದು? ಬಂಟರ ಮಾತೃಭಾಷೆ ಯಾವುದು? ಸಾರಸ್ವತರ ಮಾತೃಭಾಷೆ ಯಾವುದು? ರೆಡ್ಡಿಗಳ ಮಾತೃಭಾಷೆ ಯಾವುದು?' ಮುಂತಾದ ಉಪಪ್ರಶ್ನೆಗಳು ಸೃಷ್ಟಿಯಾಗುತ್ತಿವೆ. ಹೀಗಾದ ತಕ್ಷಣ, ಇಂಥ ಉಪಪ್ರಶ್ನೆಗಳಿಗೆ ಕ್ರಮವಾಗಿ ಉರ್ದು, ಕೊಡವ, ತುಳು, ಕೊಂಕಣಿ, ತೆಲುಗು ಎಂಬ ಉತ್ತರಗಳು ಬರುತ್ತವೆ. ಇದರಿಂದ ಶಿಕ್ಷಣದ ವ್ಯಾಪಾರ ನಡೆಸುತ್ತಿರುವವರು ದುರ್ಲಾಭ ಪಡೆಯುತ್ತಿರುವುದು ಗುಟ್ಟೇನಲ್ಲ. ಹೀಗಾಗಿ, ಕನ್ನಡದ ಪರವಾದ ವಕ್ತಾರಿಕೆಯನ್ನು ಮಾಡುವಲ್ಲಿ 'ಮಾತೃಭಾಷೆ' ಎಂಬ ಪದ ಸೋಲುತ್ತಿದೆ. ಹೀಗಾಗಿ, ಈ ಜಾಗದಲ್ಲಿ 'ಒಂದು ರಾಜ್ಯದ ಅಧಿಕೃತ ಭಾಷೆ', 'ಒಂದು ಪ್ರಾಂತ್ಯದಲ್ಲಿ ಸಾರ್ವಜನಿಕವಾಗಿ ಬಳಕೆಯಲ್ಲಿರುವ/ಬೀದಿಯಲ್ಲಿ ವ್ಯಾಪಕವಾಗಿ ರೂಢಿಯಲ್ಲಿರುವ ಭಾಷೆ' ಎಂಬಂತಹ ವ್ಯಾಖ್ಯಾನಗಳನ್ನು ನಾವು ವ್ಯಾಪಕವಾಗಿ ಬಳಕೆಗೆ ತರಬೇಕಾಗಿದೆ. ಇದು ಕೇವಲ ಕನ್ನಡದ ದೃಷ್ಟಿಯಿಂದಷ್ಟೇ ಅಲ್ಲ, ಭಾರತದಲ್ಲಿ ಬದುಕುಳಿದಿರುವ ಅಷ್ಟೂ ಭಾಷೆಗಳಿಗೂ ಇದು ಅನ್ವಯವಾಗುತ್ತದೆ. ಸು ್ರೀಂಕೋರ್ಟು ನೀಡಿರುವ ತೀ ್ನ ಹಿನ್ನೆಲೆಯಲ್ಲಿ ಗಮನಿಸಿದರೆ, ವ್ಯಾಖ್ಯಾನ ಮತ್ತು ಪದಬಳಕೆಯಲ್ಲಿ ಇಂಥ ಕೆಲವು ತಾಂತ್ರಿಕ ಉಪಾಯಗಳು ಅಥವಾ ತಂತ್ರಗಾರಿಕೆಗಳು ತುಂಬಾ ಮುಖ್ಯವೆನಿಸುತ್ತವೆ. ಏಕೆಂದರೆ, ಇಂಗ್ಲಿಷ್ ಶಿಕ್ಷಣ ಮಾಧ್ಯಮದ ಪರವಾಗಿರುವವರು 'ಮಾತೃಭಾಷೆ' ಎಂಬ ಪದದಲ್ಲಿರುವ ವಿಶಾಲವ್ಯಾ ್ತಿಯನ್ನೇ ಗ್ರಹಿಸುತ್ತಿಲ್ಲ. ಬದಲಿಗೆ, ಅದರಲ್ಲಿರುವ ಇಂಥ 'ತಾಂತ್ರಿಕ ಮಿತಿಗಳನ್ನೇ' ಹಿಡಿದುಕೊಂಡು ಸವಾರಿ ಮಾಡುತ್ತಿದ್ದಾರೆ.

ಕರ್ನಾಟಕದಲ್ಲಿ ಕನ್ನಡ ಎದುರಿಸುತ್ತಿರುವ ಇಂಥ ಸವಾಲು ಇಂದಿನ ಸಮಸ್ಯೆಯೇನಲ್ಲ. ಇಪ್ಪತ್ತನೇ ಶತಮಾನದ ಪೂರ್ವಾರ್ಧದಲ್ಲಿ ಕೂಡ ಇಂಥ ಸಮಸ್ಯೆಗಳೇ ಇದ್ದವು. ಆಗ ತುಂಬಾ ಪ್ರತಿಷ್ಠಿತವಾಗಿದ್ದ ಮೈಸೂರಿನ ಮಹಾರಾಜಾ ಕಾಲೇಜು, ಬೆಂಗಳೂರಿನ ಸೆಂಟ್ರಲ್ ಕಾಲೇಜುಗಳಲ್ಲಿ ಕನ್ನಡದಲ್ಲಿ ಶಿಕ್ಷಣ ಮಾಧ್ಯಮವಿರಲಿ, ಕನ್ನಡದಲ್ಲಿ ಮಾತನಾಡುವುದೇ ಅಪರಾಧ ಎಂಬಂಥ ಕೆಟ್ಟ ಪರಿಸ್ಥಿತಿ ಇತ್ತು. ಆ ಕಾಲದಲ್ಲಿ ಅರಳಿದ ಲೇಖಕರು, ತಮ್ಮ ಕಾಲೇಜು ದಿನಗಳ ಬಗ್ಗೆ ಬರೆದಿರುವ ಅನೇಕ ಬರಹಗಳನ್ನು ಓದಿದರೆ ಇದಕ್ಕೆ ಸಾಕಷ್ಟು ಪುರಾವೆಗಳು ಸಿಕ್ಕುತ್ತವೆ. ಇದು ಹಳೆ ಮೈಸೂರು ಭಾಗದ ಪರಿಸ್ಥಿತಿಯಾದರೆ, ನಾವೀಗ ಉತ್ತರ ಕರ್ನಾಟಕ ಎಂದು ಕರೆಯುತ್ತಿರುವ ತುಂಗಭದ್ರಾ ನದಿಯ ಆಚೆಯ ಸೀಮೆಯಲ್ಲಿರುವ ಧಾರವಾಡ, ಬೆಳಗಾವಿ, ಗದಗ, ರಾಯಬಾಗ, ಬೈಲಹೊಂಗಲ ಮುಂತಾದ ಊರುಗಳ ಜನರೆಲ್ಲ ಓದಲು ಪುಣೆ–ಬೊಂಬಾಯಿಗಳ ಕಡೆಗೆ ಹೋಗಬೇಕಾಗಿತ್ತು. ಈಗ ನಾವು 'ಕನ್ನಡದ ಕುಲಪುರೋಹಿತ' ಎಂದು ಗೌರವಿಸುವ ಆಲೂರು ವೆಂಕಟರಾಯರು ಕೂಡ ಪುಣೆಯಲ್ಲಿ ಓದಿ, ವಕೀಲಿಕೆ ಮಾಡುತ್ತಿದ್ದವರೇ ಆಗಿದ್ದರು. ಆ ದಿನಗಳಲ್ಲಿ ಅವರಿಗೆ ಕನ್ನಡದ ಶಕ್ತಿಯ ಅರಿವಾಗಲಿ, ಕರ್ನಾಟಕದ

ಕಲ್ಪನೆಯಾಗಲಿ ಇರಲಿಲ್ಲ. ಇದನ್ನು ಅವರೇ ಹೇಳಿಕೊಂಡಿದ್ದಾರೆ (ನೋಡಿ: ಆಲೂರರ ಆತ್ಮಚರಿತ್ರೆ 'ನನ್ನ ಜೀವನ ಸ್ಮೃತಿಗಳು'). ಅಂತಹ ಸಂದರ್ಭದಲ್ಲಿ ತುಂಗಭದ್ರೆಯ ತಟದಲ್ಲಿರುವ ಆನೆಗೊಂದಿ–ಹಂಪೆಗಳನ್ನು ಅಕಸ್ಮಾತ್ ನೋಡಿದ ಮೇಲಷ್ಟೇ ಅವರಿಗೆ 'ಕರ್ನಾಟಕತ್ವ'ದ ಕಲ್ಪನೆ ಒಡಮೂಡಿತು. ಇನ್ನು ಬಳ್ಳಾರಿ–ಮಂಗಳೂರುಗಳು ಮದ್ರಾಸ್ ಪ್ರಾಂತ್ಯದಲ್ಲಿದ್ದವು; ಗುಲ್ಬರ್ಗ–ಬೀದರ್–ರಾಯಚೂರು ಮುಂತಾದವು ನಿಜಾಮರ ಆಳ್ವಿಕೆಯಲ್ಲಿದ್ದವು. ಇದರ ಜೊತೆಗೆ ಬ್ರಿಟೀಷರ ಆಳ್ವಿಕೆಯ ಗದಾಪ್ರಹಾರ ಕೂಡ ಕನ್ನಡ–ಕರ್ನಾಟಕಗಳ ಮೇಲಾಯಿತು. ಹಾಗೆ ನೋಡಿದರೆ, ಹಳೆ ಮೈಸೂರು ಭಾಗದಲ್ಲೇ ಕನ್ನಡ ಸ್ವಲ್ಪ ಸುಸ್ಥಿತಿಯಲ್ಲಿತ್ತೆನ್ನಬಹುದು. ಕನ್ನಡದ ವಿಷಯವಾಗಿ ಭಾವಾವೇಶದಿಂದ ಮಾತನಾಡುತ್ತ, ಸರಳರೇಖೆಯಂಥ ತೀರ್ಮಾನಗಳಿಗೆ ತಲಪುವುದಕ್ಕಿಂತ ನಮ್ಮ ಪಾಲಿಗೆ ಇರುವ ಈ ಬಿಕ್ಕಟ್ಟಿನ ಇತಿಹಾಸವನ್ನು ತಿಳಿದುಕೊಳ್ಳಬೇಕು. ಇಲ್ಲದಿದ್ದರೆ, ಕನ್ನಡವನ್ನು ರಚನಾತ್ಮಕವಾಗಿ ಕಟ್ಟುವ ಕೆಲಸದಲ್ಲಿ ನಮ್ಮ ಈ ಕಾಲದಲ್ಲಿ ಇಡಬೇಕಾದ ಮುಂದಡಿಯ ಜರೂರುಗಳ ಸ್ವರೂಪ ಗೊತ್ತಾಗುವುದಿಲ್ಲ.

* * *

ಮೇಲಿನಸದೆಲ್ಲ ಒಂದು ಹಂತವಾಯಿತು. ಈಗ, ಕನ್ನಡ ಶಿಕ್ಷಣ ಮಾಧ್ಯಮದ ವಿಷಯದಲ್ಲಿನ ಸದ್ಯದ ಅವಸ್ಥೆಗೆ ಬರೋಣ. ನಮ್ಮ ಸದ್ಯದ ಕರ್ನಾಟಕ ಈ ವಿಷಯದಲ್ಲಿ ಇಬ್ಭಾಗವಾಗಿರುವುದು ಸತ್ಯ. ಅಂದರೆ ಕನ್ನಡ ಮಾಧ್ಯಮವೆಂದರೆ 'ಕಳಾಹೀನವಾದ, ನಮ್ಮ ಮಕ್ಕಳ ಭವಿಷ್ಯವನ್ನು ಹಾಳು ಮಾಡುವ ಸರ್ಕಾರಿ ಶಾಲೆಗಳು' ಎಂದೂ, ಇಂಗ್ಲಿಷ್ ಮಾಧ್ಯಮವೆಂದರೆ 'ಕಣ್ಣು ಕುಕ್ಕುವಂತಿರುವ, ನಮ್ಮ ಸಮಸ್ಯೆಗಳಿಗೆಲ್ಲ ಪರಿಹಾರ ಒದಗಿಸುವ ಮಂತ್ರದಂಡ' ಎಂದೂ ಭಾವಿಸಲಾಗಿದೆ. ಹೆಚ್ಚಿನ ಜನರಲ್ಲಿ –ಅಂದರೆ, ಭಾಷೆಯ ವಿಚಾರವಾಗಿ ಆಳವಾದ ಯಾವ ಚಿಂತನೆಗಳೂ ಇರದವರಲ್ಲಿ– ಸ್ಥಾಯಿಯಾಗಿರುವ ತೀರ್ಮಾನವಿದು. ಇದು, ಇಂಗ್ಲಿಷ್ ಮಾತನಾಡುತ್ತಿದ್ದ ಬ್ರಿಟೀಷರು ನಮ್ಮ ದೇಶವನ್ನು ಆಳಿದ ಪರಿಣಾಮ. ಭಾರತದಲ್ಲಿ ಇಂಗ್ಲಿಷ್ ಶಿಕ್ಷಣ ಪದ್ಧತಿಯನ್ನು ಜಾರಿಗೆ ತಂದ ಲಾರ್ಡ್ ಮೆಕಾಲೆ ಆ ಸಂದರ್ಭದಲ್ಲಿ ಬರೆದಿರುವ ಟಿಪ್ಪಣಿಗಳನ್ನು ನಾವಿಲ್ಲಿ ಗಮನಿಸಬೇಕು. ಮೆಕಾಲೆ ಜಾರಿಗೆ ತಂದ ಶಿಕ್ಷಣ ಪದ್ಧತಿಯ ಹಿಂದಿದ್ದ ಒಂದೇ ಒಂದು ಉದ್ದೇಶವೆಂದರೆ, ಇಡೀ ಭಾರತದ ಜನರನ್ನು ಕ್ರೈಸ್ತ ಮತಕ್ಕೆ ಮತಾಂತರಿಸುವುದಾಗಿತ್ತು. ಇಂಗ್ಲಿಷ್ ಶಿಕ್ಷಣ ಪದ್ಧತಿಯನ್ನು ಇಲ್ಲಿ ಜಾರಿಗೆ ತಂದರಷ್ಟೇ ಭಾರತದ ಭಾಷೆಗಳನ್ನು –ಅದರಲ್ಲೂ ಮುಖ್ಯವಾಗಿ ಸಂಸ್ಕೃತವನ್ನು– ನಾಶ ಮಾಡಿ, ಕಾಲಕ್ರಮೇಣ ಮತಾಂತರದ ತಮ್ಮ ಕನಸನ್ನು ಈಡೇರಿಸಿಕೊಳ್ಳಬಹುದೆಂಬುದು ಬ್ರಿಟಿಷ್ ಆಡಳಿತದ ಆಲೋಚನೆಯಾಗಿತ್ತು. ನಾವೀಗ ತುಂಬಾ ಕೊಂಡಾಡುತ್ತಿರುವ ಜರ್ಮನಿಯ ಮ್ಯಾಕ್ಸ್‌ಮುಲ್ಲರ್ ಬಂದಿದ್ದು ಕೂಡ ಮತಾಂತರ ಮಾಡುವ ಉದ್ದೇಶದಿಂದಲೇ ಎನ್ನುವುದಕ್ಕೆ ಅವನ ಹಲವು ಪತ್ರಗಳು ಸಾಕ್ಷಿಗಳಾಗಿ ಉಳಿದಿವೆ (ನೋಡಿ: 'ಯಾವುದು ಚರಿತ್ರೆ?'. ತೆಲುಗಿನ ಈ ಕೃತಿಯನ್ನು ಕನ್ನಡಕ್ಕೆ

ಅನುವಾದಿಸಿರುವವರು ಹಿರಿಯ ಪತ್ರಕರ್ತ ಬಾಬು ಕೃಷ್ಣಮೂರ್ತಿಯವರು. ಪ್ರ: ವಸಂತ ಪ್ರಕಾಶನ, ಬೆಂಗಳೂರು).

ಆದರೆ, ಹೀಗೆ ಮತಾಂತರದ ಉದ್ದೇಶವಿಟ್ಟುಕೊಂಡು ಇಂಗ್ಲಿಷ್ ಶಿಕ್ಷಣ ಕ್ರಮವನ್ನು ಕುರಿತ ಗ್ರಹಿಕೆಗಳು ಸ್ವತಂತ್ರ ಭಾರತದಲ್ಲಿ ತುಂಬಾ ಭಿನ್ನವಾಗಿವೆ. ಇದರಲ್ಲಿ ಮುಖ್ಯವಾಗಿ ದಲಿತ ನಾಯಕ ಚಂದ್ರಭಾನ್ ಪ್ರಸಾದ್ ಅವರ ಗ್ರಹಿಕೆಯನ್ನು ಗಮನಿಸಬೇಕು. ಅವರ ಪ್ರಕಾರ, ಭಾರತದಲ್ಲಿ ತುಂಬಾ ದಮನಿತರಾಗಿರುವ ದಲಿತರ ವಿಮೋಚನೆಗೆ ಇರುವ ಏಕೈಕ ಅಸ್ತ್ರವೆಂದರೆ ಇಂಗ್ಲಿಷ್ ಮಾಧ್ಯಮದ ಶಿಕ್ಷಣವೇ ಆಗಿದೆ. ಇದನ್ನು ಪ್ರತಿಪಾದಿಸಲು ಒಂದು ದೊಡ್ಡ ಸಂಘಟನೆಯನ್ನೇ ಕಟ್ಟಿರುವ ಅವರು, ದೆಹಲಿಯ ಪಕ್ಕದಲ್ಲಿ 'ಇಂಗ್ಲಿಷ್ ದೇವಿ'ಯ ಪ್ರತಿಮೆಯನ್ನೇ ನಿಲ್ಲಿಸಿದ್ದಾರೆ! ಅವರು ಈ ಪ್ರತಿಮೆಯನ್ನು ನಿಲ್ಲಿಸಲು ಅಮೆರಿಕದ ಹೆಸರಾಂತ 'ಸ್ವಾತಂತ್ರ್ಯದೇವಿ'ಯ (ಸ್ಟ್ಯಾಚ್ಯೂ ಆಫ್ ಲಿಬರ್ಟಿ) ಪ್ರತಿಮೆಯನ್ನು ಮಾದರಿಯಾಗಿ ಸ್ವೀಕರಿಸಿದ್ದಾರೆ ಎನಿಸುತ್ತದೆ. ದಲಿತರು ಇಂಗ್ಲೀಷನ್ನು ಕಲಿಯಬಾರದು ಎಂದೇನೂ ಇಲ್ಲ. ಹಾಗೆ ನೋಡಿದರೆ, ಭಾರತದಲ್ಲಿ ಮೊಟ್ಟಮೊದಲಿಗೆ ಇಂಗ್ಲಿಷ್ ಶಿಕ್ಷಣ ಕ್ರಮದ ಪರ ನಿಂತವರಲ್ಲಿ 'ಭಾರತೀಯ ನವೋದಯದ ಜನಕ' ಎಂದೇ ಖ್ಯಾತರಾಗಿರುವ ರಾಜಾರಾಮ್ ಮೋಹನ್‌ರಾಯ್ ಮೊದಲಿಗರು. ೧೭೭೨ರಿಂದ ೧೮೩೩ರವರೆಗೆ ಬದುಕಿದ್ದ ರಾಯ್ ಅವರು, ಸಂಪ್ರದಾಯಗಳ ಭಾರದಿಂದ ಜಡವಾಗಿದ್ದ ಹಿಂದೂಧರ್ಮದ ವಿರುದ್ಧ ತಿರುಗಿ ಬಿದ್ದವರು. ಆದರೆ, ಇಂಗ್ಲಿಷ್ ತಾನು ಬೇರುಬಿಟ್ಟಲ್ಲೆಲ್ಲ ಏನೇನು ಅನಾಹುತ ಮಾಡಿದೆ ಎಂಬುದನ್ನು ನಾವು ತಿಳಿದುಕೊಳ್ಳಬೇಕು. ಏಕೆಂದರೆ, ಈ ಭಾಷೆ ಎಲ್ಲೆಲ್ಲಿ ಕಾಲಿಟ್ಟಿದೆಯೋ ಅಲ್ಲೆಲ್ಲ ಸ್ಥಳೀಯ ಸಂಸ್ಕೃತಿಗಳು ಕೇವಲ ಕೆಲವೇ ದಶಕಗಳಲ್ಲಿ ಹೇಳಹೆಸರಿಲ್ಲದಂತಾಗಿವೆ. ತುಂಬಾ ಸಮೃದ್ಧವಾದ ಬುಡಕಟ್ಟು ಸಂಸ್ಕೃತಿಗಳನ್ನು ಹೊಂದಿದ್ದ ಆಫ್ರಿಕಾದ ಪರಿಸ್ಥಿತಿಯನ್ನು ನಾವು ಇದಕ್ಕೆ ನಿದರ್ಶನವಾಗಿ ನೋಡಬಹುದು. ಏಕೆಂದರೆ, ಇಂಗ್ಲಿಷ್ ಹೋದೆಡೆಗೆಲ್ಲ ಅದರ ಹಿಂದೆಯೇ ಬೈಬಲ್ ಕೂಡ ಹೋಗಿದೆ! ಕಪ್ಪು ವರ್ಣೀಯನಾಗಿ ಹುಟ್ಟಿಯೂ ಕ್ರೈಸ್ತ ಧರ್ಮದ ವ್ಯವಸ್ಥೆಯಲ್ಲಿ ಬಿಷಪ್ ಮಟ್ಟಕ್ಕೇರಿದ ಡೆಸ್ಮಂಡ್ ಟುಟು ಕೂಡ ಈ ಬಗ್ಗೆ ಬಹಿರಂಗವಾಗಿಯೇ ಪ್ರತಿರೋಧ ವ್ಯಕ್ತಪಡಿಸಿದ್ದರು. ಟುಟು ಅವರು ಹೇಳಿದ್ದಿಷ್ಟೆ– 'ಅವರು (ಕ್ರೈಸ್ತರು) ಬಂದು ಕಣ್ಮುಚ್ಚಿ ಪ್ರಾರ್ಥಿಸುವಂತೆ ನಮಗೆ ಹೇಳಿದರು. ನಾವು ಹಾಗೆಯೇ ಮಾಡಿದೆವು. ಕಣ್ಣನ್ನು ಮುಚ್ಚಿಕೊಳ್ಳುವ ಮೊದಲು ನಮ್ಮ ಬಳಿ ಜಮೀನಿತ್ತು; ಅವರ (ಕ್ರೈಸ್ತ) ಬಳಿ ಬೈಬಲ್ ಇತ್ತು. ಆದರೆ, ಕಣ್ಣು ಬಿಟ್ಟಾಗ ನೋಡಿದರೆ ನಮ್ಮ ಬಳಿ ಬೈಬಲ್ ಇತ್ತು; ಅವರ (ಕ್ರೈಸ್ತರ) ಬಳಿ ನಮ್ಮ ಜಮೀನಿತ್ತು!'. ಇಂಗ್ಲೀಷನ್ನು ಮುಂದುಬಿಟ್ಟುಕೊಂಡು ಅದರ ಹಿಂದೆ ಎಂತೆಂತಹ ಛದ್ಮವೇಷಧಾರಿಕೆಯ ಕೆಲಸಗಳು ಮತ್ತು ಸಂಸ್ಕೃತಿ ವಿನಾಶದಂಥ ಸಂಚುಗಳು ಇಡೀ ಜಗತ್ತಿನಲ್ಲಿ ಹೇಗೆಲ್ಲಾ ನಡೆಯುತ್ತಾ ಬಂದಿವೆ ಎನ್ನುವುದಕ್ಕೆ ಇದಕ್ಕಿಂತ ಉದಾಹರಣೆ ಇನ್ನೊಂದು ಬೇಕಿಲ್ಲ. ಅಂದಹಾಗೆ, ಮೇಲೆ ನಾನು ಉಲ್ಲೇಖಿಸಿದ ಚಂದ್ರಭಾನ್ ಪ್ರಸಾದ್ ಅವರ ಚಿಂತನಾಕ್ರಮವನ್ನು ವಿರೋಧಿಸುವವರೂ ಇದ್ದಾರೆ. ನಮ್ಮ ಕನ್ನಡದ ಖ್ಯಾತ ದಲಿತಕವಿಗಳಲ್ಲಿ ಒಬ್ಬರಾದ ಕೆ ಬಿ ಸಿದ್ದಯ್ಯನವರ ಪ್ರಕಾರ, 'ಇಡೀ ಜಗತ್ತಿನಲ್ಲಿ ಇಂಗ್ಲಿಷ್

ಮಾತನಾಡುತ್ತಿರುವವರ ಸಂಖ್ಯೆ ಶೇಕಡ ಒಂದಕ್ಕಿಂತಲೂ ಕಡಿಮೆ. ಹೀಗಿರುವಾಗ ಭಾರತದ ದಲಿತರ ವಿಮೋಚನೆ ಇಂಗ್ಲಿಷ್ ಕಲಿಕೆಯಿಂದ ಮಾತ್ರವೇ ಸಾಧ್ಯ ಎನ್ನುವ ಚಿಂತನೆಯ ಧಾಟಿಯೇ ಸರಿಯಲ್ಲ. ಭಾರತೀಯ ಭಾಷೆಗಳೇ ದಲಿತರ ಶೋಷಣೆಗೆ ಕಾರಣ ಎನ್ನುವ ವಾದ ಅರ್ಥವಿಲ್ಲದ್ದು. ಇಲ್ಲಿನ ದಲಿತರು ತಮ್ಮ ಸಾಂಸ್ಕೃತಿಕ ಶ್ರೀಮಂತಿಕೆಯ ಪುನರುತ್ಥಾನದಿಂದ ಸ್ಥಳೀಯ ಭಾಷೆಗಳ ಮೂಲಕವೇ ಉದ್ಧಾರವಾಗಬೇಕು. ಇಲ್ಲದಿದ್ದರೆ, ಅವರು ಈಗಾಗಲೇ ಇರುವ ಒಂದು ಸಮಸ್ಯೆಯ ಜೊತೆಗೆ ಇನ್ನೊಂದು ಬಗೆಯ ಸಮಸ್ಯೆಯ ವಿಷವರ್ತುಲದಲ್ಲಿ ಸಿಲುಕಿಕೊಳ್ಳಲಿದ್ದಾರೆ'. ಕನ್ನಡ ಶಿಕ್ಷಣ ಮಾಧ್ಯಮವಾಗಿ ಬರಬೇಕಾದರೆ ನಮ್ಮ ಜನ ಸಮುದಾಯಗಳಲ್ಲಿರುವ ಕೆಲವು ತಪ್ಪು ಗ್ರಹಿಕೆಗಳೂ ಕಲ್ಪನೆಗಳೂ ಹೋಗಬೇಕು.

ಈಗ ಸಮಸ್ಯೆಯ ಇನ್ನೊಂದು ಮುಖವನ್ನು ನೋಡಬೇಕು. ೧೯೪೭ರಲ್ಲಿ ದೇಶಕ್ಕೆ ಸ್ವಾತಂತ್ರ್ಯ ಬರುವವರೆಗೇನೋ ಬ್ರಿಟೀಷರ ದರ್ಬಾರೇ ನಡೆಯಿತು, ಹೀಗಾಗಿ ಇಂಗ್ಲೀಷಿನ ಕೈಮೇಲಾಗಿದ್ದುದು ಸಹಜ ಎನ್ನುವುದು ಸರಿ. ಆದರೆ ಆಮೇಲೇನಾಯಿತು? ಸ್ವಾತಂತ್ರ್ಯೋತ್ತರ ಕಾಲದ ಆರಂಭಿಕ ದಶಕಗಳಲ್ಲಿ ಕನ್ನಡಕ್ಕೆ ಪ್ರಾಶಸ್ತ್ಯ ಸಿಕ್ಕಿ ಅದು ವ್ಯಾಪಕವಾಯಿತು, ಕರ್ನಾಟಕ ಏಕೀಕರಣದ ನಂತರ ಕನ್ನಡದ ಭೌಗೋಳಿಕ ವ್ಯಾಪ್ತಿ ಇನ್ನೂ ಹೆಚ್ಚಾಯಿತು ಎನ್ನುವುದು ನಿಜ (ಇತಿಹಾಸದ ದೃಷ್ಟಿಯಿಂದ ಹೇಳುವುದಾದರೆ, ಕರ್ನಾಟಕವು ಒಂದು ಕಾಲದಲ್ಲಿ ಈಗ ಮಹಾರಾಷ್ಟ್ರದಲ್ಲಿರುವ ನಾಸಿಕ್‌ನವರೆಗೂ ಹಬ್ಬಿತ್ತು. ಈಗಲೂ ತಮಿಳುನಾಡಿನ ನೀಲಗಿರಿ ಸೀಮೆ ಮತ್ತು ಕೊಯಮತ್ತೂರಿನ ಸುತ್ತಮುತ್ತ ಇರುವ ಸಮುದಾಯಗಳಲ್ಲಿ ಹಾಗೂ ಮಹಾರಾಷ್ಟ್ರದ ಗೌಳಿಗರು ಮುಂತಾದ ಜನಸಮುದಾಯಗಳು ಬಳಸುವ ಸಂಬಂಧವಾಚಕಗಳು ಕನ್ನಡಮೂಲದ ಪದಗಳೇ ಆಗಿವೆ. ವಿವರಗಳಿಗೆ ನೋಡಿ: ಡಾ।ಎಂ ಚಿದಾನಂದಮೂರ್ತಿಯವರ 'ಬೃಹತ್ ಭಾಷಿಕ ಕರ್ನಾಟಕ– ನೀಲಗಿರಿಯಿಂದ ನಾಸಿಕ್‌ವರೆಗೆ'). ಈ ಪರಿಸ್ಥಿತಿ ಸರಿಸುಮಾರು ೧೯೮೦–೯೦ರವರೆಗೂ ಇದ್ದುದು ಸುಳ್ಳಲ್ಲ. ಆದರೆ, ಆಮೇಲೆ ಕನ್ನಡಕ್ಕೆ ಪ್ರಾಶಸ್ತ್ಯ ಕಡಿಮೆಯಾಗುತ್ತ ಬಂತು. ಅಂದರೆ, ಸ್ವಾತಂತ್ರ್ಯೋತ್ತರದ ನಂತರ ಅಕ್ಷರಲೋಕದ ಸಂಪರ್ಕಕ್ಕೆ ಬಂದ ಎರಡನೇ ತಲೆಮಾರಿನ ಜನರು ತಮ್ಮ ಮಕ್ಕಳನ್ನು ಇಂಗ್ಲಿಷ್ ಮಾಧ್ಯಮದ ಕಡೆಗೆ ಕೊಂಡೊಯ್ದರು. ಹೀಗಾಗಿ, ಕನ್ನಡ ಮಾಧ್ಯಮ ಶಾಲೆಗಳು ವಿದ್ಯಾರ್ಥಿಗಳಿಲ್ಲದೆ ಸೊರಗಲು ಶುರುವಾದವು. ಇದರ ಜೊತೆಗೆ ಸ್ವಾತಂತ್ರ್ಯೋತ್ತರ ಕಾಲಘಟ್ಟದಲ್ಲಿ ನಾವು ಕನ್ನಡವನ್ನು ಕೇವಲ ಸಾಹಿತ್ಯ ಕ್ಷೇತ್ರದಲ್ಲಿ ಮಾತ್ರ ಹುಲುಸಾಗಿ ಬೆಳೆಸಿದ್ದೇವೆ ವಿನಾ ತಂತ್ರಜ್ಞಾನ, ಮನೋವಿಜ್ಞಾನ, ಮಾಹಿತಿ ವಿಜ್ಞಾನ, ಕಂಪ್ಯೂಟರ್ ವಿಜ್ಞಾನ, ಬಾಹ್ಯಾಕಾಶ ಅಧ್ಯಯನ, ಆರ್ಟಿಫಿಶಿಯಲ್ ಇಂಟೆಲಿಜೆನ್ಸ್, ಅಪರಾಧಶಾಸ್ತ್ರ, ನ್ಯಾಯಶಾಸ್ತ್ರ, ಜೀವವಿಜ್ಞಾನ, ಪತ್ರಿಕೋದ್ಯಮ, ಸಮಾಜಶಾಸ್ತ್ರ, ಅರ್ಥಶಾಸ್ತ್ರ, ಭೂಗರ್ಭ ವಿಜ್ಞಾನ, ವ್ಯವಸ್ಥಾಪನಾ ವಿಜ್ಞಾನ (ಮ್ಯಾನೇಜ್‌ಮೆಂಟ್) ಮುಂತಾದ ಜ್ಞಾನಶಿಸ್ತುಗಳ ಕಡೆ ನೋಡಲಿಲ್ಲ. ಕನ್ನಡ ಸಾಹಿತ್ಯವು ಸಮೃದ್ಧವಾಗಿರಬೇಕು ನಿಜ. ಆದರೆ, ಮೇಲೆ ಹೇಳಿರುವ ಮಿಕ್ಕ ಕ್ಷೇತ್ರಗಳನ್ನು ಸಾಹಿತ್ಯ ಕ್ಷೇತ್ರದಲ್ಲಿರುವಷ್ಟು ಸಮೃದ್ಧಿಯ

ಅರ್ಧದಷ್ಟನ್ನಾದರೂ ಬೆಳೆಸಿದ್ದಿದ್ದರೆ ಇವತ್ತು ಕನ್ನಡ ಶಿಕ್ಷಣ ಮಾಧ್ಯಮಕ್ಕಾಗಿ ಹೀಗೆ ಬೀದಿಗಿಳಿಯಬೇಕಾದ ದುರ್ದೆಸೆ ಖಂಡಿತ ಬರುತ್ತಿರಲಿಲ್ಲ. ಈ ಮಾತನ್ನು ಏಕೆ ಹೇಳಬೇಕಾಗಿದೆಯೆಂದರೆ, ಇವತ್ತಿಗೂ ಈ ಕ್ಷೇತ್ರಗಳಲ್ಲಿ ಏನಾದರೂ ಒಂದು ಒಳ್ಳೆಯ ಪುಸ್ತಕ ಬೇಕೆಂದರೆ ಹೆಚ್ಚಿನ ಸಂದರ್ಭಗಳಲ್ಲಿ ಇಂಗ್ಲೀಷಿನ ಮೊರೆ ಹೋಗಬೇಕಾಗಿದೆ. ನಾವು, ಸರಿಯಾದ ಕಾಲದಲ್ಲೇ ಎಚ್ಚೆತ್ತುಕೊಂಡು ಸೂಕ್ತ ಕ್ರಮಗಳನ್ನು ಕೈಗೊಂಡಿದ್ದರೆ ಕನ್ನಡವು ಉದ್ಯೋಗದಾತ ಭಾಷೆಯಾಗಿ ಬೆಳೆಯುತ್ತಿತ್ತು.

ವಸಾಹತುಶಾಹಿ ಆಡಳಿತದಲ್ಲಿದ್ದ ನಾವು ಇಂಗ್ಲೀಷನ್ನು ಬೇಡವೇ ಬೇಡ ಎಂದು ತಳ್ಳಿಹಾಕುವ ಸ್ಥಿತಿಯಲ್ಲಿಲ್ಲ ಎನ್ನುವುದು ವಾಸ್ತವ. ಆದರೆ, ಅದನ್ನು ಸಂಪರ್ಕ ಭಾಷೆಯಾಗಿ ಇಟ್ಟುಕೊಳ್ಳಬೇಕೇ ವಿನಾ ಅದೇ ನಮ್ಮ ಸರ್ವಸ್ವವೂ ಆಗಿ ನಮ್ಮ ಭಾಷೆಗಳ ಸಾವಿಗೆ ಮುನ್ನುಡಿಯಾಗಬಾರದು. ಹೀಗಾಗಿ ನಮ್ಮ ಸರಕಾರ ಮನಸ್ಸು ಮಾಡಿ, ಇಡೀ ರಾಜ್ಯದಲ್ಲಿರುವ ಕನ್ನಡ ಶಾಲೆಗಳಲ್ಲಿ ಇಂಗ್ಲೀಷನ್ನು ಒಂದು ಸಂಪರ್ಕ ಭಾಷೆಯಾಗಿ ಕಲಿಸಬೇಕು. ಇದರಿಂದ ಹಲವು ಲಾಭಗಳಿವೆ. ಅವೆಂದರೆ, ಕನ್ನಡ ಮಾಧ್ಯಮಕ್ಕೆ ಹೋಗುವ ಮಕ್ಕಳು ಕೂಡ ಇಂಗ್ಲಿಷ್ ಮಾಧ್ಯಮದಲ್ಲಿ ಓದಿದ ವಿದ್ಯಾರ್ಥಿಗಳ ಎದುರು ಸ್ಪರ್ಧಿಸಬಹುದು; ಇಂಗ್ಲಿಷ್ ತನಗೆ ಬಾರದೆಂಬ ಕೀಳರಿಮೆಗೆ ಆಸ್ಪದವಿರುವುದಿಲ್ಲ; ಔದ್ಯೋಗಿಕ ಸ್ಪರ್ಧೆಯಲ್ಲಿ ಕೃಪಾಂಕಗಳ ಮೇಲೆ ಅವಲಂಬಿತವಾಗದೆ ಕನ್ನಡ ಮಾಧ್ಯಮದ ಮಕ್ಕಳು ಕೂಡ ಆತ್ಮವಿಶ್ವಾಸದಿಂದ ಮುನ್ನುಗ್ಗಬಹುದು; ಇದೆಲ್ಲಕ್ಕಿಂತ ಮುಖ್ಯವಾಗಿ ಈಗ ಒಂದೆಡೆ ಕನ್ನಡ ಮಾಧ್ಯಮದ ಅಸ್ತಿತ್ವಕ್ಕಾಗಿ ಹೋರಾಟ ಮತ್ತು ಇನ್ನೊಂದೆಡೆ ಇಂಗ್ಲಿಷ್ ಮಾಧ್ಯಮದ ಯಜಮಾನಿಕೆಯಿಂದಾಗಿ ಸೃಷ್ಟಿಯಾಗಿರುವ ಸಾಮಾಜಿಕ ಅಸಮಾನತೆಯನ್ನು ತಗ್ಗಿಸಬಹುದು. ಇವೆಲ್ಲದರಿಂದಾಗಿ ಅಂತಿಮವಾಗಿ ಕರ್ನಾಟಕದಲ್ಲಿ ಕನ್ನಡಿಗರದೇ ಆದ ಒಂದು ಸಂಸ್ಕೃತಿ ಏನಿದೆ, ಅದು ಉಳಿಯುತ್ತದೆ. ಇದರ ಜೊತೆಗೆ ಸರಕಾರ ತಾನು ತೆರೆದಿರುವ ಕನ್ನಡ ಮಾಧ್ಯಮ ಶಾಲೆಗಳಲ್ಲಿ ಶಿಕ್ಷಣದ ಗುಣಮಟ್ಟ ಮತ್ತು ಆಕರ್ಷಕ ಅಂಶಗಳು ಇರುವಂತೆಯೂ ಮಾಡಬೇಕು. ಅಲ್ಲದೆ, ಖಾಸಗಿ ಶಾಲೆಗಳನ್ನು ಶುರು ಮಾಡಲು ಮುನ್ನುಗ್ಗುವವರಿಗೆ ಕೂಡ ಕನ್ನಡದ ಹಿತಕ್ಕೆ ಪೂರಕವಾದ ಹಲವು ಷರತ್ತುಗಳನ್ನು ಹಾಕಬೇಕು.

ಕೊನೆಯ ಮಾತು– ಒಂದು ವರ್ಷದ ಹಿಂದೆ ನನ್ನ ಮಗನನ್ನು ಕನ್ನಡ ಮಾಧ್ಯಮದ ಶಾಲೆಗೆ ಸೇರಿಸಬೇಕೆಂಬ ಆಸೆಯಿಂದ ಬೆಂಗಳೂರಿನ ಸಾಕಷ್ಟು ಬಡಾವಣೆಗಳಲ್ಲಿ ಹುಡುಕಾಡಿದೆ; ಯಾವ್ಯಾವುದೋ ವೆಬ್‌ಸೈಟ್‌ಗಳನ್ನೆಲ್ಲ ಜಾಲಾಡಿದೆ. ಆದರೆ, ನಮ್ಮ ಮನೆ ಇರುವ ಸಂಜಯನಗರ ಬಡಾವಣೆಯ ಸುತ್ತಮುತ್ತ ಎಲ್ಲೂ ಕನ್ನಡ ಮಾಧ್ಯಮ ಶಾಲೆ ಸಿಕ್ಕಲಿಲ್ಲ. ಗುಣಮಟ್ಟದ ದೃಷ್ಟಿಯಿಂದ ನನಗೆ ಸಮಾಧಾನ ಕೊಟ್ಟಂತಹ ಕನ್ನಡ ಮಧ್ಯಮದ ಶಾಲೆ ಬೆಂಗಳೂರಿನ ಇನ್ನೊಂದು ತುದಿಯಲ್ಲಿರುವ ಸುದ್ದಗುಂಟೆ ಪಾಳ್ಯದಲ್ಲಿತ್ತು! ಇನ್ನೊಂದು ಶಾಲೆಯು ಮತ್ತೊಂದು ತುದಿಯಲ್ಲಿರುವ ಜಯನಗರದಲ್ಲಿತ್ತು! ಮಗದೊಂದು

ಶಾಲೆಯು ಇನ್ನೂ ದೂರದ ಕೆಂಗೇರಿಯ ಆಸುಪಾಸಿನಲ್ಲಿತ್ತು. ಈ ತುದಿಯಿಂದ ಆ ತುದಿಗೆ ಮೂರು ವರ್ಷದ ಮಗುವನ್ನು ಕಳುಹಿಸುವುದು ಹೇಗೆ? ಹೀಗಾಗಿ, ನಾವು ಬೇರೆ ಗತಿಯಿಲ್ಲದೆ ಮನೆಯ ಪಕ್ಕದಲ್ಲೇ ಇರುವ ಇಂಗ್ಲಿಷ್ ಮಾಧ್ಯಮದ ಶಾಲೆಗೇ ನಮ್ಮ ಮಗನನ್ನೂ ಸೇರಿಸಬೇಕಾಯಿತು. ಇದನ್ನು ನಾನು ತುಂಬಾ ನೋವಿನಿಂದಲೇ ಹೇಳಿಕೊಳ್ಳುತ್ತಿದ್ದೇನೆ. ಒಳ್ಳೆಯ ಗುಣಮಟ್ಟದ ಕನ್ನಡ ಶಾಲೆ ನಮ್ಮ ಮನೆಯ ಸುತ್ತಮುತ್ತ ಒಂದೆರಡು ಕಿಲೋಮೀಟರ್ ಫಾಸಲೆಯಲ್ಲಿ ಇದ್ದಿದ್ದರೆ ನಾವು ನಮ್ಮ ಮಗನನ್ನು ಖಂಡಿತವಾಗಿಯೂ ಆ ಶಾಲೆಗೆ ಸೇರಿಸುತ್ತಿದ್ದೆವು. ಆದರೆ, ಇಂಗ್ಲಿಷ್ ಮಾಧ್ಯಮ ಶಾಲೆಗಳು ಮಾತ್ರ ಇಲ್ಲಿ ಮಾರಿಗೊಂದು, ಮೊಳಕ್ಕೊಂದು ಎನ್ನುವಂತೆ ತಲೆಯೆತ್ತಿವೆ.

ಸರಕಾರ ನಡೆಸುವವರೂ ಸರಕಾರದ ಭಾಗವಾದ ಶಿಕ್ಷಣ ಇಲಾಖೆಯ ಸಿಬ್ಬಂದಿಯೂ ತಾವೇ ಮನಃಪೂರ್ವಕವಾಗಿ ಇಂಗ್ಲಿಷ್ ಶಾಲೆಗಳ ಪರ ನಿಂತಿರುವಾಗ ಪರಿಸ್ಥಿತಿ ಸುಧಾರಿಸುತ್ತದೆ ಎನ್ನುವ ಆಶಾವಾದ ದುಬಾರಿ ಎನ್ನುವುದರಲ್ಲಿ ಅನುಮಾನವಿಲ್ಲ. ಏಕೆಂದರೆ, ಇಂಗ್ಲಿಷ್ ಮಾಧ್ಯಮ ಶಾಲೆಗಳು ಈಗ ಕೇವಲ ನಗರ–ಪಟ್ಟಣ ಪ್ರದೇಶಗಳ ಮೋಹವಾಗಿ ಉಳಿದಿಲ್ಲ. ಅದು, ಹತ್ತಿಪ್ಪತ್ತು ಮನೆ ಇರುವ ತೀರಾ ಕುಗ್ರಾಮಗಳಿಗೂ ಹಬ್ಬಿದೆ. ಆ ಇಂಗ್ಲಿಷ್ ಶಾಲೆಗಳು ಊರೂರಿಗೂ ತಮ್ಮ ವ್ಯಾನು–ಬಸ್ಸುಗಳನ್ನು ಕಳಿಸಿಕೊಟ್ಟು, ಅಲ್ಲಿಯ ಮಕ್ಕಳನ್ನೆಲ್ಲ ತಮ್ಮ ಶಾಲೆಗೆ ತರುಬಿಕೊಂಡು ಹೋಗುತ್ತಿವೆ. ಅಲ್ಲೇ, ಮನೆಯ ಎದುರೇ ಇರುವ ಕನ್ನಡ ಮಾಧ್ಯಮದ ಸರಕಾರಿ ಶಾಲೆಗಳು ಮಕ್ಕಳಿಲ್ಲದೆ ಭಣಗುಟ್ಟುತ್ತಿವೆ. ಆದರೆ, ಬ್ರಿಟಿಷರ ಕಾಲಕ್ಕೂ ಈಗಿನ ಕಾಲಕ್ಕೂ ಒಂದೇ ವ್ಯತ್ಯಾಸ. ಅವರು, ಮತಾಂತರದ ಗುರಿ ಇಟ್ಟುಕೊಂಡು ಈ ಶಾಲೆಗಳನ್ನು ಹುಟ್ಟುಹಾಕಿದರು. ಆದರೆ ಈಗ ನಮ್ಮವರೇ ನಮ್ಮ ದೇಶಕ್ಕಾಗಲಿ, ಭಾಷೆಗಾಗಲಿ ಕಿಂಚಿತ್ತೂ ಸಂಬಂಧವಿಲ್ಲದಂತಹ ಚಿತ್ರವಿಚಿತ್ರ ಹೆಸರುಗಳನ್ನು ಇಟ್ಟುಕೊಂಡು ರಾಜಾರೋಷವಾಗಿ ಶಿಕ್ಷಣವೆಂಬ ಹೆಸರಿನಲ್ಲಿ ದಂಧೆ ನಡೆಸುತ್ತಿದ್ದಾರೆ. ಒಟ್ಟಾರೆಯಾಗಿ ನಮ್ಮ ಮಕ್ಕಳಿಗೀಗ ನಮ್ಮ ಕನ್ನಡವೂ ಕೈತಪ್ಪುತ್ತಿದೆ; ಅತ್ತ ಪರಕೀಯವಾದ ಇಂಗ್ಲೀಷೂ ಎಟುಕುತ್ತಿಲ್ಲ. ಹೀಗಾಗಿಯೇ ಕನ್ನಡದ ಭವಿಷ್ಯದ ಸಂಬಂಧ ನನಗೆ ಆತಂಕವಿದೆ. ಕನ್ನಡವನ್ನು ಕೇವಲ ದೊಡ್ಡದೊಡ್ಡ ವೇದಾಂತದ ಮಾತುಗಳಿಂದಾಗಲಿ, ಗತವೈಭವದ ಮೆಲುಕಿನಿಂದಾಗಲಿ ಉಳಿಸಲು ಸಾಧ್ಯವಿಲ್ಲ. ಅದನ್ನು ಸಮಕಾಲೀನವಾಗಿ ಕಟ್ಟಲು ಬೇಕಾದ ಉಪಾಯ ಮತ್ತು ರಚನಾತ್ಮಕ ಕ್ರಮಗಳ ಶೋಧದಲ್ಲಷ್ಟೇ ಕನ್ನಡದ ಹಿತವಿದೆ. ಈ ಲೇಖನದಲ್ಲಿ ನಾನು ಪ್ರಸ್ತಾಪಿಸಿರುವ ಹಲವು ವಿಷಯಗಳ ನಡುವೆ ಒಂದು ಅಂತರ್ಗತ ಸಂಬಂಧವಿದೆ ಎಂಬುದನ್ನು ನಾನು ನಮ್ರವಾಗಿ ಹೇಳಬಯಸುತ್ತೇನೆ.

'ಸಂಸ್ಕೃತಿ' ಪರಿಕಲ್ಪನೆಯ ಸುತ್ತಮುತ್ತ

– ಪ್ರೊ. ಎನ್.ಎಸ್.ಲಕ್ಷ್ಮೀನಾರಾಯಣ ಭಟ್ಟ, ಬೆಂಗಳೂರು
ನಿವೃತ್ತ ಪ್ರಾಧ್ಯಾಪಕರು, ಸಾಹಿತಿಗಳು
೦೮೦-೨೬೭೬೩೯೬೪

ಸಂಸ್ಕೃತಿ ಎನ್ನುವ ಕಲ್ಪನೆ ಮನುಷ್ಯನ ಚಿಂತನೆ ವಿವೇಕಗಳ ಒಂದು ಮಧುರ ಉತ್ಪನ್ನ. ಆಲೋಚಿಸುವ ಶಕ್ತಿಯಿರುವ ಎಲ್ಲ ಮಾನವ ಸಮಾಜಗಳ ಬದುಕಿನಲ್ಲಿಯೂ ಈ ಕಲ್ಪನೆ ಕೆಲಸ ಮಾಡಿದೆ. ಮನುಷ್ಯನ ಬದುಕು ಬರಿ ಆಹಾರ, ನಿದ್ರೆ, ಭಯ ಮೈಥುನಗಳ ಗೊಡ್ಡು ತುತ್ತಾಗದಂತೆ ಅದನ್ನು ಮೇಲೆತ್ತಿ ಕಾಪಾಡಿರುವ ವೈಶಿಷ್ಟ್ಯ ಈ ಸಂಸ್ಕೃತಿಯದು. ತನ್ನ ಪ್ರತಿಭೆ, ಆನಂದಾನುಭವಶಕ್ತಿ ಮತ್ತು ಸದಭಿರುಚಿಗಳ ಫಲವಾಗಿ ಒಂದು ಸಮಾಜ ಸೃಷ್ಟಿಸಿಕೊಳ್ಳುವ ಸಾಹಿತ್ಯ, ಕಲೆ, ಹಬ್ಬ ಉತ್ಸವ ವಿಧಿಗಳೆಲ್ಲಕ್ಕೂ ಈ ಕಲ್ಪನೆಯೇ ತಾಯಿ ಎಂದರೆ ತಪ್ಪಿಲ್ಲ.

ಹಾಗೆ ನೋಡಿದರೆ 'ವೊಲ್ಗಾದಿಂದ ಗಂಗೆಯವರೆಗೆ' ಒಂದು ಮಾನವ ಸಮಾಜ ಮಾಡಿದ ಪ್ರಯಾಣ, ಪ್ರಕೃತಿಯಿಂದ ಸಂಸ್ಕೃತಿಯ ಕಡೆಗೆ ಮಾಡಿದ ಪ್ರಯಾಣವೂ ಹೌದು. ಕೇವಲ ದಾಹ ಕರ್ಮಕಾರಿಯಾಗಿದ್ದ, ಮೈಯಕೊಳೆಯನ್ನು ತೊಳೆಯಬಲ್ಲದ್ದಾಗಿದ್ದ ವೊಲ್ಗಾ ನದಿಯ ನೀರು, ಬುದ್ಧಿ ಭಾವನೆಗಳನ್ನೂ ಶುದ್ಧ ಮಾಡುವ ಗಂಗಾಜಲ ಆದದ್ದು ಮನುಷ್ಯ ನಡೆಸಿದ ಸಾಂಸ್ಕೃತಿಕ ಪ್ರಯಾಣದ ಒಂದು ಘಟ್ಟವನ್ನು ಸೂಚಿಸುತ್ತದೆ.

ಸಂಸ್ಕೃತಿ ಎನ್ನುವ ಪದ ಒಂದು ಸಮಾಸ ಪದ. ಅದನ್ನು ಬಿಡಿಸಿದರೆ ಸಮ್ಯಕ್ ಕೃತಿ ಎಂದಾಗುತದೆ. 'ಸಮ್ಯಕ್' ಎಂದರೆ ಸುಂದರವಾದ ಸಮರ್ಪಕವಾದ ಎಂದು ಅರ್ಥ. 'ಕೃತಿ' ಎಂದರೆ ವಸ್ತು ಅಥವಾ ಕ್ರಿಯೆ. ಹೀಗೆ ಸಮ್ಯಕ್ ಕೃತಿ ಎಂದರೆ ಸುಂದರವಾಗುವಂತೆ, ಸಮರ್ಪಕವಾಗುವಂತೆ ಮಾಡಿದ ಒಂದು ವಸ್ತು ಅಥವಾ ಕಾರ್ಯ. ಅಸುಂದರವಾದ ಮತ್ತು ಅನುಪಯುಕ್ತವಾದ ವಸ್ತುವೊಂದನ್ನು ಸುಂದರವಾಗುವಂತೆ, ಉಪಯೋಗಕ್ಕೆ ಬರುವಂತೆ ಮಾಡುವ ಕಾರ್ಯವೇ ಸಂಸ್ಕೃತಿ ಎಂದುಕೊಳ್ಳಬಹುದು. ಈ ಮಾತನ್ನು ಒಂದು ನಿದರ್ಶನದ ಮೂಲಕ ಪರಿಶೀಲಿಸಬಹುದು:

ಮರದ ದಿಮ್ಮಿಯೊಂದು ಒಂದು ಬಯಲಲ್ಲಿ ಬಿದ್ದಿದೆ ಎಂದು ಭಾವಿಸೋಣ. ಅದು ಮಳೆಯಲ್ಲಿ ನೆನೆಯುತ್ತ, ಬಿಸಿಲಲ್ಲಿ ಒಣಗುತ್ತ ಯಾವ ಪ್ರಯೋಜನಕ್ಕೂ ಬರದೆ, ಯಾರ ಗಮನವನ್ನೂ ಸೆಳೆಯದೆ ಬಿದ್ದಿದೆ. ಬಯಲಲ್ಲಿ ಓಡಾಡುವವರಿಗೆ ಅದು ಓಡಾಟಕ್ಕೆ ಒಂದು ಅಡ್ಡಿಯೂ ಆಗಿದೆ. ಬಡಗಿಯೊಬ್ಬ ಅದನ್ನು ಕೊಂಡೊಯ್ದು ಕತ್ತರಿಸಿ, ಲಕ್ಷಣವಾದ

ಬಾಗಿಲುಗಳನ್ನು, ಕಿಟಕಿಗಳನ್ನು, ಮೇಜು ಮಂಚ ಕುರ್ಚಿಗಳನ್ನು ಮಾಡಿ ಪಾಲಿಷ್ ಹಾಕಿ ಇಡುತ್ತಾನೆನ್ನೋಣ. ಈ ವಸ್ತುಗಳು ನೋಡಲು ಸುಂದರವಾಗಿವೆ. ಮಾತ್ರವಲ್ಲ ಉಪಯುಕ್ತವೂ ಆಗಿವೆ. ಕೆಲಸಕ್ಕೆ ಬಾರದ, ಅವಲಕ್ಷಣವಾಗಿದ್ದ ದಿಮ್ಮಿಯನ್ನು ಹೀಗೆ ಪರಿವರ್ತನೆ ಗೊಳಿಸಿದ ಕ್ರಿಯೆ ಒಂದು ಬಗೆಯಲ್ಲಿ ಸಂಸ್ಕೃತಿಯ ಅಥವಾ ಸಂಸ್ಕರಣದ ಕ್ರಿಯೆ. ಬಯಲಲ್ಲಿ ಬಿದ್ದಿದ್ದ ದಿಮ್ಮಿ ಮರದ ಪ್ರಾಕೃತ ರೂಪ. ಅದರಿಂದಲೇ ನಿರ್ಮಿತವಾದ ಮಂಚ, ಮೇಜು ಮೊದಲಾದುವು ಅದರ ಸಮ್ಯಕ್‌ಕೃತವಾದ, ಎಂದರೆ ಸಂಸ್ಕೃತವಾದ ರೂಪ. ದಿಮ್ಮಿ ಪ್ರಕೃತಿ; ಕುರ್ಚಿ ಮೇಜು ಮೊದಲಾದುವು ಅದರ ಸಂಸ್ಕೃತಿ.

ಮರದ ವಿಷಯ ಮಾತ್ರವಲ್ಲ, ಮನುಷ್ಯನ ವಿಷಯವೂ ಅಷ್ಟೇ. ಹುಟ್ಟುವಾಗಲೇ ನಮ್ಮ ತಲೆಯಲ್ಲಿ ಕೂದಲು ಇರುತ್ತದಷ್ಟೆ? ಹಾಗೇ ಬಿಟ್ಟರೆ ಕ್ರಮೇಣ ಅದು ಉದ್ದವಾಗಿ ಒಡ್ಡಾಗಿ ಬೇಕಾಬಿಟ್ಟಿ ಬೆಳೆಯುತ್ತದೆ. ಜಟೆಯಾಗಿ ಸುರುಟಿಕೊಳ್ಳುತ್ತದೆ; ಬೆವರು ಧೂಳು ಬೆರೆತು, ಕೊಳೆ ಸೇರಿ ಹೇಸಿಗೆ ಹುಟ್ಟಿಸುತ್ತದೆ. ಆಗ ಅದು ಅವಲಕ್ಷಣವಾಗಿರುವುದು ಮಾತ್ರವಲ್ಲ, ಕೈ ಮೈಗೆ ಅಡ್ಡಿಯಾಗುತ್ತ ಯಾವುದೇ ಕೆಲಸಕ್ಕೆ ಒಂದು ತೊಡಕೂ ಆಗುತ್ತದೆ. ಕೂದಲನ್ನು ಹಾಗೆ ಬೆಳೆಯಲು ಬಿಡದೆ ಕತ್ತರಿಸಿ ಬೇರೆ ಬೇರೆ ಆಕಾರಕ್ಕೆ ತಿದ್ದಿಕೊಳ್ಳುವುದೂ ಸಾಧ್ಯ. ಅಭ್ಯಂಜನ ಮಾಡಿ ಪರಿಮಳದ ತೈಲ ಹಚ್ಚಿ ಅದನ್ನು ಬಾಚಿಕೊಂಡೆವೆನ್ನೋಣ. ಆಗ ಅದು ಕ್ರಾಪು, ಜಡೆ, ತುರುಬು, ಬಾಬ್, ಪೋನೀಟೈಲ್ ಆಗುತ್ತದೆ. ನೋಡುವವರಿಗೆ ನಮ್ಮ ಮುಖ ಮೊದಲಿಗಿಂತ ಅಂದವಾಗಿ ಕಾಣುತ್ತದೆ. ನಮಗೂ ಬೆಳೆದ ಕೂದಲು ಕೈ ಮೈಗೆ ತೊಡಕಾಗದೆ ಹಿತವಾಗಿರುತ್ತ ಉಪಯುಕ್ತವೆನಿಸುತ್ತದೆ. ತಿದ್ದದೆ ಹಾಗೆಯೇ ಬಿಟ್ಟ ಕೇಶ, ಪ್ರಕೃತಿ. ಅದನ್ನು ಸಂಸ್ಕರಿಸಿ ಮಾಡಿಕೊಂಡ ಜಡೆ, ಕ್ರಾಪು, ತುರುಬು ಮೊದಲಾದವು ಈ ಕೇಶದ ಸಂಸ್ಕೃತಿ.

ಇದೇ ದಾರಿಯಲ್ಲಿ ಯೋಚಿಸೋಣ. ಬರಿಮೈ ಪ್ರಕೃತಿ, ವಸ್ತ್ರ ಸಂಸ್ಕೃತಿ. ಬರಿ ಹಣೆ ಪ್ರಕೃತಿ, ಅದಕ್ಕೆ ಬೊಟ್ಟಿಗಲ ಕುಂಕುಮ ಸಂಸ್ಕೃತಿ. ಬರಿ ಕಿವಿ ಪ್ರಕೃತಿ, ಓಲೆ ಸಂಸ್ಕೃತಿ. ಬರಿಕೊರಳು ಪ್ರಕೃತಿ, ಮಾಂಗಲ್ಯ ಸಂಸ್ಕೃತಿ. ಬರಿಕೈ ಪ್ರಕೃತಿ, ಬಳೆ ಸಂಸ್ಕೃತಿ. ಬರಿ ಹೆಜ್ಜೆ ಪ್ರಕೃತಿ, ಅದಕ್ಕೆ ಒಂದು ಗೆಜ್ಜೆ ಸಂಸ್ಕೃತಿ.

ಮನುಷ್ಯ ಮಾತ್ರವೇ ಏನು? ಪ್ರಾಣಿಗಳೂ ಕೂಗುತ್ತವೆ, ಶಬ್ದ ಮಾಡುತ್ತವೆ. ಆದರೆ ಮನುಷ್ಯ ಶಬ್ದವನ್ನು ಅಕ್ಷರಗಳಾಗಿ ರೂಪಿಸಿಕೊಂಡು ಆ ಮೂಲಕ ಮಾತನ್ನು ಸೃಷ್ಟಿಸಿದ್ದಾನೆ. ಆ ಮಾತಿನ ಸಾರ ಎನ್ನುವಂಥ ಕವಿತೆಯನ್ನೂ ಅದರಿಂದ ಹೊರಡಿಸಿದ್ದಾನೆ. ಬರಿ ಶಬ್ದ ಪ್ರಕೃತಿ, ಅದರಿಂದ ಹೊರಟ ಮಾತು, ಕವಿತೆ ಅದರ ಸಂಸ್ಕೃತಿ. ಕೇವಲ ದನಿ ಇದೆಯಲ್ಲ, ಅದು ಪ್ರಕೃತಿ. ಆ ದನಿಯ ಬೇರೆ ಬೇರೆ ಏಳು ಬೀಳುಗಳನ್ನು ಸರಿಗಮಪದನಿ ಸ್ವರಗಳಾಗಿ ಮಾಡಿಕೊಂಡು, ಅದರ ಬಗೆ ಬಗೆ ಆರೋಹಣ ಅವರೋಹಣಗಳಲ್ಲಿ ಬೇರೆ ಬೇರೆ

ರಾಗಗಳನ್ನು ಸೃಜಿಸಿಕೊಂಡು ಕಲಾವಿದನೊಬ್ಬ ಸೃಷ್ಟಿಸುವ ಸಂಗೀತ ಸಂಸ್ಕೃತಿ. ಪ್ರಾಣಿ ಮಾನವರೆಲ್ಲರಿಗೂ ಸಾಮಾನ್ಯವಾದ ನಡಿಗೆ ಪ್ರಕೃತಿಯಾದರೆ ಅದರ ಬಗೆ ಬಗೆ ನಿಯತ ವಿನ್ಯಾಸಗಳಿಂದ ಮೂಡುವ ನೃತ್ಯ ಸಂಸ್ಕೃತಿ.

ಹೆಣ್ಣನ್ನು ಕೇವಲ ಹೆಣ್ಣಾಗಿ ಮಾತ್ರವೇ ನೋಡುವುದು ತೀರ ಪ್ರಾಥಮಿಕವಾದ ಗ್ರಹಿಕೆ. ಅಂಥ ಕಣ್ಣಿಗೆ ಹೆಣ್ಣು ಭೋಗದ ಒಂದು ಸಾಧನ ಮಾತ್ರ. ಆದರೆ ಹೆಣ್ಣನ್ನು ತನ್ನ ನಲ್ಲೆಯಾಗಿ ಮಾತ್ರವಲ್ಲದೆ ತಾಯಿಯಾಗಿ, ತಂಗಿಯಾಗಿ, ಅಕ್ಕನಾಗಿ, ಅತ್ತಿಗೆಯಾಗಿ ಕಾಣುವುದು ಸಂಸ್ಕೃತಿಗೆ ಮಾತ್ರ ಸಾಧ್ಯ.

ಒಂದು ಸಮಾಜದ ಎಷ್ಟೋ ನಂಬಿಕೆ, ಆಚರಣೆಗಳ ಹಿಂದೆ ಈ ಸಂಸ್ಕೃತಿ ದೃಷ್ಟಿ ರೂಪಕವಾಗಿ ಕೆಲಸ ಮಾಡಿರುವುದೂ ಉಂಟು. ಆ ರೂಪಕಗಳು ಬುದ್ಧಿಯ ಜೊತೆ ಭಾವನೆಯೂ ಬೆರೆತು ರೂಪ ಪಡೆದಂಥವು. ಕೇವಲ ಕಲ್ಲು, ಮಣ್ಣು, ನೀರು, ಸಸ್ಯಗಳಿಂದ ಕೂಡಿರುವ ಭೂಮಿ ಇಂಥ ದೃಷ್ಟಿಗೆ 'ನೆಲ' ವಾಗದೆ ಭೂಮಿ ತಾಯಿ ಆಗುತ್ತದೆ. ಕೇವಲ ತನ್ನ ಉಪಯೋಗಕ್ಕೆಂದೇ ಹಿಂದಿನಿಂದ ಮನುಷ್ಯ ಪಳಗಿಸಿ ಸಾಕಿಕೊಂಡು ಬಂದ 'ಪಶು' (ಹಸು) ಗೋಮಾತೆಯಾಗುತ್ತದೆ. ತನ್ನ ಆಹಾರವನ್ನು ಕೂಡ ಸರಿಯಾಗಿ ರೂಪಿಸಿಕೊಂಡಿರದಿದ್ದ ಕಾಲದಿಂದ ತನಗೆ ಹಾಲು ಕೊಟ್ಟು ಸಾಕಿದ ಈ ಪ್ರಾಣಿಗೆ ಈ ದೇಶದ ಮನುಷ್ಯ ಯಾವ ಮಟ್ಟದ ಕೃತಜ್ಞತೆಯನ್ನು ವ್ಯಕ್ತಪಡಿಸಿದ್ದಾನೆಂದರೆ, ತನ್ನ ಗೃಹಪ್ರವೇಶ ಸಮಾರಂಭದಲ್ಲಿ ಮೊದಲು ಮನೆಯೊಳಗೆ ಕಳಿಸುವುದು ಈ ಗೋಮಾತೆಯನ್ನೇ ! ಒಂದು ಸಾಂಸ್ಕೃತಿಕಗ್ರಹಿಕೆ, ರೂಪಕ ವೇಷಧಾರಣ ಮಾಡಿ ಧಾರ್ಮಿಕ ವಿಧಿಗಳಲ್ಲಿ ಕೂಡ ಸೇರಿಬಿಡುವುದಕ್ಕೆ ಇದು ಒಂದು ಒಳ್ಳೆಯ ನಿದರ್ಶನ.

ಮಾನವನ ಮನಸ್ಸು ಮೂಲಭೂತವಾಗಿ ಪಶುಪ್ರಾಯವಾದದ್ದು, ಪ್ರಾಕೃತವಾದದ್ದು. ಆ ಮನಸ್ಸಿಗೆ ಕೋರೆದಾಡೆಗಳಿವೆ, ಬಾಚಿಉಗುರುಗಳಿವೆ, ಕಾಡುಮೀಸೆಯಿದೆ, ಕೆಂಡಾಮಂಡವಾದ ಕಣ್ಣಿದೆ. ಸಾಹಿತ್ಯ, ಸಂಗೀತ, ನೃತ್ಯ, ವೈಚಾರಿಕ ಜಿಜ್ಞಾಸೆ ಇವೆಲ್ಲ ಮನಸ್ಸಿನ ಕೋರೆದಾಡೆಗಳನ್ನು ಸಮೆಸಿ, ಉಗುರುಗಳನ್ನು ಕತ್ತರಿಸಿ ಕೆಂಡಾಮಂಡವಾದ ಪಶುಗಣ್ಣನ್ನು ತಣಿಸಿ ಸೌಮ್ಯವಾಗಿಸುತ್ತವೆ; ಉಗ್ರ ಸಂವೇದನೆಗಳ ಉರಿಬಿಸಿಲು ಶಾಂತ ಭಾವನೆಗಳ ಬೆಳದಿಂಗಳಾಗುವಂತೆ ಮಾಡುತ್ತವೆ. ಆದ್ದರಿಂದಲೇ ಅವುಗಳನ್ನು ನಾವು ಸಾಂಸ್ಕೃತಿಕ ಸಾಧನಗಳೆಂದು ಕರೆಯುತ್ತೇವೆ.

ನಮ್ಮ ಹಿರಿಯ ಸಾಹಿತಿಗಳಲ್ಲಿ ಒಬ್ಬರಾದ ಡಿವಿಜಿ, ಸಂಸ್ಕೃತಿಯ ಪರಿಕಲ್ಪನೆ ಕುರಿತು ಬಹಳ ವಿಶದವಾಗಿ ಚಿಂತಿಸಿದವರು. ಅವರ 'ಸಂಸ್ಕೃತಿ' ಎಂಬ ಪುಸ್ತಕ ಈ ದಿಕ್ಕಿನಲ್ಲಿ ನಡೆಸಿದ ಒಂದು ಮಹತ್ವದ ಜಿಜ್ಞಾಸೆ. ಸಂಸ್ಕೃತಿಯ ಪಥದಲ್ಲಿ ಸಾಗಿದಾಗ ನಮ್ಮ ಬದುಕೂ ಹಸನಾಗುತ್ತದೆ.

ಕವಲುದಾರಿಯಲ್ಲಿ ಭಾರತೀಯ ಕುಟುಂಬ ಮತ್ತು ಸರಿದಾರಿ

– **ಸು.ರಾಮಣ್ಣ, ಹುಬ್ಬಳ್ಳಿ,**
ಹಿರಿಯ ಪ್ರಚಾರಕರು, ರಾಷ್ಟ್ರೀಯ ಸ್ವಯಂಸೇವಕ ಸಂಘ,
೯೪೪೯೧೮೦೯೫೫

೧೯೬೦ರ ದಶಕದ ಉತ್ತರಾರ್ಧ ಇರಬಹುದು. ಸಂಘಕಾರ್ಯ ನಿಮಿತ್ತ ನಾನು ಕೆ. ಜೆ. ಎಫ್. ಗೆ ಹೋಗಿದ್ದೆ. ಒಬ್ಬ ಶಿಕ್ಷಕರ ಮನೆಯಲ್ಲಿ ನನ್ನ ಊಟದ ವ್ಯವಸ್ಥೆ ಇತ್ತು. ಮನೆ ಸಾಧಾರಣ. ಕುಟುಂಬವೂ ಕೆಳಮಧ್ಯಮ ವರ್ಗದ್ದು. ಮನೆ ಮಾತ್ರ ನಂದಗೋಕುಲದಂತಿತ್ತು. ಊಟವೂ ಅತ್ಯಂತ ಸಾಮಾನ್ಯವಾದದ್ದು. ಆದರೆ ಆ ಮನೆಯಲ್ಲಿ ಆ ಕುಟುಂಬದ ಜತೆ ಅಂದು ಮಾಡಿದ ಊಟ ಮಾತ್ರ ಇಂದಿಗೂ ಸ್ಮರಣೀಯ. ಗೃಹಸ್ಥರ ಅಕೃತ್ರಿಮ ಸಹಜ ಸ್ವಾಭಾವಿಕ ಉಪಚಾರದ ಮಾತುಗಳು; ಮಾತೃ ಸಹಜ ವಾತ್ಸಲ್ಯದಿಂದ ಆ ಗೃಹಿಣಿ ಊಟ ಬಡಿಸಿದ್ದು; ಮಕ್ಕಳೆಲ್ಲರೂ ತೋರಿದ ಆದರ ಎಲ್ಲವೂ ಮರೆಯಲಾಗದ್ದು.ಆ ಗೃಹಸ್ಥರೇ ಸ್ವಾ॥ ಶ್ರೀ ಚಿ ನಾ ವಿಶ್ವನಾಥಶಾಸ್ತ್ರೀ ಮತ್ತು ಲಲಿತಮ್ಮ. ಮಹಾಲಕ್ಷ್ಮೀ, ಶ್ರೀನಾಥ,ಉಷಾ, ಗಿರಿಧರ, ಶ್ರೀಮತಿ, ರಮಾ ಇವರುಗಳು ಅವರ ಮಕ್ಕಳು.

ಮಕ್ಕಳ ಲಾಲನೆ ಪಾಲನೆಯ ಜತೆ ಜತೆ ಗೃಹಸ್ಥ ಧರ್ಮದ ಒಂದು ಭಾಗವಾಗಿ ದೇಶ ಧರ್ಮಗಳಿಗಾಗಿ ಕೆಲಸ ಮಾಡುವ ನಮ್ಮಂಥ ಆರ್ ಎಸ್ ಎಸ್ ಪ್ರಚಾರಕರಿಗೂ ಆತ್ಮೀಯತೆಯ ಮಾತೃತ್ವದ ವಾತ್ಸಲ್ಯದ ಹೊಳೆಯನ್ನೇ ಹರಿಸಿದರು, ಶಾಸ್ತ್ರಿ ದಂಪತಿಗಳು.

ಒಟ್ಟು ಆ ಕುಟುಂಬವು ಆದರ್ಶ ಹಿಂದು ಕುಟುಂಬದ ಮೌಲ್ಯಗಳನ್ನು ಮೈಗೂಡಿಸಿಕೊಂಡಿತ್ತು. ೬೦ರ ದಶಕದ ಆ ಸಂಪರ್ಕವು ನನಗೆ ಮಾತ್ರವಲ್ಲ ಇನ್ನೂ ಹಲವಾರು ಸಂಘ ಪ್ರಚಾರಕರಿಗೆ ಅವಿನಾಭಾವ ಸಂಬಂಧವನ್ನು ಬೆಳೆಸಿಬಿಟ್ಟಿತು. ಮಕ್ಕಳೆಲ್ಲರೂ ವಿದ್ಯಾವಂತರಾದರು, ಗುಣವಂತರಾದರು, ಉತ್ತಮ ಗೃಹಸ್ಥರಾದರು. ಗಿರಿಧರ ಮಾತ್ರ ಮದುವೆಯ ವಿಷಯದಲ್ಲಿ ಒಂದು ಅಪವಾದ. ಬ್ರಹ್ಮಚಾರಿಯಾಗಿಯೇ ಉಳಿದು, ಕಠೋರ ಸಾಧನೆ ಮಾಡಿದ. ಇದೀಗ ಆ ಕುಟುಂಬಕ್ಕೆ ಶ್ರೀನಾಥನ ೭೦ ಗಿರಿಧರನ ೬೦ರ ಶಾಂತಿ ಸಮಾರಂಭದ ಸಂಭ್ರಮ. ಈ ಸಂದರ್ಭದಲ್ಲಿ ಪ್ರಕಟವಾಗುತ್ತಿರುವ ಗ್ರಂಥಕ್ಕೆ ಪ್ರೀತಿಯ ಶ್ರೀಮತಿಯ ಆಗ್ರಹದಂತೆ ಉತ್ತಮ ಕುಟುಂಬದ ಸ್ವಲ್ಪ ಕ್ಷಣಗಳನ್ನು ಮೆಲಕು ಹಾಕುವಂತಹ ಈ ಲೇಖವನ್ನು ಬರೆದಿದ್ದೇನೆ.

ಪ್ರೀತಿಯ ಶ್ರೀನಾಥ–ಗಿರಿಧರರ ಜೀವನಯಾತ್ರೆ ನಿರ್ವಿಘ್ನವಾಗಿ ಸಾಗಲಿ, ಹೆಚ್ಚೆಚ್ಚು ಸಮಾಜೋನ್ಮುಖವಾಗಿ ಸಾರ್ಥಕತೆಯನ್ನು ಹೊಂದಲಿ ಅಂತ ಮನಃಪೂರ್ವಕ ಹಾರೈಸುತ್ತೇನೆ.

ಒಮ್ಮೆ ಕೆಲವು ದಂಪತಿಗಳ ಜತೆ ಅನೌಪಚಾರಿಕವಾಗಿ ಮಾತನಾಡುತ್ತಾ ಕುಳಿತಿದ್ದ ಸಂದರ್ಭದಲ್ಲಿ ಅವರೆದುರು ಈ ಕೆಳಗಿನ ಕೆಲವು ಅಂಶಗಳನ್ನಿಟ್ಟು, ಒಂದು ಪ್ರಶ್ನೆ ಕೇಳಿದೆ:

೧. ಒಂದು ಪ್ರಾಚೀನ ಸಂಸ್ಥೆ. ಪ್ರಾಚೀನವಾದುದಾದರು ಇಂದಿಗೂ ಕಾಲಬಾಹಿರವಾಗಿಲ್ಲ;

೨. ಈ ಸಂಸ್ಥೆಗೆ ಯಾವುದೇ ಲಿಖಿತ ಸಂವಿಧಾನವಿಲ್ಲ, ಅಲಿಖಿತ ರೀತಿರಿವಾಜುಗಳೇ ಈ ಸಂಸ್ಥೆಯನ್ನು ಮುನ್ನಡೆಸಿಕೊಂಡು ಬಂದಿವೆ;

೩. ನೋಂದಣಿ ಆಗಿರದಿದ್ದರೂ ಇದರ ವಿಶ್ವಾಸನೀಯತೆ ಕಡಿಮೆಯಾಗಿಲ್ಲ;

೪. ಸಂಸ್ಥೆಯಲ್ಲಿ ಸದಸ್ಯರಿದ್ದಾರೆ. ಆದರೆ ಸದಸ್ಯತಾ ಶುಲ್ಕ ಹಾಗೂ ಸದಸ್ಯತಾ ನವೀಕರಣ ಇಲ್ಲ. ಎಲ್ಲರೂ ಅಜೀವ ಸದಸ್ಯರೇ;

೫. ಈ ಸಂಸ್ಥೆಗೆ ಆಡಳಿತ ಮಂಡಳಿ ಎಂಬುದಿಲ್ಲ, ಹಾಗೂ ಮಂಡಳಿಯ ಚುನಾವಣೆ ನಡೆಯುವುದಿಲ್ಲ. ಆದರೂ ಸಂಸ್ಥೆಯ ಪ್ರಮುಖರು ಸರ್ವಾಧಿಕಾರಿಗಳಲ್ಲ. ಅವರು ಎಲ್ಲ ಸದಸ್ಯರ ಬಗ್ಗೆ ಅಪಾರ ಕಾಳಜಿ ಹೊಂದಿರುತ್ತಾರೆ ಮತ್ತು ಎಲ್ಲ ಸದಸ್ಯರೂ ಅವರನ್ನೂ ಗೌರವಿಸುತ್ತಾರೆ;

೬. ಈ ಸಂಸ್ಥೆಯಲ್ಲಿ ಹಕ್ಕೊತ್ತಾಯ ಇಲ್ಲ. ಆದರೆ ಕರ್ತವ್ಯಗಳ ಅರಿವಿದೆ. ಅವರವರ ಕರ್ತವ್ಯಗಳನ್ನು ತಪ್ಪದೆ ನೆರವೇರಿಸುವ ಕಾರಣ ಉಳಿದವರ ಹಕ್ಕು ಸುರಕ್ಷಿತ;

೭. ಇಲ್ಲಿ ಮೀಟಿಂಗು, ಅಜೆಂಡಾ, ಚರ್ಚೆ, ಹಾಗೂ ಠರಾವುಗಳನ್ನು ಮತದಾನದಿಂದ ಅಂಗೀಕರಿಸುವ ವ್ಯವಸ್ಥೆ ಇಲ್ಲ; ಆಳುವ ಮತ್ತು ವಿರೋಧಪಕ್ಷ ಎಂಬುದಿಲ್ಲ. ಎಲ್ಲರ ಒಟ್ಟಭಿಪ್ರಾಯದಿಂದ ಸಂಸ್ಥೆಯ ಕೆಲಸಗಳು ನಡೆಯುತ್ತವೆ. ಮತಭಿನ್ನತೆ ಇರಬಹುದಾದರೂ ಮನಭಿನ್ನತೆ ಇಲ್ಲ. ರಾಜೀನಾಮೆ, ಶಿಸ್ತಿನ ಕ್ರಮ ಇಲ್ಲ;

೮. ಪ್ರತಿಯೊಬ್ಬ ಸದಸ್ಯ ಉಳಿದೆಲ್ಲರ ಕಾಳಜಿ ಮಾಡುವುದು ಈ ಸಂಸ್ಥೆಯ ಪ್ರಕೃತಿ;

೯. ವಿದೇಶದಲ್ಲಿ ಈ ಸಂಸ್ಥೆಯು ದಿನದಿಂದ ದಿನಕ್ಕೆ ದುರ್ಬಲವಾಗುತ್ತ ಹೋಗುತ್ತಿದೆ. ಆದರೆ ನಮ್ಮಲ್ಲಿ ತಕ್ಕಮಟ್ಟಿಗೆ ಚೆನ್ನಾಗಿಯೇ ಇದೆ;

ಹಾಗಾದರೆ ಈ ಸಂಸ್ಥೆ ಯವುದು?

ಎಲ್ಲರೂ ಒಕ್ಕೊರಲಿನಿಂದ ಹೇಳಿದರು–ಕುಟುಂಬ!

ಮೇಲೆ ವರ್ಣಿಸಿದ ಸಲ್ಲಕ್ಷಣಗಳು ನಮ್ಮ ಭಾರತೀಯ ಕುಟುಂಬ ಅಥವಾ ಮನೆಯಲ್ಲಿ ಇಂದಿಗೂ ಗಟ್ಟಿಯಾಗಿ ಉಳಿದುಕೊಂಡಿವೆಯೇ? ಅಥವಾ ಬಿರುಕುಗಳು

ಕಂಡುಬರುತ್ತಿವೆಯೇ? ಕಾಲ ಉರುಳುತ್ತಿರುವಂತೆ ಜನರ ರುಚಿ-ಅಭಿರುಚಿಗಳು, ಆಸಕ್ತಿ-ಆದ್ಯತೆಗಳು ಬದಲಾಗುತ್ತಿವೆ ಎಂಬುದು ಒಂದು ಸಾಮಾನ್ಯ ಅನುಭವ. ಕುಟುಂಬಗಳು ಚಿಕ್ಕದಾಗುತ್ತಿವೆ, ಹಾಗೂ ದಂಪತಿಗಳಿಬ್ಬರೂ ದುಡಿಯುವಂಥ ಅನೇಕ ಕುಟುಂಬಗಳಿವೆ. ನಗರಗಳಲ್ಲಿ ಬಗೆಬಗೆಯ ಒತ್ತಡಗಳು; ಯಾವುದಕ್ಕೂ ಸಮಯವೇ ಸಾಲದು ಎಂಬ ದೂರುಗಳಿವೆ. ಗ್ರಾಮೀಣ ಪ್ರದೇಶದಲ್ಲೂ ಹಿಂದೆ ಇದ್ದ ಜೀವನಪದ್ಧತಿ ಬದಲಾಗುತ್ತಿದೆ. ಜತೆಗೆ ಜನರ ಕೊಳ್ಳುವ ಸಾಮರ್ಥ್ಯವೂ ಹೆಚ್ಚುತ್ತಿದೆ. ಹಿಂದಿನ ಐಷಾರಾಮೀ ಎನ್ನುವಂಥವು ಇಂದು ಆವಶ್ಯಕಗಳಾಗುತ್ತಿವೆ ಎಂಬುದು ಹಲವರ ಅಂಬೋಣ.

ಇವೆಲ್ಲದರ ಒಟ್ಟು ಪರಿಣಾಮ ನಮ್ಮ ಕುಟುಂಬಗಳಲ್ಲಿದ್ದ ಹಿಂದಿನ ಸಲ್ಲಕ್ಷಣಗಳು ಕಾಣೆಯಾಗುತ್ತಿವೆ ಅಥವಾ ಮಸುಕಾಗುತ್ತಿವೆ. ಕೆಲವರಿಗೆ ಇದು ಸಹ್ಯವಲ್ಲದಿದ್ದರೂ ಕಾಲದ ಅನಿವಾರ್ಯ, ನಾವು ಏನುತಾನೇ ಮಾಡಲಿಕ್ಕೆ ಸಾಧ್ಯ- ಎಂದು ಕೊರಗು. ಮತ್ತೆ ಕೆಲವರಿಗೆ ಈಗಿನ ಕಾಲಕ್ಕೆ ಇವು ಅವಶ್ಯಕವೂ ಅಲ್ಲ, ಅನಿವಾರ್ಯವೂ ಅಲ್ಲ ಎನಿಸುತ್ತದೆ. Live together as long as you like; once you dislike, leave away- ಮದುವೆ ಎಂಬ ಬಂಧನಕ್ಕೆ ಒಳಗಾಗಿ ಪರಿತಪಿಸುವ ಬದಲು ವ್ಯಕ್ತಿಸ್ವಾತಂತ್ರ್ಯದ 'ಮೌಲ್ಯ'ಕ್ಕೆ ತಕ್ಕಂತೆ ನಿನ್ನಷ್ಟಕ್ಕೆ ನೀನು 'ಆರಾಮ'ವಾಗಿರು-ಎನ್ನುವುದೂ ಒಂದು ಸಿದ್ಧಾಂತವಾಗುತ್ತಿದೆ. 'ಜಾನಾಮಿ ಅಧರ್ಮಂ ನ ಚ ಮೇ ನಿವೃತ್ತಿಃ' (ಅಧರ್ಮ ಏನು ಎನ್ನುವುದು ಗೊತ್ತು. ಆದರೆ ಅದರಿಂದ ಹೊರಬರಲಾರೆವು) ಎಂಬಂತೆ ಇರುವವರು ಅವರು.

ಒಟ್ಟಿನಲ್ಲಿ ವಿಶ್ವವೇ ಒಂದು ಕುಟುಂಬ ಎಂದು ನಂಬಿ, ಆ ನಂಬಿಕೆಗೆ ತಕ್ಕಂತೆ ಬಾಳಿದ ಭಾರತದ ಕುಟುಂಬಸಂಸ್ಕೃತಿ ಇಂದು ಕವಲುದಾರಿಯಲ್ಲಿದೆ. ಇದೇ ಸಂದರ್ಭದಲ್ಲಿ ಕೌಟುಂಬಿಕ ಸಂಬಂಧಗಳು ಕಡಿದುಹೋಗುತ್ತಿರುವ ಪಶ್ಚಿಮದ ಆಧುನಿಕ ದೇಶಗಳಲ್ಲಿನ ಚಿಂತಕರು ಆಸೆಗಣ್ಣುಗಳಿಂದ ಪೂರ್ವದ ಭಾರತದ ಕುಟುಂಬಸಂಸ್ಕೃತಿಯತ್ತ ನೋಡುತ್ತಿರುವುದೂ ನಿಜ. ಈ ಸನ್ನಿವೇಶದಲ್ಲಿ 'ದಾರಿ ಯಾವುದಯ್ಯಾ' ಎಂದು ದ್ವಂದ್ವಕ್ಕೆ ಒಳಗಾಗುವ ಬದಲು ಭಾರತೀಯ ದಾರಿಯ ಗರಿಮೆ-ಹಿರಿಮೆಗಳನ್ನು ಒಮ್ಮೆ ಅವಲೋಕಿಸಿ, ವರ್ತಮಾನವು ಎಸೆದಿರುವ ಪ್ರಶ್ನೆಗಳಿಗೆ ಭಾರತೀಯ ದಾರಿಯಲ್ಲಿ ಉತ್ತರವಿದೆಯೇ ಎಂಬುದನ್ನು ಕಂಡು ಕೊಳ್ಳುವ ಪ್ರಯತ್ನ ನಡೆಯಬೇಕಿದೆ.

ಕುಟುಂಬದ ಹಿರಿಮೆ – ಮದುವೆಯ ಮಹತ್ತ್ವ

ಅನ್ನ, ವಸ್ತ್ರ, ನೆಲೆ, ಶಿಕ್ಷಣ ಹಾಗೂ ಔಷಧಗಳನ್ನು ಮನುಷ್ಯನ ಮೂಲಭೂತ ಭೌತಿಕ ಅವಶ್ಯಕತೆಗಳು ಎನ್ನುವರು. ಇವುಗಳನ್ನು ಪೂರೈಸುವುದಷ್ಟೇ ನಮ್ಮ 'ಮನೆ'ಯ ಭೂಮಿಕೆ ಅಲ್ಲ. ಒಂದು ಕುಟುಂಬದ ಪ್ರಾದುರ್ಭಾವ ಮದುವೆಯಿಂದ ಆಗುತ್ತದೆ. ಹಾಗೆಂದು ಮದುವೆಯೆಂಬುದು, ಮನುಷ್ಯನ ಸಹಜ ನೈಸರ್ಗಿಕ ಆವಶ್ಯಕತೆಗಳನ್ನು ಪೂರೈಸುವ ಒಂದು

ವ್ಯವಹಾರವಷ್ಟೇ ಅಲ್ಲ ಎಂಬುದೂ ಗಮನಾರ್ಹ. ಭಾರತೀಯರಿಗೆ ವಿವಾಹವು ಮನುಷ್ಯನ ನಿಸರ್ಗಸಹಜ ಬಯಕೆಗಳ ಉದಾತ್ತೀಕರಣ. ಕರ್ತವ್ಯಗಳ ಚೌಕಟ್ಟಿನಲ್ಲಿ ಭೌತಿಕಸುಖಗಳ ಪೂರೈಕೆಯ ಆರೋಗ್ಯಕರ ದೃಷ್ಟಿಯನ್ನು ಹಿಂದು ವಿವಾಹವಿಧಿಯು ನೀಡುತ್ತಾ ಬಂದಿದೆ. 'ನೀನಿರುವುದೇ ನನಗಾಗಿ' ಎಂಬ ಕೇವಲ ಭೋಗದೃಷ್ಟಿಯ ಬದಲಾಗಿ 'ನಾನಿರುವುದೇ ನಿನಗಾಗಿ', 'ನಾವಿಬ್ಬರು ಇರುವುದೇ ಮನೆಯ ಹಿರಿಯರಿಗಾಗಿ ಮತ್ತು ಮಕ್ಕಳಿಗಾಗಿ', 'ನಮ್ಮ ಕುಟುಂಬವು ನೆರೆಯವರಿಗಾಗಿ, ಊರಿಗಾಗಿ, ದೇಶಕ್ಕಾಗಿ ಮತ್ತು ಜಗತ್ತಿಗಾಗಿ' ಎಂಬ ಸಂಪೂರ್ಣ, ಸಮಗ್ರ ದೃಷ್ಟಿಯನ್ನು ಹಿಂದು ವಿವಾಹವಿಧಿಯು ನೀಡುತ್ತದೆ. ಇಬ್ಬರು ಏಕಾಂಗಿ ಗಂಡು-ಹೆಣ್ಣುಗಳನ್ನು ಒಂದಾಗಿ ಬೆಸೆಯುತ್ತದೆ, ಮದುವೆ. ಈ ದೃಷ್ಟಿಗೆ ತಕ್ಕಂತೆ ಸೃಷ್ಟಿಯಾಗುವ ಕುಟುಂಬದ ಪರಸ್ಪರ ಸಂಬಂಧವನ್ನು ನಾವು ಅಂಗಾಂಗಿಭಾವ ಎನ್ನುತ್ತೇವೆ.

ಹೀಗಾಗಿ ಭಾರತೀಯ ಕುಟುಂಬದಲ್ಲಿ ಎಲ್ಲರಿಗೂ ಕರ್ತವ್ಯಗಳಿವೆ. ಮಾತೃಧರ್ಮ, ಪಿತೃಧರ್ಮ, ಪುತ್ರಧರ್ಮ, ಪತಿಧರ್ಮ, ಪತ್ನೀಧರ್ಮ, ಕುಟುಂಬಧರ್ಮ, ಹೀಗೆ ಪ್ರತಿಯೊಬ್ಬರಿಗೂ ಜವಾಬ್ದಾರಿಯಿದೆ. ನಮ್ಮದು ಮಾತೃಪ್ರಧಾನ ಕುಟುಂಬವೇ ವಿನಾ ಪುರುಷಪ್ರಧಾನ ಕುಟುಂಬ ಅಲ್ಲ. ಮಾತಾ ಅಂದರೆ ನಿರ್ಮಾತಾ, ಸೃಜನಶೀಲೆ ಅವಳು. 'ಯಥಾ ಮಾತಾ ತಥಾ ಗೃಹಂ' ಎಂದಿದ್ದಾರೆ ತಿಳಿದವರು. 'ತಾಯಿಯಂತೆ ಮಕ್ಕಳು, ನೂಲಿನಂತೆ ಸೀರೆ' ಎಂಬ ಗಾದೆಯೂ ಇದೆ. ಶಿವಾಜಿಯನ್ನು ರೂಪಿಸಿದ ಜೀಜಾಮಾತೆಯ ಸಣ್ಣ ದೊಡ್ಡ ಪ್ರತಿರೂಪಗಳಾಗಿರುವ ತಾಯಂದಿರು ನಮ್ಮ ನಡುವೆ ಈಗಲೂ ಇರುವ ಕಾರಣ ಅನೇಕ ಉತ್ತಮ ಕುಟುಂಬಗಳು ಇಂದಿಗೂ ನಮ್ಮಲ್ಲಿವೆ.

ನಮ್ಮ ಮನೆ

ಮನೆಯನ್ನು ನಮ್ಮ ಪೂರ್ವಜರು ದೇವಾಲಯಕ್ಕೆ ಹೋಲಿಸಿದರು. **'ಮನೆಯೇ ಮಂತ್ರಾಲಯ'** ಎಂದು ನಂಬಿ ನಡೆದರು. ದೇವಾಲಯದಲ್ಲಿ ಗರ್ಭಗುಡಿ ಇದ್ದಂತೆ ಮನೆಯಲ್ಲಿ ದೇವರ ಮನೆ. ಮನೆಯ ಮುಂಬಾಗಿಲಿನ ಮೇಲೆ ರೇಣುಕಾ ಪ್ರಸನ್ನ, ಶಿವಂ ವಾಸ್ತು, ರಾಘವೇಂದ್ರಃ ಪ್ರಸೀದತು... ಇತ್ಯಾದಿ ಮಂಗಲವಾಕ್ಯಗಳು ಇರುತ್ತವೆ. ನಿತ್ಯವೂ ಸೂರ್ಯೋದಯಕ್ಕೆ ಮೊದಲೇ ಎದ್ದು ಮನೆಯ ಮುಂಭಾಗದಲ್ಲಿ ಗುಡಿಸಿ, ರಂಗವಲ್ಲಿ ಬಿಡಿಸುವುದು ದೇವಾಲಯದ್ದೇ ಸಂಸ್ಕೃತಿ. ಹಬ್ಬಗಳಂದು ಹಸಿರುತೋರಣಗಳಿಂದ ಮನೆಯ ಮುಂಬಾಗಿಲನ್ನು ಶೃಂಗರಿಸುತ್ತೇವೆ. ದೇವಾಲಯದಂತೆ ಮನೆಯ ಒಳಗಿನ ಗೋಡೆಗಳ ಮೇಲೆ ದೇವತಾ ಚಿತ್ರಗಳು ಇರುತ್ತವೆ.

ಮನೆಯ ಚಟುವಟಿಕೆಗಳಲ್ಲಿ ನಿತ್ಯಸ್ನಾನ, ಸ್ನಾನದ ನಂತರ ದೇವರಪೂಜೆ ಮಾಡುವ, ಮಂತ್ರಗಳು - ಶ್ಲೋಕ-ವಚನ-ಕೀರ್ತನೆ-ದಾಸರಪದಗಳನ್ನು ನಿತ್ಯ ಹೇಳುವ ಸಂಪ್ರದಾಯ ನಮ್ಮದು. ಗಂಟೆ, ಜಾಗಟೆಗಳ ನಿನಾದ ಮನೆಯನ್ನು ಪವಿತ್ರಗೊಳಿಸುತ್ತದೆ. ಮಾತೃದೇವೋ ಭವ, ಪಿತೃದೇವೋ ಭವ, ಅತಿಥಿದೇವೋ ಭವ, ಆಚಾರ್ಯದೇವೋ ಭವ

– ಇವಲ್ಲವೂ ಮನೆಯ ನಂಬಿಕೆ ಅಷ್ಟೇ ಅಲ್ಲ, ನಡಾವಳಿಯೂ ಹೌದು. ಮಕ್ಕಳಿಗೆ ತಂದೆತಾಯಿಯರು ದೇವರಾದರೆ ತಂದೆತಾಯಿಯರಿಗೆ ಮಕ್ಕಳು ದೇವರು. 'ಹರ್ ಬಾಲಾ ದೇವೀ ಕೀ ಪ್ರತಿಮಾ, ಬಚ್ಚಾ ಬಚ್ಚಾ ರಾಮ್ ಹೈ....' ಎಂಬಂತೆ ಮಕ್ಕಳನ್ನು ಲಾಲಿಸುತ್ತೇವೆ.

ಮನುಷ್ಯ ಪಶುವೂ ಅಲ್ಲ, ಪಾಪಿಯೂ ಅಲ್ಲ; ಅವನು ದೈವಾಂಶಸಂಭೂತ ಎಂಬುದು ನಮ್ಮ ನಂಬಿಕೆ. ಮನೆಯೆಂಬ ದೇವಾಲಯದಲ್ಲಿ ಪಶುವಿನಂತೆ ಇರುವ ಶಿಶುವು ಮನುಷ್ಯನಾಗಿ, ಮಹಾಮಾನವನಾಗಿ ಹಾಗೂ ದೇವಮಾನವನಾಗಿ ಬೆಳೆಯಬಲ್ಲ. ಭಾರತದಲ್ಲಿ ಆಗಿಹೋಗಿರುವ ಮಹಾತ್ಮರಿಗೆ ಮನೆಯೆಂಬ ದೇವಾಲಯವೇ ಮೊದಲ ಪಾಠಶಾಲೆ; ತಾಯಿಯೇ ಮೊದಲ ದೇವತೆ ಹಾಗೂ ಗುರು. ಬಾಲಕ ನರೇಂದ್ರ ತುಂಬಾ ತುಂಟನಾಗಿದ್ದ. ತಾಯಿ ಭುವನೇಶ್ವರೀದೇವಿಯು ನೀಡಿದ ಸಂಸ್ಕಾರದಿಂದ ಮುಂದೆ ಜಗದ್ವಿಖ್ಯಾತ ವಿವೇಕಾನಂದರಾದದ್ದು ಒಂದು ಉದಾಹರಣೆ.

ಮನೆಯಲ್ಲಿ ನಾವು ಮಾಡುವ ಊಟ–ತಿಂಡಿಗಳನ್ನು ಹಿರಿಯರು 'ಪ್ರಸಾದ' ಎಂದು ಕರೆದರು. ನಮ್ಮ ಮನೆಯಲ್ಲಿ ಅಡುಗೆಮನೆಯು ಅನ್ನಪೂರ್ಣೇಶ್ವರಿಯ ನಿವಾಸ. ಅಮ್ಮ ತಯಾರಿಸಿದದ ಅನ್ನ ಅನ್ನಪೂರ್ಣೇಶ್ವರಿಯ ಪ್ರಸಾದ. ಒಟ್ಟಿಗೆ ಕುಳಿತು ದೇವರ ಹೆಸರು ಹೇಳಿಕೊಂಡು ಪ್ರಸಾದವನ್ನು ಶ್ರದ್ಧೆಯಿಂದ ಸ್ವೀಕರಿಸುವುದು, ನಮ್ಮ ಮನೆಯ ಸಂಸ್ಕೃತಿ. 'ಮಾತೃಭೋಜನ'ದಿಂದ ಹೊಟ್ಟೆಯ ಜತೆ ಮನಸ್ಸೂ ತುಂಬಿಬರುತ್ತದೆ. 'ಭೋಜನಮಾತ್ರ'ದಿಂದ ಹೊಟ್ಟೆ ಮಾತ್ರ ತುಂಬುತ್ತದೆ. ಅಮ್ಮ ಅಕ್ಕರೆಯಿಂದ ಮಕ್ಕಳಿಗೆ ಮಾಡಿಸುವ ಕೈತುತ್ತಿನ ಊಟಕ್ಕೆ ಜಗತ್ತಿನಲ್ಲೇ ಸಾಟಿಯಿಲ್ಲ. ಮಾತೃಭೋಜನದ ಸೌಭಾಗ್ಯ ದೊರಕಿದ ಪಾಂಡವರು ದೇವಮಾನವರಾದರೆ, ಕೌರವರು ಇಂತಹ ಸಂಸ್ಕಾರಗಳಿಂದ ವಂಚಿತರಾದರೇನೊ ಎನಿಸುತ್ತದೆ.

ಭಾರತೀಯ ಮನೆಗಳಲ್ಲಿ ಆಚರಿಸುವ ಹಬ್ಬಗಳು ಮೋಜು–ಮಸ್ತಿಗಾಗಿ ಅಲ್ಲ. ಅವು ಬಾಳಿಗೆ ಬೆಳಕನ್ನು ಕೊಡುವಂಥವು. Birthday party ನಮಗೆ ಗೊತ್ತಿಲ್ಲ. ದೀಪ ಆರಿಸುವ, ಕೇಕ್ ಕತ್ತರಿಸುವ ಅರ್ಥಹೀನ ಆಚರಣೆ ನಮಗೆ ಗೊತ್ತೇ ಇರಲಿಲ್ಲ. ಮಂಗಲಸ್ನಾನ, ಹೊಸ ವಸ್ತ್ರಧಾರಣೆ, ದೇವರೆದುರು ತುಪ್ಪದ ದೀಪ ಹಚ್ಚುವುದು, ಹಿರಿಯರಿಗೆ ನಮಸ್ಕರಿಸಿ 'ಯಶಸ್ವೀ ಭವ....' ಎಂದು ಆಶೀರ್ವಾದ ಪಡೆಯುವುದು ಮತ್ತು ಸಾಧ್ಯವಾದಷ್ಟೂ ದಾನ ಮಾಡುವುದೇ ನಮ್ಮ ಸಂಸ್ಕೃತಿ.

ನೆರೆ ಮನೆಗಳ ಜತೆ ಆತ್ಮೀಯ ಬಾಂಧವ್ಯ ಬೆಳೆಸಿಕೊಳ್ಳುವುದು ನಮ್ಮ ಸ್ವಭಾವವಾಗಿತ್ತು. ನೆರೆಯವರ ಸುಖದುಃಖಗಳಲ್ಲಿ ಸಹಜವಾಗಿ ಸ್ಪಂದಿಸುವುದು ನಮ್ಮ ಕೌಟುಂಬಿಕ ಪರಂಪರೆ. 'ನೆರೆಮನೆ ಇರದಿದ್ದಲ್ಲಿ, ಅರಮನೆಯೂ ಸೆರೆಮನೆ' ಎಂಬ ಅರ್ಥಪೂರ್ಣ ಗಾದೆ ಇದೆ. ನೆರೆಯವರ ಹೊರೆ ಇಳಿಸಲು ನೆರವು ನೀಡುವುದು ಪ್ರತಿಯೊಂದು ಮನೆಯ ಸಂಸ್ಕೃತಿ.

ಇಡೀ ಊರೇ ಒಂದು ವಿಶಾಲ ಪರಿವಾರದಂತೆ ಬದುಕುವುದು ನಮ್ಮ ಸಭ್ಯತೆಯಾಗಿತ್ತು. ಮನೆಗೊಂದು ಕುಲದೇವತೆಯಾದರೆ, ಪ್ರತಿಗ್ರಾಮಕ್ಕೂ ಒಂದು ಗ್ರಾಮದೇವತೆ. ಆ ದೇವತೆಗೊಂದು ರಥೋತ್ಸವ. ಆಗ ಇಡೀ ಊರಿನ ಜನ ಒಂದಾಗಿ ತೇರು ಎಳೆಯುತ್ತಿದ್ದರು. ಊರಿನ ಜಾತ್ರೆ ಎಂದರೆ ಪ್ರತಿ ಮನೆಗೂ ಸಂಭ್ರಮ, ಸಡಗರ. ರಥೋತ್ಸವ ಇರಬಹುದು, ಒಂದು ಮನೆಯ ಮದುವೆ ಇರಬಹುದು ಅಥವಾ ಒಂದು ಮನೆಯ ಸಾವು ಇರಬಹುದು, ಇಡೀ ಊರಿನ ಸಂವೇದನೆ ಸಮಾನವಾಗಿರುತ್ತಿತ್ತು.

ಭಾರತೀಯ ಮನೆ (ಕುಟುಂಬ) ಯ ಪರಿಕಲ್ಪನೆ ಸಂಪೂರ್ಣ ಜಗತ್ತನ್ನೇ ಒಳಗೊಂಡಿರುವಂಥದ್ದು. **'ವಸುಧೈವ ಕುಟುಂಬಕಂ'** ಎಂಬುದು ನಮ್ಮ ನಂಬಿಕೆ ಹಾಗೂ ನಡವಳಿಕೆ. ಹಿರಿಯರು ನಮಗೆ ಹೇಳಿಕೊಟ್ಟ 'ಮಾತಾ ಚ ಪಾರ್ವತೀದೇವೀ ಪಿತಾ ದೇವೋ ಮಹೇಶ್ವರಃ । ಬಾಂಧವಾಃ ಶಿವಭಕ್ತಾಶ್ಚ ಸ್ವದೇಶೋ ಭುವನತ್ರಯಮ್॥' ನಮ್ಮ ಮನೆಗಳಲ್ಲಿ ಗುಣಗುಣಿಸುತ್ತಿದ್ದೆವು. ಇನ್ನೂ ಮುಂದುವರಿದು ಪಶುಪಕ್ಷಿಗಳು, ಸೂರ್ಯ-ಚಂದ್ರರು, ಗಿಡ-ನದಿಗಳಿಂದ ಕೂಡಿದ ಪ್ರಕೃತಿಯ ಜತೆಯೂ ಕೌಟುಂಬಿಕ ಸಂಬಂಧವನ್ನು ಬೆಳೆಸಿಕೊಂಡಿದ್ದೆವು. ಹಸುವನ್ನು ತಾಯಿ, ಬೆಕ್ಕನ್ನು ಮೌಸಿ (ಚಿಕ್ಕಮ್ಮ), ಸೂರ್ಯನನ್ನು ಮಿತ್ರ, ಚಂದ್ರನನ್ನು ಮಾಮ, ತುಳಸಿಯನ್ನು ತಾಯಿ ಎಂದೆಲ್ಲ ಕರೆದವರು ನಾವು. ಮನೆಯಲ್ಲಿ ಬೆಳೆಯುವ ಗಿಡಗಳು, ಸಾಕುವ ಬೆಕ್ಕು-ನಾಯಿ, ಕೆಲಸ ಮಾಡುವ ಆಳುಗಳು ಎಲ್ಲರೂ ಕುಟುಂಬದವರೇ ಆಗಿರುತ್ತಿದ್ದರು.

ಮನೆಗೆ ಬಂದವರು ಅಥವಾ ಗ್ರಾಮಕ್ಕೆ ಬಂದವರು ಅಪರಿಚಿತರಾದರೂ ಅವರು ಸನ್ಮಾನ್ಯ ಅತಿಥಿಗಳು; ಯಥೋಚಿತ ಆದರ-ಸತ್ಕಾರಗಳನ್ನು ಮಾಡುವುದು ಕುಟುಂಬ ಜೀವನದ ವಿಶೇಷತೆ. Paying guests ನಮ್ಮ ರೀತಿ ಅಲ್ಲ; **'ದಾನೇ ದಾನೇ ಪರ್ ಲಿಖಾ ಹೈ ಖಾನೇ ವಾಲೋಂ ಕಾ ನಾಮ್'** ಎಂಬುದು ನಮ್ಮ ನಡವಳಿಕೆ.

'ದೇವಸಹಿತ ಭಕ್ತ ಮನೆಗೆ ಬಂದರೆ ಕಾಯಕ ಕೇಳುವುದು, ಕುಲವನ್ನು ಅರಸುವುದು ಮಹಾಪಾಪ' ಎಂದು ನಮ್ಮ ಸಂತರು ತಿಳಿಸಿಕೊಡುತ್ತಿದ್ದರು. 'ದೇವರಿಗಿಲ್ಲ ಜಾತಿಭೇದ ! ಭಕುತರಿಗಂತೂ ಇಲ್ಲ ॥ ಜಾತಿಭೇದದಾ ಸೆಳೆತಕೆ ಸಿಲುಕಿ । ಮುಳುಗದಿರೊ ಮನುಜ॥' ಎಂದಿದ್ದರು ಇನ್ನೋರ್ವ ಸಂತರು. 'ಅತಿಥಿದೇವೋ ಭವ' ಇದು ಭಾರತೀಯ ಕುಟುಂಬ ಸಂಸ್ಕೃತಿಯ ಒಂದು ಶ್ರೇಷ್ಠ ಜೀವನ ಮೌಲ್ಯ.

ದೇವರಕೋಣೆ ನಮ್ಮ ಮನೆಯ ಅನಿವಾರ್ಯ ಭಾಗ. ನಿತ್ಯ ಸೂರ್ಯೋದಯಕ್ಕೆ ಮುಂಚೆ ಏಳುವುದು, ಬೆಳಿಗ್ಗೆ ಸ್ನಾನದ ನಂತರ ದೇವರಪೂಜೆ, ಆರತಿ-ಮಂಗಳಾರತಿ, ತೀರ್ಥ-ಪ್ರಸಾದ, ಇವೆಲ್ಲವೂ ನಮ್ಮ ಮನೆಯ ಮೂಲನಂಬಿಕೆ-ನಡವಳಿಕೆ. ಸಂಪೂರ್ಣ ಸೃಷ್ಟಿಯನ್ನು ಸಂಭಾಳಿಸುವ ಅಗೋಚರ, ಅಮಾನುಷ ಶಕ್ತಿಯನ್ನೇ ನಾವು ದೇವರು ಎಂದೆವು. ಹೊರಕಣ್ಣಿಗೆ ಕಾಣಿಸದ ದೇವರನ್ನು ನಾವು ವಿಗ್ರಹದಲ್ಲಿ ಕಾಣುವ ಪ್ರಯತ್ನ

ಹಾಗೂ ಆ ದೇವನಿಗೆ ಕೃತಜ್ಞತೆ ಸಲ್ಲಿಸುವ ಪೂಜೆ ನಮ್ಮ ಉದಾತ್ತ ಸಂಸ್ಕೃತಿಯೇ ವಿನಾ ಮೂಢನಂಬಿಕೆ ಅಲ್ಲ. ಹೀಗಾಗಿ ಮನೆಯಲ್ಲಿ ನಿತ್ಯಪೂಜೆ, ಗಂಟೆ–ಜಾಗಟೆ, ದೀಪ, ಆರತಿ, ಭಜನೆ–ಸ್ತೋತ್ರಗಳು ಮನೆಯನ್ನೂ ಮನವನ್ನೂ ಪವಿತ್ರಗೊಳಿಸುತ್ತವೆ.

ಸ್ವಾತಂತ್ರ್ಯ ಪೂರ್ವದಲ್ಲಿ ನಮ್ಮ ಮನೆಗಳು. ಧರ್ಮಪಾಲನೆ, ಸಂಸ್ಕೃತಿಯ ರಕ್ಷಣೆ ಹಾಗೂ ದೇಶಭಕ್ತಿಯ ಕೇಂದ್ರಗಳಾಗಿದ್ದವು. ವಿದೇಶೀ ಪ್ರಭುತ್ವಕ್ಕೂ ಭಾರತೀಯ ಕುಟುಂಬ ಸಂಸ್ಕೃತಿಯನ್ನು ಹಾಳುಮಾಡಲಾಗಲಿಲ್ಲ. ಸ್ವಾತಂತ್ರ್ಯ ಹೋರಾಟಗಾರರಿಗೆ ದೇಶದ ಲಕ್ಷಾಂತರ ಮನೆಗಳೇ ಭದ್ರವಾದ ಕೋಟೆಗಳಾಗಿದ್ದವು.

ಸ್ವರಾಜ್ಯ ಬಂತು, ಮನೆ ಬದಲಾಗುತ್ತ ಹೋಯಿತೇ? ಆಶ್ಚರ್ಯ, ೧೯೪೭ರ ನಂತರ India ಆಗಿದ್ದ ಭಾರತ, ಭಾರತವೇ ಆಗುವ ಬದಲು India that is Bharat ಆಯಿತು ! ಇಂಗ್ಲಿಷ್‌ನಲ್ಲಿ India, ಭಾರತೀಯ ಭಾಷೆಗಳಲ್ಲಿ ಭಾರತ ಆಯಿತು. ಭಾರತೀಯ ಭಾಷೆಗಳಲ್ಲೂ ಹಿನ್ನಡೆ ! ಕನ್ನಡವು 'ಕಂಗ್ಲಿಷ್', ಹಿಂದಿಯು 'ಹಿಂಗ್ಲಿಷ್' ಆಯಿತು. ಅಮ್ಮ ಮಮ್ಮಿ ಆದಳು, ಅಪ್ಪ ಡ್ಯಾಡಿ ಆದ. ಮಾಮ–ಅಂಕಲ್, ಮಾಮಿ–ಆಂಟೀ ಆಗಿ ಹೋದರು. ಅಮ್ಮ, ಅಪ್ಪ, ಮಾಮ ನೇಪಥ್ಯಕ್ಕೆ ಸರಿದುಹೋದರು!

ಹುಟ್ಟುಹಬ್ಬವು ಹಬ್ಬವಾಗದೆ Happy birthday ಆಯಿತು. ಯುಗಾದಿಯ ಬದಲು ಜನವರಿ ೧ New Year's day ಆಯಿತು. 'ಹೋಗಿ ಬರುತ್ತೇವೆ' ಹೊರಟುಹೋಗಿ ಟಾಟಾ, ಬೈಬೈ ಶುರು ಆಯಿತು. ಗೃಹಿಣಿ House Wife ಆದಳು! ಮದುವೆಗೆ ಮುಂಚಿನ ದಿನವೇ Reception ಶುರು ಆಯಿತು. ಮದುವೆಯಾದರೂ ಏಕೆ ಬೇಕು? ಅದೊಂದು ಬಂಧನ, – ಎನಿಸಿತು. Live-in relation ಎಂಬುದಕ್ಕೆ ಕೋರ್ಟ್ ಸಹಾ ಮಾನ್ಯತೆ ನೀಡಿತು (Madras H.C). ರಕ್ಷಾಬಂಧನ್ ಬದಲು, Valentine day ಬಂತು. ಕುಟುಂಬಗಳಲ್ಲಿ 'ನಾವು' ಭಾವ ಶಿಥಿಲವಾಗುತ್ತ, 'ನಾನು' ಗಟ್ಟಿಯಾಗುತ್ತ ಹೋಯಿತು. Indivisible ಗಳು Individual ಆಗುತ್ತಾ ಬಂದರು. ಪತಿ–ಪತ್ನಿಯರಲ್ಲಿ ಅವಿನಾಭಾವ ಹೋಗಿ Ego-clash ಶುರುವಾಯಿತು.

ಹಬ್ಬಗಳೆಲ್ಲ Party ಗಳಾಗುತ್ತಾ ಹೋದವು. ಮನೆಗಳು ಕ್ರಮೇಣ Lodge ಗಳಾಗುತ್ತಾ ಹೋದವು. ಒಟ್ಟಾರೆ ಹೇಳುವುದಾದರೆ; ಸಮೃದ್ಧಿ ಹೆಚ್ಚಾದಂತೆ ಸಂಸ್ಕೃತಿ ಗೌಣವಾಗುತ್ತಾ ಹೋಯಿತು. ನೆಮ್ಮದಿಯ ತಾಣವಾಗಿದ್ದ ಮನೆ ಮನಸ್ತಾಪ, ಸಂದೇಹ, ಅಹಮಿಕೆಗಳ ಗೊಂದಲದ ಗೂಡಾಗುತ್ತಾ ಹೋಯಿತು. ಆಸ್ತಿಯಾಗಬೇಕಾಗಿದ್ದ ಮಕ್ಕಳು ಹೊರೆಯಾಗುತ್ತಾ ಹೋದರು. ನಗರಗಳಲ್ಲಿ 'ಮೊದಲನೇ ಮಗು ಈಗಲೇ ಯಾಕೆ? ಎರಡನೆಯದಂತೂ ಬೇಡವೇ ಬೇಡ' ಎಂಬ ಸೂತ್ರವನ್ನು ವೇಗವಾಗಿ ಒಪ್ಪಲಾಗುತ್ತಿದೆ.

ಮಾತೃತ್ವದಲ್ಲಿ ಧನ್ಯತೆ ಎಂಬ ಮೌಲ್ಯವು ಅಪಮೌಲ್ಯಕ್ಕೆ ಒಳಗಾಗಲು ಪ್ರಾರಂಭವಾಗಿದೆ. **'ಅಜ್ಜಿ ಇಲ್ಲದ ಮನೆ, ಮಜ್ಜಿಗೆ ಇಲ್ಲದ ಊಟ ಬೇಡ'** ಎಂಬ ಮಾತು ಬೆಲೆ ಕಳೆದುಕೊಂಡು, ಅಜ್ಜಿ, ಅಮ್ಮ, ಅಪ್ಪ ಇರುವ ಮನೆ ಬೇಡ ಎಂಬ ಆಲೋಚನೆಯು ಹರಡಲಾರಂಭಿಸಿತು.

ಕೌಟುಂಬಿಕ ಬಾಂಧವ್ಯ ಸಡಿಲವಾಗುತ್ತಾ ಹೋಯಿತು. ಚಿಂತೆಯ ಸಂಗತಿ ಎಂದರೆ, 'ಇನ್ಮುಂದೆ ಇದು ಹೀಗೆಯೇ...' ಎನ್ನುವ ಮಾನಸಿಕತೆ ಬೆಳೆಯುತ್ತಿರುವುದು. ಹಾಗಾದರೆ ಸಮಾಜವು ಇದನ್ನು ಅಸಹಾಯಕರಾಗಿ ಒಪ್ಪಿಕೊಳ್ಳಬೇಕೇ? – ಎಂಬ ಪ್ರಶ್ನೆ ಇದೆ.

ನಾವೀಗ ಮೂಲಕ್ಕೆ ಹೋಗುವ ಸಾಹಸ ಮಾಡಬೇಕಾಗಿರುವುದೇ, ಸಮಸ್ಯೆಗೆ ಇರುವ ಪರಿಹಾರ. ಹತಾಶರಾಗುವ ಕಾರಣವಿಲ್ಲ. ಈ ಭೋಗವಾದದ ಯುಗದಲ್ಲೂ ಸಮತೋಲನ ಕಳೆದುಕೊಳ್ಳದ ಸಾವಿರಾರು ಕುಟುಂಬಗಳು ಸರ್ವತ್ರ ಇವೆ ಮತ್ತು 'ಎಲ್ಲೋ ದಾರಿ ತಪ್ಪುತ್ತಿದ್ದೇವೆ – ನಮ್ಮ ದಾರಿ ಸರಿ ಇಲ್ಲ, ಸರಿದಾರಿ ಯಾವುದು?' ಎಂದು ಹುಡುಕುತ್ತಿರುವವರೂ ದೊಡ್ಡ ಸಂಖ್ಯೆಯಲ್ಲಿದ್ದಾರೆ. ಈ ಸಂದರ್ಭದಲ್ಲಿ ಆಧುನಿಕತೆಯನ್ನು ಸಾರಾಸಗಟಾಗಿ ಧಿಕ್ಕರಿಸುವುದೂ ಬೇಡ – ಅದುವೇ ನಾಗರಿಕತೆ ಎಂಬ ಭ್ರಮೆಯೂ ಬೇಡ. ಹಾಗೆಯೇ ಪ್ರಾಚೀನತೆಯನ್ನು ನಿರಾಕರಿಸದೆ, ಹಳೆಯದೇ ಸರಿ ಎನ್ನುವ ಮೊಂಡುತನವನ್ನೂ ಮಾಡದೆ ಎರಡರಲ್ಲೂ ಸಮನ್ವಯವನ್ನು ಸಾಧಿಸುವ ವಿವೇಕವನ್ನು ತೋರಿಸುವುದೇ ಕಾಲದ ಆವಶ್ಯಕತೆಯಾಗಿದೆ. ಸಮೃದ್ಧಿ ಹಾಗೂ ಸಂಸ್ಕೃತಿಗಳೆರಡಲ್ಲೂ ವ್ಯಾವಹಾರಿಕ ಸಮತೋಲನವನ್ನು ಸಾಧಿಸುವ ಸಾಹಸ ಮಾಡಬೇಕಾಗಿದೆ.

ಭಾರತದ ಕುಟುಂಬಗಳು ವಿನಾಶದ ಅಂಚಿಗೆ ಖಂಡಿತವಾಗಿಯೂ ಬಂದಿಲ್ಲ. ಅಲ್ಲಿ ಇಲ್ಲಿ ಕೆಲವು ಬಿರುಕುಗಳು ಕಾಣುತ್ತಿವೆಯಷ್ಟೆ. A stitch in time saves nine ಎನ್ನುವ ಹಾಗೆ ಈಗಲೇ ಬಿರುಕುಗಳನ್ನು ಮುಚ್ಚುವ ಆವಶ್ಯಕತೆ ಇದೆ. ಪಶ್ಚಿಮದ ಕುಟುಂಬಗಳು ಛಿದ್ರವಾಗುತ್ತ ಸಾಗಿವೆ. ಅವರು ಆಸೆಕಣ್ಣುಗಳಿಂದ ನಮ್ಮ ಕಡೆ ನೋಡುತ್ತಿದ್ದಾರೆ. ನಮ್ಮ ಕೌಟುಂಬಿಕ ರೀತಿ–ರಿವಾಜುಗಳಲ್ಲಿ ಅವರು ಭರವಸೆಯನ್ನು ಕಾಣುತ್ತಿರುವಾಗ ನಾವು 'ನಮ್ಮತನ'ವನ್ನು ಕಳೆದುಕೊಳ್ಳಬಾರದಲ್ಲವೇ? ಮರೆಯಬಾರದು–ದುರಭ್ಯಾಸಗಳಷ್ಟೇ ಸಾಂಕ್ರಾಮಿಕ ಅಲ್ಲ; ಒಳ್ಳೆಯ ಅಭ್ಯಾಸಗಳೂ ಸಹ ಸಾಂಕ್ರಾಮಿಕ. ೧ರ ಜತೆ ೧ ಸೇರಿದಾಗ ೧೧ ಆಗುತ್ತದೆ. ಮಂಗಲ ಕುಟುಂಬಗಳನ್ನು ಹೆಚ್ಚಿಸುತ್ತ ಹೋಗೋಣ. ಇದೊಂದು ಅತ್ಯಂತ ಪುಣ್ಯಕಾರ್ಯ.

ಗೃಹಿಣೀ ಗೃಹಮುಚ್ಯತೇ

– ಜಿ.ವಿ. ಸರಸ್ವತಿ, ಶಿವಮೊಗ್ಗ
ಲೇಖಕರು, ೯೪೪೮೦೮೯೧೨೦

ಮನೆ ಎಂದರೆ ಒಂದು ಕಟ್ಟಡವಲ್ಲ ಮನೆಯಲ್ಲಿ ಇರಬೇಕಾದ್ದೆಲ್ಲ ಇದ್ದಾಗ ಮಾತ್ರ ಅದು ಮನೆ. ಅದರಲ್ಲೂ ಮುಖ್ಯವಾಗಿ ಮನೆಯಲ್ಲಿ ಗೃಹಿಣಿ ಇದ್ದಾಗ ಮಾತ್ರ ಅದು ಗೃಹ ಎನ್ನಿಸಿಕೊಳ್ಳುತ್ತದೆ. ಬಹುಶಃ ವಿಶ್ವದಲ್ಲಿ ಗೃಹಿಣಿಗೆ ಕೊಟ್ಟಿರುವ ಈ ಆದರದ ಸ್ಥಾನ ನಮ್ಮ ಹಿಂದೂ ಸಂಸ್ಕೃತಿಗೆ ಸೀಮಿತವಾದದ್ದು. ಒಂದು ಕಾಲದಲ್ಲಿ ಗೃಹಿಣಿ ಎಂದರೆ ಮನೆಯೊಳಗಿನ ದುಡಿಯುವ ಆಳು. ಆಕೆಗೆ ವಿದ್ಯಾಭ್ಯಾಸದ ಅಗತ್ಯವಿಲ್ಲ. ಅವಳನ್ನು ಬಾಲ್ಯದಲ್ಲಿ ತಂದೆ, ಯೌವನದಲ್ಲಿ ಗಂಡ ವೃದ್ಧಾಪ್ಯದಲ್ಲಿ ಮಕ್ಕಳು ರಕ್ಷಿಸುತ್ತಾರೆ. ಸ್ತ್ರೀಗೆ ಸ್ವಾತಂತ್ರ್ಯ ಸಲ್ಲದು. 'ನ ಸ್ತ್ರೀ ಸ್ವಾತಂತ್ರ್ಯಮರ್ಹತಿ' ಎಂಬ ವಾಕ್ಯದಂತೆ ಗೃಹಿಣಿ ಗೃಹದೊಳಗೆ ಬಂದಿಯಾಗಿದ್ದಳು. ಕತ್ತಲ ಸಾಮ್ರಾಜ್ಯದಲ್ಲಿ ಮುಳುಗಿ ಹೋಗಿದ್ದಳು. ಅವಳ ಒಡಲಲ್ಲಿ ಈ ಕತ್ತಲನ್ನು ಕಳೆಯುವಂಥ ಅನೇಕ ಸಮಾಜ ಸುಧಾರಕರು ಹುಟ್ಟಿ ಬಂದರು. ತುಳಿದಿಟ್ಟ ಹೆಣ್ಣನ್ನು ಕೈ ಹಿಡಿದು ಮೆಲೆತ್ತಿದರು. ಇಂದು ಭಾರತೀಯ ಗೃಹಿಣಿ ಎಲ್ಲ ಅಡೆ ತಡೆಗಳನ್ನು ದಾಟಿ ತನ್ನದೇ ಆದ ಸ್ವಂತ ವ್ಯಕ್ತಿತ್ವವನ್ನು ಬಳಸಿಕೊಂಡು ಬೆಳೆಯಲು ಸಮರ್ಥಳಾಗಿದ್ದಾಳೆ.

ಒಬ್ಬ ವ್ಯಕ್ತಿ ಗೃಹಸ್ಥ ಎನ್ನಿಸಿಕೊಳ್ಳಬೇಕಾದರೆ ಅದು ಮನೆಗೊಬ್ಬ ಗೃಹಿಣಿಯನ್ನು ತಂದಾಗ ಮಾತ್ರ. ಮನೆಯಲ್ಲಿ ಎಲ್ಲರಿಗಿಂತ ಮೊದಲು ಎದ್ದು ದಿನಚರಿಯನ್ನು ಪ್ರಾರಂಭಿಸುವವಳು ಗೃಹಿಣಿ. ಮನೆಯ ಮುಂಬಾಗಿಲಲ್ಲಿ ರಂಗವಲ್ಲಿ ಇಡುವುದರೊಂದಿಗೆ ಇವಳ ಕೆಲಸ ಪ್ರಾರಂಭ. ಎಲ್ಲಿಯವರೆಗೆ ಮನೆಯಲ್ಲಿ ಗೃಹಿಣಿ ಇರುತ್ತಾಳೋ ಅಲ್ಲಿಯವರೆಗೆ ಮನೆಗೆ ಅತಿಥಿ, ಅಭ್ಯಾಗತರು ಬರುತ್ತಾರೆ. ಅತಿಥಿ ಎಂದಾಗ ಕುಮಾರವ್ಯಾಸ ಭಾರತದ ದೂರ್ವಾಸಾತಿಥ್ಯದ ಪ್ರಸಂಗ ನೆನಪಿಗೆ ಬರುತ್ತದೆ.

ದುರ್ಯೋಧನನು ದುರುದ್ದೇಶದಿಂದ ಕೇಳಿದ ವರವನ್ನು ನಡೆಸಿ ಕೊಡಲೇಬೇಕಾದ ಸ್ಥಿತಿಯಲ್ಲಿದ್ದ ದೂರ್ವಾಸಮಹರ್ಷಿಗಳು, ಅವೇಳೆಯಲ್ಲಿ ವನವಾಸದಲ್ಲಿರುವ ಪಾಂಡವರ ಆಶ್ರಮಕ್ಕೆ ಬರುತ್ತಾರೆ. ಅತಿಥಿಗಳನ್ನು ನೋಡಿದೊಡನೆ ಅವರನ್ನು ಯಥೋಚಿತವಾಗಿ ಸ್ವಾಗತಿಸಿದ ಯುಧಿಷ್ಠಿರ ಕೂಡಲೇ ದ್ರೌಪದಿಗೆ ಹೇಳಿ ಕಳಿಸಿದ. ಏಕೆಂದರೆ ಅತಿಥಿಗಳ ಊಟೋಪಚಾರದ ಹೊಣೆ ಗೃಹಿಣಿಯದಲ್ಲವೆ. ಸೂರ್ಯ ಕೊಟ್ಟ ಅಕ್ಷಯ ಪಾತ್ರೆಯ ನೆರವಿನಿಂದ ದ್ರೌಪದಿ ವನವಾಸದಲ್ಲೂ ಅತಿಥಿ ಸತ್ಕಾರದ ತನ್ನ ಕರ್ತವ್ಯವನ್ನು ನಿಷ್ಠೆಯಿಂದ ನಡೆಸಿಕೊಂಡು ಬರುತ್ತಿದ್ದಳು. ಅತಿಥಿಗಳ ಹಾಗೂ ತನ್ನ ಪಂಚಪತಿಗಳ ಊಟ ಮುಗಿದ ಮೇಲಷ್ಟೇ ದ್ರೌಪದಿಯ ಊಟ. ಈಗಲೂ ನಮ್ಮ ಅನೇಕ ಮನೆಗಳಲ್ಲಿ ಗೃಹಿಣಿಯೇ ಕೊನೆಗೆ

ಊಟ ಮಾಡುವವಳು. ಅಂದು ದೂರ್ವಾಸರು ಬರುವ ವೇಳೆಗೆ ದ್ರೌಪದಿಯ ಊಟ ಮುಗಿದು ಹೋಗಿತ್ತು. ಅಕ್ಷಯ ಪಾತ್ರೆ ಬರಿದಾಗಿತ್ತು. ಆದರೂ ದ್ರೌಪದಿ ತನ್ನ ಕರ್ತವ್ಯದಿಂದ ವಿಮುಖಳಾಗಲಿಲ್ಲ. ಆಪದ್ಬಾಂಧವನಾದ ಶ್ರೀ ಕೃಷ್ಣನನ್ನು ಪ್ರಾರ್ಥಿಸಿದಳು. ಶ್ರೀ ಕೃಷ್ಣನ ಆಗಮನದಿಂದ ಬೆಟ್ಟದಂತೆ ಬಂದಿದ್ದ ಸಮಸ್ಯೆ, ಮಂಜಿನಂತೆ ಕರಗಿ ಹೋಯಿತು.

ಇಂದಿನ ಗೃಹಿಣಿಯ ಕರ್ತವ್ಯ ಬರಿಯ ಮನೆಯ ನಿರ್ವಹಣೆಗಷ್ಟೇ ಸೀಮಿತವಾಗಿಲ್ಲ. ನಗರ ಜೀವನದಲ್ಲಂತೂ ಆಕೆ ಮನೆಯ ಒಳಗೂ ಹೊರಗೂ ದುಡಿಯುವ ಅವಶ್ಯಕತೆ ಇದೆ. ಆದರೆ ಗೃಹಕೃತ್ಯದ ಹೊಣೆ ಮಾತ್ರ ಅವಳದೇ.

ಎಲ್ಲ ಮಹಿಳೆಯರೂ ತಮ್ಮ ಕರ್ತವ್ಯವನ್ನು ಸರಿಯಾಗಿ ನಿರ್ವಹಿಸಿ "ಗೃಹಿಣೀ ಗೃಹಮುಚ್ಯತೇ" ಎಂಬ ಮಾತನ್ನು ಸಮರ್ಥಿಸಿಕೊಳ್ಳುತ್ತಾರೆ ಎಂದೇನಿಲ್ಲ. ಆಧುನಿಕ ಸಮಾಜದಲ್ಲಿ ಅದರಲ್ಲೂ ಮೇಲ್ವರ್ಗದ ಮಹಿಳೆಯರಲ್ಲಿ ಕೆಲವರು ಸದಾ ಸ್ವಂತ ಅಲಂಕಾರ, ಶಾಪಿಂಗ್, ಪಾರ್ಟಿಗಳು ಇತ್ಯಾದಿಗಳಲ್ಲಿ ಕಾಲಹರಣ ಮಾಡುತ್ತ ಮನೆಯನ್ನು ಮನೆಗೆಲಸದವರಿಗೆ ಬಿಟ್ಟಿರುತ್ತಾರೆ.

ಮಹಿಳೆಯಷ್ಟೇ ಸಮರ್ಥವಾಗಿ, ಕೆಲವು ಬಾರಿ ಅವಳಿಗಿಂತ ಅಚ್ಚುಕಟ್ಟಾಗಿ ಮನೆಯನ್ನು ನಿರ್ವಹಿಸಿಕೊಂಡು ಹೋಗಬಲ್ಲ ಪುರುಷರು ಇಲ್ಲವೆಂದಲ್ಲ. ಆದರೆ, ಪುರುಷ ಎಂದೂ ಗೃಹಿಣಿಯಾಗಲಾರ. ಮನೆಯಲ್ಲಿ ಹಬ್ಬ-ಹರಿದಿನಗಳನ್ನು ಆಚರಿಸುವುದರಲ್ಲೂ ಗೃಹಿಣಿಯದೇ ಮುಖ್ಯಪಾತ್ರ. ಇಂದಿನ ವ್ಯಾವಹಾರಿಕ ಪ್ರಪಂಚದಲ್ಲಿ ಮುಳುಗಿ, ಗೃಹಸ್ಥ ಹಬ್ಬಗಳನ್ನು ಮರೆತಾನು. ಆದರೆ ಗೃಹಿಣಿ ಮರೆಯುವುದಿಲ್ಲ. ಸಕಾಲಕ್ಕೆ ಮನೆಯ ಯಜಮಾನನನ್ನು ಎಚ್ಚರಿಸುತ್ತಾಳೆ. ಆಗಬೇಕಾದ ಕೆಲಸಗಳನ್ನು ಸೂತ್ರಧಾರಿಯಾಗಿ ನಿಂತು ಮಾಡಿಸುತ್ತಾಳೆ. ಮನೆಯ ಮಕ್ಕಳಿಗೆ ಹಬ್ಬಗಳ ಮಹತ್ವದ ಅರಿವು ಮೂಡಿಸಿ, ಮುಂದಿನ ಪೀಳಿಗೆಗೆ ಗೃಹಿಣಿಯ ಹೊಣೆಗಾರಿಕೆಯ ಅರಿವು ಮೂಡಿಸುತ್ತಾಳೆ.

ಸಮಾಜದಲ್ಲಿ ಗೃಹಿಣಿಯೊಂದಿಗೆ ಇರುವ ಗೃಹಸ್ಥನಿಗೆ ಒಂದು ವಿಶೇಷ ಗೌರವದ ಸ್ಥಾನಮಾನ ಇರುತ್ತದೆ. ಆತ ವಿಧುರನೋ, ಬ್ರಹ್ಮಚಾರಿಯೋ ಆಗಿದ್ದರೆ ಈ ಸ್ಥಾನಮಾನ ಇರಲಾರದು.

ಗೃಹಿಣಿ ಎಂದರೆ ಗೃಹಸ್ವಾಮಿಯ ಮಡದಿಯೇ ಆಗಬೇಕೆಂದೇನೂ ಇಲ್ಲ. ಅಕ್ಕ, ತಂಗಿ, ಸೋದರತ್ತೆ ಹೀಗೆ ಮನೆಯಲ್ಲಿ ಹುಟ್ಟಿ ಬೆಳೆದ ಹೆಣ್ಣು ಮಕ್ಕಳು ಅನೇಕ ಸಂದರ್ಭಗಳಲ್ಲಿ ಗೃಹಿಣಿಯ ಕರ್ತವ್ಯವನ್ನು ಯಶಸ್ವಿಯಾಗಿ ನಿಭಾಯಿಸುತ್ತಾರೆ. ಅದು ಹೇಗೇ ಇರಲಿ ಮನೆಯಲ್ಲಿ ಒಬ್ಬ ಗೃಹಿಣಿ ಇಲ್ಲದಿದ್ದರೆ ಗೃಹ ಮುಚ್ಚಿತೆಂದೇ ತಿಳಿಯಬೇಕು. ಇಂದಿನ ಹೆಣ್ಣು ಮಕ್ಕಳು, ಗೃಹಿಣಿಯ ಕರ್ತವ್ಯ, ಮಹತ್ವಗಳನ್ನು ತಿಳಿದುಕೊಂಡು, ನಡೆದಾಗಲೇ ಭವ್ಯಭಾರತದ ಸಂಸ್ಕೃತಿಯ ಉಜ್ಜೀವನವಾಗುತ್ತದೆ.

ಹಬ್ಬಗಳು – ಅವುಗಳ ಉದ್ದೇಶ

ಪ್ರೊ. ಟಿ.ಎನ್. ಪ್ರಭಾಕರ, ಬೆಂಗಳೂರು
ಲೇಖಕರು, ಹೆಚ್ಚುವರಿ ನಿರ್ದೇಶಕರು,ಕಾಲೇಜು ಶಿಕ್ಷಣ ಇಲಾಖೆ
೯೪೪೮೮೪೪೨೭೬೩, tnparyam@gmail.com

ಹಬ್ಬ – ಇದು ಯಾರಿಗೆ ತಾನೆ ಇಷ್ಟವಿಲ್ಲ? ಇದು ಎಲ್ಲರಿಗೂ ಪ್ರಿಯವಾದದ್ದು. ಕಾರಣವು ಸ್ಪಷ್ಟವಾಗಿದೆ. ಅಂದು ದಿನಚರಿಯು ಭಿನ್ನವಾಗಿದ್ದು, ಹರ್ಷ–ಉಲ್ಲಾಸಗಳು ಇರುತ್ತವೆ. ಬಂಧು–ಮಿತ್ರರು ಒಟ್ಟಿಗೆ ಸೇರುವಂತಹುದು, ರುಚಿರುಚಿಯಾದ ತಿಂಡಿತಿನಿಸುಗಳನ್ನು, ಪಾನೀಯಗಳನ್ನು ಸೇವಿಸುವುದು, ಆಡುವುದು, ಹಾಡುವುದು, ಪರಸ್ಪರ ಕುಶಲಪ್ರಶ್ನೆ–ಉತ್ತರಗಳು ಇತ್ಯಾದಿಗಳು ಇರುತ್ತವೆ. ಹೀಗಾಗಿ ಹಬ್ಬದ ದಿನದಂದು ದೈನಂದಿನ ಸಮಸ್ಯೆಗಳನ್ನು ಮರೆಯಲಾಗುತ್ತದೆ. ಸಾಮಾನ್ಯವಾಗಿ ಎಲ್ಲ ದೇಶಗಳ ವಿವಿಧ ಸಮುದಾಯಗಳ ಜನರೂ ಹಬ್ಬಗಳನ್ನು ಇದೇ ರೀತಿ ಆಚರಿಸುತ್ತಾರೆ. ಪಶುಪಕ್ಷಿಗಳು ವಿವಿಧ ಋತುಮಾನಗಳಲ್ಲಿ ಇಂತಹ ನಲಿವನ್ನು ಅನುಭವಿಸುತ್ತವೆ. **ಉತ್ಸವಪ್ರಿಯಾಃ ಖಲು ಮನುಷ್ಯಾಃ** ಎಂದು ರಾಷ್ಟ್ರಕವಿ ಕಾಳಿದಾಸನು ಶಾಕುಂತಲ ನಾಟಕದಲ್ಲಿ ಹೇಳಿರುವುದು ಅರ್ಥಪೂರ್ಣವಾಗಿದೆ.

ಭಾರತೀಯ ವಿಶೇಷತೆ

ಹೀಗೆ ಎಲ್ಲ ದೇಶೀಯರೂ ಹಬ್ಬಗಳನ್ನು ಆಚರಿಸಿದರೂ, ಭಾರತೀಯ ಸನಾತನ ಪರಂಪರೆಯಂತೆ ಹಬ್ಬಗಳ ಆಚರಣೆಯಲ್ಲಿ ವಿಶೇಷವಿದೆ. ಇಲ್ಲಿ ಹಬ್ಬಗಳು ಕೇವಲ ಬಾಹ್ಯ ಇಂದ್ರಿಯಗಳನ್ನು ತೃಪ್ತಿಪಡಿಸುವುದಕ್ಕೆ ಸೀಮಿತವಾಗದೆ, ಅಲ್ಲಿಂದ ಆಚೆಗೆ ಇರುವ ಮಹಾತತ್ತ್ವದ ಬಗ್ಗೆಯೂ ಚಿಂತಿಸುತ್ತವೆ. ಸಂಸ್ಕೃತ ಭಾಷೆಯಲ್ಲಿ ಹಬ್ಬವನ್ನು ನಿರ್ದೇಶಿಸಲು **ಉತ್ಸವ, ಮಹಃ, ಜಯಂತಿ, ಪರ್ವ** ಮೊದಲಾದ ಪದಗಳಿವೆ. ಉತ್ಸವ ಪದಕ್ಕೆ **ಉತ್ಸೂತೇ ಹರ್ಷಂ** ಸಂತೋಷವನ್ನು ಉಂಟು ಮಾಡುವಂತಹುದು ಎಂಬ ಅರ್ಥವಿದೆ. ಈ ಸಂತೋಷವು **ಉತ್** ಎಂದರೆ ಮೇಲ್ಮುಖವಾಗಿ ನಮ್ಮನ್ನು ಒಯ್ಯುವಂತಹುದಾಗಿರಬೇಕು. **ಮಹಃ** ಎಂದರೆ ದೇವತೆಗಳನ್ನು ಪೂಜಿಸುವ ಸಮಯ, ದಿನ ಎಂದು ಅರ್ಥ. ಮಾನವನು ಪೂಜ್ಯತೆ ಅಥವಾ ತೇಜಸ್ಸನ್ನು ಪಡೆಯಲು ಯೋಗ್ಯವಾದ ಕಾಲ. (**ಮಹ್ಯತೇ ಪೂಜ್ಯತೇ ದೇವಃ ತೇಜೋ ವಾ ಪ್ರಾಪ್ನೋತಿ ಅನೇನ**) ಎಂದು ಇದರ ನಿರ್ವಚನ, ಮಹಾಪುರುಷರು ಅವತರಿಸಿದ ದಿನಕ್ಕೆ **ಜಯಂತಿ** ಎಂದು ಕರೆಯುತ್ತಾರೆ **ಜಯಂ ಪುಣ್ಯಂ ಚ ತನುತೇ ಜಯನ್ತೀಂ ತೇನ ತಾಂ ವಿದುಃ** ಎಂದು ವ್ಯಾಖ್ಯಾನಿಸಿದಂತೆ ಮಹಾಪುರುಷರ ಅವತಾರದ

ದಿನಗಳನ್ನು ಆಚರಿಸಿದರೆ; ಅದರಿಂದ ನಮಗೆ ಜಯ ಹಾಗೂ ಪುಣ್ಯವು ಲಭಿಸುತ್ತದೆ. ತಪಸ್ವಿಗಳಾದ ಮಹಾಪುರುಷರು ಶಾರೀರಿಕವಾಗಿ ನಮ್ಮೊಂದಿಗೆ ಇರುವಾಗಲೇ ಅವರ ಅವತಾರದ ದಿನವನ್ನು ಆಚರಿಸಿದಾಗ ಅದನ್ನು **ವರ್ಧಂತಿ** ಎಂದು ಕರೆಯಲಾಗಿದೆ. **ಪರ್ವ** ಎಂದರೆ ಸಂಧಿಸ್ಥಾನ ಎಂಬ ಅರ್ಥವಿದೆ. ಪರ್ವ ಪದಕ್ಕೆ **ಪೂ** ಎಂಬ ಧಾತು. ಇದಕ್ಕೆ **ಪಾಲನ** ಹಾಗೂ **ಪೂರಣ** ಎಂಬ ಎರಡು ಅರ್ಥಗಳಿವೆ. **ಪಿಪರ್ತಿ(ಪಾಲಯತಿ, ಪೂರಯತಿ) ಇತಿ ಪರ್ವ** ಎಂದು ವ್ಯಾಖ್ಯಾನಿಸಬಹುದು. ಸಾಮಾನ್ಯವಾಗಿ ಅಷ್ಟಮಿ, ಚತುರ್ದಶಿ, ಹುಣ್ಣಿಮೆ, ಅಮಾವಾಸ್ಯೆ, ಸಂಕ್ರಮಣ – ಇವನ್ನು ಪಂಚಪರ್ವಗಳನ್ನಾಗಿ ತಿಳಿಸಲಾಗಿದೆ. ಸೂರ್ಯ, ಚಂದ್ರ ಗ್ರಹಣ ಕಾಲಕ್ಕೂ ಪರ್ವಕಾಲ ಎನ್ನುತ್ತಾರೆ.

ಸೌರಮಾನದಂತೆ ಎಲ್ಲ ೧೨ ರಾಶಿ ಸಂಕ್ರಮಣಗಳು ಪ್ರಶಸ್ತವಾದದ್ದು. ಅವುಗಳ ಪೈಕಿ ಮಕರ ಸಂಕ್ರಮಣ (ಉತ್ತರಾಯಣ ಪುಣ್ಯಕಾಲ) ಹಾಗೂ ಕರ್ಕಾಟಕ ಸಂಕ್ರಮಣ (ದಕ್ಷಿಣಾಯನ ಪುಣ್ಯಕಾಲ) ದಿನಗಳು ಇನ್ನೂ ವಿಶೇಷವಾದದ್ದು. ತುಲಾಸಂಕ್ರಮಣದಂದು ಕಾವೇರೀ ನದಿಯಲ್ಲಿ ಗಂಗೆಯು ಆವಿರ್ಭವಿಸುತ್ತಾಳೆ. ಅಂದಿನಿಂದ ಒಂದು ತಿಂಗಳವರೆಗೆ ಗಂಗೆಯ ಸನ್ನಿಧಿಯು ಕಾವೇರಿಯಲ್ಲಿ ಇರುತ್ತದೆ ಎಂಬುದು ಅಲ್ಲಿನ ಹೆಗ್ಗಳಿಕೆ.

ಯೋಗಭೋಗಗಳ ಸಮ್ಮಿಳನ

ಪರ್ವ ಪದಕ್ಕೆ ಗಿಣ್ಣು, ಗಂಟು ಎಂಬ ಅರ್ಥವಿದೆ. ಗಿಡಮರಗಳಲ್ಲಿ ಈ ಗಂಟು(ಗ್ರಂಥಿ) ಅತಿ ಮುಖ್ಯವಾದ ಭಾಗ. ಗಿಡಮರಗಳಲ್ಲಿ ಗಿಣ್ಣು ಹೇಗೆ ಮುಖ್ಯಭಾಗವೋ ಹಾಗೆಯೇ ಮಾನವ ಶರೀರದಲ್ಲಿ ಗಂಟು ಮುಖ್ಯವಾದದ್ದು. ಇವುಗಳ ಪ್ರತೀಕವಾಗಿ ಪರ್ವ ಪದದ ಬಳಕೆಯಿದೆ. ಕನ್ನಡದಲ್ಲಿ ಪ್ರಚಲಿತವಿರುವ **ಹಬ್ಬ** ಎನ್ನುವ ಪದ ಪರ್ವ ಪ್ರತಿರೂಪವಾಗಿದೆ. ತೆಲುಗಿನಲ್ಲಿ ಹಬ್ಬಕ್ಕೆ **'ಪಂಡುಗ'** ಎಂದೂ ತಮಿಳಿನಲ್ಲಿ **'ಪಂಡಿಕೈ'** ಎಂದೂ ಮಲೆಯಾಳ ಭಾಷೆಯಲ್ಲಿ **'ಪಂಟಿಕ'** ಎಂಬ ಪದಗಳು ರೂಢಿಯಲ್ಲಿವೆ. ಪಂಡು ಎಂಬ ಪದಕ್ಕೆ ಫಲ ನೀಡುವುದು ಎಂದರ್ಥ. ಮಾಡಿದ ಸತ್ಕಾರ್ಯಗಳು ಫಲಿಸಲು ಪಕ್ವವಾದ ಸಮಯ. ಆದಿಶಂಕರಾಚಾರ್ಯರು ತಮ್ಮ ಗೀತಾಭಾಷ್ಯದಲ್ಲಿ **'ಆತ್ಮವಿಷಯಬುದ್ಧಿಃ ಪಂಡಾ ಇತ್ಯಭಿಧೀಯತೇ'** ಅಂದರೆ ತನ್ನ ಆತ್ಮದ ಬಗೆಗಿನ ತಿಳಿವಳಿಕೆಗೆ **ಪಂಡಾ** ಎಂದು ವ್ಯಾಖ್ಯಾನಿಸಿ, ಆತ್ಮಜ್ಞಾನವಿದ್ದವರನ್ನು ಪಂಡಿತ ಎಂದು ತಿಳಿಸುತ್ತಾರೆ. ಹಿಂದಿ ಭಾಷೆಯಲ್ಲಿ **'ತ್ಯೋಹಾರ್'** ಎಂಬ ಪದದ ಬಳಕೆಯಿದೆ. ಇದು ತಿಥಿ ಹಾಗೂ ವಾರ, ಈ ಎರಡು ಶಬ್ದಗಳ ಸಂಯೋಜನೆಯಿಂದ ನಿಷ್ಪನ್ನವಾಗಿದೆ.

ಇಂಗ್ಲಿಷ್ ಭಾಷೆಯಲ್ಲಿ ಫೆಸ್ಟಿವಲ್ (Festival) ಎಂಬ ಪದವು ರೂಢಿಯಲ್ಲಿದೆ. Feast, Festivity ಎಂಬ ಸಂವಾದಿ ಪದಗಳನ್ನು ಗಮನಿಸಿದಾಗ, ಸಂತೋಷದ ದಿನ,

ಅತಿಥಿ ಅಭ್ಯಾಗತರಿಗೆ, ಭೋಜನಕೂಟ, ಯಾವುದಾದರೂ ಮಹತ್ವದ ಘಟನೆಯನ್ನು ಸ್ಮರಿಸುವ ದಿನ ಎಂದಾಗುತ್ತದೆ. ಭಾರತೀಯ ಪರಂಪರೆಯ ಹಬ್ಬದಲ್ಲಿ **ಯೋಗ(ಆತ್ಮಾನಂದ)** ಹಾಗೂ **ಭೋಗ(ಇಂದ್ರಿಯಾನಂದ)** ಎರಡೂ ಸಮ್ಮಿಳಿತವಾಗಿವೆ.

ಆದರೆ ಇತ್ತೀಚಿನ ದಿನಗಳಲ್ಲಿ ಭಾರತೀಯರ ಮನೆಗಳಲ್ಲೂ ಹಬ್ಬಗಳು ಭೋಗಕ್ಕೆ ಮಾತ್ರ ಸೀಮಿತವಾಗುತ್ತಿರುವುದು ವಿಷಾದನೀಯ ಸಂಗತಿಯಾಗಿದೆ. ಇದರ ಬಗ್ಗೆ ಎಚ್ಚರಗೊಳ್ಳಬೇಕಾದದ್ದು ಕಾಲದ ಕರೆಯಾಗಿದೆ. ಕೆಲವು ವಿದೇಶಿ ಆಚರಣೆಗಳು ನಮ್ಮ ಶಾಲಾ-ಕಾಲೇಜುಗಳಲ್ಲಿ, ಸಮಾಜದಲ್ಲಿ, ಮನೆಗಳಲ್ಲೂ ನಮಗೆ ಅರಿವಿಲ್ಲದಂತೆಯೇ ಆಕ್ರಮಿಸಿವೆ. ನಮಗೆ ಇದರ ಬಗ್ಗೆ ತೀವ್ರವಾದ ಅಸಮಾಧಾನವಿದ್ದರೂ ಏನನ್ನೂ ಮಾಡಲಾಗದೆ ಕಿಂಕರ್ತವ್ಯತಾ ವಿಮೂಢರಾಗಿದ್ದೇವೆ.

ಆಚರಣೆಗಳು ಹೀಗಿದ್ದರೆ ಚೆನ್ನ

ಆದರೂ ಇದರ ಬಗ್ಗೆ ಇಂದು ಜನರಲ್ಲಿ ಸಣ್ಣಮಟ್ಟದ ಜಾಗೃತಿ ಮೂಡಿದೆ. ನಮ್ಮ ಮನೆ ಹಾಗೂ ಸಮಾಜ ದಾರಿ ತಪ್ಪುತ್ತಿದೆ ಎಂಬ ಅರಿವು ಉಂಟಾಗಿ **ನಾವು ನಾವಾಗಬೇಕು** ಎಂಬ ಚಿಂತನೆ ಬೆಳೆಯುತ್ತಿದೆ. ಇದು ಒಳ್ಳೆಯ ಲಕ್ಷಣ, ಹಬ್ಬಗಳ ಆಚರಣೆಯ ಬಗ್ಗೆ ಈ ಅಂಶಗಳನ್ನು ಗಮನಿಸಬೇಕಾದದ್ದು ಸಾಮಯಿಕವಾಗಿದೆ.

ಹಬ್ಬಗಳನ್ನು ನಿಶ್ಚಿತದಿನದಂದೇ ಹಾಗೂ ನಿಶ್ಚಿತ ಸಮಯದಲ್ಲೇ ಆಚರಿಸಬೇಕು.

ಮನೆಯಲ್ಲಿ ಹಿರಿಯರು ಹಾಕಿಕೊಟ್ಟ ಮೇಲ್ಪಂಕ್ತಿಯನ್ನು ಅನುಸರಿಸಬೇಕು(ದೇಶ ಕಾಲಗಳಿಗನುಗುಣವಾಗಿ ಸಣ್ಣಪುಟ್ಟ ಬದಲಾವಣೆಯಿರಬಹುದು)

ಹಬ್ಬಗಳ ಆಚರಣೆಯ ಹಿನ್ನೆಲೆ, ಸಂದೇಶ ಇತ್ಯಾದಿಗಳನ್ನು ತಿಳಿಯಬೇಕು; ಇತರರಿಗೂ ತಿಳಿಸಬೇಕು.

ಹಬ್ಬದ ದಿನಗಳಂದು ತಮ್ಮ ವಂಶದ ಹಿರಿಯರನ್ನು ವಂದಿಸಿ ಅವರ ಆಶೀರ್ವಾದ ಪಡೆಯಬೇಕು.

ಹಬ್ಬದ ಆಚರಣೆಗೆ ತುಂಬ ಹಣ ಬೇಕು ಎಂಬ ಚಿಂತನೆ ಸರಿಯಲ್ಲ.

ಹಬ್ಬಗಳ ಆಚರಣೆಯಿಂದ ಮನಸ್ಸಿನ ಶಾಂತಿ ಹೆಚ್ಚಬೇಕು. ಇದಕ್ಕಾಗಿ ಮನೆಯ ಶುದ್ಧಿ, ವಿಶೇಷ ಪೂಜೆಗೆ ಆಹಾರ ತಯಾರಿ, ಇತ್ಯಾದಿಗಳಿಗೆ ಎಲ್ಲರೂ ಸಹಕರಿಸಬೇಕು. ಇದರಿಂದಾಗಿ ಪರಸ್ಪರ ಸಂಬಂಧವು ವರ್ಧಿಸಬೇಕು. ತಿಂಡಿ ತಿನಿಸುಗಳನ್ನು ಶುದ್ಧಮನಸ್ಸಿನಿಂದ ಮನೆಯಲ್ಲೇ ತಯಾರಿಸಿ ದೇವರಿಗೆ ನಿವೇದಿಸುವುದು. ಅನಂತರ ಅದನ್ನು ಬಂಧುಮಿತ್ರರೊಂದಿಗೆ ಹಂಚಿಕೊಂಡು ಸೇವಿಸುವುದರಲ್ಲಿ ಇರುವ ಆನಂದ, ತೃಪ್ತಿ

ಇತ್ಯಾದಿಗಳು ಬೇಕರಿಗಳಿಂದ, ಇನ್ನಿತರ ಅಂಗಡಿಗಳಿಂದ ಕೊಂಡು ತಂದ ತಿನಿಸುಗಳನ್ನು ಸೇವಿಸಿದಾಗ ಇರುವುದಿಲ್ಲ.

ಒಂದೊಂದು ಹಬ್ಬವೂ ಒಂದೊಂದು ದೇವತೆಗೆ ಸಂಬಂಧಿಸಿದಂತಿರುತ್ತದೆ. ಆ ದೇವತೆಗೆ ಸಂಬಂಧಿಸಿದ ಸರಳಸ್ತೋತ್ರ, ಹಾಡು, ಇತ್ಯಾದಿಗಳನ್ನು ಎಲ್ಲರೂ ಸಾಮೂಹಿಕವಾಗಿ ದೇವರಿಗೆ ಸಮರ್ಪಿಸುವಂತೆ ಆಗಬೇಕು.

ದೇವತೆಗಳ ಆವಾಹನೆ, ಅಭಿಷೇಕ, ಧೂಪ, ದೀಪ, ನೈವೇದ್ಯ, ನೀರಾಜನ(ಮಂಗಳಾರತಿ) ಪ್ರದಕ್ಷಿಣೆ, ಸಾಷ್ಟಾಂಗ ಪ್ರಣಾಮ (ಗಂಡಸರಿಗೆ ವಿಧಿಸಿರುವುದು), ಷಡಂಗ ಪ್ರಣಾಮ(ಹೆಂಗಸರು ಮಾಡಬೇಕಾದದ್ದು), ಆಪೋಶನ, ಹಸ್ತೋದಕ, ಜಾಗರಣೆ, ಉಪವಾಸ, ಪಾರಣೆ, ದೀಕ್ಷೆ, ಆಮಂತ್ರಣ, ನಿಮಂತ್ರಣ (ಹಿರಿಯರ ಕಿರಿಯರಿಗೆ ಶ್ರಾದ್ಧಕ್ಕೆ ನೀಡುವ ಆಹ್ವಾನ), ಪಂಚಗವ್ಯ, ಪಂಚಾಮೃತ ಇತ್ಯಾದಿ ಪಾರಿಭಾಷಿಕಪದಗಳ ಬಗ್ಗೆ ಅಂದು ತಿಳಿಸಬೇಕು.

ಹಿಂದೂ ಹಬ್ಬಗಳಿಗೆ ಪಂಚಾಂಗವೇ ಆಧಾರ. ಹೀಗಾಗಿ ತಿಥಿ, ವಾರ, ನಕ್ಷತ್ರ, ಕರಣ, ಯೋಗ – ಈ ಐದರ ಬಗ್ಗೆ ತಿಳಿಸಬೇಕು.

ಪ್ರತಿದಿನ ಮನೆಯಲ್ಲಿ ಘಂಟಾನಾದ ನಡೆಯಬೇಕು, ಹಬ್ಬಗಳ ದಿನಗಳಂದು ಜಾಗಟೆ, ಶಂಖ, ತಾಳಗಳ ಉಪಯೋಗವನ್ನು ಮಾಡಬೇಕು(ಪ್ರತಿದಿನವೂ ಇವುಗಳನ್ನು ಬಳಸುವ ಒಳ್ಳೆಯ ಪದ್ಧತಿಯನ್ನು ಈಗಲೂ ಬಹಳಷ್ಟು ಮಂದಿ ಅನುಸರಿಸುತ್ತಿದ್ದಾರೆ)

ಹಬ್ಬಗಳ ಮಹತ್ತ್ವವನ್ನು ತಿಳಿಸುವ ಪ್ರಮಾಣಬದ್ಧ ಪುಸ್ತಕವು ಮನೆಗಳಲ್ಲಿರಬೇಕು. ವಿಶೇಷ ದಿನಗಳಂದು ಇದನ್ನು ಓದಬೇಕು. ಹೀಗೆಯೇ ಯುಗಾದಿಯಂದು ಆರಂಭವಾಗುವ ವಸಂತ ನವರಾತ್ರಿ ದಿನಗಳಲ್ಲಿ ರಾಮಾಯಣದ ಪಾರಾಯಣ, ಗುರು ಪೂರ್ಣಿಮೆಯಂದು ಮಹಾಭಾರತದ ಓದುವಿಕೆ, ಕೃಷ್ಣಾಷ್ಟಮಿಯಂದು ಭಾಗವತದ ಪಾರಾಯಣ, ಶರನ್ನವರಾತ್ರಿ ದಿನಗಳಂದು ದೇವೀಭಾಗವತ, ದೀಪಾವಳಿಯಂದು ವಾಮನಾವತಾರದ ಕಥಾನಕ ಇತ್ಯಾದಿಗಳನ್ನು ಓದಬೇಕು. ಮನೆಯಲ್ಲಿ ಎಲ್ಲರ ಸೌಕರ್ಯದ ಸಮಯವನ್ನು ನಿಶ್ಚಯಿಸಿ, ಆಗ ಒಬ್ಬರು ಓದುವುದು, ಇತರರೆಲ್ಲರೂ ಅದನ್ನು ಭಕ್ತಿಯಿಂದ ಕೇಳುವಂತಾದರೆ, ಅದು ಉತ್ತಮ ಬೆಳವಣಿಗೆ.

ಹಬ್ಬಗಳ ದಿನಗಳಂದು ನಡೆಯುವ ಪೂಜೆಗಾಗಿ ತಾಮ್ರ, ಹಿತ್ತಾಳೆ, ಕಂಚಿನ ಪಾತ್ರೆಗಳನ್ನು ಬಳಸುವುದು ಆರೋಗ್ಯಕರ ಹಾಗೂ ಹಿತಕರ(ಪ್ರತಿನಿತ್ಯದ ಪೂಜೆಯಲ್ಲೂ ಇದೇ ಒಳ್ಳೆಯದು).

ಹಬ್ಬದ ದಿನಗಳಂದು ದೇಶೀಯ ಪರಂಪರೆಯ ಉಡುಗೆ–ತೊಡುಗೆಗಳನ್ನು ಧರಿಸಬೇಕು. ಎಲ್ಲೆಡೆ ಹಿಂದುತ್ವದ ಧ್ವನಿಯಿರಬೇಕು.

ಸಾಂಕೇತಿಕ ಅರ್ಥ

ಹಬ್ಬಗಳನ್ನು ಆಚರಿಸುವ ಹಿನ್ನೆಲೆಯಲ್ಲಿ ಹಲವು ಪ್ರಾಚೀನ ಘಟನೆಗಳ ಸಾಂಕೇತಿಕ ಅರ್ಥವನ್ನು ತಿಳಿಸಬೇಕಾದದ್ದು ಅತ್ಯಾವಶ್ಯಕ. ಉದಾಹರಣೆಗೆ ಗಣೇಶ – ಎಲ್ಲ ಗಣಗಳಿಗೂ ಪ್ರಭು, ಅವನು ಆಕಾಶದ ಅಭಿಮಾನೀ ದೇವತೆ. ಅಂದರೆ ಅವನು ಸರ್ವವ್ಯಾಪಿ. ಸೊಂಡಿಲು ಪ್ರಣವದ ದ್ಯೋತಕ. (ಓಂಕಾರವು ಸಮಸ್ತ ವಿಶ್ವದ ಸಂಜ್ಞೆ) ದೊಡ್ಡ ಹೊಟ್ಟೆಯು ಬ್ರಹ್ಮಾಂಡದ ಸಂಕೇತ. ಕೈಯಲ್ಲಿ ಹಿಡಿದಿರುವ ಸಿಹಿಮೋದಕವು ವಿದ್ಯೆಯ ಸವಿಯನ್ನು ಪ್ರತಿಬಿಂಬಿಸುತ್ತದೆ.

ಶ್ರೀಕೃಷ್ಣನು ನರಕಾಸುರನನ್ನು ಸಂಹರಿಸಿದ ಬಳಿಕ, ಅವರ ಬಂಧನದಲ್ಲಿದ್ದ ೧೬೦೦೦ ಸ್ತ್ರೀಯರನ್ನು ತನ್ನ ಹೆಂಡತಿಯರನ್ನಾಗಿ ಮಾಡಿಕೊಂಡನು ಎಂಬ ವಿಚಾರವನ್ನು ವಿಮರ್ಶಿಸಿದಾಗ, ಆತನು ಅವರಿಗೆ ರಕ್ಷಣೆ ನೀಡಿ, ಅವರ ಪತಿ–ಪ್ರಭುವಾದನು; ಅಂದರೆ ಅವರ ಸಂರಕ್ಷಣೆ, ಪಾಲನೆ ಇತ್ಯಾದಿಗಳು ಆತನ ಜವಾಬ್ದಾರಿ ಎಂದರ್ಥ. ಕೃಷ್ಣ ಎಂಬ ತತ್ತ್ವ ಅತಿ ನಿಗೂಢ. ಅದನ್ನು ನಾವು ನಮ್ಮ ಸೀಮಿತದೃಷ್ಟಿಕೋನ, ಚಿಂತನೆಯಿಂದ ಅಳತೆ ಮಾಡಲು ಸರ್ವಥಾ ಸಾಧ್ಯವಿಲ್ಲ. ಅನೇಕ ಕಡೆ ಇಂತಹ ಪ್ರಸಂಗಗಳನ್ನು ಆಲಂಕಾರಿಕರೂಪಕವನ್ನಾಗಿ ತಿಳಿಯಬೇಕೇ ಹೊರತು ಐತಿಹಾಸಿಕ ಘಟನೆಯೆಂಬುದಾಗಿ ತಿಳಿಯಬಾರದು. ವಾಮನ–ತ್ರಿವಿಕ್ರಮ ವೃತ್ತಾಂತದ ಮರ್ಮವೂ ಇದೇ ಆಗಿದೆ. ಇದರಲ್ಲಿ ವಿಷ್ಣುವಿನ ಅನುಗ್ರಹಬುದ್ಧಿಯು ಇರುವುದನ್ನು ಅರಿಯಬೇಕು. ಬಲಿಯ ತಲೆಯ ಮೇಲೆ ವಾಮನನು ತನ್ನ ದಿವ್ಯಪಾದವನ್ನು ಇರಿಸಿ, ಅವನ ಆಸುರೀಭಾವವನ್ನು ನೀಗಿಸಿ, ಅವನನ್ನು ಶುದ್ಧಾತ್ಮನನ್ನಾಗಿ ಮಾಡಿದ. ಇದು ಭಕ್ತನಾದ ಬಲಿಯನ್ನು ಅನುಗ್ರಹಿಸಿದ ರೀತಿ.

ಬಲಿಗೆ ರಾಜ್ಯದ ಭೋಗಗಳ ಬಗ್ಗೆ ಆಸೆಯಿತ್ತು. ಹೀಗಾಗಿ ಆತನಿಗೆ ಪಾತಾಳಲೋಕದ ರಾಜ್ಯವನ್ನು ಭಗವಂತನು ನೀಡಿದನು. ಇದರಿಂದ ತೃಪ್ತಿ, ಸಂತೋಷ ಹೊಂದಿದ ಬಲಿಯು ಪರಮಭಾಗವತೋತ್ತಮರಲ್ಲಿ ಪರಿಗಣಿತನಾದನು. ಇಂತಹ ಅಚಲಭಕ್ತಿಯುಳ್ಳ ಬಲಿಯ ದ್ವಾರಪಾಲಕನಾಗಿ ಶ್ರೀಕೃಷ್ಣನು ನಿಂತದ್ದನ್ನು ಒಂದು ಅಸಾಧಾರಣ ಪ್ರಸಂಗವೆಂಬುದನ್ನು ತಿಳಿಯಬೇಕು. ಆದ್ದರಿಂದಲೇ ಬಲೇರ್ದ್ವಾರಿ ಗದಾಪಾಣಿಃ ಎಂಬ ವಾಕ್ಯದಂತೆ ಬಲಿಪಾಡ್ಯಮಿಯನ್ನು ಆಚರಿಸಲಾಗುತ್ತದೆ.

ನವರಾತ್ರಿಯ ಉತ್ಸವವು ಮುಖ್ಯವಾಗಿ ದುಷ್ಟರ ಸಂಹಾರ, ಸಜ್ಜನರರಕ್ಷಣೆ, ಇದೊಂದು ಮಹಾತತ್ತ್ವ, ಇದು ಎಂದೆಂದಿಗೂ ಸಲ್ಲುತ್ತದೆ. **ರಾಮಾಯ ಸ್ವಸ್ತಿ; ರಾವಣಾಯ ಸ್ವಸ್ತಿ** ಎಂದು ಎರಡನ್ನೂ ಹೇಳುತ್ತ ಖಾಜೀನ್ಯಾಯ ಮಾಡುವುದು ಎಂದೆಂದಿಗೂ ಯಾರಿಗೂ

ಒಳಿತಲ್ಲ. **ಅಧರ್ಮಸ್ಯ ನಾಶ:; ಧರ್ಮಸ್ಯ ಜಯ:** ಎಂಬುದು ಸಾರ್ವಕಾಲಿಕ ಸತ್ಯ. **ದುರ್ಜನ: ಸಜ್ಜನೋ ಭೂಯಾತ್** ಎಂದು ಆಶಿಸಬಹುದು. ಅದರಂತೆ ಆದರೆ ಒಳ್ಳೆಯದು. ಹಾಗಿಲ್ಲದಿದ್ದರೆ ದುರ್ಜನರ ದಂಡನೆ, ವಧೆ ಆಗಲೇಬೇಕು. ಇಲ್ಲಿ ಯಾವುದೇ ವ್ಯಕ್ತಿಯ ವಿರುದ್ಧ ಹೋರಾಟವಲ್ಲ. ಆ ವ್ಯಕ್ತಿಯು ಬೆಳೆಸಿಕೊಂಡ ಜೀವನಾಶದ ಕುತ್ಸಿತ ಬುದ್ಧಿಯ ವಿರುದ್ಧ ಹೋರಾಟ. ಇದು ಇತರ ದುಷ್ಟರಿಗೆ ಎಚ್ಚರಿಕೆಯ ಘಂಟೆಯಾಗಬೇಕು. ವಾಲ್ಮೀಕಿಮಹರ್ಷಿಗಳು ಶತ್ರುಘ್ನನ ಬಗ್ಗೆ ಹೇಳುವಾಗ **ಶತ್ರುಘ್ನೋ ನಿತ್ಯಶತ್ರುಘ್ನ:** ಎಂದು ತಿಳಿಸಿರುವುದನ್ನು ಗಮನಿಸಬೇಕು. ಮೈಸೂರಿನ ಚಾಮುಂಡಿಬೆಟ್ಟದಲ್ಲಿ ವಿಶ್ವವಿಖ್ಯಾತ ದಸರಾ ಮಹೋತ್ಸವದ ಉದ್ಘಾಟನೆಯು ನಡೆಯುತ್ತದೆ. ಇದರ ಉದ್ಘಾಟನೆಗೆಂದು ನವರಾತ್ರಿ ಉತ್ಸವಕ್ಕೆ ಸರ್ಕಾರದಿಂದ ಆಮಂತ್ರಿತರಾದ ಬುದ್ಧಿ (?) ಜೀವಿ ಕನ್ನಡ ಪ್ರಾಧ್ಯಾಪಕರೊಬ್ಬರು, **'ಸಂಹಾರಸಂಸ್ಕೃತಿ ನಮ್ಮದಲ್ಲ'** ಎಂದು ಭಾಷಣ(ಭೀಷಣ) ಬಿಗಿದಿದ್ದರು. ಇಂತಹ ಸರ್ಕಾರೀಕೃಪಾಪೋಷಿತ ಪ್ರಾಧ್ಯಾಪಕರ ಚಿಂತನೆಗಳ ಬಗ್ಗೆ ಎಚ್ಚರದಿಂದಿರಬೇಕು.

ಹಬ್ಬಗಳು ಪ್ರತಿದಿನದ ಏಕತಾನತೆಯನ್ನು ದೂರಮಾಡಿ ಹೊಸತನವನ್ನು ನೀಡುತ್ತವೆ. ಇವುಗಳ ಆಚರಣೆಯಲ್ಲಿ ಕೆಲವು ವಿಕೃತಿಗಳೂ ಹುಟ್ಟಿಕೊಂಡಿವೆ. ಬೆಳೆಯ ಜೊತೆಗೆ ಕಳೆಗಳೂ ಹುಟ್ಟಿ ಬೆಳೆಯುವುದು ಸಹಜ. ಕಳೆಗಳನ್ನು ತೆಗೆಯುವಾಗ ಬೆಳೆಯು ಹಾಳಾಗದಂತೆ ಎಚ್ಚರ ವಹಿಸಬೇಕು. ಹಬ್ಬಗಳ ಆಚರಣೆಯ ವಿಕೃತಿಗಳನ್ನು ತಿಳಿದು ಅದನ್ನು ದೂರಮಾಡುವ ಸಾಮರ್ಥ್ಯ ಸಾಮಾನ್ಯ ಜನರಿಗಿರುವುದಿಲ್ಲ. ಪೂರ್ವಗ್ರಹ ಚಿಂತನೆರಹಿತರಾದ ಅನುಭಾವಿ ಜನರಿಂದ ಮಾತ್ರ ಅದು ಸಾಧ್ಯವಾಗುತ್ತದೆ. ಅಂತಹ ಜನರ ಸೃಷ್ಟಿಯು ಮನೆಗಳಲ್ಲೇ ಹಬ್ಬಗಳ ಮೂಲಕವೇ ಆಗುತ್ತದೆ ಎಂಬುದು ಸತ್ಯಸಂಗತಿಯಾಗಿದೆ.

ಕೊಳ್ಳುಬಾಕ ಸಂಸ್ಕೃತಿ

- ಪ್ರೊ.ಆರ್. ಇಂದಿರಾ, ಮೈಸೂರು
ನಿವೃತ್ತ ಪ್ರಾಧ್ಯಾಪಕರು, ಲೇಖಕರು
೯೪೪೮೦೫೭೧೬೮೦

ಭಾರತದಲ್ಲಿ ೧೯೯೦ರ ದಶಕದಲ್ಲಿ ಆರಂಭವಾದ ಜಾಗತೀಕರಣದ ಪ್ರಕ್ರಿಯೆ ತಂದ ಒಂದು ಗಮನಾರ್ಹವಾದ ಬೆಳವಣಿಗೆಯೆಂದರೆ, ಆಂತರಿಕ ಶಕ್ತಿಗಿಂತ ಬಾಹ್ಯ ನೋಟಕ್ಕೆ ಬೆಲೆ ಕಟ್ಟುವಂಥ ಪ್ರವೃತ್ತಿ, ಈ ಸಮಾಜದ ಉದ್ದಗಲಕ್ಕೂ ಹರಡಿದ್ದು. ಬಂಡವಾಳಶಾಹಿ ಆರ್ಥಿಕ ವ್ಯವಸ್ಥೆ ಬೃಹತ್ ಪ್ರಮಾಣದಲ್ಲಿ ಈ ದೇಶವನ್ನು ಪ್ರವೇಶಿಸಿದ್ದೇ ಇದಕ್ಕೆ ಮುಖ್ಯ ಕಾರಣ. ಜಾಗತೀಕರಣದ ಫಲಶ್ರುತಿಗಳಾದ ಖಾಸಗೀಕರಣ ಮತ್ತು ಆರ್ಥಿಕ ಉದಾರೀಕರಣ ಭಾರತೀಯ ಆರ್ಥಿಕ ವ್ಯವಸ್ಥೆಯನ್ನು ಸಾಂಪ್ರದಾಯಿಕ ಸರ್ಕಾರಿ ನಿಯಂತ್ರಿತ ಸ್ಥಿತಿಯಿಂದ, ಅನಿಯಂತ್ರಿತ ಸ್ಪರ್ಧೆಯನ್ನು ಪ್ರೋತ್ಸಾಹಿಸುವ ಮುಕ್ತ ಆರ್ಥಿಕವಲಯವನ್ನಾಗಿ ಪರಿವರ್ತಿಸಿದವು. ಸಹಜವಾಗಿಯೇ ಲಾಭಕೇಂದ್ರಿತ ಬಂಡವಾಳಶಾಹಿ ಧೋರಣೆಗಳು ಹಾಗೂ ಆಚರಣೆಗಳು, ಭಾರತೀಯ ಸಮಾಜ ಆಲೋಚಿಸುವ ರೀತಿಯನ್ನೇ ಬದಲಾಯಿಸಿದವು ಎಂದು ಹೇಳಿದರೆ ಉತ್ಪ್ರೇಕ್ಷೆಯಾಗಲಾರದು.

ಮಾನವಾಭಿವೃದ್ಧಿಗೆ ಆರ್ಥಿಕ ಬೆಳವಣಿಗೆ ಅಗತ್ಯವೆನ್ನುವುದು ನಿಜವೇ ಸರಿ. ಆದರೆ ಇಂದು ಬೆಳೆದಿರುವುದು ಮಾರುಕಟ್ಟೆಗಳೇ ಹೊರತು, ಎಲ್ಲ ವರ್ಗಗಳ ಕೊಳ್ಳುವ ಶಕ್ತಿಯಲ್ಲ. ತೀವ್ರ ಸ್ವರೂಪದ ಸಾಮಾಜಿಕ-ಆರ್ಥಿಕ ಅಸಮಾನತೆಯಿಂದ ನರಳುತ್ತಿರುವ ಈ ದೇಶದಲ್ಲಿ ಕಳೆದ ಒಂದೆರಡು ದಶಕಗಳಲ್ಲಿ ಭಾರಿ ಪ್ರಮಾಣದಲ್ಲಿ ಹೆಚ್ಚಳವನ್ನು ಕಂಡಿರುವ ಮಧ್ಯಮವರ್ಗ ಹಾಗೂ ಸಮಾಜದ ಬಹುತೇಕ ಸಂಪನ್ಮೂಲಗಳನ್ನು ತಮ್ಮ ಹತೋಟಿಯಲ್ಲಿಟ್ಟುಕೊಂಡಿರುವ ಶ್ರೀಮಂತರು ಮಾರುಕಟೆಗಳಲ್ಲಿ ತುಂಬಿರುವ ವಸ್ತುಗಳನ್ನು ಕೊಳ್ಳಲು ಶಕ್ತರೇ ಹೊರತು ಬಡವರಲ್ಲ. ಆದರೂ ಇಂದು ಭಾರತೀಯ ಸಮಾಜ ಉತ್ಪಾದನಾ ಕೇಂದ್ರಿತ ಮಿಶ್ರಆರ್ಥಿಕ ವ್ಯವಸ್ಥೆಯಿಂದ, ಗ್ರಾಹಕ ಸಮಾಜವಾಗಿ ಪರಿವರ್ತಿತವಾಗುತ್ತಿದೆ. ನಮ್ಮ ಬದುಕು ಹೆಚ್ಚು-ಹೆಚ್ಚು ವಾಣಿಜ್ಯೀಕರಣದತ್ತ ವಾಲುತ್ತಿದೆ. ವಾಣಿಜ್ಯೀಕೃತ ಸಂಸ್ಕೃತಿಯ ಪ್ರಧಾನ ಗುರಿಯೇ ಲಾಭ ಗಳಿಕೆ. ಜೀವನಶೈಲಿಯನ್ನು ಕೇಂದ್ರೀಕರಿಸಿ ಮಾರುಕಟ್ಟೆಗಳನ್ನು ಭೋಗವಸ್ತುಗಳಿಂದ ತುಂಬಿ, ತೃಪ್ತ ಜೀವನವನ್ನು ನಡೆಸಲು ಅವುಗಳನ್ನು ಪಡೆಯಲೇ ಬೇಕು ಎನ್ನುವ ಭಾವನೆಯನ್ನು ಸೃಷ್ಟಿಸುವುದೇ ವಾಣಿಜ್ಯೀಕೃತ ಸಂಸ್ಕೃತಿಯ ಧ್ಯೇಯೋದ್ದೇಶ. "ಕಂಡದ್ದನ್ನೆಲ್ಲಾ ಕೊಳ್ಳಬೇಕು" ಎನ್ನುವ

ದುರಾಸೆ ಅನೇಕ ಜನರ ಮನಸ್ಸಿನಲ್ಲಿ ಮೂಡಿಬಂದು ಮಾರುಕಟ್ಟೆಗಳಿಗೆ ಬಂದದ್ದನ್ನೆಲ್ಲಾ ತಮ್ಮದಾಗಿಸಿಕೊಳ್ಳಬೇಕೆಂಬ ಅನಿಯಂತ್ರಿತ ಆಸೆಗಳು ಭಯಹುಟ್ಟಿಸುವ ರೀತಿಯಲ್ಲಿ ಮತ್ತು ಪ್ರಮಾಣದಲ್ಲಿ ಈ ಮಾರುಕಟ್ಟೆಗಳನ್ನು ವಿಸ್ತೃತಗೊಳಿಸುತ್ತಿವೆ. ಇದರ ಪರಿಣಾಮವಾಗಿ ಜನರಿಗೆ ಲಭ್ಯವಿರುವ 'ಕೊಳ್ಳುವ ಆಯ್ಕೆ'ಗಳೂ ವೃದ್ಧಿಸುತ್ತಿವೆ. ಭೋಗ ವಸ್ತುಗಳ ಮಹಾಪೂರವೇ ಇಂದು ಹರಿದು ಬಂದು, ಜೀವನದ ಸಾರ್ಥಕತೆಯಿರುವುದೇ ಈ ವಸ್ತುಗಳ ಒಡೆತನದಲ್ಲಿ ಎಂಬ ಭ್ರಮಾಲೋಕದಲ್ಲಿ ಜನರನ್ನು ತೇಲಿಸುತ್ತಿದೆ. ಒಂದು ರೀತಿಯ ಕೊಳ್ಳುಬಾಕ ಸಂಸ್ಕೃತಿ ಈ ಸಮಾಜವನ್ನು ಆವರಿಸಿಕೊಂಡಿದೆ.

ಈ ಕೊಳ್ಳುಬಾಕ ಸಂಸ್ಕೃತಿಯೇ ಮಾನವರ ಸಹಜ ಗುಣಗಳಲ್ಲಿ ಒಂದಾದ ಅನುಕರಣೆ. ಸ್ನೇಹಿತರು, ನೆರೆಹೊರೆಯವರು, ಸಹೋದ್ಯೋಗಿಗಳು, ಬಂಧುಗಳು ಮುಂತಾದವರ ಬಳಿಯಿರುವ ವಸ್ತುಗಳನ್ನು ತಾವೂ ಹೊಂದಬೇಕು, ಏಕೆಂದರೆ ಇವುಗಳು ಒಂದೆಡೆ ಪ್ರತಿಷ್ಠೆಯ ಸಂಕೇತ, ಮತ್ತೊಂದೆಡೆ ಗುಣಮಟ್ಟದ ಜೀವನದ ಸೋಪಾನ ಎಂಬ ಭ್ರಮೆಯಲ್ಲಿ ಗ್ರಾಹಕರು ಸಿಲುಕಿದ್ದಾರೆ. ಇಲ್ಲಿ 'ಅಗತ್ಯ' ಅಥವಾ 'ಅನಿವಾರ್ಯ' ಎನ್ನುವುದಕ್ಕಿಂತ 'ಆಕರ್ಷಣೆ'ಗೇ ಆದ್ಯತೆ. ತಮ್ಮ ಆರ್ಥಿಕ ಶಕ್ತಿಯನ್ನು ಸಾರ್ವಜನಿಕವಾಗಿ ಪ್ರದರ್ಶನಕ್ಕಿಡಲು ಭೋಗ ವಸ್ತುಗಳನ್ನು ಕೊಳ್ಳುತ್ತಾ ಹೋಗುವ ಪ್ರವೃತ್ತಿಯನ್ನು ಸಮಾಜಶಾಸ್ತ್ರಜ್ಞ ವೆಬ್ಲನ್ ಹತ್ತೊಂಬತ್ತನೇ ಶತಮಾನದಲ್ಲೇ 'ಸುವ್ಯಕ್ತ ಅನುಭೋಗ' ಎಂದು ಬಣ್ಣಿಸಿದ್ದನ್ನು ಇಲ್ಲಿ ಸ್ಮರಿಸಬಹುದು. ಇಂದಿನ ದಿನಗಳಲ್ಲಂತೂ ಕೊಳ್ಳುಬಾಕ ಸಂಸ್ಕೃತಿ ಯಾವ ಮಟ್ಟವನ್ನು ತಲುಪಿದೆಯೆಂದರೆ, ಅನೇಕ ಗ್ರಾಹಕರನ್ನು ಭೋಗ ಜೀವನದ ದಾಸರನ್ನಾಗಿ ಪರಿವರ್ತಿಸಿದೆ. ಈ ಹೊತ್ತು ನಾವು ಕಾಣುತ್ತಿರುವ ಮಾರುಕಟ್ಟೆಗಳ ವೈಭವೀಕರಣವನ್ನು 'ಗ್ರಾಹಕ ಕ್ರಾಂತಿ' ಎಂದು ವರ್ಣಿಸಲಾಗುತ್ತಿದೆ. ನಮ್ಮ ದೇಶದೊಳಗೆ ಬಹುರಾಷ್ಟ್ರೀಯ ಕಂಪನಿಗಳ ಪ್ರವೇಶವಾದ ಮೇಲೆ ಮಾರುಕಟ್ಟೆಗಳಲ್ಲಿ ನಾನಾ ವಿಧಗಳ, ರಂಗುರಂಗಿನ ವಸ್ತುಗಳು ತುಂಬಿಕೊಂಡಿದ್ದೇ ಅಲ್ಲದೆ, ಅವುಗಳನ್ನು ಪಡೆಯುವ ನಾನಾ ಸುಲಭ ಮಾರ್ಗಗಳೂ ಗ್ರಾಹಕರ ಮುಂದೆ ತೆರೆದುಕೊಳ್ಳಲಾರಂಭಿಸಿದವು. ಐಷಾರಾಮಿ ಕಾರುಗಳಿಂದ ಹಿಡಿದು ದಿನನಿತ್ಯದ ಬಳಕೆಯ ವಸ್ತುಗಳವರೆಗೆ ಸುಲಭ ಕಂತುಗಳಲ್ಲಿ ಏನನ್ನು ಬೇಕಾದರೂ ಪಡೆಯಬಹುದು ಎಂಬ ಭ್ರಮಾಲೋಕದಲ್ಲಿ ಗ್ರಾಹಕರನ್ನು ಬಂಧಿಸುವುದರ ಜೊತೆಗೆ, ಒಂದೇ ವಸ್ತುವಿನ ಬಗೆಬಗೆಯ ಮಾದರಿಗಳನ್ನು ಕೂಡ ಗ್ರಾಹಕರ ಮುಂದೆ ಇಟ್ಟಿದ್ದರಿಂದಲೇ ಜನರ ಆಸೆಗಳ ವಲಯದ ಸೀಮಾ ರೇಖೆಗಳೇ ಮರೆಯಾಗುತ್ತಾ ಹೋದವು. ಇದರ ಜೊತೆಗೆ ಕೊಂಡ ತಕ್ಷಣ ನಗದು ಹಣವನ್ನು ಪಾವತಿಸದೆ ಕ್ರೆಡಿಟ್ ಕಾರ್ಡ್ ನೀಡಿ ಲೆಕ್ಕ ಚುಕ್ತಾ ಮಾಡಿಬಿಡಬಹುದು ಎಂಬ ಆಯ್ಕೆಯನ್ನೂ ಗ್ರಾಹಕರ ಮುಂದೆ ಇಟ್ಟಿದ್ದರಿಂದ ಕೊಳ್ಳುಬಾಕ ಸಂಸ್ಕೃತಿ ಗರಿಕೆದರಿ ಕುಣಿಯಲಾರಂಭಿಸಿತು.

ಕಂತುಗಳು ಹಾಗೂ ಕ್ರೆಡಿಟ್ ಕಾರ್ಡುಗಳ ಮೂಲಕ ಮನಸ್ಸು ಬಯಸಿದ ವಸ್ತುಗಳನ್ನು ಪಡೆಯಬಹುದೆನ್ನುವ ಕೆಟ್ಟ ಧೈರ್ಯವೇ ಗ್ರಾಹಕರಲ್ಲಿ ಇನ್ನೂ ಹೆಚ್ಚು ಹೆಚ್ಚು ಬೇಕೆನ್ನುವ ಆಸೆಯನ್ನು ಸೃಷ್ಟಿಸಿದ್ದು. ಆದರೆ ಈ ಪ್ರವೃತ್ತಿಯಿಂದ ಎಷ್ಟೋ ಜನ ಹೊರಬರಲಾರದಂಥ ಸಂಕಷ್ಟ ಪರಿಸ್ಥಿತಿಗಳಲ್ಲಿ ಸಿಲುಕಿಹಾಕಿಕೊಂಡಿದ್ದೇ ಅಲ್ಲದೆ, ಸಾಲದ ವಿಷವರ್ತುಲದಲ್ಲಿ ಬಂಧಿಗಳಾಗಿದ್ದಾರೆ. ಕಂತುಗಳಲ್ಲೇ ಹಣ ಪಾವತಿಸಲಿ, ಕ್ರೆಡಿಟ್ ಕಾರ್ಡಿನ ಮೂಲಕ ಹಣ ಪಾವತಿಸಲಿ ಖರ್ಚು ಖರ್ಚು ತಾನೇ? ಇಂಥ ಸೌಲಭ್ಯಗಳನ್ನು ನೀಡುವ ಯಾವುದೇ ಆರ್ಥಿಕ ವ್ಯವಸ್ಥೆ ಸ್ವತಃ ಲಾಭಗಳಿಕೆಯ ಸ್ವಾರ್ಥವಿಲ್ಲದೆ ಗ್ರಾಹಕರಿಗೆ ನೆರವಾಗಬೇಕೆಂಬ ಏಕೈಕ ಉದ್ದೇಶವನ್ನು ಹೊಂದಲು ಸಾಧ್ಯವೇ? ಅಸಲನ್ನು ತೀರಿಸುವುದಿರಲಿ, ದಿನೇ ದಿನೇ ಹೆಚ್ಚುತ್ತಾ ಹೋಗುವ ಬಡ್ಡಿಯನ್ನು ಕೂಡ ತೀರಿಸಲಾಗದ ಸ್ಥಿತಿಗೆ ತಳ್ಳಲ್ಪಟ್ಟು ದಿವಾಳಿತನದ ಸ್ಥಿತಿಗೆ ತಲುಪಿರುವ ಅನೇಕ ಗ್ರಾಹಕರ ನಿದರ್ಶನಗಳು ನಮ್ಮ ಮುಂದೆ ಇದ್ದರೂ, ಈ ಕೊಳ್ಳುಬಾಕ ಸಂಸ್ಕೃತಿಯ ಹಿಡಿತದಿಂದ ಈ ಸಮಾಜ ಹೊರ ಬಂದಂತಿಲ್ಲ.

ಒಂದು ಕಾಲದಲ್ಲಿ ಹತ್ತು ರೂಪಾಯಿಗಳನ್ನು ಪಡೆಯಲು ಕೂಡ ಕಷ್ಟಪಡಬೇಕಾದ ಸ್ಥಿತಿಯಿತ್ತು. ಆದರೆ ಇಂದು ಲಕ್ಷಾಂತರ ರೂಪಾಯಿಗಳ ಸಾಲವನ್ನು ನೀಡಲು ಬ್ಯಾಂಕುಗಳು, ಕ್ರೆಡಿಟ್ ಕಾರ್ಡ್ ಸಂಸ್ಥೆಗಳು, ಖಾಸಗಿ ಕಂಪನಿಗಳು ಸಾಲು ಸಾಲಾಗಿ ನಿಂತಿವೆ. ನಿರಂತರವಾಗಿ ನಮ್ಮನ್ನು ಕಾಡುವ ದೂರವಾಣಿ ಕರೆಗಳು ಹಾಗೂ ಸಂದೇಶಗಳೇ ಇದಕ್ಕೆ ಸಾಕ್ಷಿ. ಸುಸಜ್ಜಿತ ಮನೆಗಳು ಅಥವಾ ಖಾಲಿ ನಿವೇಶನಗಳಿಂದ ಹಿಡಿದು ಬಗೆಬಗೆಯ ಭೋಗ ವಸ್ತುಗಳವರೆಗೆ, ಯಾವುದನ್ನು ಪಡೆಯಲು ಬೇಕಾದರೂ ಸಾಲ ದೊರೆಯುತ್ತದೆ. ಸುಲಭ ಬಡ್ಡಿದರದಲ್ಲಿ, ಸುಲಭ ಕಂತುಗಳಲ್ಲಿ ದೊರೆಯುವ ಈ ಸಾಲದ ಸೌಲಭ್ಯದ ಹಿಂದಿರುವ 'ಮುಚ್ಚಿದ ಖರ್ಚು'ಗಳ ಅಂದಾಜು ನಮಗೆ ಗೋಚರವಾಗುವುದೇ ಈ ಹಣವನ್ನು ಹಿಂದಿರುಗಿಸಲಾರಂಭಿಸಿದಾಗ. ಗ್ರಾಹಕ ದೌರ್ಬಲ್ಯದ ಸಂಪೂರ್ಣ ಪ್ರಯೋಜನವನ್ನು ಪಡೆದ ಕಂಪೆನಿಗಳ ಮಹಾನ್ ಸ್ವಾರ್ಥ ನಮಗೆ ಅರ್ಥವಾಗುವ ವೇಳೆಗೆ, ನಾವು ಸಂಕಷ್ಟವೆಂಬ ಸಾಗರದಲ್ಲಿ ಬಹುದೂರ ಪಯಣಿಸಿರುತ್ತೇವೆ. ಈಜಬೇಕು ಇಲ್ಲ ಮುಳುಗಬೇಕು ಇದೊಂದೇ ನಮಗಿರುವ ಆಯ್ಕೆ. ಗ್ರಾಹಕರನ್ನು ಸಮ್ಮೋಹಸ್ಥಿತಿಗೆ ತಳ್ಳುವುದರಲ್ಲಿ ಮಾಧ್ಯಮಗಳ ಪಾತ್ರದ ಬಗ್ಗೆ ಪ್ರಸ್ತಾಪಮಾಡದಿದ್ದರೆ ಕೊಳ್ಳುಬಾಕ ಸಂಸ್ಕೃತಿಯ ಚರ್ಚೆ ಅಪೂರ್ಣವಾಗುತ್ತದೆ. ಕಳೆದ ಒಂದು ದಶಕದಲ್ಲಿ ವಿದ್ಯುನ್ಮಾನ ಮಾಧ್ಯಮಗಳು ಮತ್ತು ಅಂತರ್‌ಜಾಲ ತಾಣಗಳಲ್ಲಿ ನಾವು ಕಂಡಿರುವ ಬೆಳವಣಿಗೆ ಭೋಗ ವಸ್ತುಗಳನ್ನು ಅನುಭೋಗಿಸಬೇಕೆಂಬ ಆಸೆಗಳಿಗೆ ಮತ್ತಷ್ಟು ಪ್ರಚೋದನೆಯನ್ನು ನೀಡಿದೆ. ನಿರಂತರವಾಗಿ ಜನರನ್ನು ಕಾಡುವ ಬಗೆಬಗೆಯ ಜಾಹಿರಾತುಗಳು ಮಾನವ ಜೀವನದ ಪ್ರತಿಯೊಂದು ಸಮಸ್ಯೆಗೂ ಪರಿಹಾರವನ್ನು ಸೂಚಿಸುವ ಶಕ್ತಿಯನ್ನು ಹೊಂದಿವೆಯೇನೋ ಎಂಬಂಥ ರೀತಿಯಲ್ಲಿ ಭೋಗ ವಸ್ತುಗಳನ್ನು ಬಿಂಬಿಸಿ, ಗ್ರಾಹಕರನ್ನು ಭ್ರಮಾಲೋಕಕ್ಕೆ ಕರೆದೊಯ್ದು

ಅವರನ್ನು ಒಂದು ರೀತಿಯ 'ಬಲವಂತದ ಕೊಳ್ಳುವಿಕೆ'ಯ ಸ್ಥಿತಿಗೆ ತಳ್ಳುತ್ತವೆ. ಇಂಥ ಜಾಹಿರಾತುಗಳಲ್ಲಿ ಮುಂಚೂಣಿಯಲ್ಲಿರುವಂಥವು ಸೌಂದರ್ಯ ವರ್ಧಕಗಳು, ದ್ವಿಚಕ್ರ ವಾಹನಗಳು, ಕಾರುಗಳು, ಕಟ್ಟಡಗಳು ಅಥವಾ ನಿವೇಶನಗಳು, ಗೃಹಬಳಕೆ ಮತ್ತು ಗೃಹಾಲಂಕಾರ ವಸ್ತುಗಳು – ಇವುಗಳಿಗೆ ಸಂಬಂಧಿಸಿದ್ದು. ಈ ಜಾಹಿರಾತುಗಳ ಪ್ರಭಾವ ಎಷ್ಟು ಪ್ರಬಲವಾಗಿದೆಯೆಂದರೆ ಅದೇ ಒಂದು ಬೃಹತ್ ಉದ್ದಿಮೆಯಾಗಿ ಬೆಳೆದಿದ್ದು, ಎಲ್ಲ ಖಾಸಗಿ ಮಾಧ್ಯಮಗಳು ತಮ್ಮ ಉಳಿವಿಗಾಗಿ ಜಾಹಿರಾತು ಉದ್ಯಮಿಗಳನ್ನು ಆಶ್ರಯಿಸಬೇಕಾದಂಥ ಸ್ಥಿತಿಯನ್ನು ತಲುಪಿವೆ. ಲಾಭ ಗಳಿಕೆಯನ್ನೇ ಏಕೈಕ ಉದ್ದೇಶವನ್ನಾಗಿ ಹೊಂದಿರುವ ಮಾಧ್ಯಮಗಳು ತಮ್ಮ ಸಾಮಾಜಿಕ ಜವಾಬ್ದಾರಿಯನ್ನು ಸಂಪೂರ್ಣವಾಗಿ ಬದಿಗೊತ್ತಿದಂತಿದೆ.

ವಾಣಿಜ್ಯೀಕೃತ ಸಂಸ್ಕೃತಿ ಈ ಹೊತ್ತು ಎಷ್ಟು ಆಳವಾಗಿ ನಮ್ಮ ದೇಶದಲ್ಲಿ ಬೇರೂರಿದೆಯೆಂದರೆ, ದೇಶದ ಉದ್ದಗಲಕ್ಕೂ ನಾವು ಎಲ್ಲೇ ಹೋಗಲಿ ಸಣ್ಣಪುಟ್ಟ ಅಂಗಡಿಗಳಿಂದ ಹಿಡಿದು ದೊಡ್ಡ ಮಾಲುಗಳವರೆಗೆ ಎಷ್ಟೋ ಬಾರಿ ಅಗತ್ಯ ವಸ್ತುಗಳನ್ನು ಕೊಳ್ಳಲು ಪರದಾಡಬೇಕಾಗುತ್ತದೆ. ಭಾರತದ ಬಹುತೇಕ ಗ್ರಾಮಗಳ ಅಂಗಡಿಗಳಲ್ಲಿ ತಂಪು ಪಾನೀಯಗಳು, ಪಾನ್ ಬೀಡಾಗಳು, ಶ್ಯಾಂಪು-ಕ್ರೀಮುಗಳು, ಸಿದ್ಧಖಾದ್ಯಗಳು ದೊರೆಯುತ್ತವೆಯೇ ಹೊರತು ದಿನ ಬಳಕೆಯ ವಸ್ತುಗಳಲ್ಲ. ಪ್ರಾಯಶಃ ಅಗತ್ಯ ಮತ್ತು ಅನಗತ್ಯ ವಸ್ತುಗಳ ನಡುವೆ ವ್ಯತ್ಯಾಸಗಳನ್ನು ತಿಳಿದು ಕೊಳ್ಳಲಾರದಂಥ ಮನಃಸ್ಥಿತಿಗೆ ಅನೇಕರು ಇಂದು ತಲುಪಿರುವುದೇ ಇದಕ್ಕೆ ಕಾರಣ.

ಕೊಳ್ಳುಬಾಕತನದಿಂದ ಆರ್ಥಿಕ ಸಂಕಷ್ಟಗಳಲ್ಲಿ ಸಿಲುಕಿರುವವರ ನಿದರ್ಶನಗಳು ನಮ್ಮ ಮುಂದೆ ಅನೇಕವಿದ್ದರೂ ವಾಣಿಜ್ಯೀಕೃತ ಸಂಸ್ಕೃತಿ ಸೃಷ್ಟಿಸಿರುವ ಭ್ರಮಾಲೋಕದಿಂದ ಹೊರಬರಲು ಈ ಸಮಾಜ ತಯಾರಾದಂತಿಲ್ಲ. ಹಾಗೆ ನೋಡಿದರೆ ದಿನೇ ದಿನೇ ಭೋಗ ಸಂಸ್ಕೃತಿಯ ಪ್ರಭಾವ ಹೆಚ್ಚುತ್ತಾ ಹೋಗುತ್ತಿದೆ. ಈ ಪರಿಸ್ಥಿತಿ **ಆಂಥನ್ ಸೇಂಟ್ ಮಾರ್ಟಿನ್** ಎಂಬ ಲೇಖಕರ ಮಾತಿನಲ್ಲಿ ಅತ್ಯಂತ ಸೂಕ್ತವಾಗಿ ಬಿಂಬಿತವಾಗಿದೆ – **"ಲೌಕಿಕ ಸಂಪತ್ತನ್ನು ಅರಸಿ ಹೊರಟಿರುವ ನಾವು ಉನ್ಮಾದದ ಸ್ಥಿತಿಯನ್ನು ತಲುಪಿರುವ ಪ್ರಪಂಚವೊಂದನ್ನು ಸೃಷ್ಟಿ ಮಾಡಿದ್ದೇವೆ. ಜಗತ್ತಿನಲ್ಲಿ ಕೋಟ್ಯಂತರ ಜನರು ನಿಜವಾದ ಬಡತನದಿಂದ ನರಳುತ್ತಿರುವುದನ್ನು ಮರೆತು, ಸ್ವಯಂಕಲ್ಪಿತ ಬಡತನವನ್ನು ನಾವು ಅನುಭವಿಸುತ್ತಿದ್ದೇವೆ. ಲಜ್ಜಾಹೀನ ವೈಭವ, ಮಿತಿಮೀರಿದ ಭೋಗಾಸಕ್ತತೆಯಲ್ಲಿ ಮುಳುಗಿ ಹೋಗಿ ನಿರಂತರ ಅತೃಪ್ತಿ ಸ್ಥಿತಿಗೆ ನಮ್ಮನ್ನು ನಾವು ತಳ್ಳಿಕೊಂಡಿದ್ದೇವೆ"**. ಕೊಳ್ಳುಬಾಕ ಸಂಸ್ಕೃತಿಯ ಹಿಡಿತದಿಂದ ಹೊರಬರಲಾಗದ ಸಮಾಜ. ಈಗಾಗಲೇ ಅಸ್ತಿತ್ವದಲ್ಲಿರುವ ಅಸಮಾನತೆಯನ್ನು ಮತ್ತಷ್ಟು ಭದ್ರ ಮಾಡುತ್ತದೆಯೇ ಹೊರತು, ಸುಸ್ಥಿರ ಅಭಿವೃದ್ಧಿಯನ್ನು ತರುವತ್ತ ಚಲಿಸುವುದು ಸಾಧ್ಯವೇ ಇಲ್ಲ.

ನಮ್ಮನ್ನು ಬಂಧಿಸುವ- ಬಿಡುಗಡೆ ಮಾಡುವ ಓ ಮನಸ್ಸೇ...

- ಡಾ. ನಾ.ಸೋಮೇಶ್ವರ, ಬೆಂಗಳೂರು
ವೈದ್ಯರು, ಸಾಹಿತಿಗಳು, ೯೮೮೦೪೬೫೬೬೧
naasomeswara@gmail.com

ತಾಯಿಯ ಗರ್ಭದಲ್ಲಿ ಸುಖವಾಗಿ ಬೆಳೆಯುತ್ತಿರುವ ಮಗುವು, ಸುರಕ್ಷಿತ ವಾತಾವರಣವನ್ನು ಬಿಟ್ಟು ಹೊರ ಪ್ರಪಂಚಕ್ಕೆ ಬಂದು, ಸ್ವತಂತ್ರ ಬದುಕನ್ನು ಆರಂಭಿಸಲು ನಡೆಸುವ ಸಿದ್ಧತೆ ಮಗುವಿನ ಪಾಲಿನ ಬಹಳ ದೊಡ್ಡ ಸ್ಟ್ರೆಸ್ ಅಥವ ಒತ್ತಡವಾಗಿರುತ್ತದೆ!

- ಪ್ರಸವ ಸರಾಗವಾಗಬೇಕು. ಪ್ರಸವದಲ್ಲಿ ತಾಯಿಗಾಗಲಿ ಅಥವಾ ಮಗುವಿಗಾಗಲಿ ಯಾವುದೇ ತೊಂದರೆಯಾಗಬಾರದು.
- ಪ್ರಸವವಾದ ಮರುಕ್ಷಣದಲ್ಲಿಯೇ ಮಗುವು ಸ್ವತಂತ್ರವಾಗಿ ಉಸಿರಾಡಬೇಕು. ಮಗುವು ಮೊದಲ ಬಾರಿಗೆ ಗಾಳಿಯನ್ನು ಒಳಗೆಳೆದುಕೊಂಡಾಗ, ಮೊಗ್ಗಿನಂತೆ ಮುದುಡಿರುವ ಶ್ವಾಸಕೋಶಗಳು ಒಮ್ಮೆಲೆ ಅರಳಬೇಕು. ಗಾಳಿಯಲ್ಲಿರುವ ಆಮ್ಲಜನಕವು ಶ್ವಾಸಕೋಶಗಳ ಒಳಗೆ ಪ್ರವೇಶಿಸಬೇಕು. ಶ್ವಾಸಕೋಶಗಳಿಂದ ಆಮ್ಲಜನಕವು ರಕ್ತದಲ್ಲಿರುವ ಕೆಂಗಣಗಳ ಮೂಲಕ ಶರೀರದ ಎಲ್ಲ ಜೀವಕೊಶಗಳಿಗೆ, ಮುಖ್ಯವಾಗಿ ಮಿದುಳಿನ ನರಕೋಶಗಳಿಗೆ ಪೂರೈಕೆಯಾಗಬೇಕು. ಆಗ ಮಿದುಳು ಬದುಕಿನ ಸವಾಲುಗಳನ್ನು ಎದುರಿಸಲು ಸಂಪೂರ್ಣವಾಗಿ ಸಿದ್ಧವಾಗುತ್ತದೆ.
- ಮಗುವಿನ ಪಾಲಿಗೆ ಅದರ ಬಾಹ್ಯಾಜಗತ್ತಿನ ಈ ಮೊದಲ ಒತ್ತಡ ಅಥವ ಸ್ಟ್ರೆಸ್ ಅನಿವಾರ್ಯ!

ಅನಿವಾರ್ಯ

ಮನುಷ್ಯನಾಗಿ ಹುಟ್ಟಿದ ಮೇಲೆ ಸ್ಟ್ರೆಸ್ ಅಥವ ಒತ್ತಡ ಅನಿವಾರ್ಯ. ಮನುಷ್ಯರನ್ನು ಒಳಗೊಂಡಂತೆ, ಈ ಭೂಮಿಯ ಮೇಲೆ ಹುಟ್ಟುವ ಎಲ್ಲ ಜೀವಿಗಳು ಎರಡು ರೀತಿಯ ಒತ್ತಡಗಳನ್ನು ಎದುರಿಸಬೇಕಾಗುತ್ತದೆ.

- ಮೊದಲನೆಯದು ತನ್ನ ಬದುಕಿಗೆ ಅಗತ್ಯವಾದ ಗಾಳಿ, ನೀರು ಮತ್ತು ಆಹಾರವನ್ನು ಕಾಲ ಕಾಲಕ್ಕೆ ಪಡೆಯುವುದು.

- ಹಿಂಸ್ರಪಶುಗಳಿಗೆ, ರೋಗರುಜಿನಗಳಿಗೆ ಅಥವ ಪರಿಸರದ ವೈಪರೀತ್ಯಗಳಿಗೆ ತುತ್ತಾಗದಂತೆ ಆತ್ಮರಕ್ಷಣೆಯನ್ನು ಮಾಡಿಕೊಳ್ಳುವುದು.

ನಮ್ಮ ಶೈಶವದಲ್ಲಿ ತಾಯಿಯಾದವಳು ತನ್ನ ಹಾಲಿನ ಮೂಲಕ ನಮ್ಮ ಬದುಕಿಗೆ ಅಗತ್ಯವಾದ ಪೋಷಕಾಂಶಗಳನ್ನು ಒದಗಿಸುತ್ತಾಳೆ. ಆಕೆಯ ಹಾಲಿನಲ್ಲಿರುವ ಪ್ರತಿಕಾಯಗಳು (ಆಂಟಿಬಾಡೀಸ್) ನಮ್ಮನ್ನು ರೋಗರುಜಿನಗಳಿಂದ ರಕ್ಷಿಸುತ್ತವೆ. ಆಕೆಯು ಹಿಂಸ್ರಪಶುಗಳಿಂದ ನಮ್ಮನ್ನು ರಕ್ಷಿಸುವುದರ ಜೊತೆಗೆ ಚಳಿ, ಮಳೆ, ಗಾಳಿ, ಬಿಸಿಲುಗಳಿಂದಲೂ ನಮ್ಮನ್ನು ರಕ್ಷಿಸುತ್ತಾಳೆ. ಹಾಗಾಗಿ ಮಕ್ಕಳಿಗೆ ತಾಯಿಯ ಮಡಿಲು, ತಾಯಿಯ ಒಡಲಿನಂತೆ ಮತ್ತೊಂದು ಸುರಕ್ಷಿತ ತಾಣವಾಗಿರುತ್ತದೆ.

ಹುಲಿ ಬಂತು ಹುಲಿ!

ನಮ್ಮ ಪೂರ್ವಜರು ಎದುರಿಸಿದ ಬಹು ದೊಡ್ಡ ಸವಾಲುಗಳಲ್ಲಿ, ತಮಗಿಂತಲೂ ಸರ್ವಶಕ್ತವಾಗಿದ್ದ ಹಿಂಸ್ರಪಶುಗಳಿಗೆ, ತಮ್ಮನ್ನು ಹಾಗೂ ತಮ್ಮ ಕುಟುಂಬದವರನ್ನು ರಕ್ಷಿಸಿಕೊಳ್ಳುವುದು ಬಹಳ ಮುಖ್ಯವಾಗಿತ್ತು. ನಮ್ಮ ಪೂರ್ವಜರ ಎದುರಿಗೆ ಹುಲಿ ಬಂದಾಗ, ಅವನಿಗಿದ್ದ ದಾರಿಗಳು ಎರಡು.

ಒಂದು ಹುಲಿಯ ಜೊತೆ ಹೋರಾಡಬೇಕು.

ಇಲ್ಲವೇ ಹುಲಿಯ ಬಾಯಿಗೆ ಸಿಗದಂತೆ ಓಡಿಹೋಗಬೇಕು.

ಇವೆರಡನ್ನು ಬಿಟ್ಟು ಅವನಿಗೆ ಮೂರನೆಯ ದಾರಿ ಎನ್ನುವುದು ಇರಲಿಲ್ಲ. ಹಾಗಾಗಿ ಈ ಎರಡು ಕೆಲಸಗಳನ್ನು ಸಮರ್ಪಕವಾಗಿ ನಿರ್ವಹಿಸಲು, ಪ್ರಕೃತಿಯು ಅವನ ಶರೀರದಲ್ಲಿ ಸೂಕ್ತ ಏರ್ಪಾಟನ್ನು ರೂಪಿಸಿತು. ಅದುವೇ 'ಓಡು-ಹೋರಾಡು ವ್ಯವಸ್ಥೆ' (ಫ್ಲೈಟ್-ಫೈಟ್ ರೆಸ್ಪಾನ್ಸ್). ಈ ವ್ಯವಸ್ಥೆಯಲ್ಲಿ ಮಿದುಳು, ನರಮಂಡಲ ಹಾಗೂ ಹಾರ್ಮೋನುಗಳು ಪ್ರಧಾನ ಪಾತ್ರ ವಹಿಸಿದವು.

- ಓಡುವುದು ಅಥವ ಹೋರಾಡುವುದು ಪೂರ್ವ ನಿರ್ಧಾರಿತ ಕೆಲಸಗಳಲ್ಲ. ಇವು ಹಠಾತ್ತಾಗಿ ರೂಪುಗೊಳ್ಳುವಂತಹವು. ಏಕೆಂದರೆ ಯಾವಾಗ ಹುಲಿ ಬರುತ್ತದೆ ಎನ್ನುವುದು ಯಾರಿಗೂ ಗೊತ್ತಿರುವುದಿಲ್ಲ.

- ಹುಲಿ ಬಂದಾಗ ನಾವು ಓಡಲು ಅಥವ ಹೋರಾಡಲು, ಮೊದಲು ನಮ್ಮ ಶರೀರದ ಸ್ನಾಯು ವ್ಯವಸ್ಥೆಯನ್ನು ಸಿದ್ಧಗೊಳಿಸಬೇಕಾಗುತ್ತದೆ. ಸ್ನಾಯುಗಳಿಗೆ ಅಧಿಕ ಪ್ರಮಾಣದ ಶಕ್ತಿಯನ್ನು ಒದಗಿಸಬೇಕಾಗುತ್ತದೆ. ಹೀಗೆ ತ್ವರಿತವಾಗಿ ಶಕ್ತಿಯನ್ನು ಒದಗಿಸಲು ನಮ್ಮ ಶರೀರವು 'ಕಾರ್ಟಿಸಾಲ್'ಎನ್ನುವ ಹಾರ್ಮೋನನ್ನು ಉತ್ಪಾದಿಸುತ್ತದೆ. ಇದು ನಮ್ಮ ಯಕೃತ್ತಿನಲ್ಲಿ ತಾತ್ಕಾಲಿಕ ದಾಸ್ತಾನು ರೂಪದಲ್ಲಿರುವ ಗ್ಲೈಕೋಜನ್ನನ್ನು ಗ್ಲೂಕೋಸ್ ಆಗಿ ಪರಿವರ್ತಿಸಿ ರಕ್ತದೊಳಗೆ ಬಿಡುಗಡೆ ಮಾಡುತ್ತದೆ.

- ರಕ್ತದಲ್ಲಿರುವ ಹೆಚ್ಚುವರಿ ಗ್ಲೂಕೋಸನ್ನು ನಮ್ಮ ಶರೀರದ ಪ್ರತಿಯೊಂದು ಜೀವಕೋಶಗಳಿಗೆ, ಮುಖ್ಯವಾಗಿ ಸ್ನಾಯುಕೋಶಗಳಿಗೆ ತಲುಪಿಸಬೇಕಾದರೆ ರಕ್ತಪರಿಚಲನೆ ತೀವ್ರವಾಗಬೇಕು. ಹಾಗಾಗಿ ಅಡ್ರಿನಲಿನ್ ಎನ್ನುವ ಮತ್ತೊಂದು ಹಾರ್ಮೋನು ಬಿಡುಗಡೆಯಾಗುತ್ತದೆ. ಇದು ಹೃದಯದ ಮೇಲೆ ನೇರ ಪರಿಣಾಮವನ್ನು ಬೀರಿ, ಹೃದಯ ಗತಿಯನ್ನು ಹೆಚ್ಚಿಸುತ್ತದೆ. ರಕ್ತದ ಒತ್ತಡವನ್ನು ಅಧಿಕಮಾಡುತ್ತದೆ. ಹೃದಯ ತ್ವರಿತವಾಗಿ ಮಿಡಿದು ಗ್ಲೂಕೋಸ್ ಭರಿತ ರಕ್ತವನ್ನು ಶರೀರಾದ್ಯಂತ ವಿತರಿಸುತ್ತದೆ.
- ಸ್ನಾಯುಕೋಶಗಳ ಒಳಗೆ ಗ್ಲೂಕೋಸ್ ಪ್ರವೇಶಿಸಿದ ಮಾತ್ರಕ್ಕೆ ಶಕ್ತಿ ಬಿಡುಗಡೆಯಾಗುವುದಿಲ್ಲ. ಗ್ಲೂಕೋಸ್ ಜೀವಕೋಶಗಳ ಒಲೆಯಲ್ಲಿ ಉರಿದು ಶಕ್ತಿ ಬಿಡುಗಡೆಯಾಗಬೇಕಾದರೆ ಆಮ್ಲಜನಕ ಬೇಕು. ಈ ಆಮ್ಲಜನಕವನ್ನು ಶ್ವಾಸಕೋಶಗಳು ಪೂರೈಸಬೇಕಾಗುತ್ತವೆ. ಹಾಗಾಗಿ ಅಡ್ರಿನಲಿನ್ ಶ್ವಾಸಕೋಶಗಳ ಮೇಲೆಯೂ ಪ್ರಭಾವ ಬೀರುತ್ತವೆ. ಶ್ವಾಸಕೋಶಗಳು ಬೇಗ ಬೇಗ ಉಸಿರಾಡಿ (ನಾವು ಹೆಚ್ಚು ಉಸಿರಾಡಿ) ಹೆಚ್ಚು ಹೆಚ್ಚು ಆಮ್ಲಜನಕವನ್ನು ಬಿಡುಗಡೆ ಮಾಡುತ್ತವೆ. ಈ ಆಮ್ಲಜನಕವು ರಕ್ತಪರಿಚಲನೆಯ ಮೂಲಕ ಸ್ನಾಯು ಕೋಶಗಳನ್ನು ಸೇರುತ್ತವೆ.
- ಒಂದು ವೇಳೆ ಹುಲಿಯ ಜೊತೆ ಹೋರಾಡುವಾಗ ಗಾಯುವಾದರೆ, ವಿಪರೀತ ರಕ್ತಸ್ರಾವವಾಗಿ ಸಾಯುವ ಸಾಧ್ಯತೆಯಿರುತ್ತದೆ. ಹಾಗಾಗಿ ಹೆಚ್ಚು ರಕ್ತಸ್ರಾವವಾಗದಂತೆ ರಕ್ತ ಸ್ವಲ್ಪ ಮಂದವಾಗುತ್ತದೆ.
- ಜಠರ ಹಾಗೂ ಕರುಳು ತಮ್ಮ ಕೆಲಸವನ್ನು ಸ್ಥಗಿತಗೊಳಿಸುತ್ತವೆ. ಜೀವವೇ ಆಪತ್ತಿನಲ್ಲಿರುವಾಗ ಶರೀರ ಶಕ್ತಿಯೆಲ್ಲ ಓಡುವ ಅಥವಾ ಹೋರಾಡುವ ಕೆಲಸಗಳಿಗೆ ಉಪಯೋಗವಾಗಬೇಕಾದ ಗಂಭೀರ ಸನ್ನಿವೇಶದಲ್ಲಿ ಜಠರ ಹಾಗೂ ಕರುಳುಗಳು 'ಗಪ್ಚಿಪ್' ಆಗುತ್ತವೆ.
- ಓಡಬೇಕಾದರೆ ದೊಡ್ಡ ಕರುಳು ಮಲಭರಿತವಾಗಿದ್ದರೆ ಅಥವ ಮೂತ್ರಾಶಯದಲ್ಲಿ ಮೂತ್ರತುಂಬಿದ್ದರೆ, ಅವು ಓಟದ ವೇಗವನ್ನು ತಗ್ಗಿಸಬಹುದು. ಹಾಗಾಗಿ ಓಡುವ ಅಥವಾ ಹೋರಾಡುವ ಮೊದಲು ಮಲಮೂತ್ರಗಳನ್ನು ವಿಸರ್ಜಿಸುವುದರಲ್ಲಿ ಲಾಭವಿದೆ. ಹಾಗಾಗಿ ತ್ವರಿತ ಮಲಮೂತ್ರ ವಿಸರ್ಜನೆಗೆ ಏರ್ಪಾಡುಗಳು ರೂಪುಗೊಳ್ಳುತ್ತವೆ.
- ಹುಲಿಯಿಂದ ರಕ್ಷಿಸಿಕೊಳ್ಳಲು ನಮ್ಮ ಶರೀರದಲ್ಲಿ ಆಗುವ ಬದಲಾವಣೆಗಳನ್ನು 'ಹುಲಿ ಪರಿಣಾಮ' (ಸ್ಟ್ರೆಸ್ ರೆಸ್ಪಾನ್ಸ್) ಎಂದು ಕರೆಯೋಣ.

ನಮ್ಮ ಪೂರ್ವಜರ ಕಾಲದಲ್ಲಿ ಯಾರಾದರೂಬ್ಬರು 'ಹುಲಿ ಬಂತು ಹುಲಿ' ಎಂದು

ಕೂಗಿದರೆ ಸಾಕು, ಊರಿನಲ್ಲಿರುವ ಎಲ್ಲ ಜನರ ಹಾರ್ಮೋನುಗಳು ಒಮ್ಮೆಲೆ ಮುಗಿಲು ಮುಟ್ಟುತ್ತಿದ್ದವು. ಬಹುಪಾಲು ಜನರು ಓಡಿಹೋಗಿ ಜೀವವನ್ನು ಉಳಿಸಿಕೊಳ್ಳುತ್ತಿದ್ದರು. ಕೆಲವರು ಮಾತ್ರ ಹುಲಿಯ ಜೊತೆ ಹೋರಾಡಲು ಸಿದ್ದವಾಗುತ್ತಿದ್ದರು.

ಎರಡು ಹುಲಿಗಳು

ಇಂದು ಕಾಡು ಇಲ್ಲ. ಹುಲಿಗಳ ಸಂಖ್ಯೆ ಹಾಗೂ ಎಲ್ಲ ರೀತಿಯ ಹಿಂಸ್ರಪಶುಗಳ ಸಂಖ್ಯೆ ಕ್ಷೀಣಿಸಿವೆ. ಹುಲಿಗಳನ್ನು ರಕ್ಷಿಸುವ ಯೋಜನೆಯನ್ನು ಕೈಗೆತ್ತಿಕೊಂಡಿದ್ದೇವೆ. ಹಾಗಾಗಿ ನಮ್ಮ ಪೂರ್ವಜ ಭಯಪಡುತ್ತಿದ್ದ ಹಾಗೆ ಹಿಂಸ್ರಪಶುಗಳಿಂದ ಸಾಯುವ ಸಾಧ್ಯತೆ ಇಂದು ೯೯% ಪಾಲು ಕಡಿಮೆಯಾಗಿದೆ. ಆದರೆ ಈ ಆಧುನಿಕ ಯುಗದಲ್ಲಿ ಎರಡು ಹೊಸ ಹುಲಿಗಳು ಹುಟ್ಟಿಕೊಂಡಿವೆ. ಆ ಹುಲಿಗಳೇ **'ಆಫೀಸ್ ಹುಲಿ'** ಮತ್ತು **'ಮನೆ ಹುಲಿ'**

ಆಧುನಿಕ ಯುಗದಲ್ಲಿ ಹೊಟ್ಟೆಪಾಡಿಗಾಗಿ ನಾವು ಅನಿವಾರ್ಯವಾಗಿ ಯಾವುದಾದರೊಂದು ಕೆಲಸವನ್ನು ಮಾಡಲೇಬೇಕಾಗುತ್ತದೆ. ಕೆಲಸ ಎಂದ ಮೇಲೆ ಒಂದು ಆಫೀಸ್ ಇರುತ್ತದೆ. ಆಫೀಸ್ ಎಂದ ಮೇಲೆ ಬಾಸ್ ಎಂಬ ಮೇಲಧಿಕಾರಿ ಇದ್ದೇ ಇರುತ್ತಾನೆ. ಮೇಲಧಿಕಾರಿಗಳು ಗಂಡುಗಳೇ ಆಗಿರಬೇಕು ಎನ್ನುವ ನಿಯಮವೇನಿಲ್ಲ. ಇಂದಿನ ದಿನಗಳಲ್ಲಿ ಹೆಂಗಸರೂ ಮೇಲಧಿಕಾರಿಗಳಾಗಿರುತ್ತಾರೆ. ಈ ಬಾಸ್, ಹುಲಿಗಿಂತಲೂ ಮಹಾಕ್ರೂರಿ! ಹುಲಿಯಾದರೆ ಒಂದೇ ಏಟಿಗೆ ಹೊಡೆದು ಸಾಯಿಸುತ್ತದೆ. ಆದರೆ ಈ ಬಾಸ್ ಹುಲಿಯು ಪ್ರತಿದಿನವೂ ಕೊಲ್ಲದೆ, ಯಾವಾಗ ನೋಡಿದರೂ ಕೆಲಸ ಕೆಲಸ! ಎಷ್ಟು ಕೆಲಸ ಮಾಡಿದರೂ ಬಾಸ್ ಹುಲಿಗೆ ತೃಪ್ತಿಯೇ ಇಲ್ಲ! ಸಣ್ಣ ಪುಟ್ಟ ತಪ್ಪುಗಳಾದರೂ ಮುಖ ಮೂತಿ ನೋಡದೆ ಎಲ್ಲರ ಮುಂದೆ ನೀರಿಳಿಸಿಬಿಡುತ್ತದೆ! ಗಂಡು ಬಾಸಿನ ಹತ್ತಿರ ಹೇಗಾದರೂ ಬೈಸಿಕೊಳ್ಳಬಹುದು. ಆದರೆ ಈ ಹೆಣ್ಣು ಬಾಸಿನ ಹತ್ತಿರ ಬೈಸಿಕೊಳ್ಳುವುದೆಂದರೆ! ಭಗವಂತ!! ಭೂಮಿ ಬಾಯಿ ತೆರೆದು ಹಾಗೆಯೇ ನುಂಗಿಬಿಡಬಾರದೆ!... ಅವಮಾನದ ಒತ್ತಡ ಮತ್ತಷ್ಟು ತೀವ್ರವಾಗುತ್ತದೆ.

ಹಿಂದಿನ ಕಾಲದಲ್ಲಿ ಯಾರಾದರು ಹುಲಿ ಬಂತು ಹುಲಿ ಎಂದ ಕೂಡಲೇ ಎಲ್ಲರು ಓಡಿಹೋಗಿ ಜೀವವನ್ನು ಉಳಿಸಿಕೊಳ್ಳುತ್ತಿದ್ದರು. ಬಾಸ್ ಬಂದ್ರು ಬಾಸ್ ಎಂದು ಯಾರಾದರೂ ಉಸಿರಿದರೆ ಎಲ್ಲಿತಾನೆ ಓಡಿ ಹೋಗಲು ಸಾಧ್ಯ? ಆದರೆ ಕಛೇರಿಯಲ್ಲಿರುವವರ ಶರೀರದಲ್ಲಿ 'ಹುಲಿ ಪರಿಣಾಮ' ಆರಂಭವಾಗುತ್ತದೆ. ಆದರೆ ಪರಿಣಾಮದ ಕಾರಣ ರೂಪುಗೊಳ್ಳುವ ಲಕ್ಷಣಗಳು ನಿವಾರಣೆಯಾಗುವುದಿಲ್ಲ. ಹೊಟ್ಟೆ ಹಸಿವು ಕಡಿಮೆಯಾಗುತ್ತದೆ. ಎದೆ ಬಡಿತ ಹೆಚ್ಚುತ್ತದೆ. ಉಸಿರಾಟ ಹೆಚ್ಚುತ್ತದೆ. ರಕ್ತದೊತ್ತಡ ಅಧಿಕವಾಗುತ್ತದೆ. ರಕ್ತದಲ್ಲಿ ಗ್ಲೂಕೋಸ್ ಪ್ರಮಾಣ ಹೆಚ್ಚುತ್ತದೆ. ರಕ್ತ ಮಂದವಾಗುತ್ತದೆ. ಹೃದಯಘಾತವಾಗಬಹುದು. ಲಕ್ವ ಹೊಡೆಯಬಹುದು. ಮಲಮೂತ್ರಗಳ ಒತ್ತಡ ಅಧಿಕವಾಗುತ್ತದೆ....

ನಮ್ಮ ಪೂರ್ವಜರು ಹುಲಿಯ ಕಾರಣ ಓಡಿದಾಗ ಅಥವ ಹುಲಿಯ ಜೊತೆ ಹೋರಾಡಿದಾಗ, ಅವರ ಶರೀರದಲ್ಲಿ ಸಂಗ್ರಹಗೊಂಡಿದ್ದ ಹೆಚ್ಚುವರಿ ಗ್ಲೂಕೋಸ್ ಉಪಯೋಗಕ್ಕೆ ಬರುತ್ತಿತ್ತು! ಖರ್ಚಾಗುತ್ತಿತ್ತು!! ಸುರಕ್ಷಿತ ತಾಣವನ್ನು ಸೇರಿದ ಕೂಡಲೇ ಅವರ ಶರೀರವು ಪೂರ್ವಸ್ಥಿತಿಗೆ ಮರಳುತ್ತಿತ್ತು. ಆದರೆ ಇಂದು ಕಚೇರಿಯಿಂದ ನಾವು ಓಡಲು ಸಾಧ್ಯವಿಲ್ಲದ ಕಾರಣ, ಬಾಸ್ ಜೊತೆ ಹೋರಾಡಲು ಅಸಾಧ್ಯವಾದ ಕಾರಣ, ನಮ್ಮ ಶರೀರದಲ್ಲಿ ರೂಪುಗೊಂಡ 'ಹುಲಿ ಬಂತು ಹುಲಿ ಪರಿಣಾಮ ಹಾಗೆಯೇ ಉಳಿಯುತ್ತದೆ. (ಜಪಾನಿನಲ್ಲಿ ಒಂದು ಉತ್ತಮ ವ್ಯವಸ್ಥೆಯಿದೆ. ಪ್ರತಿ ಕಚೇರಿಯ ಕೆಳ ಅಂತಸ್ತಿನಲ್ಲಿ ಬಾಕ್ಸಿಂಗ್ ಬ್ಯಾಗುಗಳಿರುತ್ತವೆ. ಯಾರು ಬೇಕಾದರೂ ತಮ್ಮ ಆಫೀಸ್ ಬಾಸಿನ ಚಿತ್ರವನ್ನು ಬ್ಯಾಗಿಗೆ ಅಂಟಿಸಿ, ಬಾಕ್ಸಿಂಗ್ ಗ್ಲೋವ್ಸ್ ಹಾಕಿಕೊಂಡು ಎಷ್ಟು ಬೇಕಾದರೂ ಬಾಸಿನ ಮುಖಕ್ಕೆ ಗುದ್ದಬಹುದು!)

ಹೋಗಲಿ ಮನೆಗಾದರೂ ಬಂದು ಸ್ವಲ್ಪ ನೆಮ್ಮದಿಯನ್ನು ಪಡೆಯೋಣ ಅಂದರೆ, ಮನೆಯ ಹುಲಿ ತನ್ನ ಪ್ರತಾಪವನ್ನು ಶುರು ಮಾಡುತ್ತದೆ. ಆಫೀಸ್ ಹುಲಿಯ ಹೊಡೆತಕ್ಕೆ ಕಂಗೆಟ್ಟಿದ್ದ ಶರೀರವು ಮನೆ ಹುಲಿಯ ಹೊಡೆತಕ್ಕೆ ನಜ್ಜುಗುಜ್ಜಾಗಿಬಿಡುತ್ತದೆ! ಹುಲಿ ಬಂತು ಹುಲಿ ಪರಿಣಾಮ ದ್ವಿಗುಣಗೊಳ್ಳುತ್ತದೆ! ಅನೇಕ ಸಂದರ್ಭಗಳಲ್ಲಿ ಮನೆಯ ಸ್ಥಿತಿಗತಿಗಳೇ ಅನಾರೋಗ್ಯಕ್ಕೆ ಮೂಲ ಕಾರಣವಾಗಿರುತ್ತದೆ.

ಇಂತಹ ಹುಲಿಪರಿಣಾಮ ಪ್ರಕ್ರಿಯೆಯು ಸರಿಸುಮಾರು ಪ್ರತಿದಿನ ನಡೆಯುತ್ತಿದ್ದರೆ, ಅತ್ಯಲ್ಪ ಕಾಲದಲ್ಲಿ ಆತನ ಏರಿದ ರಕ್ತದೊತ್ತಡ ಏರಿಯೇ ಇರುತ್ತದೆ. ವೈದ್ಯರು ಇದನ್ನು ಬಿಪಿ ಕಾಯಿಲೆ ಅಥವಾ ಹೈಪರ್‌ಟೆನ್ಷನ್ ಎಂದು ಕರೆಯುತ್ತಾರೆ. ರಕ್ತದಲ್ಲಿ ಹೆಚ್ಚಿದ್ದ ಗ್ಲೂಕೋಸ್, ಹೆಚ್ಚುತ್ತಲೇ ಹೋಗುತ್ತದೆ. ವೈದ್ಯರು ಇದನ್ನು ಮಧುಮೇಹ ಅಥವ ಡಯಾಬಿಟಿಸ್ ಎಂದು ಕರೆಯುತ್ತಾರೆ. ಆತಂಕ, ಖಿನ್ನತೆ, ಅತ್ಯಾಮ್ಲೀಯತೆ (ಹೈಪರ್ ಅಸಿಡಿಟಿ) ಭೇದಿ, (ಇರಿಟಬಲ್ ಬಾಬೌಲ್ ಸಿಂಡ್ರೋಮ್) ಮಲಬದ್ಧತೆ (ಕಾನ್‌ಸ್ಟಿಪೇಶನ್) ಅತಿಭಕ್ಷಣ, ಬೊಜ್ಜು, ಹೃದಯಾಘಾತ, ಲಕ್ವ, ಕ್ಯಾನ್ಸರ್ ಮುಂತಾದ 'ಜೀವಶೈಲಿಯ ರೋಗಗಳು' ಆರಂಭವಾಗುತ್ತವೆ.

ಬಂಧನ–ಮುಕ್ತಿ

"ಮನ ಏವ ಮನುಷ್ಯಾಣಾಂ ಕಾರಣಂ ಬಂಧ ಮೋಕ್ಷಯೋಃ" ಎಂದು ಅಮೃತಬಿಂದು ಉಪನಿಷತ್ತು ಹೇಳುತ್ತದೆ. 'ಮನುಷ್ಯನ ಮನಸ್ಸು ಎನ್ನುವುದು ಅವನ ಬಂಧನಕ್ಕೆ ಕಾರಣ ಹಾಗೂ ಅವನ ಮೋಕ್ಷಕ್ಕೂ ಕಾರಣ' ಎನ್ನುವುದು ಈ ಮಾತಿನ ಅರ್ಥ. ಮನಸ್ಸಿನ ಶಕ್ತಿ ಅಗಾಧ! ಅದು ಎರಡಲುಗಿನ ಖಡ್ಗ! ಮನಸ್ಸಿನ ಕಾರ್ಯಗಳಾದ ಕಾಮ, ಕ್ರೋಧ, ಲೋಭ, ಮೋಹ, ಮದ, ಮತ್ಸರಗಳನ್ನು ನಮ್ಮ ಹಿಡಿತದಲ್ಲಿ ಇಟ್ಟುಕೊಂಡರೆ ನಮ್ಮ ಬದುಕು ಸಹ್ಯವಾಗುತ್ತದೆ. ಬದಲಿಗೆ ಅವುಗಳ ಹಿಡಿತಕ್ಕೆ ನಮ್ಮನ್ನು ಒಪ್ಪಿಸಿದರೆ, ಅವು ನಮ್ಮನ್ನು

ಶಾಶ್ವತ ಬಂಧಿಗಳನ್ನಾಗಿಸುತ್ತದೆ. ಅನಿಯಂತ್ರಿತ ಮನಸ್ಸು ತರುವ ಎಲ್ಲ ಅವಮಾನ, ಅನಾರೋಗ್ಯಗಳನ್ನು ಎದುರಿಸಬೇಕಾಗುತ್ತದೆ. ಹಾಗಾಗಿ ನಮ್ಮ ಮನಸ್ಸನ್ನು ನಿಗ್ರಹದಲ್ಲಿ ಇಟ್ಟುಕೊಂಡು 'ನಮ್ಮ ಬದುಕಿಗೆ ಹಿತವಾದುದನ್ನು ಮಿತವಾಗಿ ಪಡೆಯುವ ಮನೋಭಾವವನ್ನು ಕಾರ್ಯರೂಪಕ್ಕೆ ತರುವ ಮನೋಭಾವವನ್ನು ಬೆಳೆಸಿಕೊಳ್ಳಬೇಕಾಗುತ್ತದೆ. 'ಹಿತ-ಮಿತ ಮಂತ್ರ'ವೇ ಎಲ್ಲ ರೋಗಗಳಿಂದ ಮುಕ್ತಿ ಪಡೆಯಲು ನೆರವಾಗುವ ಮೂಲಮಂತ್ರ ಎನ್ನುವುದನ್ನು ಮನಗಾಣಬೇಕಾಗುತ್ತದೆ.

'ಹಿತ-ಮಿತ ಮೂಲಮಂತ್ರ' ನಿಜಕ್ಕೂ ಅತ್ಯಾಕರ್ಷಕ! ಆದರೆ ಅದನ್ನು ಕಾರ್ಯರೂಪಕ್ಕೆ ತರುವುದು ಅಷ್ಟು ಸುಲುಭವಲ್ಲ. ಮುಖ್ಯವಾಗಿ ಮನೆ ಹುಲಿಯ ಸಹಕಾರವಿಲ್ಲದಿದ್ದರೆ ಕಷ್ಟ! ಒಳ್ಳೆಯ ಹೆಂಡತಿ ಅಥವ ಗಂಡ ಸಿಗಬೇಕಾದರೆ ಪೂರ್ವಜನ್ಮದ ಪುಣ್ಯ ಅಗತ್ಯ ಎನ್ನುವ ನಂಬಿಕೆ ನಮ್ಮಲ್ಲಿದೆ. ಎಲ್ಲರಿಗೂ ಒಳ್ಳೆಯ ಗಂಡ ಅಥವ ಹೆಂಡತಿ ಸಿಗುವುದು ಸೈದ್ಧಾಂತಿಕವಾಗಿ ಸಾಧ್ಯವಿದ್ದರೂ ಸಹ, ಪ್ರಾಯೋಗಿಕ ಬದುಕಿನಲ್ಲಿ ದುಸ್ಸಾಧ್ಯ! ಹಾಗಾಗಿ ನಮ್ಮ ಬದುಕಿನಲ್ಲಿ ಒತ್ತಡಗಳು ಅನಿವಾರ್ಯವಾಗಿವೆ. ಒತ್ತಡ ಪರಿಣಾಮಗಳನ್ನು ಅನುಭವಿಸುವುದೂ ಅನಿವಾರ್ಯವಾಗಿದೆ. ಹಾಗಾಗಿ ಈ ಹಿನ್ನೆಲೆಯಲ್ಲಿ ಒತ್ತಡದಿಂದ ಆಗಬಹುದಾದ ದುಷ್ಪರಿಣಾಮಗಳನ್ನು ತಡೆಗಟ್ಟುವತ್ತ ನಾವು ನಮ್ಮ ಗಮನವನ್ನು ಹರಿಸಬೇಕಾಗುತ್ತದೆ.

ತಲ್ಲಣಿಸದಿರು

ಮೊದಲನೆಯದಾಗಿ ದಾಸರು ಹಾಡಿರುವ ಹಾಗೆ 'ತಲ್ಲಣಿಸದಿರು ಕಂಡ್ಯ ತಾಳು ಮನವೆ!" ಎಂದು ನಮ್ಮ ಮನಸ್ಸಿಗೆ ಸಮಾಧಾನ ಹೇಳುವುದನ್ನು ಕಲಿಯಬೇಕಾಗುತ್ತದೆ. ಬದುಕಿನ ಸವಾಲುಗಳಿಗೆ (ಒತ್ತಡಗಳಿಗೆ) ತಕ್ಷಣವೇ ತೀವ್ರ ಸ್ವರೂಪದ ಪ್ರತಿಕ್ರಿಯೆ ನೀಡುವುದನ್ನು ನಿಲ್ಲಿಸಬೇಕಾಗುತ್ತದೆ. ನಮ್ಮ ಪೂರ್ವಜರ ಕಾಲದ ನಿಜವಾದ ಹುಲಿಯು ನಮ್ಮನ್ನು ಕೊಂದೇಬಿಡುತ್ತಿತ್ತು! ಆದರೆ ಆಫೀಸ್ ಹುಲಿ ಹಾಗೂ ಮನೆ ಹುಲಿಯ ಜೊತೆ ಸಂಧಾನ ಮಾಡುವ ಸಾಧ್ಯತೆಯಿರುತ್ತದೆ. ಹಾಗಾಗಿ ಸಮಸ್ಯೆಗಳು ಬಂದಾಗ ತಲ್ಲಣಿಸುವುದನ್ನು ನಿಲ್ಲಿಸಬೇಕಾಗುತ್ತದೆ. ಸಂಧಾನಕ್ಕೆ ಸಿದ್ಧವಾಗಬೇಕಾಗುತ್ತದೆ. ಸಮಸ್ಯೆಗಳ ಬಿರುಗಾಳಿ ಬೀಸಿದಾಗ ಹುಲ್ಲುಕಡ್ಡಿಯಂತೆ ಹೊಂದಿಕೊಂಡು ನಡೆದರೆ ಬದುಕುಳಿಯುವುದು ಸುಲಭವಾಗುತ್ತದೆ. ಹಾಗಾಗಿ ನಮ್ಮ ಅಹಮ್ಮಿಗೆ ಲಗಾಮು ಹಾಕುವುದನ್ನು ಕಲಿತುಕೊಳ್ಳಬೇಕಾಗುತ್ತದೆ. ಸಂಧಾನವೇ ಸರ್ವಶ್ರೇಷ್ಠ ಎನ್ನುವುದನ್ನು ಒಪ್ಪಿಕೊಳ್ಳಬೇಕಾಗುತ್ತದೆ.

ಮನಸ್ಸು-ಶರೀರ

ಮನಸ್ಸು ಮತ್ತು ಶರೀರದ ಅನುಬಂಧವನ್ನು ನಾವು ಅರ್ಥ ಮಾಡಿಕೊಳ್ಳಬೇಕಾಗುತ್ತದೆ. ಮನಸ್ಸು ಮಾಡುವ ತಪ್ಪಿಗೆ ಶರೀರ ಶಿಕ್ಷೆಯನ್ನು

ಅನುಭವಿಸಬೇಕಾಗುತ್ತದೆ. ಹುಲಿ ಪರಿಣಾಮದ ಕಾರಣ ರೂಪುಗೊಳ್ಳುವ ಹಾರ್ಮೋನುಗಳ ಪ್ರಭಾವ ನೇರವಾಗಿ ಶರೀರದ ಮೇಲೆ ಪರಿಣಾಮವನ್ನು ಬೀರುವುದನ್ನು ನಾವು ಗಮನಿಸಿದ್ದೇವೆ. ಈ ಪರಿಣಾಮವು ದುಷ್ಪರಿಣಾಮವಾಗಿ ಬದಲಾಗದಿರಲು ನಮ್ಮ ಪೂರ್ವಜರು ಓಡಿಹೋಗುತ್ತಿದ್ದರು ಅಥವ ಹೋರಾಡುತ್ತಿದ್ದರು. ನಾವು ಆಫೀಸ್ ಹುಲಿಯಿಂದ ಅಥವಾ ಮನೆಹುಲಿಯಿಂದ ಓಡಿಹೋಗುವುದಕ್ಕೆ ಸಾಧ್ಯವಿಲ್ಲ. ಇನ್ನು ಅವುಗಳೊಡನೆ ಹೋರಾಡುವ ಪ್ರಶ್ನೆಯೇ ಏಳುವುದಿಲ್ಲ. ಆದರೆ ಶಾರೀರಿಕ ವ್ಯಾಯಾಮಗಳ ಮೂಲಕ ಈ ಹಾರ್ಮೋನುಗಳ ದುಷ್ಪರಿಣಾಮವನ್ನು ನಿವಾರಿಸಿಕೊಳ್ಳಬಹುದು. ಪ್ರತಿದಿನ ಕನಿಷ್ಠ ಐದು ಕಿಲೋಮೀಟರ್ ನಡೆದರೆ ಈ ಹಾರ್ಮೋನುಗಳ ಪ್ರಭಾವ ನಿವಾರಣೆಯಾಗುತ್ತದೆ. ಏರಿರುವ ರಕ್ತದೊತ್ತಡ ಇಳಿಯುತ್ತದೆ. ಹೆಚ್ಚಿರುವ ಸಕ್ಕರೆ ಕಡಿಮೆಯಾಗುತ್ತದೆ. ಆದರೆ ಈ ಮೂರ್ಖರ ಪೆಟ್ಟಿಗೆಯ ಕಾರಣ, ನಾವು ನಡೆಯುವುದನ್ನು ಮರೆತಿದ್ದೇವೆ!

ಮನಸ್ಸು ಮತ್ತು ಶರೀರದ ಅನುಬಂಧವನ್ನು ನಾವು ಅರ್ಥ ಮಾಡಿಕೊಳ್ಳಬೇಕಾಗುತ್ತದೆ. ಮನಸ್ಸು ಮಾಡುವ ತಪ್ಪಿಗೆ ಶರೀರ ಶಿಕ್ಷೆಯನ್ನು ಅನುಭವಿಸಬೇಕಾಗುತ್ತದೆ. ಹುಲಿ ಪರಿಣಾಮದ ಕಾರಣ ರೂಪುಗೊಳ್ಳುವ ಹಾರ್ಮೋನುಗಳ ಪ್ರಭಾವ ನೇರವಾಗಿ ಶರೀರದ ಮೇಲೆ ಪರಿಣಾಮವನ್ನು ಬೀರುವುದನ್ನು ನಾವು ಗಮನಿಸಿದ್ದೇವೆ. ಈ ಪರಿಣಾಮವು ದುಷ್ಪರಿಣಾಮವಾಗಿ ಬದಲಾಗದಿರಲು ನಮ್ಮ ಪೂರ್ವಜರು ಓಡಿಹೋಗುತ್ತಿದ್ದರು ಅಥವ ಹೋರಾಡುತ್ತಿದ್ದರು. ನಾವು ಆಫೀಸ್ ಹುಲಿಯಿಂದ ಅಥವಾ ಮನೆಹುಲಿಯಿಂದ ಓಡಿಹೋಗುವುದಕ್ಕೆ ಸಾಧ್ಯವಿಲ್ಲ. ಇನ್ನು ಅವುಗಳೊಡನೆ ಹೋರಾಡುವ ಪ್ರಶ್ನೆಯೇ ಏಳುವುದಿಲ್ಲ. ಆದರೆ ಶಾರೀರಿಕ ವ್ಯಾಯಾಮಗಳ ಮೂಲಕ ಈ ಹಾರ್ಮೋನುಗಳ ದುಷ್ಪರಿಣಾಮವನ್ನು ನಿವಾರಿಸಿಕೊಳ್ಳಬಹುದು. ಪ್ರತಿದಿನ ಕನಿಷ್ಠ ಐದು ಕಿಲೋಮೀಟರ್ ನಡೆದರೆ ಈ ಹಾರ್ಮೋನುಗಳ ಪ್ರಭಾವ ನಿವಾರಣೆಯಾಗುತ್ತದೆ. ಏರಿರುವ ರಕ್ತದೊತ್ತಡ ಇಳಿಯುತ್ತದೆ. ಹೆಚ್ಚಿರುವ ಸಕ್ಕರೆ ಕಡಿಮೆಯಾಗುತ್ತದೆ. ಆದರೆ ಈ ಮೂರ್ಖರ ಪೆಟ್ಟಿಗೆಯ ಕಾರಣ, ನಾವು ನಡೆಯುವುದನ್ನು ಮರೆತಿದ್ದೇವೆ!

ಉಪಸಂಹಾರ

'ಮನುಷ್ಯನ ಮನಸ್ಸು ಎನ್ನುವುದು ಅವನ ಬಂಧನಕ್ಕೆ ಕಾರಣ ಹಾಗೂ ಅವನ ಮೋಕ್ಷಕ್ಕೂ ಕಾರಣ' ಎನ್ನುವ ಮಾತಿನಲ್ಲಿ ಅರ್ಥವಿದೆ. ಹಿತ-ಮಿತ ಆಹಾರ ಹಾಗೂ ವ್ಯಾಯಾಮಗಳ ಮೂಲಕ ನಮ್ಮ ಶಾರೀರಿಕ ಆರೋಗ್ಯವನ್ನು ಕಾಪಾಡಿಕೊಳ್ಳುವ ಹಾಗೆ, ಅರಿಷಡ್ವರ್ಗಗಳನ್ನು ಅಂಕೆಯಲ್ಲಿಟ್ಟುಕೊಳ್ಳುವುದರ ಮೂಲಕ ಮಾನಸಿಕ ಆರೋಗ್ಯವನ್ನು ಕಾಪಾಡಿಕೊಳ್ಳಬೇಕಾಗುತ್ತದೆ. ಇದನ್ನು ಬಿಟ್ಟು ಬೇರೆ ದಾರಿಯಿಲ್ಲ!

ಆರೋಗ್ಯದಲ್ಲಿ ದೇಹ-ಮನಸ್ಸು

– ಈಶ್ವರ ದೈತೋಟ, ಬೆಂಗಳೂರು
ಪತ್ರಕರ್ತರು, ೯೩೪೩೩೮೦೬೮
ishwardaitota@gmail.com

"ವಂದಿಪೆ ನಿನಗೆ ಗಣನಾಥ, ಮೊದಲೊಂದಿಪೆ ನಿನಗೆ", "ಉದರ ವೈರಾಗ್ಯವಿದೂ ನಮ್ಮ ಪದುಮನಾಭನಲಿ ಲೇಶ ಭಕುತಿಯಿಲ್ಲ." "ಏನಿದು ಏಕಾಏಕಿ ಭಜನೆ ಶುರು ಮಾಡಿದ್ದೀರಲ್ಲಾ" ಅಂತ ಅನುಮಾನ ಬರುವಂತದ್ದೇ. ಆದರೆ, **'ಸೈಕೋ ನ್ಯೂರೋ ಇಮ್ಯುನಾಲಜಿ'** ಹೆಸರು ಕೇಳಿದ್ದೀರಾ? ಅದು ಅಮೆರಿಕಾದಿಂದ ಬಂದದ್ದು. ನಮ್ಮ ದೇಶದಿಂದ ಹೋದ ಓಶೋನಿಂದಾಗಿ ಈ ಸಂಶೋಧನಾ ಟಿಸಿಲು ಹುಟ್ಟಿಕೊಂಡಿತೆಂದರೆ "ಓಹೋ" ಎನ್ನದಿರಲಾದೀತೆ! ಯೋಗ, ಭಜನೆ, ಧ್ಯಾನಗಳಿಂದ ಸೃಷ್ಟಿಗೊಂಡ ಟ್ರಾನ್ಸೆನ್‌ಡೆಂಟಲ್ ಮೆಡಿಟೇಶನ್ ಪ್ರಯೋಗಾಲಯ ಸೇರಿತು. ಅದರ ಪರಿಣಾಮವೇ ಮೈಂಡ್ ಬಾಡಿ ಮೆಡಿಸಿನ್ ಅಥವಾ ಸೈಕೋನ್ಯೂರೋ ಇಮ್ಯುನಾಲಜಿ. ನೌ ಕಂಟ್ರೋಲ್ಡ್ ಸೈಂಟಿಫಿಕ್ ಸ್ಟಡೀಸ್ ಹ್ಯಾವ್ ಶೋನ್ ದ್ಯಾಟ್ ಟೆಕ್ನಿಕ್ಸ್ ಲೈಕ್ ಮೆಡಿಟೇಶನ್ ಕ್ಯಾನ್ ಹೆಲ್ಪ್ ಇನ್ ಕ್ಯೂರಿಂಗ್.

ಖಿನ್ನತೆ, ಉದ್ವೇಗ, ಅಧಿಕ ರಕ್ತದೊತ್ತಡ, ಹೃದಯಬೇನೆ, ನಿದ್ರಾಹೀನತೆ, ಮಧುಮೇಹ, ಕರುಳು ಹುಣ್ಣು, ಶೀತ, ಜ್ವರ, ದಮ್ಮು, ಗಂಟುನೋವು ಮತ್ತು ಕುಡಿತದ ಚಟ ಎಂದು ಅಲ್ಲಿನ ವೈದ್ಯ ವಿಜ್ಞಾನಿಗಳು ಹೇಳತೊಡಗಿದ್ದಾರೆ. ದೇವರ ಪ್ರಾರ್ಥನೆ, ಭಜನೆ, ಧ್ಯಾನ ಮತ್ತು ಯೋಗನಿದ್ರೆಗಳಂತಹ ಶಮನಕಾರಿ ಕ್ರಮಗಳಿಗೆ ದುಡ್ಡು ಖರ್ಚಿಲ್ಲವೆಂಬುದು ಕೂಡ ಬಹಳ ಮುಖ್ಯ. ಅಲೋಪತಿ ಮೆಡಿಸಿನ್ ಇವತ್ತು ದುಡ್ಡುಕೊಟ್ಟು ಪೂರೈಸದಷ್ಟು ದುಬಾರಿಯಾಗಿದೆ. ಆರ್ಥಿಕತೆ ಸಡಿಲಿಸಿದ ಮೇಲೆ ನಮ್ಮಲ್ಲಿನ ಮೂರು ಕಾಸಿನ ಗುಳಿಗೆಗಳೂ ಮೂರು ರೂಪಾಯಿಗಿಂತ ಕಡಿಮೆಯಿಲ್ಲ ಎಂಬಂತಾಗಿರುವುದು ನಮಗೂ ಗೊತ್ತಿದೆ.

ಕಡಿಮೆ ಖರ್ಚಿನ ಔಷಧ ಕ್ರಮ ಪಸರಿಸಲು ಅಲ್ಲೆಲ್ಲ ಸ್ವಯಂಸೇವಾ ಸಂಘಟನೆಗಳು ತಲೆಯೆತ್ತಿವೆ. ಅಂತಹ ಸಂಶೋಧನೆಗಳಿಗೆ ತನುಮನಧನ ದಾನ ಕೊಡಲು ಮುಂದೆ ಬಂದಿವೆ. ಅಂತಹದೊಂದು ಸಂಶೋಧನೆಯಿಂದ ಬ್ಲಡ್ ಪ್ರೆಷರ್ ಔಷಧ ಸೇವನೆಯೊಂದಿಗೆ ಧ್ಯಾನ ಮಾಡುತ್ತಿದ್ದರೆ ಅಥವಾ ಯೋಗನಿದ್ರೆ, ಭಜನೆ ಅಭ್ಯಾಸ ಇದ್ದರೆ ಮದ್ದಿನ ಗುಣ ಇಮ್ಮಡಿಸುತ್ತದೆಂದು ತಿಳಿದು ಬಂದಿದೆ. ಕಣ್ಣು ಮುಚ್ಚಿ ಮಲಗಿ ಮನಸ್ಸಿನಲ್ಲಿ ಚಿತ್ರಿಸಿಕೊಳ್ಳುವ ವಿಚಾರ, ಆರೋಗ್ಯ ಅಥವಾ ಅನಾರೋಗ್ಯದ ದಿಕ್ಕು ನಿರ್ಧರಿಸುತ್ತದಂತೆ. ಅದಕ್ಕೆ ನಮ್ಮಲ್ಲಿ ಮಲಗಿದ ಕೂಡಲೇ ಕಣ್ಣು ಮುಚ್ಚುವವರು, ಅಂದರೆ ಸ್ವಸ್ಥ ನಿದ್ರೆ ಬರುವವರು ಪುಣ್ಯವಂತರು ಎನ್ನಲಾಗುತ್ತದೆ.

ಶವಾಸನದಲ್ಲಿ ಮಲಗಿ, ಮನ;ಕ್ಲೇಶ ಮರೆತು ಆಹ್ಲಾದಕರ ವಿಚಾರದತ್ತ ಗಮನ ಕೇಂದ್ರೀಕರಿಸಿದರೆ ಅದ್ಭುತ ಪರಿಣಾಮವುಂಟು. ಆದರೆ ಮಲಗುವಾಗ ಮನದಲ್ಲುಂಟಾಗುವ ಚಿತ್ರಗಳು ಘೋರ, ದುಃಖಕರ ವಿಚಾರಗಳಿದ್ದರೆ 'ಇನ್ಸುಲಾ' ಎಂಬ ಭಾಗವನ್ನು ಚಟುವಟಿಕೆಗೊಳಿಸುತ್ತದೆ. ಇನ್ಸುಲಾಕ್ಕೆ ಮನೋಭಾವನೆಗಳನ್ನು ಉದ್ದೀಪಿಸುವ ಮೆದುಳಿನ ಭಾಗದಲ್ಲಿ ವಿಸ್ತೃತ ನರಜಾಲವಿದೆ. ಹಾಗೂ ನೇರವಾಗಿ ಹೊಟ್ಟೆಗೂ ಕರುಳಿಗೂ ಸಂಪರ್ಕವಿಟ್ಟುಕೊಂಡಿದೆ ಎಂದರೆ ಹೊಟ್ಟೆ ವ್ರಣಕ್ಕೆ ಮೂಲಬೇರು ಎಲ್ಲಿದೆ ಎಂದು ಊಹಿಸಬಹುದಲ್ಲ.

ಸಕ್ಕರೆ ಕಾಯಿಲೆ, ಅಧಿಕ ರಕ್ತದೊತ್ತಡ, ಕೊಲೆಸ್ಟೆರಾಲ್, ಹೃದಯಬೇನೆ, ಅರ್ಬುದ ಮುಂತಾದ ಕಾಯಿಲೆಗಳು ತಿಂದು ಕೊಬ್ಬಿದವರನ್ನೇ ಹೆಚ್ಚು ಕಾಡುತ್ತವೆಂದು ಸಂಶೋಧನೆ ದಾಖಲಿಸಿದೆ. ಪಚನಶೂನ್ಯತೆ, ಗಾಲ್‌ಬ್ಲಾಡರ್ ಡಿಸೀಸ್ ಮುಂತಾದವನ್ನು ಈ ಪಟ್ಟಿಗೆ ಸೇರಿಸಬಹುದು. ಆದರೆ ಅದೆಲ್ಲ ಆಧರಿಸಿರುವುದು ವ್ಯಕ್ತಿ ಸಾಮಾನ್ಯ ಲೆಕ್ಕಕ್ಕಿಂತ ಎಷ್ಟು ಅಧಿಕ ತೂಕ ಹೊಂದಿಸಿಕೊಂಡಿದ್ದಾನೆ ಎಂಬ ಅಂಶದ ಮೇಲೆ. ದೇಹದ ಕೊಬ್ಬಿನಂಶ ಇರಬೇಕಾದ್ದಕ್ಕಿಂತ ೨೦% ಕ್ಕಿಂತಲೂ ಹೆಚ್ಚಿಲ್ಲದಿದ್ದರೆ ಗಾಬರಿಯೇನಿಲ್ಲವಂತೆ.

ಅಮೆರಿಕಾದಲ್ಲಾಗಿರುವಂತೆ ಸಣ್ಣಕ್ಕಾಗುವ ಚಟ ಭಾರತಕ್ಕೂ ಕೈಕಾಲು ತಲೆ ಎಲ್ಲ ಇಟ್ಟಿದೆ.

"ವಿ ಫೀಲ್ ಬಿಗ್ಗರ್ ವೆನ್ ವಿ ಆರ್ ಸ್ಮಾಲರ್, ವಿ ಫೀಲ್ ಸ್ಮಾಲರ್ ವೆನ್ ವಿ ಆರ್ ಬಿಗ್ಗರ್" ಎಂಬ ನಾಣ್ನುಡಿಯನ್ನು ಮಾಡಿ ಬಿಟ್ಟಿದ್ದಾರೆ. ಸಣ್ಣಕ್ಕಾಗಬೇಕು ನಿಜ. ಯಾಕಾಗಿ? ಇನ್ನೊಬ್ಬರ ಸಂತೋಷಕ್ಕಾಗಿ ಆದರೆ, ಸಣ್ಣಕ್ಕಾದ ವ್ಯಕ್ತಿಗಳ ಮನಸ್ಥಿತಿ ಅಷ್ಟು ಖುಶಿಯಿರುವುದಿಲ್ಲ ಎಂಬ ಹೇಳಿಕೆಯೂ ಇದೆ. ಒಳ್ಳೆ ದೈಹಿಕ, ಮಾನಸಿಕ ಆರೋಗ್ಯಕ್ಕೆ ಎಕ್ಸರ್‌ಸೈಸ್ ಮಾಡಬೇಕೆಂಬುದು ನಿಜ. ಶರೀರ ಶ್ರಮದಿಂದ ಕ್ಯಾಲೋರಿ ಸುಡುತ್ತದೆ. ಮೆಟಬಾಲಿಸಂ ವೃದ್ಧಿಸುತ್ತದೆ ಮತ್ತು ಕೊಬ್ಬು ಹೋಗಿ ಮಾಂಸಖಂಡ ಬಲಿಯುತ್ತದೆ. ಅದರಿಂದ ಮೆಟಬಾಲಿಸಂ ಮತ್ತಷ್ಟು ಸುಧಾರಿಸುತ್ತದೆ.

ಎಕ್ಸರ್‌ಸೈಸ್‌ನಿಂದ ಅಷ್ಟೇ ಅಲ್ಲ; ಮಾಡುವವರ ಮನೋಸ್ಥಿತಿಯ ಮೇಲೂ ಪರಿಣಾಮ ಬೀಳುತ್ತದೆ. ಅವರ ಆತ್ಮವಿಶ್ವಾಸ ಹೆಚ್ಚುತ್ತದೆ. ಖುಶಿ ಬರುತ್ತದೆ. ಒಟ್ಟಿನಲ್ಲಿ ಎಕ್ಸರ್‌ಸೈಸ್ ಮಾಡಿದಾಗ ಮನಸ್ಸಿನ ಮೇಲೆ ಸತ್‌ಪರಿಣಾಮಗಳಾಗಿ ಆಹಾರ ಕ್ರಮಕ್ಕೊಂದು ಶಿಸ್ತು ಬರುತ್ತದೆ. ಆಗ ಮಾಡುವ ಪಥ್ಯ ದೇಹಕ್ಕೂ, ಮನಸ್ಸಿಗೂ ಒಳ್ಳೆಯದು ಎನ್ನುತ್ತದೆ ಸಂಶೋಧನೆ. ಹಾಗೆಂದು ಜಿಮ್‌ಗೆ ಹೋಗಿ ತಲೆಕೆಳಗೆ ಕಾಲುಮೇಲೆ ಮಾಡಬೇಕಿಲ್ಲ. ಗರಡಿಮನೆಗೆ ತೆರಳಿ ಮುನ್ನೂರು ಬಸ್ಕಿ ಹೊಡೆಯಬೇಕಿಲ್ಲ. ದಿನಕ್ಕೆರಡು ಬಾರಿ ಮೆಟ್ಟಲು ಹತ್ತಿಳಿದವರು ಹೃದಯಾಘಾತದಿಂದ ತಪ್ಪಿಸಿಕೊಂಡದ್ದೂ ಇದೆಯೆನ್ನುತ್ತದೆ ವೈದ್ಯಕೀಯ ದಾಖಲೆ.

ದಿನಕ್ಕೆರಡು ಗಂಟೆ ದೇಹ ದಂಡಿಸದೆ, ಬೆಳಗ್ಗೂ ಸಂಜೆಯೂ ಐದ್ಯೆದು ಕಿಲೋ ಮೀಟರ್ ಬೆಟ್ಟ ಹತ್ತಿ ಇಳಿಯುತ್ತೇನೆ ಎಂದೆಲ್ಲ ಶಿಫಾರಸಿಗೆ ಹೇಳಿಕೊಳ್ಳುವುದಕ್ಕಿಂತ ಮಂತ್ರ ಇರುವುದು "ನಾವು ಆರೋಗ್ಯ ಪೂರ್ಣ ಶರೀರದಿಂದ ದೈವದತ್ತವಾದ ದೀರ್ಘಾಯುಸ್ಸನ್ನು ಸಂಪೂರ್ಣವಾಗಿ ಅನುಭವಿಸಬೇಕು." ಎಂಬ ದೃಢ ಮನದಾಶೆಯಲ್ಲಿ.

ಒಮ್ಮೆ ಪ್ರಸಿದ್ಧ ಸೈಕಾಲಜಿಸ್ಟ್ ಡಾ. ಕಾರ್ಲ್ ಮೆನ್ನಿಂಗರ್ ಭಾಷಣ ನಡೆಯುತ್ತಿತ್ತು. ವಿಷಯ ಮಾನಸಿಕ ಸ್ವಾಸ್ಥ್ಯ. ಪ್ರಶ್ನೋತ್ತರಕ್ಕೂ ಅವಕಾಶವಿತ್ತು. ಪ್ರಶ್ನೆ: "ಒಬ್ಬ ವ್ಯಕ್ತಿ ನರ್ವಸ್ ಬ್ರೇಕ್‌ಡೌನ್ ಆಗುತ್ತದೆಂಬ ಸುಳಿವು ಸಿಕ್ಕಿದರೆ ಆತ ಏನು ಮಾಡಬೇಕು?" ಸಹಜವಾಗಿಯೇ "ಕನ್ಸಲ್ಟ್ ಎ ಸೈಕಾಲಜಿಸ್ಟ್" ಎಂಬ ಉತ್ತರ ಬಹುತೇಕರ ನಿರೀಕ್ಷೆಯಿತ್ತು. ಆದರೆ ಬಂದ ಉತ್ತರ ಸಭಿಕರೆಲ್ಲರನ್ನು ಚಕಿತಗೊಳಿಸಿತು.

ಉತ್ತರ: ಮನೆಗೆ ಬೀಗ ಜಡಿದು, ರೈಲ್ವೆ ಹಳಿ ದಾಟಿ, ಯಾರಾದರೂ ತೊಂದರೆಯಲ್ಲಿರುವವರನ್ನು ಹುಡುಕಿ ಅವರಿಗೆ ನೆರವಾಗಲು ಶ್ರಮಿಸಬೇಕು".

ಇತ್ತೀಚೆಗೆ, ಅಪ್ತಮಿತ್ರರದೊಂದು ಕರೆ ಬಂತು. ಫೋನಿನಲ್ಲಿ ಅವರು ಯಾರಾದರೂ ಒಳ್ಳೇ ಡಾಕ್ಟರು ಗೊತ್ತೇ, ಮುಂಜಾನೆಯಷ್ಟೇ ಕಾಲು ಮುರಿದುಕೊಂಡೆ, ನೋವು ತಡಿಯೋಕಾಗ್ತಿಲ್ಲ ಎಂದು ಅವಸರಿಸಿದರು. ಅದ್ಹೇಗ್ರೀ ಬೆಳ್ಳಂಬೆಳಗೇ ಮುರ್ಕೊಂಬಿಟ್ರಿ? ಅದೇನು ಗೋಡೆ ಹಾರ್ತಿದ್ರಾ ಎಂದು ರೇಗಿಸಿದ್ದಕ್ಕೆ ಈಗ್ಲೂ ತಮಾಶೆ ಮಾಡ್ತೀರಲ್ಲ ಎಂದು ಸಿಡುಕಿದರು. ಪರಿಚಯದ ಡಾಕ್ಟ್ರಿದ್ದ ಆಸ್ಪತ್ರೆಗೆ ಅವರನ್ನು ಕರೆದೊಯ್ದೆನು.

ಕುಶಾಲಿನ ಡಾಕ್ಟ್ರು. ಕೀಟಲೆಪ್ರಿಯರು. ಪಾದದಲ್ಲೆರಡು ಮೂಳೆಗಳು ಮುರಿದಂತಿದೆ, ನೀವು ಭಾರೀ ಅಡ್ವೆಂಚರ್ಸ್ ಪಾರ್ಟಿ ಇರ್ಬೇಕು, ಮೂರು ತಿಂಗ್ಳಲ್ಲಿ ಎಲ್ಲಾ ಸರಿಹೋಗತ್ತೆ, ಡೋಂಟ್ ವರ್ರಿ ಮಾಡ್ಕೋಬೇಡಿ ಎಂದು ಸಮಾಧಾನ ಹೇಳಿ, ಎಕ್ಸರೇ ವಿಭಾಗಕ್ಕೆ ಸೂಚನೆ ಕೊಟ್ಟು ಏನಾಯ್ತು ಏಕ್ಸಿಡೆಂಟು? ಎಂದು ಪೇಶೆಂಟ್ ಕಥೆ ಕೇಳಲು ಕೂತರು.

ಲಾಲ್‌ಬಾಗಿಗೆ ೧೫ ವರ್ಷಗಳಿಂದ ದಿನವೂ ಮುಂಜಾನೆ ವಾಕಿಂಗ್ ಹೋಗೋ ಅಭ್ಯಾಸ ಇದೆ ಸ್ಸಾರ್. ಇವತ್ತೂ ಹೋಗಿದ್ದೆ, ನನ್ನ ಸ್ಟಾರ್ಸ್ ಸರಿ ಇರ್ಲಿಲ್ಲ ಅಂತ ಕಾಣತ್ತೆ. ಇವತ್ತು ಹೀಗಾಯ್ತು ನೋಡಿ, ಎಂದು ಅಲವತ್ತುಕೊಂಡರು. ಹೇಳೋಕೇ ಬೇಜಾರಾಗತ್ತೆ, ಏಕ್ಸಿಡೆಂಟೂ ಅಲ್ಲ, ಮಣ್ಣೂ ಇಲ್ಲ, ದಿನವೂ ಹೋಗೋ ಫೂಟ್‌ಪಾತ್ನಲ್ಲಿಯೇ ಹೋಗ್ತಿದ್ದಾಗ, ನಿನ್ನೆ ಇಲ್ಲದಿದ್ದ ವಾಟರ್ ಪೈಪೊಂದು ಇವತ್ತು ಮೇಲೆದ್ದು ನಿಂತಿದ್ದು ನಸುಬೆಳಕಿನಲ್ಲಿ ಕಣ್ಣಿಗೆ ಕಾಣ್ಲಿಲ್ಲ ಸ್ಸಾರ್, ಎಡವಿ ಪಲ್ಟಿ ಹೊಡೆದು ಬಿದ್ಬಿಟ್ಟೆ, ಬೀಳುವಾಗ ಕೈ ಕೊಟ್ರೂ ಕಾಲು ಫಟಾರ್ ಅಂತು, ಅಸಾಧ್ಯ ನೋವು ಎಂದು ಕಣ್ಣೀರು ಒರೆಸಿಕೊಂಡರು.

ಅದಕ್ಕೆ ಡಾಕ್ಟರು, ನಿಮಗೊಂದು ಗುಡ್ ನ್ಯೂಸ್ ಹೇಳ್ತೀನಿ, ಕೇಳೀ. ವಾಕಿಂಗ್ ಹೋಗ್ತಾ ಬಿದ್ದು ಕಾಲು,ಕೈ ಮುರ್ಕೊಂಡಿರೋವರು ನೀವೊಬ್ರೇ ಅಲ್ಲ. ದಿನವೂ ಈ

ಬೆಂಗಳೂರಿನಲ್ಲಿ ಅಂಥವರು ಐದಾರು ಮಂದಿ ನಮ್ಮ ಆಸ್ಪತ್ರೆಗೆ ಬರ್ತಾರೆಎನ್ನುತ್ತಾ, ಪಾದಚಾರಿಗಳಿಗ 'ಇದೆಲ್ಲಾ ಇದ್ದಿದ್ದೇಬಿಡ್ರೀ ಎಂದು ಸಮಾಧಾನಿಸಿದರು. ಹಾಗಿದ್ರೆ, ವಾಕಿಂಗ್‌ಮಾಡ್ತಾ ಕಾಲೋ, ಕೈನೋ ಮುರುದ್ರೆ, ಓಪರ್ವಾಗಿಲ್ಲ ಎಂದು ನನಗೂ ಸ್ವಲ್ಪಧೈರ್ಯಬಂತು. ನಮ್ಮ ಪೇಶೆಂಟಿಗೂ ಖುಶಿ ಆಯ್ತು.

ಇದು ಪೀಠಿಕೆ ಅಷ್ಟೇ, ವಿಷಯ ಇರುವುದು ಪಾದಗಳದು. ಮನುಷ್ಯನಿಗೆ ಪಾದಗಳು ಮಾಡುವ ಸೇವಾನುಕೂಲ ಗಮನಿಸಿದರೆ, ಅವುಗಳ ಹೊಣೆಗಾರಿಕೆ ಮತ್ತು ಸಾಮರ್ಥ್ಯಕ್ಕೆ ಕೈ ಮುಗಿದು ನಮಸ್ಕರಿಸಬೇಕು. ನೆಲದಲ್ಲಿ ನಡೆದಾಡಿಸುವ ಪಾದಾಚಾರದ ಮಹಿಮೆ ಅಂತಹ ಉನ್ನತ ಮಟ್ಟದ್ದು. ದೇಹದಲ್ಲಿ ಅತ್ಯಂತ ಎಡೆಬಿಡದ ಚಟುವಟಿಕೆಯ ಕೇಂದ್ರವೇ ಹಾರ್ಟು. ದ್ವಿತೀಯ ಬಿರುಸಿನ ಕೆಲಸಗಾರ ಫೂಟು. ಮಿದುಳು, ನಾಲಿಗೆ, ತೋಳುಗಳ ಬಲವೆಷ್ಟೇ ಇದ್ದರೂ, ಪಾದಪದ್ಮಗಳಿಗೆ ಹೋಲಿಕೆ ಮಾಡಿದರೆ ಅವುಗಳ ಕೊಡುಗೆ ಒಂದಿಷ್ಟು ಕಮ್ಮಿಯೇ ಎನ್ನಬಹುದು. ಸಮಾಜದಲ್ಲಿ ಸಮಾನತೆ ಇರಬೇಕೆನ್ನುವ ನಾವು ನಮ್ಮದೇ ದೇಹದಲ್ಲಿ ಮಾಡುವ ತಾರತಮ್ಯವನ್ನು ಗಮನಿಸುವುದೇ ಇಲ್ಲ. ಕಾಲಿಗೊಂದು ನೀತಿ, ತಲೆಗೊಂದು ನೀತಿ ಎನ್ನುವುದು ನಮ್ಮ ಬುದ್ಧಿ. ಹುಲುಮೀಸೆಗಾದರೂ ಮರ್ಯಾದೆ ಉಂಟು, ಸರ್ವಸಮರ್ಥ ಕಾಲುಗಳನ್ನು ಲೆಕ್ಕಕ್ಕಿಡುವುದಿಲ್ಲ.

ಯಾವುದೇ ಸೂಪರ್ ಕಂಪ್ಯೂಟರ್ ಇಲ್ಲದೆಯೇ ಸೃಷ್ಟಿಕರ್ತ ಮಾಡಿರುವ ಪಾದಗಳದು ಅತ್ಯದ್ಭುತ ಡಿಸೈನ್ ! ಕೆಲವೊಮ್ಮೆ ಮ್ಯಾನುಫಾಕ್ಚರಿಂಗ್ ಡಿಫೆಕ್ಟ್ ಬರುವುದಿಲ್ಲವೆಂದಲ್ಲ. ಆ ರೀತಿ ಡಿಫೆಕ್ಟ್ ಬಂದಾಗ ಸರಿಪಡಿಸುವುದು ಹೇಗೆಂದು ಮಾನವ ನಿರ್ಮಿತ ಕಂಪ್ಯೂಟರ್‌ಗಳಿಗೆ ಈಗ ಹೇಗಿದ್ದರೂ ಜ್ಞಾನ ಬಂದಿದೆಯಲ್ಲ.

ಪ್ರತಿ ಪಾದದಲ್ಲಿಯೂ ಒಂದಕ್ಕೊಂದು ವಿಭಿನ್ನ ಆಕಾರದ ಎರಡೂವರೆಯಿಂದ ಎಂಟಿಂಚಿನವರೆಗೆ ಉದ್ದಗಲ ಆಕಾರದ ೨೬ ಮೂಳೆಗಳು, ೧೩೭ ಗಂಟುಗಳಲ್ಲಿ ಜೋಡಿಸಲ್ಪಟ್ಟಿವೆ. ಅದುವೇ ನಮ್ಮ ಸುಲಲಿತ ಚಲನೆಗೆ ಆಧಾರ. ಪಾದಗಳ ಬಾಗುವಿಕೆ, ಆಘಾತ ಸಹಿಸಿಕೊಳ್ಳುವ ಎಲ್ಲ ಜಾಣತನದಿಂದಾಗಿ ನಿಲ್ಲುವಾಗ, ಹಾರುವಾಗ, ಕುಣಿಯುವಾಗ ಉಂಟಾಗುವ ಒತ್ತಡ, ಸಂಘರ್ಷಗಳ ಅಪಾಯ ತಟ್ಟುವುದಿಲ್ಲ. ಅತ್ಯುತ್ಕೃಷ್ಟ ಜೋಪಾಸನಾ ರಚನೆ ಅದರದು. ಮಾನವನ ಸ್ವಂತ ಸೃಷ್ಟಿಯಾದ ವಾಹನಗಳ ತಂತ್ರಜ್ಞಾನವೇನಾದರೂ ನಮ್ಮ ಪಾದಗಳಿಗೆ ಅಳವಡಿಕೆಯಾಗಿದ್ದಿದ್ದರೆ, ದಿನವೂ ಮೂಳೆಮುರಿತ, ನರಸೆಳೆತ, ಜೀವಕಣಜಾಲ ಹರಿತಗಳಿಂದಾಗಿ ನಾವು ಗ್ಯಾರೇಜಿನಲ್ಲಿಯೇ ಬಿದ್ದಿರಬೇಕಾಗಿರುತ್ತಿತ್ತು ಎಂಬುದಕ್ಕೆ ಅನುಮಾನವೇ ಬೇಡ.

ಏಕೆ ನಮ್ಮ ಪಾದಗಳ ಚಟುವಟಿಕೆ ಇಷ್ಟೊಂದು ಸಮರ್ಥವಾಗಿ ನಡೆಯುತ್ತಿದೆ ಎಂದರೆ ಮೂಳೆಗಳನ್ನು ಅಸ್ಥಿಬಂಧಕ, ನರ, ಸ್ನಾಯುಗಳು ಜೋಡಿಸಿಟ್ಟಿರುವ ಜಾಲ ಅತೀ ಅಮೋಘವಾದುದು. ಮೂಳೆಗಳ ವ್ಯವಸ್ಥೆ ಎಷ್ಟು ಸೂಕ್ಷ್ಮವಾಗಿ ಇದೆಯೆಂದರೆ, ಅದರಿಂದ

ನಾಲ್ಕು ಪ್ರತ್ಯೇಕ ನ್ಯಾಚುರಲ್ ಕಮಾನುಗಳು ಉಂಟಾಗುತ್ತವೆ. ಪಾದಕ್ಕೆ ಆಧಾರ ಕೊಡುವ ಕೆಲಸವನ್ನಷ್ಟೇ ಅವು ಮಾಡುವುದಲ್ಲ; ಚಲಿಸುವ ಪಾದಗಳಲ್ಲಿ ಉಂಟಾಗುವ ನೂರಾರು ವಕ್ರತೆಗಳಿಗೆ ಅವು ಸ್ಪಂದಿಸುತ್ತವೆ. ಸ್ಥಿತಿಸ್ಥಾಪಕತ್ವ ಹಾಗು ಮೃದುತ್ವ ನೀಡುತ್ತವೆ. ಫ್ಲಾಟ್ ಫೂಟ್ ಇರುವವರಿಗೆ ಶಾಕ್ ಅಬ್ಸಾರ್ಬರ್ ಗುಣದ ಕೊರತೆಯಿಂದಾಗಿ ನಡೆದಾಡಲು ನೋವು ಉಂಟಾಗುವುದು ಈ ಸಹಜ ಬೆಂಡ್‌ಗಳು ಇಲ್ಲದಿರುವುದರಿಂದ. ಅದನ್ನು ಸರಿಪಡಿಸಲೆಂದೇ ಈಗ ಮಾನವ ಕಂಪ್ಯೂಟರ್ ಎಯ್ಡೆಡ್ ಡಿಸೈನ್ ಶೂಸ್‌ಗಳು, ಫೂಟ್‌ವೇರ್‌ಗಳನ್ನು ತಯಾರಿಸತೊಡಗಿದ್ದಾನೆ.

ದಿನವೂ ಮುಂಜಾನೆಯಾಗಲೀ, ಸಂಧ್ಯಾಕಾಲದಲ್ಲಾಗಲೀ ವಾಕಿಂಗ್ ಮಾಡಿರೆಂದು ಆರೋಗ್ಯ ಕಳಕಳಿಯಿದ್ದವರು ಕಿವಿಮಾತು ಹೇಳಿಯೇ ಹೇಳುತ್ತಾರೆ. ಆದರೆ, ನಮ್ಮ ನಗರದ ರಸ್ತೆಗಳು, ಅದರಲ್ಲಿಯೂ ಫೂಟ್‌ಪಾತುಗಳು ಮರಣಗುಂಡಿಗಳಾಗಿಬಿಡುತ್ತಿವೆ. ಬೆಂಗಳೂರಿನ ರಸ್ತೆಗಳಲ್ಲಿ ದಿನಕ್ಕೆ ಹತ್ತು ಹದಿನೈದು ಪಾದಚಾರಿಗಳು ಹಲವು ರೀತಿಯಿಂದ ಅಮಾಯಕವಾಗಿ ಅಪಾಯಕ್ಕೆ ತೆರೆದುಕೊಳ್ಳುತ್ತಿರುವುದಕ್ಕೆ ಸಂಶೋಧನೆಯೇನೂ ಮಾಡಬೇಕಿಲ್ಲ.

ನಗರದ ಹಿರಿಯ ವೈದ್ಯರಾಗಿದ್ದ ಜಯರಾಮರು, ಹೆಸರಾಂತ ನೀರಾವರಿ ತಜ್ಞ ಬಾಳೆಕುಂದ್ರಿಯವರು ಎಂದು ಪಾದಚಾರಿಗಳಾಗಿ ಜೀವ ಕಳೆದುಕೊಂಡವರು ಅನೇಕರನ್ನು ನೆನಪು ಮಾಡಿಕೊಳ್ಳಬಹುದು. ಅವರಿಗಿದ್ದ ಆಸಕ್ತಿ ಆರೋಗ್ಯ ಕಾಪಾಡಿಕೊಳ್ಳುವುದು, ಅದಕ್ಕೆ ಅವರು ಮಾಡುತ್ತಿದ್ದ ಚಟುವಟಿಕೆ ಸಿಂಪಲ್- ವಾಕಿಂಗ್. ಅದುವೇ ಅವರನ್ನು ಬಲಿತೆಗೆದುಕೊಂಡಿತು.

ಪಾದರಸ್ತೆಗಳನ್ನೆಲ್ಲ ವಾಹನ ನಿಲುಗಡೆ, ರಸ್ತೆಯಂಗಡಿಗಳು, ತಳ್ಳುಗಾಡಿಗಳು ಕಬಳಿಸುತ್ತಿರುವುದು ಇನ್ನೊಂದು ತೀವ್ರತಮ ಸಮಸ್ಯೆ. ರಸ್ತೆಬದಿ ಮಾಲಿನ್ಯವಂತೂ ಪೊಲೀಸರನ್ನು ಮಾತ್ರವಲ್ಲ, ರಸ್ತೆ ಬಳಕೆದಾರರನ್ನೆಲ್ಲ ಕಾಡುತ್ತಿರುವ ಕಾಟ. ಟ್ರೆಡ್ ಮಿಲ್‌ಗಳನ್ನೇನೋ ಬಳಸಬಹುದು. ಆದರೆ, ಅದರ ಸಮಸ್ಯೆಗಳಿನ್ನೂ ನಮ್ಮ ಅರಿವಿಗೆ ಬರಬೇಕಷ್ಟೆ!

ಅಯ್ಯೋ ನನಗೆ ಪೂಜೆಯೇನು ಬೇಡ, ನನಗೆ ನನ್ನದೇ ಕೆಲಸವಾದ ನಡೆದಾಡಲು ಕೂಡ ಈ ಪ್ರಜಾಪ್ರಭುತ್ವದಲ್ಲಿ ಅವಕಾಶವಿಲ್ಲವಲ್ಲ ಎಂದು ನನ್ನ ಕಾಲುಗಳೀಗ ಅಳತೊಡಗಿವೆ. ನಾನೇನು ಮಾಡಲಿ ಭಗವಂತಾ!

ನೆನಪಿನ ವಿಮಾನದಲ್ಲಿ

– ಜಿ.ವಿ. ನಿರ್ಮಲ, ಬೆಂಗಳೂರು
ರಾವೈಪ್ರ ನಿವೃತ್ತ ವಿಜ್ಞಾನಿ, ಲೇಖಕರು
೯೮೪೫೨೯೩೭೦೪, gv_nirmala@yahoo.com

ಮನುಷ್ಯನಿಗೆ ಬಹಳ ಹಿಂದಿನಿಂದಲೂ ಸ್ವಚ್ಛಂದವಾಗಿ ಗಗನದಲ್ಲಿ ಹಾರುವ ಆಸೆ. ತಾನು ಕೂಡ ಹಕ್ಕಿಯಂತೆ ಹಾರುವಂತಿದ್ದರೆ ಎಷ್ಟು ಚೆನ್ನ? ಎಂದು ಯೋಚಿಸುತ್ತ ಹಲವಾರು ಪ್ರಯತ್ನಗಳ ಮಾಡಿದ, ರೆಕ್ಕೆ ಪುಕ್ಕಗಳನ್ನು ಕಟ್ಟಿಕೊಂಡು ಹಾರಲು ಹೋಗಿ ಮೈಕೈಗಳ ಮೂಳೆ ಮುರಿದುಕೊಂಡ, ಅನೇಕ ಪ್ರಸಂಗಗಳು ಇತಿಹಾಸದಲ್ಲಿ ದಾಖಲಾಗಿವೆ. ಇಂತಹ ಹಲವಾರು ಪ್ರಯತ್ನಗಳ ನಂತರ ಮನುಷ್ಯನಿಗೆ ಹಾರುವ ಕಲೆ ಸಿದ್ಧಿಸಿದ್ದು ಕೇವಲ ನೂರ ಹನ್ನೊಂದು ವರ್ಷಗಳ ಹಿಂದೆ. ಮಾನವ ನಾಗರಿಕತೆಯ ಇತರ ಸಾಧನೆಗಳಿಗೆ ಹೋಲಿಸಿದರೆ ಇದು ಇತ್ತೀಚಿನ ಸಾಧನೆ. ಬಾನಿನಲ್ಲಿ ಹಾರಾಡುವ ಒಂದು ವಾಹನವನ್ನು ಮೊಟ್ಟಮೊದಲಿಗೆ ತಯಾರಿಸಿದ ಕೀರ್ತಿ ಸಲ್ಲುವುದು ಅಮೆರಿಕದ ರೈಟ್ ಸಹೋದರರಿಗೆ. ಓಹಿಯೋ ರಾಜ್ಯದ ಡೇಟನ್‌ನಲ್ಲಿ ದಿನಪತ್ರಿಕೆಯನ್ನು ನಡೆಸುತ್ತಿದ್ದ ಈ ಸಹೋದರರು ತಮ್ಮ ಪ್ರಯೋಗಗಳನ್ನು ನಡೆಸಿದ್ದು ಕೂಡ ಈ ಊರಿನಲ್ಲಿಯೇ. ಹಾಗಾಗಿ ಓಹಿಯೋ ಜನತೆ ಇಂದು 'Ohio-Birthplace of Aviation' ಎಂದು ತಮ್ಮ ರಾಜ್ಯದ ಬಗ್ಗೆ ಹೆಮ್ಮೆಯಿಂದ ಬೀಗುತ್ತಾರೆ.

ಆದರೆ ಇದಕ್ಕೆ ಸ್ಪರ್ಧೆ ನೀಡುವುದು ಅಮೆರಿಕದ್ದೇ ಮತ್ತೊಂದು ರಾಜ್ಯ ನಾರ್ತ್ ಕೆರೋಲಿನಾ. ಇದಕ್ಕೆ ಕಾರಣ ೧೯೦೩ನೇ ಡಿಸೆಂಬರ್ ೧೭ರಂದು ರೈಟ್ ಸಹೋದರರು ತಮ್ಮ ಹಾರುವ ಯಂತ್ರದಲ್ಲಿ ಯಶಸ್ವಿಯಾಗಿ ಹಾರಾಡಿದ್ದು ಈ ರಾಜ್ಯದ ಸಮುದ್ರ ತೀರದಲ್ಲಿರುವ ಕಿಟ್ಟಿ ಹಾಕ್ ಎಂಬ ಪುಟ್ಟ ಊರಿನಲ್ಲಿ. ಹಾಗಾಗಿ ಈ ರಾಜ್ಯ `First in Flight' ಎಂಬ ಘೋಷ ವಾಕ್ಯವನ್ನು ಕಟ್ಟಿಕೊಂಡು ತನ್ನ ಮಹತ್ವ ಸಾರುತ್ತಿದೆ.

ಆ ದಿನಗಳಲ್ಲಿ ಭಾರತದಲ್ಲಿಯೂ ಹಾರಾಡುವ ವಾಹನ ತಯಾರಿಸುವ ಪ್ರಯತ್ನಗಳು ನಡೆದಿದ್ದವು ಎಂಬ ಕುತೂಹಲಕಾರಿ ಅಂಶ ಇತ್ತೀಚಿಗೆ ಸುದ್ದಿಯಲ್ಲಿದೆ. ೧೮೯೫ರಲ್ಲಿ ಮುಂಬೈನ ಚೌಪಾತಿ ತೀರದಲ್ಲಿ ಬಾಪೂಜಿ ತಲ್ಪಾಡಿ ಎಂಬ ಉತ್ಸಾಹಿಯೊಬ್ಬರು 'ಮಾರುತಿ ಸಖ' ಹೆಸರಿನ ವಿಮಾನವನ್ನು ಹೋಲುವ ವಾಹನದಲ್ಲಿ ಯಶಸ್ವಿ ಹಾರಾಟ ನಡೆಸಿದರು ಎಂಬ ವಿಷಯಕ್ಕೆ ಸಾಕಷ್ಟು ಆಧಾರ, ಸಾಕ್ಷಿ–ಪುರಾವೆಗಳೂ

ಸಿಕ್ಕಿವೆ. ಈ ಸಾಹಸಿ ದಂಪತಿಗಳಿಗೆ ತಾಂತ್ರಿಕ ಸಲಹೆ, ಸಹಾಯಗಳನ್ನು ನೀಡಿದವರು ಕನ್ನಡದ ನೆಲದವರೇ ಆಗಿದ್ದ ಆನೇಕಲ್ ಸುಬ್ಬರಾಯ ಶಾಸ್ತ್ರಿಗಳು. ಜಗದೀಶ ಚಂದ್ರರು ಬರೆದಿರುವ ಸುಬ್ಬರಾಯ ಶಾಸ್ತ್ರಿಗಳ ಜೀವನ ಚರಿತ್ರೆಯಲ್ಲಿಯೂ ಈ ವಿಷಯ ದಾಖಲಾಗಿದೆ. ಅಂದು ಬ್ರಿಟಿಷರ ಆಡಳಿತದಲ್ಲಿದ್ದ ಸ್ವತಂತ್ರ ಪೂರ್ವ ಭಾರತದಲ್ಲಿ ಇಂತಹ ಪ್ರಯತ್ನಗಳನ್ನು ಮುಂದುವರಿಸಲು ಅನುಕೂಲಗಳಾಗಲೀ, ಅವಕಾಶಗಳಾಗಲೀ ಇರಲಿಲ್ಲ. ಆದರೆ ಅವರ ಯಶಸ್ಸನ್ನು ಗುರುತಿಸಿ, ಅವರಿಗೆ ಸಲ್ಲಬೇಕಾದ ಗೌರವ ಸಲ್ಲಬೇಕೆಂಬ ಕೂಗು ಇದೀಗ ಕೇಳಿ ಬರುತ್ತಿದೆ.

ಇದೇ ಸಮಯದಲ್ಲಿ ಫ್ರಾನ್ಸ್, ಜರ್ಮನಿ ಹೀಗೆ ಹಲವಾರು ದೇಶಗಳು ಹಾರಾಟದ ಪ್ರಯೋಗಗಳನ್ನು ನಡೆಸುತ್ತಿದ್ದರೂ ಅಮೆರಿಕದ ರೈಟ್ ಸಹೋದರರ ಯಶಸ್ಸಿಗೆ ಕಾರಣವಾದದ್ದು ಅವರು ವಿನ್ಯಾಸಿಸಿದ ರೆಕ್ಕೆಗಳ ಆಕಾರ. ಮತ್ತೊಂದು ವಿಶೇಷವೆಂದರೆ ತಾವು ಹಾರಿಸುವ ವಿಮಾನಕ್ಕೆ ಯಾವ ಆಕಾರದ ರೆಕ್ಕೆ ಸೂಕ್ತ ಎಂದು ನಿರ್ಣಯಿಸಲು ಅವರು ಹಾರಾಟ ಗಾತ್ರದ ವಿಮಾನ ಮತ್ತು ರೆಕ್ಕೆಗಳನ್ನು ತಯಾರಿಸಿ ಪ್ರಯೋಗ ನಡೆಸುವ ಬದಲು ಮೊಟ್ಟಮೊದಲಿಗೆ ವಾಯುಸುರಂಗವೊಂದನ್ನು ನಿರ್ಮಿಸಿ, ಚಿಕ್ಕ ಗಾತ್ರದ ಮಾದರಿ ವಿಮಾನ ಮತ್ತು ಮಾದರಿ ರೆಕ್ಕೆಗಳನ್ನು ತಯಾರಿಸಿ, ಅದರಲ್ಲಿ ಪ್ರಯೋಗ ಮಾಡಿ ಪರೀಕ್ಷಿಸಿದ್ದು. ಈ ಪ್ರಯೋಗಗಳು ಹಾರಾಟದ ಪ್ರಯೋಗಗಳಿಗಿಂತ ಸುರಕ್ಷಿತವಾಗಿದ್ದವಲ್ಲದೆ ಸಾಕಷ್ಟು ಸಮಯ, ಹಣ, ಶ್ರಮ ಇತ್ಯಾದಿಗಳನ್ನು ಉಳಿಸಿದವು. ಸುಮಾರು ೨೦೦ ವಿವಿಧ ಆಕಾರಗಳ ರೆಕ್ಕೆ ಮಾದರಿಗಳನ್ನು ತಯಾರಿಸಿ ಪ್ರಯೋಗ ಮಾಡಿದ ನಂತರ ಸೂಕ್ತ ಮಾದರಿಯನ್ನು ಆಯ್ಕೆ ಮಾಡಿ ಹಾರಾಟ ಮಾದರಿಯನ್ನು ನಿರ್ಮಿಸಿ ಜಯ ಗಳಿಸಿದರು.

ಅಂದಿನಿಂದ ಇಂದಿನವರೆಗೆ ವಿಮಾನ ನಿರ್ಮಾಣ ತಾಂತ್ರಿಕತೆಯಲ್ಲಿ ಬಹಳಷ್ಟು ಪ್ರಗತಿಯಾಗಿ, ಅತ್ಯಾಧುನಿಕ ಉಪಕರಣಗಳಿಂದ ಸಜ್ಜಾಗಿರುವ ಇಂದಿನ ವಿಮಾನಗಳು ಹಾರಾಡುವ ಅದ್ಭುತಗಳೇ ಆಗಿವೆ. ವಿಮಾನ ವಿನ್ಯಾಸದ ಪರಿಪೂರ್ಣತೆಯ ಹಿಂದೆ ಅಸಂಖ್ಯಾತ ವಿಜ್ಞಾನಿಗಳ, ತಂತ್ರಜ್ಞರ ಹಾಗೂ ಹೂಡಿಕೆದಾರರ ಕೊಡುಗೆ ಇದೆ. ವಿಮಾನ ನಿರ್ಮಾಣ ಹಂತದಲ್ಲಿ ಹಲವಾರು ಬಗೆಯ ಸಂಶೋಧನೆಗಳು, ಪ್ರಯೋಗಗಳು ವ್ಯವಸ್ಥಿತವಾಗಿ ನಡೆಯುತ್ತವೆ. ಇಂತಹ ಪ್ರಯೋಗಗಳಲ್ಲಿ ವಿಮಾನಕ್ಕೆ ಯಾವ ಆಕಾರ ಸೂಕ್ತ, ಅದರ ಹಾರಾಟವನ್ನು ನಿಯಂತ್ರಣದಲ್ಲಿಟ್ಟುಕೊಳ್ಳಲು ರೆಕ್ಕೆಗಳ ಸ್ಥಾನ ಮತ್ತು ಕೋನಗಳನ್ನು ಯಾವ ರೀತಿ ಬದಲಿಸಬೇಕು ಮುಂತಾದ ಮಾಹಿತಿಗಳನ್ನು ಪಡೆದುಕೊಳ್ಳಲು ವಾಯುಸುರಂಗ ಪ್ರಯೋಗಗಳು ಅತ್ಯಗತ್ಯ.

ಭಾರತದಲ್ಲಿ ಹಲವಾರು ವಿಜ್ಞಾನ ಹಾಗೂ ವಿದ್ಯಾ ಸಂಸ್ಥೆಗಳಲ್ಲಿ ವಾಯುಸುರಂಗ ಪ್ರಯೋಗಾಲಯಗಳಿವೆ. ಸಂಪೂರ್ಣವಾಗಿ ಸಂಶೋಧನೆ ಮತ್ತು ವಾಣಿಜ್ಯ

ಪ್ರಯೋಗಗಳಿಗಾಗಿ ಸಜ್ಜಾಗಿರುವ, ಆಗ್ನೇಯ ಏಷಿಯಾದಲ್ಲಿ ಅತಿ ದೊಡ್ಡದಾದ ವಾಯುಸುರಂಗ ಬೆಂಗಳೂರಿನಲ್ಲಿಯೇ ಇದೆ. ಇದು ಉದ್ದಾಮ ವಿಜ್ಞಾನಿ ಡಾ.ಪಿ.ನೀಲಕಂಠನ್‌ರವರ ಶ್ರಮದ ಫಲ. ತನ್ನ ದೇಶಕ್ಕಾಗಿ ಏನಾದರೂ ಉತ್ಕೃಷ್ಟವಾದ ಕೊಡುಗೆ ನೀಡಬೇಕೆಂದು ಕನಸು ಕಾಣುತ್ತಿದ್ದ ದೇಶಪ್ರೇಮಿ ನೀಲಕಂಠನ್‌ರವರಿಗೆ ವೈಜ್ಞಾನಿಕ ಮತ್ತು ಔದ್ಯೋಗಿಕ ಸಂಶೋಧನಾ ನಿಗಮ ೧೯೫೯ರಲ್ಲಿ ಭಾರತದಲ್ಲಿ ಒಂದು ವಾಯುಸುರಂಗವನ್ನು ನಿರ್ಮಿಸುವಂತೆ ಆಹ್ವಾನ ನೀಡಿತು. ಭಾರತದ ವೈಮಾನಿಕ ಸಂಶೋಧನಾ ನಕ್ಷೆಯಲ್ಲಿ ಇದೊಂದು ಸುವರ್ಣ ಘಟ್ಟ. ಅಂದು ಭಾರತದಲ್ಲಿ ದೊರಕುತ್ತಿದ್ದ ಸೌಲಭ್ಯಗಳು ಹಾಗೂ ತಂತ್ರಜ್ಞರನ್ನು ಬಳಸಿಕೊಂಡು ವಿಶ್ವದ ಇತರ ವಾಯುಸುರಂಗಗಳಿಗೆ ಸರಿಸಾಟಿಯಾದ ವಾಯುಸುರಂಗ ನಿರ್ಮಿಸುವ ಆಹ್ವಾನ ಒಂದು ಸವಾಲೇ ಆಗಿತ್ತು. ಆದರೆ ಅತ್ಯಂತ ಸಮರ್ಥರಾದ ನೀಲಕಂಠನ್ ಈ ಸವಾಲನ್ನು ಎದುರಿಸಿ ಕೇವಲ ಐದು ವರ್ಷಗಳಲ್ಲಿ ವಾಯುಸುರಂಗ ಸೌಲಭ್ಯವನ್ನು ಸಾಕಾರಗೊಳಿಸಿದರು. ೧೯೫೯ರಲ್ಲಿ ರಾಷ್ಟ್ರೀಯ ವೈಮಾನಿಕ ಸಂಶೋಧನಾ ಪ್ರಯೋಗಾಲಯ (National Aeronautical Research Laboratory-NARL) ಎಂದು ಬೆಂಗಳೂರು ಪ್ಯಾಲೇಸ್ ರಸ್ತೆಯಲ್ಲಿ ಪ್ರಾರಂಭವಾದ ಸಂಸ್ಥೆ ಕೇವಲ ಒಂದು ವರ್ಷದಲ್ಲಿ ರಾಷ್ಟ್ರೀಯ ವೈಮಾನಿಕ ಪ್ರಯೋಗಾಲಯವೆಂದು (National Aeronautical Laboratories - NAL) ಬದಲಾಯಿತು.

ಇಲ್ಲಿ ಡಾ.ಪಿ.ನೀಲಕಂಠನ್‌ರವರು ವಾಯುಸುರಂಗ ನಿರ್ಮಿಸಲು ಆರಿಸಿದ್ದು ಬೆಂಗಳೂರಿನ ಹಳೆಯ ವಿಮಾನ ನಿಲ್ದಾಣಕ್ಕೆ ಹೊಂದಿಕೊಂಡಂತಿದ್ದ ಬೇಲೂರು ಗ್ರಾಮ. ಈ ಆಯ್ಕೆಯಿಂದ ಹಳ್ಳಿಗೆ ಹೊಂದಿಕೊಂಡಂತೆ ಇರುವ ಬೆಳ್ಳಂದೂರು ಕೆರೆ ಪ್ರಯೋಗಾಲಯಕ್ಕೆ ಒದಗಿಬರುವುದು ಒಂದು ವಿಷಯವಾದರೆ, ಮತ್ತೊಂದು ಪಕ್ಕದಲ್ಲಿದ್ದ ವಿಮಾನ ನಿಲ್ದಾಣ, ಭವಿಷ್ಯದಲ್ಲಿ ಕೆಲವು ಪ್ರಯೋಗಗಳಿಗೆ ಅವಶ್ಯಕವಾಗಬಹುದೆಂಬ ದೂರಾಲೋಚನೆ. ಹೆಚ್ಚು ಜನ ವಸತಿ ಇಲ್ಲದಿದ್ದ ಪ್ರದೇಶವಾದ್ದರಿಂದ ಪ್ರಯೋಗಗಳಿಂದ ಹೊರಬರುವ ಶಬ್ದದಿಂದ ಹೆಚ್ಚು ಜನರಿಗೆ ತೊಂದರೆಯಾಗುವ ಸಂಭವವಿರಲಿಲ್ಲ. ಇವೆಲ್ಲದರ ಜೊತೆಗೆ ಹಿಂದೂಸ್ತಾನ್ ಏರೋನಾಟಿಕ್ಸ್ ಲಿಮಿಟೆಡ್ (ಎಚ್.ಎ.ಎಲ್) ಕೂಡ ಸಮೀಪದಲ್ಲಿದ್ದುದು ಎರಡು ಸಂಸ್ಥೆಗಳು ಒಟ್ಟಾಗಿ ಅನೇಕ ಯೋಜನೆಗಳನ್ನು ನಿರ್ವಹಿಸಲು ಸಹಾಯಕವಾಯ್ತು.

ನೀಲಕಂಠನ್‌ರವರಿಗೆ ವಾಯುಸುರಂಗದ ಕೆಲಸವನ್ನು ಪ್ರಾರಂಭಿಸಿದಾಗ ಮೊದಲಿಗೆ ನೆಲವನ್ನು ಮಟ್ಟ ಮಾಡುವ ಕೆಲಸವಾಗಬೇಕಿತ್ತು. ಈ ಕೆಲಸ ಮಾಡಲು ಎಷ್ಟು ಸಮಯ ಬೇಕಾಗುವುದೆಂದು ಅವರು ತಮ್ಮ ಸಹೋದ್ಯೋಗಿಗಳಲ್ಲಿ ಕೇಳಿದರು. ಸಾಧಾರಣವಾಗಿ ಆ ಕೆಲಸ ಮಾಡುವ ವಿಧಾನವನ್ನು ಪರಿಗಣಿಸಿ ಅವರು ಸುಮಾರು ಹತ್ತು

ತಿಂಗಳು ಬೇಕಾಗುವುದೆಂದು ತಿಳಿಸಿದರು. ಅಷ್ಟೊಂದು ತಾಳ್ಮೆ ಇಲ್ಲದ ನೀಲಕಂಠನ್ ಆ ಕೂಡಲೆ 'ನನಗೆ ಅಷ್ಟು ಸಮಯ ಕಾಯುವುದಕ್ಕಾಗುವುದಿಲ್ಲ' ಎಂದು ಹೇಳಿದವರೆ, ದೂರವಾಣಿ ಮೂಲಕ ಸೈನ್ಯಾಧಿಕಾರಿಗಳ ಜೊತೆ ಮಾತನಾಡಿದರು. ಕೆಲಸ ಕೈಗೆತ್ತಿಕೊಳ್ಳಲು ಒಪ್ಪಿಗೆ ಸೂಚಿಸಿ, ಸನ್ನದ್ಧವಾಗಿ ಸ್ಥಳಕ್ಕೆ ಬಂದ ಸೈನ್ಯದ ಬುಲ್‌ಡೋಜರ್‌ಗಳು ಕೇವಲ ಮೂರು ದಿನಗಳಲ್ಲಿ ಆ ಕೆಲಸವನ್ನು ಮಾಡಿ ಮುಗಿಸಿದವು! ನೀಲಕಂಠನ್‌ರವರ ಕೆಲಸದ ವೈಖರಿ ಹೇಗಿತ್ತೆಂದರೆ ಅವರು ಪ್ರಯೋಗಾಲಯಕ್ಕೆ ಎಲ್ಲರಿಗಿಂತ ಮೊದಲು ಬರುತ್ತಿದ್ದರು ಮತ್ತು ಅವರು ಮನೆಗೆ ಹೋಗುತ್ತಿದ್ದುದು ಎಲ್ಲರೂ ಮನೆಗೆ ತೆರಳಿದ ನಂತರ. ಒಂದು ದಿನ ಅವರು ೨೧ ಮೀಟಿಂಗ್‌ಗಳಿಗೆ ಅಧ್ಯಕ್ಷರಾಗಿ ಭಾಗವಹಿಸಿದ್ದು ದಾಖಲೆಯಾಗಿದೆ. ಅವರು ತಮ್ಮನ್ನು ತಾವು ಈ ಕೆಲಸಕ್ಕೆ ಸಂಪೂರ್ಣವಾಗಿ ಸಮರ್ಪಿಸಿಕೊಂಡಿದ್ದರು. ಜೊತೆಗೆ ಅವರು ತಮ್ಮ ಸಹೋದ್ಯೋಗಿ ಎಂಜನಿಯರ್‌ಗಳು ಸಹ ಕೇವಲ ಮೇಲ್ವಿಚಾರಣೆಗೆ ನಿಲ್ಲದೆ ಕೆಲಸದಲ್ಲಿ ಕೈಜೋಡಿಸಬೇಕೆಂದು ಅಪೇಕ್ಷಿಸುತ್ತಿದ್ದರು.

ನೀಲಕಂಠನ್‌ರವರ ಮುಂದಾಳತ್ವ, ಭಾರತೀಯ ವಿಜ್ಞಾನ ಮಂದಿರದಲ್ಲಿ ಪ್ರಾಧ್ಯಾಪಕರಾಗಿದ್ದ ಪ್ರೊ. ಸತೀಶ್ ಧಾವನ್‌ರವರ ಸಲಹೆ-ಸೂಚನೆಗಳು, ಅನಂತರ ಶ್ರೀ ಎಸ್.ಆರ್. ವಲ್ಲೂರಿ, ಶ್ರೀ. ರೊದ್ದಂ ನರಸಿಂಹ, ಶ್ರೀ ಕೆ.ಎನ್ ರಾಜು, ಶ್ರೀ ಪ್ರಹ್ಲಾದ್ ಮುಂತಾದವರ ನಿರ್ದೇಶಕತ್ವದಲ್ಲಿ ಮುನ್ನಡೆದ ಎನ್.ಎ.ಎಲ್ ಇಂದು ಸಿ.ಎಸ್.ಐ.ಆರ್ ಸಂಸ್ಥೆಯ ಅತ್ಯಂತ ಶ್ರೇಷ್ಠ ಪ್ರಯೋಗಾಲಯವೆಂದು ಗುರುತಿಸಲ್ಪಟ್ಟಿದೆ. ವಾಯುಸುರಂಗಗಳಲ್ಲದೆ ಹಲವು ಬಗೆಯ ಸೌಲಭ್ಯಗಳನ್ನು ಹೊಂದಿರುವ ಎನ್.ಎ.ಎಲ್ ಭಾರತದ ಲಘು ಯುದ್ಧ ವಿಮಾನ ನಿರ್ಮಾಣದಲ್ಲಿ ಹಲವು ಪರೀಕ್ಷೆಗಳನ್ನು ನಡೆಸಿತು. ಮುಂದೆ ಬಾಹ್ಯಾಂತರಿಕ್ಷ ಯೋಜನೆಗಳಲ್ಲಿ ಪಾಲ್ಗೊಂಡು, ಉಪಗ್ರಹ ಉಡಾವಣಾ ವಾಹನ ಹಾಗೂ ಉಪಗ್ರಹಗಳ ಕುರಿತು ಹಲವು ಪರೀಕ್ಷೆಗಳನ್ನು ನಡೆಸಿ 'ರಾಷ್ಟ್ರೀಯ ವೈಮಾನಿಕ ಪ್ರಯೋಗಾಲಯ' ಎಂಬ ಹೆಸರನ್ನು ಹಿಂದಿಕ್ಕಿ ೧೯೯೩ರಿಂದ 'ರಾಷ್ಟ್ರೀಯ ವೈಮಾಂತರಿಕ್ಷ ಪ್ರಯೋಗಾಲಯಗಳು (National Aerospace Laboratories-NAL)' ಎಂಬ ಹೆಸರನ್ನು ತನ್ನದಾಗಿಸಿಕೊಂಡಿದೆ.

ನೀಲಕಂಠನ್‌ರವರ ಕೆಲಸದಲ್ಲಿ 'Task Master' ಎಂದೇ ಹೆಸರು ಗಳಿಸಿದ್ದರು. ಹೇಗಾದರೂ ವಿಧಿ ಅವರಿಗೆ ತಮ್ಮ ಗೆಲುವನ್ನು ನೋಡುವ ಅವಕಾಶ ನೀಡಲಿಲ್ಲ. ೧೯೬೭ರಲ್ಲಿ ವಾಯುಸುರಂಗದ ಮೊದಲ ಪರೀಕ್ಷೆಯನ್ನು ನಡೆಸುವ ಮುನ್ನ ೧೯೬೬ರಲ್ಲಿ ಅವರು ವಿಧಿವಶರಾದರು. ಕೇವಲ ೫೪ ವರ್ಷ ವಯಸ್ಸಿನಲ್ಲಿ ದೈವಾಧೀನರಾಗಲು ಅವರ ಮೇಲೆ ಕೆಲಸದ ಒತ್ತಡವಿದ್ದುದೇ ಕಾರಣವಿರಬಹುದು. ನೀಲಕಂಠನ್‌ರವರ ಹೆಸರಿನಲ್ಲಿರುವ ವಾಯುಸುರಂಗ ಇಂದಿಗೂ ಕ್ರಿಯಾಶೀಲವಾಗಿ ದೇಶದ ಏಳಿಗೆಗೆ ತನ್ನ ಕಾಣಿಕೆ ನೀಡುತ್ತಿದೆ.

ವಾಯುಸುರಂಗ

ವಿಮಾನವೊಂದು ವಾತಾವರಣದ ಗಾಳಿಯನ್ನು ಸೀಳಿಕೊಂಡು ಹಾರುವಾಗ ಅದರ ಭಾರ, ಆಕಾರ, ವೇಗಗಳಿಗೆ ತಕ್ಕಂತೆ ಅದರ ದೇಹದ ವಿವಿಧ ಭಾಗಗಳ ಮೇಲೆ ಬಲಗಳು ಹಾಗೂ ಒತ್ತಡಗಳು ಉದ್ಭವಿಸುತ್ತವೆ. ವಿಮಾನ ವಿನ್ಯಾಸ ಮಾಡುವ ತಂತ್ರಜ್ಞರಿಗೆ ಈ ಬಲಗಳು ಹಾಗೂ ಒತ್ತಡಗಳ ಪ್ರಮಾಣ ಮತ್ತು ದಿಕ್ಕುಗಳು ಅತ್ಯಗತ್ಯ. ಆದರೆ ವಿಮಾನ ವಿನ್ಯಾಸಕ್ಕೆ ಮುನ್ನ ಇವುಗಳನ್ನು ಅಳೆಯುವುದು ಹೇಗೆ? ಇದಕ್ಕಾಗಿ ವಿಮಾನದ ಮಾದರಿಯನ್ನು ಸ್ಥಿರವಾಗಿರಿಸಿ ಗಾಳಿಯನ್ನು ಅದರ ಮೇಲೆ ಬಹಳ ವೇಗವಾಗಿ ಹಾಯಿಸಿದರೆ ಗಾಳಿಯಲ್ಲಿ ವಿಮಾನ ಚಲಿಸುವುದಕ್ಕೆ ಸಮಾನವಾದ ಸ್ಥಿತಿ ನಿರ್ಮಾಣವಾಗುತ್ತದೆ. ಆಗ ವಿಮಾನ ಮಾದರಿಯ ವಿವಿಧ ಭಾಗಗಳಲ್ಲಿ ಉಂಟಾಗುವ ಬಲ ಮತ್ತು ಒತ್ತಡಗಳನ್ನು ಅಳೆಯಲು ಸಾಧ್ಯವಾಗುತ್ತದೆ. ಹೀಗೆ ಅತಿ ಒತ್ತಡದ ಗಾಳಿಯನ್ನು ವಿಮಾನದ ಮಾದರಿಯ ಮೇಲೆ ಹಾಯಿಸಿ ವಿವಿಧ ಬಲ ಮತ್ತು ಒತ್ತಡಗಳನ್ನು ಅಳೆಯಲು ಸಾಧ್ಯವಾಗಿಸುವ ಪ್ರಯೋಗ ಸೌಲಭ್ಯವೇ ವಾಯುಸುರಂಗ. ವಾಯುಸುರಂಗದಲ್ಲಿ ಸಂಗ್ರಹವಾದ ದತ್ತವನ್ನು ವಾಯುಚಲನ ವಿಜ್ಞಾನದ ಸೂತ್ರಗಳ ಸಹಾಯದಿಂದ ವಿಶ್ಲೇಷಿಸಿ ನಿಜಗಾತ್ರದ ವಿಮಾನ ನಿರ್ಮಾಣಕ್ಕೆ ಅಗತ್ಯವಾದ ದತ್ತವನ್ನು ಲೆಕ್ಕಾಚಾರಗಳ ಮೂಲಕ ಪಡೆಯಬಹುದು.

ಇಂದು ರಾಷ್ಟ್ರೀಯ ವೈಮಾಂತರಿಕ್ಷ ಪ್ರಯೋಗಾಲಯದಲ್ಲಿ ವಿವಿಧ ಗಾತ್ರದ ವಿಮಾನ ಮಾದರಿಯನ್ನು ಪರೀಕ್ಷೆ ಮಾಡಲು ವಿವಿಧ ಗಾತ್ರದ ವಾಯುಸುರಂಗಗಳಿವೆ. ಒಂದು ವಾಯುಸುರಂಗವನ್ನು ಹೆಸರಿಸುವಾಗ ಅದರ ಪರೀಕ್ಷಾ ಭಾಗ (test section)ದ ಅಡ್ಡ ಕೊಯ್ತ (cross section)ದ ಅಳತೆಯೇ ಆಧಾರ. ಉದಾಹರಣೆಗೆ ಬೇಲೂರಿನಲ್ಲಿ ಮೊಟ್ಟ ಮೊದಲು ನಿರ್ಮಿಸಿದ ವಾಯುಸುರಂಗದ ಪರೀಕ್ಷಾ ವಿಭಾಗದ ಅಡ್ಡಕೊಯ್ತ ೨" ಅಗಲ ಮತ್ತು ೨" ಎತ್ತರದ ಚೌಕಾಕಾರವಾಗಿದ್ದರಿಂದ ಇದಕ್ಕೆ `2" tunnel' ಎಂದೇ ಹೆಸರು. ಮತ್ತಷ್ಟು ಸಂಶೋಧನಾತ್ಮಕ ಪ್ರಯೋಗಗಳನ್ನು ನಡೆಸಲು ನಿರ್ಮಿಸಿದ ವಾಯುಸುರಂಗದ ಪರೀಕ್ಷಾ ವಿಭಾಗದ ಅಡ್ಡಕೊಯ್ತ ೧ x ೧ ಅಡಿ ಚೌಕಾಕಾರದ್ದಾಗಿದ್ದು ಅದನ್ನು '1 Foot Tunnel' ಅಥವಾ '0.3 M Tunnel' ಎಂದೇ ಕರೆಯಲಾಗುತ್ತದೆ. ಈ ವಾಯುಸುರಂಗಗಳಲ್ಲಿ ಆರಂಭಿಕ ಪ್ರಯೋಗಗಳಾದ ನಂತರ ಪೂರ್ಣ ಪ್ರಮಾಣದ ವಾಯುಸುರಂಗವನ್ನು ನಿರ್ಮಿಸುವಾಗ ಅದರ ಪರೀಕ್ಷಾ ವಿಭಾಗದ ಅಳತೆ ಎಷ್ಟಿರಬೇಕೆಂಬ ಪ್ರಶ್ನೆ ನಿರ್ಮಾಣದಲ್ಲಿ ಭಾಗವಹಿಸುತ್ತಿದ್ದ ವಿಜ್ಞಾನಿಗಳಿಗೆ ಯಕ್ಷ ಪ್ರಶ್ನೆಯೇ ಆಗಿತ್ತು. ಏಕೆಂದರೆ ಆಗ ಭಾರತದ ವೈಮಾನಿಕ ಯೋಜನೆಗಳ ಬಗ್ಗೆ ಮಿಶ್ರ

ಪ್ರತಿಕ್ರಿಯೆಗಳಿದ್ದವು. ಅಂತರಿಕ್ಷ ಯೋಜನೆಗಳ ಚಿತ್ರಣ ಇನ್ನೂ ಸ್ಪಷ್ಟವಾಗಿರಲಿಲ್ಲ. ಆದರೂ 4 x 4 ಅಡಿ ಅಳತೆಯುಳ್ಳ '4 Foot Tunnel' ಅಥವಾ '1.2 M Tunnel' ಪರೀಕ್ಷಾ ವಿಭಾಗದ ವಾಯುಸುರಂಗವನ್ನು ನಿರ್ಮಿಸುವ ನಿರ್ಧಾರ ತೆಗೆದುಕೊಳ್ಳಲಾಯಿತು.

ವಾಯುಸುರಂಗದ ಮತ್ತೊಂದು ಪ್ರಮುಖ ಲಕ್ಷಣವೆಂದರೆ ಅದರಲ್ಲಿ ಯಾವ ವೇಗದವರೆಗೆ ಪರೀಕ್ಷೆ ನಡೆಸಲು ಸಾಧ್ಯ ಎನ್ನುವ ಅಂಶ. ವಾಯುಸುರಂಗದ ಪರೀಕ್ಷಾ ವೇಗವನ್ನು 'ಮಾಕ್ ನಂಬರ್' ಎಂಬ ಏಕಮಾನದಲ್ಲಿ ಗುರುತಿಸಲಾಗುತ್ತದೆ. ವಾಯುಸುರಂಗದಲ್ಲಿ ಹಾಯಿಸುವ ಗಾಳಿಯ ವೇಗವನ್ನು ಶಬ್ದದ ವೇಗದ ಜೊತೆ ಹೋಲಿಸಿದಾಗ ಬರುವ ಅಂಕಿಯೇ ಮಾಕ್ ನಂಬರ್. ಮಾಕ್ ೧ ಎಂದರೆ ಶಬ್ದದ ವೇಗಕ್ಕೆ ಸಮ. ಮಾಕ್ ನಂಬರ್ ಒಂದಕ್ಕಿಂತ ಕಡಿಮೆ ಇದ್ದರೆ ಉಪಧ್ವನಿಕ (subsonic) ವೇಗ ಅಥವಾ ಶಬ್ದ ವೇಗಕ್ಕಿಂತ ಕಡಿಮೆ. ಮಾಕ್ ನಂಬರ್ ೧ ರಿಂದ ೪ ರ ವರೆಗೆ ಶಬ್ದಾತೀತ (supersonic) ವೇಗವೆಂದೂ ಹೇಳುತ್ತಾರೆ. '4 Foot Tunnel' ನಿರ್ಮಿಸುವಾಗ ಉಪಧ್ವನಿಕ (subsonic), ಶಬ್ದ ವೇಗ (sonic) ಹಾಗೂ ಶಬ್ದಾತೀತ (supersonic) ವೇಗಗಳಲ್ಲಿ ಅಂದರೆ ತ್ರಿಧ್ವನಿಕ (Trisonic) ವೇಗಗಳಲ್ಲಿ ಪರೀಕ್ಷೆ ನಡೆಸುವ ಸಾಧ್ಯತೆಯುಳ್ಳ ವಾಯುಸುರಂಗವನ್ನು ನಿರ್ಮಿಸುವ ಅತ್ಯುತ್ತಮವಾದ ನಿರ್ಣಯವನ್ನು ತೆಗೆದುಕೊಳ್ಳಲಾಯಿತು. ಹೀಗೆ ತ್ರಿಧ್ವನಿಕ ೪ ಅಡಿ ವಾಯುಸುರಂಗದ (1.2 M Trisonic Wind Tunnel) ನಿರ್ಮಾಣವಾಯಿತು.

ವಾಯುಸುರಂಗದಲ್ಲಿ ಬಲ ಮತ್ತು ಒತ್ತಡಗಳನ್ನು ಅಳೆಯಲು ಅತ್ಯಂತ ಸಂಕೀರ್ಣವಾದ ಉಪಕರಣಗಳನ್ನು ಬಳಸಲಾಗುತ್ತದೆ. ಬಲವನ್ನು ಅಳೆಯಲು ಆರು ವಿವಿಧ ಬಲಗಳನ್ನು ಅಳೆಯಲು ಸಜ್ಜಾಗಿರುವ 'Six component balance' ಎಂಬ ತಕ್ಕಡಿಯ ಬಳಕೆಯಾಗುತ್ತದೆ. ಈ ತಕ್ಕಡಿ ಕೊಳವೆಯಾಕಾರದಲ್ಲಿದ್ದು ಅದರೊಳಗೆ ವಿದ್ಯುನ್ಮಾನ ಬಲಸಂವೇದಿಗಳಿರುತ್ತವೆ. ಬಲಸಂವೇದಿಗಳು ಸಂವೇದಿಸಿದ ಬಲವನ್ನು ವಿದ್ಯುನ್ಮಾನ ಸಂಕೇತಗಳನ್ನಾಗಿ ಪರಿವರ್ತಿಸಿ, ಹಿಗ್ಗಿಸಿ ದತ್ತ ಸಂಸ್ಕರಣೆಗೆ ಒದಗಿಸುತ್ತದೆ. ಹಾಗೆಯೇ ಒತ್ತಡಗಳನ್ನು ಅಳೆಯಲು 'pressure Transducers' ಅಂದರೆ ವಿದ್ಯುನ್ಮಾನ ಒತ್ತಡ ಸಂವೇದಿಗಳನ್ನು ಬಳಸಲಾಗುತ್ತವೆ. ಇವಲ್ಲದೆ ಅನೇಕ ಬಿಂದುಗಳಲ್ಲಿ ಒತ್ತಡವನ್ನು ಅಳೆಯಲು 'pressure scanners', ಉಷ್ಣತೆಯನ್ನು ಅಳೆಯಲು ಉಷ್ಣಯುಗ್ಮ (Thermocouple) ಮುಂತಾದ ಅನೇಕ ಉಪಕರಣಗಳು ಬಳಕೆಯಾಗುತ್ತವೆ.

ವಾಯುಸುರಂಗವನ್ನು ನಿರ್ಮಿಸುವುದು, ಪ್ರಯೋಗಕ್ಕೆ ಅವಶ್ಯಕವಾದ ಒತ್ತಡದ ಗಾಳಿಯನ್ನು ಒದಗಿಸುವುದು ಸಾಕಷ್ಟು ಜಟಿಲವಾದ ಪ್ರಕ್ರಿಯೆ. ಅನಂತರ ವಿವಿಧ ಸಂವೇದಿಗಳನ್ನು ಅಳವಡಿಸಿರುವ ವಿಮಾನ ಮಾದರಿ ತಯಾರಿಸುವ ಹಾಗೂ ಪರೀಕ್ಷಾ ಸಮಯದಲ್ಲಿ ವಿಮಾನ ಮಾದರಿಯನ್ನು ಬೇರೆ ಬೇರೆ ಕೋನಗಳಿಗೆ ಕೊಂಡೊಯ್ದು, ದತ್ತ ಶೇಖರಿಸಿ, ಅದರಿಂದ ಸೂಕ್ತ ಮಾಹಿತಿ ಪಡೆಯುವುದು ಕೂಡ ಸಂಕೀರ್ಣವಾದ ಪ್ರಕ್ರಿಯೆ. ಪರೀಕ್ಷಾ ಕ್ರಮದಲ್ಲಿ ಸಾಕಷ್ಟು ಸುರಕ್ಷತಾ ಕ್ರಮಗಳನ್ನು ಅನುಸರಿಸುವುದೂ ಅಗತ್ಯ. ಪರೀಕ್ಷೆಯಲ್ಲಿ ಬಳಸಿದ ಎಲ್ಲ ಉಪಕರಣಗಳ ಮಾಪನಾಂಕ ನಿರ್ಣಯ (calibration) ವೂ ಅತ್ಯಗತ್ಯ. ಸಂಗ್ರಹಿಸಿದ ದತ್ತದ ನಿಖರತೆಯೂ ಅಷ್ಟೇ ಮುಖ್ಯ. ಎಲ್ಲಿಯೂ, ಯಾವುದೂ ತಪ್ಪುವಂತಿಲ್ಲ. ಹೀಗೆ ಹಲವಾರು ವಿಷಯ ತಜ್ಞರು, ನುರಿತ ಕೆಲಸಗಾರರು ಒಟ್ಟುಗೂಡಿ ನಡೆಸುವ ಈ ಸಂಕೀರ್ಣ ಪ್ರಕ್ರಿಯೆಯ ಬಗ್ಗೆ ತಮ್ಮ ಉಪನ್ಯಾಸಗಳಲ್ಲಿ ಪ್ರಯೋಗಾಲಯದ ನಿರ್ದೇಶಕರಲ್ಲೊಬ್ಬರಾದ ಶ್ರೀ ಎಸ್. ಆರ್. ವಲ್ಲೂರಿಯವರು 'Aeronautics is a high science and high technology field' ಎಂದು ಹೇಳುತ್ತಿದ್ದುದನ್ನು ಇಲ್ಲಿ ಸ್ಮರಿಸಬಹುದು. ಶ್ರೀ. ನೀಲಕಂಠನ್‌ರವರು ಪ್ರಾರಂಭಿಸಿದ ಈ ಸಂಸ್ಥೆಯನ್ನು ಕೈ ಹಿಡಿದು ಬೆಳೆಸಿದವರು ಶ್ರೀ. ಎಸ್. ಆರ್.ವಲ್ಲೂರಿ.

ರಾಷ್ಟ್ರೀಯ ವೈಮಾಂತರಿಕ್ಷ ಪ್ರಯೋಗಾಲಯದ ತ್ರಿಧ್ವನಿಕ ೪ ಅಡಿ ವಾಯುಸುರಂಗದ ಭಾಗಗಳನ್ನು ಕೆನಡಾದ ಸಂಸ್ಥೆಯೊಂದು ತಯಾರಿಸಿ ಇಲ್ಲಿ ಅವುಗಳನ್ನು ಜೋಡಿಸುವ ಕಾರ್ಯ ನಡೆಸಿತು. ಆ ದಿನಗಳಲ್ಲಿ ಪ್ರಚಲಿತವಿದ್ದ ವಿದ್ಯುಚ್ಛಕ್ತಿ ಉಪಕರಣಗಳು, ರೆಕಾರ್ಡ್‌ರ್‌ಗಳಿಂದ ಸುಸಜ್ಜಿತವಾಗಿ ತನ್ನ ಕಾರ್ಯಾಚರಣೆ ಪ್ರಾರಂಭಿಸಿತು. ಆಗಿದ್ದ ಗಣಕ ಯಂತ್ರದ ಸಾಮರ್ಥ್ಯವೂ ಕೂಡ ಹೆಚ್ಚಿರಲಿಲ್ಲ. ವಾಯುಸುರಂಗದಲ್ಲಿ ಗಾಳಿ ಹಾಯಿಸಿ ಪರೀಕ್ಷೆ ನಡೆಸುವುದಕ್ಕೆ 'ಬ್ಲೋ ಡೌನ್' (Blow down) ಎನ್ನುತ್ತಾರೆ. ಈ 'ಬ್ಲೋ ಡೌನ್' ಸಾಧಾರಣವಾಗಿ ಮೂವತ್ತರಿಂದ ನಲ್ವತ್ತು ಸೆಕೆಂಡುಗಳ ಅವಧಿಯಲ್ಲಿ ಜರುಗುತ್ತದೆ. ಪ್ರಾರಂಭದಲ್ಲಿ ಒಂದು 'ಬ್ಲೋ ಡೌನ್' ಆದ ನಂತರ ಅದರ ಫಲಿತಾಂಶ ಮತ್ತು ಸಂಬಂಧಿಸಿದ ನಕ್ಷೆಗಳು ಸಿದ್ಧವಾಗುವುದಕ್ಕೆ ಒಂದೆರಡು ದಿನಗಳೇ ಆಗುತ್ತಿದ್ದವು. ಆದರೆ ತಂತ್ರಜ್ಞಾನದಲ್ಲಿ ಪ್ರಗತಿಯಾದಂತೆ ವಾಯುಸುರಂಗ ಆಧುನಿಕ ವಿದ್ಯುನ್ಮಾನ ಉಪಕರಣಗಳು ಹಾಗೂ ಕಂಪ್ಯೂಟರ್‌ಗಳಿಂದ ಸಜ್ಜಾಗಿದೆ. ಈಗ ಪರೀಕ್ಷೆಯಾದ ನಂತರ ಕೆಲವೇ ನಿಮಿಷಗಳಲ್ಲಿ ಫಲಿತಾಂಶ ಸಿದ್ಧವಾಗಿರುತ್ತದೆ. ಒಂದು 'ಬ್ಲೋ ಡೌನ್'ನಲ್ಲಿ ಪಡೆಯುವ ದತ್ತಾಂಶದಲ್ಲಿಯೂ ಊಹಿಸಲಾರದಷ್ಟು ಹೆಚ್ಚಳವಾಗಿದೆ. ದೇಶದ ಪ್ರತಿಷ್ಠಿತ ರಕ್ಷಣಾ ಯೋಜನೆಗಳಲ್ಲಿ ಮತ್ತು ಬಾಹ್ಯಾಂತರಿಕ್ಷ ಯೋಜನೆಗಳಲ್ಲಿ ಪಾಲ್ಗೊಂಡು

ನಂಬಲಾರ್ಹವಾದ ದತ್ತವನ್ನು ನೀಡಿದೆ ಹಾಗೂ ವಿದೇಶಿ ವಿನಿಮಯವನ್ನು ಉಳಿಸಿದೆ. ನಾಲ್ಕು ದಶಕಗಳ ನಂತರವೂ ದಿನದಿನಕ್ಕೂ ಆಧುನಿಕ ತಂತ್ರಜ್ಞಾನಗಳನ್ನು ಅಳವಡಿಸಿಕೊಂಡು ಇಂದಿಗೂ ಈ ವಾಯುಸುರಂಗ, ಚಟುವಟಿಕೆಯ ಕೇಂದ್ರವಾಗಿದೆ. ಜೊತೆಗೆ ವಿವಿಧೋದ್ದೇಶಗಳಿಗಾಗಿ ಮತ್ತೊಂದು '0.6 M Tunnel' ಕೂಡ ನಿರ್ಮಾಣವಾಗಿದೆ.

ಈಗಿನ ಅತಿ ವೇಗ ಮತ್ತು ಸಮರ್ಥ ಕಂಪ್ಯೂಟರ್‌ಗಳಲ್ಲಿ ವಾಯುಚಲನ ವಿಜ್ಞಾನದ ಸೂತ್ರ ಮತ್ತು ನಿಯಮಗಳನ್ನು ಗಣಿಸುವ ಅನೇಕ ತಂತ್ರಾಂಶಗಳು ಲಭ್ಯವಿವೆ. ಅಂತರಾಷ್ಟ್ರೀಯ ಮಟ್ಟದಲ್ಲಿ ವಿಶ್ಲೇಷಿಸಿದರೆ ವಿಮಾನ ನಿರ್ಮಾಣ ತಂತ್ರಜ್ಞಾನ ಪೂರ್ಣತೆಯ ಮಟ್ಟವನ್ನು ತಲುಪಿದೆ. ಹಾಗಾಗಿ ವಾಯುಸುರಂಗಗಳ ಬಳಕೆ ವಿರಳವಾಗುತ್ತಿದೆ. ಆದರೂ ವಾಯುಸುರಂಗಗಳು ಒಂದು ಕಾಲದಲ್ಲಿ ಈ ಕ್ಷೇತ್ರದಲ್ಲಿ ಸಲ್ಲಿಸಿದ ಸೇವೆಯನ್ನು ಮರೆಯುವಂತಿಲ್ಲ. ಇಂದಿಗೂ ಕೆಲವು ಪ್ರಯೋಗಗಳನ್ನು ಮಾಡುವುದು ಅನಿವಾರ್ಯ.

ಆರೋಗ್ಯಕ್ಕೆ ಮಾರಕ–ಮೊಬೈಲ್ ಮೇನಿಯಾ

– ಗಾಯತ್ರಿಮೂರ್ತಿ, ಬೆಂಗಳೂರು
ನಿವೃತ್ತ ಉಪನ್ಯಾಸಕರು, ಲೇಖಕರು, ೦೮೦-೨೬೭೬೯೪೮
gayathrimurthy.k@gmail.com

ಮೊಬೈಲ್ ಆಧುನಿಕ ಜಗತ್ತಿಗೆ ಇಪ್ಪನೆಯ ಶತಮಾನದ ಕೊಡುಗೆ. ಇದು ಜನ ಜೀವನಕ್ಕೆ ಅತ್ಯಾಧುನಿಕ ತಂತ್ರಜ್ಞಾನದ ವರದಾನ ಎಂದರೆ ಅತಿಶಯೋಕ್ತಿಯಲ್ಲ. ಕ್ಷಣಮಾತ್ರದಲ್ಲಿ ಜಗತ್ತಿನ ಒಂದು ಮೂಲೆಯಿಂದ ಮತ್ತೊಂದು ಮೂಲೆಗೆ ಸಂಪರ್ಕ ಸಾಧಿಸಬಲ್ಲ ಪುಟ್ಟ ಚತುರ ಸಾಧನ ಯಾವುದೆಂದರೆ ಮೊಬೈಲ್ ಎಂದು ಒಕ್ಕೊರಲಿನ ಉತ್ತರ ಸಿಗುವುದು ಖಚಿತ.

ಇಂದು ಮೊಬೈಲ್ ಇಲ್ಲದ ವ್ಯಕ್ತಿ ಅಪರೂಪವೆನಿಸುವಷ್ಟು ಮಟ್ಟಿಗೆ ಮೊಬೈಲ್ ಜನಪ್ರಿಯ. ಸಾಧಾರಣ ಮಟ್ಟದ ಮೊಬೈಲ್‌ನಿಂದ ಹಿಡಿದು ಅನೇಕಾನೇಕ ಕುಶಲ ಕಾರ್ಯಗಳನ್ನು ನಿರ್ವಹಿಸಬಲ್ಲ ಅತ್ಯಾಧುನಿಕ ಸ್ಮಾರ್ಟ್ ಫೋನ್‌ಗಳು ಜನರ ಕೈಲಿ ರಾರಾಜಿಸುತ್ತಿವೆ. ಹೊಸರೂಪ, ಹೊಸ ಅನ್ವಯಗಳನ್ನು ಹೊಂದಿರುವ ಸ್ಮಾರ್ಟ್ ಫೋನ್‌ಗಳು ಬಳಕೆದಾರರನ್ನು ಕೈಬೀಸಿ ಕರೆಯುತ್ತವೆ. ಇಂದು ಬಡವನಿಂದ ಬಲ್ಲಿದನವರೆಗೆ ಅವರವರ ಆರ್ಥಿಕ ಮಟ್ಟಕ್ಕೆ ತಕ್ಕಂತೆ ಮೊಬೈಲ್ ಫೋನ್‌ಗಳಿರಲೇ ಬೇಕು. ಆಧುನಿಕ ಜಗತ್ತಿನ ಒತ್ತಡದ ಬದುಕಿಗೆ ಅನಿವಾರ್ಯವೇನೋ ಎಂಬಷ್ಟು ಮಟ್ಟಿಗೆ ಮೊಬೈಲ್ ಜನಜೀವನದಲ್ಲಿ ಮೇಳೈಸಿದೆ.

ಮೊಬೈಲ್ ಬರಿಯ ದೂರವಾಣಿ ಕರೆಗಳಿಗಾಗಿ ಮಾತ್ರವಲ್ಲ, ಎಸ್.ಎಮ್. ಎಸ್.ಸಂದೇಶಗಳನ್ನು ಕಳುಹಿಸಲು, ಸಂಗೀತ ಕೇಳಲು, ಛಾಯಾಗ್ರಹಣ, ವೀಡಿಯೋ ಚಿತ್ರೀಕರಣ (ಇತ್ಯಾದಿಗಳಿಗೆ ಬಳಕೆ ಆಗುತ್ತಿದೆ). ಅಂತರ್ಜಾಲ ಸೌಲಭ್ಯದಿಂದ ಇ. ಮೈಲ್ ದೂರವಾಣಿ ಬಿಲ್, ವಿದ್ಯುಚ್ಛಕ್ತಿ ಬಿಲ್, ಇತ್ಯಾದಿ ಕಟ್ಟಲು ಗಂಟೆಗಟ್ಟಲೆ ಕ್ಯೂ ನಿಂತು ಕಾಯಬೇಕಿಲ್ಲ. ಬ್ಯಾಂಕ್ ವ್ಯವಹಾರವನ್ನೆಲ್ಲಾ ಮೊಬೈಲ್‌ನಲ್ಲೇ ನಿರ್ವಹಿಸಬಹುದು. ಅಂತರ್ಜಾಲದಿಂದ ಬೇಕಾದ ಮಾಹಿತಿ ಹೆಕ್ಕಿ ತಿಳಿಯಬಹುದು. ಮನರಂಜನಾ ಆಟಗಳನ್ನಾಡಬಹುದು. ಜಗತ್ತಿನ ಯಾವ ಮೂಲೆಯಲ್ಲೋ ನಡೆಯುತ್ತಿರುವ ನೆಚ್ಚಿನ ಕ್ರೀಡೆಗಳು, ಇತ್ಯಾದಿಗಳ ಬಗ್ಗೆ ಕೂಡಲೇ ಮಾಹಿತಿ ಪಡೆಯಬಹುದು. "ನೀನು ಹೇಳಿದ್ದೇ ತಡ, ನಾನು ಮಾಡಿ ತೋರಿಸುತ್ತೇನೆ" ಎನ್ನುತ್ತದೆ ಆಧುನಿಕ ಮೊಬೈಲ್. ಅಲ್ಲಾವುದ್ದೀನನ ಅದ್ಭುತ ದೀಪವೇನೋ ಎಂಬಂತೆ ಮೊಬೈಲ್ ನಮ್ಮ ಗುಲಾಮನ ರೀತಿ ವರ್ತಿಸುತ್ತದೆ.

ಅತ್ಯಾಧುನಿಕ ತಂತ್ರಜ್ಞಾನದ ಕೊಡುಗೆಯಾದ ಮೊಬೈಲ್ ಖಂಡಿತವಾಗಿಯೂ ಮಾನವ ಜನಾಂಗಕ್ಕೆ ಉತ್ತಮ ಕೊಡುಗೆ ಎಂಬುದು ಸತ್ಯ. ಆದರೆ ಒಂದೇ ನಾಣ್ಯಕ್ಕೆ ಎರಡು

ಮುಖಗಳಿವೆ. ಅಂತೆಯೇ ಇಂತಹ ಉಪಕರಣಗಳಿಗೆ ಕೂಡ. ಅತಿಯಾದರೆ ಅಮೃತವೂ ವಿಷ ಎನ್ನುತ್ತಾರೆ. ಈಗಾಗುತ್ತಿರುವುದು ಅದೇ. ಮೊಬೈಲ್‌ನ ಅತಿಯಾದ ಬಳಕೆ ಅನೇಕ ರೀತಿಯ ತೊಂದರೆಗಳಿಗೆ ಜನರನ್ನೀಡು ಮಾಡುತ್ತಿದೆ. ನಾವು ತಿಳಿದಂತೆ ಅದು ನಮ್ಮ ಗುಲಾಮ ಅಲ್ಲ. ಬದಲಿಗೆ ನಾವೇ ಅದರ ಗುಲಾಮರಂತೆ ವರ್ತಿಸುತ್ತೇವೆ. ಮೊಬೈಲ್‌ನ ಪ್ರಭಾವಕ್ಕೆ ಒಳಗಾದ ನಮ್ಮ ಜೀವನ ಅದಿಲ್ಲದೆ ಅಸಹನೀಯವೇನೋ ಎನ್ನುವಷ್ಟರ ಮಟ್ಟಿಗೆ ನಾವು ಅದಕ್ಕೆ ಒಗ್ಗಿ ಬಿಡುತ್ತೇವೆ. ಇಂದಿನ ಯುಗದಲ್ಲಿ ನಮ್ಮ ಬಳಿ ಮೊಬೈಲ್ ಇದೆಯೇ ಎಂಬ ಪ್ರಶ್ನೆ ಏಳುವುದೇ ಇಲ್ಲ. ಏಕೆಂದರೆ ಅದು ಅನಿವಾರ್ಯವೆಂಬಷ್ಟು ಮಟ್ಟಿಗೆ ನಮ್ಮ ಜನಜೀವನದಲ್ಲಿ ಹಾಸುಹೊಕ್ಕಾಗಿದೆ. ನಮ್ಮ ಮುಂದಿರುವ ಸಮಸ್ಯೆ, ಮೊಬೈಲ್ ಆವಶ್ಯಕತೆಗಿಂತ ಹೆಚ್ಚಾಗಿ ಅತಿಯಾದ ಬಳಕೆಯಾಗುತ್ತಿರುವುದು.

ರೇಡಿಯೋ ಫ್ರೀಕ್ವೆನ್ಸಿ ವಿದ್ಯುತ್ಕಾಂತೀಯ ತರಂಗಗಳನ್ನು ಮೈಕ್ರೋವೇವ್ ಒಲೆಗಳು ಮತ್ತು ಮೊಬೈಲ್ ಫೋನ್‌ಗಳಲ್ಲಿ ಉಪಯೋಗಿಸುತ್ತಾರೆ. ಹಾಗೆ ನೋಡಿದರೆ, ಮೈಕ್ರೋವೇವ್ ಒಲೆ ಮತ್ತು ಮೊಬೈಲ್ ಫೋನ್‌ಗಳಲ್ಲಿನ ತರಂಗಗಳಲ್ಲಿ ಹೆಚ್ಚಿನ ವ್ಯತ್ಯಾಸವೇನೂ ಇಲ್ಲ. ವ್ಯತ್ಯಾಸವಿರುವುದು ಅವುಗಳ ಫ್ರೀಕ್ವೆನ್ಸಿಯಲ್ಲಿ ಹಾಗೂ ಅವುಗಳ ಸಾಮರ್ಥ್ಯದಲ್ಲಿ. ಮೈಕ್ರೋವೇವ್ ಒಲೆಗಳು ನೀಡುವ ಶಕ್ತಿ ೭೦೦-೧೦೦೦ವ್ಯಾಟ್‌ಗಳಷ್ಟು, ಆದರೆ ಮೊಬೈಲ್ ಫೋನ್ ಬಿಡುಗಡೆ ಮಾಡುವ ಶಕ್ತಿ ಕೇವಲ ಮಿಲಿವ್ಯಾಟ್‌ಗಳಿಂದ ಕೆಲವು ವ್ಯಾಟ್ ಗಳವರೆಗೆ. ಅದರ ವ್ಯತ್ಯಾಸ ಬಹುಶಃ ತಂಪಾದ ಸ್ನೇಹಿತನೊಂದಿಗೆ ಹಿತಕರವಾದ ಸಂಭಾಷಣೆ ಮತ್ತು ಬಿಸಿಬಿಸಿ ಸ್ಯಾಂಡ್‌ವಿಚ್ ನಡುವಿನ ವ್ಯತ್ಯಾಸ ಎನ್ನಬಹುದೆನ್ನುತ್ತದೆ ಒಂದು ವರದಿ.

-ಮೊಬೈಲ್ ಫೋನ್‌ಗಳ ಅನೇಕಾನೇಕ ಉಪಯುಕ್ತ ಅನ್ವಯಗಳನ್ನು ನಾವು ಎಷ್ಟೇ ಹಾಡಿ ಹೊಗಳಿದರೂ ಅದರ ಕರಿ ನೆರಳು ನಮ್ಮ ಮೇಲೆ ಬೀಳದಿಲ್ಲ. ಅದರ ಅನುಕೂಲಗಳನ್ನು ಕಂಡು ಮಾರು ಹೋಗಿರುವ ನಾವು ಅದರಿಂದಾಗುವ ಹಾನಿಕರ ಪರಿಣಾಮಗಳ ಬಗ್ಗೆ ತೀವ್ರ ಅನಾಸಕ್ತಿ ತೋರುವುದು ವಾಸ್ತವವಾದ ಸಂಗತಿ.

ವಾಹನಚಾಲನೆ ಸಂದರ್ಭದಲ್ಲಿ ಮೊಬೈಲ್‌ನಲ್ಲಿ ಮಾತನಾಡುವುದು ಅನಾಹುತಕ್ಕೆ ಆಹ್ವಾನ ಎನ್ನುವುದು ತಿಳಿದಿದ್ದರೂ ಜನರು ಅದರ ಬಗ್ಗೆ ನಿರ್ಲಕ್ಷ್ಯ ವಹಿಸಿರುವುದು ಆತಂಕಕಾರಿ. ಇದಕ್ಕೆ ಒಂದು ಭೀಕರ ಉದಾಹರಣೆಯನ್ನು ನೀಡುತ್ತೇನೆ. "ಒಮ್ಮೆ ನಾವು ಆಗುಂಬೆ ಘಾಟ್ ಮೂಲಕ ಶೃಂಗೇರಿಯಿಂದ ಉಡುಪಿ ಕಡೆಗೆ ಪ್ರಯಾಣಿಸುತಿದ್ದೆವು. ನಾವು ಪ್ರಯಾಣಿಸುತ್ತಿದ್ದ ಟ್ಯಾಕ್ಸಿ ಚಾಲಕ ಈ ಅಪಘಾತದ ಬಗ್ಗೆ ಹೇಳಿದ-ಆ ದುರ್ದಿನದಂದು ರಾತ್ರಿ ಸುಮಾರು ಒಂಬತ್ತು ಗಂಟೆಯಿರಬಹುದು, ಒಂದು ಚಿಕ್ಕ ಕುಟುಂಬ (ಗಂಡ ಹೆಂಡತಿ ಮತ್ತು ಆರು ವರ್ಷದ ಮಗು) ತಮ್ಮ ಸ್ವಂತ ಕಾರಿನಲ್ಲಿ ಆಗುಂಬೆ ಘಾಟ್‌ನಲ್ಲಿ ಪ್ರಯಾಣಿಸುತ್ತಿದ್ದರು. ಗಂಡ ಮೊಬೈಲ್‌ನಲ್ಲಿ ಮಾತನಾಡುತ್ತ ತೀಕ್ಷ್ಣವಾದ ತಿರುವಿನಲ್ಲಿ ಕಾರನ್ನು ತಿರುಗಿಸಿದ.

ಅದೇನಾಯಿತೋ, ಮಾತನಾಡುವ ಭರದಲ್ಲಿ ಕಾರನ್ನು ಎತ್ತ ತಿರುಗಿಸಿದನೋ, ಕಾರು ಪ್ರಪಾತದಲ್ಲಿ ಬಿತ್ತು. ಗಂಡ ಹೆಂಡತಿ ಸ್ಥಳದಲ್ಲೇ ಮೃತಪಟ್ಟರು. ಆದರೆ ಮಗು ಮಾತ್ರ ಕಾರು ಸೀಟಿನ ಸಮೇತ ಕಾರಿನಿಂದ ಹಾರಿ ಬಿದ್ದು, ಆಳದಲ್ಲಿದ್ದ ಮರವೊಂದರ ಕೊಂಬೆಯ ಮೇಲೆ ಇಳಿಯಿತು. ಅ ಮಗುವಿನ ಆರ್ತನಾದ ಕೇಳಲು ಅಲ್ಲಿ ಯಾರೂ ಇಲ್ಲ! ಯಾರೋ ಪುಣ್ಯಾತ್ಮರು ಮಗವಿನ ಕೂಗು ಕೇಳಿ ಪೊಲೀಸರಿಗೆ ತಿಳಿಸಿದರು. ಆ ಮಗುವನ್ನು ರಕ್ಷಿಸಿದ್ದು ಮರುದಿನ ಮಧ್ಯಾಹ್ನ ಎರಡು ಗಂಟೆಗಂತೆ! ಆ ಮಗುವಿನ ಮನಃಸ್ಥಿತಿ ಏನಾಗಿರಬಹುದೆಂದು ಯಾರಾದರೂ ಊಹಿಸಬಹುದು.

ಎಷ್ಟೋ ವೇಳೆ ಇಂತಹ ಭೀಕರ ರಸ್ತೆ ಅಪಘಾತಗಳಿಗೆ ಮೊಬೈಲ್‌ನಲ್ಲಿ ಮಾತಾಡುವುದೇ ಕಾರಣ. ಆದರೆ ಮೊಬೈಲ್ ರಿಂಗಣಿಸಿದಾಗ ಮಾಡಬೇಕೇನು? ಆ ಕರೆಗೆ ಉತ್ತರಿಸಬೇಕೇ, ಬೇಡವೇ? ಯಾವುದಾದರೂ ತುರ್ತು ಕರೆಯಾಗಿದ್ದರೆ? ಎಂಬ ಜಿಜ್ಞಾಸೆಯೇ ವಾಹನ ಚಾಲಕ ಮೊಬೈಲ್ ಕರೆಗೆ ಉತ್ತರ ನೀಡಲು ಕಾರಣವಿರಬಹುದೇನೋ? ಕತ್ತನ್ನು ಕೊಂಕಿಸಿ, ಸೊಟ್ಟಗೆ ಮಾಡಿಕೊಂಡು ಮೊಬೈಲ್ ಮಾತಾಡುತ್ತಲೇವಾಹನ ಚಾಲನ ಮಾಡುತ್ತಿರುವುದನ್ನು ನಾವೆಲ್ಲರೂ ಅದೆಷ್ಟು ಬಾರಿ ನೋಡಿದ್ದೇವೋ? ಆದರೆ ಇದರಿಂದಾಗಿ ತಾನು ಅಪಘಾತಕ್ಕೆ ಆಹ್ವಾನವೀಯುತ್ತಿದ್ದೇನೆ ಎಂಬ ಅರಿವು ಆ ಕ್ಷಣದಲ್ಲಿ ಅವರಿಗಿರುವುದಿಲ್ಲ. ಹಾಗೆ ಮಾಡುವಾಗ ತಮ್ಮ ಪ್ರಾಣವನ್ನು ಮಾತ್ರವಲ್ಲ, ರಸ್ತೆಯಲ್ಲಿ ಹೋಗುವ ಮತ್ಯಾರೋ ಆಗಂತುಕನ ಪ್ರಾಣಕ್ಕೂ ಸಂಚಕಾರ ತರುತ್ತಿದ್ದೇನೆ ಎಂಬುದರ ಅರಿವು ಅವರಿಗ್ಯಾಕೆ ಇರುವುದಿಲ್ಲ? ಹಾಗಾದರೆ ಇಂತಹ ಸಂದರ್ಭದಲ್ಲಿ ಏನು ಮಾಡಬಹುದು?

- ಮೊಬೈಲ್ ಕರೆಯನ್ನು ನಿರ್ಲಕ್ಷಿಸುವುದು.
- ಒಂದು ಕ್ಷಣ ವಾಹನವನ್ನು ಪಕ್ಕಕ್ಕೆ ನಿಲ್ಲಿಸಿ, ವಾಹನ ಚಾಲನೆ ಮಾಡುತ್ತಿದ್ದೇನೆ. ಸ್ವಲ್ಪ ಹೊತ್ತಿನ ನಂತರ ನಾನೇ ಕರೆ ಮಾಡುತ್ತೇನೆ ಎಂದು ನಯವಾಗಿ ಹೇಳುವುದು
- ಕರೆ ತುರ್ತು ಎನಿಸಿದರೆ, ಪಕ್ಕಕ್ಕೆ ನಿಲ್ಲಿಸಿದ ನಂತರ ಐದು ನಿಮಿಷ ಮಾತನಾಡುವುದು

ನಾನು ಗಮನಿಸಿರುವ ಮತ್ತೊಂದು ಅತ್ಯಂತ ಆತಂಕಕಾರಿ ಬೆಳವಣಿಗೆಯೆಂದರೆ ಮೊಬೈಲ್ ದುರುಪಯೋಗ ಪಡಿಸಿಕೊಂಡು ಹೆಣ್ಣುಮಕ್ಕಳನ್ನು ಪೀಡಿಸುವುದು, ಬ್ಲಾಕ್ ಮೈಲ್ ಮಾಡುವುದು. ಯುವತಿಯರೊಂದಿಗೆ ಅತ್ಯಂತ ಅನುನಯದಿಂದ ವರ್ತಿಸಿ ಗೆಳೆತನ ಬೆಳೆಸುವುದು. ಅವರನ್ನು ಅನುನಯದಿಂದಲೇ ದೈಹಿಕ ಸಂಬಂಧಕ್ಕೆ ಸೆಳೆಯುವುದು ಎಷ್ಟೋ ವರ್ಷಗಳಿಂದ ನಡೆದು ಬರುತ್ತಿದೆ. ಆದರೆ, ಈ ಸಂದರ್ಭದಲ್ಲಿ ಆ ಯುವತಿಯರ ನಗ್ನ ಚಿತ್ರಗಳನ್ನು ಮೊಬೈಲ್‌ನಲ್ಲಿ ವೀಡಿಯೋ ಚಿತ್ರೀಕರಣ ಮಾಡಿ, ನಂತರ ಅವರನ್ನು ಬ್ಲಾಕ್‌ಮೈಲ್ ಮಾಡುವುದು ಇಂದಿನ ಆತಂಕಕಾರಿ ಬೆಳವಣಿಗೆ. ಮೊತ್ತಮೊದಲು

ಯುವತಿಯರು ಇಂತಹ ಅನೈತಿಕ ದೈಹಿಕ ಸಂಬಂಧಕ್ಕೆ ಒಪ್ಪುವುದು ತಪ್ಪಾದರೆ, ಯಾವುದೇ ಕಾರಣಕ್ಕೂ ಆ ವ್ಯಕ್ತಿ ವೀಡಿಯೋ ಚಿತ್ರ ತೆಗೆಯಲು ಬಿಡುವುದು ಅವರ ಬಾಳಿಗೆ ಮಾರಕವಾಗುತ್ತದೆ. ಇಂತಹ ಘಟನೆಗಳು ನಡೆದ ನಂತರ ವಿಷಚಕ್ರಕ್ಕೆ ಸಿಲುಕಿ ಪರದಾಡುವುದು, ಆತ್ಮಹತ್ಯೆಗೆ ಮೊರೆಹೋಗುವುದಕ್ಕಿಂತ ಅವು ನಡೆಯದೆ ಇರುವಂತೆ ಎಚ್ಚರಿಕೆ ವಹಿಸುವುದು ಅತ್ಯಂತ ಕ್ಷೇಮಕರವಲ್ಲವೇ? ಈ ಬಗ್ಗೆ ಯುವತಿಯರು ಎಷ್ಟು ಎಚ್ಚರಿಕೆಯಿಂದ ಇದ್ದರೂ ಸಾಲದು.

ಇದು ಸೆಲ್ ಫೋನ್ ದುರ್ಬಳಕೆ ಎಂಬುದು ನಿರ್ವಿವಾದ. ಇದು ಸೆಲ್‌ಫೋನ್‌ನ ಒಂದು ಆಯಾಮ. ಮತ್ತೊಂದು ಅತ್ಯಂತ ಗಂಭೀರವಾಗಿ ಚಿಂತಿಸಬೇಕಾದ ಸಂಗತಿ ಎಂದರೆ, ಅದರಿಂದ ಆರೋಗ್ಯಕ್ಕೆ ಉಂಟಾಗಬಹುದಾದ ಹಾನಿ. ಈ ಬಗ್ಗೆ ಅನೇಕ ವಾದ ವಿವಾದಗಳಾಗಿವೆ. ಅತಿಯಾದರೆ ಅಮೃತವೂ ವಿಷ ಎನ್ನುತ್ತಾರೆ. ಮೊಬೈಲ್ ಬಳಕೆಯೂ ಆ ರೀತಿಯಾಗಿದೆ. ಅತಿಯಾಗಿ ಬಳಸುವುದರಿಂದ ಮೆದುಳಿನಲ್ಲಿ ಕ್ಯಾನ್ಸರ್ ಗಡ್ಡೆ ಬರಬಹುದು ಎಂದು ಅನೇಕ ವರದಿಗಳು ಹೇಳುತ್ತವೆ. ಅಂತರ್ಜಾಲದಿಂದ ಹೆಕ್ಕಿದ ಕೆಲವು ಸಂಗತಿಗಳು ಹೀಗಿವೆ:

೧. ಸೆಲ್ ಫೋನ್‌ಗಳು ರೇಡಿಯೋ ಫ್ರೀಕ್ವೆನ್ಸಿ ವಿದ್ಯುತ್ಕಾಂತೀಯ ತರಂಗಗಳನ್ನು ಉಪಯೋಗಿಸುತ್ತವೆ. ಸೆಲ್ ಫೋನ್‌ನಲ್ಲಿ ಮಾತನಾಡುವಾಗ ಈ ತರಂಗಗಳನ್ನು ನಮ್ಮ ಕಿವಿಯ ಬಳಿಯಿರುವ ಸ್ನಾಯುಗಳು ಹೀರಿ ಬಿಸಿಯಾಗುತ್ತವೆ.

೨. ಸೆಲ್ ಫೋನ್ ಬಳಸಿ ಮಾತನಾಡುವಾಗ ಆದಷ್ಟೂ ಕಿವಿಯಿಂದ ದೂರ ಇಟ್ಟುಕೊಂಡು ಮಾತನಾಡುವುದು ಒಳಿತು. ಈ ದೂರ ಸುಮಾರು ೫/೮ ಅಂಗುಲ ಅಥವಾ ೧೫ ಸೆಂಟಿಮೀಟರ್‌ಗಳಿದ್ದರೆ ಒಳಿತು.

೩. ಹೇಳಬೇಕಾದ ಮಾತು ಸಂದೇಶದಿಂದ ಆದೀತೆಂದರೆ ಎಸ್. ಎಮ್. ಎಸ್ ಕಳುಹಿಸಿ. ಮಾತನಾಡಲೇ ಬೇಕಾದ ಸಂದರ್ಭ ಬಂದರೆ ಲ್ಯಾಂಡ್ ಲೈನ್ ಉಪಯೋಗಿಸಿ. ಅಂದ ಹಾಗೆ ಮೊಬೈಲ್ ಇದೆಯೆಂದು ಲ್ಯಾಂಡ್ ಲೈನ್ ಸಂಪರ್ಕ ತೆಗೆಸಬೇಡಿ. ಮನೆಯಲ್ಲಿದ್ದಾಗ ಸಾಧ್ಯವಾದಷ್ಟೂ ಅದನ್ನೇ ಬಳಸಿ.

೪. ಕಾರು ಬಸ್ಸುಗಳಲ್ಲಿ ಓಡಾಡುವಾಗ ಸಾಧ್ಯವಾದಷ್ಟೂ ಮೊಬೈಲ್‌ನಲ್ಲಿ ಮಾತನಾಡಬೇಡಿ, ಮುಚ್ಚಿದ ಆವರಣದಲ್ಲಿ ಈ ತರಂಗಗಳು ಹೆಚ್ಚು ವೃದ್ಧಿಯಾಗುತ್ತವೆ (ಹಸಿರು ಮನೆ ಪರಿಣಾಮ) ಎನ್ನುತ್ತಾರೆ ತಜ್ಞರು.

೫. ಮೊಬೈಲ್ ಅನ್ನು ನಿಮ್ಮ ಶರ್ಟ್ ಜೇಬಿನಲ್ಲಿ ಇಲ್ಲವೇ ಪ್ಯಾಂಟ್ ಜೇಬಿನಲಿಟ್ಟುಕೊಂಡು ತಿರುಗಬಾರದು. ಮೊಬೈಲ್‌ನಿಂದ ನಿರಂತರವಾಗಿ ಹೊಮ್ಮುವ ತರಂಗಗಳು ಹಾನಿಯುಂಟು ಮಾಡುತ್ತವೆ.

೬. ಮಕ್ಕಳ ಕೈಗೆ ಮೊಬೈಲ್ ಸಿಗುವಂತಿಡಬೇಡಿ. ಅವರ ಎಳೆಯ ಮೆದುಳಿಗೆ, ಇನ್ನೂ ಬಲಿಯದ ಮೂಳೆಗಳಿಗೆ ಅದು ಹಾನಿಕರ. ನಮ್ಮ ಮಕ್ಕಳು ಈಗಲೇ ಟೆಕ್ ಸಾವಿ, ಅವರಿಗೆ ಏನೆಲ್ಲಾ ಗೊತ್ತು ಎಂದು ಹೇಳಕೊಳ್ಳುವ ತವಕದಲ್ಲಿ ಮುಗ್ಧ ಮಕ್ಕಳ ಆರೋಗ್ಯವನ್ನು ಪಣಕ್ಕಿಡಬಾರದು.

೭. ರಾತ್ರಿ ಮಲಗುವಾಗ ದಯವಿಟ್ಟು ಫೋನ್ ನಿಮ್ಮ ತಲೆದಿಂಬಿನ ಕೆಳಗಿರುವುದು ಬೇಡ. ಏಕೆಂದರೆ, ಅದು ಆಫ್ ಆಗಿರುವಾಗ ಕೂಡ ಅದರಿಂದ ವಿದ್ಯುತ್ಕಾಂತೀಯ ತರಂಗಗಳು ಹೊಮ್ಮುತ್ತಿದ್ದು, ಆ ಫೋನ್ ತಾನಿರುವ ತಾಣದ ಬಗ್ಗೆ ಸೂಚನೆ ನೀಡುತ್ತಿರುತ್ತದೆ. ಆದ್ದರಿಂದ ರಾತ್ರಿಯ ವೇಳೆ ಕೂಡ ಅದು ನಿಮ್ಮ ಬಳಿ ಇರಲೇ ಬೇಕೆಂದರೆ, ಸುಮಾರು ಒಂದು ಮೀಟರ್ ದೂರದಲ್ಲಿಡಿ.

೮. ಮೊಬೈಲ್‌ನಲ್ಲಿ ಅಲಾರಂ ಇಡಬೇಕಾಗಿದ್ದರೆ, ಮೊಬೈಲ್ ಅನ್ನು ಏರೋಪ್ಲೇನ್ ಮೋಡ್‌ನಲ್ಲಿಟ್ಟು ನಿಶ್ಚಿಂತೆಯಾಗಿ ಮಲಗಿ.

೯. ಮೊಬೈಲ್ ಟವರ್‌ಗಳು ನಿಮ್ಮ ಮನೆಯಿಂದ ಕನಿಷ್ಠ ಐವತ್ತು ಮೀಟರ್ ದೂರದಲ್ಲಾದರೂ ಇದ್ದರೆ, ನೀವು ಮತ್ತು ನಿಮ್ಮ ಕುಟುಂಬದವರು ಸುರಕ್ಷಿತ. ಇಲ್ಲವಾದರೆ ಆ ಟವರ್‌ನಿಂದ ಹೊಮ್ಮುವ ವಿದ್ಯುತ್ಕಾಂತೀಯ ತರಂಗಗಳಿಗೆ ನಿಮ್ಮನ್ನು ಅನವಶ್ಯಕವಾಗಿ ಒಡ್ಡಿಕೊಂಡು ಕ್ಯಾನ್ಸರ್‌ಗೆ ಆಹ್ವಾನ ನೀಡಿದಂತಾಗುತ್ತದೆ.

೧೦. ನಿಮ್ಮ ಮೊಬೈಲ್‌ನಲ್ಲಿ ಬ್ಯಾಟರಿ ಚಾರ್ಜ್ ತೀರಾ ಕಡಿಮೆಯಿದ್ದಾಗ ಮಾತನಾಡುವುದು ಹಾನಿಕರ. ಏಕೆಂದರೆ, ದುರ್ಬಲವಾದ ಬ್ಯಾಟರಿ ಸಿಗ್ನಲ್‌ಗಳನ್ನು ಪಡೆಯಲು ಹೆಚ್ಚು ವಿದ್ಯುತ್ಕಾಂತೀಯ ತರಂಗಗಳನ್ನು ಆಕರ್ಷಿಸುತ್ತದಂತೆ. ಚಾರ್ಜಿಗೆ ಇಟ್ಟು ಮೊಬೈಲ್‌ನಲ್ಲಿ ಮಾತಾಡಬಾರದು ಎನ್ನುತ್ತಾರೆ ತಜ್ಞರು. ಈ ಬಗ್ಗೆ ಹಲವಾರು ಇ–ಮೈಲ್‌ಗಳು ಕೂಡ ಬಂದಿದ್ದವು. ಸೆಲ್ ಫೋನ್ ಚಾರ್ಜ್ ಆಗುತ್ತಿರುವಾಗ ಮಾತನಾಡುತ್ತಿದ್ದ ವೇಳೆ ಅದು ಸ್ಫೋಟಗೊಂಡ ಕೆಲವು ವರದಿಗಳು ಪ್ರಕಟವಾಗಿವೆ. ಒಂದೆರಡು ಸಂದರ್ಭದಲ್ಲಿ ಅದಕ್ಕೆ ಬೆಂಕಿ ಹೊತ್ತಿಕೊಂಡದ್ದೂ ಇದೆ ಎನ್ನುತ್ತವೆ ವರದಿಗಳು. ಆದ್ದರಿಂದ ಫೋನ್ ಚಾರ್ಜಿಂಗ್‌ನಲ್ಲಿದ್ದಾಗ ಹಾಗೆಯೇ ಮಾತನಾಡದೆ, ಅದನ್ನು ಹೊರತೆಗೆದು, ಮಾತು ಮುಗಿಸಿ, ಮತ್ತೆ ಚಾರ್ಜಿಂಗ್‌ಗೆ ಇಡಲು ಅಡ್ಡಿಯಿಲ್ಲ.

ಪ್ರತಿಯೊಬ್ಬರಿಗೂ ಮೊಬೈಲ್ ಅನಿವಾರ್ಯ ಸಂಗಾತಿ ಎನ್ನುವಂತಹ ಇಂದಿನ ಮೊಬೈಲ್ ಯುಗದಲ್ಲಿ ಅದನ್ನು ನಮ್ಮ ಗುಲಾಮನಂತೆ ಕಾಣಬೇಕೇ ವಿನಹ ನಾವು ಅದರ ಗುಲಾಮರಾಗಿಬಿಡುವುದು ನಮಗೆ ಒಳಿತಲ್ಲ.

◆

ನುಡಿ-ಅಕ್ಷರ ವಿನ್ಯಾಸದ ಜನ್ಮ

- ಹೆಚ್.ಎಂ.ಶ್ರೀನಿವಾಸ, ಶಿವಮೊಗ್ಗ
ಜಂಟಿ ನಿರ್ದೇಶಕರು, ಕೈಗಾರಿಕೆ ಮತ್ತು ವಾಣಿಜ್ಯ ಇಲಾಖೆ
೯೪೪೮೭೨೪೮೦೬೨, hms_dic@yahoo.com

ಏಪ್ರಿಲ್ ೨೦೦೨ರ ಒಂದು ದಿನ ಬೆಳಿಗ್ಗೆ, ಕನ್ನಡಪ್ರಭ ಪತ್ರಿಕೆಯ ವರದಿಗಾರ ಹಾಗೂ ಸ್ನೇಹಿತ ಹೆಚ್.ಭರತ್‌ಕುಮಾರ್ ದೂರವಾಣಿ ಮೂಲಕ 'ಬೆಂಗಳೂರಿನಲ್ಲಿ ಕನ್ನಡ ಗಣಕ ಪರಿಷತ್ತು ಎನ್ನುವ ಸಂಸ್ಥೆಯೊಂದು ಕನ್ನಡಕ್ಕಾಗಿ ಸೇವೆ ಸಲ್ಲಿಸುತ್ತಿದ್ದು, ಇದು ಗಣಕಗಳಲ್ಲಿ ಕನ್ನಡದ ಬಳಕೆಯನ್ನು ಹೆಚ್ಚಿಸುವ ಉದ್ದೇಶದಿಂದ ಕನ್ನಡ ತಂತ್ರಾಂಶಗಳನ್ನು ಅಭಿವೃದ್ಧಿ ಪಡಿಸುತ್ತಿದೆ. ಈಗಾಗಲೇ ಅದನ್ನು ಕರ್ನಾಟಕ ಸರ್ಕಾರದ ಮಾಹಿತಿ ತಂತ್ರಜ್ಞಾನ ಇಲಾಖೆಗೆ ನುಡಿ ಹೆಸರಿನಲ್ಲಿ ತಂತ್ರಾಂಶವನ್ನು ಅಭಿವೃದ್ಧಿ ಪಡಿಸಿದೆ. ಈ ತಂತ್ರಾಂಶದಲ್ಲಿ ಒಂದೇ ಒಂದು ಫಾಂಟ್ ಇದ್ದು, ಬಳಕೆಗಾಗಿ ವಿವಿಧ ವಿನ್ಯಾಸದ ಇನ್ನೂ ಹೆಚ್ಚಿನ ಫಾಂಟ್‌ಗಳು ಇದಕ್ಕೆ ಅವಶ್ಯಕತೆ ಇದೆ. ಆದ್ದರಿಂದ ನಿನ್ನ ಹೆಸರು, ವಿಳಾಸ ಮತ್ತು ದೂರವಾಣಿ ಸಂಖ್ಯೆಯ ವಿವರಗಳನ್ನು ಕನ್ನಡ ಗಣಕ ಪರಿಷತ್ತಿನ **ಶ್ರೀನಾಥ ಶಾಸ್ತ್ರಿ** ಮತ್ತು **ನರಸಿಂಹ ಮೂರ್ತಿಯವರಿಗೆ** ನೀಡಿದ್ದೇನೆ. ಹೊಸ ಅಕ್ಷರ ವಿನ್ಯಾಸಗಳನ್ನು ಅಭಿವೃದ್ಧಿಪಡಿಸು' ಎಂದು ತಿಳಿಸಿದರು. ಇದನ್ನು ಕೇಳಿ ನನಗೆ ಅತೀವ ಆಸಕ್ತಿ ಮೂಡಿದ್ದು ನಿಜ. ಇದಕ್ಕೆ ಕಾರಣಗಳೂ ಇವೆ.

ಚಿಕ್ಕಂದಿನಿಂದಲೂ ಅಕ್ಷರಗಳನ್ನು ಸುಂದರವಾಗಿ ಬರೆಯಬೇಕೆಂಬ ಆಸೆ ನನ್ನಲ್ಲಿ ಅಂಕುರಿಸಿತ್ತು. ಈ ಸಂಬಂಧ ೧೯೭೦ನೇ ಇಸವಿಯ ಘಟನೆಯೊಂದು ನೆನಪಿಗೆ ಬರುತ್ತದೆ. ನನ್ನ ಹುಟ್ಟೂರು ಚಿತ್ರದುರ್ಗ ಜಿಲ್ಲೆಯ, ಮೊಳಕಾಲ್ಮೂರು ತಾಲ್ಲೂಕಿನ ಕೊಂಡ್ಲಹಳ್ಳಿ ಗ್ರಾಮ. ಹೈಸ್ಕೂಲ್ ಮೆಟ್ಟಿಲು ಹತ್ತುವ ವಯಸ್ಸು, ರಜಾ ದಿನಗಳು. ನನಗೆ ಸಿನಿಮಾ ಹುಚ್ಚು. ತಂದೆಯವರು ಪ್ರಾಥಮಿಕ ಶಾಲಾ ಶಿಕ್ಷಕರು. ಸಿನಿಮಾ ನೋಡಲು ಟಿಕೇಟಿಗೆ ಹಣ ನೀಡಲು ನಿರಾಕರಿಸಿದರು. ಒಂದು ದಿನ- ಗ್ರಾಮದ ಚಿತ್ರಮಂದಿರದಲ್ಲಿ ಗಂಧದಗುಡಿ ಚಿತ್ರ ಬಿಡುಗಡೆ. ಅಲ್ಲಿ ವಾಲ್‌ಪೋಸ್ಟರ್ ಅಂಟಿಸುವ ತಡಿಕೆ ಮೇಲೆ ಚಿತ್ರದ ಹೆಸರು ಬರೆಯಲು ಯಾರು ಇಲ್ಲದ ಕಾರಣ ಓಬಯ್ಯ ತಾನೇ ಹೆಸರು ಬರೆಯಲು ಕಷ್ಟಪಡುತಿದ್ದ. ಅವನ ಕಷ್ಟವನ್ನು ನೋಡುತ್ತಿದ್ದ ನಾನು 'ನಾನು ಬರೆಯಲೇ?' ಎಂದೆ. ಓಬಯ್ಯನಿಂದ ಬ್ರಷ್ ಮತ್ತು ಬಣ್ಣ ಪಡೆದು ಗಂಧದಗುಡಿ ಎಂದು ತಲೆಕೆಳಗಾಗಿ ಬರೆದೆ. ಚಿತ್ರಮಂದಿರದ ಮಾಲೀಕ ಅಂದಿನಿಂದ ನನಗೆ ಉಚಿತವಾಗಿ ಸಿನಿಮಾ ತೋರಿಸಲು ಪ್ರಾರಂಭಿಸಿದ.

ಬಾಲ್ಯದಿಂದಲೇ ಇದ್ದ ಚಿತ್ರಕಲೆ ಮತ್ತು ಅಕ್ಷರ ವಿನ್ಯಾಸದ ಗೀಳು ಅಂದು ವಾಣಿಜ್ಯ ಬಳಕೆಗೆ ಬಂತು. ಸುಧಾ, ಪ್ರಜಾಮತ, ಮಯೂರ ಮುಂತಾದ ವಾರ ಪತ್ರಿಕೆಗಳಲ್ಲಿ

ಪ್ರಕಟವಾಗುತ್ತಿದ್ದ ಖ್ಯಾತ ಕಲಾವಿದರಾದ ಚಂದ್ರನಾಥ್, ರಾಸೂರಿ, ಮನೋಹರ, ಪ.ಸ.ಕುಮಾರ್, ಕಮಲೇಶ್‌ರ ಅಕ್ಷರ ವಿನ್ಯಾಸಗಳೇ ನನಗೆ ಪ್ರೇರಣೆ. ಈ ಪ್ರೇರಣೆ ನನಗೆ ಮುಂದೊಂದು ದಿನ ನುಡಿ ತಂತ್ರಾಂಶಕ್ಕೆ ಅಕ್ಷರಗಳನ್ನು ಒದಗಿಸುವ ದಾರಿಯಾಗಬಲ್ಲದು ಎಂದು ಕನಸಲ್ಲೂ ಭಾವಿಸಿರಲಿಲ್ಲ.

೧೯೯೨ರಲ್ಲಿ ಆಂಧ್ರಪ್ರದೇಶದ ಜವಳಿ ಗಿರಣಿಯಲ್ಲಿ ಕೆಲಸ ನಿರ್ವಹಿಸುತ್ತಿದ್ದ ದಿನಗಳು. ಒಂದು ದಿನ ಬೆಂಗಳೂರಿನ ಡಿ.ವಿ.ಜಿ ರಸ್ತೆಯಲ್ಲಿದ್ದ ಸ್ಕ್ಯಾನ್ ಕಂಪ್ಯೂಟರ್ ಸಿಸ್ಟಮ್ಸ್‌ನ ಗಿರಿಧರ ಆಗ ತಾನೇ ಬಳಕೆಯಲ್ಲಿದ್ದ ವಿಂಡೋಸ್‌ನಲ್ಲಿ ಕನ್ನಡವನ್ನು ಬಳಸುತ್ತಿದ್ದು ಡಿ.ಟಿ.ಪಿ ಗೆ ಅನೇಕ ಜನರು ಹೊಸ ಹೊಸ ವಿನ್ಯಾಸ ಅಕ್ಷರಗಳನ್ನು ಕೇಳುತ್ತಿದ್ದಾರೆ. ನಾನು ಬಳಸುತ್ತಿರುವ ಕನ್ನಡ ತಂತ್ರಾಂಶದಲ್ಲಿ ಕೇವಲ ೩ ಅಕ್ಷರ ವಿನ್ಯಾಸಗಳು ಮಾತ್ರ ಇವೇ. ಈ ತಂತ್ರಾಂಶದ ಡೆವಲಪರ್ ಈ ಪ್ರದೇಶದಲ್ಲೇ ಇದ್ದು ಅವರಿಗೆ ಹೊಸ ಅಕ್ಷರ ವಿನ್ಯಾಸಗಳ ಅವಶ್ಯಕತೆ ಇದೆ ಎಂದು ತಿಳಿಸಿ ಅವರ ಬಳಿ ಕರೆದುಕೊಂಡು ಹೋಗಿ ನನ್ನ ಪರಿಚಯ ಮಾಡಿಸಿದ.

ಅಕ್ಷರ ವಿನ್ಯಾಸ ಅಷ್ಟು ಸುಲಭದ ಕೆಲಸವಲ್ಲ. ಮೊದಲು ಅವುಗಳನ್ನು ಡ್ರಾಯಿಂಗ್ ಪೇಪರ್‌ನ ಮೇಲೆ ಅಚ್ಚುಕಟ್ಟಾಗಿ ಬರೆಯಬೇಕು. ಪ್ರತಿ ವಿನ್ಯಾಸಕ್ಕೆ ಅಂತಹ ೨೫೬ ಅಕ್ಷರಗಳನ್ನು ಬರೆಯಬೇಕು. ನಂತರ ಅವಗಳನ್ನು ಸ್ಕ್ಯಾನ್ ಮಾಡಬೇಕು. ಇಂಪೋರ್ಟ್ ಮಾಡಬೇಕು, ಗ್ರಿಡ್ ಫಿಟ್ ಮಾಡಬೇಕು, ಇದೆಲ್ಲ ಅಷ್ಟು ಸುಲಭದ ಕೆಲಸವಲ್ಲ, ತಿಂಗಳು ಗಟ್ಟಲೇ ಸಮಯ ತೆಗೆದುಕೊಳ್ಳುತ್ತದೆ. ನಿಮ್ಮ ಅಕ್ಷರಗಳು ಇದಕ್ಕೆಲ್ಲ ಸರಿಹೋಗುವುದಿಲ್ಲ ಎಂದ ಕನ್ನಡ ತಂತ್ರಾಂಶದ ಡೆವಲಪರ್.

ಅಂದಿನಿಂದ ಬಲವಾಗಿ ಹೋಯಿತು ಅವಮಾನದ ವಿರುದ್ಧ ನನ್ನ ಛಲ. ಸರಿಯಾಗಿ ಹತ್ತು ವರುಷಗಳ ನಂತರ ಬಂತು ನನಗೆ ಒದಗಿಬಂತು ಅವಕಾಶ ಮೇಲಿನ ದೂರವಾಣಿ ಮೂಲಕ. ಈ ರೀತಿಯಾಗಿ ಪ್ರಾರಂಭವಾದ ನನ್ನ ಮತ್ತು **ಶ್ರೀನಾಥ ಶಾಸ್ತ್ರಿ**ಯವರ ಸಂಪರ್ಕ ಕನ್ನಡ ನುಡಿ ತಂತ್ರಾಂಶಕ್ಕೆ ವಿವಿಧ ವಿನ್ಯಾಸ ೨೯ ಫಾಂಟ್‌ಗಳನ್ನು ಜನ್ಮ ನೀಡುವಂತೆ ಮಾಡಿತು. ಈ ಅಕ್ಷರ ವಿನ್ಯಾಸದಲ್ಲಿ ನಾನು ಯಾವುದೇ ವಿನ್ಯಾಸವನ್ನು ಮೊದಲು ಡ್ರಾಯಿಂಗ್ ಕಾಗದದ ಮೇಲೆ ಚಿತ್ರ ರಚನೆ ಮಾಡಿಕೊಂಡು ಅದನ್ನು ಸ್ಕ್ಯಾನ್ ಮಾಡಿ ನಂತರ **ಕೀಬೋರ್ಡ್‌ಗೆ ಹೊಂದಾಣಿಕೆ** ಮಾಡುವ ಪದ್ಧತಿಯನ್ನು ಅನುಸರಿಸದೇ ನೇರವಾಗಿ ಅಕ್ಷರಗಳನ್ನು ಫಾಂಟ್ ರಚಿಸುವ ತಂತ್ರಾಂಶಗಳಲ್ಲಿ ರಚಿಸಿ ಅಂತಿಮಗೊಳಿಸುವ ಪದ್ಧತಿಯನ್ನು ಅನುಸರಿಸುತ್ತಿದ್ದೇನೆ. ಇದರಿಂದ ಶೇ ೯೫% ಸಮಯದ ಉಳಿತಾಯವಾಗುತ್ತದೆ.

ಕನ್ನಡ ನುಡಿ ತಂತ್ರಾಂಶದ ಮೂಲಕ ನನ್ನ ಅಕ್ಷರ ವಿನ್ಯಾಸಗಳನ್ನು ಕನ್ನಡಿಗರು ಬಳಸುವಂತೆ ಅವಕಾಶ ಮಾಡಿಕೊಟ್ಟ ಮತ್ತು ನನ್ನ ಕನಸನ್ನು ನನಸಾಗಿಸಲು ಅವಕಾಶ ಮಾಡಿಕೊಟ್ಟ ಶ್ರೀ ಶ್ರೀನಾಥಶಾಸ್ತ್ರಿಯವರಿಗೆ ಈ ಶುಭ ಸಂಧರ್ಭದಲ್ಲಿ ನನ್ನ ನಮನಗಳು. ◆

ಮಾಹಿತಿಯ ಆಕರವಾಗಿ ಗಣಕಗಳು

– ಜಿ.ಎನ್ ನರಸಿಂಹಮೂರ್ತಿ, ಬೆಂಗಳೂರು
ಕಾರ್ಯದರ್ಶಿ, ಕನ್ನಡ ಗಣಕ ಪರಿಷತ್ತು
೯೮೪೫೩೭೨೯೫೭, gnnarasimha@gmail.com

ಕಳೆದ ಇಪ್ಪತ್ತು ಮುವ್ವತ್ತು ವರ್ಷಗಳಿಂದ ಗಣಕ ಕ್ಷೇತ್ರ ನಮ್ಮ ಸಮಾಜದ ಮೇಲೆ ಬಹಳ ಪ್ರಭಾವವನ್ನು ಬೀರಿದೆ. ಈ ವರ್ಷಗಳಲ್ಲಿ ಮಾಹಿತಿಯನ್ನು – ಯಾವುದೇ ಭಾಷೆಯಲ್ಲಾಗಲಿ – ಸಿದ್ಧಪಡಿಸುವ, ಸಂಗ್ರಹಿಸುವ , ವಿನಿಮಯ ಮಾಡಿಕೊಳ್ಳುವ ಅಥವಾ ಬೇರೆಡೆಗೆ ಕಳುಹಿಸುವ ವಿಧಾನದಲ್ಲಿ ದಿಗ್ಭ್ರಮೆಗೊಳಿಸುವಷ್ಟು ಬದಲಾವಣೆಗಳಾಗಿವೆ. ಈ ದಿಸೆಯಲ್ಲಿ ಬೆರಳಚ್ಚು ಯಂತ್ರಗಳು ನಮಗೆ ಒಂದಿಷ್ಟು ನೆರವು ನೀಡಿದ್ದವು ಎಂಬುದು ಸರಿಯಾದರೂ ಗಣಕಗಳ ಕಾರ್ಯವಿಧಾನದ ಇದಿರಿನಲ್ಲಿ ಬೆರಳಚ್ಚು ಯಂತ್ರಗಳು ಏನೂ ಇಲ್ಲ ಎನಿಸಿ ಸದ್ಯ ಅವುಗಳನ್ನು ಹೆಚ್ಚಾಗಿ ಬಳಸುತ್ತಿಲ್ಲ. ಆದರೂ ಅವು ಇನ್ನೂ ಇವೆ ಎಂಬುದನ್ನು ಮರೆಯುವ ಹಾಗಿಲ್ಲ.

ಗಣಕಗಳ ಮೂಲಕ ನಾವು ನಾಲ್ಕು ವಿಧದ ಚಟುವಟಿಕೆಗಳಲ್ಲಿ ತೊಡಗಿಕೊಳ್ಳಬಹುದು, **ಪದ ಸಂಸ್ಕರಣೆ, ದತ್ತ ಸಂಸ್ಕರಣೆ, ಬಹುಮಾಧ್ಯಮ ಅನ್ವಯಗಳು ಮತ್ತು ಅಂತರಜಾಲ ಅನ್ವಯಗಳು** (ಜಾಲಬಂಧಗಳನ್ನೂ ಇದರೊಟ್ಟಿಗೇ ಸೇರಿಸಬಹುದು). ಈ ಎಲ್ಲ ಬಗೆಯಲ್ಲಿ ಸಿದ್ಧಪಡಿಸಿದ ಮಾಹಿತಿಯನ್ನು ಗಣಕಗಳಲ್ಲಿ ಸುರಕ್ಷಿತವಾಗಿರಿಸಿ ಅದನ್ನು ಆಕರವಾಗಿ ಬಳಸಬಹುದು. ಈ ಎಲ್ಲ ಬಗೆಯಲ್ಲಿ ಸಿದ್ಧಪಡಿಸಿದ ಮಾಹಿತಿ ಮುಂದಿನ ದಿನಗಳಲ್ಲಿ ನಮಗೆ ಆಕರವಾಗಿ ಉಳಿಯುತ್ತದೆ. ಈ ಆಕರದ ಇನ್ನೊಂದು ವಿಶೇಷವೆಂದರೆ ಎಷ್ಟು ಜನರಿಗೆ ಈ ಮಾಹಿತಿಗಳನ್ನು ನೀಡಿದರೂ ಗಣಕದಲ್ಲಿ ಆ ಮಾಹಿತಿ ಉಳಿದೇ ಇರುತ್ತದೆ. ಗಣಕದಲ್ಲಿ ನಿಜವಾದ ಅರ್ಥದಲ್ಲಿ ಒಂದು ಅಕ್ಷಯ ಮಾಹಿತಿ ಭಂಡಾರ ನಿರ್ಮಾಣವಾಗಿರುತ್ತದೆ. ಪದ ಸಂಸ್ಕರಣೆಯಲ್ಲಿ ಮಾಹಿತಿಯನ್ನು ಸಿದ್ಧಪಡಿಸುವ ಸಮಯದಲ್ಲಿ ಅನೇಕ ಸಂಗತಿಗಳನ್ನು ಗಮನಕ್ಕೆ ತಂದುಕೊಂಡರೆ ಆ ಮಾಹಿತಿಯನ್ನು ಮುಂದಿನ ಆಕರವಾಗಿ ಉಳಿಸಿಕೊಳ್ಳಲು ನೆರವಾಗುತ್ತದೆ. ಉದಾಹರಣೆಗೆ ಸಿದ್ಧಪಡಿಸಿದ ಮಾಹಿತಿ ಇರುವ ಕಡತಕ್ಕೆ ಆ ಮಾಹಿತಿಯಲ್ಲಿರುವ ವಿಷಯವನ್ನು ಸೂಚಿಸುವ ಹೆಸರನ್ನಿತ್ತು ಉಳಿಸಿಕೊಳ್ಳಬಹುದು. ಸಾಮಾನ್ಯವಾಗಿ ಪದ ಸಂಸ್ಕರಣೆಯಲ್ಲಿ ನುಡಿ ತಂತ್ರಾಂಶವನ್ನು ಬಳಸಿದರೆ ಸಿದ್ಧವಾದ ಮಾಹಿತಿಯನ್ನು ನುಡಿ ಕಡತ, ನೋಟ್ ಪ್ಯಾಡ್ ಅಥವಾ ಪಠ್ಯ ಕಡತ, ಮೈಕ್ರೋಸಾಫ್ಟ್ ಸಂಸ್ಥೆಯ 'ಎಂ ಎಸ್ ಆಫ್ಫೀಸ್ 'ನ ವರ್ಡ್, 'ಎಂ ಎಸ್ ಎಕ್ಸೆಲ್' ಅಥವಾ

'ಎಂ ಎಸ್ ಪವರ್ ಪಾಯಿಂಟ್' ಗಳ ಕಡತಗಳ ರೂಪದಲ್ಲಿ ಉಳಿಸಿಕೊಳ್ಳಬಹುದು, ಈ ಬಗೆಯ ಕಡತಗಳಿಗೆ ಅವುಗಳದೇ ಆದ ಅನುಕೂಲ, ವೈಶಿಷ್ಟ್ಯಗಳಿರುತ್ತವೆ. ಉದಾಹರಣೆಗೆ ನುಡಿ ಕಡತ ಅಥವಾ ಪಠ್ಯ ಕಡತಗಳು ಗಾತ್ರದಲ್ಲಿ ಬಹು ಸಣ್ಣದಾಗಿದ್ದು ಗಣಕದಲ್ಲಿ ಹೆಚ್ಚು ಸ್ಥಳಾವಕಾಶವನ್ನು ಬಳಸದೇ ಇರುವುದರಿಂದ ಇನ್ನೊಂದೆಡೆಗೆ ರವಾನಿಸಲು, ಇಂತಹ ಅನೇಕ ಕಡತಗಳನ್ನು ಸಂಗ್ರಹಿಸುವುದು ಸುಲಭವಾಗುತ್ತದೆ. ಆದರೆ ನುಡಿ ಕಡತವನ್ನು ಇನ್ನೊಂದೆಡಗೆ ಕಳಿಸುವಾಗ ಅಲ್ಲಿ ನುಡಿ ತಂತ್ರಾಂಶವಿದ್ದರೆ ಮಾತ್ರ ಅದು ತೆರೆದುಕೊಳ್ಳುತ್ತದೆ. ಆದುದರಿಂದ ನುಡಿ ಕಡತವನ್ನು ಇನ್ನೊಂದೆಡೆಗೆ ರವಾನಿಸಬೇಕಾದಾಗ ಸ್ವಲ್ಪ ಕಾಳಜಿ ಆವಶ್ಯಕ. ಇನ್ನೊಂದೆಡೆ ನುಡಿ ಇಲ್ಲ ಎಂದಾದರೆ ನುಡಿ ಕಡತದಲ್ಲಿನ ಮಾಹಿತಿಯನ್ನು ನೋಟ್ ಪ್ಯಾಡಿನ ಹೊಸ ಕಡತಕ್ಕೆ ವರ್ಗಾಯಿಸಿ ಅದನ್ನು ಇದೇ ಹೆಸರಲ್ಲಿ ಉಳಿಸಿ ಆ ಕಡತವನ್ನು ಕಳಿಸಬೇಕು. ನೋಟ್ ಪ್ಯಾಡಿನ ಅಥವಾ ನುಡಿ ಕಡತಗಳಲ್ಲಿ ಹೆಚ್ಚಿನ ವಿನ್ಯಾಸ ವಿಧಾನಗಳಿಗೆ ಅವಕಾಶವಿರುವುದಿಲ್ಲ.

'ಎಂಎಸ್ ವರ್ಡ್'ನಲ್ಲಿ ಪುಟವಿನ್ಯಾಸ ಮತ್ತು ಇತರ ಬಗೆಯ ವಿನ್ಯಾಸಗಳು ಲಭ್ಯವಿವೆ. ಇಲ್ಲಿ ಇಂಗ್ಲಿಷಿನ ಮಾಹಿತಿಗೆ ಕಾಗುಣಿತ ದೋಷ ಮತ್ತು ವ್ಯಾಕರಣದೋಷಗಳನ್ನು ಸರಿಪಡಿಸುವ ಸೌಲಭ್ಯಗಳೂ ಇರುತ್ತವೆ. ನುಡಿ ತಂತ್ರಾಂಶ ಕನ್ನಡಕ್ಕೆ ಸಂಬಂಧಿಸಿದಂತೆ ಪದಗಳ ಅಕಾರಾದಿ ವಿಂಗಡಣೆ, ಪದ ಪರೀಕ್ಷೆ, ಸ್ವಯಂ ತಿದ್ದುಪಡಿ, ಮುಂತಾದ ಸೌಲಭ್ಯಗಳನ್ನು ಒದಗಿಸಿದೆ.

'ಎಂಎಸ್ ಎಕ್ಸೆಲ್'ನಲ್ಲಿ ಲೆಕ್ಕಾಚಾರಕ್ಕೆ ಸಂಬಂಧಿಸಿದ ಮತ್ತು ಕೆಲಮಟ್ಟಿಗೆ ದತ್ತ ಸಂಸ್ಕರಣೆಯ ಕೆಲಸಗಳನ್ನು ಮಾಡಿಕೊಂಡು ಅಂತಹ ಮಾಹಿತಿಯನ್ನು ಕಾಪಿಟ್ಟುಕೊಳ್ಳಬಹುದು. ಇದರಲ್ಲಿ ಮಾಹಿತಿಯನ್ನು ಪುನರ್ವಿಂಗಡಣೆ ಮಾಡಲು ಅವಕಾಶವಿರುತ್ತದೆ.

'ಎಂಎಸ್ ಪವರ್ ಪಾಯಿಂಟ್'ನಲ್ಲಿ ಸಂವಹನಕ್ಕೆ ಅಗತ್ಯವಾದ ಮಂಡನೆಯನ್ನು ಪ್ರಸ್ತುತಪಡಿಸಲು ಅನುವಾಗುವಂತೆ ಮಾಹಿತಿಯನ್ನು ಸಿದ್ಧಪಡಿಸಬಹುದು. ಇದನ್ನೂ ನಾವು ಉಳಿಸಿಟ್ಟುಕೊಂಡು ಅಗತ್ಯವಿದ್ದಾಗಲೆಲ್ಲ ಬಳಸಿಕೊಳ್ಳಬಹುದು.

'ಎಂ ಎಸ್ ಆಫೀಸ್' ತಂತ್ರಾಂಶಕ್ಕೆ ಪರ್ಯಾಯವಾಗಿ 'ಓಪನ್ ಆಫೀಸ್'', 'ಸ್ಟಾರ್ ಆಫೀಸ್' ಮುಂತಾದ ಅದೇ ಮಾದರಿಯಲ್ಲಿ ಕಾರ್ಯ ನಿರ್ವಹಿಸುವ ಆದರೆ ಉಚಿತವಾಗಿ ದೊರೆಯುವ ತಂತ್ರಾಂಶಗಳು ಲಭ್ಯವಿವೆ.

ಪುಸ್ತಕಮುದ್ರಣಕ್ಕೆ ಸಂಬಂಧಿಸಿದಂತೆ ವ್ಯಾಪಕವಾಗಿ ಪೇಜ್‌ಮೇಕರ್ ಬಳಕೆಯಾಗುತ್ತಿದೆ. ಅದರಲ್ಲಿ ಪುಸ್ತಕರೂಪಕ್ಕೆ ಮಾಹಿತಿಯನ್ನು ಹೊಂದಿಸಿಕೊಳ್ಳುವ ಸೌಲಭ್ಯಗಳಿದ್ದು ಜನಪ್ರಿಯ ತಂತ್ರಾಂಶವಾಗಿದೆ. ಪತ್ರಿಕೆಗಳ ಪ್ರಕಟಣೆಗಾಗಿ 'ಇನ್ ಡಿಸೈನ್' ಮತ್ತು 'ಕ್ವಾರ್ಕ್ ಎಕ್ಸ್‌ಪ್ರೆಸ್'' ತಂತ್ರಾಂಶಗಳು ಬಳಕೆಯಲ್ಲಿವೆ.

ಇವೆಲ್ಲ ಪಠ್ಯದ ರೂಪದಲ್ಲಿರುವ ಮಾಹಿತಿಯ ಸಂಗತಿಯಾಯಿತು. ಗಣಕಗಳಲ್ಲಿ ಪಠ್ಯವಲ್ಲದೆ ಧ್ವನಿ, ಚಿತ್ರ ಮತ್ತು ವೀಡಿಯೋ ರೂಪಗಳಲ್ಲಿಯೂ ಮಾಹಿತಿಯನ್ನು ಸಂಗ್ರಹಿಸಬಹುದು. ಉದಾಹರಣೆಗೆ ಲಭ್ಯವಿದ್ದರೆ ಕನ್ನಡದ ಮೊತ್ತಮೊದಲ ಚಲನಚಿತ್ರವನ್ನು ಗಣಕದಲ್ಲಿರಿಸಬಹುದು. ಗ್ರಾಮಾಫೋನು ತಟ್ಟೆ, ಟೇಪುಗಳಲ್ಲಿರುವ ಹಳೆಯ ಸಂಗೀತಗಾರರ ಧ್ವನಿಯನ್ನು ಗಣಕರೂಪಕ್ಕೆ ಪರಿವರ್ತಿಸಿ ಸಂರಕ್ಷಿಸಬಹುದು. ಕುಟುಂಬದ ಹಿರಿಯರ ಚಿತ್ರಗಳನ್ನು ಗಣಕದಲ್ಲಿರಿಸಬಹುದು.

ವಿದ್ಯುನ್ಮಾನ ಅಂಚೆಯ ಮೂಲಕವೂ ನಾವು ಮಾಹಿತಿಯನ್ನು ಪರಸ್ಪರ ವಿನಿಮಯ ಮಾಡಿಕೊಳ್ಳಬಹುದು.

ಸಿದ್ಧವಾದ ಕಡತಗಳು ಒಂದಕ್ಕಿಂತ ಹೆಚ್ಚಿದ್ದಲ್ಲಿ ಮತ್ತು ವಿವಿಧ ವಿಷಯಗಳಿಗೆ ಸಂಬಂಧಿಸಿದ್ದವಾದರೆ ಕಡತಗಳನ್ನು ವಿಷಯಗಳಿಗೆ ಅನುಗುಣವಾದ ಸಂಪುಟಗಳನ್ನು ರಚಿಸಿ ಅವುಗಳ ಒಳಗೆ ಇರಿಸುವುದು ಒಳ್ಳೆಯದು. ಉದಾಹರಣೆಗೆ ಇತಿಹಾಸ, ಸಾಹಿತ್ಯ ಮತ್ತು ವಿಜ್ಞಾನ ಕುರಿತಾದ ಕಡತಗಳಿದ್ದರೆ ಕ್ರಮವಾಗಿ ಇತಿಹಾಸ, ಸಾಹಿತ್ಯ ಮತ್ತು ವಿಜ್ಞಾನ ಎಂಬ ಸಂಪುಟಗಳನ್ನು ರಚಿಸಿ ಅವುಗಳಲ್ಲಿ ಆ ಕಡತಗಳನ್ನು ಇರಿಸಬಹುದು. ಅಗತ್ಯಕ್ಕನುಗುಣವಾಗಿ ಒಂದೊಂದು ಸಂಪುಟದ ಒಳಗೂ ಬೇರೆ ಬೇರೆ ಉಪ ಸಂಪುಟಗಳನ್ನು ರಚಿಸಿಕೊಳ್ಳಬಹುದು. ಈ ಸಂಪುಟಗಳನ್ನು ನಾವು ಬೇರೆಡೆಯಿಂದ ತಂದುಕೊಂಡ ಕಡತಗಳನ್ನು ಇರಿಸಿಕೊಳ್ಳುವಾಗಲೂ ಬಳಸಬಹುದಾಗಿದೆ.

ಇವೆಲ್ಲ ಮಾಹಿತಿಯನ್ನು ಸಿದ್ಧಪಡಿಸುವ ಮತ್ತು ಗಣಕಗಳಲ್ಲಿ ಉಳಿಸಿಕೊಳ್ಳುವ ಸಂಗತಿಗೆ ಸಂಬಂಧಿಸಿದ್ದಾಗಿದೆ. ಗಣಕಗಳಲ್ಲಿಯೇ ಎಲ್ಲ ಮಾಹಿತಿಯನ್ನು ಉಳಿಸಿಕೊಳ್ಳಲು ಸಾಧ್ಯವಿಲ್ಲವಾದುದರಿಂದ ಬೇರೆ ಬೇರೆ ಸಂಗ್ರಹ ಮಾಧ್ಯಮಗಳಲ್ಲಿಯೂ ಮಾಹಿತಿಯನ್ನು ಉಳಿಸಿಕೊಳ್ಳುವುದು ಅಗತ್ಯ.

ಅಡಕಮುದ್ರಿಕೆ, ಅಂಕಿ ಮುದ್ರಿಕೆ, ಬಾಹ್ಯ ದೃಢಮುದ್ರಿಕೆ, ಕಿರು ದೃಢಮುದ್ರಿಕೆ ಮುಂತಾಗಿ ಸಂಗ್ರಹ ಮಾಧ್ಯಮಗಳು ಅನೇಕ. ಕಿರು ದೃಢಮುದ್ರಿಕೆ ಪೆನ್ ಡ್ರೈವ್ ಅಥವಾ ಥಂಬ್ ಡ್ರೈವ್ ಎಂದು ಜನಪ್ರಿಯವಾಗಿದೆ. ಇವುಗಳಲ್ಲಿ ಇರಿಸಿಕೊಳ್ಳಬಹುದಾದ ಮಾಹಿತಿಯ ಗಾತ್ರದ ವಿವರಗಳು ಹೀಗಿವೆ :

ಅಡಕ ಮುದ್ರಿಕೆ : ೭೦೦ರಿಂದ ೮೦೦ ಮೆಗಾಬೈಟ್‌ಗಳು

ಅಂಕಿಮುದ್ರಿಕೆ : ೪.೨ ಗಿಗಾಬೈಟ್‌ಗಳು

ಕಿರು ಮುದ್ರಿಕೆ : ೧ ಗಿಗಾಬೈಟ್‌ನಿಂದ ೨೫೬ ಗಿಗಾಬೈಟ್‌ಗಳ ವರೆಗಿನ ಶ್ರೇಣಿಯಲ್ಲಿ ಇವು ಲಭ್ಯ.

ದೃಢಮುದ್ರಿಕೆ : ಈಗ ಕನಿಷ್ಠ ೪೦ ಗಿಗಾಬೈಟ್‌ನಿಂದ ಎರಡು ಟೆರಾಬೈಟ್‌ಗಳು (೧೦೨೪ಗಿಗಾ ಬೈಟ್‌ಗಳು)

ಬಾಹ್ಯ ದೃಢಮುದ್ರಿಕೆ : ಗರಿಷ್ಠ ೧೦೨೪ಗಿಗಾಬೈಟ್‌ಗಳು(ಗಮನಿಸಿ: ಈ ಸಾಮರ್ಥ್ಯ ಸದಾ ಹೆಚ್ಚುತ್ತಿರುತ್ತದೆ)

ಸ್ಮೃತಿಕೋಶಗಳೆಂದು ಇವನ್ನು ಕರೆಯಬಹುದು. ಇವುಗಳಲ್ಲಿ ಮಾಹಿತಿಯನ್ನು ಇರಿಸಿಕೊಂಡರೆ ಬೇರೆಡೆಗೆ ಸುಲಭವಾಗಿ ತೆಗೆದುಕೊಂಡು ಹೋಗಬಹುದಾಗಿದೆ. ಉದಾಹರಣೆಗೆ ಅಧ್ಯಯನ ಮಾಡುತ್ತಿರುವ ಹಾಗೂ ಆ ಕೃತಿಯ ಬಗೆಗೆ ಟಿಪ್ಪಣಿ ಮಾಡಿಕೊಂಡಿದ್ದರೆ ಅವುಗಳನ್ನು ಈ ಸಾಧನಗಳಲ್ಲಿ ಇರಿಸಿಕೊಂಡು ಎಲ್ಲಿಯಾದರೂ ಆ ಕೆಲಸವನ್ನು ಮುಂದುವರೆಸಬಹುದಾಗಿದೆ.

ಇಲ್ಲಿ ಮಾನಕದ ಬಗೆಗೆ ಒಂದು ಮಾತು. ಐದು ಪುಟದ ಲೇಖನ ಸುಮಾರು ೫೦ ಕಿಲೋಬೈಟುಗಳಷ್ಟು ಸ್ಥಳವನ್ನು ಆಕ್ರಮಿಸುತ್ತದೆ. ೧೦೨೪ ಕಿಲೋಬೈಟುಗಳು ಎಂದರೆ ಒಂದು ಮೆಗಾ ಬೈಟು. ೧೦೨೪ ಮೆಗಾಬೈಟುಗಳು ಎಂದರೆ ಒಂದು ಗಿಗಾಬೈಟು. ೧೦೨೪ ಗಿಗಾಬೈಟು ಎಂದರೆ ಒಂದು ಟೆರಾ ಬೈಟು.

ಎಂದರೆ ಒಂದು ಮೆಗಾಬೈಟು ಸ್ಮೃತಿಯಲ್ಲಿ ಒಂದು ಸಾವಿರ ಪುಟಗಳಷ್ಟು ಮಾಹಿತಿಯನ್ನು ಇರಿಸಿಕೊಳ್ಳಬಹುದು. ಒಂದು ಗಿಗಾಬೈಟು ಸ್ಥಳದಲ್ಲಿ ಹತ್ತು ಲಕ್ಷ ಪುಟಗಳಷ್ಟು ಮಾಹಿತಿಯನ್ನು ಇರಿಸಬಹುದು. ಒಂದು ಟೆರಾಬೈಟಿನಲ್ಲಿ ಎಷ್ಟು ಪುಟ ಮಾಹಿತಿಯನ್ನು ಇರಿಸಿಕೊಳ್ಳಬಹುದು ಎಂಬುದನ್ನು ಯಾರಾದರೂ ಊಹಿಸಬಹುದು. ಇದೆಲ್ಲ ತುಂಬ ನಿಖರವಾಗಿಲ್ಲ ಎಂದರೂ ಅಸಾಧ್ಯ ಗಾತ್ರದ ಮಾಹಿತಿಯನ್ನು ಗಣಕದಲ್ಲಿ ಇರಿಸಬಹುದು ಎಂಬುದು ನಿಜವಾದ ಸಂಗತಿ.

ಇವೆಲ್ಲ ಗಣಕಗಳನ್ನು ಬಳಸಿ ನಾವು ನಿರ್ಮಿಸಿಕೊಂಡ ಮಾಹಿತಿಯನ್ನು ಆಕರವಾಗಿ ಉಳಿಸಿಕೊಳ್ಳುವುದಾಯಿತು. ಮುಂದೆ ಗಣಕಗಳನ್ನು ಬಳಸಿ ಬೇರೆಯವರು ನಿರ್ಮಿಸಿರುವ ಮಾಹಿತಿಯ ಆಕರಗಳತ್ತ ಗಮನಿಸಬಹುದಾಗಿದೆ. ಅಂತರಜಾಲ ತಾಣಗಳು ಈ ನಿಟ್ಟಿನಲ್ಲಿ

ಗಮನಾರ್ಹವಾದ ಆಕರಗಳಾಗಿವೆ. ಅಂತರಜಾಲವೆಂದರೆ ಜಾಗತಿಕ ನೆಲೆಯಲ್ಲಿ ಇರುವ ಗಣಕಜಾಲಗಳು ಸಂಪರ್ಕದಲ್ಲಿರುವ ಒಂದು ವ್ಯವಸ್ಥೆ. ಇಲ್ಲಿರಿಸಿರುವ ಮಾಹಿತಿ ಜಗತ್ತಿನಾದ್ಯಂತ ಎಲ್ಲರಿಗೂ ಲಭ್ಯವಾಗುತ್ತದೆ. ಒಂದು ಉದಾಹರಣೆಯೆಂದರೆ ಗುಟೆನ್‌ಬರ್ಗ್ ಪ್ರಾಜೆಕ್ಟ್ ಡಾಟ್ ಕಾಂ ಎಂಬ ತಾಣ. ಮುದ್ರಣಯಂತ್ರವನ್ನು ಕಂಡುಹಿಡಿದ ಗುಟೆನ್‌ಬರ್ಗನ ನೆನಪಿನಲ್ಲಿರುವ ಈ ಅಂತರಜಾಲತಾಣದಲ್ಲಿ ಹದಿನೈದು ಸಾವಿರಕ್ಕೂ ಹೆಚ್ಚಿನ ಪುಸ್ತಕಗಳ ಸಂಪೂರ್ಣ ಪಠ್ಯ ಇದೆ. ಯಾರು ಬೇಕಾದರೂ ಈ ಪೈಕಿ ಎಷ್ಟು ಪುಸ್ತಕಗಳ ಮಾಹಿತಿಯನ್ನಾದರೂ ತಮ್ಮ ಗಣಕಗಳಿಗೆ ಇಳಿಸಿಕೊಂಡು ತಮಗೆ ಬೇಕಾದ ಹೆಸರಿನಲ್ಲಿ ಬೇಕಾದ ಸ್ಥಳದಲ್ಲಿ ಉಳಿಸಿಕೊಳ್ಳಬಹುದಾಗಿದೆ. ಇಲ್ಲಿ ಷೇಕ್ಸ್‌ಪಿಯರ್ ಕವಿಯ ಎಲ್ಲ ನಾಟಕಗಳೂ ಎಲ್ಲ ಪದ್ಯಗಳೂ ಲಭ್ಯವಿವೆ. ಅವನ ಕೃತಿಗಳ ಮೇಲೆ ಬಂದಂತಹ ಅನೇಕ ವಿಮರ್ಶಾಕೃತಿಗಳಿವೆ. ಹೀಗೆಯೇ ಇಂಗ್ಲಿಷಿನ ಮುಖ್ಯ ಲೇಖಕರ ಎಲ್ಲ ಕೃತಿಗಳೂ ಲಭ್ಯವಿದೆ. ಇಲ್ಲಿಗೆ ನೀವೂ ಸಹ ಯಾವುದೇ ಭಾಷೆಯ ಕೃತಿಯನ್ನು ಅಂಕೀಕರಿಸಿ ಕೊಡಬಹುದಾಗಿದೆ. ಹಾಗೆ ಕೊಟ್ಟರೆ ಅದು ಅಲ್ಲಿಂದಾಚೆಗೆ ಜಗತ್ತಿನ ಎಲ್ಲರಿಗೂ ಲಭ್ಯವಾಗುತ್ತದೆ. ಇದು ಪ್ರಕಟಿತ ಕೃತಿಗಳ ಸಂಗತಿಯಾಯಿತು. ಇನ್ನೂ ಅನೇಕ ಜಾಲತಾಣಗಳು ಬೇರೆಬೇರೆ ಮಾಧ್ಯಮದಲ್ಲಿ, ಬೇರೆಬೇರೆ ವಿಷಯಗಳನ್ನು ಕುರಿತು ಮಾಹಿತಿಯನ್ನು ಇರಿಸಿಕೊಂಡಿರುತ್ತವೆ. ಕನ್ನಡದ ಸಂದರ್ಭದ ಉದಾಹರಣೆಯನ್ನೇ ತೆಗೆದುಕೊಳ್ಳುವುದಾದರೆ ಕರ್ನಾಟಕ ರಾಜ್ಯ ಸಾಹಿತ್ಯ ಅಕಾಡೆಮಿಯ ತನ್ನ ಅಂತರಜಾಲತಾಣದಲ್ಲಿ ಅನೇಕ ಸಾಹಿತಿಗಳ ವಿಳಾಸಗಳನ್ನು ಜಿಲ್ಲಾವಾರು ವಿಂಗಡಣೆಯಲ್ಲಿ ಇರಿಸಿದೆ. ಮುಖ್ಯವಾಗಿ ನಮ್ಮ ಪ್ರಸಿದ್ಧ ಕವಿಗಳು ತಾವೇ ತಮ್ಮ ಆಯ್ಕೆಯ ಐದು ಕವನಗಳನ್ನು ಓದಿರುವ ವೀಡಿಯೋಗಳನ್ನು ಇರಿಸಿದೆ. ವೀಡಿಯೋಗಳನ್ನು ನೋಡುವಾಗ ಆಯಾ ಕವನಗಳ ಪಠ್ಯವೂ ಅಲ್ಲಿ ಕಾಣಿಸಿಕೊಂಡು, ನೋಡುತ್ತಾ ಕೇಳುತ್ತಾ ಓದಬಹುದಾದ ಒಂದು ವಿಶೇಷ ವ್ಯವಸ್ಥೆ ಲಭ್ಯವಾಗುತ್ತದೆ. ಕುವೆಂಪು ಅವರ ಕೃತಿಗಳ ಹಿನ್ನೆಲೆಯಲ್ಲಿ ರಚಿಸಿದ ಚಿತ್ರಗಳ ಸಂಪುಟವೂ ಇಲ್ಲಿದೆ. ಅಲ್ಲಿ ಆ ಚಿತ್ರಗಳ ವಿವರಣೆ, ಕಲಾವಿದರ ಬಗೆಗೆ ಮಾಹಿತಿ ಇವುಗಳೂ ಲಭ್ಯವಿವೆ. ಇಂತಹ ಅನೇಕ ಅಂತರಜಾಲತಾಣಗಳು ಮಾಹಿತಿಯನ್ನು ತಮ್ಮಲ್ಲಿರಿಸಿಕೊಂಡು ಅದನ್ನು ಅರಸುತ್ತಿರುವವರಿಗೆ ಉಣಬಡಿಸುತ್ತಿವೆ. ಅವುಗಳಲ್ಲಿ ನುಡಿಸಿರಿ ಎನ್ನುವ ಯೋಗಾನಂದ ಅವರು ರೂಪಿಸಿರುವ ತಾಣ ಗಮನಾರ್ಹವಾದುದು. ಇಲ್ಲಿ ಗೋಪಾಲಕೃಷ್ಣ ಅಡಿಗರು ಸಂಪಾದಿಸುತ್ತಿದ್ದ ಸಾಕ್ಷಿ ಪತ್ರಿಕೆಯ ಎಲ್ಲ ಸಂಪುಟಗಳೂ ಲಭ್ಯವಿವೆ. ಹಾಗೆಯೇ ತುಂಬ ಹಿಂದೆ ಬೆಳ್ಳಾವೆ ವೆಂಕಟನಾರಣಪ್ಪನವರು ಸಂಪಾದಿಸಿ ಪ್ರಕಟಿಸುತ್ತಿದ್ದ ವಿಜ್ಞಾನ ಪತ್ರಿಕೆಯ ಎಲ್ಲ ಸಂಚಿಕೆಗಳೂ ಲಭ್ಯವಿವೆ. ಶೇಖರಪೂರ್ಣ ಅವರ ಕನ್ನಡ ಸಾಹಿತ್ಯ ಡಾಟ್ ಕಾಂ ಎಂಬ ಪ್ರಯತ್ನವೂ ಮಹತ್ವದ್ದೇ. ಆದರೆ ಅದು ನಿಂತುಹೋಗಿದೆ. ಬಿ ಎಂ ಶ್ರೀ ಪ್ರತಿಷ್ಠಾನದ

ಅಂತರಜಾಲತಾಣದಲ್ಲಿ ಆಚಾರ್ಯ ಬಿ ಎಂ ಶ್ರೀ ಯವರ ಸಮಗ್ರ ಕೃತಿಗಳು(ಕನ್ನಡ ಮತ್ತು ಇಂಗ್ಲಿಷ್) ಲಭ್ಯವಿವೆ. ಇದೂ ವಿಶಿಷ್ಟವಾದ ಪ್ರಯತ್ನ. ಇಲ್ಲಿಯೂ ಎಷ್ಟು ಜನ ಅದನ್ನು ಪಡೆದುಕೊಂಡರೂ ಅಲ್ಲಿರುವ ಮಾಹಿತಿಗೆ ಚ್ಯುತಿಯಿಲ್ಲ ಎನ್ನುವುದನ್ನು ಗಮನಿಸಬೇಕು. ಇಷ್ಟಾದರೂ ಅಂತರಜಾಲದಲ್ಲಿರುವ ಕನ್ನಡದ ಮಾಹಿತಿಯ ಗಾತ್ರ ಅಲ್ಲಿರುವ ಬೇರೆ ಭಾಷೆಗಳ ಮಾಹಿತಿಗೆ ಹೋಲಿಸಿದರೆ ನಗಣ್ಯ ಎಂಬಷ್ಟು ಅಲ್ಪ. ಕನ್ನಡದ ಹಲವಾರು ಕೃತಿಗಳ ಪಠ್ಯವನ್ನು ಯೂರೋಪಿನ ವಿಶ್ವವಿದ್ಯಾಲಯಗಳು ತಮ್ಮ ಅಂತರಜಾಲತಾಣಗಳಲ್ಲಿ ಇರಿಸಿಕೊಂಡಿವೆ. ಕಿಟ್ಟೆಲರ 'ಕನ್ನಡ ಪ್ರೊಸೊಡಿ', ರೈಸ್ ಅವರು ಸಂಪಾದಿಸಿರುವ ಕೆಲವು ಶಾಸನ ಸಂಪುಟಗಳು ಇತ್ಯಾದಿಗಳನ್ನು ಈ ದಿಸೆಯಲ್ಲಿ ಗಮನಿಸಬಹುದಾಗಿದೆ. ಕನ್ನಡದ ವಿಶ್ವವಿದ್ಯಾನಿಲಯಗಳು ತಮ್ಮ ಪ್ರಕಟಣೆಗಳನ್ನಾದರೂ ಅಂತರಜಾಲದಲ್ಲಿ ಇರಿಸುವ ಕೆಲಸವನ್ನು ಕೂಡಲೇ ಕೈಗೆತ್ತಿಕೊಳ್ಳಬೇಕಾಗಿದೆ.

ಹೀಗೆ ಲಕ್ಷಾಂತರ ಅಂತರಜಾಲತಾಣಗಳಲ್ಲಿ ಮಾಹಿತಿ ಲಭ್ಯವಿದೆ ಎಂದ ಮೇಲೆ ಯಾವ ಅಂತರಜಾಲತಾಣದಲ್ಲಿ ನಮಗೆ ಬೇಕಾದ ಮಾಹಿತಿ ದೊರೆಯುತ್ತದೆ ಎನ್ನುವ ಪ್ರಶ್ನೆ ಉದ್ಭವಿಸುತ್ತದೆ. ಇದಕ್ಕೆ ಶೋಧನ ವ್ಯವಸ್ಥೆಗಳಿರುವ ಅಂತರಜಾಲತಾಣಗಳಿವೆ. ಗೂಗಲ್ ಅಂತಹ ಜನಪ್ರಿಯ ತಾಣಗಳಲ್ಲಿ ಒಂದು. ಇದಲ್ಲದೆ ಬಿಂಗ್, ಯಾಹೂ, ಲೈಕಾಸ್, ಆಲ್ಟಾವಿಸ್ತ ಮುಂತಾದ ಅನೇಕ ಶೋಧನ ವ್ಯವಸ್ಥೆಗಳು ಲಭ್ಯವಿವೆ. ಇವುಗಳ ಪೈಕಿ ಯಾವುದಾದರೂ ತಾಣಕ್ಕೆ ಹೋಗಿ ನಮಗೆ ಬೇಕಾದ ವಿಷಯದ ಕುರಿತ ಒಂದೆರಡು ಪದಗಳನ್ನು ಬೆರಳಚ್ಚು ಮಾಡಿದರೆ ಅಂತಹ ಮಾಹಿತಿ ಇರಿಸಿಕೊಂಡಿರುವ ಅಂತರಜಾಲತಾಣಗಳ ಪಟ್ಟಿ ಗಣಕದ ತೆರೆಯ ಮೇಲೆ ಮೂಡಿಬರುತ್ತದೆ. ಆ ಪಟ್ಟಿಯಲ್ಲಿ ಯಾವುದರ ಮೇಲೆ ಕ್ಲಿಕ್ ಮಾಡಿದರೂ ನಿಮಗೆ ಬೇಕಾದ ವಿಷಯವನ್ನಿರಿಸಿಕೊಂಡಿರುವ ಅಂತರಜಾಲ ತಾಣವೊಂದು ತೆರೆದುಕೊಳ್ಳುತ್ತದೆ. ಅಲ್ಲಿಂದ ಬೇಕಾದ ಮಾಹಿತಿಯನ್ನು ಗಣಕಕ್ಕೆ ಇಳಿಸಿಕೊಳ್ಳಬಹುದು.

ಅಂತರ ಜಾಲತಾಣಗಳಲ್ಲಿ ಕೇವಲ ಇಂತಹ ಮಾಹಿತಿ ಮಾತ್ರವಲ್ಲದೆ ಪತ್ರಿಕೆಗಳು, ರೇಡಿಯೋ ನಿಲಯಗಳು, ದೂರದರ್ಶನವಾಹಿನಿಗಳೂ ಚಲನಚಿತ್ರಗಳೂ ಲಭ್ಯವಿರುತ್ತವೆ. ಉದಾಹರಣೆಗೆ ಪ್ರಜಾವಾಣಿಯ ಅಂತರಜಾಲ ತಾಣಕ್ಕೆ ಭೇಟಿ ಇತ್ತರೆ ಅಲ್ಲಿ ಅಂದಿನ ಪತ್ರಿಕೆಯ ಜೊತೆಗೆ ಹಲವು ಹಿಂದಿನ ಸಂಚಿಕೆಗಳೂ ಲಭ್ಯವಿರುವುದನ್ನು ಗಮನಿಸಬಹುದು. ಆಕಾಶವಾಣಿ ನಿಲಯಗಳಿಂದ ಪ್ರಸಾರವಾಗುವ ಕಾರ್ಯಕ್ರಮಗಳನ್ನು ಕೇಳಬಹುದು ಮತ್ತು ಅಲ್ಲಿ ಕಾಪಿಟ್ಟಿರುವ ಯಾವುದೇ ಕಾರ್ಯಕ್ರಮವನ್ನು ಅಗತ್ಯವಿದ್ದರೆ ಗಣಕಕ್ಕೆ ಇಳಿಸಿಕೊಳ್ಳಬಹುದು. ಸಾಮಾನ್ಯವಾಗಿ ಈಗ ಎಲ್ಲ ದೂರದರ್ಶನ ವಾಹಿನಿಗಳೂ

ತಮ್ಮ ತಮ್ಮ ಅಂತರಜಾಲತಾಣಗಳನ್ನು ಹೊಂದಿವೆ. ಅಲ್ಲಿಗೆ ಹೋಗಿ ಸುದ್ದಿಯ ಉಲ್ಲೇಖದ ಮೇಲೆ ಕ್ಲಿಕ್ ಮಾಡಿದರೆ ಸಂಬಂಧಿತ ಪಠ್ಯ ಅಥವಾ ವೀಡಿಯೋ ತೆರೆದುಕೊಳ್ಳುತ್ತದೆ. ಮನರಂಜನೆಗಾಗಿ ಇರುವ ಮಾಹಿತಿಯೂ ಅಂತರಜಾಲದಲ್ಲಿ ಹೇರಳವಾಗಿದೆ. ಇಂದು ಸುಲಭವಾಗಿ ನಮಗೆ ಬೇಕಾದ ಚಲನಚಿತ್ರವನ್ನು ಅಂತರಜಾಲದ ಮೂಲಕವೇ ನೋಡಬಹುದಾಗಿದೆ. ಸಂಶೋಧನೆಗೆ ಸಂಬಂಧಿಸಿದ ಕೃತಿಗಳನ್ನು, ಪ್ರಬಂಧಗಳನ್ನು ಪಡೆದು ಕೊಳ್ಳಬಹುದಾಗಿದೆ.

ಅಂತರಜಾಲದಲ್ಲಿ ಇನ್ನೂ ಹಲವು ಬಗೆಯ ಮಾಹಿತಿಗಳು ಸದಾ ದೊರಕುವ ಹಾಗೆ ಇರುತ್ತವೆ. ಅಲ್ಲಿ ನಿಘಂಟುಗಳು ವಿಶ್ವಕೋಶಗಳು ದೊರೆಯುತ್ತವೆ. ಖ್ಯಾತ ಬ್ರಿಟಾನಿಕಾ ವಿಶ್ವಕೋಶ, ಅಮೆರಿಕದ ಹಲವು ವಿಶ್ವಕೋಶಗಳು, ಮೈಕ್ರೋಸಾಫ್ಟ್‌ನ ಎನ್‌ಕಾರ್ಟಾ ಮುಂತಾದ ಅನೇಕ ವಿಶ್ವಕೋಶಗಳು ಲಭ್ಯ. ಈ ಪೈಕಿ ಕೆಲವು ಹಣ ನೀಡಿ ಪಡೆಯುವ ಹಾಗೆ ವ್ಯವಸ್ಥೆಗೊಂಡಿರುತ್ತವೆ. ಆದರೆ ಉಚಿತವಾಗಿಯೂ ಈ ಸೇವೆಗಳನ್ನು ಒದಗಿಸುವ ಅಂತರಜಾಲ ತಾಣಗಳೂ ಇವೆ. ಉದಾಹರಣೆಗೆ ಇಂಗ್ಲಿಷಿನ ವಿಕಿಪೀಡಿಯಾ, ಕನ್ನಡದ ವಿಕಿಪೀಡಿಯಾಗಳನ್ನು ಹೆಸರಿಸಬಹುದು. ಕನ್ನಡದ ವಿಕಿಪೀಡಿಯಾವನ್ನು ಶ್ರೀ ಹರಿಪ್ರಸಾದ್ ಮತ್ತು ಗೆಳೆಯರು ನಿರ್ವಹಿಸುತ್ತಿದ್ದಾರೆ. ಕರ್ನಾಟಕ ಸರ್ಕಾರದ ಜ್ಞಾನ ಆಯೋಗ ನಿರ್ಮಿಸಿರುವ **'ಕಣಜ'** ಎಂಬ ಅಂತರಜಾಲತಾಣದಲ್ಲಿಯೂ ವಿಶ್ವಕೋಶದ ಮಾದರಿಯಲ್ಲಿ ಮಾಹಿತಿಯನ್ನು ಇರಿಸುವ ಪ್ರಯತ್ನಗಳು ಆಗುತ್ತಿವೆ. ಅಸಕ್ತರು ಅವುಗಳಲ್ಲಿರುವ ಮಾಹಿತಿಯನ್ನು ಮುಕ್ತವಾಗಿ ಬಳಸಿಕೊಳ್ಳಬಹುದಾಗಿದೆ. ಆದರೆ ಅಂತರಜಾಲತಾಣಗಳಲ್ಲಿ ಎಲ್ಲವೂ ಅಧಿಕೃತ ಎನ್ನುವ ಮಾಹಿತಿಯನ್ನು ಇರಿಸಿಕೊಂಡಿವೆ ಎಂದು ಹೇಳ ಬರುವುದಿಲ್ಲ. ಆದುದರಿಂದ ಅಂತರಜಾಲದಿಂದ ಮಾಹಿತಿಯನ್ನು ಸಂಗ್ರಹಿಸಿ ಬಳಸಬೇಕಾದರೆ ಸಾಕಷ್ಟು ಎಚ್ಚರ ವಹಿಸಬೇಕಾಗಿದೆ.

ಅಂತರಜಾಲದಲ್ಲಿ ಈ ಬಗೆಯ ಮಾಹಿತಿಗಳಲ್ಲದೆ, ತಂತ್ರಾಂಶ ರೂಪದ ಮಾಹಿತಿಯೂ ದೊರೆಯುತ್ತದೆ. ಕನ್ನಡ ಗಣಕ ಪರಿಷತ್ತು ತನ್ನ ನುಡಿ ತಂತ್ರಾಂಶವನ್ನು ಎಲ್ಲರಿಗೆ ಉಚಿತವಾಗಿ ಲಭ್ಯವಾಗುವಂತೆ ಇರಿಸಿದೆ. ಎಲ್ಲ ಮುಕ್ತ ಆಕರ ತಂತ್ರಾಂಶಗಳು ಅಂತರಜಾಲದಲ್ಲಿ ಉಚಿತವಾಗಿ ದೊರೆಯುತ್ತವೆ.

ಅಂತರಜಾಲವಲ್ಲದೆ ಬೇರೆ ರೂಪದಲ್ಲಿಯೂ ಮಾಹಿತಿಗಳನ್ನು ಉಳಿಸಿ ಎಲ್ಲರಿಗೆ ಒದಗಿಸಬಹುದಾಗಿದೆ. ಉದಾಹರಣೆಗೆ ಕನ್ನಡ ಗಣಕ ಪರಿಷತ್ತು ಮೈಸೂರು ವಿಶ್ವವಿದ್ಯಾನಿಲಯ ಸಿದ್ಧಪಡಿಸಿರುವ ಹದಿನಾಲ್ಕು ಸಂಪುಟಗಳ ಕನ್ನಡ ವಿಶ್ವಕೋಶವನ್ನು ಅಂಕೀಕರಿಸಿ ಅಡಕಮುದ್ರಿಕೆಯ ರೂಪದಲ್ಲಿ ಸಿದ್ಧಪಡಿಸಿದೆ. ಅದನ್ನು ಕೊಂಡು ಗಣಕದಲ್ಲಿ ವಿಶ್ವಕೋಶದ ತಂತ್ರಾಂಶವನ್ನು ಅನುಸ್ಥಾಪಿಸಿಕೊಂಡರೆ ಇಡೀ ವಿಶ್ವಕೋಶ ಗಣಕದಲ್ಲಿ

ಲಭ್ಯವಾಗುತ್ತದೆ. ಇದೊಂದು ಬಹುಮಾಧ್ಯಮ ವಿಶ್ವಕೋಶವಾದುದರಿಂದ ಪಠ್ಯ, ಚಿತ್ರಗಳ ಜೊತೆಗೆ ಧ್ವನಿ ಮತ್ತು ವೀಡಿಯೋಗಳನ್ನೂ ಅಲ್ಲಿ ಪಡೆದುಕೊಳ್ಳಬಹುದಾಗಿದೆ. ಇದರಲ್ಲಿ ಸುಮಾರು ೫೦,೦೦೦ ಪುಟಗಳ ಪಠ್ಯ, ಹತ್ತು ಸಾವಿರಕ್ಕೂ ಹೆಚ್ಚಿನ ಚಿತ್ರಗಳು, ಐವತ್ತಕ್ಕೂ ಹೆಚ್ಚಿನ ವಿಶಿಷ್ಟ ಧ್ವನಿಗಳು ಮತ್ತು ಸುಮಾರು ನಾನ್ನೂರು ವೀಡಿಯೋ ತುಣುಕುಗಳು ಇವೆ. ಇವಷ್ಟು ಒಂದು ಡಿವಿಡಿಯಲ್ಲಿ ಅಡಕವಾಗಿವೆ ಎಂದರೆ ಗಣಕಗಳು ಮಾಹಿತಿಯ ಆಕರವಾಗಿ ಕಾರ್ಯ ನಿರ್ವಹಿಸುತ್ತದೆ ಎಂಬುದು ಅರಿವಿಗೆ ಬರುತ್ತದೆ. ಇದೇ ರೀತಿಯಲ್ಲಿ ಮೈಸೂರು ವಿಶ್ವವಿದ್ಯಾನಿಲಯದ ನಾಲ್ಕು ಸಂಪುಟಗಳ ಇಂಗ್ಲಿಷ್- ಕನ್ನಡ ನಿಘಂಟು ಅಂಕೀಕರಣವಾಗಿ ಅಟಕಮುದ್ರಿಕೆಯ ರೂಪದಲ್ಲಿ ದೊರೆಯುತ್ತಿದೆ. ಕನ್ನಡ ಸಾಹಿತ್ಯ ಪರಿಷತ್ತು ಪಂಪನ ಎರಡು ಕಾವ್ಯಗಳನ್ನೂ ಸಂಕ್ಷಿಪ್ತ ಕನ್ನಡ-ಕನ್ನಡ ನಿಘಂಟನ್ನೂ ಅಂಕೀಕರಿಸಿದೆ. ಇವು ಅಧ್ಯಾಪಕರಿಗೂ ಸಂಶೋಧಕರಿಗೂ, ವಿದ್ಯಾರ್ಥಿಗಳಿಗೂ ಸಾಮಾನ್ಯ ಕುತೂಹಲ ಉಳ್ಳವರಿಗೂ ಉಪಯುಕ್ತವಾಗಿವೆ. ಇತ್ತೀಚೆಗೆ ತಾನೇ ಕನ್ನಡ ಗಣಕ ಪರಿಷತ್ತು ಕುಮಾರವ್ಯಾಸ ಭಾರತದ ಅಡಕಮುದ್ರಿಕೆಯನ್ನು ಬಿಡುಗಡೆ ಮಾಡಿದೆ. ಇವುಗಳಲ್ಲೆಲ್ಲ ಶೋಧನಾ ಸೌಲಭ್ಯ, ಸುಮಾರು ೯೫೫ ಪದ್ಯಗಳ ಗಮಕವಾಚನವೂ ಸೇರಿದಂತೆ ಅನೇಕ ಪ್ರಕಾರದ ಮಾಹಿತಿಗಳು ಒಂದೆಡೆಯೇ ದೊರೆಯುತ್ತದೆ. ಕರ್ನಾಟಕ ಸರ್ಕಾರ ಸಮಗ್ರದಾಸ ಸಾಹಿತ್ಯ ಯೋಜನೆಯ ಅಡಿಯಲ್ಲಿ ಐವತ್ತೆರಡು ಸಂಪುಟಗಳನ್ನು ಪುಸ್ತಕರೂಪದಲ್ಲಿಯೂ ಮತ್ತು ಆ ಎಲ್ಲ ಮಾಹಿತಿಯನ್ನು ಒಂದೇ ಅಡಕಮುದ್ರಿಕೆಯ ರೂಪದಲ್ಲಿಯೂ ಹೊರ ತಂದಿದೆ. ಅಡಕ ಮುದ್ರಿಕೆಯಲ್ಲಿ ದಾಸರ ಅನೇಕ ರಚನೆಗಳನ್ನು ಹಾಡಿನ ರೂಪದಲ್ಲಿ ಕೇಳಲೂ ಅವಕಾಶವಿದೆ. ಇಷ್ಟರಲ್ಲಿಯೇ ಸಮಗ್ರ ವಚನಸಾಹಿತ್ಯದ ಅಡಕಮುದ್ರಿಕೆಯೂ ಹೊರಬರಬಹುದು ಎನ್ನುವ ನಿರೀಕ್ಷೆ ಇದೆ. ಗೋಖಲೆ ಸಾರ್ವಜನಿಕ ಸಂಸ್ಥೆಯ ಕಾರ್ಯಕ್ರಮಗಳಲ್ಲಿ ಮಂಡಿತವಾದ ಉಪನ್ಯಾಸಗಳನ್ನು ಧ್ವನಿ ರೂಪದ ಅಡಕಮುದ್ರಿಕೆಗಳನ್ನಾಗಿಸಿ ಜನರಿಗೆ ನೀಡುತ್ತಿದೆ. ಕನ್ನಡದ ಖ್ಯಾತ ಕೊರವಂಜಿ ಮಾಸಪತ್ರಿಕೆಯ ಎಲ್ಲ ಸಂಚಿಕೆಗಳನ್ನು ಶ್ರೀ ಶಿವಕುಮಾರ್ ಅವರು ಅಡಕಮುದ್ರಿಕೆಯ ರೂಪದಲ್ಲಿ ದೊರಕಿಸಿದ್ದಾರೆ. ಇದರಿಂದ ಕನ್ನಡಿಗರಿಗೆ ತನ್ನ ಇರುವಿಕೆಯೇ ಗೊತ್ತಿಲ್ಲವೇನೋ ಎಂದುಕೊಂಡು ಬೇಸರದಿಂದ ಕಾಡಿಗೆ ಹೊರಟು ಹೋಗಿದ್ದ ಕೊರವಂಜಿ ಮತ್ತೆ ನಮ್ಮೆಲ್ಲರ ಮನೆಗೇ ಬರುವ ಹಾಗಾಗಿದೆ.

ಮಾಹಿತಿಯನ್ನು ಸಿದ್ಧಪಡಿಸಿದ ನಂತರ ಅದನ್ನು ಅಂತರಜಾಲದಲ್ಲಿಯೂ ಇರಿಸಬಹುದಾಗಿದೆ. ಇದರಿಂದ ಅದನ್ನು ಜಗತ್ತಿನ ಯಾವುದೇ ಪ್ರದೇಶದಿಂದ ಪಡೆದುಕೊಳ್ಳಲು ಸಾಧ್ಯ. ಆದರೆ ಅಂತರಜಾಲತಾಣಗಳನ್ನು ಸಿದ್ಧಪಡಿಸುವುದು ತಂತ್ರಾಂಶ ಕ್ಷೇತ್ರದಲ್ಲಿ ಪರಿಣತಿ ಇದ್ದವರು ಮಾತ್ರ ಮಾಡಬಹುದಾದ ಕೆಲಸ. ಆದರೆ ಇತ್ತೀಚೆಗೆ ಯಾರೂ

ತಮ್ಮ ಮಾಹಿತಿಯನ್ನು ಅಂತರಜಾಲದಲ್ಲಿ ಉಚಿತವಾಗಿ ಇರಿಸಲು ಅವಕಾಶ ಮಾಡಿಕೊಡುವಂತಹ ವ್ಯವಸ್ಥೆಯನ್ನು ನಿರ್ಮಿಸಲಾಗಿದೆ. ಇವೇ ಬ್ಲಾಗುಗಳು. ಬ್ಲಾಗು ಎಂದರೆ ಇಂಗ್ಲಿಷಿನ weblog ಎನ್ನುವುದರ ರೂಢಿಯ ರೂಪ. ಇದು ಮೊದಲು ಕೆಲವರು ತಮ್ಮ ದಿನಚರಿಯನ್ನು ಇತರರ ಗಮನಕ್ಕೆ ತರಲು ರೂಪಿಸಿದ ವ್ಯವಸ್ಥೆ. ಈಗ ಇದೊಂದು ಅಭಿವ್ಯಕ್ತಿಯ ಮತ್ತು ಮಾಹಿತಿ ವಿನಿಮಯದ ವೇದಿಕೆಯಾಗಿದೆ. ವರ್ಡ್‌ಪ್ರೆಸ್ ಅಥವಾ ಬ್ಲಾಗ್‌ಸ್ಪಾಟ್ ಮುಂತಾದ ಸಂಸ್ಥೆಗಳಿಗೆ ವೈಯಕ್ತಿಕ ವಿವರಗಳನ್ನು ಸಲ್ಲಿಸಿ ನೋಂದಾಯಿಸಿಕೊಂಡರೆ ಯಾರು ಬೇಕಾದರೂ ತಮ್ಮದೇ ಆದ ಬ್ಲಾಗುಗಳನ್ನು ರಚಿಸಿಕೊಳ್ಳುವ ಅವಕಾಶವಿದೆ. ಈಗ ಕನ್ನಡದಲ್ಲಿ ಅನೇಕರು ತಮ್ಮ ಬ್ಲಾಗುಗಳನ್ನು ರಚಿಸಿಕೊಂಡಿದ್ದಾರೆ. ಹೊಸದಾಗಿ ಬರೆಯುವವರು, ಇತರ ಕ್ಷೇತ್ರಗಳಲ್ಲಿ ಆಸಕ್ತರಾದವರು ತಮ್ಮ ತಮ್ಮ ಲೇಖನಗಳನ್ನು, ಕವನಗಳನ್ನು, ತಾವೇ ತೆಗೆದ ವಿವಿಧ ಛಾಯಾಚಿತ್ರಗಳನ್ನು ಅಲ್ಲಿ ಪ್ರಕಟಿಸಿದ್ದಾರೆ. ಇದು ಒಂದು ಹೊಸಬಗೆಯ ಅಭಿವ್ಯಕ್ತಿ ಮಾಧ್ಯಮವಾಗಿಯೂ ರೂಪುಗೊಳ್ಳುತ್ತಲಿದೆ ಎಂಬುದು ಕುತೂಹಲದ ಸಂಗತಿ. ಎಷ್ಟೊಂದು ಸಂಖ್ಯೆಯಲ್ಲಿ ಬ್ಲಾಗುಗಳು ರಚಿತವಾಗಿವೆ ಎಂದರೆ ಅವುಗಳಲ್ಲಿರುವ ಮಾಹಿತಿಯನ್ನು ತಿಳಿದು ಅವುಗಳನ್ನು ಪ್ರವೇಶಿಸುವುದು ಸಾಧ್ಯವೇ ಇಲ್ಲ ಎನ್ನುವಂತಾಗಿದೆ. ಇವುಗಳ ಸೂಚಿಯೊಂದನ್ನು ಅಂತರಜಾಲದಲ್ಲಿ ಪಡೆದುಕೊಳ್ಳಬಹುದಾದರೂ ಅವುಗಳಲ್ಲಿರುವ ಮಾಹಿತಿಯ ಸ್ವರೂಪದ ಕುರಿತು ಆ ಸೂಚಿಯಲ್ಲಿ ಯಾವುದೇ ಸುಳಿವು ಇರುವುದಿಲ್ಲದ್ದರಿಂದ ನಿರ್ದಿಷ್ಟವಾಗಿ ಒಂದು ವಿಷಯದ ಕುರಿತಾಗಿ ಇರುವ ಬ್ಲಾಗ್ ತಾಣಕ್ಕೆ ಪ್ರವೇಶಿಸುವುದು ಕಷ್ಟವಾಗಿದೆ. ಇದರ ಮುಂದಿನ ಸ್ವರೂಪ, ಬೆಳವಣಿಗೆಗಳತ್ತ ಕುತೂಹಲದಿಂದ ದಿಟ್ಟಿಸಬೇಕಾಗಿದೆ.

ಸ್ವಲ್ಪಮಟ್ಟಿಗೆ ವೈಯಕ್ತಿಕ ಮಾಹಿತಿಗಳನ್ನು, ಒಬ್ಬರ ಇಷ್ಟಾನಿಷ್ಟಗಳನ್ನೂ ಕೆಲವು ಅಂತರಜಾಲತಾಣಗಳಲ್ಲಿ ಯಾರು ಬೇಕಾದರೂ ಇರಿಸಬಹುದಾಗಿದೆ. ಅದೇ ಫೇಸ್ ಬುಕ್. ಇಲ್ಲಿ ಪಠ್ಯ, ಚಿತ್ರ, ವೀಡಿಯೋ ಎಲ್ಲವನ್ನೂ ಸದ್ಯಕ್ಕಂತೂ ಉಚಿತವಾಗಿ ಇರಿಸಬಹುದಾಗಿದೆ. ಒಂದು ರೀತಿಯಲ್ಲಿ ವ್ಯಕ್ತಿ ಮಾಹಿತಿಕೋಶವಾಗಿ ಅದು ಕೆಲಸ ಮಾಡುತ್ತಿದೆ ಎಂದರೆ ಬಹುಶಃ ತಪ್ಪಾಗಲಾರದು. ಆದರೆ ಇದು ಫೇಸ್ ಬುಕ್‌ನ ಸ್ವರೂಪವನ್ನು ಸಂಪೂರ್ಣವಾಗಿ ವಿವರಿಸಿದಂತಲ್ಲ ಎನ್ನುವುದು ಸ್ಪಷ್ಟ.

ಹೀಗೆ ಗಣಕ ಮತ್ತು ಅದಕ್ಕೆ ಸಂಬಂಧಿಸಿದ ಕ್ಷೇತ್ರ ಒಂದು ಬಹು ವ್ಯಾಪಕವಾದ ಮಾಹಿತಿಯ ಆಕರವಾಗಿ ರೂಪುಗೊಳ್ಳುತ್ತಿರುವುದನ್ನು ನಾವು ಗಮನಿಸಬಹುದು. ಆದರೆ ಈ ದಿಕ್ಕಿನಲ್ಲಿ ಕನ್ನಡದ ಸಂದರ್ಭದಲ್ಲಿ ಆಗಬೇಕಾಗಿರುವ ಕೆಲಸ ಅಪರಿಮಿತವಾಗಿದೆ. ಆದರೆ ಕನ್ನಡಿಗರು ಮನಸ್ಸು ಮಾಡಿದರೆ ಕರ್ನಾಟಕ, ಕನ್ನಡದ ಕುರಿತಾದ ಅಧಿಕೃತ ಎನಿಸುವ ವಿಪುಲ ಮಾಹಿತಿಯನ್ನು ಈ ಮಾಧ್ಯಮಗಳಲ್ಲಿ ಇರಿಸಿ ಅದನ್ನು ಎಲ್ಲರಿಗೂ ಲಭ್ಯವಾಗಿಸುವುದು ಕಷ್ಟದ ಕಾರ್ಯವೇನೂ ಆಗಬೇಕಾಗಿಲ್ಲ. ಇದಕ್ಕೆ ಎಂದಿನಂತೆ ಕನ್ನಡಿಗರು ಮನಸ್ಸು ಮಾಡಬೇಕಾಗಿದೆ.

ಅನುಬಂಧ

ಕೆಲವು ಉಪಯುಕ್ತ ಅಂತರಜಾಲತಾಣಗಳು

www.guttenbergproject.com

www.google.com

www.kagapa.in

www.nudisiri.org

www.sanskritdocuments.org

www.scribd.com

www.karnatakasahithyaacademy.org

www.janapadaloka.org

www.baraha.com

www.archives.org

www.kannadakasturi.com

www.bmsri.org

www.dli.ernet.in

www.sampada.org

www.wikipedea.org

ಕೆಲವು ಉಪಯುಕ್ತ ಅಡಕ ಮುದ್ರಿಕೆಗಳು

೧. ಕನ್ನಡ ವಿಶ್ವಕೋಶ– ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು

೨. ಪಂಪನ ಮಹಾಕಾವ್ಯಗಳು – ಕನ್ನಡ ಸಾಹಿತ್ಯ ಪರಿಷತ್ತು , ಬೆಂಗಳೂರು

೩. ಕನ್ನಡ – ಕನ್ನಡ ಸಂಕ್ಷಿಪ್ತ ನಿಘಂಟು – ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು


೪. ಕುಮಾರವ್ಯಾಸ ಭಾರತ ಅಡಕ ಮುದ್ರಿಕೆ – ಕನ್ನಡ ಗಣಕ ಪರಿಷತ್ತು, ಬೆಂಗಳೂರು

೫. ನಿಸಾರ್ ಅಹಮದ್ ಸಮಗ್ರನೋಟ – ಕನ್ನಡ ಗಣಕ ಪರಿಷತ್ತು, ಬೆಂಗಳೂರು

೬. ಕರ್ನಾಟಕದ ಕಾನೂನುಗಳು – ಸಂಸದೀಯ ವ್ಯವಹಾರಗಳು ಮತ್ತು ಕಾನೂನು ರಚನೆ ಇಲಾಖೆ, ಕರ್ನಾಟಕ ಸರ್ಕಾರ

೭. ಸಮಗ್ರ ದಾಸ ಸಾಹಿತ್ಯ –ಎಂ.ಎಸ್.ಐ. ಎಲ್ ಬೆಂಗಳೂರು

೮. ಇಂಗ್ಲಿಷ್ – ಕನ್ನಡ ನಿಘಂಟು, ಮೈಸೂರು ವಿಶ್ವವಿದ್ಯಾನಿಲಯ



ಶ್ರೀ ಚಿ.ವಿ.ಶ್ರೀನಾಥಶಾಸ್ತ್ರಿಗಳು

ಶ್ರೀ ಶ್ರೀನಾಥಶಾಸ್ತ್ರಿಗಳು ಒಬ್ಬ ಅದ್ವಿತೀಯ ವಿಜ್ಞಾನಿ, ಸಂಶೋಧಕ, ಉಪನ್ಯಾಸಕ, ಹಾಗೂ ಅನೇಕ ವೈಜ್ಞಾನಿಕ ಸಂಘಗಳ ಸದಸ್ಯರು. ಕನ್ನಡ ಗಣಕ ಕ್ಷೇತ್ರಕ್ಕೆ ಇವರ ಕೊಡುಗೆ ಅಪಾರವಾದದ್ದು ಮಾತ್ರವಲ್ಲ ಕನ್ನಡ ಗಣಕ ಪರಿಷತ್ತಿನ ಸಂಸ್ಥಾಪಕ ಪ್ರಧಾನ ಕಾರ್ಯದರ್ಶಿಗಳು.

ಅತ್ಯಂತ ಸರಳ, ನಿಗರ್ವಿ, ಸುಸಂಸ್ಕೃತ, ಮಾನವೀಯ ಮೌಲ್ಯಗಳ ಶ್ರೀ ಶ್ರೀನಾಥಶಾಸ್ತ್ರಿಯವರು ಗಣಿತಶಾಸ್ತ್ರದಲ್ಲಿ ಸ್ನಾತಕೋತ್ತರ ಪದವಿ ಪಡೆದವರು ಗಣಿತ ತಜ್ಞರಾಗಿ ಗಣಕ ತಜ್ಞರಾಗಿ ಬದಲಾದ ಕೆಲವೇ ವಿಜ್ಞಾನಿಗಳಲ್ಲಿ ಒಬ್ಬರು. ಹಲವು ಮಜಲುಗಳ ವೈಜ್ಞಾನಿಕ ಕ್ಷೇತ್ರದ ಮೇಧಾವಿ ವಿಜ್ಞಾನಿ.

ಗಣಕ ಕ್ಷೇತ್ರದಲ್ಲಿ ಕನ್ನಡಕ್ಕೆ ಒತ್ತುಕೊಟ್ಟು, 'ನುಡಿ' ತಂತ್ರಾಂಶದ ಅಭಿವೃದ್ಧಿಗೆ ಕಾರಣರಾಗಿದ್ದಾರೆ. ಇಂದು ಸರ್ಕಾರೀ ಹಾಗೂ ಖಾಸಗೀ ವಲಯದಲ್ಲಿ ನುಡಿ ಅತಿಹೆಚ್ಚು ಬಳಕೆಯಲ್ಲಿದ್ದು, ಗಣಕಗಳಲ್ಲಿ ಕನ್ನಡದ ಬಳಕೆ ಯಶಸ್ವಿಯಾಗಿ ನಡೆಯುತ್ತಿದೆ. ಸರ್ಕಾರದಲ್ಲಿ ಗಣಕಗಳಲ್ಲಿ ಕನ್ನಡ ಬಳಕೆಯ ಪರಿಣತರಾಗಿ, ರಾಷ್ಟ್ರೀಯ ಪುಸ್ತಕ ಪ್ರಾಧಿಕಾರದ ಸದಸ್ಯರಾಗಿ, ಕರ್ನಾಟಕ ವಿಜ್ಞಾನ ತಂತ್ರಜ್ಞಾನ ಅಕಾಡೆಮಿಯ ಸದಸ್ಯರಾಗಿ, ಸೇತುಬಂಧಕರಾಗಿ, ಅರ್ಥಪೂರ್ಣ ಭವಿಷ್ಯಕ್ಕೆಭದ್ರ ತಳಪಾಯ ಹಾಕಿದ್ದಾರೆ.

'ರೇಡಿಯೋ', 'ಧೂಮಕೇತು', ಇತ್ಯಾದಿ ವಿಜ್ಞಾನ ಕೃತಿಗಳನ್ನು ರಚಿಸಿದ್ದಾರೆ. ವಿಜ್ಞಾನ ಹಾಗೂ ಕನ್ನಡ ಶಿಕ್ಷಣ ಮಾಧ್ಯಮದ ಕುರಿತಾದ ಹಲವು ಲೇಖನಗಳು ವೈಜ್ಞಾನಿಕ ಪತ್ರಿಕೆಗಳು, ದಿನಪತ್ರಿಕೆಗಳು, ವಾರಪತ್ರಿಕೆಗಳಲ್ಲಿ ಪ್ರಕಟಗೊಂಡಿವೆ. ಕೆಂಪೇಗೌಡ ಪ್ರಶಸ್ತಿಯೊಂದಿಗೆ ಹಲವು ಪ್ರಮುಖ ಪ್ರಶಸ್ತಿ, ಪಾರಿತೋಷಕಗಳನ್ನು ಪಡೆದು ನಮಗೆಲ್ಲಾ ಪ್ರೀತಿಪಾತ್ರರಾಗಿದ್ದಾರೆ.



ಡಾ|| ಸಿ.ವಿ.ಗಿರಿಧರಶಾಸ್ತ್ರಿಗಳು

ಶೃಂಗೇರಿಯಲ್ಲಿ ವಾಸವಾಗಿರುವ ಗಿರಿಧರರು ಆಧುನಿಕ ವಿದ್ಯೆಯೊಂದಿಗೆ ಧಾರ್ಮಿಕ ಬುನಾದಿಯನ್ನು ಗಟ್ಟಿ ಮಾಡಿದ ಸುಸಂಸ್ಕೃತ ಸಜ್ಜನಿಕೆಯ ಸಹೃದಯಿಗಳು.

ತಂದೆಯಿಂದ ಸಂಸ್ಕೃತ ಮತ್ತು ಭಗವದ್ಗೀತೆಗಳನ್ನು ಕಲಿತು, ವಿದ್ಯಾಕ್ಷೇತ್ರದಲ್ಲಿ ಸಂಸ್ಕೃತ ಮತ್ತು ಆಂಗ್ಲಭಾಷೆಗಳಲ್ಲಿ ಸ್ನಾತಕೋತ್ತರ ಪದವಿ, ಪಿಎಚ್‌ಡಿಯನ್ನು ಗಳಿಸಿ, ಡಾ|| ಗಿರಿಧರರಾದರು. ಉಪನ್ಯಾಸಕರಾಗಿ, ಪ್ರಾಂಶುಪಾಲರಾಗಿ, ವಿದ್ಯಾರ್ಥಿ ಸಮೂಹಕ್ಕೆ ಹತ್ತಿರವಾಗಿರುವ ಸಿವಿಜಿ, ಹಲವರಿಗೆ 'ಗಿರಿಮಾಮ' ಆಗಿ ಆತ್ಮೀಯರಾದವರು. ಶೃಂಗೇರಿ ಶಾರದಾ ಪೀಠದಲ್ಲಿ ಆಡಳಿತಾಧಿಕಾರಿಯಾಗಿ, ಜಗದ್ಗುರುಗಳ ಆಪ್ತಕಾರ್ಯದರ್ಶಿಯಾಗಿ, ಸಾರ್ವಜನಿಕ ಸಂಪರ್ಕಾಧಿಕಾರಿಯಾಗಿ, ಧಾರ್ಮಿಕ ಪ್ರಚಾರಕರಾಗಿ ಕಾರ್ಯ ನಿರ್ವಹಿಸಿದ್ದಾರೆ.

ಹೋಮಿಯೋಪತಿ ಚಿಕಿತ್ಸೆ, ಸಾಹಿತ್ಯ, ವೇದ, ವೇದಾಂತ, ಕ್ಷೇತ್ರಗಳಲ್ಲಿ ತೊಡಗಿಸಿಕೊಂಡು, 'ಪೂಜಾವಿಧಿ', 'ಜಗದ್ವಂದ್ಯ ಜಗದ್ಗುರು', 'ಪ್ರಬೋಧಕ ಪ್ರಸಂಗಗಳು' 'ತೀನಂಶ್ರೀ ಶೇಷ-ವಿಶೇಷ' ಮುಂತಾದ ಕೃತಿಗಳನ್ನು ರಚಿಸಿದ್ದಾರೆ. ಬಹುಭಾಷಾ ಪ್ರವೀಣರಾದ ಇವರು ಅಪ್ಪಟ ಮಾನವತಾವಾದಿ, ತತ್ವಜ್ಞಾನಿ. ಗಿರಿಶಿಖರಪ್ರಾಯರಾದ ಗಿರಿಧರಶಾಸ್ತ್ರಿಯವರು ತಮ್ಮ ಅಣ್ಣ ಶ್ರೀನಾಥಶಾಸ್ತ್ರಿಯವರೊಂದಿಗೆ ಕುಲದೀಪ ಜ್ಯೋತಿಯೇ ಆಗಿದ್ದಾರೆ.

ಕುಲದೀಪ ಅಭಿನಂದನ ಗ್ರಂಥ ಒಂದು ವಿಶೇಷ, ವಿಶಿಷ್ಟ ಪುಸ್ತಕ. ಇಲ್ಲಿ ಕೇವಲ ಅಭಿನಂದನೆಗಳಿಲ್ಲ. ಅಭಿಮಾನವಿದೆ, ಗೌರವವಿದೆ, ಅಸೀಮ, ಅವ್ಯಾಜ ಪ್ರೀತಿಯಿದೆ, ಸ್ಮರಣೀಯ ತತ್ವದರ್ಶನಗಳು, ಸಾಂಸ್ಕೃತಿಕ ಲೇಖನಗಳು, ಐತಿಹಾಸಿಕ, ಪಾರಂಪರಿಕ, ಕಲಾತ್ಮಕ, ವೈಜ್ಞಾನಿಕ, ಭಾಷಿಕ, ಮಾನವಿಕ ಮುಂತಾದ ಪ್ರಬುದ್ಧ ಲೇಖನಗಳೆಲ್ಲವೂ ಜ್ಞಾನವಾಹಿನಿಯಾಗಿದೆ. ಈ ಗ್ರಂಥ ಒಂದೇ ಬೊಗಸೆಯಲ್ಲಿ ಅಭಿನಂದನಾರ್ಹರ, ನಮ್ಮವರೇ ಆದ ವಿವಿಧ ಮೇರು ವ್ಯಕ್ತಿಗಳ, ವೈವಿಧ್ಯಮಯ ಕ್ಷೇತ್ರಗಳ, ಪ್ರಕಾರಗಳ, ಜ್ಞಾನ-ವಿಜ್ಞಾನಗಳ ನದಿಯಲ್ಲಿ ಮಿಂದೆದ್ದ ಅನಿರ್ವಚನೀಯ ಅನುಭವಕ್ಕೆ ಕಾರಣವಾಗುತ್ತದೆ.

ಕೆ.ವಿ.ಆರ್. ಠ್ಯಾಗೂರ್ ಐಪಿಎಸ್